ಕಾರಂತರ ಕಾದಂಬರಿಗಳ ಸ್ತ್ರೀ- ಪ್ರಪಂಚ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ

ಮಲ್ಲಿನಾಥ ಎಸ್.ತಳವಾರ

ಮಾರ್ಗದರ್ಶಕರು

ಡಾ.ಎ.ಮೋಹನ ಕುಂಟಾರ್

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

322

ಭಾಷಾ ನಿಕಾಯ

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

322

AKSHARA GRANTHALAYA
ACC.NO. 049215

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅಧ್ಯಯನಾಂಗ
ವಿದ್ಯಾರಣ್ಯ-೫೮೩ ೨೭೬

ಕಾರಂತರ ಕಾದಂಬರಿಗಳ ಸ್ತ್ರೀ- ಪ್ರಪಂಚ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ

ಮಲ್ಲಿನಾಥ ಎಸ್.ತಳವಾರ

ಮಾರ್ಗದರ್ಶಕರು

ಡಾ.ಎ.ಮೋಹನ ಕುಂಟಾರ್

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

'[illegible]ಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭಾಷಾ ನಿಕಾಯ

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

8KO.9
TAL

049215

ದೃಢೀಕರಣ ಪತ್ರ

ಶ್ರೀ ಮಲ್ಲಿನಾಥ ಎಸ್. ತಳವಾರ ಇವರು "ಕಾರಂತರ ಕಾದಂಬರಿಗಳ ಸ್ತ್ರೀ-ಪ್ರಪಂಚ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೋಹನ ಕುಂಟಾರ್

ಸ್ಥಳ : ವಿದ್ಯಾರಣ್ಯ
ದಿನಾಂಕ : 31·08·2009

(ಡಾ.ಎ.ಮೋಹನ ಕುಂಟಾರ್)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಕಾರಂತರ ಕಾದಂಬರಿಗಳ ಸ್ತ್ರೀ-ಪ್ರಪಂಚ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಎ.ಮೋಹನ ಕುಂಟಾರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 31.08.2009

(ಮಲ್ಲಿನಾಥ ಎಸ್. ತಳವಾರ)

ಸಂಶೋಧಕ

ಭಂಗನ್ನ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಇಲ್ಲಿವರೆಗಿನ ಅಧ್ಯಯನದ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಇಲ್ಲಿವರೆಗಿನ ಅಧ್ಯಯನದ ಸಮೀಕ್ಷೆ

ಪ್ರವೇಶ

ಶಿವರಾಮ ಕಾರಂತರು ಕನ್ನಡ ಸಾಹಿತ್ಯದ ಮಹತ್ವದ ಲೇಖಕರು ಹಾಗೂ ಚಿಂತಕರು. ಅವರ ಸಾಹಿತ್ಯವು ಅಮೂಲ್ಯ ಸಾಂಸ್ಕೃತಿಕ ದಾಖಲೆಯಾಗಿದ್ದು, ಕನ್ನಡ ಸಾರಸ್ವತ ಲೋಕದ ವಿವಿಧ ಪ್ರಕಾರಗಳಲ್ಲಿ ಅವು ಅಭಿವ್ಯಕ್ತಗೊಂಡಿವೆ. ಅವರ ಬರವಣಿಗೆಯು ಒಂದು ಅಖಂಡ ಮನಸ್ಸಿನ ಬಹುರೂಪಿ ಹುಡುಕಾಟವಾಗಿದೆ. ಕಾರಂತರು ಸಾಹಿತ್ಯದ ಎಲ್ಲ ಆಯಾಮಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡವರು. ಕಾವ್ಯ, ನಾಟಕ, ಗೀತನಾಟಕ, ಸಣ್ಣಕತೆ, ಕಾದಂಬರಿ, ವಿಡಂಬನೆ, ಮಕ್ಕಳ ಸಾಹಿತ್ಯ, ಯಕ್ಷಗಾನ -ಬಯಲಾಟ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ವಿಚಾರ ಸಾಹಿತ್ಯ, ಪತ್ರಿಕೆ, ಚಲನಚಿತ್ರ..... ಮುಂತಾದವುಗಳಲ್ಲಿ ಅವರ ಪರಿಶ್ರಮವನ್ನು ಗುರುತಿಸಬಹುದು. ಅವರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದ್ದರೂ, ಅವರನ್ನು ಸಹೃದಯ ಓದುಗರು ಪ್ರಮುಖವಾಗಿ ಕಾದಂಬರಿಕಾರರೆಂದೇ ಗುರುತಿಸುತ್ತಾರೆ. ಏಕೆಂದರೆ ಕನ್ನಡ ಸಾಹಿತ್ಯದ ಕಾದಂಬರಿ ಕ್ಷೇತ್ರಕ್ಕೆ ಅವರು ಕೊಟ್ಟಿರುವ ಕೊಡುಗೆ ಅಪಾರವಾದುದು. ಅವರು ಕನ್ಯಾಬಲಿ, ಚೋಮನ ದುಡಿ, ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು, ಮೈಮನಗಳ ಸುಳಿಯಲ್ಲಿ, ಇಳೆಯೆಂಬ, ಹೆತ್ತಳಾ ತಾಯಿ, ಬತ್ತದ ತೊರೆ, ಧರ್ಮರಾಯನ ಸಂಸಾರ, ಸ್ವಪ್ನದ ಹೊಳೆ, ಕೇವಲ ಮನುಷ್ಯರು.... ಮುಂತಾದ ನಲವತ್ತೈದು ಕಾದಂಬರಿಗಳಲ್ಲಿ ಸಮಾಜದಲ್ಲಿನ ಸಮಕಾಲೀನ ವೈವಿಧ್ಯಮಯವಾದ ಬದುಕನ್ನು ತಮ್ಮ ವಿಸ್ತೃತವಾದ ಅನುಭವದ ನೆಲೆಗಟ್ಟಿನಲ್ಲಿ ಅನಾವರಣಗೊಳಿಸಿದ್ದಾರೆ. ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ನೀಡುವ ಅತ್ಯುನ್ನತ ಪ್ರಶಸ್ತಿಯಾದ 'ಜ್ಞಾನಪೀಠ' ಪ್ರಶಸ್ತಿಯು ಅವರ "ಮೂಕಜ್ಜಿಯ ಕನಸುಗಳು" ಕಾದಂಬರಿಗೆ ದೊರಕಿದೆ. ಅದು ಕಾರಂತರು ಕಾದಂಬರಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಸಂದ ಗೌರವವೇ ಆಗಿದೆ.

[illegible]

[illegible]

[illegible]

[illegible]

ಉದ್ದೇಶ

ಸಾಹಿತ್ಯ ಮತ್ತು ಸಮಾಜದ ಸಂಬಂಧ ತುಂಬ ವಿಶಿಷ್ಟ ರೀತಿಯದು. ಸಾಹಿತ್ಯ ಸಮಾಜದ ಪ್ರಾತಿನಿಧಿಕ ಕಲೆಯಾಗುವುದರೊಂದಿಗೆ ಸಾಂಸ್ಕೃತಿಕ ಉತ್ಪಾದನೆಯೂ ಆಗಿದೆ. ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಸಮಾಜದ ಚಿತ್ರಣ ಹಾಗೂ ವಾಸ್ತವಿಕ ಸಮಾಜದ ಸ್ವರೂಪ ತುಸು ಭಿನ್ನವಾಗಿರಬಹುದು ಅಷ್ಟೇ. ಆದರೆ ಸಾಹಿತ್ಯವು ವಾಸ್ತವ ಐತಿಹಾಸಿಕ ಸಮಾಜದ ಪ್ರತಿರೂಪ ಎಂಬುದನ್ನು ಮರೆಯುವಂತಿಲ್ಲ. ಆದುದರಿಂದ ಸಾಹಿತ್ಯದ ಮೂಲಕ ಸಮಾಜದ ವಾಸ್ತವಿಕತೆಯನ್ನು ಅರಿಯಬಹುದು. ಸಾಹಿತ್ಯದ ಎಲ್ಲ ಪ್ರಕಾರಗಳಿಗಿಂತಲೂ 'ಕಾದಂಬರಿ' ಸಾಹಿತ್ಯ ರೂಪವು ಇದಕ್ಕೊಂದು ಉತ್ತಮ ಸಾಧನವಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ಕಾದಂಬರಿ' ಪ್ರಕಾರವು ಹೊಸ ಹೊಸ ವೈಚಾರಿಕ ನೆಲೆಗಳನ್ನು ಪ್ರಕಟಿಸಿದೆ, ಪ್ರಕಟಿಸುತ್ತಿದೆ. ಕನ್ನಡದ ಸಂಸ್ಕೃತಿ, ಬದುಕು, ಪರಿಸರ..... ಹೀಗೆ ಹತ್ತು ಹಲವು ವಿಷಯಗಳು ಕಾದಂಬರಿಯ ವಿಷಯಗಳಾಗಿವೆ. ಜನ, ಜಾತಿಗಳ ಬದುಕಿನ ವ್ಯಾಪಕವಾದ ಚಿತ್ರಣಗಳಿಗೂ ಕಾದಂಬರಿಗಳು ಆಸ್ಪದವಾಗಿವೆ. ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಂಡರೆ ಅಗಾಧವಾದ ವಿವೇಚನ ಪ್ರಪಂಚವೊಂದನ್ನು ಕನ್ನಡ ಕಾದಂಬರಿಲೋಕ ಅನಾವರಣಗೊಳಿಸಿದೆ.

ಕಾದಂಬರಿ ಸಾಹಿತ್ಯದಲ್ಲಿ ಚಿತ್ರಣಗೊಂಡ ವಿಶಿಷ್ಟ ಜೀವನ ವಿಧಾನಗಳಿಂದ ಈ ಲೋಕ ವಾಸ್ತವ ಬದುಕಿನ ಪ್ರತಿಬಿಂಬವೇ ಆಗಿದೆ. ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಜನಜೀವನ ಒಂದು ನಿರ್ದಿಷ್ಟ ಕಾಲಮಾನದ ಮಾನವನ ಸಾಂಸ್ಕೃತಿಕ ಇತಿಹಾಸವೇ ಆಗಿದೆ. ಆಧುನಿಕ ಜಾಗತೀಕರಣದ ದಿನಗಳಲ್ಲಿ ಕಾಣಲಾಗದ ಅನೇಕ ಸಂಗತಿಗಳ ಮೂಲಕವೇ ಬದುಕಿನ ಅನೇಕ ಪಾತ್ರಗಳು ಕಾದಂಬರಿಗಳಲ್ಲಿ ದಾಖಲಾಗಿವೆ. ಅವುಗಳು ಸೃಷ್ಟಿಸುತ್ತಿದ್ದ ಸೃಜನಶೀಲತೆಗಳು, ಅವುಗಳ ಬದುಕನ್ನು ಎದುರಿಸುವಾಗ ಸಮಸ್ಯೆಗಳಿಗೆ ಮುಖಾ-ಮುಖಿಯಾದ ಸಂಗತಿಗಳು, ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಪರಿ.... ಇತ್ಯಾದಿಗಳೆಲ್ಲ ಇಂದಿಗೂ ಕುತೂಹಲಕಾರಿಯಾಗಿವೆ. ವಾಸ್ತವ ಬದುಕಿನ ಸ್ಪಂದನಗಳ ರೂಪದಲ್ಲಿ, ಪ್ರತಿಕ್ರಿಯೆಗಳ ರೂಪದಲ್ಲಿ ಮೈಪಡೆದ ಕಾದಂಬರಿಗಳು ವ್ಯವಹಾರಿಕ ಲೋಕ, ಮಾನವೀಯ ಸಂವೇದನೆಯ ಮುಖ್ಯ ನೆಲೆಯಿಂದಲೇ ಸೃಷ್ಟಿಯಾಗಿವೆ. ಈ ಕಾರಣಕ್ಕಾಗಿ ಮಾನವಾಂತಃಕರಣವನ್ನು ಪೋಷಿಸುವಲ್ಲಿ ಹಾಗೂ ಪ್ರಚೋದಿಸುವಲ್ಲಿ ಕಾದಂಬರಿ ಸಾಹಿತ್ಯ ಬಹುಮುಖ್ಯ ಕಾಳಜಿಯನ್ನು ವಹಿಸುತ್ತಿದೆ.

ಮಾನವನ ಬದುಕಿನ ಅಪರಿಮಿತವಾದ ಆಸೆ-ಆಕಾಂಕ್ಷೆಗಳು, ಭೇದ-ಭಾವಗಳು ಒಂದು ಬದುಕಿನ ಶೈಲಿಯನ್ನು ರೂಪಿಸಿಕೊಟ್ಟಿವೆ. ಬದುಕಿನ ಅಪಾರ ಸಮಸ್ಯೆಗಳಿಗೆ ಪರಿಹಾರವು, ಸಾಮಾಜಿಕ ಸಾಂಸಾರಿಕ ಸಮತೋಲನಗಳ ಹಲವು ನೆಲೆಗಳು. ಹೀಗೆ ಒಂದಲ್ಲ ಹಲವು ದಿಶೆಗಳಿಂದ ಕಾದಂಬರಿಯ ಕ್ಷೇತ್ರ ಅಧ್ಯಯನ ಪ್ರಕ್ರಿಯೆಯ ಗಮನ ಸೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ "ಕಾರಂತರ ಕಾದಂಬರಿಗಳ ಸ್ತ್ರೀ-ಪ್ರಪಂಚ"ವನ್ನು ದೃಷ್ಟಿಯಲ್ಲಿರಿಸಿಕೊಂಡು ಅಧ್ಯಯನ ಮಾಡಲು ಯೋಜಿಸಲಾಗಿದೆ.

ಶಿವರಾಮ ಕಾರಂತರು ಅನಾವರಣಗೊಳಿಸಿದ ಕಾದಂಬರಿ ಪ್ರಪಂಚವು ವಿಶಿಷ್ಟವಾದುದು ಹಾಗೂ ವಿಶಾಲವಾದುದು. ಅದನ್ನು ಒಂದೊಟ್ಟಿಗೆ ಜೀರ್ಣಿಸಿಕೊಳ್ಳುವುದು ಕಷ್ಟಸಾಧ್ಯ. ಸಮಾಜದ ವಿಡಂಬನೆ, ನಿಸರ್ಗ ಮತ್ತು ಮಾನವನ ಸಂಬಂಧಗಳು, ಸ್ತ್ರೀಪರ ವಿಚಾರಗಳು, ಆಧುನಿಕತೆಯ ಪ್ರಭಾವ ಮತ್ತು ಅದರ ಪರಿಣಾಮಗಳು, ಸ್ವಾತಂತ್ರ್ಯಪೂರ್ವ ಭಾರತ ಮತ್ತು ಸ್ವಾತಂತ್ರ್ಯ ನಂತರ ಭಾರತ ಹೀಗೆ ಸಮಾಜದ ಹತ್ತು ಹಲವಾರು ಮುಖಗಳ ಚಿತ್ರಣವನ್ನು ತಮ್ಮ ಕಾದಂಬರಿಗಳಲ್ಲಿ ಅನುಭವ, ಆದರ್ಶ ಮತ್ತು ವಾಸ್ತವಿಕತೆಯ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿರುವರು. ಕಾದಂಬರಿಗಳಲ್ಲಿ ರಚನೆಗೊಂಡಿರುವ ಪಾತ್ರಗಳನ್ನು ಕುರಿತು ವಿಶೇಷವಾದ ಅಧ್ಯಯನ ನಡೆಸುವುದು ಮಹತ್ವದ್ದೆಂದು ಭಾವಿಸಲಾಗಿದೆ. ಕಾರಂತರ ಕಾದಂಬರಿಗಳಲ್ಲಿ ಅನೇಕ ಸ್ತ್ರೀಪಾತ್ರಗಳು ಕಾಣಿಸಿಕೊಳ್ಳುತ್ತವೆ. ತಾಯಿ, ಮಗಳು, ಅಜ್ಜಿ, ಅತ್ತೆ, ಸಾಕುತಾಯಿ, ಗೆಳತಿ, ಪ್ರೇಯಸಿ, ಸೂಳೆ, ಹೆಂಡತಿ, ಸವತಿ, ನಾದಿನಿ. ~~ನೆಗೆಣೆ, ಅತ್ತಿಗ~~.... ಈ ರೀತಿ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಗಳಿಂದ ಪುರುಷ ಸಂಬಂಧದ ಮೂಲಕ ಕಾಣಿಸಿಕೊಳ್ಳುವ ಪಾತ್ರಗಳು ಕಾದಂಬರಿಯಲ್ಲಿ ಪ್ರಧಾನ ಭೂಮಿಕೆಯಲ್ಲಿ ಕಾಣಿಸಿಕೊಳ್ಳುತ್ತವೆ. ಸಮಾಜ ಜೀವಿಗಳಾದ ಕಾರಂತರು ಮನುಷ್ಯ ಪರಿಕಲ್ಪನೆಯಲ್ಲಿಯೇ ಸ್ತ್ರೀ-ಪುರುಷರ ಎರಡೂ ಜಾತಿಗಳನ್ನು ಗಣನೆಗೆ ತಂದುಕೊಳ್ಳುತ್ತಾರೆ. ವೈಯಕ್ತಿಕ ಬದುಕಿನ ನೆಲೆಯಲ್ಲಿ ನಡೆಯುವ ಘಟನೆಗಳನ್ನು, ಸಂಬಂಧಗಳನ್ನು ಚಿತ್ರಿಸುವ ಪ್ರಸಂಗಗಳಲ್ಲಿ ಗಂಡು -ಹೆಣ್ಣಿನಲ್ಲಿ ತಾರತಮ್ಯ ಭಾವನೆ ತೋರದೆ ಒಂದೇ ನೆಲೆಯಲ್ಲಿ ಇತ್ಯಾತ್ಮಕ ಧೋರಣೆ ಕಾರಂತರ ಕಾದಂಬರಿಗಳಲ್ಲಿ ಪ್ರಮುಖವಾಗಿ ಗುರುತಿಸಬಹುದು. ಸ್ತ್ರೀಪಾತ್ರ ಚಿತ್ರಣದಲ್ಲಿ, ಪುರುಷ ಪ್ರಧಾನ ಸಮಾಜದ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ವಿಮರ್ಶಾದೃಷ್ಟಿಯಿಂದ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಇದರಲ್ಲಿ ಕಾರಂತರ ಕಾದಂಬರಿಗಳಲ್ಲಿಯ ಸ್ತ್ರೀ ಪಾತ್ರಗಳ ಕುರಿತಾಗಿ ಸಮಗ್ರವಾದ ವಿವೇಚನೆ ಮಾಡಲಾಗುವುದು.

ಶಿವರಾಮ ಕಾರಂತರ ಸಮಗ್ರ ಕಾದಂಬರಿಗಳನ್ನು ಆಧರಿಸಿಕೊಂಡು ನೋಡಿದರೆ ಅವರು ಕಟ್ಟಿಕೊಡುವ ಬದುಕು ವಿನೂತನವೇ ಆಗಿದೆ. ಕಾರಂತರು ಚಿತ್ರಿಸಿದ ಸ್ತ್ರೀಯರು ಒಂದರ್ಥದಲ್ಲಿ ಸ್ವಾಭಿಮಾನಿಗಳು, ದುಡಿಮೆಗೆ ಹೆಸರಾದ ಶ್ರಮ ಜೀವಿಗಳು. ಜೀವನ್ಮುಖಿಯಾಗಲು ಇವರೆಲ್ಲ ಬದುಕಿನ ಅನೇಕ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವವರು. ವಿಭಿನ್ನ ಕಾರಣಗಳಿಗಾಗಿ ಜೀವನಪರ ಸಂಗತಿಗಳ ನೆಲೆಯಿಂದ, ಒಂದಲ್ಲ ಒಂದು ದಿಸೆಯಲ್ಲಿ ಸದಾ ಕ್ರಿಯಾಶೀಲರಾಗಿ ಇರುವವರು. ಅನಾದಿ ಕಾಲದಿಂದಲೂ ಸ್ತ್ರೀಯು ಪುರುಷ ಪ್ರಧಾನ ಸಮಾಜ ಹೇರಿದ ಎಲ್ಲ ನಿರ್ಬಂಧ, ಕಟ್ಟಳೆಗಳನ್ನು ಪಾಲಿಸುತ್ತ ಬಂದಿದ್ದಾಳೆ. ಇದರಿಂದಾಗಿಯೇ ಇಡೀ ಸಮಾಜ ಸ್ತ್ರೀಯನ್ನು 'ಅಬಲೆ'ಯೆಂದು ಗುರುತಿಸುತ್ತದೆ. ಆದರೆ ಕಾದಂಬರಿಕಾರರು ಮಾತ್ರ ಇದಕ್ಕೆ ವ್ಯತಿರಿಕ್ತವಾಗಿ ಸ್ತ್ರೀ ಪಾತ್ರಗಳನ್ನು ಚಿತ್ರಿಸಿದ್ದಾರೆ. ಅವರು ತಾವು ಒಪ್ಪಿದ ಮೌಲ್ಯವ್ಯವಸ್ಥೆ ಮತ್ತು ನೀತಿ ಸಂಹಿತೆಯ ಪರಿಧಿಯೊಳಗೆ ಚಿತ್ರಿಸಿದ್ದಾರೆ ಅವರು ನಂಬಿದ ಮೌಲ್ಯಗಳು ಅಂದಿನ ಕಾಲದ ಅಗತ್ಯಗಳ ನೆಲೆಯಿಂದ ರೂಪುಗೊಂಡವುಗಳು [illegible] ಕಾರಣಕ್ಕಾಗಿ ಅವರ

[illegible]

ಕಾಲಘಟ್ಟದ ಚಾರಿತ್ರಿಕ ಸಂಗತಿಗಳಾಗಿಯೂ, ಜೀವನ ವಿಧಾನದ ಪ್ರತಿಪಾದಕವಾಗಿಯೂ ಕಾದಂಬರಿಯ ಸ್ತ್ರೀ ಪಾತ್ರಗಳು ಅಧ್ಯಯನಕ್ಕೆ ಯೋಗ್ಯವಾಗಿವೆಯೆಂದು ಭಾವಿಸಲಾಗಿದ್ದು ಕಾರಂತರ ಸ್ತ್ರೀ ಪಾತ್ರಗಳು ಪ್ರತಿನಿಧಿಸುವ ವಿಭಿನ್ನ ಜೀವನ ಮೌಲ್ಯಗಳ ವಿಶ್ಲೇಷಣೆಯೇ ಪ್ರಸ್ತುತ ಅಧ್ಯಯನದ ಮುಖ್ಯ ನೆಲೆಯಾಗಿದೆ. ಈ ಹಿನ್ನೆಲೆಯಲ್ಲಿ ಕಾರಂತರ ಸ್ತ್ರೀ ಪರ ಯೋಚನೆಗಳನ್ನು ಅವರ ಬಹುತೇಕ ಎಲ್ಲಾ ಕಾದಂಬರಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಆಶಯವನ್ನು ಇರಿಸಿಕೊಳ್ಳಲಾಗಿದೆ.

ಕಾರಂತರ ಕಾದಂಬರಿಗಳಲ್ಲಿ ಪ್ರಕಟಗೊಂಡಿರುವ ಮೌಲ್ಯಗಳನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಶೋಧಿಸಿದಾಗ ಅಲ್ಲಿನ ಸ್ತ್ರೀ ಪಾತ್ರಗಳು ಸೂಕ್ಷ್ಮವಾದ ನಂಬಿಕೆ, ಮೃದು ಧೋರಣೆಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಪುರುಷ ಪ್ರಧಾನ ಸಮಾಜದ ಆಲೋಚನೆಗಳನ್ನು ಒಪ್ಪಿಕೊಂಡು ಬದುಕುವ ಮಹಿಳೆಯರನ್ನು ಇಲ್ಲಿ ಕಾಣುತ್ತೇವೆ. ಜೊತೆಯಲ್ಲಿಯೇ ಪುರುಷ ಪ್ರಧಾನ ನಿಲುವನ್ನು ವಿವೇಚನೆಯಿಂದ ಸರಿ -ತಪ್ಪುಗಳನ್ನು ನಿರ್ಧರಿಸುವ ಸ್ತ್ರೀ ಪಾತ್ರಗಳನ್ನೂ ಕಾರಂತರ ಕಾದಂಬರಿಗಳಲ್ಲಿ ಗುರುತಿಸಬಹುದು. ಕಾರಂತರು ಸ್ತ್ರೀ- ಪುರುಷರ ಪಾತ್ರಗಳನ್ನು ಬದುಕಿನ ನೆಲೆಯಿಂದ ಚಿತ್ರಿಸಿದ್ದಾರೆ. ಒಬ್ಬರು ಮತ್ತೊಬ್ಬರಿಗೆ ಪೂರಕವಾಗಿ ಬದುಕುವುದರಿಂದ ಜೀವನ ಆನಂದಮಯವಾಗಿರಲು ಸಾಧ್ಯ ಎಂಬುದನ್ನು ಹೇಳುವ ಪ್ರಯತ್ನ ಮಾಡಿದ್ದಾರೆ.

ಕಾರಂತರ ಕಾದಂಬರಿಗಳಲ್ಲಿ ಅನಾವರಣಗೊಂಡಿರುವ 'ಸ್ತ್ರೀ ಪ್ರಪಂಚ'ವು ವಿಶಿಷ್ಟವೂ, ವಿನೂತನವೂ ಆಗಿದೆ. ಅದರಲ್ಲಿ ವಿವಿಧ ವಯೋಮಾನದ ಸ್ತ್ರೀಯರನ್ನು, ವೈವಿಧ್ಯಮಯವಾದ ಆಚಾರ -ವಿಚಾರಗಳನ್ನು ಹೊಂದಿದಂತಹ ಮಹಿಳೆಯರನ್ನು ಗುರುತಿಸಬಹುದು. ಸ್ತ್ರೀ ಮತ್ತು ಪುರುಷರು ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಭಿನ್ನವಾಗಿರುತ್ತಾರೆ ಎಂಬುದು ವೈಜ್ಞಾನಿಕ ಸತ್ಯ. ಯಾವುದೇ ಒಂದು ಪರಿಸ್ಥಿತಿಗೆ ಸ್ತ್ರೀಯರು ಸ್ಪಂದಿಸುವ ರೀತಿಯೇ ಬೇರೆ. ಪುರುಷರು ಸ್ಪಂದಿಸುವ ಕ್ರಮವೇ ಬೇರೆ. ಗ್ರಹಣಶಕ್ತಿ, ಜ್ಞಾಪಕ ಶಕ್ತಿಯಿಂದ ಹಿಡಿದು ಜೀವನವನ್ನು ನೋಡುವ, ಬಾಳುವ ದೃಷ್ಟಿಕೋನಗಳೂ ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು. ಸ್ತ್ರೀಯರ ಬಾಲ್ಯ ಜೀವನ, ಅವರ ಮದುವೆ, ಸಂಸಾರ, ದಾಂಪತ್ಯ ಜೀವನದ ಸಿಹಿ-ಕಹಿ ಘಟನೆಗಳು, ಮಕ್ಕಳ ಲಾಲನೆ-ಪಾಲನೆ, ವಿವಾಹೇತರ ಸಂಬಂಧಗಳು, ಅದರಿಂದುಂಟಾಗುವ ಪರಿಣಾಮಗಳು, ವೇಶ್ಯಾವೃತ್ತಿಯ ಆಚಾರ-ವಿಚಾರಗಳು, ಅವರ ನೋವು-ನಲಿವುಗಳು, ದುಡಿಮೆಯ ಅನಿವಾರ್ಯತೆ, ಅದರ ತಾಪತ್ರಯ, ಅದರಿಂದ ಹುಟ್ಟಿಕೊಳ್ಳುವ ಜೀವನಶ್ರದ್ಧೆ, ಧಾರ್ಮಿಕ ರೀತಿ -ರಿವಾಜುಗಳು, ಮೌಢ್ಯ, ಆಧುನಿಕ ಪ್ರಗತಿಪರ ವಿಚಾರಧಾರೆಗಳು....... ಮುಂತಾದವುಗಳು ಸ್ತ್ರೀ ಪ್ರಪಂಚದ ಪ್ರಮುಖ ನೆಲೆಯಾಗಿವೆ. ಅವೆಲ್ಲವುಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಪರಿಶೀಲಿಸಲಾಗುವುದು. ಸಮಸ್ಯೆಗಳ ವಿರಾಟ ರೂಪ, ಪರಿಹಾರ ಕಂಡುಕೊಳ್ಳುವ ಬಗೆ, ಜನರಿಂದ ಜನರಿಗೆ ಭಿನ್ನವಾಗುವ ಪರಿ, ಸಮಸ್ಯೆಯ ಪರಿಹಾರದಲ್ಲಿ ಅವರ ಜೀವನದ ಆಯಾಮಗಳು ಮುಖ್ಯವಾಗುವುದನ್ನು ಗುರುತಿಸಲಾಗುವುದು. ಸ್ತ್ರೀಯರ ಗುಣಸ್ವಭಾವ, ವಯೋಮಾನ, ಅನುಭವ

ವ್ಯತ್ಯಾಸಗಳಿಂದಲೂ ಮತ್ತು ಜಾತಿ, ಅಂತಸ್ತು, ಲಿಂಗಗಳ ವಿಭಿನ್ನತೆಯಿಂದಲೂ ಸ್ತ್ರೀ ಪ್ರಪಂಚದ ಸ್ವರೂಪವನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲು ಯತ್ನಿಸಲಾಗುವುದು.

ಪ್ರಸ್ತುತ ಅಧ್ಯಯನದ ಮೂಲಕ ಕಾರಂತರ ಸ್ತ್ರೀಪರ ಧೋರಣೆ ಸ್ತ್ರೀಪ್ರಪಂಚ ಪ್ರತಿನಿಧಿಸುವ ವೈಚಾರಿಕ ನಿಲುವು, ಜೀವನ ವಿಧಾನಗಳ ಅನನ್ಯ ಸಂಗತಿಗಳನ್ನು ಹುಡುಕುವ ಅವರ ಸಂಶೋಧನಾತ್ಮಕ ಮನೋಭಾವ ಕಾಲದಿಂದ ಕಾಲಕ್ಕೆ ಸಾಮಾಜಿಕ ಬದಲಾವಣೆಗಳೊಂದಿಗೆ ಪ್ರತಿಕ್ರಿಯಿಸುವ ಬಗೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗುವುದು. ಇದರಿಂದ ಕಾಲಕ್ಕನುಗುಣವಾಗಿ ಸಮಾಜದ ರೀತಿ-ನೀತಿಗಳು, ಆಚಾರ-ವಿಚಾರಗಳು, ಸಾಮಾಜಿಕ ಮೌಲ್ಯಗಳು, ಸಾಮಾಜಿಕ ನಿರ್ಬಂಧಗಳು.... ಮುಂತಾದವುಗಳೊಂದಿಗೆ ಕಾದಂಬರಿಕಾರರ ಸ್ತ್ರೀಪರ ಆಲೋಚನೆಗಳು ಹೇಗೆ ಸ್ಪಂದಿಸುತ್ತವೆ ಎಂಬುದನ್ನು ಗುರುತಿಸಲಾಗುವುದು. ಇದರಿಂದ ಸ್ತ್ರೀಯರ ವೈವಿಧ್ಯಮಯ ಆಚಾರ-ವಿಚಾರ, ಸಮಾಜದಲ್ಲಿಯ ಅವರ ಸ್ಥಾನ-ಮಾನ, ಕಾಲ ಮತ್ತು ವಯಸ್ಸಿಗನುಗುಣವಾಗಿ ಪಕ್ವವಾಗುವ ಸ್ತ್ರೀಯರ ಮನಸ್ಸು..... ಮೊದಲಾದವುಗಳನ್ನು ಕುರಿತು ಕಾರಂತರು ಚಿತ್ರಿಸುವ ಬಗೆಯನ್ನು ಪರಿಶೀಲಿಸುವ ಉದ್ದೇಶವನ್ನು ಇರಿಸಿಕೊಳ್ಳಲಾಗಿದೆ.

ಕಾದಂಬರಿಕಾರರು ಚಿತ್ರಿಸಿದ ಸ್ತ್ರೀ ಪ್ರಪಂಚ, ಅವರ ಸಮಕಾಲೀನ ಲೇಖಕ-ಲೇಖಕಿಯರು ಅನಾವರಣಗೊಳಿಸಿದ ಸ್ತ್ರೀಪ್ರಪಂಚ ಹಾಗೂ ಕಾರಂತರ ಕಾಲದ ವಾಸ್ತವಿಕ ಸ್ತ್ರೀ ಪ್ರಪಂಚ ಇವುಗಳ ತೌಲನಿಕ ವಿವೇಚನೆಯನ್ನೂ ಸಹ ಮಾಡಲಾಗುವುದು. ಇದರಿಂದ ಕಾರಂತರು ಕಟ್ಟಿಕೊಡುವ ಸ್ತ್ರೀ ಪ್ರಪಂಚವು ಇತರರಿಗಿಂತ ಹೇಗೆ ಭಿನ್ನವಾಗಿದೆ ಎಂದು ಗುರುತಿಸುವ ಪ್ರಯತ್ನ ಮಾಡಲಾಗುವುದು.

ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಶಿವರಾಮ ಕಾರಂತರ ಬಹುತೇಕ ಹೆಚ್ಚಿನ ಎಲ್ಲಾ ಕಾದಂಬರಿಗಳನ್ನು ಆಧರಿಸಿದೆ. ಜೊತೆಯಲ್ಲಿಯೇ ಸಾಂದರ್ಭಿಕವಾಗಿ ಸಮಕಾಲೀನ ಲೇಖಕ-ಲೇಖಕಿಯರು ಚಿತ್ರಿಸಿರುವ ಸ್ತ್ರೀ ಪಾತ್ರಗಳನ್ನು ಹಾಗೂ ಅವರ ಸ್ತ್ರೀಪರ ಧೋರಣೆಯನ್ನು ಅವಶ್ಯವೆನಿಸುವಲ್ಲಿ ಅನುಷಂಗಿಕವಾಗಿ ಬಳಸಿಕೊಳ್ಳಲಾಗುವುದು. ಇದರಿಂದ ಕಾರಂತರ ವಿಚಾರಗಳು ಅವರ ಸಮಕಾಲೀನ ಸಾಹಿತಿಗಳಿಗಿಂತ ಹೇಗೆ ಭಿನ್ನವಾಗಿವೆ ಹಾಗೂ ಯಾವುದರಲ್ಲಿ ಸಾಮ್ಯವನ್ನು ಹೊಂದಿವೆ ಎಂಬುದನ್ನು ಲಕ್ಷಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯಪೂರ್ವ ರಾಷ್ಟ್ರೀಯ ಚಳುವಳಿಗಳಲ್ಲಿ ಹಾಗೂ ಸಾಮಾಜಿಕ ಸುಧಾರಣೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಕಾರಂತರು ಮಹಾತ್ಮಗಾಂಧೀಜಿಯವರ ಪ್ರಭಾವ ಮತ್ತು ಪ್ರೇರಣೆಗಳಿಗೆ ಒಳಗಾದವರು. ಈ ರೀತಿಯಾಗಿ ಪ್ರಭಾವಗಳಿಗೆ ಗುರಿಯಾಗಿಯೂ ಸ್ವತಂತ್ರವಾದ ಹಾಗೂ ವಿಭಿನ್ನವಾದ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಬಗೆಯನ್ನು ಕಾರಂತರ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಲಾಗುವುದು. ಸಮಾಜ ಸುಧಾರಕರ ಹಾಗೂ ಜಾನಪದ ಸಾಹಿತ್ಯದ ಪ್ರಭಾವವನ್ನು ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಯರ ಸಮಸ್ಯೆಗಳನ್ನು ಸಾಮಾಜಿಕ ನೆಲೆಯಿಂದ ವಿಶ್ಲೇಷಿಸಲಾಗುವುದು.

[illegible]

ಸ್ವರೂಪ

ಪ್ರಸ್ತುತ ಅಧ್ಯಯನ "ಕಾರಂತರ ಕಾದಂಬರಿಗಳ ಸ್ತ್ರೀ-ಪ್ರಪಂಚ"ವು ಪೂರ್ಣ ಸಾಹಿತ್ಯಕವಾದುದಲ್ಲ. ಕಾದಂಬರಿಗಳ ಸ್ತ್ರೀ ಪ್ರಪಂಚವನ್ನು ಸಾಮಾಜಿಕ ನೆಲೆಯಿಂದ ಇದುವರೆಗಿನ ಅಧ್ಯಯನಗಳಿಗಿಂತಲೂ ಭಿನ್ನವಾಗಿಸಲು ಪ್ರಯತ್ನಿಸಲಾಗಿದೆ. ಸ್ತ್ರೀಯರನ್ನು ಮುಖ್ಯ ನೆಲೆಯಾಗಿಸಿ ಅಧ್ಯಯನ ಕೈಗೊಂಡು ಸಾಮಾಜಿಕ ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ರೂಪಿಸಲು ಯತ್ನಿಸಲಾಗಿದೆ. ಶಿವರಾಮ ಕಾರಂತರ ಸಮಗ್ರ ಕಾದಂಬರಿಗಳನ್ನು ಅಧ್ಯಯನದ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳಲಾಗಿದೆ. 'ಪ್ರಪಂಚ' ಎಂಬ ಪದವು ತುಂಬ ವಿಶಾಲವಾದುದು. ಕಾರಂತರ ಸಾಹಿತ್ಯವನ್ನು ಅವಲೋಕಿಸಿದಾಗ 'ಪ್ರಪಂಚ' ಪದದ ವಿಶಿಷ್ಟ ಬಳಕೆಯಾಗಿರುವುದು ಸ್ಪಷ್ಟವಾಗುತ್ತದೆ. ಅವರ 'ಬಾಲ ಪ್ರಪಂಚ' 'ಕಲಾ ಪ್ರಪಂಚ', ವಿಜ್ಞಾನ ಪ್ರಪಂಚ..... ಮುಂತಾದವುಗಳು ಇದಕ್ಕೆ ಪುಷ್ಠಿಯನ್ನು ನೀಡುತ್ತವೆ. ಇದಕ್ಕೆ ಪೂರಕವೆಂಬಂತೆ ಕಾರಂತ ಅಭಿನಂದನ ಸಮಿತಿಯು 'ಕಾರಂತ ಪ್ರಪಂಚ' ಎಂಬ ಅಭಿನಂದನ ಗ್ರಂಥವನ್ನು ಸಿದ್ಧಪಡಿಸಿರುವುದು ಸ್ಪಷ್ಟವಾಗುತ್ತದೆ. ಅಂತೆಯೇ ಪ್ರಸ್ತುತ ಅಧ್ಯಯನದಲ್ಲಿ 'ಪ್ರಪಂಚ' ಎಂಬ ಪದವನ್ನು ವಿಶಿಷ್ಟ ಅರ್ಥದಲ್ಲಿ ಒಂದು ಪರಿಕಲ್ಪನೆಯಾಗಿ ಸ್ವೀಕರಿಸಲಾಗಿದೆ.

ಕೌಟಿಂಬಿಕ, ಲೈಂಗಿಕ, ಧಾರ್ಮಿಕ, ವೈಚಾರಿಕ ಇವೆಲ್ಲವೂ ಒಂದೊಂದು ಪೂರ್ಣ ಪ್ರಪಂಚ. ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವುದು ಈ ಎಲ್ಲಾ ಸಾಮಾಜಿಕ ಪ್ರಪಂಚಗಳ ಮೂಲಕವೇ ಆಗಿದೆ. ಇಲ್ಲೆಲ್ಲ ಸ್ತ್ರೀ ಪರಿಪೂರ್ಣಳಾಗಿ ತನ್ನನ್ನು ತೊಡಗಿಸಿಕೊಂಡು ಬದುಕುತ್ತಾಳೆ. ಈ ಎಲ್ಲ ಪ್ರಪಂಚದಲ್ಲೂ ತನ್ನತನವನ್ನು ಮೆರೆಯುವ ಪ್ರಯತ್ನ ಮಾಡಿದ್ದಾಳೆ. ಈ ನೆಲೆಯಲ್ಲಿ ಶೋಧಿಸಿದಾಗ ಸಾಮಾಜಿಕ ಕಳಕಳಿಯುಳ್ಳ ಕಾರಂತರು ಈ ಎಲ್ಲ ಪ್ರಪಂಚದ ಬಗೆಗೆ ನಿರ್ದಿಷ್ಟವಾದ ನಿಲುವನ್ನು ಹೊಂದಿದ್ದರು ಎಂಬುದು ವ್ಯಕ್ತವಾಗುತ್ತದೆ. ಅದರಲ್ಲೂ ಸ್ತ್ರೀ ಬದುಕಿನ ಬಗೆಯನ್ನು ಮತ್ತು ಬದುಕಿಗೊಂದು ಸಮರ್ಥನೆಯನ್ನು ನೀಡಿರುವುದು ಕಂಡು ಬರುತ್ತದೆ. ಇದನ್ನೇ ದೃಷ್ಟಿಯಲ್ಲಿರಿಸಿಕೊಂಡು ಕಾರಂತರ ಕಾದಂಬರಿಯ ಸ್ತ್ರೀ ಪ್ರಪಂಚದ ವಿಶಿಷ್ಟತೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲು ಯತ್ನಿಸಲಾಗುವುದು. ಇದರೊಂದಿಗೆ ಸಮಕಾಲೀನ ಸಾಹಿತಿಗಳಿಗಿಂತ ಕಾದಂಬರಿಕಾರರ ಸ್ತ್ರೀಪರ ಯೋಚನೆಗಳು, ಅವರ ಸಮಸ್ಯೆಗಳಿಗೆ ಕಾದಂಬರಿಕಾರರು ಸ್ಪಂದಿಸುವ ರೀತಿ ಯಾವ ತರಹ ಭಿನ್ನವಾಗಿದೆ ಎಂಬುದನ್ನು ಪರಿಶೀಲಿಸಲಾಗುವುದು. ಗರ್ಭಧರಿಸುವಿಕೆ ಹಾಗೂ ತಾಯ್ತನ ಹೆಣ್ಣಿನ ಜೀವನದಲ್ಲಿ ಒಂದು ಪ್ರಮುಖ ತಿರುವು. ಆ ಸಂದರ್ಭದಲ್ಲಿ ಅವಳಲ್ಲಿ ಕಾಣುವುದು ಕೇವಲ ಭೌತಿಕ ಬದಲಾವಣೆ ಮಾತ್ರವಲ್ಲ, ಮಾನಸಿಕವಾಗಿ ಭಾವನೆಗಳಲ್ಲೂ, ಬದುಕನ್ನು ನೋಡುವ ಅವಳ ದೃಷ್ಟಿಕೋನದಲ್ಲಿಯೂ ಮಹತ್ತರ ಬದಲಾವಣೆಯನ್ನು ಗಮನಿಸಬಹುದು. ಹೆಣ್ಣಿನಲ್ಲಿ ಸುಪ್ತವಾಗಿರುವ ಶ್ರೇಷ್ಠ ಗುಣಗಳೆಲ್ಲ ಆ ಸಂದರ್ಭದಲ್ಲಿಯೇ ಬೆಳಕಿಗೆ ಬರುತ್ತವೆ. ಅವಳಲ್ಲಿರುವ ಪ್ರತಿಭೆಗಳೆಲ್ಲ ಅನಾವರಣಗೊಳ್ಳುತ್ತವೆ ಎಂಬುದನ್ನು ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಲಕ್ಷಿಸಲಾಗುವುದು.

ಅಧ್ಯಾಯಗಳ ವರ್ಗೀಕರಣದಲ್ಲಿ ಸ್ತ್ರೀಯರ ಕೌಟುಂಬಿಕ ಜೀವನ, ಅವಳಲ್ಲಿರುವ ಲೈಂಗಿಕಾಸಕ್ತಿ, ಅದರಿಂದುಂಟಾಗುವ ಸಮಸ್ಯೆಗಳು, ವೇಶ್ಯೆಯರ ಬದುಕು, ಸ್ತ್ರೀಯರ ಧಾರ್ಮಿಕ ಜೀವನದಲ್ಲಿಯ ಆಚಾರ-ವಿಚಾರಗಳು ಹಾಗೂ ಸ್ತ್ರೀಯರ ಪ್ರಗತಿಪರ ಚಿಂತನೆ ಕುರಿತು ಪ್ರತಿಯೊಂದನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗುವುದು. ಮಹಿಳೆಯರ ದೈಹಿಕ ಹಾಗೂ ಮಾನಸಿಕ ಸ್ಥಿತಿ-ಗತಿಗಳನ್ನು, ಸಮಸ್ಯೆಗಳನ್ನು ಹಾಗೂ ಪರಿಹಾರಗಳನ್ನು ಸಾಂದರ್ಭಿಕ ಸಮಾಜದ ಹಿನ್ನೆಲೆಯಲ್ಲಿ ಜಿಜ್ಞಾಸೆ ಮಾಡಲಾಗುವುದು. ಸ್ತ್ರೀಯರಿಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕಾರಂತರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಪ್ರಪಂಚವನ್ನು ವಿಶ್ಲೇಷಣೆ ಮಾಡಲಾಗುವುದು. ಇದರೊಂದಿಗೆ ಕಾದಂಬರಿಕಾರರ ಸ್ತ್ರೀಪರ ಚಿಂತನೆಯು ಸಾಂದರ್ಭಿಕವಾಗಿಯೂ ಮತ್ತು ಸಮಕಾಲೀನ ಸಾಹಿತಿಗಳಿಗಿಂತಲೂ ಹೇಗೆ ಭಿನ್ನವಾಗಿದೆ ಎಂಬುದನ್ನು ಗುರುತಿಸಲು ಯತ್ನಿಸಲಾಗುವುದು.

ಶಿವರಾಮ ಕಾರಂತರು ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲೆಲ್ಲ ಗಮನಾರ್ಹರಾಗಿದ್ದಾರೆ. ಆದರೆ ಪ್ರಸ್ತುತ ಪ್ರಬಂಧದಲ್ಲಿ ಕಾರಂತರ ಕಾದಂಬರಿಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಕಾದಂಬರಿಕಾರರು ತಮ್ಮ ಧೋರಣೆಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಲು ಆಯ್ದುಕೊಂಡ ಪ್ರಕಾರವೂ ಕಾದಂಬರಿಯೇ ಆಗಿದೆ. ಸಮಕಾಲೀನ ಐತಿಹಾಸಿಕ ಸ್ತ್ರೀ ಪ್ರಪಂಚದ ವಾಸ್ತವಿಕತೆಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗುವುದು.

ಸ್ತ್ರೀಯರ ಬದುಕಿನ ಬಗೆಗೆ ತಿಳಿದುಕೊಳ್ಳಲು ಸ್ತ್ರೀಯರ ಬದುಕಿನ ಹಿನ್ನೆಲೆಯಲ್ಲಿ ಅಧ್ಯಾಯಗಳ ವರ್ಗೀಕರಣಗಳನ್ನು ಮಾಡಲಾಗಿದೆ. ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ 'ಕಾರಂತರ ಕಾದಂಬರಿಗಳ ಸ್ತ್ರೀ ಪ್ರಪಂಚ'ವನ್ನು ಕೌಟುಂಬಿಕ ಪ್ರಪಂಚ, ಲೈಂಗಿಕ ಪ್ರಪಂಚ, ಧಾರ್ಮಿಕ ಪ್ರಪಂಚ, ಹಾಗೂ ವೈಚಾರಿಕ ಪ್ರಪಂಚವೆಂದು ವಿಂಗಡಿಸಿಕೊಳ್ಳಲಾಗಿದೆ.

ಇದುವರೆಗಿನ ಅಧ್ಯಯನಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಮುಂದಿನ ಅಧ್ಯಾಯಗಳಲ್ಲಿ ಕಾರಂತರ ಸ್ತ್ರೀ ಪ್ರಪಂಚದ ವೈಶಾಲ್ಯವನ್ನು ವಿವರವಾಗಿ ಪರಿಶೀಲಿಸಲಾಗಿದೆ.

ಇಲ್ಲಿವರೆಗಿನ ಅಧ್ಯಯನದ ಸಮೀಕ್ಷೆ

ಶಿವರಾಮ ಕಾರಂತರ ಕಾದಂಬರಿಗಳು ಸಮಾಜದ ಹಲವಾರು ನೈಜ ಸ್ಥಿತಿಗಳಿಗೆ ಸ್ಪಂದಿಸುತ್ತವೆ. ಕಾರಂತರ ಬದುಕು ಮತ್ತು ಅವರ ಸಾಹಿತ್ಯವನ್ನು ಕುರಿತು ಇದುವರೆಗೂ ನೂರಾರು ಲೇಖನಗಳು ಹಾಗೂ ಹಲವಾರು ವಿಮರ್ಶಾಕೃತಿಗಳು ಪ್ರಕಟವಾಗಿವೆ. ಇವುಗಳ ಜೊತೆಯಲ್ಲಿಯೇ ಹಲವಾರು ಸಂಶೋಧನಾ ಮಹಾಪ್ರಬಂಧಗಳು ಬಂದಿವೆ. ಅವುಗಳಲ್ಲಿ ಕೆಲವೊಂದು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. ಪ್ರತಿಯೊಂದು ಕೃತಿಯೂ ವಸ್ತು ವೈವಿಧ್ಯತೆಯ ವಿಶ್ಲೇಷಣೆಯೊಂದಿಗೆ ಕಾರಂತರ ಸಾಹಿತ್ಯದ ವಸ್ತು ವೈವಿಧ್ಯತೆಯ ಕುರಿತು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಇದುವರೆಗೆ ಪ್ರಕಟವಾಗಿರುವ ಕೃತಿಗಳಲ್ಲೇ ತುಂಬ ಮುಖ್ಯವಾದ ಕೃತಿಗಳ ಸಮೀಕ್ಷೆ ಮಾತ್ರ ಇಲ್ಲಿ ಮಾಡಲಾಗಿದೆ.

ಎಂ.ಸುನೀತಾ ಶೆಟ್ಟಿಯವರ "ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ" (೨೦೦೦) ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ಕಾರಂತರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀ ಪಾತ್ರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈ ಮಹಾಪ್ರಬಂಧದಲ್ಲಿ ಕಾರಂತರ ಸಮಗ್ರ ಕಾದಂಬರಿಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳದೇ ಪ್ರಾತಿನಿಧಿಕವಾಗಿ ಕೆಲವೇ ಪ್ರಮುಖ ಕಾದಂಬರಿಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀ ಪಾತ್ರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅವುಗಳೆಂದರೆ 'ಕನ್ಯಾಬಲಿ', 'ಚೋಮನ ದುಡಿ', 'ಸರಸಮ್ಮನ ಸಮಾಧಿ', 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಹೆತ್ತಳಾ ತಾಯಿ', 'ಮುಗಿದ ಯುದ್ಧ', 'ಔದಾರ್ಯದ ಉರುಳಲ್ಲಿ', 'ಕುಡಿಯರ ಕೂಸು', 'ಚಿಗುರಿದ ಕನಸು', 'ಜಾರುವ ದಾರಿಯಲ್ಲಿ', 'ನಂಬಿದವರ ನಾಕ ನರಕ', 'ಅಳಿದ ಮೇಲೆ', 'ಸ್ವಪ್ನದ ಹೊಳೆ', 'ಮೂಕಜ್ಜಿಯ ಕನಸುಗಳು', ಮತ್ತು 'ಮೈ ಮನಗಳ ಸುಳಿಯಲ್ಲಿ'.

ಈ ಮಹಾಪ್ರಬಂಧದಲ್ಲಿ ಕಾದಂಬರಿಕಾರರು ಸ್ತ್ರೀ ಜಾಗೃತಿ, ನಾರಿ ಶೋಷಣೆಯಂತಹ ವಿಷಯಗಳನ್ನು ಗಂಭೀರವಾಗಿ ಚಿಂತಿಸದೆ ಇರುವುದನ್ನು ಗುರುತಿಸಲಾಗಿದೆ. ಅವರ ಮಾನವತಾವಾದವು ಗಂಡು, ಹೆಣ್ಣೆಂಬ ವ್ಯತ್ಯಾಸ ಮಾಡದೇ ಇರುವುದನ್ನು ಲಕ್ಷಿಸಲಾಗಿದೆ. 'ದಾರಿದ್ರ್ಯದಲ್ಲಿಯೂ ಮನೋಬಲ ಒಂದೇ ಅವರಿಗೆ ಕಾವಲು' ಎಂಬ ತಂತ್ರದಿಂದ ಸ್ತ್ರೀಯರಲ್ಲಿ ಆದರ್ಶ ಮೌಲ್ಯಗಳನ್ನು ಬಿಂಬಿಸಿರುವುದನ್ನು ಖಚಿತಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಕಾರರು ಮುದುಕಿಯರ ಚಿತ್ರಣದಿಂದಲೇ ಬದುಕನ್ನು ಕಟ್ಟಿಕೊಡಲು ಯತ್ನಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಗರತಿಯರು, ಸೂಳೆಯರು, ಮಲೆಯ ಹೆಣ್ಣು ಮಕ್ಕಳು, ದಲಿತರು, ವೃದ್ಧೆಯರು, ಮಕ್ಕಳು... ಈ ಎಲ್ಲರ ಆಸಕ್ತಿಯನ್ನು ಕೆರಳಿಸುವ ನಿಸರ್ಗ ಬದುಕಿನೊಡನೆ ತಾದಾತ್ಮ್ಯಗೊಳ್ಳುವ ಪರಿಯನ್ನು ಅಧ್ಯಯನ ಮಾಡಲಾಗಿದೆ.

ಕನ್ನಡ ಸಾಹಿತ್ಯದ ಸಮಕಾಲೀನ ಲೇಖಕ-ಲೇಖಕಿಯರ ಹಾಗೂ ಸಮಾಜ ಸುಧಾರಕರ ವಿಚಾರಧಾರೆಗಳನ್ನು ಅನುಲಕ್ಷಿಸಿ, ಅವುಗಳಲ್ಲಿಯ ಸಾಮ್ಯ-ಭಿನ್ನತೆಗಳನ್ನು ಪರಿಶೀಲಿಸದಿರುವುದು ಸಂಶೋಧನೆಯ ಕೊರತೆಯನ್ನು ಸ್ಪಷ್ಟಪಡಿಸುತ್ತದೆ. ಆದರೆ ಸಮಕಾಲೀನ ಮರಾಠಿ ಹಾಗೂ ಹಿಂದಿ ಬರಹಗಾರರ ಕೆಲವು ಕೃತಿಗಳನ್ನು ಅನುಲಕ್ಷಿಸಿ, ಅವುಗಳಲ್ಲಿಯ ಸಾಮ್ಯ ಹಾಗೂ ಭಿನ್ನತೆಗಳನ್ನು ಪರಿಶೀಲಿಸಲಾಗಿದೆ. ಇದರಿಂದ ಭಾರತೀಯ ಸಾಹಿತ್ಯದಲ್ಲಿ ಕಾರಂತರ ವ್ಯಕ್ತಿತ್ವವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ವೆಂಕಟೇಶ ಮಡಗೋಳ್‌ಕರ, ಪ್ರೇಮ ಚಂದ್, ಖಾಂಡೇಕರ, ನ.ಸಿ. ಫಡಕೆ, ಸಾನೆ ಗುರೂಜಿ..... ಮುಂತಾದ ಕಾದಂಬರಿಕಾರರ ಸ್ತ್ರೀಪರ ವಿಚಾರಧಾರೆಗಳೊಂದಿಗೆ ತುಲನೆ ಮಾಡಿರುವುದು ಸ್ಪಷ್ಟವಾಗಿದೆ. ಸ್ತ್ರೀಯರು ಪರಿಸ್ಥಿತಿಗೆ ತಲೆ ಬಾಗಿದರೂ ವೈಯಕ್ತಿಕವಾಗಿ ಗಟ್ಟಿಗೊಳ್ಳುವದನ್ನು ಗುರುತಿಸಲಾಗಿದೆ. 'ಚೋಮನ ದುಡಿ' ಕಾದಂಬರಿಯ ಬೆಳ್ಳಿ, 'ಮರಳಿ ಮಣ್ಣಿಗೆ' ಕಾದಂಬರಿಯ ಸರಸೋತಿ, ನಾಗವೇಣಿ, 'ಅಳಿದ ಮೇಲೆ' ಕಾದಂಬರಿಯ ಪಾರೋತಿ, 'ಮುಗಿದ ಯುದ್ಧ' ಕಾದಂಬರಿಯ ಲಕ್ಷ್ಮಿ, ರುಕ್ಮಿಣಿ, 'ಔದಾರ್ಯದ ಉರುಳಲ್ಲಿ' ಕಾದಂಬರಿಯ ಸತ್ಯ.... ಮುಂತಾದ ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ

[illegible]

ಕಾದಂಬರಿಕಾರರ ಸ್ತ್ರೀಪರ ವಿಚಾರಗಳನ್ನು ಚರ್ಚಿಸಲಾಗಿದೆ. ಮುಖ್ಯವಾಗಿ ಕೃತಿಕಾರನೊಬ್ಬ ತನ್ನ ಚಿಂತನೆಗಳನ್ನು ಪರಿಸರದ ಮೂಲಕ ಪಡೆಯುತ್ತಾನೆ ಎಂಬುದನ್ನು ನಿರೂಪಿಸಲಾಗಿದೆ. ಅಳಿದವರಿಗಿಂತ ಉಳಿದವರು ಬದುಕನ್ನು ಎದುರಿಸುವ ಸಾಹಸ ಕಾದಂಬರಿಕಾರರಿಗೆ ಇಷ್ಟವಾಗುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಜೀವನದಲ್ಲಿ ಸುಖವನ್ನು ಕಾಣದ ಬಾಲವಿಧವೆಯರು ವೃದ್ದೆಯರಾದರೂ ಬದುಕಿನ ಬಗೆಗೆ ಜಿಗುಪ್ಸೆಗೊಳ್ಳದೆ 'ಜೀವನಶ್ರದ್ಧೆ'ಯಿಂದ ಬಾಳುವುದನ್ನು ಗುರುತಿಸಲಾಗಿದೆ. ನಂಬಿಕೆಯ ಮೂಲದಲ್ಲಿ ಹಿರಿಯರ ಶಾಪಕ್ಕೆ ಅಂಜಿದವರೂ, ಮಾನವೀಯ ಪ್ರೀತಿಯ ನೆಲೆಯಲ್ಲಿ ಅದನ್ನು ಹರಿದೊಗೆಯುವ ಸಾಹಸ ಮಾಡಿದ್ದು ವೈಚಾರಿಕತೆಯ ಸಫಲತೆಯೆನಿಸಿದೆ. ಅನಕ್ಷರಸ್ಥರಾಗಿದ್ದರೂ ಅನುಭವದ ಪರಿಪಕ್ವತೆಯಿಂದಾಗಿ ವೈಚಾರಿಕ ನೆಲೆಯಲ್ಲಿ ಸುಳಿಯುವ ಸ್ತ್ರೀ ವರ್ಗವನ್ನು ಅವರು ಚಿತ್ರಿಸುತ್ತಾರೆ. ಇವರೆಲ್ಲರೂ ಹೆಚ್ಚಾಗಿ ವಿಧವೆಯರು, ವೃದ್ಧೆಯರು, ಇದರಿಂದ ಕಾದಂಬರಿಕಾರರ ಒಲವು ವೃದ್ಧೆಯರತ್ತ ಇರುವುದನ್ನು ಸ್ಪಷ್ಟಪಡಿಸಲಾಗಿದೆ. ಅಂತೆಯೇ 'ವೈಚಾರಿಕತೆ ಮೂಡುವುದು ಸಂಪ್ರದಾಯದ ನೆರಳಲ್ಲಿಯೆ' ಎಂಬುದನ್ನು ಕಾದಂಬರಿಕಾರರು ನಂಬಿರುವುದನ್ನು ಸ್ಪಷ್ಟಪಡಿಸಲಾಗಿದೆ.

ಸರಸ ದಾಂಪತ್ಯ, ವಿರಸ ದಾಂಪತ್ಯ, ಸಂತಾನದ ಹಂಬಲ. ವಿವಾಹ ಬಾಹಿರ ಸಂಬಂಧಗಳು, ಲೈಂಗಿಕ ಸುಖಕ್ಕಾಗಿಯೇ ನಡೆಸುವ ಸಂಬಂಧಗಳು..... ಮುಂತಾದವುಗಳನ್ನು ತೂಗಿ ನೋಡುವ ಪ್ರಯತ್ನ ಮಾಡಲಾಗಿದೆ. ಪ್ರೀತಿಯೆಂದರೆ ಕೇವಲ ಯೌವ್ವನದ ಪ್ರೇರಣೆಯಿಂದ ಹುಟ್ಟುವ ವಾಸನಾಭಾವವಲ್ಲ. ಪರಸ್ಪರ ಮನಸ್ಸುಗಳ ಮಿಲನವಾಗಿದೆ. ಅದರಿಂದ ದಾಂಪತ್ಯ ಜೀವನ ಸಾರ್ಥಕವಾಗುತ್ತದೆ. ಅಂತೆಯೇ ವಿವಾಹದ ಮೂಲಕ ಸ್ಥಿರಗೊಳ್ಳುವ ಮಾನವ ಸಂಬಂಧಗಳ ಬಗೆಗೆ ಕಾದಂಬರಿಕಾರರ ಒಲವು ಇರುವುದನ್ನು ಲಕ್ಷಿಸಲಾಗಿದೆ. ಲೈಂಗಿಕ ಸಂಬಂಧವು ಅನೈತಿಕವಾಗಿರದೆ ನೈತಿಕವಾಗಿದ್ದಲ್ಲಿ ಕಾದಂಬರಿಕಾರರು ಅದಕ್ಕೆ ಅನುಕಂಪ ಮೂಡಿಸಿರುವುದು ಸ್ಪಷ್ಟವಾಗಿದೆ. ಆದರೆ ಲೈಂಗಿಕ ತೃಷೆಯು ಮಾನವೀಯತೆಯಿಂದ ಕೂಡಿರದೆ, ಸ್ವೇಚ್ಛೆಯ ಪರಿಧಿಯನ್ನು ತಲುಪಿದಾಗ ಅದನ್ನು ಬೆಂಬಲಿಸದೆ ಖಂಡಿಸಿರುವುದು ಈ ಅಧ್ಯಯನದಿಂದ ದೃಢವಾಗುತ್ತದೆ. 'ಅತಿಯಾದರೆ ಅಮೃತವೂ ವಿಷವಾಗುತ್ತದೆ' ಎಂಬ ಸೂಕ್ತಿಯಂತೆ ಜೀವನದಲ್ಲಿ 'ಕಾಮದಾಹ'ವು ನೈತಿಕತೆಯ ಎಲ್ಲೆಯನ್ನು ಮೀರಬಾರದು. ಮೀರಿದ್ದೆ ಆದರೆ ಬದುಕು ಅಧಃಪತನದತ್ತ ಸಾಗುವುದು ಹಾಗೂ ಸಮಾಜದಲ್ಲಿ ಮಾನವೀಯ ಮೌಲ್ಯಗಳ ಸ್ಥಾನಪಲ್ಲಟಗಳಾಗುವವು ಎಂಬ ಕಾದಂಬರಿಕಾರರ ಸಾಮಾಜಿಕ ಕಳಕಳಿಯನ್ನು ಗುರುತಿಸಲಾಗಿದೆ.

ಹೆಣ್ಣಿನ ಮನಸ್ಸಿನ ಒಳತೋಟಿಯ ವಿವಿಧ ಪದರುಗಳನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲ ಕಾರಂತರು ಅವಳ ಹೃದಯದ ನೋವು ನಲಿವುಗಳನ್ನು ಪ್ರಕೃತಿಜನ್ಯ ಎಂಬಂತೆ ಚಿತ್ರಿಸಿರುವುದನ್ನು ಲಕ್ಷಿಸಲಾಗಿದೆ. ಕಾದಂಬರಿಯಲ್ಲಿನ ಸ್ತ್ರೀ ಪಾತ್ರಗಳು ಒಂದು ಸಾಮಾಜಿಕ ನೆಲೆಯಲ್ಲಿ ಅರಳುವ, ಮಹತ್ವದ ಅಷ್ಟೇ ಸ್ವಾಭಾವಿಕವಾದ ಅಬೇಧ್ಯ ಶಕ್ತಿಗಳಾಗಿ, ಜೀವನದ ಪರಿಪೂರ್ಣತೆಯಲ್ಲಿ ಉಸಿರಾಡಲು ಶಕ್ಯವೆನಿಸುವ

[illegible]

ಗತಿಬಿಂಬಗಳಾಗಿ ಕಣ್ಮುಂದೆ ನಿಲ್ಲುತ್ತವೆ ಎಂಬುದನ್ನು ಅನುಲಕ್ಷಿಸಲಾಗಿದೆ. ಗಂಡು, ಹೆಣ್ಣು ಸೃಷ್ಟಿಯ ಮಹತ್ವದ ಜೀವಿಗಳು. ಒಂದರ ಕ್ಷೋಭೆ ಇನ್ನೊಂದರ ಅಳಲೂ ಆಗಬಲ್ಲದು. ಈ ಸೂಕ್ಷ್ಮ ಸಂಬಂಧವನ್ನು ನಿರ್ವಂಚನೆಯಿಂದ, ಅಷ್ಟೇ ಕಲಾತ್ಮಕ ದೃಷ್ಟಿಯಿಂದ ಕಾರಂತರು ವಿಶ್ಲೇಷಿಸಿರುವುದು ಸ್ಪಷ್ಟವಾಗುತ್ತದೆ. 'ತನ್ನ ಬದುಕೊಂದೇ ಅಲ್ಲ, ಇತರರ ಬಾಳಿನ ನೆಮ್ಮದಿಗಾಗಿಯೂ ಜೀವನ ವ್ಯವಹಾರವನ್ನು ಚೆಲುಗೊಳಿಸುವ ವಿವೇಕ ಮನುಷ್ಯನಿಗೆ ಮುಖ್ಯ' ಎಂಬ ಪ್ರತಿಪಾದನೆಯನ್ನು ಕಾದಂಬರಿ ಒಳಗೊಂಡಿರುವುದನ್ನು ಗುರುತಿಸಲಾಗಿದೆ.

"ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ" ಎಂಬ ಸಂಶೋಧನ ಮಹಾಪ್ರಬಂಧದ ಅಧ್ಯಾಯದ ವರ್ಗೀಕರಣದಲ್ಲಿ ವೇಶ್ಯೆಯರ ಸ್ಥಿತಿ-ಗತಿಯನ್ನು, ಧಾರ್ಮಿಕ ಆಚಾರ-ವಿಚಾರಗಳನ್ನು ಕುರಿತು ಪ್ರತ್ಯೇಕವಾಗಿ ವಿವರಿಸಲು ಸಾಧ್ಯವಾಗಿಲ್ಲ. ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀಯರ ಸಮಸ್ಯೆಗಳನ್ನು ಹಾಗೂ ಪರಿಹಾರಗಳನ್ನು ಭಾರತೀಯ ಸಂವಿಧಾನದಲ್ಲಿ ನಮೂದಿಸಿರುವ 'ಕಾನೂನು ಹಕ್ಕುಗಳು' ಹಿನ್ನೆಲೆಯಲ್ಲಿ ವಿವರಿಸುವುದು ಅಗತ್ಯವಾಗಿದೆ. ಲೈಂಗಿಕ ರೋಗಗಳಿಗೆ ಕಾರಣಗಳೇನು ಹಾಗೂ ಅವುಗಳನ್ನು ಹೇಗೆ ತಡೆಗಟ್ಟಲು ಪ್ರಯತ್ನಿಸಬಹುದು ಎಂಬುದನ್ನು 'ವೈದ್ಯಕೀಯ ಪರಿಧಿಯಲ್ಲಿ' ಲಕ್ಷಿಸುವುದು ಅವಶ್ಯಕವಾಗಿದೆ.

"ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ" (೨೦೦೩) ಮಹಾಪ್ರಬಂಧವು ಸ್ತ್ರೀ ವಿಶಿಷ್ಟ ಪ್ರಜ್ಞೆಯ ವಿಮರ್ಶೆಯ ಮಾನದಂಡವನ್ನು ಅಭ್ಯಾಸ ಮಾಡುವದರೊಂದಿಗೆ, ಆಧುನಿಕ ಸ್ತ್ರೀವಾದಿ ಪ್ರಜ್ಞೆಯ ಅಗತ್ಯ ನೋಟಗಳನ್ನು ಇಟ್ಟುಕೊಂಡಿದೆ. ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀಪಾತ್ರಗಳನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನದಲ್ಲಿ ಸ್ತ್ರೀವಾದದ ಹುಟ್ಟು, ಬೆಳವಣಿಗೆ ಹಾಗೂ ಮಹಿಳಾ ಚಳುವಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇವುಗಳಿಗೆ ಪ್ರತ್ಯೇಕ ಅಧ್ಯಾಯಗಳನ್ನು ಮೀಸಲಿಡಲಾಗಿದೆ. ಮಗುವೊಂದರ ಜನನಕ್ಕೆ ಸ್ತ್ರೀ-ಪುರುಷರಿಬ್ಬರೂ ಹೊಣೆಗಾರರು. ಪ್ರಕೃತಿಯ ನಿಯಮದಂತೆ ಶಿಶು ಮೈ ತಾಳುವುದು ತಾಯಿಯ ಗರ್ಭದಲ್ಲಿಯೇ. ಇದು ಸ್ತ್ರೀಯರ ಶರೀರದಲ್ಲಿ ಮಾತ್ರವೇ ಜರುಗಬಹುದಾದ ಒಂದು ವಿಸ್ಮಯಕಾರಿ ಕ್ರಿಯೆ ಗರ್ಭಧಾರಣೆ. ಸಂತಾನೋತ್ಪತ್ತಿಯ ಶಕ್ತಿ ಮಹಿಳೆಯ ದೌರ್ಬಲ್ಯವಾಗಿರದೆ ಅವಳ ಶಕ್ತಿಯ ಪ್ರತೀಕವಾಗಿದೆ. ಆದರೆ ಈ ಅಧ್ಯಯನದಲ್ಲಿ ಸಂತಾನೋತ್ಪತ್ತಿ ಹೆಣ್ಣಿನ ದೌರ್ಬಲ್ಯವಾಗಿದೆ. ಅದನ್ನು ತ್ಯಜಿಸಬೇಕು ಎಂಬುದರ ಉಲ್ಲೇಖ ಇರುವುದು ನಿಸರ್ಗದ ವಿರುದ್ಧವಾಗಿದೆ. "ಎಲ್ಲಿಯವರೆಗೆ ಮಹಿಳೆಗೆ ಸಂತಾನೋತ್ಪತ್ತಿಯ ಜೈವಿಕ ಕ್ರಿಯೆಗೆ ಬಿಡುಗಡೆ ಸಿಕ್ಕುವುದಿಲ್ಲವೋ ಅಲ್ಲಿಯವರೆಗೆ ಅವಳ ಶೋಷಣೆ ತಪ್ಪಿದ್ದಲ್ಲ. ಅದಕ್ಕಾಗಿ ಜೈವಿಕ ತಾಯ್ತನವನ್ನು ಧಿಕ್ಕರಿಸಬೇಕು ಮತ್ತು ಸಂತಾನೋತ್ಪತ್ತಿಗಳು ಜೈವಿಕ ಕ್ರಿಯೆಗಾಗಿ ಕೃತಕ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು". (೨೦೦೩-೪೧) ಎಂಬ ಹೇಳಿಕೆಯು ಉಚಿತವೆನಿಸುವುದಿಲ್ಲ. ಹೆರಿಗೆ ಹೆಣ್ಣಿನ ಜೀವನದಲ್ಲಿ ಮಾತ್ರ ಜರುಗಬಹುದಾದ ಒಂದು ವಿಶಿಷ್ಟ ಕ್ರಿಯೆಯಾಗಿದೆ. ಗರ್ಭಧರಿಸುವಿಕೆ ಮತ್ತು ತಾಯ್ತನ ಸ್ತ್ರೀಯರ ಪಾಲಿಗೆ

ಪುರುಷ ಪ್ರಧಾನ ಸಮಾಜ ನಿರ್ಮಿಸಿದ ಒಂದು ಮೌಲ್ಯ. ಅದನ್ನು ಪ್ರತಿರೋಧಿಸಬೇಕು ಎಂದು ಸ್ತ್ರೀವಾದದ ಹಿನ್ನೆಲೆಯಲ್ಲಿ ಖಂಡಿಸಿರುವುದು ಸ್ಪಷ್ಟವಾಗುತ್ತದೆ. ತಾಯ್ತನ ವರವೂ ಅಲ್ಲ, ಶಾಪವೂ ಅಲ್ಲ. ಅದು ಹೆಣ್ಣಿನ ಆಯ್ಕೆ ಎಂದು ಪರಿಗಣಿಸುವ ಸ್ಥಿತಿ ಬೇಕು ಎಂಬುದರ ಜಾಗೃತಿ ಅವಶ್ಯಕವಾಗಿದೆ. ಇದರ ವಿಶ್ಲೇಷಣೆ ಇಲ್ಲದಿರುವುದು ಸ್ಪಷ್ಟವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕನ್ನಡದಲ್ಲಿ ಕಾದಂಬರಿ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಲಾಗಿದೆ. ಇದರೊಂದಿಗೆ ಸಮಕಾಲೀನ ಲೇಖಕರ ಕಾದಂಬರಿಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಹಾಗೂ 'ಸಂವೇದನೆ' ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ. 'ಮಹಿಳೆಯ ನೆಲೆಯಿಂದ ಬದುಕನ್ನು ಗ್ರಹಿಸುವ, ಅವಳ ಅನುಭವದ ಆಶಯವನ್ನು ಶೋಧಿಸುವ, ಸ್ವಂತಿಕೆಯ ಅಭಿವ್ಯಕ್ತಿಯನ್ನು ವಿಶ್ಲೇಷಿಸುವ ವಿಧಾನಕ್ಕೆ ಸ್ತ್ರೀ ಸಂವೇದನೆ' ಎಂದು ವ್ಯಾಖ್ಯಾನಿಸಲಾಗಿದೆ.

ಕಾರಂತರ ಕಾದಂಬರಿಗಳಲ್ಲಿ ಹೆಣ್ಣು ಹೆಣ್ಣಿಗಾಗಿ ಮರುಗುವುದನ್ನು ಗುರುತಿಸಲಾಗಿದೆ. 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ಪರಂಪರಾಗತ ನಂಬಿಕೆಯನ್ನು ಸುಳ್ಳಾಗಿಸಲು ಪ್ರಯತ್ನಿಸಿರುವುದು ಸ್ಪಷ್ಟವಾಗುತ್ತದೆ. 'ಅನುಭವವು ಒದಗಿಸುವ ಮೂಲ ದ್ರವ್ಯವೇ ವೈಚಾರಿಕತೆಗೆ ಪ್ರೇರಣೆ ನೀಡುತ್ತದೆ' ಎಂಬ ಕಾದಂಬರಿಕಾರರ ಧೋರಣೆಯನ್ನು ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮುದುಕಿಯರ ಪಾತ್ರದ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಅಂತೆಯೇ ವೃದ್ಧೆಯರು ಮಾನವತ್ವದ ಪ್ರತೀಕವಾಗಿ ಕಾಣುತ್ತಾರೆ. ಕಾರಂತರ ಕಾದಂಬರಿಗಳಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಯನ್ನು ಗುರುತಿಸಬಹುದು. ಆದರೆ ಕಾದಂಬರಿಕಾರರ ಒಲವು ಭಾರತೀಯ ಸಂಸ್ಕೃತಿಯ ನೆಲೆಯಲ್ಲಿರುವುದು ದೃಢವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ 'ಕುಟುಂಬ'ಕ್ಕೆ ಉನ್ನತವಾದ ಸ್ಥಾನವಿದೆ. ಕುಟುಂಬದಲ್ಲಿ ಉದ್ಭವಿಸುವ ಸಮಸ್ಯೆ, ಮನಃಸ್ತಾಪಗಳನ್ನು ಗಂಡ-ಹೆಂಡಿರು ಹೊಂದಾಣಿಕೆಯುತ ಜೀವನದಿಂದ ಬಗೆಹರಿಸಿಕೊಳ್ಳಲು ಪ್ರಯತ್ನಿಸಬೇಕು, ಬಹಿರಂಗವಾಗಿ ಚರ್ಚಿಸಬಾರದು ಎಂಬ ಮೌಲ್ಯವನ್ನು ಗುರುತಿಸಲಾಗಿದೆ. ಕುಟುಂಬದೊಳಗಿದ್ದು ಇಲ್ಲದಂತೆ ಕಾಣುವ ಸ್ತ್ರೀಯರ ಬದುಕಿನ ವಿವರಗಳನ್ನು ಶೋಧಿಸುತ್ತಾರೆ ಎಂಬುದನ್ನು ವಿವೇಚಿಸಲಾಗಿದೆ.

'ಪರಂಪರೆ-ಪ್ರತಿರೋಧ' ಎಂಬ ಅಧ್ಯಾಯದಲ್ಲಿ ಏಕ ಪತಿತ್ವದ ಸ್ವೀಕರಣೆ ಮಾಡಿದ ಗೃಹಿಣಿಯರು ಹಾಗೂ ಏಕ ಪತಿತ್ವದ ನಿರಾಕರಣೆ ಮಾಡಿದ ಗೃಹಿಣಿಯರನ್ನು ಕುರಿತು ಪರಿಶೀಲಿಸಲಾಗಿದೆ. ವಿವಾಹದ ಆಸೆಯುಳ್ಳ ವೇಶ್ಯೆಯರು, ವೇಶ್ಯಾಧರ್ಮವನ್ನೇ ವೃತ್ತಿಯಾಗಿ ಪಾಲಿಸುವ ವೇಶ್ಯೆಯರ ಸ್ಥಿತಿಗತಿಗಳನ್ನು ಕುರಿತು ಲಕ್ಷಿಸಲಾಗಿದೆ. ಇನ್ನೂ ವಿಧವೆಯರಲ್ಲಿಯೂ ವಿಧವಾ ವ್ಯವಸ್ಥೆಯನ್ನು ಒಪ್ಪಿಕೊಳ್ಳುವವರ ಹಾಗೂ ಪ್ರತಿಭಟಿಸುವವರ ರೀತಿ-ನೀತಿಗಳನ್ನು ಅಭ್ಯಸಿಸಲಾಗಿದೆ. ಕಾರಂತರ ಕಾದಂಬರಿಗಳು ಎದುರಿಸುವ ಸಂಕೀರ್ಣ ಸಮಸ್ಯೆಗಳು ಯಜಮಾನ್ಯವನ್ನು ಮುಂದಿಟ್ಟುಕೊಂಡು ಪರಂಪರೆ ಮತ್ತು ಪ್ರತಿರೋಧದ ನೆಲೆಯನ್ನಾಶ್ರಯಿಸಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

'ದಲಿತ ಮಹಿಳೆ ಸಂವೇದನೆ' ಅಧ್ಯಾಯದಲ್ಲಿ ದಲಿತ ಮಹಿಳೆ ದಲಿತ ಸಮಸ್ಯೆಗಳಿಂದ ಹೊರಬರಲು ಸಾಧ್ಯವಿಲ್ಲವೆಂಬುದನ್ನು ನಿರೂಪಿಸಲಾಗಿದೆ. ಉದ್ಯೋಗವಕಾಶ, ಶಿಕ್ಷಣವಕಾಶಗಳು ಸಮಾಜದಲ್ಲಿ ಮಹಿಳೆಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ತನ್ನ ಬದುಕಿನ ಬಗೆಗೆ ತಾನೇ ಸ್ವಯಂ ನಿರ್ಣಯ ತೆಗೆದುಕೊಳ್ಳಬಲ್ಲ, ತನ್ನ ವೈಯಕ್ತಿಕ ಅಭಿಪ್ರಾಯ-ಆಸಕ್ತಿಗಳನ್ನು ಪ್ರಕಟಿಸಬಲ್ಲ ದನಿಶಕ್ತಿಯನ್ನು ಒದಗಿಸಿದೆ. ಸ್ವಾವಲಂಬನೆಯತ್ತ ಸಾಗುವ ಮಹಿಳೆಯ ಬದುಕಿಗೆ ಬೆಂಬಲ ನೀಡಿದೆ ಎಂಬುದನ್ನು 'ಮಹಿಳೆ ಮತ್ತು ಆಧುನಿಕತೆ' ಎಂಬ ಅಧ್ಯಾಯದಿಂದ ಕಂಡುಕೊಳ್ಳಲಾಗಿದೆ. ಕಾದಂಬರಿಕಾರರು ಸಾಂಪ್ರದಾಯಿಕ ಬದುಕನ್ನು ಕಂಡಷ್ಟು ಹತ್ತಿರದಿಂದ ಆಧುನಿಕ ಬದುಕನ್ನು ನೋಡಿಲ್ಲ ಎಂಬುದನ್ನು ಖಚಿತಪಡಿಸಲಾಗಿದೆ. ಇದರಿಂದ ಕಾರಂತರರದು ಗ್ರಾಮೀಣ ಸಂವೇದನೆ ಎಂಬುದು ಸ್ಪಷ್ಟವಾಗುತ್ತದೆ.

ಪುರುಷರ ಹೊರತಾಗಿಯೂ ಮಹಿಳೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಸಾಧ್ಯವಿದೆ. ಅವಳಿಗೆ ಪುರುಷರ ಸಹಾನುಭೂತಿ ಬೇಕಾಗಿರುವುದು ಸಹಭಾಗಿತ್ವದ ನೆಲೆಯಲ್ಲಿಯೇ ಹೊರತು ಅನುಕಂಪದಲ್ಲಿ ಅಲ್ಲ ಎಂಬುದನ್ನು ಗುರುತಿಸಲಾಗಿದೆ. ವಾಸ್ತವವಾದವೂ, ಮಾನವತಾವಾದವೂ, ಆದರ್ಶವಾದವೂ, ಸಂಪ್ರದಾಯವಾದವೂ ಹಾಗೂ ಬಂಡಾಯವನ್ನು ಕಾರಂತರ ಕಾದಂಬರಿಗಳಲ್ಲಿ ಒಟ್ಟೊಟ್ಟಿಗೆ ಗುರುತಿಸಲು ಸಾಧ್ಯವಾಗಿದೆ. ಬದಲಾದ ಸಮಾಜದ ಜೀವನ ಕ್ರಮ ಮೌಲ್ಯಗಳನ್ನು ಗುರುತಿಸುವ ಪ್ರಮುಖ ಸಾಂಸ್ಕೃತಿಕ ದಾಖಲೆಯಾಗಿ ಕಾರಂತರ ಕಾದಂಬರಿಗಳು ಸಾರ್ವಕಾಲಿಕ ಮೌಲ್ಯೀಕತೆಯನ್ನು ಪಡೆಯುತ್ತವೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

''ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ'' ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಇಪ್ಪತ್ತು ಕಾದಂಬರಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ 'ಕನ್ಯಾಬಲಿ', 'ಚೋಮನ ದುಡಿ', 'ಸರಸಮ್ಮನ ಸಮಾಧಿ', 'ಮರಳಿ ಮಣ್ಣಿಗೆ', 'ಹೆತ್ತಳಾ ತಾಯಿ', 'ಸನ್ಯಾಸಿಯ ಬದುಕು', 'ಕರುಳಿನ ಕರೆ', 'ಕುಡಿಯರ ಕೂಸು', 'ಬತ್ತದ ತೊರೆ', 'ಸಮೀಕ್ಷೆ', 'ನಂಬಿದವರ ನಾಕ ನರಕ', 'ಅಳಿದ ಮೇಲೆ', 'ಸ್ವಪ್ನದ ಹೊಳೆ', 'ಇನ್ನೊಂದೇ ದಾರಿ', 'ಮೂಕಜ್ಜಿಯ ಕನಸುಗಳು', 'ಮೈ ಮನಗಳ ಸುಳಿಯಲ್ಲಿ', 'ಧರ್ಮರಾಯನ ಸಂಸಾರ', 'ಇಳೆಯೆಂಬ', 'ಕನ್ನಡಿಯಲ್ಲಿ ಕಂಡಾತ'.

ಮೇಲಿನ ಎರಡು ಸಂಶೋಧನ ಮಹಾಪ್ರಬಂಧಗಳಲ್ಲದೆ ಕಾರಂತರ ಕಾದಂಬರಿಗಳು ಕುರಿತಂತೆ ಹಲವಾರು ಸಂಶೋಧನ ಮಹಾಪ್ರಬಂಧಗಳು ರಚನೆಯಾಗಿವೆ. ಅವುಗಳೆಂದರೆ.....

ಕರುಣಾಕರ ಎನ್. ಶೆಟ್ಟಿಯವರ ''ಶಿವರಾಮ ಕಾರಂತರ ಚೋಮನ ದುಡಿ ಮತ್ತು ಪ್ರೇಮಚಂದರ ಗೋದಾನ ಕಾದಂಬರಿಗಳ ತೌಲನಿಕ ಅಧ್ಯಯನ'' (೧೯೯೪) ಪ್ರಬಂಧದಲ್ಲಿ 'ಚೋಮನ ದುಡಿ' ಹಾಗೂ 'ಗೋದಾನ' ಕಾದಂಬರಿಗಳ ತೌಲನಿಕ ಅಧ್ಯಯನ ಮಾಡಲಾಗಿದೆ. ಈ ಎರಡೂ ಕಾದಂಬರಿಗಳು ದಲಿತನೊಬ್ಬ ರೈತನಾಗಬೇಕೆಂದು ಬಯಸುವ ತುಡಿತವನ್ನು ಒಳಗೊಂಡಿವೆ. ಇದರಲ್ಲಿ ಕನ್ನಡ ಸಾಹಿತ್ಯದ ಮತ್ತು ಹಿಂದಿ ಸಾಹಿತ್ಯದ ರೂಪು-ರೇಷೆಗಳನ್ನು ಕಂಡುಕೊಳ್ಳಲು ಸಾಧ್ಯವಾಗಿದೆ.

ಕರುಣಾಕರ ಎನ್. ಶೆಟ್ಟಿಯವರ "ಕಾರಂತರ ಮತ್ತು ಪ್ರೇಮಚಂದರ ಪ್ರಾದೇಶಿಕ ಕಾದಂಬರಿಗಳ ತೌಲನಿಕ ಅಧ್ಯಯನ" (೨೦೦೩) ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಇವರಿಬ್ಬರ ಪ್ರಾದೇಶಿಕ ಕಾದಂಬರಿ, ಕಥೆಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಇಲ್ಲಿ ಕಾರಂತರೊಂದಿಗೆ ಪ್ರೇಮಚಂದರ ಸಾಹಿತ್ಯವನ್ನು ತುಲನೆ ಮಾಡಲಾಗಿದೆ. ಕನ್ನಡ ಮತ್ತು ಹಿಂದಿ ಭಾಷೆಗಳು ಪರಸ್ಪರ ಪೂರಕವಾಗಿ ಒಂದರಿಂದ ಮತ್ತೊಂದು ಸಮೃದ್ಧಿಯಾಗಲಿ ಎಂಬ ಉದ್ದೇಶ ಹೊಂದಿರುವುದು ಸ್ಪಷ್ಟವಾಗುತ್ತದೆ. ಈ ಅಧ್ಯಯನದಿಂದ ಪ್ರೇಮಚಂದರ ಸಾಹಿತ್ಯವನ್ನು ಅರಿಯಲು ಸಹಾಯಕವಾಗಿದೆ. ಕಾರಂತರ ಪ್ರಾದೇಶಿಕ ಕಾದಂಬರಿಗಳಾದ 'ಚೋಮನ ದುಡಿ', 'ಮರಳಿ ಮಣ್ಣಿಗೆ', 'ಅಳಿದ ಮೇಲೆ', 'ಬೆಟ್ಟದ ಜೀವ' ಮತ್ತು 'ಕರುಳಿನ ಕರೆ'ಗಳನ್ನು ಇಲ್ಲಿಯ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರೇಮಚಂದರ ಪ್ರಾದೇಶಿಕ ಕಥೆಗಳಾದ 'ಪೂಸ್‌ಕಿ ರಾತ್' 'ಬಡೇ ಘರಕೆ ಬೇಟಿ' 'ಈದ್ ಗ್ರಾಹ', 'ಪಂಚ ಪರಮೇಶ್ವರ' 'ಅಲಗ್ಯೋಝು', ಮತ್ತು 'ಕಫನ್'ಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳುವದರ ಜೊತೆಗೆ ಅವರ ಗೋದಾನ ಕಾದಂಬರಿಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಾಗಿದೆ. 'ಗೋದಾನ' ಕಾದಂಬರಿಯು ಭಾರತೀಯ ಶೋಷಿತ ಬಡ ರೈತನ ಬದುಕಿನ ಬವಣೆಯನ್ನು ಸಹಜವಾಗಿ ನಿರೂಪಿಸುತ್ತದೆ.

ಈ ಅಧ್ಯಯನದಲ್ಲಿ ಕಾರಂತರು ತಮ್ಮ ಬರವಣಿಗೆಯ ಮೂಲಕ ಪ್ರತಿಭಟನಾತ್ಮಕ ಕ್ರಾಂತಿಕಾರಿ ಧೋರಣೆಯಿಂದ ಸಮಾಜದ ಹಳೆಯ ನಂಬಿಕೆಗಳನ್ನು ದಿಟ್ಟತನದಿಂದ ಪ್ರಶ್ನಿಸಲು ಸಾಹಿತ್ಯವನ್ನು ಮುಖ್ಯ ಅಸ್ತ್ರವನ್ನಾಗಿ ಉಪಯೋಗಿಸಿಕೊಂಡರು ಎಂಬುದನ್ನು ಪರಿಶೀಲಿಸಲಾಗಿದೆ. 'ಕೆರೆಯ ನೀರನ್ನು ಕೆರೆಗೆ ಚೆಲ್ಲು' ಎಂಬ ಸೂಕ್ತಿಯಂತೆ ಪ್ರೇಮಚಂದ ಮತ್ತು ಕಾರಂತರು ಸಮಾಜದಿಂದ ಪಡೆದುಕೊಂಡದ್ದನ್ನು ತಮ್ಮ ಕೃತಿಗಳ ಮೂಲಕ ಮತ್ತೆ ಸಮಾಜಕ್ಕೆ ಹಿಂತಿರುಗಿಸಿರುವುದು ಸ್ಪಷ್ಟವಾಗುತ್ತದೆ.

ಸುಮಿತ್ರ ಎಲ್.ಸಿ. ಯವರ "ಕುವೆಂಪು ಮತ್ತು ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ ತೌಲನಿಕ ಅಧ್ಯಯನ" (೨೦೦೦) ಮಹಾಪ್ರಬಂಧದಲ್ಲಿ ಕುವೆಂಪು ಮತ್ತು ಕಾರಂತರು ಪ್ರಕೃತಿಯನ್ನು ತಮ್ಮ ಕಾದಂಬರಿಗಳಲ್ಲಿ ಹೇಗೆ ಚಿತ್ರಿಸಿದ್ದಾರೆ ಎಂಬುದರ ನಿರೂಪಣೆಯಿದೆ. ಪ್ರಕೃತಿ ಮತ್ತು ಮಾನವರ ನಡುವಿನ ಸಂಘರ್ಷವನ್ನು ವಿವರಿಸಲಾಗಿದೆ. ಕಾರಂತರು ಮತ್ತು ಕುವೆಂಪು ಇಬ್ಬರೂ ಪ್ರಕೃತಿ ಪ್ರೇಮಿಗಳೇ. ಒಬ್ಬರದು ವಾಸ್ತವಿಕ ನೆಲೆ, ಇನ್ನೊಬ್ಬರದು ಭಾವನಾತ್ಮಕ ನೆಲೆ ಎಂಬುದನ್ನು ಗುರುತಿಸಲಾಗಿದೆ.

ಮಂಜುನಾಥ ಟಿ.ಆರ್. ಅವರ "ಶಿವರಾಮ ಕಾರಂತರ ಐದು ಕಾದಂಬರಿಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ವಿಡಂಬನಾ ಸ್ವರೂಪ" ಸಂಶೋಧನ ಮಹಾಪ್ರಬಂಧದಲ್ಲಿ ಕಾರಂತರ ಕಾದಂಬರಿಗಳಲ್ಲಿಯ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಯ ವಿಡಂಬನೆಯಿದೆ.

ಜಬನೂರು ಶಿವರಾಜ ತುಕ್ಕಪ್ಪರವರ "ಡಾ.ಶಿವರಾಮ ಕಾರಂತರ ಅಳಿದ ಮೇಲೆ ಒಂದು ಅಧ್ಯಯನ" (೧೯೯೬) ಪ್ರಬಂಧದಲ್ಲಿ ಕಾರಂತರ 'ಅಳಿದ ಮೇಲೆ' ಕಾದಂಬರಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮಾನವರು ಬದುಕನ್ನು ಹೇಗೆ ನಿರ್ವಹಿಸಬೇಕು, ಸಾವಿನ ನಂತರವೂ ಅವರ

ಚರ್ಚೆಯಾಗಬೇಕಾದರೆ ಸಮಾಜಕ್ಕೆ ಉಪಯುಕ್ತವಾಗುವಂತೆ ಬದುಕಬೇಕು ಎಂಬ ತಾತ್ವಿಕ ನಿಲುವನ್ನು ಈ ಅಧ್ಯಯನವು ಸಮರ್ಥಿಸುತ್ತದೆ.

ರಂಗಸ್ವಾಮಿ ಟಿ.ಟಿ. ಯವರ "ಕಾರಂತರ ಕಾದಂಬರಿಗಳು (ವಿಮರ್ಶಾವಲೋಕನ)" ಸಂಶೋಧನ ಮಹಾಪ್ರಬಂಧದಲ್ಲಿ ಕಾರಂತರ ಇಪ್ಪತ್ತು ಕಾದಂಬರಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಸ್ತ್ರೀಯರ ಬಗೆಗೆ ವಿಶೇಷವಾದ ಅಧ್ಯಯನ ಇದರಲ್ಲಿ ಇಲ್ಲದಿರುವುದು ಸ್ಪಷ್ಟವಾಗುತ್ತದೆ.

ಸುವರ್ಣ ಎಸ್.ವರ್ಘಿ ಯವರ "ಕಾರಂತರ ಮೂಕಜ್ಜಿಯ ಕನಸುಗಳು ಒಂದು ಅಧ್ಯಯನ" (೧೯೯೫) ಪ್ರಬಂಧದಲ್ಲಿ ಕಾದಂಬರಿಕಾರರು ಮೂಕಜ್ಜಿಯ ಪಾತ್ರದ ಮೂಲಕ ಅಭಿವ್ಯಕ್ತಪಡಿಸಿದ ಸಾಮಾಜಿಕ, ಲೈಂಗಿಕ, ಧಾರ್ಮಿಕ, ಹಾಗೂ ವೈಚಾರಿಕ ಚಿಂತನೆಗಳ ಚರ್ಚೆ ಮಾಡಲಾಗಿದೆ. ಹಿಂದೂ ಸಂಸ್ಕೃತಿಯ ಆಚಾರ ವಿಚಾರಗಳ ವಿಡಂಬನೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ರೇವಯ್ಯ ಒಡೆಯರ ಅವರ "ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು" (೨೦೦೦) ಸಂಶೋಧನ ಮಹಾಪ್ರಬಂಧದಲ್ಲಿ ಮಾನವೀಯ ಮೌಲ್ಯಗಳೆಂದರೇನು, ಅವುಗಳ ಲಕ್ಷಣ ಹಾಗೂ ಕಾರಂತರು ತಮ್ಮ ಕಾದಂಬರಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬಳಸಿಕೊಂಡ ಬಗೆಯನ್ನು ಅಧ್ಯಯನ ಮಾಡಲಾಗಿದೆ.

ಶೇಖರ ನಾಯ್ಕ ಜಿ.ಯವರ "ಡಾ. ಕೆ. ಶಿವರಾಮ ಕಾರಂತರ ಮತ್ತು ಡಿ.ಎಚ್.ಲಾರೆನ್ಸ್‌ರವರ ಆಯ್ದ ಕಾದಂಬರಿಗಳು- ಒಂದು ತೌಲನಿಕ ಅಧ್ಯಯನ" ಎಂಬ ಮಹಾಪ್ರಬಂಧದಲ್ಲಿ ಕಾರಂತರ ಕಾದಂಬರಿಗಳನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಮುನಿಯಪ್ಪನವರ "ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ" ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಕಾರಂತರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ರಾಜಕೀಯ ಸ್ಥಿತಿ -ಗತಿಗಳ ಅಧ್ಯಯನ ಮಾಡಲಾಗಿದೆ. ಪ್ರಧಾನ ರಾಜಕೀಯ ವಸ್ತುವನ್ನೊಳಗೊಂಡ ಪ್ರಾತಿನಿಧಿಕ ಕಾದಂಬರಿಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಅವರ ಕಾದಂಬರಿಗಳಲ್ಲಿ ಬಂದಿರುವ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ರಾಜಕೀಯ ವಿಚಾರಗಳನ್ನು ಚರ್ಚಿಸಲಾಗಿದೆ. ಒಬ್ಬ ಸೃಜನಶೀಲ ಬರಹಗಾರರಾಗಿ ಕಾರಂತರು ಭಾರತದ ರಾಜಕಾರಣವನ್ನು ಹೇಗೆ ಅರ್ಥ ಮಾಡಿಕೊಂಡಿದ್ದಾರೆ ಮತ್ತು ತಮ್ಮ ನಿಲುವುಗಳನ್ನು ಹೇಗೆ ಮಂಡಿಸುತ್ತಾರೆ ಎಂಬುದರ ಉಲ್ಲೇಖವನ್ನು ಈ ಅಧ್ಯಯನದಲ್ಲಿ ಸ್ಪಷ್ಟಪಡಿಸಲಾಗಿದೆ. 'ಗೊಂಡಾರಣ್ಯ', 'ಆಳ ನಿರಾಳ', 'ಮೂಜನ್ಮ' 'ಅದೇ ಊರು ಅದೇ ಮರ', 'ನಾವು ಕಟ್ಟಿದ ಸ್ವರ್ಗ', 'ಗೆದ್ದ ದೊಡ್ಡಸ್ಥಿಕೆ', 'ಉಕ್ಕಿದ ನೊರೆ', 'ಔದಾರ್ಯದ ಉರುಳಲ್ಲಿ', ಕಾದಂಬರಿಗಳನ್ನು ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ.

ನಾಗೇಂದ್ರ ಕುಮಾರ ಅವರ "ಕಾರಂತ ಮತ್ತು ಸಂಸ್ಕೃತಿ ಪರಿಕಲ್ಪನೆಯ ನೆಲೆಗಳು" ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಭಾರತೀಯ ಸಂಸ್ಕೃತಿಯ ಆಚಾರ-ವಿಚಾರಗಳು, ಮೌಢ್ಯತೆ, ಮೂಢನಂಬಿಕೆ..... ಮುಂತಾದವುಗಳನ್ನು ಕಾದಂಬರಿಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಶಾರದಾ ಟೋಪಣ್ಣನವರ "ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಜಾನಪದೀಯ ಅಂಶಗಳು" ಎಂಬ ಸಂಶೋಧನ ಮಹಾಪ್ರಬಂಧದಲ್ಲಿ ಕಾರಂತರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಜಾನಪದೀಯ ಅಂಶಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಶೂದ್ರೇತರ ನೆಲೆಯಿಂದ ಬಂದ ಕಾರಂತರು ಜಾನಪದ ನೆಲೆಯನ್ನು ಮನನ ಮಾಡಿದ ರೀತಿ ಅನನ್ಯವಾದುದು ಎಂಬುದನ್ನು ಪರಿಶೀಲಿಸಲಾಗಿದೆ. ಸ್ತ್ರೀ ಪಾತ್ರ ಚಿತ್ರಣದಲ್ಲಿ ಜಾನಪದೀಯ ಅಂಶಗಳಿರುವುದನ್ನು ಗುರುತಿಸಲಾಗಿದೆ.

ಕಾರಂತರ ಸಾಹಿತ್ಯವನ್ನು ಶತಮಾನದುದ್ದಕ್ಕೂ ಗುರುತಿಸಬಹುದು. ಅವರ ಸಾಹಿತ್ಯವನ್ನು ವಿಮರ್ಶಕರು ವಿಶ್ಲೇಷಿಸಿದ್ದಾರೆ. ಕಾರಂತರ ಕಾದಂಬರಿಗಳನ್ನು ಕುರಿತು ಮೊದಲ ಬಾರಿಗೆ ಅನಂತ ನಾರಾಯಣ ಎಸ್. ಅವರು 'ಶಿವರಾಮ ಕಾರಂತರ ಕಾದಂಬರಿಗಳು', (೧೯೪೮) ಎಂಬ ವಿಮರ್ಶಾ ಕೃತಿಯನ್ನು ಬರೆದಿದ್ದಾರೆ. ಇದರಲ್ಲಿ ಕಾರಂತರ ಜೀವನ ಪರಿಚಯ, ಕಾದಂಬರಿಗಳ ವಸ್ತು ಚಿತ್ರಣ, ಕಥಾನಕ, ಪಾತ್ರ ನಿರೂಪಣೆ, ಶೈಲಿ, ನಿಸರ್ಗದ ಚಿತ್ರಣ, ಸಮಾಜ ಚಿತ್ರಣ.... ಇತ್ಯಾದಿಯಾಗಿ ಕಾರಂತರ ಆರಂಭದ ಕಾದಂಬರಿಯಾದ 'ವಿಚಿತ್ರ ಕೂಟ'ದಿಂದ 'ಔದಾರ್ಯದ ಉರುಳಲ್ಲಿ', ಕಾದಂಬರಿಯವರೆಗಿನ ಕಾದಂಬರಿಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ.

ವಿ.ಸೀತಾರಾಮಯ್ಯನವರ ಸಂಪಾದಿತ ಕೃತಿ 'ಶಿವರಾಮ ಕಾರಂತ', (೧೯೫೭)ದಲ್ಲಿ ಕಾರಂತರ ಕಾದಂಬರಿಗಳನ್ನು ಕುರಿತಂತೆ ತೀ.ನಂ.ಶ್ರೀಕಂಠಯ್ಯ, ಆಲೂರು ವೆಂಕಟರಾವ್, ಎ.ಎನ್. ಮೂರ್ತಿರಾವ್..... ಮುಂತಾದವರ ಲೇಖನಗಳು ಇವೆ.

ಕಾರಂತ ಅಭಿನಂದನ ಸಮಿತಿಯ ಸಂಪಾದಿತ ಕೃತಿ 'ಕಾರಂತ ಪ್ರಪಂಚ'(೧೯೬೮)ದಲ್ಲಿ ಕಾರಂತರ ಬದುಕು ಬರಹಗಳನ್ನು ಕುರಿತು ಹಲವಾರು ವಿಮರ್ಶಾ ಲೇಖನಗಳಿವೆ. ವ್ಯಕ್ತಿ ಪ್ರಪಂಚ, ಕಲಾ ಪ್ರಪಂಚ, ಸಾಹಿತ್ಯ ಪ್ರಪಂಚ, ಕಾದಂಬರಿ ಪ್ರಪಂಚ ಹಾಗೂ ಕೃತಿ ಮತ್ತು ಲೇಖನ ದರ್ಶಿಕೆ ಎಂಬ ಐದು ವಿಭಾಗಗಳನ್ನು ಹೊಂದಿದೆ. ಡಿ.ಎಲ್.ನರಸಿಂಹಾಚಾರ, ವಿ.ಎಂ.ಇನಾಂದಾರ, ಜಿ.ವರದರಾಜರಾವ್, ಎಲ್. ದ್ವಾರಕನಾಥ, ಕೀರ್ತಿನಾಥ ಕುರ್ತುಕೋಟಿ, ಸುಮತೀಂದ್ರ ನಾಡಿಗ.... ಮುಂತಾದವರ ಒಟ್ಟು ಅರವತ್ತು ಲೇಖನಗಳಿವೆ. ಈ ಲೇಖನಗಳಿಂದ ಕಾರಂತರ ಜೀವನ ಹಾಗೂ ಸಾಹಿತ್ಯ ಕೃತಿಗಳ ಕುರಿತು ಹಲವಾರು ವಿಭಿನ್ನವಾದ ಒಳನೋಟಗಳನ್ನು ಮುಖ್ಯವಾಗಿ ಗುರುತಿಸಬಹುದು.

'ಶಿವರಾಮ ಕಾರಂತರ ಬದುಕು-ಬರಹ' (೧೯೭೮) ಕೃತಿಯಲ್ಲಿ ಶಿವರಾಮ ಕಾರಂತರು ಸಾಹಿತ್ಯ ಕ್ಷೇತ್ರಕ್ಕೆ ಪತ್ರಿಕಾ ವ್ಯವಸಾಯದ ಮೂಲಕ ಪ್ರವೇಶ ಮಾಡಿದ ಅನುಭವಗಳು ಮತ್ತು ಅಂದಿನ

ಸಮಕಾಲೀನ ಜೀವನದ ಪ್ರಮುಖ ವಿಚಾರಗಳಾದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿಚಾರಗಳನ್ನು ಕುರಿತಂತಹ ಅನುಭವಗಳನ್ನು ವಿ.ಎಂ. ಇನಾಂದಾರರು ವಿಶ್ಲೇಷಿಸಿದ್ದಾರೆ. ಚರಿತ್ರೆ, ಕಲೆ, ವಿಜ್ಞಾನ, ಬ್ರಹ್ಮಚರ್ಯೆ, ವಿಧವಾ ವಿವಾಹ, ಪಾನ ನಿರೋಧ..... ಮುಂತಾದ ಕಾರಂತರ ವೈಚಾರಿಕ ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ.

ಟಿ.ಪಿ.ಅಶೋಕ ಅವರು ಶಿವರಾಮ ಕಾರಂತರ ಕಾದಂಬರಿಗಳನ್ನು ಕುರಿತು ವಿಶೇಷವಾಗಿ ಅಧ್ಯಯನಗೈದಿದ್ದಾರೆ. ಅವರ 'ಕಾರಂತರ ಕಾದಂಬರಿಗಳಲ್ಲಿ ಗಂಡು-ಹೆಣ್ಣು' (೧೯೮೨) ಕೃತಿಯಲ್ಲಿ ಕಾರಂತರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಗಂಡು-ಹೆಣ್ಣಿನ ಸಂಬಂಧಗಳನ್ನು ಕುರಿತು ವಿವಿಧ ರೀತಿಯ ಒಳನೋಟಗಳನ್ನು ಕಟ್ಟಿಕೊಡಲಾಗಿದೆ. ಗಂಡು-ಹೆಣ್ಣಿನ ಸಂಬಂಧ ಹೇಗಿರಬೇಕು, ಹೇಗಿರಬಾರದು ಎಂಬುದರ ವಿವೇಚನೆಯಿದೆ. ಧರ್ಮ, ಪರಂಪರೆ, ಸಂಸ್ಕೃತಿ, ಸಮಾಜಗಳನ್ನು ಕುರಿತು ಲೇಖಕ ತಳೆಯುವ ನಿಲುವುಗಳಿಗೆ ಗಂಡು-ಹೆಣ್ಣಿನ ಸಂಬಂಧದ ತೊಡಕು ತೊಂದರೆಗಳ ನಿರ್ವಹಣೆ ಮುಖ್ಯವೆನಿಸುತ್ತದೆ. ಕಾರಂತರ ಕಾದಂಬರಿಗಳಲ್ಲಿ ಬರುವ ಪ್ರೀತಿ, ಪ್ರೇಮ, ಪ್ರಣಯ, ದಾಂಪತ್ಯ ಜೀವನ ಮತ್ತು ವಿವಾಹಬಾಹಿರ ಸಂಬಂಧಗಳಲ್ಲಿಯ ಅವ್ಯಕ್ತ ಸ್ಥಿತಿ-ಗತಿಗಳನ್ನು ಕುರಿತು ಸಮಾಲೋಚಿಸಲಾಗಿದೆ.

'ಶಿವರಾಮ ಕಾರಂತರ ಹತ್ತು ಅಧ್ಯಯನಗಳು' (೧೯೮೨) ಕೃತಿಯಲ್ಲಿ ಕಾರಂತರ ಸಾಹಿತ್ಯ ಸೃಷ್ಟಿಯ ವಿವಿಧ ಪ್ರಕಾರಗಳ ಕೆಲವು ಮುಖ್ಯ ಕೃತಿಗಳನ್ನು ಕುರಿತು ವಿಮರ್ಶಿಸಲಾಗಿದೆ. ಕಾರಂತರ ಮತ್ತು ಅವರ ಸಾಹಿತ್ಯ ಕೃತಿಗಳ ವಿಭಿನ್ನ ಒಳನೋಟಗಳನ್ನು ಮುಖ್ಯವಾಗಿ ಈ ಕೃತಿಯಲ್ಲಿ ಗುರುತಿಸಬಹುದಾಗಿದೆ. 'ಕಾರಂತರ ಕೆಲವು ಮುಖಗಳು' (೧೯೮೨) ಕೃತಿಯಲ್ಲಿ ಎಸ್.ಎಲ್.ಭೈರಪ್ಪ, ಡಿ.ಆರ್.ನಾಗರಾಜ, ಬರಗೂರು ರಾಮಚಂದ್ರಪ್ಪ, ಟಿ.ಪಿ. ಅಶೋಕ.... ಮುಂತಾದವರ ಲೇಖನಗಳಿವೆ. ಕಾರಂತರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಜೀವನಶ್ರದ್ಧೆ, ಸಾಮಾಜಿಕ ಪರಿಕಲ್ಪನೆ, ರಾಜಕಾರಣದ ನೆಲೆಗಳು, ಧರ್ಮ, ನಿಸರ್ಗ, ಗಂಡು-ಹೆಣ್ಣಿನ ಸಂಬಂಧ, ಸ್ತ್ರೀಯರ ಜೀವನ, ಅವರ ನೋವು-ನಲಿವುಗಳ ಬಗೆಗೆ ಅನುಲಕ್ಷಿಸಲಾಗಿದೆ. ಕಾರಂತರ ಮತ್ತು ಅವರ ಕಾದಂಬರಿಗಳ ಕುರಿತಾದ ವಿಭಿನ್ನ ಆಯಾಮಗಳನ್ನು ಗುರುತಿಸುವಲ್ಲಿ ಈ ಕೃತಿಯು ಪ್ರಮುಖವಾಗಿದೆ.

ಮಾಲಿನಿ ಮಲ್ಯ ಅವರು ಕಾರಂತ ಸಾಹಿತ್ಯದ ಸಂರಕ್ಷಣೆ, ವರ್ಗೀಕರಣ, ವಿಶ್ಲೇಷಣೆ, ಸಂಪಾದನೆಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. 'ನಾನು ಕಂಡ ಕಾರಂತರು', (೧೯೮೭) ಕೃತಿಯಲ್ಲಿ ಮಾಲಿನಿ ಮಲ್ಯ ತಾವು ಕಂಡಂತೆ ಕಾರಂತರ ವ್ಯಕ್ತಿ ಪರಿಚಯವನ್ನು ಮಾಡಿದ್ದಾರೆ. ಶಿವರಾಮ ಕಾರಂತರ ಹಲವಾರು ಕಾದಂಬರಿಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. 'ಕಾರಂತರ ಕಾದಂಬರಿಗಳು -ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ', (೧೯೯೦) ಕೃತಿಯಲ್ಲಿ ಮರಾಠಿ ಭಾಷೆಗೆ ಅನುವಾದಗೊಂಡ ಕಾರಂತರ ಕಾದಂಬರಿಗಳ ವಿಮರ್ಶೆಯಿದೆ. "ಕನ್ನಡ ಕಾದಂಬರಿಗಳು ಮರಾಠಿಗೆ ಅನುವಾದಗೊಂಡದ್ದು, ಅವುಗಳ ವಿಮರ್ಶೆ ಮರಾಠಿಯಲ್ಲಿ ಬಂದದ್ದು, ಆ ವಿಮರ್ಶೆಗಳು ಮತ್ತೀಗ ಕನ್ನಡದಲ್ಲಿ ಒಡಮೂಡಿದ್ದು, ಅಂತೂ

[illegible]

ನಮ್ಮ ಒಬ್ಬ ಶ್ರೇಷ್ಠ ಕಾದಂಬರಿಕಾರರ ಬಗೆಗೆ ನೆರೆಯವರು ಹೇಗೆ ಸ್ಪಂದಿಸಿದ್ದಾರೆಂಬುದನ್ನು ನಮ್ಮವರಿಗೇನೆ ತೋರಿಸಿಕೊಟ್ಟಂತಾಯಿತು" ಎಂದು ಶ್ರೀನಿವಾಸ ಹಾವನೂರ ಹೇಳಿರುವುದು ಈ ಕೃತಿಯ ವೈಶಿಷ್ಟ್ಯವನ್ನು ಸೂಚಿಸುತ್ತದೆ. ಈ ಕೃತಿಯಲ್ಲಿ 'ಚೋಮನದುಡಿ', 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಅಳಿದ ಮೇಲೆ', 'ಮೂಕಜ್ಜಿಯ ಕನಸುಗಳು', ಮತ್ತು 'ಮೈ ಮನಗಳ ಸುಳಿಯಲ್ಲಿ', ಕಾದಂಬರಿಗಳ ತೌಲನಿಕ ಅಧ್ಯಯನ ಮಾಡಲಾಗಿದೆ.

"ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನಿಕರಣದ ಪ್ರಕ್ರಿಯೆ" (೧೯೯೦) ಕೃತಿಯಲ್ಲಿ ಪರಂಪರಾಗತ ಸಾಮಾಜಿಕ ವ್ಯವಸ್ಥೆ ಮತ್ತು ಆಧುನಿಕ ಮೌಲ್ಯಗಳು ಪರಸ್ಪರ ಮುಖಾ ಮುಖಿಯಾದಾಗ ಪಲ್ಲಟಗೊಳ್ಳುವ ಕ್ರಮ ಕಾರಂತರ ಕಾದಂಬರಿಗಳಲ್ಲಿನ ಒಂದು ಮುಖ್ಯ ಆಶಯವಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಕಾರಂತರ ಕಾದಂಬರಿಗಳಲ್ಲಿ ಆಧುನಿಕತೆಯ ಪ್ರವೇಶ ಮನುಷ್ಯನ ದೈನಂದಿನ ಜೀವನದಲ್ಲಿ ಯಾವ ರೀತಿಯಾಗಿ ಪ್ರವೇಶಿಸುತ್ತದೆ ಎಂಬುದನ್ನು ಮುಖ್ಯವಾಗಿ ಗುರುತಿಸಲಾಗಿದೆ. ಪ್ರತಿಯೊಂದು ಪಾತ್ರದಲ್ಲಿಯೂ ಮತ್ತು ಪರಿಸರದಲ್ಲಿಯೂ ಅದರ ಪ್ರವೇಶವನ್ನು ಕುರಿತು ಹಾಗೂ ಅದು ಮನುಷ್ಯನ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಕುರಿತಂತೆ ಕಾರಂತರ ಕಾದಂಬರಿಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.

"ಕಾದಂಬರಿ ಕಣ್ಣಲ್ಲಿ ಕಾರಂತರು" (೧೯೯೨) ಕೃತಿಯಲ್ಲಿ ಕಾರಂತರ ಕಾದಂಬರಿಗಳನ್ನು ಕುರಿತಂತೆ ಟಿ.ಪಿ. ಅಶೋಕ, ಜೆ.ಶ್ರೀನಿವಾಸ ಮೂರ್ತಿ, ಬಿ.ಎನ್.ಸುಮಿತ್ರಾಬಾಯಿ, ಲಕ್ಷ್ಮೀಪತಿ ಕೋಲಾರ.... ಮುಂತಾದವರ ಲೇಖನಗಳಿವೆ. ಪ್ರತಿಯೊಬ್ಬ ಸೃಜನಶೀಲ ಬರಹಗಾರನ ಕೃತಿಗಳು ಒಟ್ಟು ಸಾಂಸ್ಕೃತಿಕ ಪರಂಪರೆಯನ್ನು ತನ್ನದೇ ಆದ ರೀತಿಯಲ್ಲಿ ಹಿಗ್ಗಿಸುವುದರಿಂದ ಅವನ ಒಟ್ಟು ಬರಹಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇರಿಸಿ ನೋಡುವ ಪ್ರಯತ್ನ ಈ ಕೃತಿಯಲ್ಲಿ ತುಂಬ ಅರ್ಥಪೂರ್ಣವಾಗಿ ದಾಖಲಿಸಲಾಗಿದೆ. 'ಕಾರಂತರ ಕಾದಂಬರಿಗಳಲ್ಲಿ ನಿಸರ್ಗ', (೧೯೯೨) ಕೃತಿಯಲ್ಲಿ ಕಾರಂತರ ಕಾದಂಬರಿಗಳಾದ ಮರಳಿ ಮಣ್ಣಿಗೆ, ಬೆಟ್ಟದ ಜೀವ, ಕುಡಿಯರ ಕೂಸು ಈ ಕಾದಂಬರಿಗಳಲ್ಲಿ ನಿಸರ್ಗವು ಪ್ರಧಾನವಾಗಿ ಯಾವ ರೀತಿಯಲ್ಲಿ ಚಿತ್ರಣಗೊಂಡಿದೆ ಎಂಬುದನ್ನು ಗುರುತಿಸಲಾಗಿದೆ. ಅದೇ ರೀತಿ ಚೋಮನದುಡಿ, ಸರಸಮ್ಮನ ಸಮಾಧಿ, ಚಿಗುರಿದ ಕನಸು, ಮುಗಿದ ಯುದ್ಧ..... ಮುಂತಾದ ಕಾದಂಬರಿಗಳಲ್ಲಿ ಮನುಷ್ಯ ಮತ್ತು ನಿಸರ್ಗದ ನಡುವಿನ ಸಂಬಂಧವನ್ನು ಕುರಿತಂತೆ ವಿವೇಚಿಸಲಾಗಿದೆ. ಮನುಷ್ಯನ ಎಲ್ಲ ಚಟುವಟಿಕೆಗಳು ನಿಸರ್ಗದ ಹಿನ್ನೆಲೆಯಲ್ಲಿಯೆ ನಡೆಯುತ್ತವೆ ಎಂಬುದನ್ನು ಪಾತ್ರಗಳ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

'ಶಿವರಾಮ ಕಾರಂತರ ವಾಙ್ಮಯ ವೃತ್ತಾಂತ', (೧೯೯೨) ಕಾರಂತರ ಕೃತಿಗಳ ಸಮಗ್ರ ವರ್ಗೀಕೃತ ಪಟ್ಟಿಯ ಜೊತೆಗೆ ಕಾರಂತರ ಜೀವನ ಪರಿಚಯದ ವಿವರಗಳು, ಅವರಿಗೆ ದೊರೆತ ಪ್ರಶಸ್ತಿ, ಗೌರವ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಕೃತಿಗಳ ಸಾರಾಂಶವನ್ನು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಕಾರಂತರ ಸಾಹಿತ್ಯಾಭ್ಯಾಸಿಗಳಿಗೆ ಇದು ತುಂಬ ಉಪಯುಕ್ತವಾದ ಪ್ರಾಥಮಿಕ ಮೂಲ ಆಕರವಾಗಿದೆ. 'ಕಾರಂತ

[illegible]

[illegible]

[illegible]

ಕೈಪಿಡಿ' ಎಂದೇ ಕರೆಯಬಹುದಾದ ಈ ಕೃತಿಯು ಕಾರಂತ ಸಾಹಿತ್ಯಾಭ್ಯಾಸಿಗಳ ಮೊದಲ ಹಂತದ ಸಂಶೋಧನೆಗಳಿಗೆ ಅನಿವಾರ್ಯವೆನಿಸುವಷ್ಟು ಮೌಲ್ಯಿಕವಾಗಿದೆ. ಇದಕ್ಕೆ ಪೂರಕ ಸಂಪುಟವೆಂಬಂತೆ 'ಕನ್ನಡ ಸಾಹಿತ್ಯ', ಈ ಶತಮಾನದ ನೋಟ ಶಿವರಾಮ ಕಾರಂತ,' (೧೯೯೩) ಕೃತಿಯು ಶಿವರಾಮ ಕಾರಂತರ ಬದುಕು ಬರಹಗಳ ಬಗ್ಗೆ ಪ್ರಕಟವಾಗಿರುವ ಸಮಗ್ರ ವಿಮರ್ಶೆಯ ಆಯ್ದ ಭಾಗಗಳ ಪ್ರಾತಿನಿಧಿಕ ಸಂಕಲನವಾಗಿದೆ. ಏಳು ದಶಕಗಳ ಅವಧಿಯ ನಾಲ್ಕೈದು ತಲೆಮಾರುಗಳಿಗೆ ಸೇರಿದ ಒಂದು ನೂರ ಇಪ್ಪತ್ತೈದು ಲೇಖಕರ ಅನಿಸಿಕೆ, ಅಭಿಪ್ರಾಯ, ವಿಮರ್ಶೆ, ವ್ಯಾಖ್ಯಾನ, ಪ್ರತಿಕ್ರಿಯೆಗಳ ಆಯ್ದ ಭಾಗಗಳು ಒಂದು ಅಘೋಷಿತ ಸಂವಾದದ ವಿನ್ಯಾಸದಲ್ಲಿ ದಾಖಲಾಗಿವೆ. ಕಾರಂತರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ನಿಸರ್ಗ, ರಾಜಕೀಯ, ಗಂಡು-ಹೆಣ್ಣಿನ ಸಂಬಂಧ, ಧರ್ಮ -ಧಾರ್ಮಿಕ ಶ್ರದ್ಧೆ, ಸ್ತ್ರೀಪಾತ್ರಗಳು, ಆಧುನಿಕರಣದ ಪ್ರಕ್ರಿಯೆ..... ಇತ್ಯಾದಿಯಾಗಿ ಹಲವಾರು ವಿಮರ್ಶಕರ ವಿಶ್ಲೇಷಣೆಗಳನ್ನು ಅನುಲಕ್ಷಿಸಲಾಗಿದೆ. ಅನಿಸಿಕೆ-ಅಭಿಪ್ರಾಯಗಳ ದಾಖಲೆಗಿಂತ ಹೆಚ್ಚಾಗಿ ಗ್ರಹಿಕೆಯ, ಚರ್ಚೆಯ, ಸಂವಾದದ ವಿನ್ಯಾಸಗಳನ್ನು ಕಂಡುಕೊಳ್ಳುವುದು ಈ ಕೃತಿಯ ಮುಖ್ಯ ಉದ್ದೇಶವಾಗಿದೆ.

'ಕಾರಂತ ಮಂಥನ', (೧೯೯೪) ಕೃತಿಯಲ್ಲಿ ಕಾರಂತರು ಮತ್ತು ಅವರ ಕಾದಂಬರಿಗಳನ್ನು ಕುರಿತು ರಚಿತವಾಗಿರುವ ವಿವಿಧ ಲೇಖಕ ಮತ್ತು ಲೇಖಕಿಯರ ಒಟ್ಟು ಐವತ್ತೊಂದು ಮಹತ್ವಪೂರ್ಣವಾದ ಲೇಖನಗಳಿವೆ. ಲೀಲಾ ಕಾರಂತ, ಮಾಲಿನಿ ಮಲ್ಯ, ಗೋಪಾಲಕೃಷ್ಣ ಅಡಿಗ, ಹಾ.ಮ.ನಾಯಕ, ಎಲ್.ಎಸ್.ಶೇಷಗಿರಿರಾವ್, ಬಿ.ಎ.ವಿವೇಕ ರೈ, ಡಿ.ಆರ್.ನಾಗರಾಜ, ಕೆ.ವಿ.ನಾರಾಯಣ, ಸಿ.ಎನ್.ರಾಮಚಂದ್ರನ್, ವಿ.ಕೃ.ಗೋಕಾಕ್.... ಮುಂತಾದವರ ಲೇಖನಗಳಿವೆ. ವಿವಿಧ ಕಡೆಗಳಲ್ಲಿ ಚದುರಿ ಹೋಗಿದ್ದ, ಕೆಲವೊಮ್ಮೆ ಪತ್ರಿಕೆಗಳಲ್ಲಿ ಅಚ್ಚಾಗಿ ಆಮೇಲೆ ಯಾವುದೇ ಸಂಕಲನಕ್ಕೆ ಸೇರದೇ ಹೋಗಿದ್ದ, ಹಲವಾರು ಕಾರಣಗಳಿಂದ ಹೆಚ್ಚಿನ ಓದುಗರಿಗೆ ಅಲಭ್ಯವಾಗಿದ್ದ ಲೇಖನಗಳನ್ನು ಈ ಕೃತಿಯಲ್ಲಿ ಒಂದೆಡೆ ಸಂಗ್ರಹಿಸಿರುವುದು ಕಾರಂತ ಸಾಹಿತ್ಯಾಭ್ಯಾಸಿಗಳಿಗೆ ತುಂಬ ಉಪಯುಕ್ತವಾದ ಆರಂಭಿಕ ಆಕರವಾಗಿದೆ. ಈ ಲೇಖನಗಳಿಂದ ಕಾರಂತರ ಕೃತಿಗಳ ಕುರಿತು ವಿವಿಧ ಆಯಾಮಗಳನ್ನು ಈ ಕೃತಿಯಲ್ಲಿ ಗುರುತಿಸಬಹುದು.

'ಕಾರಂತರ ಕಾದಂಬರಿಗಳಲ್ಲಿ ನಿರೂಪಕ', (೧೯೯೬) ಕೃತಿಯಲ್ಲಿ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಬರುವ ನಿರೂಪಕನ ಪಾತ್ರದ ವಿಶ್ಲೇಷಣೆಯಿದೆ. ನಿರೂಪಕರನ್ನು ವಿಡಂಬನಕಾರ ನಿರೂಪಕ, ರೂಪನಿರ್ಧಿಷ್ಟ ನಿರೂಪಕ, ಭಾಗಿ ನಿರೂಪಕ, ಸೀಮಿತ ಪ್ರಥಮ ಪುರುಷ ನಿರೂಪಕ, ರೂಪರಹಿತ ವಿಶ್ವಸನೀಯ ನಿರೂಪಕರೆಂದು ವರ್ಗೀಕರಿಸಿ ವಿವರಿಸಲಾಗಿದೆ. ಕಾರಂತರ ಕಾದಂಬರಿಗಳ ಸಂಕೀರ್ಣತೆ ಹಾಗೂ ಕಲಾತ್ಮಕ ಕೌಶಲ್ಯಗಳ ಬಗ್ಗೆ ಈ ಕೃತಿಯಲ್ಲಿ ವಿಶ್ಲೇಷಣೆ ಮಾಡಲಾಗಿದೆ. 'ಅಂಗಳದೊಳಗಿನ ಕಡಲು' (೧೯೯೭) ಕೃತಿಯಲ್ಲಿ ಶಿವರಾಮ ಕಾರಂತರು ಕಾಣಿಸುವ ಮಹಿಳಾ ಲೋಕವನ್ನು ಕುರಿತು ಚರ್ಚಿಸಲಾಗಿದೆ. ದಾಂಪತ್ಯದ ಸಾಮರಸ್ಯಕ್ಕೆ ಹೆಣ್ಣು-ಗಂಡುಗಳ ಮನೋದೈಹಿಕ

ತರಂಗಗಳಲ್ಲಿನ ಹೊಂದಾಣಿಕೆ ಮುಖ್ಯವಾಗುತ್ತದೆ ಎಂಬುದು ಈ ಕೃತಿಯ ಒಟ್ಟು ಆಶಯವಾಗಿದೆ. ಹೆಣ್ಣಿನ ಬದುಕನ್ನು, ಸ್ತ್ರೀಯರ ಸಮಸ್ಯೆಗಳನ್ನು ಮಹಿಳೆಯರ ವ್ಯಕ್ತಿತ್ವದ ಮೂಲಕವೂ ಒಟ್ಟಾರೆ ಮಾನವರಿಗೆಲ್ಲ ಅನ್ವಯಿಸಬಹುದಾದ ಅಂಶಗಳನ್ನೇ ಕಾದಂಬರಿಕಾರರು ಕಾದಂಬರಿಗಳಲ್ಲಿ ಸಮಸ್ಯೆಯಾಗಿ ಚರ್ಚೆಗೊಡ್ಡಿರುವುದನ್ನು ಈ ಕೃತಿಯಲ್ಲಿ ಗುರುತಿಸಲಾಗಿದೆ.

'ಬಹುಮುಖಿ', (೧೯೯೯) ಕೃತಿಯಲ್ಲಿ ಶಿವರಾಮ ಕಾರಂತರ ಬದುಕು-ಬರಹಗಳ ಕುರಿತಂತೆ ಇಪ್ಪತ್ತೈದು ಲೇಖನಗಳಿವೆ. ಕಾರಂತರ ಕಾದಂಬರಿ ಸಾಹಿತ್ಯ, ಅವರ ಬದುಕು ಹಾಗೂ ಅವರ ಇನ್ನಿತರ ಸೃಜನಾತ್ಮಕ ಚಟುವಟಿಕೆಗಳನ್ನು ಕುರಿತು ಚರ್ಚಿಸಲಾಗಿದೆ. ಲೈಂಗಿಕ ಬಯಕೆಯ ಸೆಳೆತಕ್ಕೆ ಸಿಕ್ಕ ಮನುಷ್ಯ ಹೇಗೆ ವರ್ತಿಸಬಲ್ಲನು, ಅದರಿಂದ ಕುಟುಂಬದ ಮೇಲೆ, ಸಮಾಜದ ಮೇಲೆ, ಯಾವ ಯಾವ ದುಷ್ಪರಿಣಾಮಗಳು ಬೀರಬಹುದು ಎಂಬುದರ ಚಿಂತನೆಯಿದೆ. ವೈವಾಹಿಕ, ವಿವಾಹಬಾಹಿರ ಸಂದರ್ಭದ ಲೈಂಗಿಕ ಸಮಸ್ಯೆಗಳ ಸ್ವರೂಪ ಎಂಬ ವಿಷಯಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಲಾಗಿದೆ. 'ಕಾರಂತರು ಪ್ರಣಯ ಪ್ರೇಮವನ್ನು ಕುರಿತು ಬರೆಯಲಾರರು, ಕೇವಲ ದಾಂಪತ್ಯವನ್ನು ಕುರಿತು ಬರೆಯಬಲ್ಲರು' ಎಂಬ ವಿಮರ್ಶಕರ ಹೇಳಿಕೆಯ ಸಾಧ್ಯ-ಅಸಾಧ್ಯತೆಗಳನ್ನು ಕುರಿತು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. 'ಕಾರಂತ ಉವಾಚ' (೧೯೯೯) ಕೃತಿಯಲ್ಲಿ ಕಾರಂತರ ಚಿಂತನೆ, ಕಾರಂತರ ಸಾಹಿತ್ಯದಲ್ಲಿ ಬಂದಿರುವ ವಿವಿಧ ವಿಷಯಗಳ ಸೂಕ್ತಿಗಳನ್ನು ಸಂಗ್ರಹಿಸಲಾಗಿದೆ. ವ್ಯಕ್ತಿ ಮತ್ತು ಸಮಾಜ, ಧರ್ಮ, ಸಂಸ್ಕೃತಿ, ಶಿಕ್ಷಣ, ಸಂಪ್ರದಾಯ, ಪ್ರಜೆ ಮತ್ತು ಪ್ರಜಾಪ್ರಭುತ್ವ, ಭಾಷೆ, ಸಾಹಿತ್ಯ ಚಿಂತನೆ ಮುಂತಾದ ವಿಷಯಗಳ ಕುರಿತು ಕಾರಂತರ ನಿಲುವುಗಳನ್ನು ಸಂಗ್ರಹಿಸಲಾಗಿದೆ. ಇದರಿಂದ ಕಾರಂತರ ವ್ಯಕ್ತಿತ್ವ ಮತ್ತು ಅವರ ವಿಚಾರಧಾರೆಯನ್ನು ಅರಿಯಲು ಸಾಧ್ಯವಾಗುತ್ತದೆ.

ಶಿವರಾಮ ಕಾರಂತರು ನಿಧನರಾದ ತರುವಾಯ ನಾಡಿನಾದ್ಯಂತ ಹಿರಿಯ ಲೇಖಕರು, ಸಾಹಿತ್ಯಾಸಕ್ತರು, ಚಿಂತಕರು, ವಿಮರ್ಶಕರು ಬರೆದಂತಹ ಹಲವಾರು ಸ್ಮರಣ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅವುಗಳಲ್ಲಿ ಇಪ್ಪತ್ತು ಲೇಖನಗಳನ್ನು "ಕಾರಂತ ಯುಗಾಂತ", (೧೯೯೯) ಕೃತಿಯಲ್ಲಿ ಸಂಗ್ರಹಿಸಲಾಗಿದೆ. ಇದರೊಂದಿಗೆ ಅರವತ್ತಾರು ಸಾಹಿತಿಗಳ ಭಾವಪೂರ್ಣ ಶ್ರದ್ಧಾಂಜಲಿಪೂರಿತ ಲೇಖನಗಳಿವೆ. ಹನ್ನೊಂದು ಲೇಖನಗಳು ಆಂಗ್ಲ ಭಾಷೆಯಲ್ಲಿವೆ. ಇದರಿಂದ ಕಾರಂತರು ಕೇವಲ ಕನ್ನಡ ಭಾಷೆಯ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೆ, ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿದ್ದರು ಎಂಬುದು ಆಂಗ್ಲ ಭಾಷೆಯ ಲೇಖನಗಳಿಂದ ದೃಢವಾಗುತ್ತದೆ. ಜಿ.ಎಸ್.ಶಿವರುದ್ರಪ್ಪ, ವ್ಯಾಸರಾಯ ಬಲ್ಲಾಳ, ಪಿ.ಲಂಕೇಶ, ವೈದೇಹಿ, ಕೋ.ಶಿವಾನಂದ ಕಾರಂತ, ಉಲ್ಲಾಸ ಕಾರಂತ, ಶ್ರೀನಿವಾಸ ಹಾವನೂರು, ಜಯಪ್ರಕಾಶ ಮಾವಿನಕುಳಿ, ಜಿ.ಎಸ್.ಆಮೂರ..... ಮುಂತಾದವರ ಲೇಖನಗಳು ಅಗಲಿದ ಕಾರಂತರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವೋಪಾದಿಯಲ್ಲಿವೆ. ಈ ಲೇಖನಗಳಿಂದ ಶಿವರಾಮ ಕಾರಂತರ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಗುರುತಿಸಬಹುದು. ಈ ಕೃತಿಯ ಕೊನೆಯಲ್ಲಿ ಶಿವರಾಮ ಕಾರಂತರ ಒಟ್ಟು ಕೃತಿಗಳ ಪಟ್ಟಿ. ಅವರಿಗೆ

ದೊರೆತ ಗೌರವ ಪ್ರಶಸ್ತಿಗಳು ಹಾಗೂ ಕಾರಂತರ ವ್ಯಕ್ತಿತ್ವ ಮತ್ತು ವಾಙ್ಮಯ ಕುರಿತು ಪ್ರಕಟವಾದ ಕೃತಿಗಳನ್ನು ಹೆಸರಿಸಲಾಗಿದೆ.

'ಕಾರಂತ ಚಿಂತನೆ-ಕಡಲಾಚೆಯ ಕನ್ನಡಿಗರಿಂದ', (೨೦೦೦) ಎಂಬ ಕೃತಿಯಿಂದ ಕಾರಂತ ಸಾಹಿತ್ಯಾಭ್ಯಾಸಿಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಇದ್ದಾರೆ ಎಂಬುದು ದೃಢವಾಗುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೆಲೆಸಿದ ಕನ್ನಡಿಗರ ಲೇಖನಗಳು ಈ ಕೃತಿಯಲ್ಲಿವೆ. ಈ ಕೃತಿಯು ಎರಡು ವಿಭಾಗಗಳನ್ನು ಹೊಂದಿದೆ. ಒಂದನೆಯ ಭಾಗವು 'ಕಾರಂತ-ವ್ಯಕ್ತಿ ಮತ್ತು ಸಾಹಿತ್ಯ'ವನ್ನು ಒಳಗೊಂಡಿದ್ದರೆ, ಎರಡನೆಯ ಭಾಗದಲ್ಲಿ 'ಕಾರಂತರ ಕೃತಿ ಸಮೀಕ್ಷೆ' ಇದೆ. ಒಂದನೆಯ ಭಾಗದಲ್ಲಿ ಕಾರಂತರ ವ್ಯಕ್ತಿಗತ ಪರಿಚಯದ ಲೇಖನಗಳಿವೆ. ಎರಡನೆಯ ಅಂಕದಲ್ಲಿ ಕಾರಂತರ ಕೆಲ ಕಾದಂಬರಿಗಳನ್ನು ವಿಮರ್ಶಿಸಲಾಗಿದೆ. ಈ ಕೃತಿಯಲ್ಲಿ "ಹಲವು ಲೇಖಕರು ಕಾರಂತರ ಬಗ್ಗೆ ಹೊಸದೇನನ್ನು ಹೇಳದೇ ಇರಬಹುದು. ಆದರೆ ಅವರು ಹೇಳಿದಷ್ಟು ಪ್ರಾಮಾಣಿಕವಾಗಿ ಮನಸ್ಸಿಗೆ ಮುಟ್ಟುವಂತಿದೆ" ಎಂದು ಯು.ಆರ್.ಅನಂತಮೂರ್ತಿಯವರು ಈ ಕೃತಿಯ ಮುನ್ನುಡಿಯಲ್ಲಿ ಹೇಳಿರುವುದು ಈ ಕೃತಿಯ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತದೆ.

'ಕಾರಂತರ ಕಾದಂಬರಿಗಳು', (೨೦೦೧) ಎಂಬ ವಿಮರ್ಶಾ ಕೃತಿಯಲ್ಲಿ ಕಾರಂತರ ಕೆಲವು ಕಾದಂಬರಿಗಳನ್ನು ವಿಮರ್ಶಿಸಲಾಗಿದೆ. ಇದರೊಂದಿಗೆ 'ಕಾರಂತ ಕಾದಂಬರಿ ಪ್ರಪಂಚ' ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಷ್ಟಾಗಿ ಗಮನಕ್ಕೆ ಬಾರದೆ ಉಳಿದಿದ್ದ 'ಜಾರುವ ದಾರಿಯಲ್ಲಿ', 'ನಂಬಿದವರ ನಾಕ-ನರಕ', 'ಇದ್ದರೂ ಚಿಂತೆ', 'ಗೆದ್ದ ದೊಡ್ಡಸ್ಥಿಕೆ', ಕಾದಂಬರಿಗಳನ್ನು ವಿಮರ್ಶಿಸಲಾಗಿದೆ.

'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು ಶಿವರಾಮ ಕಾರಂತ', (೨೦೦೧) ಕೃತಿಯಲ್ಲಿ ಶಿವರಾಮ ಕಾರಂತರ ಬದುಕು, ಸಾಹಿತ್ಯ ಸಮೀಕ್ಷೆ ಹಾಗೂ ಯಕ್ಷಗಾನ ಬಯಲಾಟ ಕುರಿತು ವಿವೇಚಿಸಲಾಗಿದೆ. ಈ ಕೃತಿಯ ಕೊನೆಯಲ್ಲಿ ಶಿವರಾಮ ಕಾರಂತರ ಬದುಕಿನ ಮುಖ್ಯ ವರ್ಷಗಳು, ಅವರಿಗೆ ದೊರೆತ ಪ್ರಶಸ್ತಿ, ಗೌರವಗಳನ್ನು ಹಾಗೂ ಅವರ ಸಮಗ್ರ ಕೃತಿಸೂಚಿಯನ್ನು ನಮೂದಿಸಲಾಗಿದೆ. 'ಬದ್ಧತೆಯ ಬದುಕು', (೨೦೦೧) ಕೃತಿಯಲ್ಲಿ ಡಾ.ಕೋಟ ಶಿವರಾಮ ಕಾರಂತರ ಜೀವನ-ಸಾಧನೆಗಳನ್ನು ಕುರಿತು ಚರ್ಚಿಸಲಾಗಿದೆ. 'ಕಾರಂತ ಸ್ಮರಣೆ-೧', (೨೦೦೨) ಕೃತಿಯಲ್ಲಿ ವಿವಿಧ ಲೇಖಕರ ಐದು ವಿಮರ್ಶಾ ಲೇಖನಗಳಿವೆ. ಕಾರಂತರ ಕಾದಂಬರಿ, ನಾಟಕ, ಯಕ್ಷಗಾನ ಕುರಿತು ವಿಶ್ಲೇಷಿಸಲಾಗಿದೆ. ವಿಷಮ ದಾಂಪತ್ಯಕ್ಕೆ ಕಾರಣಗಳೇನು, ಅದಕ್ಕೆ ಪರಿಹಾರಗಳು ಯಾವುವು ಎಂಬುದರ ಜಿಜ್ಞಾಸೆಯಿದೆ.

'ಶಿವರಾಮ ಕಾರಂತ ಸಾಂಸ್ಕೃತಿಕ ಅನುಸಂಧಾನ', (೨೦೦೩) ಕೃತಿಯಲ್ಲಿ ಹದಿನಾಲ್ಕು ಲೇಖನಗಳಿವೆ. ಗಿರಡ್ಡಿ ಗೋವಿಂದರಾಜ, ಎಸ್.ವಿದ್ಯಾಶಂಕರ, ಶ್ಯಾಮಸುಂದರ ಬಿದರಕುಂದಿ, ಸಿದ್ಧಲಿಂಗ ಪಟ್ಟಣಶೆಟ್ಟಿ..... ಮುಂತಾದವರು ಕಾರಂತರ ಸಾಹಿತ್ಯದ ವಿವಿಧ ಆಯಾಮಗಳನ್ನು ಕುರಿತು ಚರ್ಚಿಸಿರುವುದನ್ನು ಈ ಕೃತಿಯಲ್ಲಿ ನಮೂದಿಸಲಾಗಿದೆ. "ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ದುಡಿದ ಮಹನೀಯರಿದ್ದಾರೆ. ಮಾಸ್ತಿ, ಬೇಂದ್ರೆ, ಕುವೆಂಪು, ಡಿ.ವಿ.ಜಿ.-ಹೀಗೆ ಹಲವು ಹೆಸರುಗಳನ್ನು ಗುರುತಿಸಬಹುದು. ವಿಜ್ಞಾನ, ಕಲಾ

ಪ್ರಪಂಚ, ಬಾಲ ಪ್ರಪಂಚ, ಪರಿಸರ ವಿಜ್ಞಾನ, ರಾಜಕೀಯ, ಯಕ್ಷಗಾನ, ನೃತ್ಯ ಇವೆಲ್ಲ ಕಾರಂತರಲ್ಲಿ ಮಾತ್ರವೇ ದೊರೆಯುತ್ತಿವೆ. ಅದೆ ವಿಶೇಷ" ಎಂಬ ಗುರುಲಿಂಗ ಕಾಪಸೆಯವರ ಹೇಳಿಕೆಯು ಕಾರಂತರ ವ್ಯಕ್ತಿತ್ವವನ್ನು ಗುರುತಿಸುವಲ್ಲಿ ಸಹಾಯಕವಾಗುತ್ತದೆ. ಇದನ್ನು ಈ ಕೃತಿಯ ಲೇಖನಗಳ ಹಿನ್ನೆಲೆಯಲ್ಲಿ ಸ್ಪಷ್ಟೀಕರಿಸಲಾಗಿದೆ.

'ನೇರ ನುಡಿಗೆ ನೂರು ವರುಷಗಳು', (ಶಿವರಾಮ ಕಾರಂತರ ಸ್ಮೃತಿ ಸಂಪುಟ) (೨೦೦೫) ಕೃತಿಯಲ್ಲಿ ಶಿವರಾಮ ಕಾರಂತರ ಬದುಕು-ಬರಹ ಕುರಿತಂತೆ ಲೇಖನಗಳಿವೆ. ಈ ಕೃತಿಯ ಒಂದನೆಯ ಭಾಗದಲ್ಲಿ ಗೌರೀಶ ಕಾಯ್ಕಿಣಿ, ಪ್ರಭುಶಂಕರ, ಬಿ.ಎಸ್.ವೆಂಕಟಲಕ್ಷ್ಮಿ, ರಾಮದಾಸ್, ಗಾಯತ್ರಿ ನಾವಡ, ಮಾಲಿನಿ ಮಲ್ಯ, ಎಫ್.ಟಿ.ಹಳ್ಳಿಕೇರಿ..... ಮುಂತಾದವರು ಶಿವರಾಮ ಕಾರಂತರ ವ್ಯಕ್ತಿತ್ವ ಕುರಿತು ಬರೆದಿರುವುದನ್ನು ಈ ಕೃತಿಯಲ್ಲಿ ನಮೂದಿಸಲಾಗಿದೆ. ಎರಡನೆಯ ಭಾಗದಲ್ಲಿ ಟಿ.ಪಿ. ಅಶೋಕ, ಜಯಪ್ರಕಾಶ ಮಾವಿನಕುಳಿ, ಸಬೀಹಾ, ವಿಜಯಾ ಸುಬ್ಬರಾಜ್...... ಮುಂತಾದವರು ಕಾರಂತರ ಕಾದಂಬರಿಗಳನ್ನು ಕುರಿತು ವಿಮರ್ಶಿಸಿರುವುದನ್ನು ಈ ಕೃತಿಯಲ್ಲಿ ನಮೂದಿಸಲಾಗಿದೆ. 'ಕಾರಂತರೊಂದಿಗೆ ಕೆಲವು ವರ್ಷಗಳು', (೨೦೦೫) ಕೃತಿಯಲ್ಲಿ ಶಿವರಾಮ ಕಾರಂತ ಮತ್ತು ಲೀಲಾ ಕಾರಂತರ ವ್ಯಕ್ತಿತ್ವ ಹಾಗೂ ಮಾನವೀಯತೆಯನ್ನು ಕುರಿತು ಚಿತ್ರಿಸಲಾಗಿದೆ. ಕಾರಂತರ ದೈನಂದಿನ ಚಟುವಟಿಕೆಗಳು ಹೇಗಿರುತ್ತಿದ್ದವು. ಅವರ ಬದುಕು-ಬರಹ, ಅವರು ಸಾಮಾಜಿಕ ಕಾರ್ಯಕ್ರಮಗಳನ್ನು ಹೇಗೆ ನಿಭಾಯಿಸುತ್ತಿದ್ದರು ಹಾಗೂ ತಮ್ಮ ಸಂಪರ್ಕಕ್ಕೆ ಬಂದವರೊಂದಿಗೆ ಕಾರಂತರು ಹೇಗೆ ವ್ಯವಹರಿಸುತ್ತಿದ್ದರು ಎಂಬುದರ ವಿವರಣೆ ಈ ಕೃತಿಯಲ್ಲಿದೆ. ಕಾರಂತರ ಸಾಹಿತ್ಯಿಕ, ಬೌದ್ಧಿಕ, ಸಾಮಾಜಿಕ ಚಟುವಟಿಕೆಗಳನ್ನು ಕಾರಂತರ ಕುಟುಂಬದವರು, ಗೆಳೆಯರು ಹಾಗೂ ಅವರ ಸಂಪರ್ಕಕ್ಕೆ ಬಂದ ಇತರ ಹಲವರನ್ನು ತೀರಾ ಸಮೀಪದಿಂದ ಕಂಡು ಬರೆದಿರುವ ಲೇಖನಗಳನ್ನು ಈ ಕೃತಿಯು ಒಳಗೊಂಡಿದೆ. ಇದರಿಂದ ಕಾರಂತರ ಬಹುಮುಖ ವ್ಯಕ್ತಿತ್ವವನ್ನು ಗುರುತಿಸಬಹುದು.

ಇವುಗಳಲ್ಲದೆ ಇನ್ನೂ ಹಲವಾರು ಕೃತಿಗಳು, ಲೇಖನಗಳು ಕಾರಂತರ ಕಾದಂಬರಿಗಳನ್ನು ಕುರಿತು ಪ್ರಕಟವಾಗಿವೆ. ಹಾಗೆ ಸಾಕ್ಷಿ, ಸಾಧನೆ, ಶೂದ್ರ, ಪ್ರಬುದ್ಧ ಕರ್ನಾಟಕ.... ಮುಂತಾದ ಸಂಚಿಕೆಗಳಲ್ಲಿ, ಕನ್ನಡ ಪ್ರಭಾ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಇತ್ಯಾದಿ ಹತ್ತು ಹಲವು ಪತ್ರಿಕೆಗಳಲ್ಲಿ ಕಾರಂತರ ಮತ್ತು ಅವರ ಸಾಹಿತ್ಯ ಕುರಿತಂತೆ ಹಲವಾರು ವಿದ್ವಾಂಸರಿಂದ ಲೇಖನಗಳು ಪ್ರಕಟವಾಗಿವೆ.

ಅಧ್ಯಾಯ ೨

ಕೌಟುಂಬಿಕ ಪ್ರಪಂಚ

ಅ. ಸಂಯಮಿಗಳು

ಆ. ಪ್ರತಿರೋಧ

ಇ. ಸಂಪ್ರದಾಯಶೀಲರು

ಈ. ವಿಲಾಸಿ ಮನೋಭಾವ

ಅಧ್ಯಾಯ ೨

ಕೌಟುಂಬಿಕ ಪ್ರಪಂಚ

ಮಾನವರು ಜನ್ಮವನ್ನು ಸದುಪಯೋಗಪಡಿಸಿಕೊಳ್ಳಲು ಬದುಕನ್ನು ತುಂಬಾ ಪ್ರೀತಿಯಿಂದ ಕಾಣಬೇಕು. ಮಾನವರಾಗಿ ಹುಟ್ಟಿದ ಮೇಲೆ ಬಾಳಲೇಬೇಕೆಂಬ ಅನಿವಾರ್ಯತೆಯಿಂದ ಬಾಳ್ವೆ ಸಾಗಿಸುವುದು ಬದುಕಲ್ಲ, ಬದುಕಿನಲ್ಲಿ ಬರುವ ಕಹಿಯ ಅನುಭವದಿಂದ ಸಿಹಿಗೆ ಮತ್ತಷ್ಟು ಕಳೆ ಬರುತ್ತದೆ. ಅಂತೆಯೇ "ಕಷ್ಟವನ್ನು ಅನುಭವಿಸಿದ ಮೇಲೆ ಬರುವ ಸುಖವು ಬಹಳ ರುಚಿಯಾಗಿರುತ್ತದೆ. ಬಿಸಿಲಿನಲ್ಲಿ ನಡೆದು ಬಳಲಿದ ದಾರಿಗನಿಗೆ ಮರದ ನೆರಳು ಹೆಚ್ಚು ತಂಪನ್ನು ನೀಡುತ್ತದೆ" ಎಂಬ ಮಾತು ಪ್ರಚಲಿತದಲ್ಲಿದೆ.

ಮಾನವನು ಸಂಘಜೀವಿ. ಏಕಾಂಗಿಯಾಗಿರಲು ಬಯಸುವುದಿಲ್ಲ, ಇದಕ್ಕೆ ಪೂರಕವಾಗಿ ಕುಟುಂಬವೆಂಬ ವ್ಯವಸ್ಥೆ ಉದ್ಭವವಾಯ್ತು, ಇದೊಂದು ಮಾನವನ ಸಮೂಹ ಜೀವನದ ಅವಿಚ್ಛಿನ್ನವಾದ ಭಾಗವಾಗಿದೆ. ಇದಕ್ಕಾಗಿಯೇ ಮಾನವರು ಕುಟುಂಬವನ್ನು ತಮ್ಮ ಬದುಕಿನ ಒಂದು ಅನಿವಾರ್ಯ ಅಂಗವೆಂಬಂತೆ ಸಂರಕ್ಷಿಸಿಕೊಂಡು ಬಂದಿದ್ದಾರೆ. ವ್ಯಕ್ತಿಗಳ ಬೆಳವಣಿಗೆಯಿಂದ ಹಿಡಿದು ಅವರ ಎಲ್ಲ ಕ್ರಿಯೆಗಳ ಹಿಂದೆ ಕುಟುಂಬದ ಕ್ರಿಯಾರೂಪ ಇದ್ದೇ ಇರುತ್ತದೆ. ಕುಟುಂಬವು ನಮ್ಮ ಸಾಮಾಜಿಕ ಮೌಲ್ಯ ವ್ಯವಸ್ಥೆಯ ಪ್ರಮುಖ ಭಾಗವಾಗಿದೆ. ಅದು ನಾವು ನಂಬಿದ ಮೌಲ್ಯಗಳು ಪರೀಕ್ಷೆಗೊಳಗಾಗುವ ಮುಖ್ಯ ಸ್ಥಳವಾಗಿದೆ. ಸಮಾಜದಲ್ಲಿ ರೂಪುಗೊಳ್ಳುವ ನಿರ್ದಿಷ್ಟ ವ್ಯಕ್ತಿತ್ವ ಪ್ರಕಟವಾಗುವುದು ಕುಟುಂಬವೆಂಬ ಸಾಮಾಜಿಕ ಸಂಸ್ಥೆಯಲ್ಲಿಯೇ.

ಕುಟುಂಬವು ಪರಿಪೂರ್ಣವಾಗುವುದು ಸ್ತ್ರೀ ಪುರುಷರ ಸಹಬಾಳ್ವೆಯಿಂದ. ಕುಟುಂಬದಲ್ಲಿ ಇವರಿಬ್ಬರ ಪಾತ್ರವು ಗಮನಾರ್ಹವಾದುದು. "ಯಾವ ಕುಟುಂಬದಲ್ಲಿ ಗಂಡನಿಂದ ಹೆಂಡತಿಯೂ, ಹೆಂಡತಿಯಿಂದ ಗಂಡನೂ ತೃಪ್ತರಾಗಿ ಆನಂದವನ್ನು ಪಡೆಯುತ್ತಾರೆಯೋ ಅಲ್ಲಿ ಯಾವಾಗಲೂ ಮಂಗಳವುಂಟಾಗುತ್ತದೆ" ಎಂಬ ಸೂಕ್ತಿಯು ಕೌಟುಂಬಿಕ ಸಾಮರಸ್ಯದ ಸಂಕೇತವಾಗಿದೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯಿಂದ ಸ್ತ್ರೀಯರ ಸ್ಥಾನಮಾನ ಗೌಣವಾಗಿದೆ. "ಕೇವಲ ಒಂದು ಕಟ್ಟಡವನ್ನು ಗೃಹವೆಂದು ಬಲ್ಲವರು ಹೇಳುವುದಿಲ್ಲ, ಗೃಹಿಣಿಯು ಗೃಹವೆನಿಸುತ್ತಾಳೆ. ಗೃಹಿಣಿಯಿಲ್ಲದ ಮನೆ ಅರಣ್ಯಕ್ಕೆ ಸದೃಶ್ಯವಾದುದು" ಎಂಬ ಹೇಳಿಕೆಯು ಕುಟುಂಬದಲ್ಲಿ ಸ್ತ್ರೀಯ ಪಾತ್ರವೇನು ಎಂಬುದರ ಕುರಿತು ಸ್ಪಷ್ಟಪಡಿಸುತ್ತದೆ.

ಕುಟುಂಬದಲ್ಲಿ ಸ್ತ್ರೀಯನ್ನು ಮಡದಿಯಾಗಿಯೂ, ತಾಯಿಯಾಗಿಯೂ, ಮಗಳಾಗಿಯೂ, ಸಹೋದರಿಯಾಗಿಯೂ ಗುರುತಿಸಲಾಗುತ್ತದೆ. ಅವಳು ಪುರುಷನ ಬೆಳವಣಿಗೆಯಲ್ಲಿ ಪ್ರತ್ಯಕ್ಷವಾಗಿಯೂ ಹಾಗೂ

[illegible]

[illegible]

[illegible]

[illegible]

[illegible]

ಪರೋಕ್ಷವಾಗಿಯೂ ಶ್ರಮಿಸುತ್ತಾಳೆ. ಆದರೆ ಸಮಾಜದಲ್ಲಿ ಭಾರತೀಯ ಸಂಸ್ಕೃತಿಯು ಸ್ತ್ರೀಯರ ವಿಷಯದಲ್ಲಿ ನಿರೂಪಿಸಿರುವ ಮೌಲ್ಯಗಳ ಪ್ರತೀಕವಾಗಿಯೇ ಹೆಣ್ಣನ್ನು ಗುರುತಿಸಲಾಗುತ್ತದೆ.

"ವೇದ ಕಾಲೀನ ಸಮಾಜದಿಂದ ಆರಂಭಿಸಿ ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೆ ಭಾರತೀಯ ಸಮಾಜದಲ್ಲಿ ಹೆಣ್ಣನ್ನು ಕುರಿತ ದೃಷ್ಟಿಕೋನ ಸಾಂಪ್ರದಾಯಿಕವಾಗಿಯೇ ಇದೆ. ಇಪ್ಪತ್ತನೆಯ ಶತಮಾನದ ಪ್ರಾರಂಭದೊಂದಿಗೆ ಹೆಣ್ಣನ್ನು ನೋಡುವ ದೃಷ್ಟಿಕೋನದಲ್ಲಿ ಮೂಲಭೂತವಾದ ಮಾರ್ಪಾಡು ಆಗಿರುವುದನ್ನು ಗುರುತಿಸಬಹುದು" ಎಂದು ವೀರಣ್ಣ (೧೯೯೯, ೧೯೮) ಅವರು ಹೆಣ್ಣನ್ನು ನೋಡುವ ದೃಷ್ಟಿಕೋನ ಕುರಿತು ಹೇಳಿದ್ದಾರೆ. ಸ್ತ್ರೀಯರ ಬದುಕು-ಬವಣೆಗಳ ಕುರಿತು ಹಲವಾರು ಲೇಖಕರು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ತ್ರಿವೇಣಿ, ಇಂದಿರಾ, ಅ.ನ.ಕೃ. ಇನಾಂದಾರ..... ಮುಂತಾದ ಸಾಹಿತಿಗಳ ಕೃತಿಗಳಲ್ಲಿ ಗುರುತಿಸಬಹುದು.

"ಒಂದು ಕೈಯಿಂದ ನಮ್ಮ ಪರಂಪರೆಯ ಬೇರುಗಳನ್ನು ಗುರುತಿಸುತ್ತ ಇನ್ನೊಂದು ಕೈಯಿಂದ ಆಧುನಿಕ ಪ್ರಗತಿಯನ್ನು ಸಾಧಿಸಲು ನಮ್ಮವರು ಹವಣಿಸಿದರು" ಎಂಬ ಗುರುಲಿಂಗ ಕಾಪಸೆ (೨೦೦೨-೪೩ (ಸಂ) ಬಸವರಾಜ ಸಾದರ) ಅವರ ಹೇಳಿಕೆಯು ನಿಜ. ಏಕೆಂದರೆ ಕಾರಂತರು ಸಂಪ್ರದಾಯದಲ್ಲಿಯೇ ಪ್ರಗತಿಪರ ಆಲೋಚನೆಗಳನ್ನು ಗುರುತಿಸಿರುವುದು ಅವರ ಕಾದಂಬರಿಗಳ ಸ್ತ್ರೀ ಪಾತ್ರಗಳಿಂದ ಸ್ಪಷ್ಟವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಶೀಲ, ಚಾರಿತ್ರ್ಯ, ಉದಾರತೆ, ಪಾತಿವ್ರತ್ಯ, ವಿಧೇಯತೆ, ತ್ಯಾಗ, ಸಹನೆ, ಕಷ್ಟಸಹಿಷ್ಣುತೆ... ಮುಂತಾದ ಗುಣಗಳನ್ನು ಹೆಣ್ಣಿನ ಪರಮೋಚ್ಚ ಆದರ್ಶಗಳೆಂದು ಭಾವಿಸಲಾಗಿದೆ. ಇದಕ್ಕೆ ಶಿವರಾಮ ಕಾರಂತರು ಹೊರತಲ್ಲ, ಅವರ ಕಾದಂಬರಿಗಳಲ್ಲಿಯೂ ಸಹಾನುಭೂತಿ, ಪ್ರೇಮ, ಪ್ರಾಮಾಣಿಕತೆ, ಔದಾರ್ಯ, ನಿಸ್ವಾರ್ಥ ಬುದ್ಧಿ ಪರೋಪಕಾರ, ಕೃತಜ್ಞತೆ...... ಮುಂತಾದ ಕೆಲವು ನಿರ್ದಿಷ್ಟ ಮೌಲ್ಯಗಳ ಮೂಲಕ ಸ್ತ್ರೀಯರ ಜೀವನವನ್ನು ಚಿತ್ರಿಸಲಾಗಿದೆ. ಕುಟುಂಬದಲ್ಲಿ ಮಕ್ಕಳ ಪೋಷಣೆಯ ಹೊಣೆ ಸ್ತ್ರೀ ಪುರುಷರಿಬ್ಬರದೂ ಸಮಪಾಲಿರುತ್ತದೆ. ಆದರೆ ಪುರುಷ ಪ್ರಧಾನ ಸಮಾಜವು ಮಕ್ಕಳ ಪೋಷಣೆಯಲ್ಲಿ ತಾಯಿಯದೆ ಪ್ರಮುಖ ಪಾತ್ರವಿರುತ್ತದೆ. ತಂದೆಯು ಹೊರಗಡೆ ದುಡಿಯಲು ಹೋಗುವುದರಿಂದ ಮಕ್ಕಳ ಆರೈಕೆಯಲ್ಲಿ ಹೆಚ್ಚಿನ ಗಮನ ನೀಡಲು ಆಗುವುದಿಲ್ಲ, ಇದರಿಂದ ಮಕ್ಕಳ ಲಾಲನೆ ಪಾಲನೆಯಲ್ಲಿ ತಾಯಿಯರದೇ ಸಿಂಹಪಾಲು ಎಂದು ಬಿಂಬಿಸುತ್ತ ಬಂದಿದೆ. ಇದನ್ನು ಸ್ತ್ರೀಯರು ಒಪ್ಪಿಕೊಂಡು ಮಕ್ಕಳ ಲಾಲನೆ-ಪಾಲನೆಯಲ್ಲಿಯೇ ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವಂತಾಗಿದೆ. ಇದರೊಂದಿಗೆ ಕುಟುಂಬದ ಶ್ರೇಯಸ್ಸಿಗಾಗಿ ಹಗಲಿರುಳು ದುಡಿಯುತ್ತಾಳೆ. ಬೀಜ ಬಿತ್ತುವುದು, ಕಳೆ ಕೀಳುವುದು, ನೀರು ಹಾಕುವದು, ಕೊಯ್ಲು, ಪಶು ಸಂಗೋಪನೆ, ಕೋಳಿ ಸಾಕಾಣಿಕೆ..... ಮುಂತಾದ ಕೆಲಸಗಳಲ್ಲಿ ತನ್ನ ಕುಟುಂಬದ ಇನ್ನಿತರ ಸದಸ್ಯರೊಂದಿಗೆ ದುಡಿಯುತ್ತಿರುತ್ತಾಳೆ. ಅವಳ ದುಡಿಮೆಗೆ ಸಂಬಳವಾಗಲಿ, ಗೌರವವಾಗಲಿ ಪುರುಷ ಪ್ರಧಾನ ಸಮಾಜ ನೀಡುವುದೇ ಇಲ್ಲ,

ಆದರೆ ಮಹಿಳೆ ನಿರ್ದಿಷ್ಟ ಗುಣ ಸ್ವಭಾವಗಳ ಮೂಲಕ ಕುಟುಂಬದಲ್ಲಿ ಪ್ರಮುಖ ಪಾತ್ರವಹಿಸುತ್ತಾಳೆ. ಇದನ್ನು ಮುಂದಿನ ಭಾಗದಲ್ಲಿ ವಿಸ್ತಾರವಾಗಿ ವಿಶ್ಲೇಷಿಸಲಾಗಿದೆ.

ಅ. ಸಂಯಮಿಗಳು

ಪುರಾತನ ಕಾಲದಿಂದಲೂ ಸ್ತ್ರೀಯರನ್ನು ಕೋಮಲ ಹೃದಯದವಳು, ಮೃದು ಸ್ವಭಾವದವಳು, ನಾಚಿಕೆ ಗುಣದವಳು..... ಎಂಬಿತ್ಯಾದಿಯಾಗಿ ಗುರುತಿಸಲಾಗುತ್ತದೆ.

ಈ ಎಲ್ಲ ಗುಣ ಸ್ವಭಾವಗಳಿಂದಲೇ ಹೆಚ್ಚಿನ ಹೆಣ್ಣು ಮಕ್ಕಳು ಪುರುಷ ಪ್ರಧಾನ ಸಮಾಜದ ತಾರತಮ್ಯ ನಿಯಮಗಳನ್ನು ವಿರೋಧಿಸದೆ, ಒಪ್ಪಿಕೊಂಡು ಬಂದಿರುವುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ತಮ್ಮ ಮನಃಸಾಕ್ಷಿ ಒಪ್ಪದಿದ್ದರೂ ಅಸಹಾಯಕತೆಯಿಂದ ಪರಿಸ್ಥಿತಿಯೊಂದಿಗೆ ಹೊಂದಿಕೊಂಡು ಬಾಳುವುದನ್ನು ಸಮಾಜದಲ್ಲಿ ಕಾಣಬಹುದಾಗಿದೆ. ಇಂತಹ ಸ್ತ್ರೀ ಪಾತ್ರಗಳನ್ನು ಕಾರಂತರ ಕಾದಂಬರಿಗಳಲ್ಲಿಯೂ ಗಮನಿಸಬಹುದು.

'ಚೋಮನ ದುಡಿ' ಕಾದಂಬರಿಯಲ್ಲಿ ಬೆಳ್ಳಿಯು ತನ್ನ ತಂದೆ ಹಾಗೂ ಸಹೋದರರ ಸಲುವಾಗಿ ಹಗಲಿರುಳು ಶ್ರಮಿಸುತ್ತಾಳೆ. ಆದರೂ ಪುರುಷ ಪ್ರಧಾನ ಸಮಾಜದ ಅನಧಿಕೃತ ನಿಯಮದಂತೆ ಚೋಮನೆ ಮನೆಯ ಯಜಮಾನನಾಗಿರುತ್ತಾನೆ. ಚೋಮನ ಹೆಂಡತಿ ಮಡಿದ ಬಳಿಕ ಬೆಳ್ಳಿಯೇ ಅವರ ಕುಟುಂಬಕ್ಕೆ ಆಧಾರವಾಗಿದ್ದಳು. ಅವಳು ಚೋಮನ ಮಗಳಾಗಿದ್ದರೂ ತಾಯಿಯಂತೆ ಅವನ ಆರೈಕೆ ಮಾಡುತ್ತಿದ್ದಳು. ಗುರುವ, ಚನಿಯ, ಕಾಳ ಹಾಗೂ ನೀಲ ಅವಳ ಸಹೋದರರು. ಇವರಾರು ತಂದೆಯ ಮಾತಿಗೆ ಪ್ರತಿಯಾಡಿದವರಲ್ಲ, ಆದರೆ ತಂದೆಯನ್ನು ಅತಿಯಾಗಿ ಪ್ರೀತಿಸುತ್ತಿದ್ದ ಬೆಳ್ಳಿಯು ಪ್ರೀತಿಯಿಂದಲೇ ತಂದೆಯ ಮೇಲೆ ಅಧಿಕಾರವನ್ನು ಚಲಾಯಿಸುತ್ತಿದ್ದಳು.

'ರೆಕ್ಕೆಗಳಿಲ್ಲದ ಹಕ್ಕಿ, ಒಣಗಿದ ಮರ, ನೀರಿಲ್ಲದ ಸರೋವರ, ಹಲ್ಲು ಕಿತ್ತ ಹಾವು, ಬಡವ ಎಲ್ಲರೂ ಒಂದೇನೆ; ಅಸಹಾಯಕರು' ಬಡತನ ಎಂದರೇನು, ಅದು ಹೇಗಿರುತ್ತದೆ ಎಂಬುದರ ವಾಸ್ತವ ಚಿತ್ರಣ ಈ ಕಾದಂಬರಿಯಲ್ಲಿದೆ. ಚೋಮನ ಕುಟುಂಬ ಬಡತನದಿಂದ ಬಳಲುತ್ತಿರುವಂತದ್ದು ಆ ಕುಟುಂಬ ಸಾಗಿಸಲು ಬೆಳ್ಳಿ ದುಡಿಯುತ್ತಿದ್ದಳು. ಧಣಿ ಸಂಕಪ್ಪಯ್ಯ ಗೌಡರ ಮನೆಯಲ್ಲಿ ಸಣ್ಣ-ಪುಟ್ಟ ಕೆಲಸಗಳನ್ನು ಮಾಡುತ್ತಿದ್ದಳು. ದಿನ ನಿತ್ಯ ಕಾಡಿಗೆ ಹೋಗಿ ಹೊರೆಸೊಪ್ಪನ್ನು ತರುತ್ತಿದ್ದಳು. ಅದನ್ನು ಧಣಿಯರ ಮನೆಗೆ ನೀಡಿ ತಮ್ಮ ಉಪಜೀವನಕ್ಕೆ ಬೇಕಾದಂತಹ ತಿನಿಸುಗಳನ್ನು ಪಡೆಯುತ್ತಿದ್ದಳು. ಹಬ್ಬ -ಹರಿದಿನಗಳಂದು ಖರ್ಚಿಗೆಂದು ಬುಟ್ಟಿಗಳನ್ನು ಹೆಣೆದು ಮಾರುತ್ತಿದ್ದಳು. 'ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು' ಎಂಬ ಗಾದೆ ಮಾತಿನಂತೆ ತನ್ನ ತಂದೆಗೆ ವಾಸ್ತವದ ಬಗ್ಗೆ ತಿಳಿಹೇಳುತ್ತಿದ್ದಳು. ಅವನ ಸುಖ-ದುಃಖಗಳಿಗೆ ಸ್ಪಂದಿಸುತ್ತಿದ್ದಳು. ಚನಿಯನು ಅನಾರೋಗ್ಯದಿಂದ ಹಾಸಿಗೆಯನ್ನು ಹಿಡಿದಾಗ ತಾಯಿಯಂತೆ ಅವನ ಆರೈಕೆ ಮಾಡುತ್ತಾಳೆ. ತಂದೆಗೆ ಮಗುವಿನಂತೆ ನೀರು ಕಾಯಿಸಿ, ನಾಲ್ಕು ಚೆಂಬು ತಣ್ಣೀರೆರೆದು ಅವನ ಮುಖವನ್ನು ತೊಳೆಯುತ್ತಾಳೆ. ಗಂಜಿಯನ್ನು ಮುಂದಿಟ್ಟು ತಾಯಿಯಂತೆ ವಾತ್ಸಲ್ಯದಿಂದ 'ಉಣ್ಣು ' ಎಂದು ಉಣ್ಣಿಸುತ್ತಾಳೆ. 'ಸಾಲ ಮಾಡುವವನು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ' ಎಂಬ ಜರ್ಮನ್ ನಾಣ್ಣುಡಿಯಂತೆ ಚೋಮನು ಕಾಫಿ ತೋಟದ ಮಾಲಿಕ ಮಿಂಗೇಲರಿಂದ ಸಾಲ ಪಡೆದು ಸ್ವಾತಂತ್ರ್ಯಹೀನ ಆಗುತ್ತಾನೆ. ಆ ಸಾಲವನ್ನು ತೀರಿಸುವಲ್ಲಿ ಚನಿಯ ಮತ್ತು ಗುರುವ ವಿಫಲರಾದಾಗ ಬೆಳ್ಳಿಯು ಕಾಫಿ ತೋಟಕ್ಕೆ ದುಡಿಯಲು ಹೋಗುತ್ತಾಳೆ. ಯೌವ್ವನ ಸಹಜವಾದ ಲೈಂಗಿಕ ದೌರ್ಬಲ್ಯದಿಂದ ತನ್ನ ಶೀಲವನ್ನು ಮುಡುಪಾಗಿಟ್ಟು ಸಾಲವನ್ನು ತೀರಿಸುತ್ತಾಳೆ.

'ಚೋಮನ ದುಡಿ' ಕಾದಂಬರಿಯಲ್ಲಿ ಸಂಕಪ್ಪಯ್ಯನವರ ತಾಯಿಯ ಪಾತ್ರ ಚಿಕ್ಕದಾಗಿದ್ದರೂ ಕಥೆಗೆ ಪ್ರಮುಖ ತಿರುವನ್ನು ನೀಡುವಂತದ್ದಾಗಿದೆ. ಚೋಮ ಸಂಕಪ್ಪಯ್ಯ ಗೌಡರಿಗೆ ಬೇಸಾಯಕ್ಕಾಗಿ ತುಂಡು ಭೂಮಿಯನ್ನು ಬೇಡಿದಾಗ "ಅಬ್ಬಾ! ಈ ಹೊಲೆಯರಿಗೆ ಒಂದು ಸೊಕ್ಕೇ" ಎಂದು ಉದ್ಗಾರ ವ್ಯಕ್ತಪಡಿಸುತ್ತಾಳೆ. ಹೊಲೆಯರಿಗೆ ಊಳಲು ಜಮೀನು ನೀಡಿದರೆ ಮುಂದೆ ತಮ್ಮ ಜಮೀನುಗಳಲ್ಲಿ ದುಡಿಯುವವರ್ಯಾರು ಎಂದು ಮುಂದಾಲೋಚನೆ ಮಾಡುತ್ತಾಳೆ. ಸಮಾಜದಲ್ಲಿ ಕಟ್ಟುಪಾಡುಗಳು ಎಲ್ಲರಿಗೂ ಇರುವಂತೆ ಮೇಲ್ವರ್ಗದವರಿಗೂ ಇರುತ್ತವೆ. ಸಮಾಜದಲ್ಲಿ ಯಾರೂ ಮಾಡದಂತಹ ಕಾರ್ಯವನ್ನು ಮೊದಲಿಗೆ ನೀನು ಮಾಡಬೇಡ ಎಂಬುದು ಅವಳ ಮಾತಿನ ಆಶಯವಾಗಿತ್ತು. ಅಂತೆಯೇ ಚೋಮನಿಗೆ ತುಂಡು ಭೂಮಿಯನ್ನು ನೀಡುವ ಆಸೆಯಿದ್ದ ಧಣಿಯರನ್ನು ತಡೆಯುತ್ತಾಳೆ.

'ಚೋಮನ ದುಡಿ' ಕಾದಂಬರಿಯು ಒಂದು ನಿರ್ದಿಷ್ಟ ಕಾಲದ ಸಾಮಾಜಿಕ ಸನ್ನಿವೇಶವನ್ನು ಪ್ರಸ್ತಾಪಿಸುತ್ತದೆ. 'ಭೂ ಮಸೂದೆ' ಜಾರಿಗೆ ಬರುವುದಕ್ಕಿಂತ ಮುಂಚೆನೆ 'ಭೂ ಹೋರಾಟ'ದ ಬಗ್ಗೆ ಧ್ವನಿ ಎತ್ತಿದ ಮೊದಲ ಕೃತಿಯಾಗಿದೆ. ಆದರೆ ಚೋಮನ ಜಾತಿಗೆ ಸಾಂಪ್ರದಾಯಿಕ ಸಮಾಜದಲ್ಲಿ ಆಸ್ತಿಯ ಹಕ್ಕಿಲ್ಲ ಎಂಬುದನ್ನು ಸಂಕಪ್ಪಯ್ಯ ಗೌಡರ ನಿಲುವಿನಿಂದ ಹಾಗೂ ಬೆಳ್ಳಿಯ ಮೃದು ಧೋರಣೆಯಿಂದ ಸ್ಪಷ್ಟವಾಗುತ್ತದೆ.

'ಸರಸಮ್ಮನ ಸಮಾಧಿ' ಕಾದಂಬರಿಯು ಸ್ತ್ರೀ ಪ್ರಧಾನವಾಗಿದೆ. ಇದು ನಾಲ್ಕು ಕುಟುಂಬಗಳ ಕಥಾವಸ್ತುವನ್ನು ಹೊಂದಿದೆ. ಅವುಗಳೆಂದರೆ ತಿಮ್ಮಪ್ಪಯ್ಯ-ಜಾನಕಿ, ಅಣ್ಣಪ್ಪ ಕಮ್ತಿ-ಸುನಾಲಿನಿ, ಹಿರಣ್ಯ-ಬಾಗೀರಥಿ ಹಾಗೂ ಸೀತಾರಾಮ-ನಾಗವೇಣಿಯರದು. ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತ ಆಲೋಚನೆಗಳು ಕಾದಂಬರಿಯಲ್ಲಿ ಪ್ರಮುಖವಾಗಿವೆ. "ಜೀವನದ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀ ಮನಸ್ಸು ಮತ್ತು ಶರೀರಗಳೆರಡೂ ತನ್ನ ಸೊತ್ತು: ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ" ಎಂಬಂತೆ ಪುರುಷ ಪ್ರಧಾನ ಸಮಾಜವು ಇಂದಿಗೂ ವರ್ತಿಸುತ್ತಿದೆ ಎಂದು ಕಾದಂಬರಿಕಾರರು (ಸರಸಮ್ಮನ ಸಮಾಧಿ; ಮುನ್ನುಡಿ) ಆತಂಕ ವ್ಯಕ್ತಪಡಿಸಿದ್ದಾರೆ. ಕಣ್ಣೀರೆಂಬುದು ಹೆಂಗಸರ ಹಣೆಬರಹ. ಅದನ್ನು ಅವರು ಸಹಿಸಿಕೊಳ್ಳಲೇಬೇಕು ಎಂಬುದು ಪುರುಷರ ಧೋರಣೆಯಾಗಿದೆ. ಅಂತೆಯೇ ತಿಮ್ಮಪ್ಪಯ್ಯ ತನ್ನ ಹೆಂಡತಿಯ ದುಃಖಕ್ಕೆ ಸ್ಪಂದಿಸುತ್ತಿರಲಿಲ್ಲ, ಜಾನಕಿಯು ಎಂದಿಗೂ, ಯಾವತ್ತಿಗೂ ಗಂಡನನ್ನು ಪ್ರತಿಭಟಿಸಿದವಳಲ್ಲ, ಬದಲಿಗೆ ನಾವು ಪಡೆದು ಬಂದದ್ದು ಯಾರಿಂದಲೂ ತಪ್ಪಿಸಲಿಕ್ಕೆ ಬರುವುದಿಲ್ಲ ಎಂಬ ಹತಾಶ ಮನೋಭಾವನೆಯನ್ನು ಹೊಂದಿದ್ದಳು. ಈ ಹತಾಶ ಭಾವನೆಯೇ ಅವಳನ್ನು ಹೇಡಿಯನ್ನಾಗಿಸಿತ್ತು. ಪ್ರತಿಭಟನೆಯ ಮನೋಭಾವನೆಯೇ ಅವಳಲ್ಲಿರಲಿಲ್ಲ.

'ವಿವಾಹ'ವು ಕುಟುಂಬವೆಂಬ ಸಾಮಾಜಿಕ ಸಂಸ್ಥೆಯ ಆರಂಭ ಬಿಂದುವಾಗಿದೆ. ಎಲ್ಲ ಕುಟುಂಬಗಳೂ ಮತ್ತೊಂದು ವಿವಾಹದ ಆಚರಣೆಯ ಮೂಲಕವೇ ತಮ್ಮ ಸಾರ್ಥಕ್ಯವನ್ನು ಕಂಡುಕೊಳ್ಳುತ್ತವೆ. 'ಮರಳಿ ಮಣ್ಣಿಗೆ' ಕಾದಂಬರಿಯು ಕೌಟುಂಬಿಕ ವಿಷಯವನ್ನು ಒಳಗೊಂಡಿದೆ. ಪಾರೋತಿ-ರಾಮ ಐತಾಳರು ದಂಪತಿಗಳಾಗಿದ್ದರು. ಸರಸೋತಿಯು ರಾಮ ಐತಾಳರ ತಂಗಿಯಾಗಿದ್ದು ಗಂಡನನ್ನು ಕಳೆದುಕೊಂಡು ಅಣ್ಣನ ಆಶ್ರಯದಲ್ಲಿಯೇ ಉಳಿದು ಕೊಂಡಿದ್ದಳು. ರಾಮ ಐತಾಳರದ್ದು ಪೌರೋಹಿತ್ಯ ವೃತ್ತಿ, ಅವರು ನಿತ್ಯ ಪೌರೋಹಿತ್ಯವೆಂದು ಊರೂರು ಅಲೆಯುತ್ತಿದ್ದರು. ಪಾರೋತಿ ಸರಸೋತಿಯರು ಅತ್ತಿಗೆ ನಾದಿನಿಯರಾಗಿದ್ದು ದೇಹವೆರಡು ಆತ್ಮವೊಂದು

[illegible]

[illegible]

[illegible]

ಎಂಬಂತ್ತಿದ್ದರು. ರಾಮ ಐತಾಳರು ಊರೂರು ಅಲೆಯುತ್ತಿದ್ದರಿಂದ ಮನೆಯ ಜವಾಬ್ದಾರಿಯೆಲ್ಲ ಸರಸೋತಿ ಪಾರೋತಿಯರೇ ನಿರ್ವಹಿಸುತ್ತಿದ್ದರು.

ಮಹಿಳೆ ಹೊರಗಡೆ ದುಡಿಯಲಿ, ದುಡಿಯದಿರಲಿ ಅವಳಿಗೆ ಮನೆಗೆಲಸ ಅನಿವಾರ್ಯವಾಗಿತ್ತು, ಒಲೆಯನ್ನು ಉರಿಸಲು ಕಟ್ಟಿಗೆಗಾಗಿ ಕಾಡು-ಮೇಡುಗಳನ್ನು ಅಲೆಯುತ್ತಿದ್ದರು. ನೀರಿನಲ್ಲಿ ತೇಲಿಬರುವ ಕಟ್ಟಿಗೆಗಳನ್ನು ಸಂಗ್ರಹಿಸುತ್ತಿದ್ದರು. ಇದರಿಂದಾಗಿಯೇ "ರಾಮ ಐತಾಳರ ಸಂಸಾರದಲ್ಲಿ ಚಿಂತೆಯ ಭಾರವನ್ನು ಈ ಇಬ್ಬರು ಹೆಂಗಸರು ಹೊತ್ತಂತೆ ಯಜಮಾನರಾದ ಐತಾಳರೇ ಹೊರುವಂತಿಲ್ಲ" ಎಂದು ಕಾದಂಬರಿಯಲ್ಲಿ(೨೦೦೩, ಸಂ-೪, ಕಾ-೩, ೧೩) ಹೇಳಿರುವುದು ಸೂಕ್ತವೆನಿಸುತ್ತದೆ. ಜೀವನೋಪಾಯಕ್ಕಾಗಿ ಅವರು ಹಪ್ಪಳ-ಸಂಡಿಗೆಗಳನ್ನು ಮಾಡುತ್ತಿದ್ದರು. ಹೊನ್ನೆ ಕಾಯಿಗಳನ್ನು ಆಯ್ದು ತಂದು ಗಾಣಿಗನಿಗೆ ಕೊಟ್ಟು ಅದರ ಪ್ರತಿಫಲವಾಗಿ ಎಣ್ಣೆಯನ್ನು ಪಡೆಯುತ್ತಿದ್ದರು. ಗದ್ದೆಯಲ್ಲಿ ಹಗಲಿರಳು ದುಡಿಯುತ್ತಿದ್ದರು. ಬೇಸಾಯ ಮಾಡುತ್ತಿದ್ದರು. ಇಷ್ಟೆಲ್ಲ ದುಡಿದರೂ ರಾಮ ಐತಾಳರು ಸರಸೋತಿ-ಪಾರೋತಿಯರನ್ನು ಗೌರವದಿಂದ ಕಾಣದೆ ತಾತ್ಸಾರದಿಂದ ಕಾಣುತ್ತಿದ್ದರು. ರಾಮ ಐತಾಳರ ಈ ವರ್ತನೆಯಿಂದ ಪುರುಷ ಪ್ರಧಾನ ಸಮಾಜದ ಧೋರಣೆ ಸ್ಪಷ್ಟವಾಗುತ್ತದೆ.

ಪಾರೋತಿ-ರಾಮ ಐತಾಳರ ದಾಂಪತ್ಯ ಜೀವನವು ಸುಖಕರವಾಗಿತ್ತಾದರೂ, ಸುಮಧುರವಾಗಿರಲಿಲ್ಲ, ಪಾರೋತಿ ಎಲ್ಲ ಗರತಿಯರಂತೆ ತಾನೊಂದು ಕೂಸನ್ನು ಪಡೆದು ಜೀವನದಲ್ಲಿ ಮುಕ್ತಿ ಪಡೆಯಬೇಕೆಂದು ಬಯಸಿದ್ದಳು. ಆದರೆ ಅವಳಿಗೆ ಆ ಭಾಗ್ಯವಿರಲಿಲ್ಲ ಅದಕ್ಕೆ ಪರಿಹಾರವೆಂಬಂತೆ ದತ್ತು ಪುತ್ರನನ್ನು ಪಡೆಯಬೇಕೆಂಬುದು ಪಾರೋತಿ, ಸರಸೋತಿಯರ ಬಯಕೆಯಾಗಿತ್ತು.

ಅ.ನ.ಕೃ ಅವರ 'ಸಂಧ್ಯಾರಾಗ' (೧೯೩೭) ಕಾದಂಬರಿಯಲ್ಲಿ ಮೀನಾಕ್ಷಮ್ಮ ಮನೆಗೆ ಗಂಡು ಮಕ್ಕಳು ಹುಟ್ಟಲಿ ಎಂಬ ಕಾರಣಕ್ಕಾಗಿ ಗಂಡನಿಗೆ ಎರಡನೆಯ ಮದುವೆ ಮಾಡುವ ಪ್ರಸ್ತಾಪವನ್ನು ಮಾಡುತ್ತಾಳೆ. 'ಬಂದ ಸವತಿಯನ್ನು ತಂಗಿಯಂತೆ ನೋಡಿಕೊಳ್ಳುತ್ತೇನೆ' ಎಂದು ಹೇಳಿ ಸವತಿಗೆ ಅಲಂಕಾರ ಮಾಡಿ ಗಂಡನ ಬಳಿಗೆ ಕಳುಹಿಸುತ್ತಾಳೆ. ಅ.ನ.ಕೃ ಅವರು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮೀನಾಕ್ಷಮ್ಮಳ ಪಾತ್ರ ಚಿತ್ರಿಸಿರುವುದು ಸ್ಪಷ್ಟವಾಗುತ್ತದೆ. ಆದರೆ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಪಾರೋತಿಯು ತನ್ನ ಗಂಡ ಎರಡನೆಯ ಮದುವೆಯಾಗುವುದನ್ನು ಬಯಸುವುದಿಲ್ಲ, ಬದಲಿಗೆ ದತ್ತು ಪುತ್ರನನ್ನು ತೆಗೆದುಕೊಳ್ಳಲು ಬಯಸುತ್ತಾಳೆ. ಆದರೆ ರಾಮ ಐತಾಳರ ಇಚ್ಛೆಯೆ ಬೇರೆಯಾಗಿತ್ತು. 'ಮಕ್ಕಳಿಲ್ಲದೆ ಸಾಯುವವನು ಆನಂದವನ್ನು ಅರಿಯನು' ಎಂಬ ಮೌಢ್ಯದಿಂದ ಸಂತಾನಕ್ಕಾಗಿ ಅನ್ಯ ಮದುವೆಯ ಏರ್ಪಾಡನ್ನು ಮಾಡುತ್ತಾನೆ. ಇದರ ಸುಳಿವು ಪಾರೋತಿ, ಸರಸೋತಿಯರಿಗೆ ಇರುವುದಿಲ್ಲ, ಬೇರೆಯವರಿಂದ ಅದನ್ನು ತಿಳಿದುಕೊಂಡಾಗ ಅವರಿಗೆ ತುಂಬಾ ನೋವಾಗುತ್ತದೆ. ಆದರೆ ಪ್ರತಿಭಟಿಸಲು ಆಗದೆ ತನ್ನ ಗಂಡನ ಎರಡನೆಯ ಮದುವೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ. ತನ್ನ ದುಃಖವನ್ನೆಲ್ಲಾ ಮನದಲ್ಲಿಯೆ ನುಂಗಿ ಸ್ವತಃ ಅವಳೇ ಗಂಡನ ಕಡೆಯಿಂದ ತಂದ ಚಿನ್ನವನ್ನು ಒಳಗೆ ಮುಟ್ಟಿಸಿ ಮುಂದೆ ಸವತಿಯಾಗುವವಳನ್ನು ಸಿಂಗರಿಸುತ್ತಾಳೆ.

'ಸಂಧ್ಯಾರಾಗ' ಕಾದಂಬರಿಯ ಮೀನಾಕ್ಷಮ್ಮ ಭಾರತೀಯ ಸನಾತನ ಧರ್ಮದ ಸಂಪ್ರದಾಯಸ್ಥ ಮಹಿಳೆಯಾಗಿ ಕಂಡರೆ, 'ಮರಳಿ ಮಣ್ಣಿಗೆ' ಕಾದಂಬರಿಯ ಪಾರೋತಿಯು ಅಸಹಾಯಕತೆಯಿಂದ ಸಂಪ್ರದಾಯವನ್ನು

ಒಪ್ಪಿಕೊಂಡು ಜೀವಿಸುತ್ತಾಳೆ. ರಾಮ ಐತಾಳರ ಎರಡನೆಯ ಮದುವೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾಳೆ. ಇದನ್ನು ಕಾದಂಬರಿಯಲ್ಲಿ ಪಾರೋತಿಯ ದೊಡ್ಡತನವೆಂಬಂತೆ ಚಿತ್ರಿಸಿದರೂ, ವಾಸ್ತವತೆಯಲ್ಲಿ ಪಾರೋತಿಯ ಅಸಹಾಯಕತೆಯನ್ನು ಬಿಂಬಿಸುತ್ತದೆ. ಸ್ತ್ರೀಯು ಎಷ್ಟೇ ವಿಶಾಲವಾದ ಹೃದಯವನ್ನು ಹೊಂದಿದ್ದರೂ ಸಹ ತನ್ನ ಪ್ರೇಮದಲ್ಲಿಪಾಲುಗಾರರನ್ನು ಸಹಿಸುವುದಿಲ್ಲ, ತನ್ನ ಗಂಡನನ್ನು ಸವತಿಯೊಂದಿಗೆ ಹಂಚಿಕೊಳ್ಳಲು ಬಯಸುವುದಿಲ್ಲ. "ಪುರುಷನು ತನ್ನ ಮೊದಲ ಪ್ರೇಯಸಿಯೇ ಹೆಂಡತಿಯಾಗಬೇಕೆಂದು ಬಯಸಿದರೆ, ಸ್ತ್ರೀಯು ತಾನೇ ಕೊನೆಯ ಪ್ರೇಯಸಿಯಾಗಿರಬೇಕೆಂದು ಬಯಸುತ್ತಾಳೆ" ಎಂಬ ಗಾದೆ ಮಾತಿನಿಂದ ಸ್ತ್ರೀ ಪುರುಷರಿಬ್ಬರ ಮನಃಸ್ಥಿತಿಯನ್ನು ಅರಿಯಬಹುದು.

ಇನಾಂದಾರರ 'ಸ್ವರ್ಗದ ಬಾಗಿಲು' (೧೯೫೧) ಕಾದಂಬರಿಯ ಕಾವೇರಿಯ ಪಾತ್ರವೂ ಮೀನಾಕ್ಷಮ್ಮ, ಪಾರೋತಿಯರಂತೆ ಬಿಂಬಿತವಾಗಿದೆ. ಕಾವೇರಿಯು ಮಕ್ಕಳ ಸಲುವಾಗಿ ಮರುಮದುವೆ ಆಗುವಂತೆ ಗಂಡನನ್ನು ಒತ್ತಾಯಿಸುತ್ತಾಳೆ. ಆದರೆ ಅವಳ ಗಂಡ ಶ್ರೀನಿವಾಸನು ಇದಕ್ಕೆ ಸಿದ್ಧನಿರಲಿಲ್ಲ. ಕಾವೇರಿಯು ತಾನು ಸತ್ತರೆ ತನ್ನ ಗಂಡ ಮರುಮದುವೆಯಾಗಬಹುದು ಎಂದು ಭಾವಿಸಿ ಉರುಳು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಳು. ತನ್ನ ಗಂಡನ ಎರಡನೆ ಮದುವೆಗೆ ಆತ್ಮತ್ಯಾಗವೇ ತನಗೆ ಸರಿಯಾದ ದಾರಿಯೆಂದು ತಿಳಿಯುತ್ತಾಳೆ.

ಶಿವರಾಮ ಕಾರಂತ, ಅ.ನ.ಕೃ. ಹಾಗೂ ಇನಾಂದಾರರು ಸ್ತ್ರೀಯರ ಬದುಕನ್ನು ಸಂಪ್ರದಾಯದ ನೆಲೆಯಲ್ಲಿಯೇ ಚಿತ್ರಿಸಿರುವುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಪಾತ್ರಗಳನ್ನು ಅವಲೋಕಿಸಿದಾಗ ಕಾದಂಬರಿಕಾರರು "ಹೆಣ್ಣು ತನ್ನ ತ್ಯಾಗ, ಸಹನೆ, ಧಾರಣಾ ಶಕ್ತಿಗಳಿಂದ ಪುರುಷನನ್ನು ಮತ್ತು ಈ ಸಮಾಜವನ್ನು ಆಧರಿಸಿ ಹಿಡಿಯಲು ಶಕ್ತಳು ಎಂಬುದನ್ನೇ ವೈಭವಿಕರಿಸುತ್ತಾ ಈವರೆಗೂ ರೂಢಿಯಲ್ಲಿರುವ ಸ್ಥಿರ ಮಾದರಿಯನ್ನೇ ಎತ್ತಿ ಹಿಡಿಯುವುದನ್ನು ಅನುಮೋದಿಸುತ್ತಿದ್ದಾರೆಯೇ ಎಂಬ ಅನುಮಾನ ಬರುತ್ತದೆ" ಎಂದು ಶ್ರೀಮತಿ ಎಚ್.ಎಸ್. (೨೦೦೩-೧೨) ಅವರು ವ್ಯಕ್ತಪಡಿಸಿರುವ ಆತಂಕ ನಿಜವೆನಿಸುತ್ತದೆ. ಏಕೆಂದರೆ ಕಾದಂಬರಿಕಾರರು ಚಿತ್ರಿಸಿದ ಮಹಿಳಾ ಪಾತ್ರಗಳು ಪುರಾತನ ಸ್ತ್ರೀಯರನ್ನು ಹೋಲುತ್ತವೆ.

'ಮೊದಲನೆಯ ಹೆಂಡತಿಯು ಕಸಬಾರಿಗೆಗಿಂತಲೂ ಕಡೆಯಾಗಿರುತ್ತಾಳೆ. ಎರಡನೆಯ ಹೆಂಡತಿಯು ಮಹಾರಾಣಿಯಂತೆ ಅಧಿಕಾರ ನಡೆಸುತ್ತಾಳೆ' ಎಂಬ ಸೂಕ್ತಿಯು ಮೊದಲನೆಯ ಮತ್ತು ಎರಡನೆಯ ಹೆಂಡತಿಯರ ಸ್ಥಾನಮಾನವನ್ನು ಸ್ಪಷ್ಟಪಡಿಸುತ್ತದೆ. ಅಂತೆಯೇ ರಾಮ ಐತಾಳರ ಪ್ರೀತಿಯೆಲ್ಲವೂ ಪಾರೋತಿಗಿಂತ ಸತ್ಯಭಾಮೆಯಲ್ಲಿಯೇ ಕೇಂದ್ರೀಕೃತವಾಗುತ್ತದೆ. ಇದರಿಂದಾಗಿ ಆರಂಭದಲ್ಲಿ ಸವತಿಯರ ನಡುವೆ ಭಿನ್ನತೆ ಕಂಡು ಬರುತ್ತದೆ. ಆದರೆ ಅದು ಕ್ರಮೇಣವಾಗಿ ಹೊಂದಾಣಿಕೆಯಲ್ಲಿ ಪರಿವರ್ತನೆಯಾಗುತ್ತದೆ. ಸತ್ಯಭಾಮೆಗೆ ತನ್ನ ಸವತಿಯ ದುಡಿತವನ್ನು ಕಂಡು ತಾನು ಮಾತ್ರ ಮನೆಯಲ್ಲಿ ಆರಾಮವಾಗಿ ಕುಳಿತುಕೊಳ್ಳುವುದು ಸರಿಯಲ್ಲವೆಂದು ಅನ್ನಿಸುತ್ತದೆ. ಆದ್ದರಿಂದಲೇ ಪಾರೋತಿಯೊಂದಿಗೆ ಸಮವಾಗಿ ಕೆಲಸಗಳಲ್ಲಿ ಭಾಗಿಯಾಗುತ್ತಾಳೆ. 'ಕ್ರಿಯೆಯೆ ಬದುಕು, ಬದುಕೆ ಕ್ರಿಯೆ, ಕ್ರಿಯಾಶೀಲವಲ್ಲದ ಜೀವನ ಜಡ. ಕ್ರಿಯೆ ನಿಂತಾಗ ಸಾವು' ಎಂಬ ಸೂಕ್ತಿಯಂತೆ ಪಾರೋತಿಯು ದುಡಿಯುತ್ತಿದ್ದಳು. ಆ ದುಡಿಮೆಯಿಂದಲೇ ಜೀವನಶ್ರದ್ಧೆಯನ್ನು ಉಳಿಸಿಕೊಂಡು ಕಾದಂಬರಿಯಲ್ಲಿ ರಾಮ ಐತಾಳರ ಹೆಂಡತಿಗಿಂತ ಸರಸೋತಿಯ ನಾದಿನಿಯಾಗಿ, ಅವಳ ಗೆಳತಿಯಾಗಿ ಜೀವನ ಸಾಗಿಸುತ್ತಿದ್ದಳು.

ರಾಮ ಐತಾಳ ಮತ್ತು ಸತ್ಯಭಾಮೆಯರ ಮಗ ಲಕ್ಷ್ಮೀನಾರಾಯಣ ತಾಯಿ ಮತ್ತು ದೊಡ್ಡಮ್ಮರ ಅತಿಯಾದ ಪ್ರೀತಿಯಿಂದ ದುರ್ಬುದ್ಧಿಯನ್ನು ಕಲಿಯುತ್ತಾನೆ. "ನೀನು ಮಾಡುವ ಯಾವುದೇ ಕೆಲಸ ಅಥವಾ ಅಪರಾಧವು ನಿನ್ನನ್ನು ನನ್ನ ಪ್ರೀತಿಯಿಂದ ವಂಚಿತನಾಗಿ ಮಾಡುವುದಿಲ್ಲ, ನಾನು ಸದಾ ನಿನ್ನ ಸುಖಜೀವನಕ್ಕಾಗಿ ಹಂಬಲಿಸುತ್ತೇನೆ" ಎಂಬ ಚಿಂತಕ ಐರಿಕ್ ಫ್ರಾಂ(೨೦೦೩-೩೮)ರವರ ಹೇಳಿಕೆಯಲ್ಲಿ ಮಾತೃವಾತ್ಸಲ್ಯದ ಪ್ರಮಾಣ ಎಷ್ಟಿರುತ್ತದೆ ಎಂಬುದರ ಸತ್ಯಾಂಶವಿದೆ. ಪಾರೋತಿಯ ವಾತ್ಸಲ್ಯವೂ ಇದಕ್ಕೆ ಹೊರತಾಗಿರಲಿಲ್ಲ. ಲಕ್ಷ್ಮೀನಾರಾಯಣನು ಮನೆಯವರ ಅತಿಯಾದ ಪ್ರೀತಿ, ಸಲುಗೆ ಹಾಗೂ ಕೆಟ್ಟವರ ಸಹವಾಸದಿಂದ ದುಷ್ಟ ಚಟಗಳನ್ನೆಲ್ಲ ಮೈಗಂಟಿಸಿಕೊಂಡು ಹಾಳಾಗುತ್ತಾನೆ. 'ಮದುವೆಯೆಂಬುದು ಪರಿಪೂರ್ಣ ಜೀವನಕ್ಕೆ ನಾಂದಿ' ಎಂಬ ಸಂಪ್ರದಾಯದಂತೆ ಮದುವೆ ಮಾಡಿದರೆ ಅವನ ಕೆಟ್ಟ ಗುಣಗಳು ಕಡಿಮೆಯಾಗುತ್ತವೆ ಎಂದು ಭಾವಿಸಿ ಮಂಗಳೂರಿನ ವಾಸುದೇವಯ್ಯನವರ ಮಗಳಾದ ನಾಗವೇಣಿಯೊಂದಿಗೆ ಲಕ್ಷ್ಮೀನಾರಾಯಣನ ಮದುವೆ ಮಾಡುತ್ತಾರೆ. ಆದರೆ ಈ ಮದುವೆಯಿಂದ ಲಕ್ಷ್ಮೀನಾರಾಯಣನ ನಡುವಳಿಕೆಗಳಲ್ಲಿ ಯಾವುದೇ ವ್ಯತ್ಯಾಸಗಳಾಗುವುದಿಲ್ಲ, ಬದಲಿಗೆ ಅವನ ದುಷ್ಟ ಚಟಗಳು ಮತ್ತಷ್ಟು ಹೆಚ್ಚುತ್ತಾ ಹೋಗುತ್ತವೆ. ಇದರಿಂದ ನಾಗವೇಣಿಯು ದೈಹಿಕವಾಗಿಯೂ ಮತ್ತು ಮಾನಸಿಕವಾಗಿಯೂ ನೋವನ್ನು ಅನುಭವಿಸುತ್ತಾಳೆ. ಅವನೊಂದಿಗಿನ ಮಿಲನದಿಂದಾಗಿ ಹಲವಾರು ರೋಗಗಳಿಗೆ ಗುರಿಯಾಗುವಳು.

ಲಕ್ಷ್ಮೀನಾರಾಯಣನು ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸದೆ ಊರೂರು ಅಲೆಯುತ್ತಿದ್ದನು. ಇದರಿಂದಾಗಿ ಕುಟುಂಬದ ಜವಾಬ್ದಾರಿಯೆಲ್ಲ ನಾಗವೇಣಿಯು ನಿರ್ವಹಿಸುತ್ತಿದ್ದಳು. ಆದರೂ ಲಕ್ಷ್ಮೀನಾರಾಯಣನನ್ನೇ ಸಮಾಜವು ಕುಟುಂಬದ ಯಜಮಾನನೆಂದು ಗುರುತಿಸುತಿತ್ತು. "ಮನೆಯ ಆರ್ಥಿಕತೆಯನ್ನು ನಿಭಾಯಿಸುವುದು ಗಂಡಿನ ಕರ್ತವ್ಯ ಎಂಬ ನಿಯಮವಿದ್ದರೂ ಅದು ಅವನ ಮೇಲೆ ಒತ್ತಡವನ್ನೇನೂ ಹಾಕುವುದಿಲ್ಲ, ಅವನು ತನಗೆ ಬೇಕೆನಿಸಿದರೆ ನಿಯಮವನ್ನು ಉಲ್ಲಂಘಿಸಿರುತ್ತಾನೆ. ಆದರೂ ಮನೆಯ ಯಜಮಾನನೇ ಆಗಿರುತ್ತಾನೆ" ಎಂಬ ಶ್ರೀಮತಿ ಎಚ್.ಎಸ್.(೨೦೦೩-೩೭)ರವರ ಹೇಳಿಕೆಯು ಪುರುಷ ಪ್ರಧಾನ ಸಮಾಜದ ಚಿತ್ರಣವನ್ನು ಸ್ಪಷ್ಟಪಡಿಸುತ್ತದೆ. ಇದಕ್ಕೆ ಲಕ್ಷ್ಮೀನಾರಾಯಣನೂ ಹೊರತಾಗಿರಲಿಲ್ಲ. ಅನಾರೋಗ್ಯದಿಂದ ಬಳಲುತ್ತಿದ್ದ ಲಕ್ಷ್ಮೀನಾರಾಯಣನೊಂದಿಗಿನ ಮಿಲನದಿಂದ ತನ್ನ ಆರೋಗ್ಯವನ್ನು ಕೆಡೆಸಿಕೊಂಡು ನಾಗವೇಣಿಯು ಮಗುವನ್ನು ಪಡೆಯುತ್ತಾಳೆ. ಮಗುವಿನ ಲಾಲನೆ-ಪಾಲನೆಯಲ್ಲಿ ಗಂಡನು ಜೊತೆಯಿರದಿದ್ದರೂ ನೋವನ್ನು ಮರೆಯುತ್ತಾಳೆ. ಮಗುವಿನ ಬೆಳವಣಿಗೆಯಲ್ಲಿ ತನ್ನ ಜೀವನದ ಸಾರ್ಥಕತೆಯನ್ನು ಪಡೆಯುತ್ತಾಳೆ. ಇದನ್ನು ಕಂಡ ಸರಸೋತಿಯು 'ತಮಗೆ ಗಂಡನಿಲ್ಲದ ವೈಧವ್ಯವಾದರೆ, ಅವಳದು ಗಂಡನಿದ್ದು ವೈಧವ್ಯ ಸ್ಥಿತಿ ಬಂತಲ್ಲ' ಎಂದು ಮರುಗುತ್ತಾಳೆ. ಮಗನ ಬೇಜವಬ್ದಾರಿಯನ್ನು ಅರಿತ ರಾಮ-ಐತಾಳರು ಆಸ್ತಿಯನ್ನೆಲ್ಲ ಸೊಸೆ ನಾಗವೇಣಿಯ ಹೆಸರಿಗೆ ವರ್ಗಾಯಿಸಿ ಸಾಯುತ್ತಾರೆ. ಇದರಿಂದ ಧನ ಪಿಶಾಚಿಯಾದ ಲಕ್ಷ್ಮೀನಾರಾಯಣನು ಕುಪಿತನಾಗುತ್ತಾನೆ. ವಿದ್ಯಾವಂತೆಯಾದ ನಾಗವೇಣಿಯು ಆಸ್ತಿಯನ್ನು ಸದುಪಯೋಗಪಡಿಸಿಕೊಳ್ಳದೆ ಮತ್ತೆ ಎಡವುತ್ತಾಳೆ. ಆಸ್ತಿಯೆಲ್ಲವನ್ನು ಪುನಃ ಗಂಡನಿಗೆ ವರ್ಗಾಯಿಸುತ್ತಾಳೆ. "ಕಷ್ಟಗಳು ಬರುವುದು ಮನುಷ್ಯನನ್ನು ಮುಳುಗಿಸುವುದಕ್ಕಲ್ಲ, ಅವನನ್ನು ಶುದ್ಧಗೊಳಿಸಲು" ಎಂಬ ಸೂಕ್ತಿಯಂತೆ ಕಾದಂಬರಿಯಲ್ಲಿ ನಾಗವೇಣಿಯ ಪಾತ್ರವನ್ನು ವಾಸ್ತವದ ನೆಲೆಗಿಂತಲೂ ಆದರ್ಶದ ಹಿನ್ನೆಲೆಯಲ್ಲಿ ಉದ್ದೇಶಪೂರ್ವಕವಾಗಿಯೇ ಬಿಂಬಿಸಿರುವುದು ಸ್ಪಷ್ಟವಾಗುತ್ತದೆ.

ವಿಷಯ ಲಂಪಟನಾದಂತಹ ಲಕ್ಷ್ಮೀನಾರಾಯಣನು ಆಸ್ತಿ ಕೈಗೆ ಬರುತ್ತಲೆ ಅದೆಲ್ಲವನ್ನು ಮಾರಿ ಊರನ್ನು ತೊರೆದು ದೇಶಾಂತರ ಹೋಗುತ್ತಾನೆ. ಇದರಿಂದ ನಾಗವೇಣಿಯ ಸ್ಥಿತಿಯು ತುಂಬ ಶೋಚನೀಯವಾಗುತ್ತದೆ. ಆದರೂ ಎದೆಗುಂದದೆ ವಯಸ್ಸಾದ ಸರಸೋತಿ, ಸತ್ಯಭಾಮೆಯರೊಂದಿಗೆ ಹಗಲಿರುಳು ದುಡಿಯುತ್ತಾ ಜೀವನವನ್ನು ಸಾಗಿಸುತ್ತಾಳೆ. "ದುಃಖಗಳು ತಲೆಯನ್ನು ನೆರೆಸುತ್ತವೆ. ಆದರೆ ಹೃದಯವನ್ನು ಬಲಗೊಳಿಸುತ್ತವೆ" ಎಂಬ ಜಾರ್ಜ್‌ಬೇಶಿಯವರ ಹೇಳಿಕೆಯಂತೆ ನಾಗವೇಣಿಯು ಬದುಕಿನ ಹೋರಾಟದಲ್ಲಿ ಸೋತರೂ ಸೋಲೊಪ್ಪದೆ, ನೊಂದರೂ ಕೈ ಚೆಲ್ಲಿ ಅಳುತ್ತ ಕೂರದೆ ಪರಿಸ್ಥಿತಿಯನ್ನು ಎದುರಿಸುವಳು. "ತಮ್ಮ ನರಗಳನ್ನು ತಿಕ್ಕಿ ತೇದಿಯಾದರೂ ಬಾಳ್ವೆ ಮಾಡಿ, ಗಂಡನು ಕೈಬಿಟ್ಟರೂ ತಾವು ಸತ್ತಿಲ್ಲ ಎಂದು ತೋರಿಸಬೇಕೆಂಬ ಹಟ ಕುದಿಯುತಿತ್ತು." (೨೦೦೩, ಸಂ-೪, ಕಾ-೩, ೨೯೯) ಬಡತನದ ಪರಿಸ್ಥಿತಿಯಲ್ಲೂ ನಾಗವೇಣಿಯು ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸುತ್ತಾಳೆ. ಈ ನೆಲೆಯಲ್ಲಿ ಕಾದಂಬರಿಕಾರರು ನಾಗವೇಣಿಯ ಪಾತ್ರವನ್ನು ಆದರ್ಶದ ಪರಿಧಿಯಲ್ಲಿ ಚಿತ್ರಿಸಿರುವುದು ಸ್ಪಷ್ಟವಾಗುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಬರುವ ಸ್ತ್ರೀಯರಿಗೆ ಬಡತನದಿಂದಾಗಿ ದುಡಿಯುವುದು ಅನಿವಾರ್ಯವಾಗಿತ್ತು, ಆ ದುಡಿಮೆಯಿಂದಲೇ ಅವರ ಜೀವನ ಸಾಗಬೇಕಾಗಿತ್ತು, ಅದರಿಂದಲೇ ಎಂಥಹ ಕಷ್ಟವನ್ನೂ ಎದುರಿಸಬಲ್ಲ ಸಾಮರ್ಥ್ಯ ಹಾಗೂ ದೃಢತೆಯನ್ನು ಅವರು ಹೊಂದಿದ್ದರು. ಅವರಲ್ಲಿನ ಈ ದೃಢತೆಯೇ ಅವರ ಬದುಕಿಗೆ ಹೊಸದೊಂದು ಚೆಲುವನ್ನು ಕೊಟ್ಟಿದ್ದಲ್ಲದೆ, ಬಡತನದಲ್ಲೂ ತೃಪ್ತಿಯುತ ಜೀವನವನ್ನು ಸಾಗುವಂತೆ ಮಾಡಿದೆ. ಗಿರಡ್ಡಿ ಗೋವಿಂದರಾಜರು "ಈ ಹೋರಾಟದ ಉತ್ಕಟತೆಯು ಅವರ ಇನ್ನುಳಿದ ದುಃಖವನ್ನು ನುಂಗಿ ಜೀವನಕ್ಕೊಂದು ಅರ್ಥ ಕೊಡುತ್ತದೆ" ಎಂಬ ಹೇಳಿಕೆಯು ನಿಜವೆನಿಸುತ್ತದೆ. ಹೆಂಗಸರು ಜೀವನ ಶ್ರದ್ಧೆಯನ್ನು ಉಳಿಸಿಕೊಂಡು ತಮ್ಮೆಲ್ಲ ಸಮಯವನ್ನು ಕುಟುಂಬದ ರಕ್ಷಣೆಗೆ ಕೊಡುವುದು ಸಾಧ್ಯವಾಗಬೇಕಾದರೆ ಅವರು ಮನೆಗೆ ಮಾತ್ರವೇ ಕಟ್ಟು ಬೀಳುವುದು ತೀರಾ ಅಗತ್ಯವೆಂಬುದನ್ನು ಇಲ್ಲಿಯ ಸ್ತ್ರೀ ಪಾತ್ರಗಳು ಭಾರತೀಯ ಸಂಪ್ರದಾಯದ ಹಿನ್ನೆಲೆಯಲ್ಲಿ ತಿಳಿಸುತ್ತವೆ.

ಈ ಕಾದಂಬರಿಯಲ್ಲಿ ವಿಧವೆಯ ದುಃಖ, ಬಂಜೆಯ ಕಷ್ಟ ಹಾಗೂ ನೀತಿಗೆಟ್ಟ ಗಂಡನನ್ನು ಪಡೆದ ಮಹಿಳೆಯರ ಸ್ಥಿತಿ-ಗತಿಯನ್ನು ಕುರಿತು ಚಿತ್ರಿಸಲಾಗಿದೆ. ಇಲ್ಲಿಯ ಸ್ತ್ರೀ ಪಾತ್ರಗಳು ಸಂದರ್ಭ ಸನ್ನಿವೇಶಕ್ಕನುಗುಣವಾಗಿ ವರ್ತಿಸದೆ ಕಾದಂಬರಿಕಾರರ ಆದರ್ಶದ ಮೇರೆಗೆ ಬಿಂಬಿತವಾಗಿವೆ. ಪಾರೋತಿ, ನಾಗವೇಣಿಯರ ಬದುಕಿಗೆ ಹಲವಾರು ಪರ್ಯಾಯ ಸಾಧ್ಯತೆಗಳಿದ್ದರೂ ಅವರು ಸಾಂಪ್ರದಾಯಿಕ ಮೌಲ್ಯಗಳಲ್ಲೇ ತಮ್ಮ ಬದುಕಿನ ಸಾರ್ಥಕತೆಯನ್ನು ಕಾಣುವ ಸಾಹಸ ಮಾಡುವುದು ಕಾದಂಬರಿಕಾರರ ಒಲವು ಆಗಿರುವುದು ಸ್ತ್ರೀ ಪಾತ್ರಗಳ ಚಿತ್ರಣದಿಂದ ನಿಚ್ಚಳವಾಗಿದೆ. "ಜನಪದ ಸಾಹಿತ್ಯದ ಹೆಣ್ಣು ಸಾಂಪ್ರದಾಯಿಕ ಚೌಕಟ್ಟಿನ ಮಿತಿಯಲ್ಲಿನ ಮತ್ತು ಆ ಮಿತಿಯಿಂದುಂಟಾಗುವ ಎಲ್ಲ ಕಷ್ಟ ನಷ್ಟಗಳನ್ನು ಅನುಭವಿಸುವ ಮತ್ತು ಹಾಗೆ ಅನುಭವಿಸಿದರೂ ಕೂಡ ಅದನ್ನು ಆದರ್ಶಗಳ ಭ್ರಮೆಯಲ್ಲಿ ಮೆರೆಯುವ ವ್ಯಕ್ತಿಯಾಗಿ ಕಾಣುತ್ತಾಳೆ" ಎಂಬ ಸಂಧ್ಯಾರೆಡ್ಡಿಯವರ (೧೯೯೫, ೪೮) ಮಾತುಗಳಿಂದ ನಾಗವೇಣಿಗೆ ಹೋಲುವಂತಹ ಪಾತ್ರಗಳನ್ನು ಜನಪದ ಸಾಹಿತ್ಯದಲ್ಲಿಯೂ ದೊರೆಯುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ವಂಶಪಾರಂಪರ್ಯವೆನ್ನಬಹುದಾದ ಆಸ್ತಿಯ ಸಂಬಂಧ ಗಂಡು-ಹೆಣ್ಣಿನ ಸಂಬಂಧದಲ್ಲಿರುವ ರಾಜಕಾರಣವನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

'ಸಾಯುವವರೆಗೂ ನೀನು ನಿನ್ನ ಪರಿಶ್ರಮದಿಂದ ಬೆವರಿನ ರೊಟ್ಟಿಯನ್ನೇ ತಿನ್ನು' ಎನ್ನುವ ಬೈಬಲ್ ವಾಕ್ಯವನ್ನು 'ಬೆಟ್ಟದ ಜೀವ' ಕಾದಂಬರಿಯು ವಿಶ್ಲೇಷಿಸುತ್ತದೆ. ಕೌಟುಂಬಿಕ ಚೌಕಟ್ಟನ್ನು ಹೊಂದಿದ್ದ ಈ ಕಾದಂಬರಿಯು ಶ್ರಮ ಜೀವನವನ್ನು ಪ್ರತಿಪಾದಿಸುತ್ತದೆ. ಕುಟುಂಬವು ಪರಿಪೂರ್ಣವೆನಿಸಿಕೊಳ್ಳಬೇಕಾದರೆ ಗಂಡ ಹೆಂಡತಿಯರಿಬ್ಬರೂ ಸರಿಸಮಾನರಾಗಿ ದುಡಿಯಬೇಕು. ಪರಸ್ಪರ ಸುಖ ದುಃಖಗಳನ್ನು ಹಂಚಿಕೊಳ್ಳಬೇಕು. ಅಂದಾಗ ಮಾತ್ರ ಸಂಸಾರ ಸುಖಮಯವಾಗಿರಲು ಸಾಧ್ಯ, ಗೋಪಾಲಯ್ಯ, ಶಂಕರಿ ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬಾಳುತ್ತಿದ್ದರು. ಗೋಪಾಲಯ್ಯನ ಪ್ರತಿಯೊಂದು ಕಾರ್ಯಕ್ಕೂ ಶಂಕರಿಯ ಸಹಕಾರ, ಪ್ರೋತ್ಸಾಹವಿತ್ತು. ಅರಕೆ-ಕೊರಗುಗಳ ಮಧ್ಯೆಯೂ ಸಾಹಸಿಯಾದ ಹಾಗೂ ಸರಸಿಯಾದ ಗಂಡನ ಜೊತೆಗೆ ಕೊಂಪೆಯಲ್ಲಿ ಬದುಕಿಗೆ ತನ್ನನ್ನು ಒಗ್ಗಿಸಿಕೊಂಡು ಸನ್ನಿವೇಶಕ್ಕನುಗುಣವಾಗಿ ಹೊಂದಿಕೊಂಡು ಹೋಗುವಲ್ಲಿ ಅವಳ ಹೊಂದಾಣಿಕೆಯ ಗುಣ ಪ್ರಕಟವಾಗುತ್ತದೆ. ದಾಂಪತ್ಯ ಜೀವನದಲ್ಲಿ ದಂಪತಿಗಳಿಬ್ಬರ ಮನಸ್ಸು ಪರಸ್ಪರರಿಗಾಗಿ ಮಿಡಿಯುತ್ತಿರಬೇಕು. ಯಾವುದು ದೈಹಿಕ, ಯಾವುದು ಮಾನಸಿಕವೆಂದು ತಿಳಿಯಲಾರದಷ್ಟು ಒಂದರಿಂದ ಮತ್ತೊಂದನ್ನು ಬೇರ್ಪಡಿಸಲಾರದಷ್ಟು ಅನನ್ಯವಾಗಿರಬೇಕು. ಅಂಥಹ ದಾಂಪತ್ಯ ಜೀವನವು ಸುಖವಾಗಿರುತ್ತದೆ. ಇದು ಗೋಪಾಲಯ್ಯ ಮತ್ತು ಶಂಕರಿಯರ ವೈವಾಹಿಕ ಜೀವನದ ಹಿನ್ನೆಲೆಯಲ್ಲಿ ಅರ್ಥವಾಗುತ್ತದೆ.

ಶಂಕರಮ್ಮ ಕೋಮಲ ಹೃದಯದವಳಾಗಿದ್ದು ಭಾವನಶೀಲಳಾಗಿದ್ದಳು. ತನ್ನ ಮಗ ಶಂಕರ ಮನೆಬಿಟ್ಟು ಹೋಗಿದ್ದು ಅವಳ ಮನಸ್ಸಿಗೆ ತುಂಬಾ ನೋವನ್ನುಂಟು ಮಾಡಿತ್ತು. ಅವಳ ಮಾತೃಹೃದಯ ಮನೆ ಬಿಟ್ಟು ಹೋದ ಮಗನು ತಿರುಗಿ ಮನೆಗೆ ಬಂದಾನು ಎಂಬ ನಿರೀಕ್ಷೆ, ಮನೆಗೆ ಬರಲಿ ಎಂಬ ಹಾರೈಕೆಯಿಂದ ತವಕಿಸುತ್ತಿತ್ತು. ತನ್ನ ಮಗನನ್ನು ಒಂದು ದಿನದ ಮಟ್ಟಿಗೆ ಕರೆಸಿ ಕೊಟ್ಟರೆ ಸಾವಿರ ರೂಪಾಯಿ ಬಹುಮಾನ ನೀಡುವುದಾಗಿ ನಿರೂಪಕರಿಗೆ ಹೇಳುವಲ್ಲಿ ಅವಳ ಪುತ್ರವಾತ್ಸಲ್ಯದ ಅರಿವಾಗುತ್ತದೆ. ಇದರಿಂಗಾಗಿಯೇ ಲಕ್ಷ್ಮಿನಾರಾಯಣರ ಮಕ್ಕಳಾದ ಸುಬ್ರಾಯ, ಸಾವಿತ್ರಿಯರನ್ನು ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು, ಪೋಷಿಸುತ್ತಿದ್ದಳು. ಅದನ್ನು ಕಂಡು ಲಕ್ಷ್ಮಿ ನನ್ನ ಮಕ್ಕಳನ್ನು ನಾನೇ ಅಷ್ಟು ಪ್ರೀತಿಸುತ್ತೇನೋ ಇಲ್ಲವೋ ಎಂದು ಹೇಳುವಲ್ಲಿ ಔಚಿತ್ಯವಿದೆ.

"ಸ್ತ್ರೀ ಜೀವನದಲ್ಲಿ ತಾಯಿ, ಪತ್ನಿ ಎರಡು ಮಹತ್ವದ ಘಟ್ಟಗಳಾಗಿವೆ. ತಾಯಿ ಶಕ್ತಿದಾತೆ, ಪತ್ನಿ ಸ್ಫೂರ್ತಿದಾತೆ" ಎಂಬ ರವೀಂದ್ರನಾಥ ಟ್ಯಾಗೂರ್ ಅವರ ಹೇಳಿಕೆಯನ್ನು 'ಬೆಟ್ಟದ ಜೀವ' ಕಾದಂಬರಿಯ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು. ಶಂಕರಿಯು ಗೋಪಾಲಯ್ಯನ ಪ್ರತಿಯೊಂದು ಕಾರ್ಯಕ್ಕೂ ಸ್ಫೂರ್ತಿಯಾಗಿದ್ದಳು. "ಸಂಸಾರದಲ್ಲಿ ಸ್ತ್ರೀ-ಪುರುಷರಿಬ್ಬರೂ ಸ್ವತಂತ್ರರಾಗಿ ಬಾಳಲು ಸಾಧ್ಯವಿಲ್ಲ, ಪರಸ್ಪರ ಅವಲಂಬಿತರಾಗಿ, ಪೋಷಕರಾಗಿ, ಪೂರಕ ಶಕ್ತಿಯಾಗಿ ಬಾಳಿದಾಗಲೇ ಜೀವನದಲ್ಲಿ ನಲಿವು, ಗೆಲವು ಸಾಧ್ಯ" ಎಂಬ ಶಾಂತಾದೇವಿ ಮಾಳವಾಡ (೧೯೯೦-೨೯) ಅವರ ಹೇಳಿಕೆಯು ಕಾದಂಬರಿಯ ಮೂಲ ಆಶಯವನ್ನು ಸಮರ್ಥಿಸುತ್ತದೆ.

೧೯೪೭ರಲ್ಲಿ ಪ್ರಕಟವಾದ 'ಔದಾರ್ಯದ ಉರುಳಲ್ಲಿ' ಕಾದಂಬರಿಯಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವವನ್ನು ಗುರುತಿಸಬಹುದು. ರಾಧಾಕೃಷ್ಣ ತನ್ನನ್ನು ಸಾಮಾಜಿಕ ಜೀವನಕ್ಕೆ ಅರ್ಪಿಸಿಕೊಂಡವನಾಗಿದ್ದು ಗಾಂಧೀಜಿಯವರ ಅನುಯಾಯಿಯಾಗಿದ್ದನು. ಇವನನ್ನು ಮದುವೆಯಾದ ಸತ್ಯಳು ಶ್ರೀಮಂತ ಕುಟುಂಬದಲ್ಲಿ ಜನಿಸಿ ಸುಖವಾಗಿ ಬೆಳೆದಿದ್ದಳು. ವಿದ್ಯಾವಂತೆಯಾದ ಅವಳು ತನ್ನ ವಿಲಾಸಮಯ ಜೀವನವನ್ನು ಮರೆತು, ತನ್ನ

ವೈಯಕ್ತಿಕ ಆಸೆ-ಆಕಾಂಕ್ಷೆಗಳನ್ನೆಲ್ಲ ಬದಿಗೊತ್ತಿ ಗಂಡನನ್ನು ಅನುಸರಿಸಿಕೊಂಡು ಹೋಗುತ್ತಾಳೆ. ಜೀವನದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾಳೆ. "ಪುರುಷನಿಗೆ ತನ್ನದೇ ಭಾಗ್ಯ ಅವನಿಗೆ ಮದುವೆಯಾಗುವವರೆಗೆ ಮಾತ್ರ. ಅಲ್ಲಿಂದ ಮುಂದಕ್ಕೆ ಅದು ಕೈ ಹಿಡಿದವಳ ಭಾಗ್ಯ" ಎಂಬ ಲೋಕರೂಢಿಯಂತೆ ಎಷ್ಟೇ ಸಂಕಟಗಳು ಬಂದರೂ ನಗು-ನಗುತ್ತಾ ಎದುರಿಸುತ್ತ, ಗಂಡನೊಂದಿಗೆ ತೃಪ್ತಿಯುತ ಜೀವನವನ್ನು ಸಾಗಿಸುತ್ತಾಳೆ. ಇವಳ ಹೊಂದಾಣಿಕೆ ಗುಣ, ಸಹಕಾರದ ಮನೋಭಾವದಿಂದ ರಾಧಾಕೃಷ್ಣನ ಸಾಮಾಜಿಕ ಸುಧಾರಣೆಯ ಕಾರ್ಯಗಳು ಯಶಸ್ವಿಯಾಗುತ್ತವೆ.

ನಗರದ ವಾತಾವರಣ ಉತ್ತಮ ಕೌಟುಂಬಿಕ ಬದುಕಿಗೆ ಯಾವುದೇ ಅಡೆ ತಡೆಯನ್ನು ಉಂಟು ಮಾಡುವುದಿಲ್ಲ ಕುಟುಂಬವು ಸಾಮರಸ್ಯದಿಂಥ ಕೂಡಿರಬೇಕಾದರೆ ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮುಖ್ಯವಾಗುತ್ತದೆ ಎಂಬುದು 'ಜಾರುವ ದಾರಿಯಲ್ಲಿ' ಕಾದಂಬರಿಯ ಆಶಯ, ಇಂದುಮತಿಯು ನಗರದ ವಾತಾವರಣದಲ್ಲಿ ಸುಖವಾಗಿ ಬೆಳೆದಿದ್ದಳು. ಡಾ.ಶಿವಪ್ಪನವರೊಂದಿಗೆ ಮದುವೆಯಾದ ಬಳಿಕ ಕ್ರಮೇಣವಾಗಿ ಹಳ್ಳಿಯ ಬದುಕಿಗೆ ಹೊಂದಿಕೊಳ್ಳುತ್ತಾಳೆ. ಗಂಡನ ಸುಖ-ದುಃಖಗಳಲ್ಲಿ ಭಾಗಿಯಾಗುತ್ತಾಳೆ.

'ಜಾರುವ ದಾರಿಯಲ್ಲಿ' ಕಾದಂಬರಿಯ 'ಗುಲಾಬಿ' ವೃತ್ತಿಯಲ್ಲಿ ಸೂಳೆಯಾದರೂ ಬದುಕಿನಲ್ಲಿ ಗರತಿಯಾಗಿದ್ದಳು. ತನ್ನದೇ ಆದಂತಹ ಕುಟುಂಬವನ್ನು ಅವಳು ಹೊಂದಿರದಿದ್ದರೂ ಇತರರ ಕುಟುಂಬವನ್ನು ಹಾಳು ಮಾಡುವಂತವಳಾಗಿರಲಿಲ್ಲ, ಏಕೆಂದರೆ ಅವಳು ತನ್ನನ್ನು ಮಾರಿಕೊಳ್ಳುವ ಬಿಡುಸೂಳೆಯಾಗಿರಲಿಲ್ಲ ಪರಿಸ್ಥಿತಿಗೆ ಸಿಲುಕಿ ಅಸಹಾಯಕತೆಯಿಂದ ವೇಶ್ಯೆಯಾಗಿದ್ದಳು. ತನ್ನ ಮಗುವನ್ನು ಉಳಿಸಿದುದಕ್ಕಾಗಿ ಕೃತಜ್ಞತೆಯಿಂದಾಗಿ ಡಾ.ಶಿವಪ್ಪನವರ ಕುಟುಂಬಕ್ಕೆ ಕಷ್ಟ ಕಾಲದಲ್ಲಿ ನೆರವಾಗುತ್ತಾಳೆ. ಶಿವಪ್ಪನವರ ಬಗೆಗೆ ಗುಲಾಬಿ ಪ್ರೀತಿ ಹೊಂದಿದ್ದರೂ ಅವರನ್ನು ಪಡೆಯಬೇಕು ಎಂಬ ಚಪಲ ಹೊಂದಿರಲಿಲ್ಲ, ಅದನ್ನು ಆರಾಧನೆಯ ಮಟ್ಟದಲ್ಲೇ ಉಳಿಸಿಕೊಂಡಿದ್ದಳು. ಅವರ ಸಂಸಾರ ಸುಖವಾಗಿರಲೆಂದು ಹಾರೈಸುತಾಳೆ. ಅನಾರೋಗ್ಯಕ್ಕೆ ತುತ್ತಾದ ಇಂದುಮತಿಗೆ ಸಾವಿರಾರು ರೂಪಾಯಿಗಳನ್ನು ವ್ಯಯಿಸಿ ಶುಶ್ರೂಷೆ ಮಾಡುತ್ತಾಳೆ. ಇಂದುಮತಿಯ ಆರೈಕೆಯಲ್ಲಿ ತನ್ನ ಬದುಕಿನ ಸಾರ್ಥಕತೆಯನ್ನು ಪಡೆಯುತ್ತಾಳೆ.

ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಕುಟುಂಬದ ಜೀವನ ಸಂತೋಷಕರವಾಗಿರುತ್ತದೆ. ಅನುಮಾನ, ಆತಂಕ ಹಾಗೂ ಒತ್ತಾಯದಿಂದ ಕುಟುಂಬದಲ್ಲಿ ಸುಖ, ಶಾಂತಿ, ನೆಮ್ಮದಿ ಹಾಳಾಗುತ್ತದೆ ಎಂಬುದು 'ಬತ್ತದ ತೊರೆ' ಕಾದಂಬರಿಯ ಸಾರಾಂಶವಾಗಿದೆ. ಹೆಣ್ಣು-ಗಂಡಿನ ಪ್ರೀತಿ-ಪ್ರೇಮಗಳಲ್ಲಿ ಅಡಗಿರುವ ಮೋಸ-ವಂಚನೆ, ನಟನೆ, ಸ್ವೇಚ್ಛಾಚಾರಗಳ ವಾಸ್ತವಿಕ ವರ್ಣನೆಯನ್ನು ಈ ಕಾದಂಬರಿಯು ಒಳಗೊಂಡಿದೆ. 'ವಿನತೆ' ವೇಶ್ಯೆಯ ಮಗಳು. ವೇಶ್ಯೆಯರ ಕುಲದಲ್ಲಿ ಹುಟ್ಟಿ ಬೆಳೆದಿದ್ದರೂ ವೇಶ್ಯಾವೃತ್ತಿಯನ್ನು ಖಂಡಿಸುತ್ತಿದ್ದಳು. ತನ್ನ ತಾಯಿಯಂತೆ ತಾನು ವೇಶ್ಯೆಯಾಗಬೇಕೆಂದು ಬಯಸಿದವಳಲ್ಲ, ಬದಲಿಗೆ ತಾನು ಮದುವೆಯಾಗಿ ಕೌಟುಂಬಿಕ ಜೀವನ ಸಾಗಿಸಬೇಕೆಂದು ಬಯಸಿದ್ದಳು. 'ಜಾರುವ ದಾರಿಯಲ್ಲಿ' ಕಾದಂಬರಿಯ ಗುಲಾಬಿ ಗರತಿಯ ಜೀವನವನ್ನು ಸಾಗಿಸಲು ಬಯಸುತ್ತಾಳೆ. ಮದುವೆಯಾಗಬೇಕೆಂದು ಕನಸು ಕಾಣುತ್ತಾಳೆ. ಆದರೆ 'ಬತ್ತದ ತೊರೆ' ಕಾದಂಬರಿಯಲ್ಲಿ ವಿನತೆ ಅದನ್ನು ನೆರವೇರಿಸುತ್ತಾಳೆ. ತಾನು ಮದುವೆಯಾಗಬೇಕು, ಕುಟುಂಬದಲ್ಲಿ ಉತ್ತಮ ಜೀವನ ಸಾಗಿಸಬೇಕು ಎಂಬ ಭಾವೋದ್ವೇಗದಲ್ಲಿ ಆತುರಾತುರವಾಗಿ ಎರಡು ಮಕ್ಕಳ ತಂದೆಯಾದ ಹಾಗೂ ಕ್ರೂರಿಯಾದ ಗಾಂವಕರ್‌ನನ್ನು

[illegible]

ಮದುವೆಯಾಗುತ್ತಾಳೆ. "ಮದುವೆ ಹೆಂಡತಿಯನ್ನು ಮಾತ್ರ ಲೈಂಗಿಕ ಬಂಧನವೂ ಸೇರಿದಂತೆ ಹಲವು ರೀತಿಯಲ್ಲಿ ಬಂಧನದಲ್ಲಿಡುವ ಏಕಪಕ್ಷೀಯ ಅಲಿಖಿತ ಕಾನೂನಾಗಿ ಗಂಡನಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟು ಅದನ್ನು ಹೆಣ್ಣಿನಿಂದ ಪೂರ್ಣವಾಗಿ ಕಸಿದುಕೊಂಡಿದೆ" ಎಂಬ ಶಾಂತಿನಾಯಕರ (ಬರಗೂರು ರಾಮಚಂದ್ರಪ್ಪ (ಸಂ) ೧೯೯೩, ೫೯೨) ಹೇಳಿಕೆಯು ಪುರುಷ ಪ್ರಧಾನ ಸಮಾಜದ ನಿಲುವನ್ನು ಸ್ಪಷ್ಟಪಡಿಸುತ್ತದೆ. ವಿನತೆಯ ದಾಂಪತ್ಯ ಜೀವನವೂ ಇದಕ್ಕೆ ಹೊರತಾಗಿರಲಿಲ್ಲ, ಗಾಂವಕರನನ್ನು ಮದುವೆಯಾಗಿ ತನ್ನ ಅಸ್ತಿತ್ವ ಮತ್ತು ಸ್ವಾಭಿಮಾನವನ್ನು ಕಳೆದುಕೊಳ್ಳುತ್ತಾಳೆ. ವೇಶ್ಯೆಯ ಮಗಳಾದ ವಿನತೆ ವೇಶ್ಯಾಜೀವನ ಹೇಯವಾದುದು ಎಂದು ತಿರಸ್ಕರಿಸುತ್ತಾಳೆ. ತಾನು ಮದುವೆಯಾಗಿ ಸಮಾಜದಲ್ಲಿ ಗೃಹಿಣಿಯಾಗಿ ಬಾಳಬೇಕೆಂದು ಬಯಸುತ್ತಾಳೆ. ಆದರೆ ಅವಳ ಕುಲಕ್ಕೆ ಅಂಟಿದ ಶಾಪ ಬೆನ್ನುಬಿಡದೆ ಅವಳನ್ನು ತೊಂದರೆಗೆ ಸಿಲುಕಿಸುತ್ತದೆ. ಗಾಂವಕರನು ಅವಳನ್ನು ವೇಶ್ಯೆಯ ಮಗಳೆಂದು ದಿನಾಲೂ ಮೂದಲಿಸುತ್ತಿದ್ದನು.

ಗಂಡ-ಹೆಂಡತಿಯರಲ್ಲಿ ಸ್ನೇಹದ ಸಂಬಂಧಕ್ಕಿಂತಲೂ ಭಯ-ಭಕ್ತಿಗಳು, ಆಳುವ-ಆಳಿಸಿಕೊಳ್ಳುವ ಸಂಬಂಧವೇ ಹೆಚ್ಚಾಗಿರುತ್ತದೆ. ಗಾಂವಕರನು ಹೆಂಡತಿಯನ್ನು ಪ್ರೀತಿಸುತ್ತಿರಲಿಲ್ಲ, ಅವಳ ಮೇಲೆ ಅನುಮಾನ ಪಟ್ಟು ಸಂಶಯದಿಂದಾಗಿ ಮನೆಯಲ್ಲಿ ಕೂಡಿ ಹಾಕಿ ಅವಳ ಮನೋಸ್ಥೈರ್ಯವನ್ನು ಕುಗ್ಗಿಸಲು ಪ್ರಯತ್ನಿಸುತ್ತಾನೆ. ಆದರೆ ವಿನತೆ ಸಂಯಮದಿಂದ ಎಲ್ಲವನ್ನೂ ಎದುರಿಸುತ್ತಾಳೆ. "ತಾನು ವ್ಯಭಿಚಾರಿಣಿ, ಈ ಮಕ್ಕಳು ಗಂಡನಿಂದ ಹುಟ್ಟಿದವಲ್ಲ, ಅವು ಪರರಿಂದಾದುವು, ತನ್ನ ಮತ್ತು ಅವುಗಳ ಪೋಷಣೆಗೆ ಗಂಡ ಹೊಣೆಗಾರನಲ್ಲ"(೨೦೦೩, ಸಂ-೦, ಕಾ-೮, ೪೪೬) ಎಂದು ಗಂಡನ ಒತ್ತಾಯದಿಂದ ಪತ್ರ ಬರೆಯುತ್ತಾಳೆ. ಆ ಪತ್ರಕ್ಕೆ ಗಂಡನ ಒತ್ತಾಯ, ಹಿಂಸೆಗೆ ಮಣಿದು ಅಸಹಾಯಕತೆಯಿಂದ ರುಜು ಮಾಡುತ್ತಾಳೆ. ಇದರಿಂದಾಗಿ ಅವಳ ಕುಟುಂಬವು ಛಿದ್ರವಾಗುತ್ತದೆ. ಗಾಂವಕರನು ಹೆಂಡತಿ, ಮಕ್ಕಳನ್ನು ತೊರೆದು ದೆಹಲಿಗೆ ಹೋಗುತ್ತಾನೆ.

ಅತಿಯಾದ ಆತ್ಮವಿಶ್ವಾಸದ ನಿರೀಕ್ಷೆಯಿಂದ ಮದುವೆಯಾದ ವಿನತೆ ದಾಂಪತ್ಯ ಜೀವನದಲ್ಲಿ ಸೋಲುತ್ತಾಳೆ. ಗಂಡನ ಅನ್ಯಾಯ, ಅತ್ಯಾಚಾರಗಳಿಗೆ ತತ್ತರಿಸುತ್ತಾಳೆ. ಗಂಡ ತನ್ನನ್ನು ತೊರೆದರೂ ಮಕ್ಕಳ ಸಲುವಾಗಿ ಬದುಕುತ್ತಾಳೆ. ಉಪಜೀವನಕ್ಕಾಗಿ ಹೊಲಿಗೆ ಹಾಗೂ ಮಕ್ಕಳಿಗೆ ಇಂಗ್ಲಿಷ್ ಪಾಠ ಹೇಳಿಕೊಡುತ್ತಾಳೆ. ದುಡಿಮೆಯ ಮೂಲಕ ಮಾತ್ರ ಹೆಣ್ಣು ತನ್ನ ಬಂಧನದ ಬೇಡಿಯನ್ನು ಹರಿಯಬಲ್ಲಳು. ಬದುಕುವ ಛಲ ಅವರ ಆರ್ಥಿಕ ನೆಲೆಯಿಂದ ಹೊರಡಬಲ್ಲದು ಎಂಬ ಪ್ರಗತಿಪರ ನಿಲುವನ್ನು ವಿನತೆಯ ಪಾತ್ರದ ಮೂಲಕ ಚಿತ್ರಿಸಲಾಗಿದೆ.

ಬಸವರಾಜ ಕಟ್ಟೀಮನಿಯರ 'ಮಣ್ಣು ಮತ್ತು ಹೆಣ್ಣು' (೧೯೫೩) ಕಾದಂಬರಿಯಲ್ಲಿ ಬಾಲಿ ತನ್ನ ಗಂಡ ಮತ್ತು ಮಾವರ ಹಿಂಸೆಯನ್ನು ತಾಳಲಾರದೆ ತವರು ಮನೆಗೆ ಹೋಗುತ್ತಾಳೆ. ಮದುವೆಯೊಂದಿಗೆ ತವರಿನಿಂದ ಹೊರಹೋಗುವ ಹೆಣ್ಣು ಗಂಡನ ಕುಟುಂಬದ ಪೂರ್ಣ ಅಧಿಕಾರಕ್ಕೆ ಒಳಗಾಗುತ್ತಾಳೆ. ಅಂತೆಯೇ ಬಾಲಿಯೂ ಸಹ ತವರು ಮನೆಯ ಆಶ್ರಯವನ್ನು ಪಡೆಯದೇ ಪರಕೀಯ ಸ್ಥಿತಿಯಲ್ಲೇ ಬದುಕುತ್ತಾಳೆ. ಇದರಿಂದಾಗಿಯೇ, 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಸಾಂಪ್ರದಾಯಿಕ ಹೇಳಿಕೆ ಇನ್ನೂ ಪ್ರಚಲಿತದಲ್ಲಿದೆ. ಬದುಕುವ ಅನಿವಾರ್ಯತೆಯ ಸಂದರ್ಭದಲ್ಲಿ ಬಾಲಿಯು ಮೈಮಾರಿಕೊಂಡು, ನಂತರ ಎಚ್ಚೆತ್ತು ದುಡಿಮೆಯ ಮೂಲಕ ಹೊಸ ಬದುಕನ್ನು ಕಟ್ಟಿಕೊಳ್ಳುವ ಗಟ್ಟಿತನವನ್ನು ವ್ಯಕ್ತಪಡಿಸುತ್ತಾಳೆ. ವೇಶ್ಯೆಯಾದವಳು ತನ್ನ ಬದುಕನ್ನು ವೇಶ್ಯಾವೃತ್ತಿಯಲ್ಲಿಯೇ

ಮುಂದುವರಿಸದೆ ಸ್ವಂತ ದುಡಿಮೆಯಿಂದ ಆರ್ಥಿಕವಾಗಿ ಸದೃಢರಾಗಿ ಬದುಕುವ ಸಾಧ್ಯತೆಯನ್ನು ಬಾಲಿಯ ಪಾತ್ರದಿಂದ ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಕಟ್ಟಿಮನಿಯವರ 'ಖಾನಾವಳಿಯ ನೀಲಾ' (೧೯೫೩) ಕಾದಂಬರಿಯಲ್ಲಿ ತಾಯಿ, ಮಗಳನ್ನು ತನ್ನಂತೆ ವೇಶ್ಯಾವೃತ್ತಿಗೆ ಎಳೆಯಲು ಪ್ರಯತ್ನಿಸುವ ಮತ್ತು ಮಗಳು ಅದನ್ನು ಧಿಕ್ಕರಿಸಿ ಮದುವೆಯಾಗುವ ಚಿತ್ರಣವಿದೆ.

ವೇಶ್ಯೆಯರ ಮದುವೆ ಕುರಿತು ಕಾರಂತ ಮತ್ತು ಕಟ್ಟಿಮನಿಯವರ ನಿಲುವುಗಳಲ್ಲಿ ಸಾಮ್ಯವನ್ನು ಗುರುತಿಸಬಹುದು. ಆದರೆ ಅ.ನ.ಕೃ. ಅವರ 'ಕಣ್ಣೀರು' (೧೯೪೭) ಕಾದಂಬರಿಯ ವಿಷಯವಸ್ತು ಇದಕ್ಕೆ ಅಪವಾದವಾಗಿದೆ. ಅ.ನ.ಕೃ. ತಮ್ಮ ಕೃತಿಯಲ್ಲಿ "ವೇಶ್ಯೆಯದು ಹೇಳಿ ಕೇಳಿ ಕಳಂಕಿತ ರಕ್ತ. ಅಂಥವಳನ್ನು ಮದುವೆಯಾಗಿ ನಾಯಕನ ಬದುಕು ಹಾಳಾಗಬೇಕೆ?" ಎನ್ನುವ ಮಾತನ್ನು ಹೆಂಗಸರಿಂದಲೇ ಆಡಿಸಿ, ಗಂಡಿನ ಆರೋಗ್ಯ, ಅವನ ಕ್ಷೇಮ, ಅವನ ಸಂತಾನದ ಹಿತಚಿಂತನೆಯತ್ತಲೇ ಓದುಗರನ್ನು ಪ್ರೇರೇಪಿಸುತ್ತಾರೆ. ಅ.ನ.ಕೃ ಅವರು ಹಳೆಯ ಮೌಲ್ಯಗಳನ್ನೇ ಪ್ರತಿಪಾದಿಸುತ್ತಾರೆ. ಇದು ಅವರ ಕಾದಂಬರಿಯ ಪಾತ್ರ ಚಿತ್ರಣದಿಂದ ಸ್ಪಷ್ಟವಾಗುತ್ತದೆ. ಸೂಳೆಯರ ಬಗೆಗೆ ಅವರು ಬರೆದರೂ ಅವರ ಸ್ಥಿತಿಗೆ ಅನುಕಂಪವನ್ನು ತೋರಿಸುವುದಿಲ್ಲ, "ಸಾಮಾಜಿಕ ಸ್ಥಿತ್ಯಂತರದಲ್ಲಿ ಹೆಣ್ಣು ಸೂಳೆಯಾದುದು ದುರಂತವೇ ಸರಿ. ಈ ಮಾನವೀಯ ನೆಲೆಯಲ್ಲಿ ಆಕೆಯನ್ನು ನೋಡದೆ, ಮನರಂಜನೆಯ ಸರಕನ್ನಾಗಿ ಚಿತ್ರಿಸುತ್ತಾರೆ" ಎಂದು ಮುಕ್ತಾಯಕ್ಕನವರು (೧೯೯೭, ೭೪) ಹೇಳಿರುವುದು ಅ.ನ.ಕೃ ಅವರಿಗೆ ವೇಶ್ಯೆಯರ ಬಗೆಗೆ ಇರುವ ನಿಲುವನ್ನು ಸ್ಪಷ್ಟಪಡಿಸುತ್ತದೆ. ಸ್ತ್ರೀ ಪುರುಷನ ರಕ್ಷಣೆಯಲ್ಲಿರಬೇಕೆಂಬ ಪುರಾತನ ನಂಬಿಕೆಯಿಂದ ಸಮಕಾಲೀನ ಸ್ತ್ರೀ ಸಮಸ್ಯೆಗಳನ್ನು ಅ.ನ.ಕೃ. ಅವರು ಪರಿಶೀಲಿಸುತ್ತಾರೆ. ಅ.ನ.ಕೃ ಅವರಿಗಿಂತ ಕಾರಂತರ ವಿಚಾರವು ಪ್ರಗತಿಪರವಾದುದು ಹಾಗೂ ಸಾಮಾಜಿಕ ಕಳಕಳಿಯುಳ್ಳದ್ದು ಎಂಬುದು ದೃಢವಾಗುತ್ತದೆ.

"ನಿಸರ್ಗದ ಯಾವುದೋ ವಿಪರೀತದ ವ್ಯಾಪಾರದಿಂದಾಗಿ ಹೆಣ್ಣು ಸಂಭಾವಿತರಿಗಿಂತ ಹೆಚ್ಚಾಗಿ ವಾಚಾಳರಿಗೆ, ಬೇಜವಾಬ್ದಾರಿ ಸಾಹಸಿಗಳಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳೆ" ಎಂಬ ಸೀತಾರಾಮಯ್ಯ ಹಾಗೂ ಪಾ.ವೆಂ.ಆಚಾರ್ಯರವರ ಹೇಳಿಕೆ ಸೋಜಿಗವೆನಿಸಿದರೂ ವಾಸ್ತವದಲ್ಲಿ ನಿಜವೆನಿಸುತ್ತದೆ. ಇದಕ್ಕೆ ಉತ್ತಮ ನಿದರ್ಶನವೆಂದರೆ, 'ಬತ್ತದ ತೊರೆ' ಕಾದಂಬರಿಯ ವಿನತೆ, ಅವಳು ತನ್ನ ಬದುಕಿನ ವಿನಾಶಕ್ಕೆ ತಾನೇ ಕಾರಣಳಾಗುವುದು ದುರಂತವೇ ಸರಿ. ವಿನತೆಯು ಗಂಡನಿಂದ ಅಷ್ಟೆಲ್ಲ ನೋವು, ಹಿಂಸೆ ಅಪಮಾನಗಳೆಲ್ಲವನ್ನೂ ಅನುಭವಿಸಿದ್ದರೂ, ಆತನು ಆಕಸ್ಮಿಕ ದುರ್ಘಟನೆಯೊಂದರಲ್ಲಿ ಕಾಲು ಕಳೆದುಕೊಂಡಾಗ ಮತ್ತೇ ಸಂಸಾರವನ್ನು ಒಂದುಗೂಡಿಸುವ ಆಶಾಭಾವನೆಯಿಂದ ಮಗುವಿನಂತೆ ಅವನ ಆರೈಕೆ ಮಾಡುತ್ತಾಳೆ. ಶಿವರಾಮ ಕಾರಂತರು ಸ್ತ್ರೀಯರ ಸಮಸ್ಯೆಗಳ ಸುಧಾರಣೆಯ ಕುರಿತು ಪ್ರಗತಿಪರ ನಿಲುವುಗಳನ್ನು ಹೊಂದಿದ್ದರು. ಆದರ ಜೊತೆಯಲ್ಲಿಯೇ ಸಂಪ್ರದಾಯಿಕತೆಯ ಕಡೆಗೆ ಅವರ ಒಲವಿರುವುದು ಸ್ಪಷ್ಟವಾಗುತ್ತದೆ. ಎಷ್ಟೇ ಪೀಡೆ-ಯಾತನೆಗಳಿರಲಿ, ಎಷ್ಟೇ ದುಃಖ-ದುಮ್ಮಾನಗಳಿರಲಿ, ಅವುಗಳನ್ನು ಸೈರಿಸಿಕೊಂಡು ಗಂಡನ ಆರೈಕೆ ಮಾಡುವ ಸಂಪ್ರದಾಯದ ಸ್ತ್ರೀಯರ ಕಡೆಗೆ ಕಾದಂಬರಿಕಾರರ ಒಲವು ಇರುವುದು ಕಾದಂಬರಿಯ ಸ್ತ್ರೀ ಪಾತ್ರಗಳಿಂದ ಮನವರಿಕೆಯಾಗುತ್ತದೆ. "ಬತ್ತದ ತೊರೆ" ಕಾದಂಬರಿಯಲ್ಲಿ 'ಮದುವೆ' ಜೀವನದಲ್ಲಿ ಪ್ರಮುಖವಾದದು. ಅದರ ನಿರ್ಣಯದಲ್ಲಿ ಆತುರ ಮಾಡಬಾರದು. ಮುಂದಾಲೋಚನೆಯನ್ನು ಮಾಡಬೇಕು. ವಧು-ವರರಿಬ್ಬರೂ ಪರಸ್ಪರ ಒಬ್ಬರ ಬಗೆಗೆ ಮತ್ತೊಬ್ಬರು

ತಿಳಿದುಕೊಂಡಿರಬೇಕು. ಹೊಂದಾಣಿಕೆಯಿಂದ ಜೀವನ ಸಾಗಿಸಬೇಕು. ಒತ್ತಾಯದಿಂದ ಪ್ರೀತಿಯನ್ನೇ ಆಗಲಿ, ಶಾಂತಿ-ನೆಮ್ಮದಿಯನ್ನಾಗಲಿ ಪಡೆಯಲು ಸಾಧ್ಯವಿಲ್ಲ ಎಂಬುದನ್ನು ವಿನತೆಯ ಪಾತ್ರದ ಮೂಲಕ ವಿಶ್ಲೇಷಣೆ ಮಾಡಲಾಗಿದೆ. 'ಕುಟುಂಬ'ದಲ್ಲಿ ಶಾಂತಿ-ಸಹಬಾಳ್ವೆ ಸಾಧ್ಯವಾಗಬೇಕಾದರೆ ಗಂಡ-ಹೆಂಡತಿಯರಲ್ಲಿ ಪರಸ್ಪರ ನಂಬಿಕೆ, ಹೊಂದಾಣಿಕೆ ಮುಖ್ಯವಾಗುತ್ತದೆ ಎಂಬುದು 'ಬತ್ತದ ತೊರೆ' ಕಾದಂಬರಿಯ ಒಟ್ಟು ನಿಲುವಾಗಿದೆ.

ಒಂದೇ ತಾಯಿಯ ಮಕ್ಕಳಾಗಿದ್ದರೂ ತದ್ವಿರುದ್ಧವಾದ ಗುಣಗಳನ್ನು ಹೊಂದಿದ್ದು ತಮ್ಮ ತಮ್ಮ ಸಾಂಸಾರಿಕ ಬದುಕಿಗೆ ಚೆಲುವನ್ನು, ಅಸಹ್ಯವನ್ನು ಸೃಷ್ಟಿಸಿಕೊಂಡ ವಾಸಂತಿ ಮತ್ತು ಶೇವಂತಿಯರ ಜೀವನದ ವಿವರಣೆಯನ್ನು 'ಒಡಹುಟ್ಟಿದವರು' ಕಾದಂಬರಿಯು ಒಳಗೊಂಡಿದೆ. ವಾಸಂತಿ-ಶೇವಂತಿಯರು ಒಡ ಹುಟ್ಟಿದವರಾಗಿದ್ದರೂ ತದ್ವಿರುದ್ಧವಾದ ಗುಣಗಳನ್ನು ಹೊಂದಿದ್ದರು. ಜೀವನದ ಬಗೆಗೆ ಇಬ್ಬರಲ್ಲೂ ಭಿನ್ನವಾದ ಅಭಿಪ್ರಾಯಗಳಿದ್ದವು. ಒಬ್ಬರದು ಹೊಂದಾಣಿಕೆ ಗುಣವಾಗಿದ್ದರೆ, ಮತ್ತೊಬ್ಬರದು ಆಡಂಬರದ ಮತ್ತು ಅಹಂನ ಸ್ವಭಾವವಾಗಿತ್ತು. ಇಬ್ಬರದು ಮದುವೆಯಾಗಿತ್ತು, ಅವರಿಬ್ಬರೂ ತಮ್ಮ ಸ್ವಭಾವಗಳಿಂದ ಅವರವರ ಸಂಸಾರ ಸುಖಕರವಾಗಿಯೂ ಮತ್ತು ವಿರಸಮಯವಾಗಿರಲು ಕಾರಣರಾಗುತ್ತಾರೆ.

ವಾಸಂತಿಯು ಸುಧಾಕರನನ್ನು ಮದುವೆಯಾಗಿದ್ದಳು. ಆದರೆ ಜೊತೆಯಲ್ಲಿರಲು ಸಾಧ್ಯವಾಗಿರಲಿಲ್ಲ. ಏಕೆಂದರೆ ಸುಧಾಕರನು ವಿದ್ಯಾಭ್ಯಾಸಕ್ಕೆಂದು ವಿದೇಶಕ್ಕೆ ಹೋಗಿದ್ದನು. ಗಂಡ ಜೊತೆಯಲ್ಲಿರದಿದ್ದರೂ ಆತನು ತನ್ನ ಕೆಲಸದಲ್ಲಿ ಯಶಸ್ವಿಯಾಗಿ ಹಿಂದಿರುಗಲಿ ಎಂದು ಬಯಸುತ್ತಿದ್ದಳು. ಆದರೆ ಸುಧಾಕರನು ಸ್ವಾರ್ಥಿಯಾಗಿದ್ದು ವಿಷಯಲಂಪಟನಾಗಿದ್ದನು. ಹೆಂಗಸರ ಸಹವಾಸದಲ್ಲಿ ವಾಸಂತಿಯ ಮನೆಯಿಂದ ಕಳುಹಿಸುತ್ತಿದ್ದ ಹಣವನ್ನು ಹಾಳು ಮಾಡುತ್ತಿದ್ದನು. ಬೇರೆ ಬೇರೆ ಹೆಂಗಸರ ಸಹವಾಸದಲ್ಲಿ ಕ್ರಮೇಣವಾಗಿ ತನ್ನ ಹೆಂಡತಿಯನ್ನು ಮರೆಯಲಾರಂಭಿಸಿದನು. ಅದನ್ನು ಅವನ ಪತ್ರಗಳಿಂದ ವಾಸಂತಿ ಅರಿತು ಕೊಳ್ಳುತ್ತಾಳೆ. ಇದರಿಂದ ಸ್ವಲ್ಪ ವಿಚಲಿತವಾದರೂ ಎದೆಗುಂದುವುದಿಲ್ಲ, ಅವರು ಭಾರತಕ್ಕೆ ನಮ್ಮೂರಿಗೆ ಒಮ್ಮೆ ಬರಲಿ, ಅವರನ್ನು ನನ್ನವರನ್ನಾಗಿ ಮಾಡಿಕೊಳ್ಳುವೆ ಎಂದು ತನ್ನ ಮನಸ್ಸನ್ನು ತಾನೇ ಸಂತೈಸಿಕೊಳ್ಳುತ್ತಾ ಆತ್ಮವಿಶ್ವಾಸದಿಂದ ಗಂಡನಿಗಾಗಿ ಕಾಯುತ್ತಾಳೆ. ವಾಸಂತಿಯ ಪಾತ್ರಚಿತ್ರಣದಲ್ಲಿ ಭಾರತೀಯ ಸಂಸ್ಕೃತಿಯನ್ನೊಳಗೊಂಡ ಸ್ತ್ರೀಯನ್ನು ಗುರುತಿಸಬಹುದು. ಇದರಿಂದಲೇ 'ಹೆಣ್ಣು ಸಂಸಾರದ ಕಣ್ಣು' ಎಂಬ ಲೋಕರೂಢಿಯ ಮಾತು ಪ್ರಚಲಿತದಲ್ಲಿದೆ.

ಕುಟುಂಬದಲ್ಲಿ ಹೊಂದಾಣಿಕೆಯನ್ನುವುದು ಗಂಡ-ಹೆಂಡತಿಯರಿಂದ ಎರಡೂ ಕಡೆಯಿಂದಲೂ ಅತ್ಯವಶ್ಯಕ, ಆದರೆ ಪುರುಷಪ್ರಧಾನ ವ್ಯವಸ್ಥೆ ಅದನ್ನು ಹೆಣ್ಣಿನ ಕಡೆಯಿಂದಲೇ ಅಪೇಕ್ಷಿಸುತ್ತದೆ. ಇದಕ್ಕೆ ಪೂರಕವೆಂಬಂತೆ ರೂಢಿಗತ ಸಂಪ್ರದಾಯಗಳನ್ನು ವಿಧೇಯವಾಗಿ ಅನುಸರಿಸುತ್ತಾ ವಾಸಂತಿ ಜೀವನವನ್ನು ಸಾಗಿಸುತ್ತಾಳೆ. ಮೂರು ವರ್ಷಗಳ ಕಾಲ ಗಂಡನಿಂದ ದೂರವಿದ್ದರೂ ಅವಳಲ್ಲಿ ಗಂಡನ ಬಗೆಗಿನ ಪ್ರೀತಿ, ವ್ಯಾಮೋಹ ಕಡಿಮೆಯಾಗಿರಲಿಲ್ಲ, ವಿದೇಶದಿಂದ ಯಾವಾಗ ಬರುತ್ತಾನೆ ಎಂಬ ನಿರೀಕ್ಷೆಯಲ್ಲಿ ಕಾಲ ಕಳೆಯುತ್ತಿದ್ದಳು. ಸುಧಾಕರನು ವಿದೇಶದಿಂದ ಭಾರತಕ್ಕೆ ಮರಳುವಾಗ ಮಾನಸಿಕವಾಗಿಯೂ, ದೈಹಿಕವಾಗಿಯೂ ಕ್ಷೀಣವಾಗಿದ್ದನು. ಇದನ್ನರಿತ ವಾಸಂತಿಯು ಗಂಡನಲ್ಲಿರುವ ಕೀಳರಿಮೆಯನ್ನು ಹೊಡೆದೊಡಿಸಲು ಪ್ರಯತ್ನಿಸುತ್ತಾಳೆ. ಹಾಳಾಗಬಹುದಾಗಿದ್ದ ತನ್ನ ಬದುಕನ್ನು ಸಂಯಮ, ತಾಳ್ಮೆ ಹಾಗೂ ವ್ಯವಹಾರ ಜ್ಞಾನದಿಂದ ಸುಂದರಗೊಳಿಸಿಕೊಳ್ಳುವಳು. ಸ್ಪರ್ಧಾತ್ಮಕ ಪ್ರಪಂಚದಲ್ಲಿ ಒಬ್ಬರ

ದುಡಿಮೆಯಿಂದ ಸಂಸಾರವನ್ನು ನಿರ್ವಹಿಸಿಕೊಂಡು ಹೋಗುವುದು ಕಷ್ಟವೆಂದರಿತು ಇಬ್ಬರೂ ಒಂದೊಂದು ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ವ್ಯವಹಾರ ಚತುರೆಯಾದ ವಾಸಂತಿಯು ಮಿತವ್ಯಯದಿಂದಾಗಿ ಕುಟುಂಬವನ್ನು ಮುನ್ನಡೆಸುತ್ತಾಳೆ. ಗಂಡನ ಸುಖ-ದುಃಖಗಳಲ್ಲಿ ಭಾಗಿಯಾಗುತ್ತಾಳೆ.

ಕೌಟುಂಬಿಕ ಜೀವನದಲ್ಲಿ ಗಂಡ-ಹೆಂಡಿರ ಮಧ್ಯೆ ಪ್ರೀತಿ, ವಿಶ್ವಾಸ, ನಂಬಿಕೆಯಿರಬೇಕು, ಇರ್ವರಲ್ಲಿಯೂ ಪರಸ್ಪರ ಹೊಂದಾಣಿಕೆಯಿರಬೇಕು, ಅಂದಾಗ ಮಾತ್ರ ಕೌಟುಂಬಿಕ ಜೀವನ ಸುಖವಾಗಿರಲು ಸಾಧ್ಯ ಎಂಬುದನ್ನು ಕಾರಂತರು 'ಒಡಹುಟ್ಟಿದವರು' ಕಾದಂಬರಿಯಲ್ಲಿ ವಿಶ್ಲೇಷಿಸಿದ್ದಾರೆ. ಈ ಕಾದಂಬರಿಯಲ್ಲಿ ಶೇವಂತಿ-ವಾಸುದೇವ ಹಾಗೂ ವಾಸಂತಿ ಸುಧಾಕರ ಅವರ ಎರಡು ಕುಟುಂಬಗಳ ನೋವು-ನಲಿವುಗಳ ಚಿತ್ರಣವಿದೆ. ವಾಸಂತಿ ಗಂಡನನ್ನು ಅನುಸರಿಸಿಕೊಂಡು ಹೋಗುತ್ತಾಳೆ. ಕುಟುಂಬದಲ್ಲಿ ನೆಮ್ಮದಿಯ ಜೀವನವನ್ನು ಸಾಗಿಸುತ್ತಾಳೆ. ಆದರೆ ವಾಸುದೇವ ಶೇವಂತಿಯ ಆಡಂಬರದ ಸ್ವಭಾವವನ್ನು ಸಹಿಸಿಕೊಂಡು ಅವಳೊಂದಿಗೆ ಹೊಂದಾಣಿಕೆಯ ಜೀವನವನ್ನು ಸಾಗಿಸಲು ಪ್ರಯತ್ನಿಸಿದರೂ ವಿಫಲವಾಗುತ್ತಾನೆ. ಅವನಿಗೆ ಸಂಸಾರದಲ್ಲಿ ಶಾಂತಿ, ನೆಮ್ಮದಿ ದೊರೆಯುವುದಿಲ್ಲ. ಕೌಟುಂಬಿಕ ಜೀವನ ಶಾಂತಿ, ಸಹಬಾಳ್ವೆಯಿಂದ ಕೂಡಿರಬೇಕಾದರೆ ಗಂಡಿಗಿಂತ ಹೆಣ್ಣಿನ ಸಹನೆ, ಶಾಂತಿ, ಸಂಯಮ ಮತ್ತು ಹೊಂದಾಣಿಕೆ ಮುಖ್ಯ ಎಂಬ ಪುರುಷ ಪ್ರಧಾನ ವ್ಯವಸ್ಥೆಯನ್ನು 'ಒಡಹುಟ್ಟಿದವರು' ಕಾದಂಬರಿಯು ಪ್ರತಿಧ್ವನಿಸುತ್ತದೆ. 'ಗೃಹಿಣಿಯ ಬದುಕೇ ಹೆಣ್ಣಿಗೆ ಆದರ್ಶ' ಎಂಬ ಭಾರತೀಯ ಸಂಸ್ಕೃತಿಯನ್ನು ವಾಸಂತಿಯ ಪಾತ್ರದಿಂದ ಪ್ರಚುರ ಪಡಿಸಲಾಗಿದೆ.

ಶಿವರಾಮ ಕಾರಂತರು ಆರಂಭದಲ್ಲಿ ಮಹಾತ್ಮ ಗಾಂಧೀಜಿಯವರ ಅನುಯಾಯಿಗಳಾಗಿದ್ದರು, ಬ್ರಹ್ಮಚರ್ಯೆ ಪಾಲನೆ ಕಡ್ಡಾಯ ಎಂದು ನಂಬಿದ್ದರು. ಆದರೆ ಕಾಲ ಕಳೆದಂತೆ ಗಾಂಧೀಜಿ ಹಾಗೂ ಕಾರಂತರ ಚಿಂತನೆಯಲ್ಲಿ ಭಿನ್ನತೆಗಳು ಉದ್ಭವಿಸಿದಾಗ ಅವರೀರ್ವರು ದೂರವಾದರು. ಗಾಂಧೀಜಿಯವರ ಆದರ್ಶಗಳನ್ನು ಕಣ್ಣು ಮುಚ್ಚಿಕೊಂಡು ಪಾಲಿಸದೆ, ಅವುಗಳ ಸತ್ಯಾಸತ್ಯತೆಯ ಶೋಧವನ್ನು ಆರಂಭಿಸಿದರು. ಇದನ್ನು 'ಸಮೀಕ್ಷೆ' ಕಾದಂಬರಿಯಲ್ಲಿ ದಾಖಲಿಸಿದ್ದಾರೆ. ಬ್ರಹ್ಮಚರ್ಯವನ್ನು ಪಾಲಿಸಬೇಕೆಂದು ಬಯಸಿದ್ದ ಶ್ರೀನಿವಾಸನು ಪರಿಸ್ಥಿತಿಯಿಂದಾಗಿ ತನ್ನ ಸ್ನೇಹಿತನ ಸಹೋದರಿ ಶಾರದೆಯೊಂದಿಗೆ ಮದುವೆಯಾಗುತ್ತಾನೆ. ಶಾರದೆಯದು ಮಿತ ಬುದ್ಧಿ ಮಿತ ಅರಿವು, ಹಾಗೂ ಪ್ರತಿಷ್ಠೆಯ ಅಮಿತ ಬಯಕೆ. ತನ್ನ ಮನೆಗೆ ತಾನೇ ಯಜಮಾನಿಯಾಗಬೇಕು ಎಂಬ ಅಹಂಭಾವ ಅವಳಲ್ಲಿತ್ತು. ಇದರಿಂದಾಗಿಯೇ ಶ್ರೀಮಂತ ಮನೆತನದಲ್ಲಿ ಬೆಳೆದ ಅವಳಿಗೆ ಮಧ್ಯಮ ವರ್ಗದ ಜೀವನ ಕಷ್ಟಕರವಾಗುತ್ತದೆ. ಸ್ತ್ರೀ ಸಹಜವಾದ ಅವಳ ಹೆಚ್ಚಿನ ಆಸೆ-ಆಕಾಂಕ್ಷೆಗಳು ಕೈಗೂಡಲಿಲ್ಲ, ಗಂಡನ ಬುದ್ಧಿಗೇಡಿ ಇಲ್ಲವೇ ತಿಳಿವು ಸಾಲದ ಇಂಥ ಬಾಳ್ವೆಯಿಂದ ನನಗೂ ಊರಲ್ಲಿ ಪ್ರತಿಷ್ಠೆ ಬಂದಿಲ್ಲ, ಅವರಿಗೂ ಬಂದಿಲ್ಲ ಎಂದು ಆಗಾಗ ಅವಳಿಗೆ ಅನ್ನಿಸುವುದುಂಟು. ಶಾರದೆಯು ಆರಂಭದಲ್ಲಿ 'ಒಡಹುಟ್ಟಿದವರು' ಕಾದಂಬರಿಯ ಶೇವಂತಿಯಂತೆ ಕಂಡುಬಂದರೂ ಕಾಲ ಕ್ರಮೇಣವಾಗಿ ಪರಿಸ್ಥಿತಿಯನ್ನು ಅರಿತುಕೊಂಡು ಗಂಡನೊಂದಿಗೆ ಹೊಂದಿಕೊಂಡು ಸುಖವಾದ ಬಾಳ್ವೆಯನ್ನು ಸಾಗಿಸುತ್ತಾಳೆ.

ಶಾರದೆ ವಿಲಾಸಮುಖಿಯಾಗಿದ್ದಳು, ಆದರೆ ಶ್ರೀನಿವಾಸನು ವೈರಾಗ್ಯ ಮುಖಿಯಾಗಿದ್ದನು. ಹೀಗಿರಲು ಆ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ, ಮಕ್ಕಳ ಕೊರಗು ಅವಳನ್ನು ತುಂಬ ಕಾಡುತ್ತಿತ್ತು. ಶ್ರೀನಿಸಾಸನು ತನ್ನ ಗೆಳೆಯ

ವಾಸುದೇವನ ಹೆಂಡತಿ ಕುಸುಮೆ ಹಾಗೂ ಅವಳ ಮಗಳು ಸುಹಾಸಿನಿಯನ್ನು ಮನೆಗೆ ಕರೆದು ತರುತ್ತಾನೆ. ಶಾರದೆಯು ಅವರ ಜಾತಿಯನ್ನೆಣಿಸದೆ ತುಂಬ ಆದರದಿಂದ ಸ್ವಾಗತಿಸುತ್ತಾಳೆ. ಸುಹಾಸಿನಿಯನ್ನು ತನ್ನ ಮಗಳೆಂದೇ ಭಾವಿಸಿ ಪ್ರೀತಿಸುತ್ತಾಳೆ, ಪೋಷಿಸುತ್ತಾಳೆ.

ವಾಸುದೇವನು ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರ. ಆದರ್ಶದ ಸುಳಿಯಲ್ಲಿ ವೇಶ್ಯೆಯಾದ 'ಕುಸುಮೆ'ಯನ್ನು ಮದುವೆಯಾಗಿದ್ದನು. ಊರಿಂದ ಊರಿಗೆ ಅಲೆಯುತ್ತ ಸತ್ಯಾಗ್ರಹದಲ್ಲಿ ತೊಡಗಿದ್ದನು. ಪೋಲಿಸರು ಅವನನ್ನು ಬಂಧಿಸಲು ಹುಡುಕುತ್ತಿದ್ದರು, ಅವನು ಸಿಗದೆ ಇದ್ದಾಗ ಅವನನ್ನು ಹುಡುಕುತ್ತ ಅವನ ಮನೆಗೆ ಹೋಗುತ್ತಾರೆ. ಮನೆಯಲ್ಲಿ ಇದ್ದ ಅವನ ಹೆಂಡತಿಯ ಮೇಲೆ ಅತ್ಯಾಚಾರವೆಸಗುತ್ತಾರೆ. ಇದರಿಂದ ತುಂಬ ನೊಂದ ಕುಸುಮೆಯು ತನ್ನ ಮಗಳೊಂದಿಗೆ ಶ್ರೀನಿವಾಸನ ಆಶ್ರಯವನ್ನು ಪಡೆಯುತ್ತಾಳೆ. ವೇಶ್ಯೆಯಾಗಿದ್ದರೂ ಪ್ರಮಾಣಿಕತೆಯಿಂದ ಪೊಲೀಸರು ಎಸಗಿದ ದೌರ್ಜನ್ಯವನ್ನು ಕುರಿತು ಗಂಡನಿಗೆ ಪತ್ರದ ಮುಖಾಂತರ ವಿವರಿಸುತ್ತಾಳೆ. ಸ್ವಾತಂತ್ರ್ಯ ಹೋರಾಟಗಾರನಾದ ವಾಸುದೇವನು ಅವಳನ್ನು ಸಮಾಧಾನ ಪಡಿಸುವ ಬದಲು 'ಮಾನಗೆಟ್ಟು ಬಾಳುವ ಬದಲು ನೀನು ಬಾವಿಗೆ ಹಾರಿ ಸಾಯಬಾರದಿತ್ತೇ'' (೨೦೦೩, ಸಂ.-೧೧, ಕಾ-೧೦, ೭೭) ಎಂದು ಗಾಯದ ಮೇಲೆ ಬರೆ ಎಳೆಯುವಂತೆ ಪತ್ರದ ಮುಖಾಂತರ ಉತ್ತರ ಬರೆಯುತ್ತಾನೆ. ಇದರಿಂದ ತಾನು ಮತ್ತೊಮ್ಮೆ ಅತ್ಯಾಚಾರಕ್ಕೊಳಗಾಗಿದ್ದೇನೆ ಎಂದು ಭಾವಿಸುತ್ತಾಳೆ. ಅವಮಾನಿತಳಾದ ಕುಸುಮೆ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾಳೆ. ಸುಹಾಸಿನಿಯನ್ನು ಅನಾಥಳನ್ನಾಗಿಸದೆ ಶಾರದೆಯು ಅವಳನ್ನು ಮಗಳೆಂದು ಭಾವಿಸಿ ಪೋಷಿಸುತ್ತಾಳೆ.

ಶಾರದೆಗೆ ಮಕ್ಕಳಿರಲಿಲ್ಲ, ಆದರೆ 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮೆಯಂತೆ ಅನ್ಯ ಪುರುಷರ ಸಂಗದಿಂದ ಮಕ್ಕಳನ್ನು ಪಡೆಯುವುದಿಲ್ಲ, ಕುಸುಮೆಯ ಮಗಳಾದ ನಿರ್ಗತಿಕ ಸುಹಾಸಿನಿಯನ್ನು ತನ್ನ ಮಗಳೆಂದು ಭಾವಿಸುತ್ತಾಳೆ. ಸ್ತ್ರೀಯರು ತಮಗೆ ಮಕ್ಕಳಾಗದೆ ಇದ್ದಾಗ ಅನಾಥ ಮಗುವೊಂದನ್ನು ದತ್ತು ತೆಗೆದುಕೊಂಡು ಪ್ರೀತಿಸಿ, ಪೋಷಿಸಬೇಕು ಎಂಬುದು ಕಾದಂಬರಿಯ ನಿಲುವಾಗಿರುವುದು ಸ್ಪಷ್ಟವಾಗುತ್ತದೆ.

''ನಾವು ಕಣ್ ತೆರೆದಾಗ ಕಂಡ ಪ್ರಪಂಚಕ್ಕಿಂತ ಕಣ್ಣು ಮುಚ್ಚುವಾಗಿನ ಪ್ರಪಂಚ ಒಳ್ಳೆಯದಾಗಿರುವಂತೆ, ಏನಿಲ್ಲವೆಂದರೂ ಕೆಟ್ಟದ್ದಾಗಿರದಂತೆ ನೋಡಿಕೊಳ್ಳುವುದು ನಮ್ಮ ಗುರಿಯಾಗಬೇಕು'' ಎಂಬುದು 'ಅಳಿದ ಮೇಲೆ' ಕಾದಂಬರಿಯ ನಿಲುವಾಗಿದೆ. ಯಶವಂತರಾಯನಿಗೆ ಸಾಧ್ಯವಾಗದ ಹೊಂದಾಣಿಕೆಯ ಜೀವನ ಅವನ ಇಬ್ಬರು ಹೆಣ್ಣು ಮಕ್ಕಳಿಗೆ ಸಾಧ್ಯವಾಗುತ್ತದೆ. ಜಲಜಾಕ್ಷಿ ತನ್ನ ಕುಟುಂಬದ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸುವಳು. ಗಂಡನು ಅನಾರೋಗ್ಯದಿಂದಿರಲು ಅವನನ್ನು ಉಪಚರಿಸುತ್ತ, ಮಕ್ಕಳನ್ನು ಪ್ರೀತಿಸುತ್ತಾ ಬದುಕುವಳು. ಬಡತನದಲ್ಲಿಯೂ ಸಂತೋಷವಾಗಿರುವಳು. ಯಶವಂತರಾಯ ಸರಸಿಯರ ಮಗಳಾದ ಇಂದುಮತಿಯು ಉತ್ತಮವಾದ ಕೌಟುಂಬಿಕ ಜೀವನವನ್ನು ಹೊಂದಿದ್ದಳು. ಕುಟುಂಬವು ಸುಗಮವಾಗಿ ಸಾಗಬೇಕಾದರೆ ಗಂಡ ಹೆಂಡತಿಯರಿಬ್ಬರೂ ದುಡಿದರೆ ಅನುಕೂಲವಾಗುತ್ತದೆ ಎಂಬುದರ ಚಿತ್ರಣವಿದೆ. ಇಂದುಮತಿಯು ಶಾಲೆಯೊಂದರಲ್ಲಿ ಅಧ್ಯಾಪಕಿಯಾಗಿದ್ದಳು. ಗಂಡನೊಂದಿಗೆ ಸುಖವಾಗಿದ್ದಳು. ಒಂದು ಕುಟುಂಬವು ಸುಖವಾಗಿರಬೇಕಾದರೆ ಗಂಡ-ಹೆಂಡತಿಯರಲ್ಲಿ ಹೊಂದಾಣಿಕೆಯಿರಬೇಕು; ಒಬ್ಬರಿಗೊಬ್ಬರು ಸ್ಪಂದಿಸುತ್ತಿರಬೇಕು. ಆದರೆ ಹೆಣ್ಣು ಹೊಂದಾಣಿಕೆಯಿಂದ ಜೀವನ

ನಡೆಸಿದಾಗ ಮಾತ್ರ ಕುಟುಂಬದಲ್ಲಿ ನೆಮ್ಮದಿ ದೊರೆಯುತ್ತದೆ ಎಂಬುದು ಈ ಕಾದಂಬರಿಯಿಂದ ಸ್ಪಷ್ಟವಾಗುತ್ತದೆ. ಇದರಿಂದಾಗಿ ಕಾದಂಬರಿಯಲ್ಲಿ ಸಂಪ್ರದಾಯ ನಿಲುವನ್ನು ಪೋಷಿಸಿಕೊಂಡು ಬಂದಿರುವುದು ನಿಚ್ಚಳವಾಗಿದೆ.

ಸಾಹಿತ್ಯ, ಕಲಾ, ಮಾಧ್ಯಮಗಳ ಹಿಂದಿರುವ ಮನಸ್ಸುಗಳು ಎಂಥವಿದ್ದರೆ ಚೆನ್ನ, ಅದರಲ್ಲಿ ಪ್ರಮಾಣಿಕತೆಯ ಸ್ಥಾನವೇನು ಎಂಬುದರ ವಿಶ್ಲೇಷಣೆ 'ಒಂಟಿದನಿ' ಕಾದಂಬರಿಯ ವಿಷಯವಾಗಿದೆ. ಹಾಗೆಯೇ ಅವುಗಳಿಂದ ಸಮಾಜದ ಮೇಲೆ ಯಾವ ರೀತಿಯ ಪ್ರಭಾವ ಉಂಟಾಗುತ್ತದೆ ಎಂಬುದರ ಸೂಕ್ಷ್ಮ ವಿವರಣೆಯೂ ಇದೆ. ಡಾ.ಜಯಂತರವರು ಅಧ್ಯಾಪಕರಾಗಿದ್ದು ವಿದ್ಯಾರ್ಥಿನಿ ಶಾಲಿನಿಯನ್ನು ಮೆಚ್ಚಿ ಮದುವೆಯಾಗುತ್ತಾರೆ. 'ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದು' ಎಂಬ ಚೀನಿ ಗಾದೆಯ ನಿಷ್ಠಾವಂತರಾಗಿದ್ದರು. 'ಸ್ತ್ರೀಯರು ಬುದ್ಧಿವಂತರಾಗುವುದಕ್ಕೆ ಬಯಸುವುದು ಮಹಾ ಅಪರಾಧ' ಎನ್ನುವ ಸ್ತ್ರೀ ವಿರೋಧಿ ನಿಲುವನ್ನು ಹೊಂದಿದ್ದನು. ಇದರಿಂದಾಗಿಯೇ ದಂಪತಿಗಳಲ್ಲಿ ಅನ್ಯೋನ್ಯತೆಯಿರಲಿಲ್ಲ, ಪ್ರೀತಿಯ ಬಾಂಧವ್ಯ ಇರಲಿಲ್ಲ, ಜಯಂತರವರು ಕಾಲಕಳೆದಂತೆ, ಅವಳಲ್ಲಿ ಬೌದ್ಧಿಕತೆಯ ಕೊರತೆಯನ್ನು ಕಾಣುತ್ತಾರೆ. ಶಾಲಿನಿಗಿಂತಲೂ ಬುದ್ಧಿವಂತೆ ವಿದ್ಯಾರ್ಥಿನಿಯರೊಂದಿಗೆ ವ್ಯವಹರಿಸತೊಡಗುತ್ತಾರೆ. ಇದರಿಂದ ಶಾಲಿನಿಯು ತುಂಬ ದುಃಖಿಸುತ್ತಾಳೆ. ಆದರೆ ಗಂಡನನ್ನು ಎದುರಿಸುವ ಧೈರ್ಯ ಅವಳಲ್ಲಿರಲಿಲ್ಲ, ಶಾಲಿನಿಯ ಈ ದೌರ್ಬಲ್ಯವನ್ನು ಜಯಂತನು ಉಪಯೋಗಿಸಿಕೊಳ್ಳುತ್ತಾನೆ. ಹೆಂಡತಿಯನ್ನು ಅಗ್ಗದ ವಸ್ತುವಿಗಿಂತಲೂ ಕೀಳಾಗಿ ಕಾಣುತ್ತಿದ್ದನು.

ಗಂಡನ ಅನಾದರ, ಉದಾಸೀನತೆ ಹಾಗೂ ಹಿಂಸೆಯನ್ನು ಸಹಿಸಿಕೊಂಡು ಪ್ರತಿಭಟಿಸಲಾಗದೆ ಶಾಲಿನಿಯು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾಳೆ. "ಅಸಹಾಯಕ ಸಂದರ್ಭದಲ್ಲಿ ಹೆಣ್ಣು ವ್ಯಕ್ತಿಯಾಗಿ ಉಳಿಯಲು ಸಾಧ್ಯವಾಗದೆ ಶಬ್ದಶಃ ವಸ್ತುವಾಗುವುದರ ಮೂಲಕ ಆಕೆಯ ಬದುಕು ಅನಿವಾರ್ಯವಾಗಿ ದುರಂತವನ್ನಪ್ಪುವುದು" ಎಂಬ ಸುಬ್ರಾಯ ಚೊಕ್ಕಾಡಿ (೨೦೦೦, ೪೦)ಯವರ ಹೇಳಿಕೆ ಸಾಮಾನ್ಯ ಸ್ತ್ರೀಯರ ಮನೋಸ್ಥಿತಿಯನ್ನು ಬಿಂಬಿಸುತ್ತದೆ. ತಮ್ಮ ಗಂಡಂದಿರ ಆತ್ಮವಂಚನೆ, ಅಪ್ರಮಾಣಿಕತೆಯನ್ನು ಬಯಲಿಗೆಳೆಯುವಲ್ಲಿ ವಿದ್ಯಾವಂತೆ ಶಾಲಿನಿಗೆ ಹಲವಾರು ಮಾರ್ಗಗಳಿದ್ದವಾದರೂ ದುರಂತ ಮಾರ್ಗ ಹಿಡಿಯುವುದು ಕಾದಂಬರಿಕಾರರ ಉದ್ದೇಶಿತ ನಿಲುವಾಗಿರುವುದು ಸ್ಪಷ್ಟವಾಗುತ್ತದೆ. "ವಿಚಾರ ಸಂಕೀರಣದಲ್ಲಿ ಡಾ.ಜಯಂತರ ಭಾಷಣ ನಡೆದಿರುವಾಗ ಅವರ ಹೆಂಡತಿ ಸುಟ್ಟುಕೊಂಡು ಸಾಯುವ ಸನ್ನಿವೇಶ ದುರಂತವಾಗಿರುವಂತೆ ವ್ಯಂಗ್ಯಪೂರ್ಣವೂ ಆಗಿದೆ" ಎಂಬುದನ್ನು ಕೀರ್ತಿನಾಥ ಕುರ್ತುಕೋಟಿಯವರು (ಕು.ಶಿ.ಹರದಾಸ ಭಟ್ಟ (ಸಂ) ೧೯೬೯, ೪೧೪) ಗುರುತಿಸಿದ್ದಾರೆ. ಸಮಸ್ಯೆಗಳಿಗೆ ಸಾವಿನಲ್ಲಿಯೇ ಪರಿಹಾರ ಕಂಡುಕೊಳ್ಳುವ ಮಹಿಳೆಯರ ಮನಸ್ಸು ಬದಲಾಗಬೇಕು ಎಂಬುದು ಕಾದಂಬರಿಯ ಆಶಯವಾಗಿದೆ. ಆದರೂ ವೃದ್ಧೆಯರಿಗೆ ಸಾಧ್ಯವಾಗುವ ಜೀವನಶ್ರದ್ಧೆ ಶಾಲಿನಿಯಂಥ ನಗರದ ವಿದ್ಯಾವಂತ ಯುವತಿಯರಿಗೆ ಸಾಧ್ಯವಾಗದಂತೆ ಚಿತ್ರಿಸಿರುವುದರಲ್ಲಿ ಕಾರಂತರ ಪಕ್ಷಪಾತ ನಿಲುವು ಸ್ಪಷ್ಟವಾಗಿ ಗೋಚರಿಸುತ್ತದೆ.

ಆ. ಪ್ರತಿರೋಧ

ಅನಾದಿಕಾಲದಿಂದಲೂ ಸಂಯಮ, ತಾಳ್ಮೆ, ಹೊಂದಾಣಿಕೆಯಂತ ಗುಣಗಳನ್ನು ಸ್ತ್ರೀಯರೇ ಹೆಚ್ಚಾಗಿ ಪಾಲಿಸಿಕೊಂಡು ಬಂದಿದ್ದಾರೆ. ಆದರೆ ಅನ್ಯಾಯ, ಹಿಂಸೆ ಹೆಚ್ಚಾದಂತೆ ಕಂಡು ಬಂದಾಗ, ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಪುರುಷ ಪ್ರಧಾನ ಸಮಾಜದ ವಿರುದ್ಧ ಬಂಡೆದ್ದ ಸ್ತ್ರೀಯರನ್ನು ಸಮಾಜದಲ್ಲಿ ಕಾಣಬಹುದು. ಇಂಥಹ

ಸ್ತ್ರೀ ಪಾತ್ರಗಳನ್ನು ಕಾರಂತರ ಕಾದಂಬರಿಗಳಲ್ಲಿಯೂ ಗುರುತಿಸಬಹುದು. 'ಸರಸಮ್ಮನ ಸಮಾಧಿ' ಕಾದಂಬರಿಯು ನಾಲ್ಕು ಕುಟುಂಬಗಳ ಕತೆಯನ್ನು ಒಳಗೊಂಡಿದೆ. ಜಾನಕಿ ಮತ್ತು ನಾಗವೇಣಿಯರು ಸಂಯಮ ಮನೋಭಾವದವರಾಗಿದ್ದು ಗಂಡನ ದೌರ್ಜನ್ಯವನ್ನು ಪ್ರತಿಭಟಿಸಲಾಗದೆಯೇ ಮೌನವಾಗಿ ಸಹಿಸಿಕೊಳ್ಳುತ್ತಾರೆ, ಆದರೆ ಸುನಾಲಿನಿ ಮತ್ತು ಭಾಗೀರಥಿಯರು ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸುತ್ತಾರೆ.

ಸುನಾಲಿನಿಯು ಅಣ್ಣಪ್ಪ ಕಮ್ತಿಯ ಹೆಂಡತಿ. ಅವರದು ಆರ್ಥಿಕವಾಗಿ ಸುಭದ್ರವಾದ ಕುಟುಂಬವಾಗಿತ್ತು. ಆದರೆ ಅವರ ದಾಂಪತ್ಯ ಜೀವನವು ಸಾಮರಸ್ಯದಿಂದ ಕೂಡಿರದೆ, ಮಾನಸಿಕವಾಗಿ ಹಿಂಸೆಗೊಳಗಾಗಿತ್ತು. ಹೆಂಡತಿ ಬಯಸುವ ಗಂಡನ ಪ್ರೀತಿಯನ್ನು ಹೊರತುಪಡಿಸಿ ಉಳಿದೆಲ್ಲವೂ ಸುನಾಲಿನಿಗೆ ಇತ್ತು. ಆದರೆ ಅದೆಲ್ಲವೂ ಅವಳಿಗೆ ನಿರರ್ಥಕವಾಗಿತ್ತು. ಅಣ್ಣಪ್ಪ ಕಮ್ತಿಯು ವ್ಯಾಪಾರಿಯಾಗಿದ್ದು ವ್ಯವಹಾರಿಕ ಬುದ್ಧಿಯನ್ನು ಹೊಂದಿದ್ದನು. ತನ್ನನ್ನೇ ನಂಬಿ ಬಂದಂತಹ ಹೆಂಡತಿಯ ಮನಸ್ಸನ್ನು ಒಮ್ಮೆಯೂ ಅರಿಯಲು ಪ್ರಯತ್ನಿಸಿದವನಲ್ಲ, ದುಡ್ಡಿದ್ದರೆ ಸಾಕು, ಬೇರೇನೂ ಬೇಕಾಗಿಲ್ಲ, ದುಡ್ಡಿನಿಂದ ಎಲ್ಲವೂ ದೊರೆಯುತ್ತದೆ ಎಂಬ ಅಹಂ ಅನ್ನು ಹೊಂದಿದ್ದನು. 'ಮೂಗಿಯಾದ ಹೆಂಡತಿ ಗಂಡನಿಂದ ಏಟು ತಿನ್ನುವುದಿಲ್ಲ' ಎಂಬ ನಾಣ್ನುಡಿಯು ಪುರುಷ ಪ್ರಧಾನ ವ್ಯವಸ್ಥೆಯನ್ನೇ ಸಮರ್ಥಿಸುತ್ತದೆ. ಆದರೆ ಸ್ವಾಭಿಮಾನಿಯಾದ ಸುನಾಲಿನಿ ಗಂಡನಿಂದ ದುಡ್ಡನ್ನು ಬಯಸಿದವಳಲ್ಲ, ಅವನಿಂದ ನಿರ್ಮಲವಾದ ಪ್ರೀತಿಯನ್ನು ಬಯಸಿದ್ದಳು. ಅದು ಈಡೇರದಿದ್ದಾಗ ಅವಳ ದಾಂಪತ್ಯ ಜೀವನವು ವಿಷಮಯವಾಗಿ ಮಾರ್ಪಡುತ್ತದೆ.

ಗಂಡ-ಹೆಂಡಿರದು ಪರಸ್ಪರ ವಿರೋಧ ಸ್ವಭಾವವಾಗಿತ್ತು. ಒಬ್ಬರಿಗೊಬ್ಬರು ಹೊಂದಿಕೊಂಡು ಜೀವನ ಸಾಗಿಸಲು ಪ್ರಯತ್ನಿಸಲೇ ಇಲ್ಲ, ಇದರಿಂದ ಅವರಿಬ್ಬರ ಜೀವನ ಮಾರ್ಗವು ಬೇರೆ ಬೇರೆ ಆಗುತ್ತದೆ. ಪರಸ್ಪರ ಇಬ್ಬರು ಒಬ್ಬರ ಬಗೆಗೆ ಮತ್ತೊಬ್ಬರು ಅಪಾರ್ಥವನ್ನು ಹೊಂದಿದ್ದರು. ಸುನಾಲಿನಿಗೆ ತಾನು ಓದಿದವಳು ಎಂಬ ಸೊಕ್ಕಿದೆ ಅಂತ ಅಣ್ಣಪ್ಪ ಕಮ್ತಿ ಅಂದುಕೊಂಡಿದ್ದನು. ಅಣ್ಣಪ್ಪ ಕಮ್ತಿಗೆ ದುಡ್ಡಿನ ಮದ ಇದೆ ಅಂತ ಸುನಾಲಿನಿ ಅಂದುಕೊಂಡಿದ್ದಳು. ಪರಸ್ಪರ ಸಮಾಲೋಚನೆ ಮಾಡಿದವರಲ್ಲ, ಸಮಾಧಾನವಾಗಿ ಕುಳಿತು ಸಮಸ್ಯೆಯನ್ನು ಬಗೆಹರಿಸಲು ಯತ್ನಿಸಲಿಲ್ಲ ಮದುವೆಯೆಂಬುದು ಕೇವಲ ಗಂಡು ಹೆಣ್ಣುಗಳ ಮಿಲನದಿಂದ ಪರಿಪೂರ್ಣವಾಗುವುದಿಲ್ಲ, ಅದಕ್ಕೆ ಅರ್ಥ ಬರಬೇಕಾದರೆ ಅವರೀರ್ವರ ಮನಸ್ಸು ಒಂದಾಗಬೇಕು. ಒಬ್ಬರಿಗೊಬ್ಬರ ಮನಸ್ಸು ತುಡಿಯುತ್ತಿರಬೇಕು. ಅಂದಾಗ ಮಾತ್ರ ಕುಟುಂಬವು ನೆಮ್ಮದಿಯಿಂದಿರಲು ಸಾಧ್ಯವಾಗುತ್ತದೆ ಎಂಬುದರ ಚಿತ್ರಣವಿದೆ.

ಹಿರಣ್ಯ-ಭಾಗೀರಥಿಯರ ಕುಟುಂಬವು ಇದಕ್ಕೆ ಹೊರತಾಗಿರಲಿಲ್ಲ, ಹಿರಿಯ ತಲೆಮಾರಿನವರಲ್ಲಿ ಗಂಡ-ಹೆಂಡತಿ ಸಲುಗೆಯಿಂದ ವರ್ತಿಸುವುದು ಅವರಲ್ಲಿ ಮುಜುಗರ ಉಂಟುಮಾಡುತ್ತದೆ. ಆದರಿಂದಾಗಿಯೇ ಹಿರಣ್ಯನ ತಂದೆ ವೆಂಕಟರಮಣಯ್ಯನಿಗೆ ಮದುವೆಯ ಹೊಸದರಲ್ಲಿ ತನ್ನ ಮಗ-ಸೊಸೆ ಹರಟುವುದು ಸರಿಯೆನಿಸುವುದಿಲ್ಲ, ತನ್ನ ಅಸಮಾಧಾನವನ್ನು ಮಗನಿಗೆ ಏಕಾಂತದಲ್ಲಿ ತಿಳಿ ಹೇಳಬಹುದಾಗಿತ್ತಾದರೂ, ದುಡುಕುತನದಿಂದ ತಮ್ಮ ಹೆಂಡತಿಯ ಎದುರು ಮಗ-ಸೊಸೆಯರನ್ನು ಉದ್ದೇಶಿಸಿ "ನಿನ್ನ ಮಗನಿಗೆ ಸ್ವಲ್ಪ ಬುದ್ಧಿಯನ್ನು ಹೇಳು, ಹೆಂಡತಿ ಮನೆಗೆ ಬಂದಳು ಎಂದು ನಾಯಿಯ ಹಿಂದಿನ ಬಾಲವಾಗುವುದಲ್ಲ, ಯಾವುದು ಎಲ್ಲಿರಬೇಕೋ ಅದು ಅಲ್ಲಲ್ಲಿ ಇದ್ದರೇನೇ ಚೆಂದ ಕಾಲಿನದ್ದು ಕಾಲಿಗೆ; ತಲೆಗಲ್ಲ(೨೦೦೩, ಸಂ-೩, ಕಾ-೨, ೧೨೮) ಎಂದು ಹೇಳುತ್ತಾನೆ. ತನ್ನನ್ನು ಕಾಲಿನದ್ದು ಕಾಲಿಗೆ

[illegible]

ಎಂದು ಹೇಳಿದರಲ್ಲ ಎಂಬುದು ಅವಳಿಗೆ ಅವಮಾನವನ್ನುಂಟುಮಾಡುತ್ತದೆ. ತಾಳ್ಮೆಯಿಂದ ಅದನ್ನು ಸಹಿಸಿಕೊಳ್ಳದೆ ಉದ್ವೇಗಕ್ಕೊಳಗಾಗಿ ತವರು ಮನೆಗೆ ಹೋಗುತ್ತಾಳೆ. ಇದರಿಂದ ಅವರ ಸಂಸಾರದಲ್ಲಿ ವಿರಸ ಉಂಟಾಗುತ್ತದೆ.

ಈ ಘಟನೆಯಿಂದ ಮನನೊಂದ ಹಿರಣ್ಯನು ಹೆಂಡತಿಯ ಪ್ರೀತಿಯನ್ನು ತಿರುಗಿ ಪಡೆಯಲು ಅವಳ ತವರು ಮನೆಗೆ ಹೋಗುತ್ತಾನೆ. ಅವಳ ಮನವನ್ನು ಒಲಿಸಿ ತವರುಮನೆಯಿಂದ ಕರೆತರುವಲ್ಲಿ ಯಶಸ್ವಿಯಾಗುತ್ತಾನೆ. ಛಿದ್ರಗೊಂಡಿರುವ ಕುಟುಂಬಗಳು ಹೇಗಾದರೂ ಒಂದುಗೂಡಿ ಹೊಸ ಮೌಲ್ಯಗಳ ಅಡಿಪಾಯದ ಮೇಲೆ ಕೌಟುಂಬಿಕ ವ್ಯವಸ್ಥೆ ಹೊಸ ರೂಪವನ್ನು ಪಡೆದುಕೊಳ್ಳಬೇಕು ಎಂಬುದು ಕಾದಂಬರಿಯ ಆಶಯವಾಗಿದ್ದು ಅದು ಈಡೇರಿರುವುದು ಸ್ಪಷ್ಟವಾಗುತ್ತದೆ.

'ಸರಸಮ್ಮನ ಸಮಾಧಿ' ಕಾದಂಬರಿಯು ಮದುವೆಯ ಬಾಂಧವ್ಯ ಗಟ್ಟಿಯಾಗಿ ಉಳಿಯಬೇಕಾದರೆ ಗಂಡ-ಹೆಂಡತಿಯರಲ್ಲಿ ಹೊಂದಾಣಿಕೆಯಿರಬೇಕು. ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರಿತುಕೊಂಡು ಸ್ಪಂದಿಸಬೇಕು ಎಂಬ ಸಾರಾಂಶವನ್ನು ಹೊಂದಿದೆ. ಮನೆಯ ಹಿರಿಯರಾದವರು ಕಿರಿಯರ ತಪ್ಪುಗಳನ್ನು ಸಂಯಮದಿಂದ ತಿದ್ದಿ ಬಗೆಹರಿಸಬೇಕು. ಕುಟುಂಬದ ಸದಸ್ಯರಲ್ಲಿ ಸಾಮರಸ್ಯವನ್ನು ಉಂಟು ಮಾಡಬೇಕು. ದುಡುಕುತನದಿಂದ, ಸಾಂಪ್ರದಾಯಿಕತೆಯ ಮೌಢ್ಯದಿಂದ ಕುಟುಂಬದ ಶಾಂತಿಯನ್ನು ಕೆಡಿಸಬಾರದು ಎಂಬುದು ಕಾದಂಬರಿಯ ಪಾತ್ರಗಳಿಂದ ದೃಢವಾಗುತ್ತದೆ. ಸಂಪ್ರದಾಯ ಸಮಾಜ ಆಧುನಿಕತೆಯ ಪಲ್ಲಟಗಳೊಂದಿಗೆ ಸುಧಾರಣೆಯಾಗಬೇಕು ಎಂಬುದು ಕಾದಂಬರಿಯ ಮೂಲ ಆಶಯವಾಗಿದೆ.

ಪುರುಷ ಪ್ರಧಾನ ಸಮಾಜದ ಅಲಿಖಿತ ನಿಯಮದಂತೆ ಪುರುಷನು ಹೊರಗಡೆ ದುಡಿಯಲು ಹೋಗಬೇಕು. ಸ್ತ್ರೀಯರು ಮನೆಯಲ್ಲಿಯೇ ಇದ್ದು ಅಡುಗೆ ಕೆಲಸ ಮಾಡುತ್ತಾ, ಮಕ್ಕಳನ್ನು ಪೋಷಿಸಿಕೊಂಡು ಹೋಗಬೇಕು ಎಂಬುದನ್ನು ಸಮಾಜವು ಒಪ್ಪಿಕೊಂಡು ಬಂದಿದೆ. ಆದರೆ ಗಂಡನು ವಿಷಯಲಂಪಟನಾಗಿದ್ದರೆ, ಸೋಮಾರಿಯಾಗಿದ್ದರೆ, ಸಾವಿಗಿಡಾಗಿದ್ದರೆ ಸ್ತ್ರೀಯರೂ ಸಹ ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುವರು ಎಂಬುದನ್ನು ಕಾರಂತರ ಹಲವಾರು ಕಾದಂಬರಿಗಳಲ್ಲಿ ಗುರುತಿಸಬಹುದು. ಇದು "ಸನ್ಯಾಸಿಯ ಬದುಕು" ಕಾದಂಬರಿಯಲ್ಲಿ ಸ್ಪಷ್ಟವಾಗುತ್ತದೆ. 'ತನ್ನ ಕರ್ತವ್ಯವನ್ನು ಸರಿಯಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರವಾಗಿ ತೋರುವುದಿಲ್ಲ"ಎಂಬ ಗಾಂಧೀಜಿಯವರ ಹೇಳಿಕೆಯು ಸತ್ಯ. ಶಂಕರರಾಯನು ಸಂಸಾರ ಒಂದು ಮಾಯೆ ಎಂದು ನೆಪ ಹೇಳಿ ಹೆಂಡತಿ, ಮಕ್ಕಳನ್ನು ತೊರೆದು ಬೇಜವಾಬ್ದಾರಿಯಿಂದ ಸಂಸಾರದಿಂದ ಪಲಾಯನ ಮಾಡುತ್ತಾನೆ. ಸಂಸಾರದಿಂದ ವಿಮುಖನಾದ ಶಂಕರರಾಯನು ಕಪಟ ಸನ್ಯಾಸಿಯಾಗಿ ಊರೂರು ಅಲೆಯುತ್ತಾನೆ. ಆದರೆ ಅವನ ಹೆಂಡತಿ ಸಮಿತ್ರಿಗೆ ಮಾತ್ರ ಸಂಸಾರವನ್ನು ತೊರೆಯಲಾಗುವುದಿಲ್ಲ, "ಗಂಡಸಿಗೆ ಮದುವೆಯಾಗುವುದು ಸುಲಭ. ಸಂಸಾರವನ್ನು ಬಿಡುವುದೂ ಸುಲಭ. ಹೆಂಗಸಿಗೆ ಹಾಗಲ್ಲ, ನಂಬಿದ ದೈವವೇ ಮೋಸ ಕೊಟ್ಟಿತ್ತೆಂದು ತನ್ನನ್ನು ನಂಬಿರುವ ಮಕ್ಕಳನ್ನು ಬಲಿಕೊಡಲು ಬರಲಾರದು" (೨೦೦೩, ಸಂ-೭, ಕಾ-೬, ೧೪) ಎಂದು ಹೇಳುತ್ತಾಳೆ. ಸ್ತ್ರೀಯರ ಇಂಥಹ ಮಾತೃವಾತ್ಸಲ್ಯವನ್ನು ಪುರುಷ ಪ್ರಧಾನ ಸಮಾಜವು ಹೆಣ್ಣಿನ ದೌರ್ಬಲ್ಯವನ್ನಾಗಿ ಗುರುತಿಸಿರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿಯೇ 'ಮಗುವಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು' ಎಂದು ಹೇಳಲಾಗುತ್ತದೆ. ಸ್ತ್ರೀಯರನ್ನು ಆದರ್ಶದ ಪರಿಧಿಯಲ್ಲಿ ಬಂಧಿಸಿಟ್ಟಿರುವುದು ಇದರಿಂದ ನಿಚ್ಚಳವಾಗುತ್ತದೆ.

ಗಂಡನು ಸಂಸಾರದ ಭಾರವನ್ನು ಹೊರಲಾರದೆ ಓಡಿ ಹೋಗಿದ್ದರಿಂದ ಸುಮಿತ್ರೆಯು ಮಾನಸಿಕವಾಗಿ ಕುಗ್ಗದೆ ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುತ್ತಾಳೆ. ಹೊಲ-ಗದ್ದೆಗಳಲ್ಲಿ ಬೇಸಾಯ ಮಾಡುತ್ತಾ ಮಕ್ಕಳನ್ನು ಬೆಳೆಸುತ್ತಾಳೆ, ತಂದೆಯಿಲ್ಲ ಎಂಬ ಕೊರಗು ಬಾರದಂತೆ ಮುತುವರ್ಜಿ ವಹಿಸುತ್ತಾಳೆ. ಹೆಣ್ಣಿನಿಂದ ಸೇವೆ, ತ್ಯಾಗ, ಕರುಣೆ, ಪ್ರೀತಿಗಳನ್ನೇ ಪಡೆಯುತ್ತಾ ಬಂದ ಸಮಾಜದಲ್ಲಿ ಕಾರಂತರೂ ಒಬ್ಬರು. ಇದರಿಂದಾಗಿಯೇ ಶಿವರಾಮ ಕಾರಂತರು ಮಾನವೀಯ ಮೌಲ್ಯಗಳ ಪ್ರತಿಪಾದನೆಯನ್ನು ಸ್ತ್ರೀ ಪಾತ್ರಗಳ ಮುಖಾಂತರ ಮಾಡಿರುವುದು ದೃಢವಾಗುತ್ತದೆ.

"ಪತ್ನಿ ತನ್ನ ಗಂಡನ ಜೊತೆಯಲ್ಲಿ ವಾಸಿಸುವುದು ಕಡ್ಡಾಯ ಮತ್ತು ಅವಳು ಅವನ ಅಧಿಕಾರಕ್ಕೆ ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು. ಅವನ ರಕ್ಷಣೆಯಲ್ಲಿರುವುದು ಪತ್ನಿಯ ಮೊದಲ ಕರ್ತವ್ಯ" ಎಂಬ ಮನುವಿನ ಅಭಿಪ್ರಾಯವನ್ನು 'ಕರುಳಿನ ಕರೆ' ಕಾದಂಬರಿಯಲ್ಲಿ ಭಾಗೀರಥಿಯ ಪಾತ್ರದಿಂದ ತಿರಸ್ಕರಿಸಲಾಗಿದೆ. ಭಾಗೀರಥಿಯು ಸುಬ್ರಾಯನ ಹೆಂಡತಿ. ಅವಳದು ಆರ್ಥಿಕವಾಗಿ ಸದೃಢವಾದ ಕುಟುಂಬ. ಆದರೆ ಭಾಗೀರಥಿಯ ತಂಗಿ ಗಂಗೆಯದು ಬಡತನದ ಸಂಸಾರವಾಗಿತ್ತು. ಅವಳ ಗಂಡ ಹಿರಣ್ಯನು ಆರ್ಥಿಕವಾಗಿ ಕಂಗಾಲಾದಾಗ ಸುಬ್ರಾಯನಿಂದ ಐದುಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆಯುತ್ತಾನೆ. ಸಾಲ ತೀರಿಸಲು ವಿಳಂಬವಾದಾಗ ಅವರೀರ್ವರ ಮಧ್ಯ ದ್ವೇಷ ಉಲ್ಬಣಿಸುತ್ತದೆ. ಇದರಿಂದ ಗಂಗೆ-ಭಾಗೀರಥಿಯರಿಬ್ಬರೂ ಕಳವಳಕ್ಕೀಡಾಗುತ್ತಾರೆ. ಬಡತನದಲ್ಲಿದ್ದ ತಂಗಿಯ ಗಂಡನಿಗೆ ಸಾಲ ತೀರಿಸಲು ಆಗದು ಎಂಬುದನ್ನು ಮನಗಂಡ ಭಾಗೀರಥಿಯು ತಂಗಿಯ ಸಂಸಾರವನ್ನು ರಕ್ಷಿಸಲು ಸಾಲ ತೀರಿಸಲು ಯೋಚಿಸುತ್ತಾಳೆ. ತನ್ನ ವರದಕ್ಷಿಣೆಯಿಂದ ಬಂದ ಭೂಮಿ ಗಂಡನಿಗೆ ಸೇರುತ್ತದೆಯಾದರೂ ಅದು ತನ್ನದು ಎಂಬ ಅಧಿಕಾರದಿಂದ ಅದನ್ನು ಮಾರಿ ಹಿರಣ್ಯನ ಸಾಲವನ್ನು ತೀರಿಸುವಲ್ಲಿ ಎದೆಗಾರಿಕೆಯನ್ನು ಮೆರೆಯುತ್ತಾಳೆ. 'ಹಿಂದೂ ಉತ್ತರಾಧಿಕಾರ ಕಾನೂನು' (೧೯೫೬) ಅನ್ವಯ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀಯರಿಗೂ ಸಮಪಾಲು ಸಿಗಬೇಕು ಎಂಬ ಕಾದಂಬರಿಕಾರರ ಮುಂದಾಲೋಚನೆಯ ಅರಿವು ಆಗುತ್ತದೆ. ಏಕೆಂದರೆ 'ಕರುಳಿನ ಕರೆ' (೧೯೪೯) ಕಾದಂಬರಿ ಪ್ರಕಟವಾದ ಸಮಯದಲ್ಲಿ ಈ ಕಾನೂನು ಅಸ್ತಿತ್ವದಲ್ಲಿರಲಿಲ್ಲ. ಸಮಕಾಲೀನ ವಿಚಾರಗಳ ನೆಲೆಯಿಂದ ಕಾರಂತರು ಸಮಸ್ಯೆಗಳಿಗೆ ಸ್ಪಂದಿಸುವುದನ್ನು ಕಾಣಬಹುದು. ತನ್ನ ಹೆಂಡತಿ ತನಗೆ ವಿರುದ್ಧವಾಗಿ ಹಿರಣ್ಯನ ಪರವಾಗಿ ಸಾಲ ತೀರಿಸಿದ್ದರಿಂದ ಸುಬ್ರಾಯನು ಕೋಪಗೊಳ್ಳುತ್ತಾನೆ. ಇದರಿಂದ ಅವರ ಸುಖಿ ಸಂಸಾರ ಛಿದ್ರವಾಗುತ್ತದೆ. ಇದರಿಂದಾಗಿ ಅವಳು ತವರು ಮನೆಯಲ್ಲಿಯೇ ಉಳಿಯುತ್ತಾಳೆ. ಶ್ಯಾಮನು ತಾಯಿಯನ್ನು ತುಂಬ ಪ್ರೀತಿಸುತ್ತಿದ್ದರಿಂದ ತಾಯಿಯೊಂದಿಗೆ ಉಳಿಯುತ್ತಾನೆ.

ಶ್ಯಾಮನು ಸೋಮಾರಿಯಾಗಿದ್ದು ಯಾವುದೇ ಕೆಲಸಗಳನ್ನು ಮಾಡುತ್ತಿರಲಿಲ್ಲ. ತನ್ನ ಖರ್ಚಿಗಾಗಿ ಬೇರೆಯವರಲ್ಲಿ ಸಾಲ ಮಾಡಿ ತಿರುಗಾಡುತ್ತಿದ್ದನು. ಜವಾಬ್ದಾರಿಯೆಂಬುದೇ ಅವನಿಗಿರಲಿಲ್ಲ. ಇದರಿಂದಾಗಿ ಅವನ ಹೆಂಡತಿ ಹಾಗೂ ಭಾಗೀರಥಿಯರು ತುಂಬಾ ವ್ಯಾಕುಲಕ್ಕೊಳಗಾಗುತ್ತಾರೆ. ಶ್ಯಾಮನು ತಾಯಿ ಮತ್ತು ಹೆಂಡತಿಯನ್ನು ಬಿಟ್ಟು ಊರನ್ನು ತೊರೆದು ಪಲಾಯನ ಮಾಡಿದಾಗ ಭಾಗೀರಥಿಯು ತುಂಬಾ ದುಃಖಿಸುತ್ತಾಳೆ. ಆದರೆ ಚಿಂತೆಯಿಂದ ಜೀವನ ಸಾಗದು ಎಂಬುದನ್ನು ಅರಿತ ಭಾಗೀರಥಿಯು ತನ್ನ ಸೊಸೆಯನ್ನು ಸಂತೈಸುತ್ತಾಳೆ. ಅವಳೊಂದಿಗೆ ಹೊಲಗದ್ದೆಗಳಲ್ಲಿ ಬೇಸಾಯ ಮಾಡುತ್ತ ಅವಳಿಗೆ ಬೆಂಗಾವಲಾಗಿ ನಿಲ್ಲುತ್ತಾಳೆ.

ವೆಂಕಮ್ಮ ಹಿರಣ್ಯನ ಸಹೋದರಿ. ಚಿಕ್ಕಂದಿನಲ್ಲಿಯೇ ಗಂಡನನ್ನು ಕಳೆದುಕೊಂಡು ಅಣ್ಣನ ಆಶ್ರಯವನ್ನು ಪಡೆದಿದ್ದಳು. ಹಿರಣ್ಯನು ಮರಣ ಹೊಂದಿದಾಗ ತನ್ನ ಮುಂದಿನ ಬದುಕಿನ ಬಗೆಗೆ ಎದೆಗುಂದದೆ ಬೇಸಾಯವನ್ನು ಮಾಡುತ್ತಾಳೆ. ತನ್ನ ಮಗ ಲಕ್ಷ್ಮಣನು ಮನೆ ಬಿಟ್ಟು ಓಡಿ ಹೋದರೂ ಜೀವನದಿಂದ ವಿಮುಖಳಾಗದೆ, ಛಲದಿಂದ ಜೀವನವನ್ನು ಸಾಗಿಸುತ್ತಾಳೆ. ಅವಳು ಆಶಾವಾದಿಯಾಗಿದ್ದು ಜೀವನದ ಬಗೆಗೆ ಪ್ರೀತಿಯನ್ನು ಹೊಂದಿದ್ದಳು. ಆ ಪ್ರೀತಿಯೇ ಅವಳ ಬದುಕಿಗೆ ಪೂರಕವಾಗಿದ್ದು, ಅವಳಲ್ಲಿ ಜೀವನ ಶ್ರದ್ದೆಯನ್ನು ಬೆಳೆಸಿತ್ತು.

ಗಂಡನನ್ನು ಕಳೆದುಕೊಂಡ ಹಾಗೂ ಗಂಡನಿಂದ ದೂರವುಳಿದ ಇಬ್ಬರು ಸ್ತ್ರೀಯರ ಹೋರಾಟದ ಬದುಕು 'ಕರುಳಿನ ಕರೆ' ಕಾದಂಬರಿಯಲ್ಲಿದೆ.

ಪುರುಷನ ಪ್ರಗತಿಯಲ್ಲಿ ಕುಟುಂಬದ ಪಾತ್ರ ತುಂಬ ಮಹತ್ವದ್ದು. ಕುಟುಂಬದ ನೀತಿ-ನಿಯಮಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಅವರ ಆಚಾರ-ವಿಚಾರಗಳಲ್ಲಿ, ಉಡುಗೆ ತೊಡುಗೆಗಳಲ್ಲಿ, ಆಹಾರ ಪದಾರ್ಥಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ನಿಸರ್ಗದ ಮಕ್ಕಳಾದ ಮಲೆಕುಡಿಯರ ಜೀವನ ವಿಧಾನ, ಅವರ ನಡೆ ನುಡಿಗಳಲ್ಲಿನ ವೈವಿಧ್ಯತೆಯನ್ನು 'ಕುಡಿಯರ ಕೂಸು' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಈ ಕಾದಂಬರಿಯು ಕಾಡು ಮತ್ತು ಮಾನವನ ಸಂಬಂಧವನ್ನು ಪರಿಶೋಧಿಸುತ್ತದೆ. ಮಲೆಕುಡಿಯರು ನಾಗರೀಕತೆಯ ಸಮಾಜಕ್ಕಿಂತ ತುಸು ಭಿನ್ನವಾದ ರೀತಿಯಲ್ಲಿ ಬಾಳ್ವೆ ಮಾಡುತ್ತಿದ್ದರು. ಬೇಟೆ, ಬೇಸಾಯದ ದುಡಿಮೆಯಿಂದ ಬದುಕಿಗೆ ಬೇಕಾದ ಪ್ರತಿಯೊಂದು ವಸ್ತುವನ್ನು ಪಡೆದು ಕೊಳ್ಳುತ್ತಿದ್ದರು.

ಮಲೆಕುಡಿಯರಲ್ಲಿ ಬಹುಪತ್ನಿತ್ವ ಹಾಗೂ ಬಹುಪತಿತ್ವ ಪದ್ಧತಿಗಳು ಜಾರಿಯಲ್ಲಿದ್ದವು. ಸ್ತ್ರೀ ಮತ್ತು ಪುರುಷರಿಗೆ ಮದುವೆಯ ಯಾವುದೇ ಬಂಧನವಿರಲಿಲ್ಲ, ಎರಡು-ಮೂರು ಮದುವೆಗಳಾಗಲು ಇಬ್ಬರಿಗೂ ಸಮಾನವಾದ ಅವಕಾಶವಿತ್ತು. ಕಾದಂಬರಿಕಾರರು ಮದುವೆಯನ್ನು ಬಂಧನವನ್ನಾಗಿಸದೆ ಬಾಂಧವ್ಯವನ್ನಾಗಿಸಲು ಪ್ರಯತ್ನಿಸಿದ್ದಾರೆ. ಏಕೆಂದರೆ ಕೆಂಪಿ ತುಕ್ರನೊಂದಿಗೆ ಹೊಂದಿಕೆಯಾಗದೆ ಇದ್ದಾಗ ಮತ್ತು ಸಂತಾನಫಲ ಲಭಿಸದೆ ಹೋದಾಗ ಬೂದನೊಂದಿಗೆ ಮದುವೆಯಾಗಲು ಇಚ್ಚಿಸುತ್ತಾಳೆ. ಮಲೆಕುಡಿಯರಲ್ಲಿ 'ಮದುವೆ' ಪವಿತ್ರವಾದ ಬಂಧನವಾಗಿರದೆ ಕೇವಲ ಒಪ್ಪಂದವಾಗಿತ್ತು. ಲೈಂಗಿಕ ದೌರ್ಬಲ್ಯ ಹಾಗೂ ಅತೀವ ಕಾಮದಾಹದಿಂದಾಗಿ ಮರು ಮದುವೆಯಾಗುತ್ತಿದ್ದರು. ಅವರಲ್ಲಿ ಮರು ಮದುವೆಗೆ ಸ್ವಾತಂತ್ರ್ಯವಿತ್ತು. ಯಾವುದೇ ತೊಡಕುಗಳಿರಲಿಲ್ಲ, ಆದರೆ ಸ್ವಾತಂತ್ರ್ಯ ಸ್ವೇಚ್ಛಾಚಾರಕ್ಕೆ ಎಡೆ ಮಾಡಿಕೊಟ್ಟರೆ ಕುಟುಂಬದಲ್ಲಿಯ ನೆಮ್ಮದಿ ಹಾಳಾಗಿ ಹೋಗಬಲ್ಲದು ಎಂಬುದನ್ನು ಸ್ತ್ರೀ ಪಾತ್ರಗಳ ಮುಖಾಂತರ ಚಿತ್ರಿಸಲಾಗಿದೆ.

ಸಾಮಾಜಿಕ ವ್ಯವಸ್ಥೆಯು ಹೆಣ್ಣಿಗೆ ತಾಯ್ತನ ಅನಿವಾರ್ಯವಾದುದು ಎಂಬ ಮೌಲ್ಯವನ್ನು ರೂಪಿಸಿದೆ. ಆದ್ದರಿಂದಲೇ ಮಕ್ಕಳ ಸಲುವಾಗಿ ಹೆಣ್ಣಿನ ಮನಸ್ಸು ತುಂಬ ತುಡಿಯುತ್ತಿರುತ್ತದೆ. ತಮಗೆ ಮಕ್ಕಳಾಗದೆ ಇದ್ದಾಗ ಮತ್ಸರದಿಂದಾಗಿ ಅಷ್ಟೇ ಕೆಡುಕನ್ನು ಬಯಸುತ್ತದೆ ಎಂಬುದು ಕೆಂಪಿಯ ಪಾತ್ರದ ಮೂಲಕ ಸ್ಪಷ್ಟವಾಗುತ್ತದೆ. ಇಂಥಹ ಪಾತ್ರ 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮೆ ಪಾತ್ರದಿಂದಲೂ ತಿಳಿಯುತ್ತದೆ. ಆದರೆ 'ಮರಳಿ ಮಣ್ಣಿಗೆ' ಕಾದಂಬರಿಯ ಪಾರ್ವತಿಯಂಥವರು ಇದಕ್ಕೆ ಅಪವಾದವಾಗಿದ್ದಾರೆ. ಇದರಿಂದ ಸ್ತ್ರೀಯರ ವೈವಿಧ್ಯತೆಯ ನಿಲುವು ಅರಿವಾಗುತ್ತದೆ.

[illegible]

'ಒಡಹುಟ್ಟಿದವರು' ಕಾದಂಬರಿಯಲ್ಲಿ ಒಡಹುಟ್ಟಿದ ಇಬ್ಬರು ಸಹೋದರಿಯರು ವಿಭಿನ್ನವಾದ ಗುಣಗಳನ್ನು ಹೊಂದಿರುವುದನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ವಾಸಂತಿಯು ಪರಿಸ್ಥಿತಿಯೊಂದಿಗೆ ಸೆಣಸಾಡದೆ ರಾಜಿಯಾಗುತ್ತಿದ್ದಳು. ಆದರೆ ಶೇವಂತಿಯು ಯಾವುದರ ಬಗೆಗೂ ತಿಳಿದುಕೊಳ್ಳಲಾರದೆ ಒಪ್ಪಿಕೊಳ್ಳುತ್ತಿರಲಿಲ್ಲ, ಇವಳು ವಾಸಂತಿಗಿಂತಲೂ ರೂಪವತಿಯೂ ಹಾಗೂ ಚುರುಕು ಬುದ್ಧಿಯವಳೂ ಆಗಿದ್ದಳು. ತನ್ನ ಮನೆಯಲ್ಲಿ ತನಗೆ ವಿದ್ಯಾಭ್ಯಾಸಕ್ಕೆಂದು ದುಡ್ಡು ನೀಡದೆ ಇದ್ದಾಗ ಹಾಗೂ ಪ್ರೋತ್ಸಾಹ ದೊರೆಯದೆ ಇದ್ದಾಗ 'ಭಾವನಿಗೆ ಓದಿಸಲು ದುಡ್ಡಿದೆ; ನನಗಿಲ್ಲವೆ?' ಎಂದು ಪ್ರತಿಭಟಿಸುತ್ತಾಳೆ. ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಹಕ್ಕಿದೆ ಎಂಬ ಕಾನೂನು ಇನ್ನೂ ಜಾರಿಗೆ ಬಂದಿರಲಿಲ್ಲವಾದರೂ ತನ್ನ ಹಕ್ಕನ್ನು ಬೇಡುವ ಶೇವಂತಿಯ ಪಾತ್ರ ಪ್ರಗತಿಪರ ಧೋರಣೆಯಿಂದ ಕೂಡಿದೆ. ಆದರೆ ಸೌಕರ್ಯ, ಸೌಲಭ್ಯಕ್ಕಾಗಿ ಪ್ರತಿಭಟನೆ ಮಾಡುವ ಶೇವಂತಿಯ ಪಾತ್ರದಲ್ಲಿ ಗಟ್ಟಿತನವಿಲ್ಲ, ಅವಳು ಚಂಚಲ ಹಾಗೂ ಆಡಂಬರದ ಸ್ವಭಾವವನ್ನು ಹೊಂದಿದ್ದಳು.

"ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು" ಎಂಬ ಗಾದೆ ಮಾತನ್ನು ಸತ್ಯಭಾಮೆಯ ಪಾತ್ರದ ಹಿನ್ನೆಲೆಯಲ್ಲಿ 'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ನೆನಪಿಸಿಕೊಳ್ಳಬಹುದು. ಊರೂರು ಅಲೆಯುವ ಮಗನಿಗೆ ಒಂದು ಮದುವೆ ಮಾಡಿಸಿದರೆ ಹೆಂಡತಿಯ ಜೊತೆಯಲ್ಲಿರುತ್ತಾನೆ ಎಂಬ ಸಾಂಪ್ರದಾಯಿಕ ನಂಬಿಕೆಯನ್ನು ಹೊಂದಿದ್ದ ಸಾವಿತ್ರಮ್ಮ ತನ್ನ ಮಗ ಸುಬ್ರಾಯನ ಮದುವೆಯನ್ನು ಸತ್ಯಭಾಮೆಯೊಂದಿಗೆ ಮಾಡಿಸುತ್ತಾಳೆ. ಸೊಸೆಯನ್ನು ಅಕ್ಕರೆಯಿಂದ ಕಾಣುತ್ತ, ಅವಳನ್ನು ಮನೆಗೆ ಬಂದ 'ಮಂಗಳ ಗೌರಿ' ಎಂಬಂತೆ ಉಪಚರಿಸುತಿದ್ದಳು. "ನಮ್ಮ ಸಮಾಜದಲ್ಲಿ ತಾಳಿ ಕಟ್ಟಿದವನು ಅರಿತು ಪ್ರೀತಿಸಿ ನಡೆಯುವ ಸ್ನೇಹಿತನಾಗದೆ ಪತಿದೇವನಾಗಿ ಪರಿಣಮಿಸುತ್ತಾನೆ" ಎಂಬ ವಿಜಯಶ್ರೀ (೨೦೦೩, ೧೪)ಯವರ ಹೇಳಿಕೆಯು ಪುರುಷ ಪ್ರಧಾನ ಸಮಾಜದ ನಿಲುವನ್ನು ಬಿಂಬಿಸುತ್ತದೆ. ಸುಬ್ರಾಯನು ಹೆಂಡತಿ ಸತ್ಯಭಾಮೆಯೊಂದಿಗೆ ಪ್ರೀತಿಯಿಂದ ಇರದೆಯೂ ಅವಳ ಪಾಲಿಗೆ ಪತಿದೇವನಾಗಿರುತ್ತಾನೆ. ಹುದ್ದೆಯ ನೆಪದಿಂದ ಮುಂಬೈ ಸೇರುತ್ತಾನೆ. ವಿಷಯಲಂಪಟತನದಿಂದ ಹೆಂಡತಿಯನ್ನು ಮರೆತು ಮುಂಬೈ ನಗರದಲ್ಲಿ ಸುಖಭೋಗದ ಜೀವನವನ್ನು ಸಾಗಿಸುತ್ತಾನೆ. ಇದರಿಂದ ಹತಾಶಳಾದ ಸತ್ಯಭಾಮೆಯು ತನ್ನೆಲ್ಲ ನೋವನ್ನು ಮನೆಯ ಕೆಲಸದಲ್ಲಿ ಮರೆಯುತ್ತಾಳೆ. "ನಾರಿ ಪ್ರೀತಿಯ ಆದರ್ಶವನ್ನು ಪಾಲಿಸಿದಷ್ಟು ಪುರುಷ ಮಾಡಲಾರ, ಏಕೆಂದರೆ ಅವನ ಪ್ರೀತಿಯ ಜೊತೆಗೆ ಕಾಮವೂ ಸೇರಿಕೊಂಡಿರುತ್ತದೆ" ಎಂಬುದು ಪ್ರೇಮಚಂದರ ಅಂಬೋಣ. ಏಕೆಂದರೆ ಸತ್ಯಭಾಮೆ ಗಂಡನಿಂದ ದೂರವಿದ್ದರೂ ಅವನ ಬರುವಿಕೆಗಾಗಿ ಕಾಯುತ್ತಿದ್ದಳು. ಕಾಯುತ್ತಾ ಅವನ ಪ್ರೀತಿಗಾಗಿ ಹಂಬಲಿಸುತ್ತಿದ್ದಳು. ಆದರೆ ಸುಬ್ರಾಯ ಮಾತ್ರ ಸತ್ಯಭಾಮೆಯನ್ನು ಅಷ್ಟೊಂದು ಪ್ರೀತಿಸುತ್ತಿರಲಿಲ್ಲ.

ಸತ್ಯಭಾಮೆಯು ಗರ್ಭಿಣಿಯೆಂದು ತಿಳಿದು ಸಾವಿತ್ರಮ್ಮ ತುಂಬ ಸಂತೋಷಗೊಳ್ಳುತ್ತಾಳೆ. ಅವಳನ್ನು ಉತ್ತಮ ರೀತಿಯಲ್ಲಿ ಆರೈಕೆ ಮಾಡುವಳು. ಅವಳಿಗೆ ಹುಟ್ಟಿದ ಮಗು ಆರು ಬೆರಳಿನದು ಹಾಗೂ ನೀಲಿಗಣ್ಣಿನದು ಎಂದು ತಿಳಿದಾಗ ವಿಚಲಿತಳಾಗುವಳು. ಇದರಿಂದ ತನ್ನ ಸೊಸೆಯ ಶೀಲದ ಬಗ್ಗೆ ಅನುಮಾನವನ್ನು ಪಡುವಳು. ತಮ್ಮ ಮನೆಗೆ ಆಗಾಗ ಬರುತಿದ್ದ ನಾಗೇಂದ್ರನೊಂದಿಗೆ ಸತ್ಯಭಾಮೆಯ ಸಂಬಂಧವಿರಬಹುದೆಂದು ತರ್ಕಿಸುತ್ತಾಳೆ. ಕಾಕತಾಳಿಯ ಎಂಬಂತೆ ನಾಗೇಂದ್ರನೂ ಕೂಡ ಆರು ಬೆರಳುಗಳನ್ನು ಹಾಗೂ ನೀಲಿಕಣ್ಣುಗಳನ್ನು ಹೊಂದಿದ್ದನು.

ಅತ್ತೆಯ ಅನುಮಾನಕ್ಕೆ ಬಲಿಯಾದ ಸತ್ಯಭಾಮೆಯು ತವರುಮನೆಯಲ್ಲಿಯೇ ಉಳಿಯುವಂತಾಗುತ್ತದೆ. ಸಾವಿತ್ರಮ್ಮ ತನ್ನ ಮಗನಿಗೆ ಸೊಸೆಯ ಶೀಲವನ್ನು ಶಂಕಿಸುತ್ತಾ ಕಠೋರವಾದ ಪತ್ರವನ್ನು ಬರೆಯುತ್ತಾಳೆ. ಮೊದಲೇ ಪತ್ನಿಯಿಂದ ದೂರವುಳಿದಿದ್ದ ಸುಬ್ರಾಯನು ಪತ್ರದ ಸಾರಾಂಶವನ್ನು ಕುರಿತು ಸತ್ಯಾಂಶವನ್ನು ತಿಳಿಯಲು ಪ್ರಯತ್ನಿಸದೆ, ಅದನ್ನೇ ನಿಜವೆಂದು ತಿಳಿಯುತ್ತಾನೆ. ಹೆಂಡತಿಯನ್ನು ಸಂಪೂರ್ಣವಾಗಿ ತೊರೆಯುತ್ತಾನೆ.

ಸತ್ಯಭಾಮೆಯು ತನ್ನದಲ್ಲದ ತಪ್ಪಿನಿಂದಾಗಿ ಕಳಂಕಿತೆಯ ಆರೋಪವನ್ನು ಹೊರಬೇಕಾಗುತ್ತದೆ. ಗಂಡ ಅತ್ತೆಯರಿಂದ ದೂರವಾಗಿ ತವರುಮನೆಯಲ್ಲಿಯೇ ಉಳಿಯುವಂತಾಗುತ್ತದೆ. ಅನುವಂಶಿಕವಾದ ಸಂಬಂಧವು ಅವಳ ಜೀವನವನ್ನೇ ಹಾಳು ಮಾಡುತ್ತದೆ. ತವರು ಮನೆಯಲ್ಲಿ ತಾನು ಯಾರಿಗೂ ಭಾರವಾಗಬಾರದೆಂದು ಭಾವಿಸಿ ಅವರ ಜೊತೆ ಸೇರಿ ಬೇಸಾಯದಲ್ಲಿ ಪಾಲ್ಗೊಳ್ಳುತ್ತಾಳೆ. ಕೆಲವೊಮ್ಮೆ ಆರೋಪದಿಂದ ವಿಚಲಿತಳಾಗಿ ಮಗುವಿನೊಂದಿಗೆ ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲವಾಗುತ್ತಾಳೆ. ಏಕೆಂದರೆ ತಾಯಿಯೊಂದಿಗಿನ ಮಗುವಿನ ಸಂಬಂಧ ಆಳವಾಗಿರುತ್ತದೆ. ಆ ಮಗುವಿನ ಸನಿಹದಿಂದಲೇ ತಾಯಿಯಾದವಳು ತೃಪ್ತಿಯನ್ನು ಪಡೆಯುತ್ತಾಳೆ. ಸತ್ಯಭಾಮೆ ಮಗುವಿನ ಸಲುವಾಗಿ ಬದುಕುವುದು ಸಮರ್ಥನೀಯವೆನಿಸುತ್ತದೆ ಎಂಬುದರ ಚಿತ್ರಣ ಕಾದಂಬರಿಯಲ್ಲಿದೆ. 'ಕಾಲವು ಎಲ್ಲವನ್ನೂ ನಿರ್ಧರಿಸುತ್ತದೆ' ಎಂಬ ವೇದಾಂತದಂತೆ ಸಾವಿತ್ರಮ್ಮಗೆ ತನ್ನ ಸೊಸೆ ಶೀಲಗೆಟ್ಟವಳಲ್ಲ ಎಂಬುದು ಮನವರಿಕೆಯಾಗುತ್ತದೆ. ಅನುವಂಶಿಕತೆಯಿಂದಲೂ ಇಂಥಹ ಮಕ್ಕಳು ಹುಟ್ಟುವ ಸಾಧ್ಯತೆಯಿದೆ ಎಂಬುದನ್ನು ಮನಗಾಣುವಳು. ತನ್ನ ಬಿಗುಮಾನ, ಬಿನ್ನಾಣಗಳನ್ನು ಬಿಟ್ಟು ಪಶ್ಚಾತ್ತಾಪದಿಂದ ಮರುಗುವಳು. ಸತ್ಯಭಾಮೆಯಲ್ಲಿಗೆ ಹೋಗಿ ಕ್ಷಮೆಯಾಚಿಸುವಳು. ಕ್ಷಮೆಯಾಚಿಸುತ್ತಲೇ ಸತ್ಯಭಾಮೆಯ ತೊಡೆಯ ಮೇಲೆ ಸಾವನ್ನಪ್ಪುವಳು. ಆದರೆ ಸಾವಿತ್ರಮ್ಮಳ ಪಶ್ಚಾತ್ತಾಪದಿಂದ ಸತ್ಯಭಾಮೆ ಮತ್ತು ಸುಬ್ರಾಯ ಮತ್ತೇ ಒಟ್ಟಿಗೆ ಸೇರಲಾಗುವುದಿಲ್ಲ. ತನ್ನ ಅತ್ತಿಗೆಯ ಸಹೋದರ ವಿನಾಯಕನೊಂದಿಗೆ ಮದುವೆಯಾಗುತ್ತಾಳೆ.

ಹಾಳಾಗಿದ್ದ ತನ್ನ ಜೀವನವನ್ನು ಪ್ರಗತಿಪರ ಧೋರಣೆ ಹಾಗೂ ವಿವೇಚನೆಯಿಂದ ಸತ್ಯಭಾಮೆಯು ಸುಂದರಗೊಳಿಸುತ್ತಾಳೆ. ಗಂಡ ಬದುಕಿರುವಾಗಲೇ ಮತ್ತೊಂದು ಮದುವೆಯಾಗಿ ಸುಖವಾದ ಜೀವನವನ್ನು ಸಾಗಿಸುತ್ತಾಳೆ. ಮಗುವಿನ ಜನನಕ್ಕೆ ಕೇವಲ ತಂದೆ ತಾಯಂದಿರು ಮಾತ್ರ ಕಾರಣರಾಗುವುದಿಲ್ಲ. ಮಗುವಿನ ರೂಪ, ಗುಣಗಳು ಅನುವಂಶಿಕತೆಯಿಂದಲು ಬರುವ ಸಾಧ್ಯತೆಯಿರುತ್ತದೆ ಎಂಬ ವೈಜ್ಞಾನಿಕ ಸತ್ಯವನ್ನು ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ. ಸಂಸಾರದಲ್ಲಿ ಶೀಲದ ಬಗ್ಗೆ ಅನುಮಾನ ಉಂಟಾದರೆ ಅವರ ಸಂಸಾರವೇ ನರಕವಾಗುತ್ತದೆ ಎಂಬುದು ಕಾದಂಬರಿಯ ನಿಲುವಾಗಿದೆ.

ಮರುಮದುವೆಯ ಸಾಧ್ಯ-ಅಸಾಧ್ಯತೆಗಳನ್ನು ಕುರಿತಂತೆ ಸಮಕಾಲೀನ ಸಾಹಿತ್ಯ ಕೃತಿಗಳಲ್ಲಿಯೂ ಗುರುತಿಸಬಹುದಾಗಿದೆ.

ತ್ರಿವೇಣಿಯವರ 'ದೂರದ ಬೆಟ್ಟ' (೧೯೫೫) ಕಾದಂಬರಿಯಲ್ಲಿ 'ಹೆಣ್ಣಿಗೆ ಒಂದೆ ಬಾರಿ ಮದುವೆ' ಎಂಬ ಸಂಪ್ರದಾಯ ನಿಲುವನ್ನು ಪೋಷಿಸಿಕೊಂಡು ಬರಲಾಗಿದೆ. ಸುನಂದ ಚಿಕ್ಕವಯಸ್ಸಿನಲ್ಲಿ ವಿಧವೆಯಾಗಿದ್ದರೂ ಮರುಮದುವೆಯಾಗುವಲ್ಲಿ ಸೋಲುತ್ತಾಳೆ.

ವಿಧವಾ ವಿವಾಹದ ಕುರಿತು ತ್ರಿವೇಣಿ ಹಾಗೂ ಕಾರಂತರಲ್ಲಿ ಭಿನ್ನತೆಯಿರುವುದು ಸ್ಪಷ್ಟವಾಗಿದೆ. ತ್ರಿವೇಣಿಯವರು ಭಾರತೀಯ ಆಚಾರ, ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಕಾರಂತರು ಭಾರತೀಯ ಆಚಾರ, ವಿಚಾರಗಳಲ್ಲಿಯೇ ಆಧುನಿಕತೆಯನ್ನು ಗುರುತಿಸಿರುವುದು ತಿಳಿಯುತ್ತದೆ. ಈ ನಿಟ್ಟಿನಲ್ಲಿ ಕಾರಂತರು ತ್ರಿವೇಣಿಯವರಿಗಿಂತ ವಿಶಿಷ್ಟವಾಗಿಯೂ ಹಾಗೂ ಭಿನ್ನವಾಗಿಯೂ ಆಲೋಚಿಸುತ್ತಾರೆ.

ಕೇವಲ 'ವಿವಾಹ'ದ ಶಾಸ್ತ್ರದಿಂದ ಸ್ತ್ರೀ ಪುರುಷರು ಗಂಡ ಹೆಂಡತಿಯಾಗಲಾರರು. ಅದು ಪರಸ್ಪರ ಪ್ರೀತಿ, ವಿಶ್ವಾಸ, ಹೊಂದಾಣಿಕೆ, ನಂಬಿಕೆ, ತಿಳುವಳಿಕೆ ಹಾಗೂ ಅವಲಂಬನೆಯಿಂದ ಸಾಧ್ಯವಾಗುತ್ತದೆ ಎಂಬುದರ ಚಿಂತನೆ 'ಕೇವಲ ಮನುಷ್ಯರು' ಕಾದಂಬರಿಯ ವಿಷಯವಾಗಿದೆ. 'ಶೀಲ ಹೆಣ್ಣಿಗೆ ತುಂಬ ಪವಿತ್ರವಾದುದು' ಎಂಬುದು ಭಾರತೀಯ ಸ್ತ್ರೀಯರ ಬಲವಾದ ನಂಬಿಕೆಯಾಗಿದೆ. ಗಾಂಧೀಜಿಯಂಥಹ ಸಮಾಜ ಸುಧಾರಕರೂ ಸಹ 'ಶೀಲ ಶುದ್ಧತೆಗಳೇ ಸ್ತ್ರೀಯ ಆಭರಣ' ಎಂದು ಹೇಳಿರುವುದು (ಶಿವರಾಜಪ್ಪ (ಸಂ) ೨೦೦೬-೧೩೩) ಸನಾತನ ಧರ್ಮದ ಹಿನ್ನೆಲೆಯಲ್ಲಿಯೆ. ಇದರಿಂದಾಗಿಯೇ ಶೀಲದ ಹೆಸರಿನಲ್ಲಿ ಹೆಣ್ಣಿನ ಶೋಷಣೆಯು ನಡೆಯುತ್ತಿದೆ. ಕಾವೇರಿಯು ತನ್ನ ಗಂಡನು ತನ್ನ ಶೀಲವನ್ನು ಅನುಮಾನಿಸಿದ ಫಲವಾಗಿ ಗಂಡನನ್ನು ತೊರೆಯುತ್ತಾಳೆ. ಸಮಾಜದ ನಿಲುವನ್ನು ಧಿಕ್ಕರಿಸಿ ಒಂಟಿಯಾಗಿ ಬದುಕುತ್ತಾಳೆ. ಉಪಜೀವನಕ್ಕಾಗಿ ಹಯವದನರಾಯರ ಮನೆಯಲ್ಲಿ ಕೆಲಸದವಳಾಗಿ ಸೇರುತ್ತಾಳೆ. ಹಯವದನರಾಯ ಹೆಂಡತಿಯಿಂದ ದೂರವಾಗಿದ್ದನು. ಕಾವೇರಿಯೂ ಗಂಡನಿಂದ ದೂರವಾಗಿದ್ದಳು. ಇಬ್ಬರು ಒಂಟಿಯಾಗಿದ್ದರು. ಅತೃಪ್ತ ಎರಡು ಜೀವಗಳಲ್ಲಿ ಪ್ರೇಮ ಅಂಕುರಿಸಿತು. ಸಮಾಜದ ನಿಯಮಗಳಿಗೆ ಪ್ರತಿರೋಧವಾಗಿ ಅವರಿಬ್ಬರು ಗಂಡ ಹೆಂಡಿರಂತೆ ಅನ್ಯೋನ್ಯರಾಗಿ ಬದುಕುತ್ತಾರೆ. ಇಳಿವಯಸ್ಸಿನಲ್ಲಿ ಸಂಸಾರ ಸುಖಮಯವೆಂಬುದನ್ನು ತೋರಿಸಿದ ಕಾವೇರಿ ತನ್ನಾಕೆಯೇ ಎಂದು ಹಯವದನರಾಯರು ಅವಳನ್ನು ಪ್ರೀತಿಸುತ್ತಿದ್ದರು.

'ವಿವಾಹ' ಎಂಬ ಸಂಪ್ರದಾಯದ ಶಾಸ್ತ್ರದಿಂದ ಸ್ತ್ರೀ ಪುರುಷರು ಗಂಡ-ಹೆಂಡತಿಯರಾಗಲು ಸಾಧ್ಯವಿಲ್ಲ. ಪರಸ್ಪರ ಹೃದಯಗಳ ಮಿಲನದಿಂದಾಗಿ ವಿವಾಹದ ಹೊರತಾಗಿಯೂ ಗಂಡ ಹೆಂಡತಿಯರಂತೆ, ಪ್ರೀತಿಯಿಂದ ಬದುಕುವುದು ಸಾಧ್ಯವಾಗುತ್ತದೆ ಎಂಬುದನ್ನು ಕಾವೇರಿ, ಹಯವದನರಾಯರ ಪಾತ್ರದಿಂದ ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

"ಹಿಂದೂ ವಿವಾಹ ಒಂದು ಸಾಮಾಜಿಕ ಒಪ್ಪಂದವಾಗಿರದೆ, ಧಾರ್ಮಿಕ ಆಚರಣೆಯಾಗಿರುವುದರಿಂದ ವಧು-ವರರ ವಿವಾಹದ ವಯಸ್ಸು ಏನೇ ಆಗಿರಲಿ ಅದಕ್ಕೆ ಹಿಂದೂ ಧರ್ಮದ ಮಾನ್ಯತೆ ಇದೆ" ಎಂಬ ಗಾಯತ್ರಿಯವರ (೧೯೯೬, ೪೮) ವಿಮರ್ಶೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದರ ಪರಿಣಾಮ, ದುಷ್ಪರಿಣಾಮ ಕುರಿತು 'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಅನುಲಕ್ಷಿಸಲಾಗಿದೆ. ಸರಸ್ವತಿ, ಮಹಾಬಲಯ್ಯ ದಂಪತಿಗಳಾಗಿದ್ದರು. ಮಹಾಬಲಯ್ಯ ಸರಸ್ವತಿಗಿಂತ ಹದಿನೈದು-ಇಪ್ಪತ್ತು ವರ್ಷ ಹಿರಿಯವನಾಗಿದ್ದನು. ಸರಸ್ವತಿಯನ್ನು ಪ್ರೀತಿಯಿಂದ ಕಾಣದೆ ದಿನನಿತ್ಯ ಹಿಂಸಿಸುತ್ತಿದ್ದನು. ಸರಸ್ವತಿಯು ತನ್ನ ಈ ದುಃಸ್ಥಿತಿಗೆ ತಂದೆ ತಾಯಿಯರೆ ಕಾರಣವೆಂದು ತಿಳಿಯುತ್ತಾಳೆ. ಅದರಿಂದಾಗಿ ಮದುವೆಯಾದ ಬಳಿಕ ಸರಸ್ವತಿ ತವರಿನ ಸಂಬಂಧವನ್ನೇ ಕಡಿದುಕೊಳ್ಳುತ್ತಾಳೆ. ತನ್ನ ಪತಿ ಕ್ರೂರಿಯೆಂಬುದನ್ನರಿತು ತಾನು ತನ್ನ ತಾಯಿಯಂತೆ ಕುಗ್ಗಿ ಬಗ್ಗಿ ದೀನಳಾಗಿ

[illegible]

ನಡೆಯಬಾರದೆಂದು ಮನಸ್ಸನ್ನು ಗಟ್ಟಿಮಾಡಿಕೊಂಡು, ಗಂಡನೊಂದಿಗೆ ದಿಟ್ಟತನದಿಂದ ಬದುಕುತ್ತಾಳೆ. 'ಸೇಡು ತೀರಿಸಿಕೊಳ್ಳುವಲ್ಲಿ ಮತ್ತು ಪ್ರೇಮಿಸುವಲ್ಲಿ ಸ್ತ್ರೀಯು ಪುರುಷನಿಗಿಂತಲು ನಿರ್ದಯಿ ಇರುತ್ತಾಳೆ' ಎಂಬ ನೀತ್ಸೆಯವರ ಹೇಳಿಕೆ ನಿಜವಾದುದು. ತನ್ನ ಗಂಡ ಸಾವನ್ನಪ್ಪಿದಾಗ ಅದೇ ಊರಿನಲ್ಲಿ, ಅದೇ ಮನೆಯಲ್ಲಿ ಜೀತದಾಳು ನಾಗಪ್ಪಯ್ಯನೊಂದಿಗೆ ಹೊಸ ಜೀವನವನ್ನು ಆರಂಭಿಸುತ್ತಾಳೆ. ಸಾಂಪ್ರದಾಯಿಕವಾಗಿ ಸಮಾಜದ ರೀತಿಗೆ ವಿರುದ್ಧವಾಗಿದ್ದರೂ ಧೈರ್ಯದಿಂದ ಮುನ್ನುಗ್ಗುತ್ತಾಳೆ.

ಭಾರತೀಯ ಸಮಾಜದಲ್ಲಿ ದಾಂಪತ್ಯ ಜೀವನದ ಕಟ್ಟು ನಿಟ್ಟುಗಳು ಬಿಗಿಯಾಗಿವೆ. ಅವುಗಳು ಕೆಲವೊಮ್ಮೆ ವ್ಯಕ್ತಿಯ ಜೀವನಕ್ಕೆ ಮಾರಕವೂ ಮತ್ತು ಅಸಹನೀಯವೂ ಆಗುತ್ತವೆ. ಇಂಥಹ ವಿಷಮ ಪರಿಸ್ಥಿತಿಯನ್ನು ಮೌನವಾಗಿ ಸಹಿಸಿಕೊಳ್ಳುವ ಸ್ತ್ರೀಯರೇ ಹೆಚ್ಚು, ಅವುಗಳನ್ನು ಕಿತ್ತೊಗೆದು ಅಥವಾ ಮೆಟ್ಟಿನಿಂತು ಹೆಣ್ಣು ತನ್ನ ಸ್ವಂತಿಕೆಯನ್ನು ಕಂಡುಕೊಳ್ಳುವುದು ತೀರಾ ಅಪರೂಪ. ಇದಕ್ಕೆ 'ಧರ್ಮರಾಯನ ಸಂಸಾರ' ಕಾದಂಬರಿಯ ಸರಸ್ವತಿಯ ಪಾತ್ರ ಉತ್ತಮ ನಿದರ್ಶನವಾಗಿದೆ.

'ಧರ್ಮರಾಯನ ಸಂಸಾರ' ಕಾದಂಬರಿಯ ಸರಸ್ವತಿಯ ಪಾತ್ರ ಹಾಗೂ ಚಂದ್ರಶೇಖರ ಕಂಬಾರ ಅವರ 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿಯ ಸಿಂಗಾರವ್ವನ ಪಾತ್ರಗಳಲ್ಲಿ ಸಾಮ್ಯತೆಯಿದೆ. ನಂದಗಾವದ ಗೌಡ ತನ್ನ ಮಗಳು ಸಿಂಗಾರವ್ವನ ಸಂತೋಷಕ್ಕಿಂತಲೂ ಪ್ರತಿಷ್ಠೆ ಹಾಗೂ ಹಣದಾಸೆಗಾಗಿ ಅವಳನ್ನು ಸರಗಂ ದೇಸಾಯಿಯೊಂದಿಗೆ ಮದುವೆ ಮಾಡಿಸುತ್ತಾನೆ. ದೇಸಾಯಿ ವಿಕೃತ ಕಾಮಿಯಾಗಿದ್ದು, ಸೂಳೆಯರ ಸಹವಾಸ ಮಾಡುತ್ತಿದ್ದನು. ಹೆತ್ತವರ ಹಣದಾಸೆ, ತಾಳಿಕಟ್ಟಿದವನ ವಿಕೃತಿ, ಬರಿದಾದ ಮಡಿಲು ಸಿಂಗಾರವ್ವನನ್ನು ಕಂಗೆಡಿಸುತ್ತದೆ. ನಂದಗಾವದ ಗೌಡನ ಮೇಲಿನ ದ್ವೇಷಕ್ಕೆ ಹೊಲೆಯ ಮರ್ಯಾ ಸಿಂಗಾರವ್ವನ ಮೇಲೆ ಆಕ್ರಮಣ ಮಾಡುತ್ತಾನೆ. ಗಂಡನ ಮೇಲಿನ ತಿರಸ್ಕಾರ, ಹತಾಶೆ, ತಂದೆಯ ಮೇಲಿನ ಹಟದಲ್ಲಿ ಮರ್ಯಾನನ್ನು ಕೂಡಿ ಮಡಿಲು ತುಂಬಿಸಿಕೊಳ್ಳುತ್ತಾಳೆ. ಆದರೆ ಮಗುವಿನೊಂದಿಗೆ ಬದುಕದೆ, ಮಗು ಹುಟ್ಟಿದೊಡನೆ ಸಾಯುತ್ತಾಳೆ.

ಸರಸ್ವತಿ ಮತ್ತು ಸಿಂಗಾರವ್ವ ಒಂದೇ ರೀತಿಯ ಸಮಸ್ಯೆಯಿಂದ ಬಳಲುತಿದ್ದರು. ಅವರಿಬ್ಬರು ತಂದೆಯ ಮೇಲಿನ ಕೋಪ, ಗಂಡನ ಮೇಲಿನ ತಿರಸ್ಕಾರದಿಂದ ಅನ್ಯರನ್ನು ಒಲಿಯುತ್ತಾರೆ. ಸರಸ್ವತಿ ನಾಗಪ್ಪಯ್ಯನೊಂದಿಗೆ ದಿಟ್ಟತನದಿಂದ ಸಂಸಾರವನ್ನು ಮಾಡಿದರೆ, ಸಿಂಗಾರವ್ವ ಮಗು ಹುಟ್ಟುತ್ತಲೇ ಸಾವನ್ನಪ್ಪುತ್ತಾಳೆ. ಸರಸ್ವತಿಯಲ್ಲಿ ಕಾಣಬಹುದಾದ ಹೋರಾಟದ ಮನೋಭಾವನೆ ಸಿಂಗಾರವ್ವನಲ್ಲಿ ಕಾಣಲಾಗುವುದಿಲ್ಲ, ಸಿಂಗಾರವ್ವ ಕೊನೆಯಲ್ಲಿ ಬದುಕಬಹುದಾಗಿತ್ತಾದರೂ, ದುರಂತವನ್ನಪ್ಪುವುದು 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿಯ ಧೋರಣೆಯಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಂಬಾರರಿಗಿಂತ ಕಾರಂತರ ನಿಲುವು ಪ್ರಗತಿಪರವೂ ಹಾಗೂ ಆಧುನಿಕವೂ ಆಗಿತ್ತು.

ಪ್ರೀತಿಯಲ್ಲಿ ಸೋತ ಸ್ತ್ರೀಯು ಹಾಗೂ ಗಂಡನಿಂದ ದೂರವಿದ್ದ ಮಹಿಳೆಯು ಸ್ವಾವಲಂಬನೆಯಿಂದ ಹೇಗೆ ಬದುಕನ್ನು ಸಾಗಿಸುತ್ತಾರೆ ಎಂಬುದನ್ನು 'ಇಳೆಯೆಂಬ' ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಜ್ವಾಲೆಯು ಶ್ಯಾಮರಾಯನನ್ನು ಪ್ರೀತಿಸಿ ಅವನೊಂದಿಗೆ ದೈಹಿಕ ಸಂಬಂಧವನ್ನು ಹೊಂದಿದ್ದಳು. ಅವನೊಂದಿಗೆ ಮದುವೆಯಾಗುವ ಕನಸನ್ನೂ ಹೊಂದಿದ್ದಳು. ಆದರೆ ಶ್ಯಾಮರಾಯನು ಬೇರೆಯವಳನ್ನು ಮದುವೆಯಾಗಿ ಅವಳಿಂದ ವಿಷಯವನ್ನು

ಮರೆಮಾಚಿದ್ದನು. ಅಪರಾಧ ಮನೋಭಾವನೆ ಅವನನ್ನು ಕಾಡುತ್ತಿದ್ದರಿಂದ ಅವಳನ್ನು ಎದುರಿಸುವ ಧೈರ್ಯ ಅವನಲ್ಲಿರಲಿಲ್ಲ, ಇದನ್ನರಿಯದ ಜ್ವಾಲೆಯು ಅವನಿಗೆ ಭೇಟಿಯಾಗಲು ಉಡುಪಿಗೆ ಹೋಗುತ್ತಾಳೆ. ಶ್ಯಾಮರಾಯನು ತನಗೆ ವಂಚನೆ ಮಾಡಿ ಬೇರೆಯವಳನ್ನು ಮದುವೆಯಾಗಿದ್ದಾನೆ ಎಂಬುದು ಗೊತ್ತಾಗುತ್ತಲೇ ತುಂಬ ಖಿನ್ನಳಾಗುತ್ತಾಳೆ. ಆದರೆ ಅದೇ ಚಿಂತೆಯಲ್ಲಿ ಬದುಕನ್ನು ಹಾಳುಗೆಡವಿಕೊಳ್ಳದೆ ಧೈರ್ಯದಿಂದ ಬ್ಯಾಂಕೊಂದರಲ್ಲಿ ಉದ್ಯೋಗ ಮಾಡುತ್ತ, ಸ್ವಾವಲಂಬನೆಯ ಜೀವನವನ್ನು ಸಾಗಿಸುತ್ತಾಳೆ.

ಅರುಂಧತಿ ಪಾಟೀಲ ಜ್ವಾಲೆಯ ಸಹೋದ್ಯೋಗಿಯಾಗಿದ್ದು ಅವಳೊಂದಿಗೆ ಒಂದೇ ಮನೆಯಲ್ಲಿ ವಾಸಿಸುತ್ತಿದ್ದಳು. ಗಂಡನಿಂದ ವಿಚ್ಛೇದನೆ ಪಡೆದು, ಅವನ ಆಶ್ರಯವಿಲ್ಲದೆ ಇಬ್ಬರು ಮಕ್ಕಳೊಂದಿಗೆ ಜೀವಿಸುತ್ತಿದ್ದಳು. 'ಹಿಂದೂ ದತ್ತು ಸ್ವೀಕಾರ ಮತ್ತು ಸಂರಕ್ಷಣಾ ಕಾನೂನು' (೧೯೫೬) ಅನ್ವಯ ಗಂಡನಿಂದ ನಿರಾಕರಣೆಗೊಂಡ ಅಥವಾ ಪರಿತ್ಯಕ್ತಳಾದ ಪತ್ನಿಗೆ ಅವನಿಂದ ಜೀವನಾಂಶ ಪಡೆಯುವ ಹಕ್ಕಿದೆ. ಇದನ್ನು ಅರುಂಧತಿ ಪಾಟೀಲಳ ಪಾತ್ರದ ಮೂಲಕ ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಗಂಡನಿಂದ ಜೀವನಾಂಶ ಪಡೆಯಲು ಕೋರ್ಟಿನ ಮೊರೆ ಹೋಗುತ್ತಾಳೆ. ಇದಕ್ಕೆ ಜ್ವಾಲೆಯು ಸಹಾಯಕಳಾಗಿ ನಿಂತು ಅವಳಲ್ಲಿ ಆತ್ಮಪ್ರತಿಷ್ಠೆ, ಸ್ವಾಭಿಮಾನ ಮೂಡಿಸುತ್ತಾಳೆ. ತನ್ನ ಸ್ನೇಹಿತ ಆನಂದರಾಯನ ಸಹಾಯದಿಂದ ಅರುಂಧತಿಗೆ ಜೀವನಾಂಶ ದೊರಕಿಸಿ ಕೊಡುವಳು. ಜ್ವಾಲೆಯು ಪ್ರಾಮಾಣಿಕವಾಗಿ ತನ್ನ ಹಿಂದಿನ ವೃತ್ತಾಂತವನ್ನೆಲ್ಲ ಆನಂದರಾಯನಿಗೆ ತಿಳಿಸಿ ಹೇಳುತ್ತಾಳೆ. ಅವನನ್ನು ಮದುವೆಯಾಗುತ್ತಾಳೆ.

ಜ್ವಾಲೆಯು ಸುಶೀಕ್ಷಿತೆಯಾಗಿದ್ದು, ಒಳ್ಳೆಯ ಉದ್ಯೋಗದಲ್ಲಿದ್ದಳು, ಶ್ಯಾಮರಾಯನ ನಯವಂಚಕತೆ, ಹೇಡಿತನಗಳಿಗೆ ಅರಿವಿಲ್ಲದೆ ಬಲಿಯಾದ ನಂತರ ತಾನು ಪಟ್ಟ ಸಂಕಟ, ಅದರಿಂದ ಹುಟ್ಟಿದ ತಿಳುವಳಿಕೆಯಿಂದ ಗಟ್ಟಿಯಾಗುತ್ತಾಳೆ. ಹೆಣ್ಣಿಗೆ ಕಾನೂನು ಪ್ರಜ್ಞೆ, ವ್ಯವಹಾರ ಜ್ಞಾನ ಇರಬೇಕು ಎಂಬುದನ್ನು ಕಾದಂಬರಿಯಲ್ಲಿ ಬಿಂಬಿಸಲಾಗಿದೆ.

ಸ್ತ್ರೀಯರಲ್ಲಿ ಪ್ರತಿರೋಧಕ ಶಕ್ತಿ ವಿಪುಲವಾಗಿದ್ದು ಧಾರಣ ಸಾಮರ್ಥ್ಯ ಹೆಚ್ಚಿರುತ್ತದೆ. ಅಂತೆಯೇ ಬಿಕ್ಕಟ್ಟಿನ ಸಂದರ್ಭದಲ್ಲಿ ಪುರುಷರಿಗಿಂತ ಸ್ತ್ರೀಯರು ಅತ್ಯಂತ ಜವಾಬ್ದಾರಿಯಿಂದ, ಹೃದಯವಂತಿಕೆಯಿಂದ ಕಾರ್ಯ ನಿರ್ವಹಿಸುವುದು ವ್ಯಕ್ತವಾಗುತ್ತದೆ ಎಂಬುದು "ಕನ್ನಡಿಯಲ್ಲಿ ಕಂಡಾತ" ಕಾದಂಬರಿಯಿಂದ ವ್ಯಕ್ತವಾಗುತ್ತದೆ. ಪರಮೇಶ್ವರಯ್ಯ, ಕಾವೇರಿ ಗಂಡ-ಹೆಂಡತಿಯರಾಗಿದ್ದರು. ಅವರ ಕುಟುಂಬ ಸುಖಕರವಾಗಿರದೆ ಅತೃಪ್ತಿಯಿಂದ ಕೂಡಿತ್ತು. ಪರಮೇಶ್ವರಯ್ಯ ವಿಷಯ ಲಂಪಟನಾಗಿದ್ದನು. ಮನೆಯಲ್ಲಿಯ ಚಿನ್ನ, ದುಡ್ಡು ಹಾಗೂ ಸೊಸೈಟಿಯ ದುಡ್ಡನ್ನು ಖರ್ಚು ಮಾಡಿದ್ದನು. ಹೆಂಡತಿಗೆ ಮುಖ ತೋರಿಸಲಾಗದೆ ಮನೆಯನ್ನು ಹಾಗೂ ಊರನ್ನು ತೊರೆದು ಹೋಗಿದ್ದನು. ಇದರಿಂದ ಕಾವೇರಿಯು ಧೃತಿಗೆಡದೆ ಧೈರ್ಯದಿಂದ ಬೇಸಾಯ ಮಾಡುತ್ತಾಳೆ. ತೋಟಕ್ಕೆ ನೀರು ಮೊಗೆಯುವುದು, ಹಟ್ಟಿಯ ಕಸ ತೆಗೆಯುವುದು, ಏರಿ ಕಡಿದು ನೀರು ಬಿಡುವುದು...... ಮುಂತಾದ ಕೆಲಸಗಳನ್ನು ಮಾಡುತ್ತಿದ್ದಳು. ಮಕ್ಕಳ ಪೋಷಣೆಯಲ್ಲಿ ದುಃಖವನ್ನು ಮರೆಯುವಳು. "ಬಡವರು ರುಚಿಕರವಾದ ಅನ್ನವನ್ನೇ ಸದಾ ಉಣ್ಣುತ್ತಾರೆ. ಏಕೆಂದರೆ ಹಸಿವು ಅನ್ನದ ರುಚಿಯನ್ನು ಹೆಚ್ಚಿಸುತ್ತದೆ" ಎಂಬ ಲೋಕೋಕ್ತಿಯಂತೆ ಸಂತೃಪ್ತಿಯುತ ಬದುಕನ್ನು ಸಾಗಿಸುತ್ತಿದ್ದಳು.

[illegible]

[illegible]

[illegible]

[illegible]

[illegible]

ಪ್ರೀತಿ ಪವಿತ್ರವಾದುದು. ಪ್ರೀತಿಸುವವರನ್ನು ತಂದೆ ತಾಯಿಯರು ಹಾಗೂ ಸಮಾಜವೂ ವಿರೋಧಿಸುತ್ತದೆ. ತಂದೆ, ತಾಯಿ, ಸಮಾಜ ವಿರೋಧಿಸುತ್ತದೆಂದು ಗೊತ್ತಿದ್ದರೂ, ಪ್ರೀತಿ ಹುಟ್ಟಿಕೊಳ್ಳುತ್ತದೆ, ಕೊನೆಯಲ್ಲಿ ಪ್ರೀತಿಗೆ ಜಯ ದೊರೆಯುತ್ತದೆ ಎಂಬ ಸಾರ್ವಕಾಲಿಕ ಸತ್ಯವನ್ನು 'ಗೆದ್ದ ದೊಡ್ಡಸ್ಥಿಕೆ' ಕಾದಂಬರಿಯು ಒಳಗೊಂಡಿದೆ. ಮೀನಾಕ್ಷಿ, ನಾಗೇಂದ್ರ ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಅವರ ಪ್ರೀತಿಯು ಪ್ರೇಮ ಪತ್ರಗಳ ರೂಪದಲ್ಲಿಯೂ ಹಾಗೂ ಅಪರೂಪಕ್ಕೊಮ್ಮೆ ಭೇಟಿಯಾದಾಗ ತೊಡಗುವ ಮಾತುಕತೆಗಳ ರೂಪದಲ್ಲಿಯೂ ಗುಪ್ತವಾಗಿತ್ತು. ಅವರ ಮನೆಯವರಿಗೆ ಇವರ ಪ್ರೀತಿಯ ವಿಷಯ ಗೊತ್ತಿರಲಿಲ್ಲ, ಮೀನಾಕ್ಷಿ ಬೇರೆಯವರನ್ನು ಮದುವೆಯಾಗಲು ಬಯಸದೆ ಮದುವೆಯನ್ನು ಬೇರೆ ಬೇರೆ ಕಾರಣಗಳಿಂದ ಮುಂದೂಡುತ್ತಿದ್ದಳು. ತನ್ನನ್ನು ಅನ್ಯರ ಮುಂದೆ ಮದುವೆಯ ಸಲುವಾಗಿ ಪ್ರದರ್ಶನದ ಗೊಂಬೆಯನ್ನಾಗಿ ಮಾಡುವುದು ಅವಳಿಗೆ ಇಷ್ಟವಿರಲಿಲ್ಲ, ಮನೆಯವರಿಗೆ ತಮ್ಮ ಪ್ರೀತಿಯ ವಿಷಯ ಗೊತ್ತಾದಾಗ ತಂದೆ, ತಾಯಿಯರನ್ನು ಎದುರು ಹಾಕಿಕೊಂಡು ನಾಗೇಂದ್ರನೊಂದಿಗೆ ಮದುವೆಯಾಗುತ್ತಾಳೆ. ತಂದೆ, ತಾಯಿಯವರಿಗೆ ಕೈಯೊಡ್ಡದೆ ಸ್ವಾಭಿಮಾನದಿಂದ ಗಂಡನೊಂದಿಗೆ ಸುಖವಾಗಿ ಬದುಕುತ್ತಾಳೆ.

ಶಿವರಾಮ ಕಾರಂತರು ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದವರಾಗಿದ್ದರೂ ಅಂತರ್ಜಾತಿ ವಿವಾಹವಾಗಿ ತಮ್ಮ ಕುಟುಂಬದ ಸದಸ್ಯರ ಕೆಂಗಣ್ಣಿಗೆ ಗುರಿಯಾಗಿದ್ದರು. ಅದರ ಪ್ರಭಾವವನ್ನು ಅವರ ಕಾದಂಬರಿಗಳಲ್ಲಿಯೂ ಗುರುತಿಸಬಹುದು. ಅಂಬೇಡ್ಕರ್, ಗಾಂಧೀಜಿಯವರೂ ಸಹ ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಿರುವುದು ಇತಿಹಾಸದಿಂದ ದೃಢವಾಗುತ್ತದೆ. ಅಂಬೇಡ್ಕರ್ ಅವರ ಅಭಿಪ್ರಾಯದಂತೆ "ಪ್ರತಿಯೊಬ್ಬ ಸ್ತ್ರೀ ಪುರುಷನನ್ನು ಈ ಜಾತಿಯ ಕಟ್ಟುಪಾಡುಗಳಿಂದ, ಶಾಸ್ತ್ರಗಳ ದಾಸ್ಯದಿಂದ ಮುಕ್ತಗೊಳಿಸಬೇಕು, ಆಗ ಅವರಿಬ್ಬರೂ ಈ ಜಾತಿಯ ಕಟ್ಟುಪಾಡುಗಳನ್ನು ಮುರಿದೊಗೆದು ಅಂತರ್ ಜಾತಿಯ ವಿವಾಹಗಳಿಗೆ ಮುಂದೆ ಬರುತ್ತಾರೆ" (ಪುನ್ನೆಪ್ಪ ೨೦೦೪, ೧೯೭) ಎಂಬುದು ಇಂದು ತುಂಬ ಪ್ರಸ್ತುತವಾಗಿದೆ. ಅಂತರ್ಜಾತಿ ವಿವಾಹ ಕುರಿತು ಗಾಂಧೀಜಿ ಅಂಬೇಡ್ಕರ್ ಹಾಗೂ ಕಾರಂತರ ಧೋರಣೆಗಳಲ್ಲಿ ಸಾಮ್ಯತೆಯಿರುವುದನ್ನು ಗುರುತಿಸಬಹುದು.

ಆಧುನಿಕ ಸ್ವಾತಂತ್ರ್ಯ ಪ್ರಿಯ ಮಹಿಳೆಯರಲ್ಲೇ ಅತ್ಯಂತ ಹೆಚ್ಚು ಮಹತ್ವಾಕಾಂಕ್ಷೆಯುಳ್ಳ ಸ್ತ್ರೀಯರ ಕುರಿತು 'ಕಣ್ಣಿದ್ದೂ ಕಾಣರು' ಕಾದಂಬರಿಯಲ್ಲಿ ಲಕ್ಷಿಸಲಾಗಿದೆ. ಸುನಾಲಿನಿ ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದಳು. ತಾನು ಸ್ವತಂತ್ರವಾಗಿ ಪರಾವಲಂಬನೆಯಿಂದ ಬದುಕಬೇಕು ಎಂಬ ಹಂಬಲವನ್ನು ಹೊಂದಿದ್ದಳು. ಮದುವೆಯಿಂದ ತನ್ನ ಸ್ಥಾನಮಾನಕ್ಕೆ ಧಕ್ಕೆ ಬರುವುದೆಂದು ಭಾವಿಸಿದ್ದಳು. ಅಂತೆಯೇ ಮದುವೆಯನ್ನು ಮುಂದೂಡುತ್ತಿದ್ದಳು. ಮುಂದೆ ಕಾಲೇಜಿನ ಪ್ರಾಚಾರ್ಯರಾದಳು. ತನ್ನ ಗುರಿಯನ್ನು ಸಾಧಿಸುವಲ್ಲಿ ನಿರ್ದಿಷ್ಟವಾದ ಉದ್ದೇಶವನ್ನು ಹೊಂದಿದ್ದಳು.

ಗಂಗಾಧರ ಅಮ್ಲಾಡಿ-ಸುನಾಲಿನಿಯರ ದಾಂಪತ್ಯ ಸಾಮರಸ್ಯದಿಂದ ಕೂಡಿರಲಿಲ್ಲ, ಇಬ್ಬರು ತಮ್ಮ ತಮ್ಮ ಪ್ರತಿಷ್ಠೆಗಳ ಸಲುವಾಗಿ ದ್ವಂದ್ವ ಅಭಿಪ್ರಾಯಗಳನ್ನು ಹೊಂದಿದ್ದರು. ಗಂಗಾಧರ ಅಮ್ಲಾಡಿ ತಾನು ಎಲ್ಲ ಗಂಡಸರಂತಲ್ಲ, ಹೆಚ್ಚಿನವ; ಬುದ್ದಿಯಲ್ಲಿ, ಯೋಗ್ಯತೆಯಲ್ಲಿ ಹಾಗೂ ಸ್ಥಾನಮಾನಗಳಲ್ಲಿ ಎಂದು ತನ್ನ ಬಗ್ಗೆ ಎಲ್ಲಿಲ್ಲದ ಹೆಚ್ಚುಗಾರಿಕೆಯನ್ನು ಹೊಂದಿದ್ದನು. ಇದರಿಂದ ಗಂಡ ಹೆಂಡತಿಯರಲ್ಲಿ ಹೊಂದಾಣಿಕೆಯಿರಲಿಲ್ಲ, ಪರಸ್ಪರ ತದ್ವಿರುದ್ಧವಾದ ಅಭಿಪ್ರಾಯಗಳನ್ನು ಹೊಂದಿದ್ದರು. ಸುನಾಲಿನಿ ತಾನು ನಾಲ್ಕು ಜನರ ನಡುವೆ ಮೆರೆಯುವ ಚಪಲವನ್ನು ಹೊಂದಿದ್ದಳು. ಅತ್ಯುಚ್ಚ ಶಿಕ್ಷಣ, ಪದವಿ, ಪ್ರತಿಷ್ಠಿತ ಉದ್ಯೋಗ, ಸಾಮಾಜಿಕ ಪ್ರತಿಷ್ಠೆ, ಸ್ಫುರದ್ರೂಪಿ, ಬೌದ್ಧಿಕ ವೈಚಾರಿಕ ಪ್ರತಿಭೆಯನ್ನು ಹೊಂದಿದ್ದಳು.

ಗಂಗಾಧರ ಅಮ್ಲಾಡಿ ಸಾವಿಗೀಡಾದಾಗ ಸುನಾಲಿನಿಯು ಸಂಪ್ರದಾಯದ ಸ್ತ್ರೀಯರಂತೆ ಅವನ ನೆನಪಿನಲ್ಲಿಯೇ ಕೊರಗುವುದಿಲ್ಲ, ಬದಲಿಗೆ ಗಣೇಶ ಕಾಸರಕನನ್ನು ಪ್ರೀತಿಸಿ ಮದುವೆಯಾಗುತ್ತಾಳೆ. ಪ್ರೌಢ ವಿಧವೆಯೂ ಸಹ ಮದುವೆಯಾಗಬಹುದು ಎಂಬುದನ್ನು ಸುನಾಲಿನಿಯ ಪಾತ್ರದಿಂದ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ವಿಧವಾ ವಿವಾಹ ಹಿಂದೂ ಸಮಾಜದಲ್ಲಿ ಸಾಮನ್ಯವಾಗುವ ಪ್ರಕ್ರಿಯೆಯಾಗಬೇಕು ಎಂಬುದನ್ನು ಸುನಾಲಿನಿಯ ಪಾತ್ರದ ಮೂಲಕ ಬಿಂಬಿಸಲಾಗಿದೆ. ಸ್ತ್ರೀಯು ಸ್ವಾವಲಂಬನೆಯ ಜೀವನವನ್ನು ಸಾಗಿಸಲು ಶಕ್ತಳಾದಾಗ ಮಾತ್ರ ಸಮಾಜದಲ್ಲಿ ಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಕಾದಂಬರಿಯಿಂದ ವ್ಯಕ್ತವಾಗುತ್ತದೆ.

ಇ. ಸಂಪ್ರದಾಯಶೀಲರು

ಕಾರಂತರ ಕಾದಂಬರಿಗಳ ಸ್ತ್ರೀ ಪ್ರಪಂಚದಲ್ಲಿ ಸಂಪ್ರದಾಯಿಕ ಗುಣಗಳನ್ನು ಹೊಂದಿದ ಸ್ತ್ರೀಯರೂ ಪ್ರಮುಖರಾಗಿದ್ದಾರೆ. ಅವರು ಬದಲಾವಣೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಪುರಾತನದಲ್ಲಿಯೇ ನಾವಿನ್ಯತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುವುದನ್ನು ಕಾದಂಬರಿಗಳಿಂದ ಸ್ಪಷ್ಟವಾಗುತ್ತದೆ.

ಸ್ತ್ರೀಯರಲ್ಲಿ ಹೆಂಡತಿ ಮತ್ತು ತಾಯಿಯ ಸ್ಥಾನ ತುಂಬ ಪವಿತ್ರವಾದುದು. ಎಷ್ಟೇ ಕಷ್ಟನಷ್ಟಗಳು ಬಂದರೂ ಸಹ ಪತ್ನಿ ಮತ್ತು ತಾಯ್ತನಕ್ಕೆ ಚ್ಯುತಿ ಬರದಂತೆ ನಡೆದುಕೊಳ್ಳುತ್ತಾರೆ. ಇಂಥಹ ಮೌಲಿಕ ಸ್ತ್ರೀಯರನ್ನು ಜನಪದ ಸಾಹಿತ್ಯದಲ್ಲಿಯೂ ಗುರುತಿಸಬಹುದು. "ಜನಪದ ಸಾಹಿತ್ಯದಲ್ಲಿ ಕಂಡು ಬರುವ ಸ್ತ್ರೀಯರು ಎಷ್ಟೇ ಕಷ್ಟ ನಷ್ಟಗಳಾದರೂ ಪಾಲಿಸಿಕೊಂಡು ಬರುವ ಆದರ್ಶಗಳಲ್ಲಿ ಪಾತಿವ್ರತ್ಯದ ನಂತರದ ಸ್ಥಾನ ತಾಯ್ತನಕ್ಕೆ ಸಲ್ಲುತ್ತದೆ" ಎಂಬುದನ್ನು ಸಂಧ್ಯಾ ರೆಡ್ಡಿಯವರು (೧೯೯೫, ೧೯) ಅನುಲಕ್ಷಿಸಿದ್ದಾರೆ. ಈ ಆದರ್ಶವನ್ನು ಕಾರಂತರ ಕಾದಂಬರಿಗಳಲ್ಲಿಯೂ ಬಿಂಬಿಸಲಾಗಿದೆ.

ಲಕ್ಷ್ಮಮ್ಮ ಕೊಂಬಾರಿನ ಕೃಷ್ಣರಾಯರ ಧರ್ಮಪತ್ನಿ. ಅವರದು ಮಧ್ಯಮ ವರ್ಗದ ಕುಟುಂಬ. ವ್ಯವಹಾರ ಚತುರೆಯಾದ ಲಕ್ಷ್ಮಿ ಪ್ರಾಮಾಣಿಕ ಪರಿಶ್ರಮದಿಂದ ಬದುಕಿಗೊಂದು ಅರ್ಥಕಲ್ಪಿಸಿ ಹಸನುಗೊಳಿಸುವ ಪ್ರಯತ್ನದಲ್ಲಿ ಅವಳ ಬಾಳು ಸವೆಯುತ್ತದೆ. ಆದರೆ ಗಂಡನ ಅನಾರೋಗ್ಯ ಅವಳನ್ನು ಕಾಡುತ್ತಿತ್ತು. ಗಂಡನನ್ನು ಮಗುವಿನಂತೆ ಆರೈಕೆ ಮಾಡುತ್ತಾಳೆ. ಆದರೆ ಕೃಷ್ಣರಾಯ ಬದುಕುವುದಿಲ್ಲ, ಇದರಿಂದ ಜೀವನದಿಂದ ವಿಮುಖಳಾಗದೆ ಹೊಲ ಗದ್ದೆಗಳಲ್ಲಿ ಬೇಸಾಯವನ್ನು ಮಾಡುತ್ತಾಳೆ. ತನ್ನ ಗಂಡನ ಬಯಕೆಯಂತೆ ಮಗನನ್ನು ಓದಲು ಪಟ್ಟಣಕ್ಕೆ ಕಳುಹಿಸುತ್ತಾಳೆ. ಬಡತನದಲ್ಲಿ ಅಚ್ಯುತನನ್ನು ಓದಲು ಕಳುಹಿಸುವುದು ಲಕ್ಷ್ಮಮ್ಮಳ ಮಗಳ ಗಂಡ ನರಸಿಂಹಯ್ಯನಿಗೆ ಇಷ್ಟವಿರಲಿಲ್ಲ, ಆದರೆ ಇದನ್ನು ಲೆಕ್ಕಿಸದೆ ಅವಳು ಮಗನ ಓದಿಗಾಗಿ ಶ್ರಮಿಸುತ್ತಾಳೆ. ಮುಂದೆ ಅವನು ಶಾಲೆಯೊಂದರ ಉಪಾಧ್ಯಾಯನಾದಾಗ ಸಂತೋಷದ ನಿಟ್ಟುಸಿರನ್ನು ಬಿಡುತ್ತಾಳೆ. ಸೀತೆಯ ಗಂಡ ನರಸಿಂಹಯ್ಯ ಬೇಜವಾಬ್ದಾರಿಯಿಂದ ತಿರುಗಾಡುತ್ತಿದ್ದನು. ಅತ್ತೆಯ ಮನೆಯಲ್ಲಿಯೇ ಅವರಿಗೆ ಭಾರವಾಗಿ ತನ್ನ ಬಿಡಾರವನ್ನು ಬಿಟ್ಟಿದ್ದ ಇದು ಸೀತೆಗೆ ಇಷ್ಟವಿರಲಿಲ್ಲ, ಅದರ ಸಲುವಾಗಿಯೇ ಗಂಡನಲ್ಲಿ ಜವಾಬ್ದಾರಿಯನ್ನು ಮೂಡಿಸಲು 'ಎಲ್ಲಿಯಾದರೂ ಪ್ರತ್ಯೇಕವಾಗಿ ಮನೆಮಾಡಿ, ಇಲ್ಲದಿದ್ದರೆ ನಾನು ಸಾಯುತ್ತೇನೆ' ಎಂದು ಅವನಲ್ಲಿ ಭಯ ಮೂಡಿಸುತ್ತಾಳೆ. ಪ್ರತ್ಯೇಕ ಮನೆಯಲ್ಲಿ

ವಾಸಿಸುತ್ತಾಳೆ. ಸ್ವಲ್ಪ ದಿನಗಳಲ್ಲಿಯೇ ಗಂಡನನ್ನು ಕಳೆದುಕೊಂಡು ತಾಯಿಯೊಂದಿಗೆ ವಾಸಿಸುತ್ತಾಳೆ. 'ಸಾವು ಬದುಕಿನ ಕೊನೆಯಲ್ಲ' ಎಂಬಂತೆ ತಾಯಿಯೊಂದಿಗೆ ಸೇರಿ ಹೊಲದಲ್ಲಿ ಬೇಸಾಯ ಮಾಡುತ್ತಾ ಜೀವನ ಸಾಗಿಸುತ್ತಾಳೆ. ಕಾದಂಬರಿಕಾರರಿಗೆ ಅಳಿದವರಿಗಿಂತ ಉಳಿದವರು ಬದುಕನ್ನು ಎದುರಿಸುವ ಬಗೆ ಹಾಗೂ ಅವರ ಸಾಹಸಭರಿತ ಜೀವನಶ್ರದ್ಧೆ ಇಷ್ಟವಾಗುತ್ತದೆ. ಅದನ್ನು 'ಮುಗಿದ ಯುದ್ಧ' ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

'ಮುಗಿದ ಯುದ್ಧ' ಕಾದಂಬರಿಯ ಲಕ್ಷ್ಮಮ್ಮಳಂತೆ 'ಮೊಗಪಡೆದ ಮನ' ಕಾದಂಬರಿಯ ನಂದಿನಿಯೂ ಸಹ ಗಂಡನನ್ನು ಕಳೆದುಕೊಂಡು ಏಕಾಂಗಿಯಾಗಿ ಮನೆಯ ಜವಬ್ದಾರಿಯನ್ನೆಲ್ಲ ನಿರ್ವಹಿಸುತ್ತಾಳೆ. ಮಗನ ವಿದ್ಯಾಭ್ಯಾಸಕ್ಕಾಗಿ ಹಗಲಿರುಳು ದುಡಿದು ದುಡ್ಡನ್ನು ಕೂಡಿಸುತ್ತಾಳೆ. ಪತಿಯ ಆಸೆಯಂತೆ ಮಗ ವ್ಯಾಸನನ್ನು ವಕೀಲನನ್ನಾಗಿ ಕಾಣಲು ಬಯಸುತ್ತಾಳೆ. ಆದರೆ ವ್ಯಾಸನಿಗೆ ವಕೀಲ ವೃತ್ತಿಯಲ್ಲಿ ಆಸಕ್ತಿಯಿರಲಿಲ್ಲ, ಬದಲಿಗೆ ತಾನೊಬ್ಬ ಕಲಾವಿದನಾಗಬೇಕೆಂದು ತವಕಿಸುತ್ತಾನೆ. ಇದನ್ನು ನಂದಿನಿಯು ತಿರಸ್ಕರಿಸದೆ ಸಮ್ಮತಿಸುತ್ತಾಳೆ. ಮಗನ ಸಂತೋಷದಲ್ಲಿ ಭಾಗಿಯಾಗುತ್ತಾಳೆ.

ವಿಮಲೆಯು ಮಂಗಳೂರಿನ ಶ್ರೀನಿವಾಸರಾಯರ ಮಗಳು, ವ್ಯಾಸನು ಮಂಗಳೂರಿಗೆ ಓದಲು ಹೋದಾಗ ಅವರ ಮನೆಯಲ್ಲಿಯೇ ಆಶ್ರಯ ಪಡೆದಿರುತ್ತಾನೆ. ಆಗ ಅವರಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದು ಅಭಿವ್ಯಕ್ತಿಸಿರಲಿಲ್ಲ, ಇದರಿಂದಾಗಿ ವಿಮಲೆಯ ಮದುವೆಯು ಬೇರೊಬ್ಬರ ಜೊತೆಯಲ್ಲಿ ನೆರವೇರುತ್ತದೆ. ಪ್ರೀತಿಯನ್ನು ಮುಚ್ಚಿಟ್ಟುಕೊಂಡಿದ್ದ ವಿಮಲೆ ವ್ಯಾಸರಿಬ್ಬರೂ ಒಬ್ಬರಿಂದೊಬ್ಬರು ದೂರವಾಗುತ್ತಾರೆ. ಮನದಲ್ಲಿಯೇ ತುಂಬಾ ದುಃಖಿಸುತ್ತಾರೆ.

049215

ವಿಮಲೆಯು ಮದುವೆಯಾದ ಕೆಲ ದಿನಗಳಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ವ್ಯಾಸನನ್ನು ಕಂಡಾಗ ಅವಳಿಗೆ ಮೊದಲಿನ ಪ್ರೀತಿ ಮರುಕಳಿಸುತ್ತದೆ. ತನ್ನ ಅಂತರಂಗದ ಅಳಲನ್ನು ತಾಯಿಯ ಮುಂದೆ ಹೇಳಿಕೊಳ್ಳುತ್ತಾಳೆ. ಮಗಳ ಮನೋಸ್ಥಿತಿಯನ್ನು ಅರಿತ ವಿಮಲೆಯ ತಾಯಿಯು 'ನಮ್ಮ ದರಿದ್ರ ಜಾತಿಯಲ್ಲಿ ಮರುಮದುವೆಯ ಯೋಗ ಹೆಣ್ಣು ಮಕ್ಕಳಿಗಿಲ್ಲವಲ್ಲ' ಎಂದು ದುಃಖಿಸುತ್ತಾಳೆ. ಇದರಿಂದ ಸಮಕಾಲೀನ ಸಮಾಜದಲ್ಲಿ ವಿಧವೆಯರ ಪುನರ್ ವಿವಾಹಕ್ಕೆ ಸಮಾಜವು ಮುಕ್ತವಾಗಿ ಸ್ಪಂದಿಸುತ್ತಿರಲಿಲ್ಲ ಎಂಬುದು ದೃಢವಾಗುತ್ತದೆ. ಈಶ್ವರ ಚಂದ್ರ ವಿದ್ಯಾಸಾಗರ, ವಿದ್ಯಾಸಾಗರರಂತಹ ಸಮಾಜ ಸುಧಾರಕರು ವಿಧವಾ ವಿವಾಹದ ಸಲುವಾಗಿ ಹೋರಾಟ ಮಾಡಿರುವುದು ಇತಿಹಾಸದಿಂದ ಅರಿವಾಗುತ್ತದೆ. ವಿದ್ಯಾಸಾಗರ ಅವರು 'ಹಿಂದೂ ವಿಧವೆಯ ವಿವಾಹ' ಎಂಬ ಪುಸ್ತಕವನ್ನು ಬರೆದು ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದರು. ಆದರೆ ವಿವೇಕಾನಂದರಂಥಹ ಸಮಾಜ ಸುಧಾರಕರು 'ಮದುವೆಯಾಗದೆ ವಿಧವೆಯರು ಬ್ರಹ್ಮಚಾರಿಣಿಯಾಗಿರಬೇಕು' (೧೯೯೩, ೨೫-೨೬) ಎಂದು ಹೇಳಿರುವುದು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಎಂಬುದು ನಿಚ್ಚಳವಾಗುತ್ತದೆ. "ನಿಮಗೆ ಆಗಲೇ ಒಂದು ಅವಕಾಶ ದೊರಕಿತ್ತು. ಆದರೆ ನಿಮಗೆ ಈಗ ಇಂತಹ ವೈಧವ್ಯ ಬಂದುದಕ್ಕೆ ನಾವು ವ್ಯಥೆಪಡುವೆವು. ಆದರೆ ನಾವು ಏನನ್ನು ಮಾಡಲಾಗುವುದಿಲ್ಲ, ಉಳಿದವರು ಕಾದು ಕುಳಿತಿರುವರು" (೧೯೯೯, ೩೦) ಎಂದು ವಿಧವೆಯರಿಗೆ ವಿವಾಹ ಬೇಡ, ಮದುವೆ ಎನ್ನುವುದು ಅಷ್ಟು ದೊಡ್ಡ ಆದರ್ಶವಲ್ಲ, ಅದು ದುರ್ಬಲರಿಗೆ ಮಾತ್ರ ಎಂದು ಹೇಳಿರುವುದು ಅತಿಶಯೋಕ್ತಿಯೆನಿಸುತ್ತದೆ. ವಿವೇಕಾನಂದರಿಗೆ

ಸ್ತ್ರೀಯರ ಬಗೆಗೆ ಗೌರವವಿತ್ತು, ಆದರೆ ಅವರ ಸ್ತ್ರೀಪರ ಆಲೋಚನೆಗಳು ಭಾರತೀಯ ಸಂಸ್ಕೃತಿಯ ನೆಲೆಯಲ್ಲಿದ್ದವು. ಇದರಿಂದಾಗಿಯೇ ಅನೇಕ ಕಾದಂಬರಿಗಳಲ್ಲಿ 'ವಿಧವಾ ವಿವಾಹ'ವನ್ನು ನೇರವಾಗಿ ತಿರಸ್ಕರಿಸುವಂತೆ ಉಲ್ಲೇಖಿಸಲಾಗಿದೆ. ಸಮಕಾಲೀನ ಸಾಹಿತಿಗಳಲ್ಲಿ ಇಂಥಹ ನಿದರ್ಶನಗಳು ಹಲವಾರು ಇವೆ.

ಕೊಡಗಿನ ಗೌರಮ್ಮನವರ "ಪುನರ್ ವಿವಾಹ" (೧೯೬೬) ಕತೆಯಲ್ಲಿ ಹುಡುಗನು ತಾನು ಪ್ರೀತಿಸಿದ ಹುಡುಗಿಯು ಬಾಲವಿಧವೆ ಎಂದು ಗೊತ್ತಾಗುತ್ತಲೇ ಮದುವೆಗೆ ನಿರಾಕರಿಸುತ್ತಾನೆ. 'ನೀನು ವಿಧವೆ ಎಂದು ತಿಳಿದಿದ್ದರೆ ಮುಖವನ್ನೂ ಸಹ ನೋಡುತ್ತಿರಲಿಲ್ಲ' ಎಂದು ಹೇಳುತ್ತಾನೆ. ಇಲ್ಲಿ ಸಾಮಾಜಿಕ ಪರಿಸ್ಥಿತಿಯ ಅರಿವು ಪಾತ್ರದ ವೈಯಕ್ತಿಕ ಅಭಿಪ್ರಾಯವಾಗಿ ಸಹಜವಾಗಿ ಹೊರಹೊಮ್ಮಿದೆ. ಇದರಂತೆ ಭೈರಪ್ಪನವರ 'ವಂಶವೃಕ್ಷ'(೧೯೬೫) ಕಾದಂಬರಿಯೂ ಸಹ ವಿಧವೆಯ ಪುನರ್‌ವಿವಾಹವನ್ನು ತಳ್ಳಿಹಾಕುತ್ತದೆ. ಒಂದು ವಂಶದ ವಸ್ತುವಾದ ಸ್ತ್ರೀ ಪುನರ್‌ವಿವಾಹದಿಂದ ಮತ್ತೊಂದು ವಂಶಕ್ಕೆ ಕಾಲಿಟ್ಟಾಗ ಆಗಬಹುದಾದ ಮಾನಸಿಕ ತಳಮಳವನ್ನು ಕಾದಂಬರಿಕಾರರು ಚಿತ್ರಿಸಿದ್ದಾರೆ. ಪುನರ್‌ವಿವಾಹದ ನಂತರ ಒಂದರ ನಂತರ ಒಂದು ಮಗುವಿನ ಗರ್ಭಪಾತವಾಗುವುದು. ವಿಧವೆಯಾದ ಕಾತ್ಯಾಯನಿಯ ಪುನರ್ ವಿವಾಹ ಎಲ್ಲ ರೀತಿಯಿಂದಲೂ ವಿಫಲವಾಗುವ ಸನ್ನಿವೇಶಗಳು ಕಾದಂಬರಿಯಲ್ಲಿ ನಿರ್ಮಾಣವಾಗಿವೆ. ಆದರೆ ಕಾರಂತರು ಇದಕ್ಕಿಂತ ಭಿನ್ನವಾಗಿ ಆಲೋಚಿಸುತ್ತಾರೆ.

'ಮೊಗ ಪಡೆದ ಮನ' ಕಾದಂಬರಿಯಲ್ಲಿ ವಿಧವೆಯರೂ ಸಹ ಮದುವೆಯಗಿ ಸುಖವಾದ ಜೀವನವನ್ನು ಸಾಗಿಸಬಹುದು ಎಂಬುದನ್ನು ಪಾತ್ರಗಳ ಮುಖಾಂತರ ನಿರೂಪಿಸಿದ್ದಾರೆ. ವಿಮಲೆಯು ವಿಧವೆಯಾಗಿದ್ದರೂ ಅವಳನ್ನು ಮದುವೆಯಾಗಲು ವ್ಯಾಸನು ಬಯಸುತ್ತಾನೆ. ಅದನ್ನು ವಿಮಲೆಗೆ ಪತ್ರದ ಮುಖಾಂತರ ತನ್ನ ಅಭಿಪ್ರಾಯವನ್ನು ತಿಳಿಸುತ್ತಾನೆ. ಇದಕ್ಕೆ ಪ್ರತಿಯಾಗಿ ವಿಮಲೆ ತೊದಲುತ್ತ "ವ್ಯಾಸ.. ನಿನ್ನ ಮನಸ್ಸಿನ ಧಾರಾಳತನಕ್ಕೆ ನಾನು ತಕ್ಕವಳೆಂದು ಕಂಡರೆ, ನನ್ನ ಒಪ್ಪಿಗೆಯಿದೆ. ನನ್ನಿಂದ ನಿನಗೆ ಯಾವ ಸಂಪತ್ತೂ ಸಿಗಲಾರದು. ಸುಖ ಸಿಕ್ಕಿತೋ ಅದನ್ನು ಹೇಳಲಾರೆ. ಆದರೆ ನಂದಿದ ನನ್ನ ಬಾಳಿನ ಬೆಳಕು ತಿರುಗಿ ಬೆಳಗಿದರೆ ಆ ಬಾಳು ಸುಖಿಯಾದೀತು ಹಿಂದಾದುದನ್ನೆಲ್ಲಾ ಮರೆಯಬಲ್ಲೆ"(೨೦೦೩, ಸಂ-೬, ಕಾ-೫, ೩೯೬) ಎಂದು ಮರುತ್ತರ ಬರೆಯುತ್ತಾಳೆ. ಪತಿಯ ಒಪ್ಪಿಗೆಯನ್ನು ಪಡೆಯದೆ ಮಗಳ ಮದುವೆಗೆ ವಿಮಲೆಯ ತಾಯಿಯು ಪ್ರೋತ್ಸಾಹ ನೀಡುತ್ತಾಳೆ.

ವೈಧವ್ಯದ ನೋವನ್ನು ಅನುಭವಿಸಿರುವ ನಂದಿನಿಯು ತನ್ನ ಮಗ ವಿಧವೆಯಾದ ವಿಮಲೆಗೆ ಬಾಳನ್ನು ಕೊಟ್ಟಾಗ ಸಂತೋಷದಿಂದ ಒಪ್ಪಿಕೊಳ್ಳುತ್ತಾಳೆ. ಜನರ ಚುಚ್ಚು ನುಡಿಗಳಿಗೆ ಕಿವಿಗೊಡದೆ ಸೊಸೆಯನ್ನು ಮಗಳಂತೆ ಕಾಣುತ್ತಾಳೆ.

'ಕನ್ಯಾಬಲಿ' (೧೯೩೨) ಕಾದಂಬರಿಯಲ್ಲಿ ವಿಧವೆಯಾದ ಮಾಲತಿಯ ಮರುಮದುವೆ ನೆರವೇರುವುದಿಲ್ಲ, ಆದರೆ 'ಮೊಗಪಡೆದ ಮನ' (೧೯೪೮) ಕಾದಂಬರಿಯಲ್ಲಿ ವಿಧವೆಯಾದ ವಿಮಲೆಯ ಪುನರ್ ವಿವಾಹ ಈಡೇರುತ್ತದೆ. 'ಕನ್ಯಾಬಲಿ' (೧೯೩೨) ಬರೆಯುವಾಗಿನ ಕಾರಂತರ ಆಲೋಚನಾ ವಿಧಾನವು 'ಮೊಗಪಡೆದ ಮನ' (೧೯೪೮) ಕಾದಂಬರಿ ಬರೆಯುವ ವೇಳೆಗೆ ಬದಲಾಗಿರುವುದನ್ನು ಗಮನಿಸಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಕಾರಂತರ ವ್ಯಕ್ತಿತ್ವದ ಮೇಲೆ ಗಾಂಧೀಜಿಯವರ ಪ್ರಭಾವವಿರುವುದನ್ನು ಗುರುತಿಸಬಹುದು. ಗಾಂಧೀಜಿಯವರಿಗೆ ವಿಧವೆಯರು ಉಪಯುಕ್ತ ಶ್ರಮಿಜೀವಿಗಳಾಗಿ ಕಂಡರು. ಈ ಕಾರಣದಿಂದಲೇ 'ಕನ್ಯಾಬಲಿ'

[illegible]

ಕಾದಂಬರಿಯಲ್ಲಿ ಮಾಲತಿಯ ಮದುವೆ ಸಾಧ್ಯವಾಗಲಿಲ್ಲವೇನೋ ಎಂಬ ಅನುಮಾನ ಮೂಡುತ್ತದೆ. ಆದರೆ 'ಮೊಗ ಪಡೆದ ಮನ' ಕಾದಂಬರಿಯಲ್ಲಿ ಸಾಧ್ಯವಾಗಿರುವುದು ಸ್ವತಂತ್ರ ಭಾರತದ ಪ್ರಗತಿಪರ ಸುಧಾರಣೆಯಿಂದ ಹಾಗೂ ಕಾಲಕ್ಕನುಗುಣವಾಗಿ ಬದಲಾಗುವ ಸಾಮಾಜಿಕ ಮೌಲ್ಯಗಳ ಪರಿವರ್ತನೆಯಿಂದ ಎಂಬುದು ಸ್ಪಷ್ಟವಾಗುತ್ತದೆ. ವಿಧವಾ ವಿವಾಹಕ್ಕೆ ಪುರುಷ ಪ್ರಧಾನ ಸಮಾಜವು ಪ್ರೋತ್ಸಾಹ ನೀಡಬೇಕು. ಯುವಕರು ವಿಧವೆಯರನ್ನು ಮದುವೆಯಾಗಲು ಮುಂದೆ ಬರಬೇಕು ಎಂಬುದು 'ಮೊಗಪಡೆದ ಮನ' ಕಾದಂಬರಿಯ ಪಾತ್ರಗಳ ಧೋರಣೆಯಾಗಿದೆ.

"ಬದುಕಿನಲ್ಲಿ ಕಷ್ಟನಷ್ಟಗಳು ಇರುವಂಥವೆ, ಆದರೂ ಬದುಕಿನ ಸೌಂದರ್ಯವನ್ನು ಕಾಣುವ ದೃಷ್ಟಿಯನ್ನು ಕಳೆದುಕೊಳ್ಳಬಾರದು" ಎಂಬ ನೀತಿಯನ್ನು ರುಕ್ಮಾಯಿಯ ಪಾತ್ರದ ಮೂಲಕ 'ಸನ್ಯಾಸಿಯ ಬದುಕು' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ರುಕ್ಮಾಯಿ ಐವತ್ತು ವರ್ಷ ಮೀರಿದ ವಿಧವೆ. ಸಾಂಪ್ರದಾಯಿಕ ಆಚಾರ, ವಿಚಾರಗಳನ್ನು ಹೊಂದಿದ್ದಳು. ಸ್ವಂತ ಮನೆಯನ್ನು ಹೊಂದಿರಲಿಲ್ಲ, ಗಟ್ಟಿಮುಟ್ಟಿನ ಜೀವವಾಗಿದ್ದು ಅವರಿವರ ಮನೆಯಲ್ಲಿ ಮನೆಗೆಲಸ ಮಾಡುತ್ತ ಕಾಲಕಳೆಯುತ್ತಿದ್ದಳು. ಹಣದಾಸೆಗೆ ಎಂದೂ ದುಡಿದವಳಲ್ಲ, ಯಾರಿಂದಲೂ ಯಾವುದೇ ಪ್ರತಿಫಲವನ್ನು ಬಯಸಿದವಳಲ್ಲ, ಯಾವುದೇ ರಕ್ತ ಸಂಬಂಧವಿರದ ಸುಮಿತ್ರೆಯ ಬಡತನದಲ್ಲಿ ನೆರವಾಗುತ್ತಾಳೆ. ಅವಳ ಕುಟುಂಬಕ್ಕಾಗಿ ದುಡಿಯುತ್ತಾಳೆ. ಗಂಡನ ಆಶ್ರಯವಿಲ್ಲದೆ ಒಂಟಿಯಾಗಿದ್ದ ಸುಮಿತ್ರೆಗೆ ಬದುಕಿನ ಬಗೆಗೆ ಧೈರ್ಯದ ಮಾತುಗಳನ್ನು ಹೇಳುತ್ತ ಆಸರೆಯಾಗುತ್ತಾಳೆ. 'ದುಡ್ಡನ್ನು ಸಂಗ್ರಹಿಸದೆ ಸತ್‌ಕಾರ್ಯಗಳಿಗಾಗಿ ವಿನಿಯೋಗಿಸಬೇಕು' ಎಂಬ ಶಿವಶರಣರ ನುಡಿಯಂತೆ ರುಕ್ಮಾಯಿ ತನಗೆ ಅಶನಾರ್ಥದ ರೂಪದಲ್ಲಿ ಬರುತಿದ್ದ ಹಣವನ್ನು ಸುಮಿತ್ರೆಯ ಮಗಳಾದ ರಾಧೆಯ ಮದುವೆಗಾಗಿ ಉಪಯೋಗಿಸುತ್ತಾಳೆ. ರುಕ್ಮಾಯಿಯಂಥಹ ಸ್ತ್ರೀ ಪಾತ್ರಗಳನ್ನು ಜನಪದ ಸಾಹಿತ್ಯದಲ್ಲಿಯೂ ಗುರುತಿಸಬಹುದು. ಇದರಿಂದ ಕಾರಂತರ ವ್ಯಕ್ತಿತ್ವದ ಮೇಲೆ ಜನಪದ ಸಾಹಿತ್ಯದ ಪ್ರಭಾವವಿರುವುದು ದಟ್ಟವಾಗಿದೆ. ಸಂಸಾರ ಬಿಟ್ಟು ಸನ್ಯಾಸಿಯಾದ ಶಂಕರರಾಯನ ವಿಡಂಬನೆ ಹಾಗೂ ಸಂಸಾರದಲ್ಲಿದ್ದುಕೊಂಡು ಹೋರಾಡುವವರ ಉದಾರತೆ ಈ ಕಾದಂಬರಿಯ ವಸ್ತುವಾಗಿದೆ. 'ಸನ್ಯಾಸಕ್ಕಿಂತ ಸಂಸಾರವೇ ಮಿಗಿಲು' ಎಂಬುದು ಕಾದಂಬರಿಯ ಆಶಯವಾಗಿದೆ.

'ನಂಬಿಕೆ' ಎನ್ನುವುದು ಮಾನವನ ಇತಿಹಾಸದೊಂದಿಗೆ ತಳುಕು ಹಾಕಿಕೊಂಡು ಬಂದಿರುವ ಒಂದು ಅಂಶ. ನಂಬಿಕೆಗೂ ಮತ್ತು ಬದುಕಿಗೂ ಇರುವ ಸಂಬಂಧ ತುಂಬ ಮಹತ್ತರವಾದುದು. ಒಂದು ನಂಬಿಕೆಯಿಂದ ಒಂದು ಸಂಸಾರ ನಾಕ ಸದೃಶ್ಯವಾದರೆ, ಮತ್ತೊಂದು ಸಂಸಾರ ನರಕಯಾತನೆಗೆ ಗುರಿಯಾಗುತ್ತದೆ. ಇದನ್ನು "ನಂಬಿದವರ ನಾಕ ನರಕ" ಕಾದಂಬರಿಯು ಒಳಗೊಂಡಿದೆ. ವಾಗ್ದೇವಿ ಸಾಂಪ್ರದಾಯಿಕ ಮನೋಭಾವದವಳು. ಉಚ್ಚ ಕುಲದವಳು, ಧಾರ್ಮಿಕ ರೀತಿ, ನೀತಿ, ಜಾತಿ, ಧರ್ಮ, ಮೇಲ್ಜಾತಿ, ಕೀಳು ಜಾತಿಯಂತಹ ಸಾಮಾಜಿಕ ಪದ್ಧತಿಗಳನ್ನು ರೂಢಿಸಿಕೊಂಡಿದ್ದಳು. ವಾಗ್ದೇವಿ ಅದನ್ನೇ ಜೀವನವೆಂದುಕೊಂಡಿದ್ದಳು. ವಿಪರ್ಯಾಸವೆಂಬಂತೆ ಅಚಾತುರ್ಯದಿಂದ ಕೆಳವರ್ಗದವನಾದ ನಾಗೇಂದ್ರನೊಂದಿಗೆ ಅವಳ ಮದುವೆಯಾಗುತ್ತದೆ. ಕೆಲದಿನಗಳ ತರುವಾಯ ಸತ್ಯಾಂಶ ತಿಳಿದ ನಂತರ ವಾಗ್ದೇವಿಯ ತಾಯಿ ಮಹಾಲಕ್ಷ್ಮಿ ಪಾಪಪ್ರಜ್ಞೆಯಿಂದ ಸಾವನ್ನಪ್ಪುತ್ತಾಳೆ.

[illegible]

ಶ್ರೀಮಂತ ಮನೆತನವೂ, ಎಳೆ ಹರೆಯನಾದ ಸುಂದರನಾದ ಪತಿಯನ್ನು ಪಡೆದ ವಾಗ್ದೇವಿ ಸಾಹುಕಾರತಿಯಂತೆ ಮೆರೆಯುತ್ತ ಸುಖವಾದ ಜೀವನ ಸಾಗಿಸಬಹುದಾಗಿತ್ತು. ಆದರೆ ವಾಸ್ತವಿಕ ಜೀವನಕ್ಕೆ ಪ್ರಯೋಜನವಾಗದ ಸಂಪ್ರದಾಯದಲ್ಲಿ ನಂಬಿಕೆಯಿಟ್ಟು ತನ್ನ ಗಂಡ ಕೀಳು ಜಾತಿಯವನು ಎಂಬ ಕಾರಣದಿಂದಾಗಿ ಕೊರಗುತ್ತಾಳೆ. ಜೀವಂತ ಶವದಂತೆ ಬದುಕುತ್ತಾಳೆ. ಸಂಸಾರದಲ್ಲಿದ್ದೂ ಸನ್ಯಾಸಿನಿಯಂತೆ ವರ್ತಿಸುತ್ತಾಳೆ. ಗಂಡನ ಬಗೆಗೆ ಪೂರ್ವಗ್ರಹ ಪೀಡಿತವಾಗಿದ್ದು ಅವನ ಮೇಲೆ ಕೋಪ, ತಾತ್ಸಾರವನ್ನು ಹೊಂದಿದ್ದಳು, ಅವನ ಯಾವುದೇ ಪ್ರೀತಿ, ಸ್ನೇಹ, ತಾಳ್ಮೆಗಳಲ್ಲಿ ಅವಳಿಗೆ ಕಹಿಯಲ್ಲದೆ ಬೇರೇನೂ ಕಾಣದಾಗುತ್ತದೆ. ಇದರಿಂದಾಗಿ ಅವಳ ಸಂಸಾರಿಕ ಜೀವನ ಅಶಾಂತಿಯ ಗೂಡಾಗುತ್ತದೆ.

ನಂಬಿಕೆಯನ್ನು ಬಿಡುವುದೆಂದರೆ ಅದು ಬಟ್ಟೆಯ ಕೊಳೆಯನ್ನು ತೊಳೆಯುವಷ್ಟು ಸುಲಭವಲ್ಲ ಎಂಬುದು ವಾಗ್ದೇವಿಯ ಮೌಢ್ಯವಾಗಿತ್ತು. ತನ್ನ ಮಾನಸಿಕ ತಳಮಳ, ಗೊಂದಲದಿಂದಾಗಿ ಗಂಡನೊಂದಿಗೆ ಅವಳಿಗೆ ಬೆರೆಯಲಾಗಲಿಲ್ಲ, ಕಾಮತೃಷೆಯಿಂದಲೂ, ನಂಬಿಕೆಯಿಂದಲೂ ಹಾಗೂ ಸಮಾಜದಿಂದಲೂ ವಂಚಿತಳಾಗಿ ವಾಗ್ದೇವಿಯು ತಾಯ್ತನದ ಹಂಬಲದಿಂದ ಪರಿತಪಿಸುತ್ತಾಳೆ. ವಂಶವನ್ನು ಬೆಳೆಸಲಾಗದ ಅಸಹಾಯಕ ಸ್ಥಿತಿಯಿಂದ ಕೊರಗುತ್ತಾಳೆ. ಮನಸ್ಸು ಬಿಗಿಹಿಡಿದರೂ, ಪರಿಸ್ಥಿತಿಯೊಡನೆ ಹೊಂದಿಕೊಳ್ಳಲು ಯತ್ನಿಸಿದರೂ ಅವಳು ಅದರಲ್ಲಿ ಯಶಸ್ವಿಯಾಗುವುದಿಲ್ಲ, ವಾಗ್ದೇವಿಯು, ಜಾತಿಪದ್ಧತಿ ಹಾಗೂ ದಾಂಪತ್ಯದಲ್ಲಿ ಹೆಣ್ಣಿನ ನಿಷ್ಠೆಯನ್ನು ಬಲವಾಗಿ ನಂಬಿದ್ದಳು. ಆಳವಾಗಿ ಬೇರೂರಿದ ಸಾಮಾಜಿಕ ಕಟ್ಟಳೆ, ನಂಬಿಕೆಗಳು ಅವಳ ಬದುಕನ್ನೇ ಆಹುತಿಯಾಗಿಸಿ ಕೊಳ್ಳುತ್ತವೆ. ತಾನು ಮದುವೆಯಾಗಿದ್ದು ತನ್ನ ಜಾತಿಯವನನ್ನಲ್ಲ ಎಂಬ ಸತ್ಯ ತಿಳಿದದ್ದು ಅವಳ ಧಾರುಣ ಯಾತನೆಗೆ ನಾಂದಿಯಾಗುತ್ತದೆ. ಆದರೆ ಸತ್ಯ ತಿಳಿಯದೆ ಹೋಗಿದ್ದರೆ ಸುಲಭವಾಗಿ ಸುಖವಾದ ಜೀವನವನ್ನು ಸಾಗಿಸುತ್ತಿದ್ದಳೇನೋ! ಬದುಕಿನಲ್ಲಿ ತನಗೆ ಅನ್ಯಾಯವಾಯಿತೆಂಬ ಕ್ರೋಧಸ್ವ ಹಿಂಸೆಯಾಗಿಯೂ, ವಿಕೃತರೂಪದ ಪ್ರತಿಭಟನೆಯಾಗಿಯೂ ಬಿಡಬಲ್ಲದೆಂಬುದಕ್ಕೆ 'ನಂಬಿದವರ ನಾಕ ನರಕ' ಕಾದಂಬರಿಯ ವಾಗ್ದೇವಿಯ ಪಾತ್ರವು ಉತ್ತಮ ನಿದರ್ಶನವಾಗಿದೆ.

ವಾಗ್ದೇವಿಯು ತನ್ನ ಸಂಪ್ರದಾಯದ ಮೌಢ್ಯದಿಂದಾಗಿ ಸುಂದರಗೊಳಿಸಬಹುದಾಗಿದ್ದ ಬದುಕನ್ನು ಹಾಳು ಮಾಡಿಕೊಳ್ಳುತ್ತಾಳೆ. ಕೌಟುಂಬಿಕ ಜೀವನಕ್ಕೆ ಬೇಕಾಗಿರುವುದು ಜಾತಿಯಲ್ಲ, ಪರಸ್ಪರ ಒಬ್ಬರನ್ನೊಬ್ಬರು ಅರಿತುಕೊಂಡು ಹೊಂದಾಣಿಕೆಯ ಜೀವನ ಸಾಗಿಸುವುದು ಎಂಬುದು 'ನಂಬಿದವರ ನಾಕ ನರಕ' ಕಾದಂಬರಿಯ ಮೂಲ ಆಶಯವಾಗಿದೆ.

ನಾಗರಿಕತೆಯ ಸೋಂಕಿಲ್ಲದ ಕಾಡಿನ ಕೊಂಪೆಯೊಂದರ ಹಳ್ಳಿಯ ಜನ ಜೀವನದ ಬದುಕಿನ ಮುಖ್ಯ ಸಮಸ್ಯೆಯಾದ ಆಸ್ತಿಯ ಕಲಹ ಹಾಗೂ ಆ ಕಲಹದಿಂದ ಉಂಟಾಗುವ ಭಿನ್ನಾಭಿಪ್ರಾಯಗಳ ಕುರಿತು. 'ಶನೀಶ್ವರನ ನೆರಳಲ್ಲಿ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಸಂಪ್ರದಾಯಸ್ಥ ಮಹಿಳೆಯಾದ ಕಾವೇರಮ್ಮ ತಮ್ಮ ಮಕ್ಕಳೆಲ್ಲರೂ ಒಂದೆ ಕಡೆ ಒಗ್ಗಟ್ಟಿನಿಂದ ಬಾಳಬೇಕು ಎಂದು ಬಯಸುತ್ತಾಳೆ. ಅವಿಭಕ್ತ ಕುಟುಂಬ ಒಗ್ಗಟ್ಟು ಹಾಗೂ ಸಹಬಾಳ್ವೆಯಿಂದ ಕೂಡಿರುತ್ತದೆ ಎಂಬುದು ಅವಳ ನಂಬಿಕೆಯಾಗಿತ್ತು. ಆದರೆ ಅವಳ ಕಿರಿಯ ಮಗ ನಾರಾಯಣ ಇದಕ್ಕೆ ತದ್ವಿರುದ್ಧವಾದ ಗುಣವನ್ನು ಹೊಂದಿದ್ದನು. ಬೇರೆ ಕಡೆಗೆ ತನ್ನದೇ ಆದ ಪ್ರತ್ಯೇಕ ಸಂಸಾರವನ್ನು ಹೂಡಬೇಕು ಎಂದು ಬಯಸಿದನು. ಇದರಿಂದ ಅವರ ಕುಟುಂಬದಲ್ಲಿ ಕಲಹ, ಭಿನ್ನಮತ, ಮನಃಸ್ತಾಪ ಉಂಟಾಗುತ್ತದೆ. ಇದರಿಂದ

[illegible]

[illegible]

[illegible]

ಕಾವೇರಮ್ಮ ತುಂಬಾ ನೊಂದುಕೊಳ್ಳುತ್ತಾಳೆ, ಯಾರಿಗೂ ಅನ್ಯಾಯವಾಗದಂತೆ ವ್ಯವಹಾರ ಜ್ಞಾನದಿಂದ ಆಸ್ತಿಯನ್ನು ಸಮವಾಗಿ ಹಂಚಿಕೆ ಮಾಡುತ್ತಾಳೆ. ಮಕ್ಕಳು ಎಲ್ಲಿಯಾದರೂ ಇರಲಿ, ಆನಂದವಾಗಿರಲಿ ಎಂದು ಹಾರೈಸುತ್ತಾಳೆ.

ಕುಟುಂಬದಲ್ಲಿ ಅಣ್ಣ-ತಮ್ಮಂದಿರ ನಡುವೆ ಆಸ್ತಿಯ ಬಗೆಗೆ ಕಲಹ ಸರ್ವೆ ಸಾಮಾನ್ಯ, ಅದನ್ನು ಪರಿಹರಿಸಿ ಒಂದುಗೂಡಿಸಲು ಪ್ರಯತ್ನಿಸಬೇಕು. ಅದು ನೆರವೇರದೆ ಇದ್ದಾಗ ಪ್ರತ್ಯೇಕವಿದ್ದರೂ ಇರಲಿ, ಸುಖವಾಗಿರಲಿ ಎಂಬುದು ಕಾದಂಬರಿಯ ನಿಲುವಾಗಿದೆ. ಅವಿಭಕ್ತ ಕುಟುಂಬದ ಕಡೆಗೆ ಕಾದಂಬರಿಕಾರರ ಒಲವು ಇರುವುದು ಸ್ಪಷ್ಟವಾಗುತ್ತದೆ.

ಇಬ್ಬರು ವೃದ್ಧೆಯರ ಜೀವನವನ್ನು "ಅಳಿದ ಮೇಲೆ" ಕಾದಂಬರಿಯು ಒಳಗೊಂಡಿದೆ. ಪಾರ್ವತಿ, ಮೂಕಾಂಬು ಎರಡು ದೇಹ, ಒಂದು ಜೀವವಾಗಿದ್ದರು. ಇಬ್ಬರು ಚಿಕ್ಕಂದಿನಲ್ಲಿಯೇ ಗಂಡಂದಿರನ್ನು ಕಳೆದುಕೊಂಡು ಬಾಲವಿಧವೆಯರಾಗಿದ್ದರು. "ಹಡೆದು ಗೊತ್ತಿಲ್ಲದ ಹೆಣ್ಣಾದರೂ ಹಡೆಯುವುದಕ್ಕಾಗಿ ಹುಟ್ಟಿದ ಹೆಣ್ಣು'(೨೦೦೩, ಸಂ. ೧೪, ಕಾ-೧೩, ೭೨) ಎಂಬಂತೆ ಅವರಲ್ಲಿ ಮಾತೃಭಾವ ಹುದುಗಿತ್ತು. ಲೋಕದ ಮಕ್ಕಳನ್ನೆಲ್ಲ ತಮ್ಮ ಮಕ್ಕಳಂತೆ ತಿಳಿದು ಪ್ರೀತಿಸುತ್ತಿದ್ದರು. ಪಾರ್ವತಮ್ಮ ಯಶವಂತರಾಯನನ್ನು ತುಂಬಾ ಪ್ರೀತಿಸುತ್ತಿದ್ದಳು. ತಾಯಿಯಿಲ್ಲದ ಅವನಿಗೆ ತಾಯಿಯಾಗಿ ಆರೈಕೆ ಮಾಡಿದಳು, ಪೋಷಿಸಿ ಬೆಳೆಸಿದಳು.

"ಇದ್ದರೂ ಚಿಂತೆ" ಕಾದಂಬರಿಯು ಹಣವಂತರಿಬ್ಬರ ಕುಟುಂಬದ ವಿವರಣೆಯನ್ನು ಒಳಗೊಂಡಿದೆ. ಹಳೆಯ ಕಾಲದ ಸ್ತ್ರೀಯರು ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಾವೇ ನಿರ್ಣಯಿಸಿಕೊಂಡು ಬದುಕುತ್ತಾರೆ. ಪದ್ಮಾವತಿಯು ಗಂಡನ ಬೇಜವಬ್ದಾರಿಯಿಂದ ಕಂಗಾಲಾಗಿದ್ದಳು. ತಾನೇ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಹೋಗುತ್ತಿದ್ದಳು. ಮಕ್ಕಳ ಶ್ರೇಯಸ್ಸಿಗಾಗಿ ಹಗಲಿರುಳು ದುಡಿಯುತ್ತಿದ್ದಳು. ಆದರೆ ಯಾವೊಂದು ದಿನವೂ ತಂದೆಯ ಕುರಿತು ಮಕ್ಕಳಲ್ಲಿ ಅನಾದರ ಉಂಟಾಗುವಂತೆ ಮಾಡಿದವಳಲ್ಲ, ತಮ್ಮ ಮಗ ರಾಘವೇಂದ್ರರಾಯ ಮುಂಬೈಗೆ ಹೋಗಿ ತಮ್ಮನ್ನು ಕೇಳದೆ, ಹೇಳದೆಯೂ ಸಾವಿತ್ರಿಯನ್ನು ಮದುವೆಯಾದಾಗ ಬೇಸರಗೊಳ್ಳದೆ ಸಂತೋಷ ಪಡುತ್ತಾಳೆ. ಮಗ ಎಲ್ಲಿಯಾದರೂ ಇರಲಿ, ಸುಖವಾಗಿರಲಿ ಎಂದು ಹಾರೈಸುತ್ತಾಳೆ.

"ಪುರುಷ ಪ್ರವೃತ್ತಿಯೆಲ್ಲವೂ ಬಾಚಿಕೊಳ್ಳುವ ಪ್ರವೃತ್ತಿ, ಮಾಲಿಕನಾಗಬೇಕೆಂಬ ಹಂಬಲ. ಸ್ತ್ರೀ ಪ್ರವೃತಿಯೆಲ್ಲವೂ ತೆತ್ತು ಬಿಡುವ ಪ್ರವೃತ್ತಿ, ಸಮರ್ಪಣೆಯ ಮನೋಭಾವ" ಎಂಬ ಓಶೋ (ಗಣೇಶ ಶರ್ಮ (ಅನು) ೧೯೯೫, ೨೮೮) ಅವರ ಹೇಳಿಕೆ ಭಾರತೀಯ ಸಂಪ್ರದಾಯಸ್ಥ ಹೆಣ್ಣಿನ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಪದ್ಮಾವತಿಯ ಪಾತ್ರವು ಆದರ್ಶದ ನೆಲೆಯಲ್ಲಿ ಚಿತ್ರಿಸಲಾಗಿದೆ.

ಕಲಾವಿದನೋರ್ವನ ಮನಸ್ಸು ಸಾಮಾಜಿಕ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತದೆ ಹಾಗೂ ಅದನ್ನು ಯಾವ ರೀತಿಯಲ್ಲಿ ಸ್ವೀಕರಿಸಲಾಗುತ್ತದೆ ಎಂಬುದನ್ನು "ಸ್ವಪ್ನದ ಹೊಳೆ" ಕಾದಂಬರಿಯು ಒಳಗೊಂಡಿದೆ, 'ಇದ್ದರೂ ಚಿಂತೆ' ಕಾದಂಬರಿಯ ಪದ್ಮಾವತಿಯಂತೆ ತುಂಗಮ್ಮ ಗಂಡನ ಬೇಜವಾಬ್ದಾರಿಯಿಂದ ವ್ಯವಸಾಯವನ್ನು ತಾನೇ ಮಾಡುವಳು. ಮಕ್ಕಳ ಏಳ್ಗೆಗಾಗಿ ದುಡಿಯುವಳು. ಇದರಿಂದ ಕುಟುಂಬದ ಜವಾಬ್ದಾರಿಯೆಲ್ಲ ಅವಳದಾಗಿತ್ತು. ಬೆಳೆದ ಹೆಣ್ಣು ಮಕ್ಕಳಿಗೆ ಬೇಗನೆ ಮದುವೆ ಮಾಡಿಸಬೇಕೆಂಬ ಸಾಂಪ್ರದಾಯಿಕ ನಿಲುವು ಅವಳದಾಗಿತ್ತು, ಅಂತೆಯೇ ತುಂಗಮ್ಮ ಮಗಳ ಮದುವೆಗಾಗಿ ಪ್ರಯತ್ನಿಸಲು ಗಂಡನಿಗೆ ಹಲವಾರು ಬಾರಿ ಹೇಳುತ್ತಾಳೆ. ರುಕ್ಮಿಣಿಯು

ಮದುವೆಯಾದ ಕೆಲದಿನಗಳಲ್ಲಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆದರೆ ದುರ್ದೈವ ಎಂಬಂತೆ ಅವಳ ಗಂಡ ಶ್ರೀನಿವಾಸನು ಸರ್ಪಕಚ್ಚಿ ಸಾವನ್ನಪ್ಪುತ್ತಾನೆ. ಇದರಿಂದ ಪರಮೇಶ್ವರಯ್ಯ ಮಗುವಿನಂತೆ ಅಳತೊಡಗಿದಾಗ ತುಂಗಮ್ಮ ಗಂಡನಿಗೆ ಸಮಾಧಾನ ಹೇಳುತ್ತಾಳೆ.

ರುಕ್ಮಿಣಿಯು ತನ್ನ ದುಃಖವನ್ನೆಲ್ಲ ಮಗುವಿನ ಸನಿಹದಿಂದಾಗಿ ಮರೆಯುತ್ತಾಳೆ. ತಾಯಿಯೊಂದಿಗೆ ಸಹಾಯ ಮಾಡುತ್ತಾ ಬದುಕುತ್ತಾಳೆ. ತುಂಗಮ್ಮ ಮಗಳಲ್ಲಿ ವಾಸ್ತವತೆಯ ಅರಿವನ್ನು ಮೂಡಿಸುತ್ತಾಳೆ. ಮಗ ಕಿಟ್ಟನು ಬನ್ನಿ ಎಂಬುವವಳೊಂದಿಗೆ ಅಂತರ್ಜಾತಿ ವಿವಾಹವಾಗುತ್ತಾನೆ. ಅದನ್ನು ಖಂಡಿಸದೆ, ಅದೆಲ್ಲ ಋಣಾನುಬಂಧ ಎಂದು ಆತ್ಮೀಯವಾಗಿ ಸ್ವಾಗತಿಸುತ್ತಾಳೆ.

'ವಿಶೇಷ ವಿವಾಹ ಕಾನೂನು' ಅನ್ವಯ ಅಂತರ್ಜಾತಿ ವಿವಾಹವನ್ನು ೧೯೫೪ರಲ್ಲಿಯೇ ಸಂವಿಧಾನ ಬದ್ಧವಾಗಿ ಜಾರಿಗೆ ತರಲಾಗಿದೆ. ಈ ಕಾದಂಬರಿಯಲ್ಲಿಯೂ ಅಂತರ್ಜಾತಿ ವಿವಾಹದ ಮನ್ನಣೆಯನ್ನು ಚಿತ್ರಿಸಲಾಗಿದೆ. "ಸಾಮಾಜಿಕ ವ್ಯವಸ್ಥೆಯನ್ನು ಎದುರು ಹಾಕಿಕೊಂಡು ಅಂತರ್ಜಾತಿಯ ವಿವಾಹ ಮಾಡಿಕೊಳ್ಳುವ ಸ್ತ್ರೀ ಪುರುಷರಿಗೆ ಸರಕಾರಿ ನೌಕರಿಗಳಲ್ಲಿ ಮೀಸಲಾತಿ ಒದಗಿಸಿ ರಕ್ಷಣೆ ಕೊಡಬೇಕೆಂದು ಅಂಬೇಡ್ಕರ್ ಹೇಳುತ್ತಾರೆ." ಎಂದು ಪುನ್ನಪ್ಪ (೨೦೦೪, ೧೯೭) ಅವರು ಉದ್ಧರಿಸಿರುವುದು ಇಂದು ಜಾರಿಯಲ್ಲಿ ಬರಬೇಕಾಗಿದೆ. ಅಂತರ್ಜಾತಿ ವಿವಾಹಗಳನ್ನು ಸಮಾಜವು ಸಮ್ಮತಿಸಿ ಗೌರವಿಸಬೇಕಾಗಿದೆ.

ಹಳೆಗಾಲದ ಸಾಂಪ್ರದಾಯಿಕ ದಾಂಪತ್ಯಗಳಲ್ಲಿ ಹೆಣ್ಣಿನ ಬದುಕು ಹೆಚ್ಚಾಗಿ ತೊತ್ತಿನ ಬದುಕಿನಂತೆ ಪ್ರತಿಭಟನೆಯಿಲ್ಲದೆ ಗಂಡನಿಗೆ ವಿಕ್ರಯವಾಗಿ ಹೋಗುತ್ತದೆ ಎಂಬ ವಾಸ್ತವಿಕತೆಯನ್ನು 'ಇನ್ನೊಂದೇ ದಾರಿ' ಕಾದಂಬರಿಯಲ್ಲಿ ವಿಮರ್ಶಿಸಲಾಗಿದೆ, ಹೊನ್ನಮ್ಮ ಮತ್ತು ಲಕ್ಷ್ಮಿರಮಣರ ದಾಂಪತ್ಯ ಜೀವನವು ಸುಖಕರವಾಗಿರಲಿಲ್ಲ, ವಿರಸಮಯವಾಗಿತ್ತು. ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ತಂದೆ ತಾಯಿಯವರಿಗೆ ತಿಳಿಸದೆ ಜೀವಿಸುತ್ತಿದ್ದಳು. ಗಂಡನಿಂದ ಏಟು, ನಿಂದೆ, ಬೈಗುಳ, ಮೂದಲಿಕೆ ಅವಳಿಗೆ ದಿನನಿತ್ಯ ಸಾಮನ್ಯವಾಗಿತ್ತು, ಆದಾಗ್ಯೂ ಗಂಡನಿಗೆ ಪ್ರತಿಯಾಗಿ ಒಂದು ಮಾತನ್ನು ಆಡಿದವಳಲ್ಲ, "ಗಂಡನು ನೀತಿ ಬಾಹಿರ, ವ್ಯಭಿಚಾರಿ, ದುರ್ಗುಣಿಯಾದರೂ ಹೆಂಡತಿ ಆತನನ್ನು ದೇವರೆಂದು ಭಾವಿಸಬೇಕು" ಎಂಬ ಮನುವಿನ ವಾದವು ಪುರುಷ ಪ್ರಧಾನ ವ್ಯವಸ್ಥೆಗೆ ಪುಷ್ಟಿಯನ್ನು ನೀಡುತ್ತದೆ. ಇಂತಹ ಅಸಂಬದ್ಧ ಸಂಪ್ರದಾಯಿಕ ಮೌಲ್ಯಗಳನ್ನು ಹೊಂದಿದ ಸ್ತ್ರೀಯರನ್ನು ಸಮಕಾಲದಲ್ಲಿ ಗುರುತಿಸಬಹುದು. ಹೊನ್ನಮ್ಮಳ ಪಾತ್ರ ಇದಕ್ಕೊಂದು ಉತ್ತಮ ನಿದರ್ಶನವಾಗಿದೆ. ಗಂಡನು ಎಷ್ಟೆಲ್ಲ ಅನ್ಯಾಯ, ಹಿಂಸೆ ಮಾಡುತ್ತಿದ್ದರೂ ಅವನನ್ನೇ ದೇವರೆಂದು ಪೂಜಿಸುತ್ತಿದ್ದಳು. ಮಕ್ಕಳ ಲಾಲನೆ, ಪಾಲನೆಯಲ್ಲಿ ತನ್ನ ದುಃಖವನ್ನೆಲ್ಲ ಮರೆಯುತ್ತಿದ್ದಳು. ಹೊಲ, ಮನೆ, ಹಿತ್ತಲು, ಹಾಡಿ ಎಂದು ಪ್ರತಿನಿತ್ಯ ದುಡಿಯುತ್ತದ್ದಳು. 'ದುಡಿಯುವುದು ಜೀವನದ ಧರ್ಮ' ಎಂದು ಬಲವಾಗಿ ನಂಬಿದ್ದಳು.

ಲಕ್ಷ್ಮಿರಮಣನು ವಿಷಯಲಂಪಟನಾಗಿದ್ದು, ದುಂದುವೆಚ್ಚಗಾರನಾಗಿದ್ದನು. ತನ್ನ ಮಗುವಿನ ಸರ ಕದ್ದು ಖರ್ಚು ಮಾಡೋ ಪ್ರವೃತ್ತಿಯನ್ನು ಹೊಂದಿದ್ದನು, ಇಂತಹ ಸಮಯದಲ್ಲೂ ಹೊನ್ನಮ್ಮ ಗಂಡನನ್ನು ಪ್ರತಿಭಟಿಸುತ್ತಿರಲಿಲ್ಲ ಆದರೆ ಮಗ ಮಹಾದೇವ, ನಾಗಪ್ಪ ಉಪಾದ್ಯಾಯರ ಮನೆಯ ಹೊರಗಿನ ಗದ್ದೆಯಲ್ಲಿ ಬಿದ್ದ ಸಿಪ್ಪೆ ಸುಲಿಯದ ತೆಂಗಿನ ಕಾಯಿಯನ್ನು ಮನೆಗೆ ತಂದಾಗ ಅವಳಿಗೆ ತುಂಬ ಕೋಪ ಉಂಟಾಗುತ್ತದೆ. ಅದು ಕಳ್ಳತನವೆಂದು

[illegible]

ಬಗೆಯುತ್ತಾಳೆ. ಉಪಾಧ್ಯಾಯರ ಕಾಲಿಗೆ ಬಿದ್ದು ಕಾಯಿ ಕೊಟ್ಟು ಬಾ ಎಂದು ಮಗನಿಗೆ ಬುದ್ಧಿ ಮಾತನ್ನು ಹೇಳುತ್ತಾಳೆ. ಪತ್ನಿತ್ವವನ್ನು ದಾಸ್ಯದ ನೆಲೆಯಲ್ಲಿ, ಮಾತೃತ್ವವನ್ನು ಶಕ್ತಿಯ ನೆಲೆಯಲ್ಲಿ ಪುರುಷ ಪ್ರಧಾನ ಸಮಾಜ ವ್ಯಾಖ್ಯಾನಿಸಿದ ಈ ವ್ಯವಸ್ಥೆಯನ್ನು ಕಾರಂತರ ಕಾದಂಬರಿಗಳಲ್ಲಿಯೂ ಚಿತ್ರಿಸಲಾಗಿದೆ "ಹಿಂದೂ ಮನಸ್ಸಲ್ಲಿ ಮಹಿಳೆ ಎಂಬ ಶಬ್ಧ ತಾಯಿತನವನ್ನು ನೆನಪಿಗೆ ತರುವುದು, ಆದರೆ ಪಾಶ್ಚಾತ್ಯರಲ್ಲಿ ಮಹಿಳೆ ಸತಿ ಸ್ತ್ರೀತ್ವದ ಆದರ್ಶ ನೆಲೆಯಲ್ಲಿ ಕೇಂದ್ರಿಕೃತವಾಗಿದೆ" ಎಂಬ ವಿವೇಕಾನಂದರ ಹೇಳಿಕೆಯು (೧೯೯೩-೧೦) ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಕಾರಂತರ ಕಾದಂಬರಿಗಳಲ್ಲಿ ಹೆಣ್ಣಿಗೆ ಸ್ಥಾನ ಲಭಿಸಿದ್ದು ಆಕೆಯ ಮಾತೃತ್ವದಿಂದ. ಇದನ್ನು ಭಾರತೀಯ ಸನಾತನ ಧರ್ಮದ ಹಿನ್ನೆಲೆಯಲ್ಲಿಯೆ ಇರಿಸಿರುವುದು ಕಾದಂಬರಿಕಾರರ ಧೋರಣೆಯ ಪ್ರತೀಕವಾಗಿದೆ.

ಪದ್ಮಾವತಿ ಮಹಾದೇವನ ಹೆಂಡತಿ, ತನ್ನ ಗಂಡನಿಗೆ ಕಷ್ಟಕಾಲದಲ್ಲಿ ಸಹಾಯ ಮಾಡುತ್ತ ಸಹಕಾರದಿಂದ ಜೀವನ ನಡೆಸುತ್ತಾಳೆ. ಅವನ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾಳೆ. ತಮ್ಮ ಮಕ್ಕಳಲ್ಲಿ ಒಬ್ಬನನ್ನು ನಾರ್ಣಪ್ಪಯ್ಯ ಮತ್ತು ಭಾಗ್ಯಮ್ಮ ದಂಪತಿಗಳಿಗೆ ದತ್ತು ನೀಡುತ್ತಾಳೆ. ತನ್ನ ಮಗ ಎಲ್ಲಿಯೇ ಇರಲಿ, ಚೆನ್ನಾಗಿರಲಿ ಎಂದು ಹಾರೈಸುತ್ತಾಳೆ. ನರಸಿಂಹಯ್ಯ ಭಾಗ್ಯಮ್ಮಳ ಮಗನಾಗಿ ಬೆಳೆಯುತ್ತಾನೆ.

ಜಾನಕಿ ನರಸಿಂಹಯ್ಯನ ಪತ್ನಿ. ಅವರ ಸಂಸಾರ ಉತ್ತಮವಾಗಿತ್ತು, ಗಂಡ ಮಕ್ಕಳೊಂದಿಗೆ ಸುಖವಾಗಿ ಇದ್ದಳು, ತಮ್ಮ ಮಕ್ಕಳಿಗಿಂತಲೂ ಹೆಚ್ಚಾಗಿ ಮನೆಯ ದನ ಕರುಗಳನ್ನು ನೆಚ್ಚಿಕೊಂಡಿದ್ದಳು. ದನ ಕರುಗಳು ಇದ್ದ ಹಟ್ಟಿಗೆ ಬೆಂಕಿಯಿತ್ತದ್ದನ್ನು ಕೇಳಿ ಧಾವಿಸಿ ಓಡಿ ಹೋಗಿ, ಅವುಗಳ ಜೀವ ಉಳಿಸುತ್ತಾಳೆ. 'ಜೀವನದಿಂದ ಏನನ್ನು ಆಪೇಕ್ಷಿಸುವ ಹಕ್ಕು ವ್ಯಕ್ತಿಗಿಲ್ಲ' ಎಂಬುದನ್ನು ದೃಢವಾಗಿ ನಂಬಿದ್ದಳು. 'ಇನ್ನೊಂದೇ ದಾರಿ' ಕಾದಂಬರಿಯಲ್ಲಿಯ ಸ್ತ್ರೀ ಪಾತ್ರಗಳು ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿನಿಧಿಸುವಂತವು ಆಗಿವೆ. ಗಂಡನಿಗೆ ಎದುರು ವಾದಿಸದೆ ಅವನಿಚ್ಛೆಯಂತೆ ಇರುತ್ತಿದ್ದರು. "ಹೆಚ್ಚು ತೃಪ್ತಿಯಿಂದ ಸುಖವನ್ನು ಪಡೆಯಲು ಶಿಸ್ತಿನಿಂದ ಇರಬೇಕು. ಸುಖವು ತೃಪ್ತಿಯಿಂದಾಗುತ್ತದೆ. ಅತೃಪ್ತಿಯೇ ದುಃಖಕ್ಕೆ ಮೂಲ" ಎಂಬ ಮೌಲ್ಯವನ್ನು ಈ ಕಾದಂಬರಿಯು ಸಾರುತ್ತದೆ.

ದೇವರು ಗಂಡು-ಹೆಣ್ಣುಗಳಲ್ಲಿ ಬಯಕೆಯನ್ನಿರಿಸಿದ್ದು ಅವರಿಬ್ಬರ ಸಂಯೋಗದಿಂದ ಜಗತ್ತು ಉಳಿಯಬೇಕೆಂದು, ಅಂತೆಯೇ ಸಂಸಾರ ಎನ್ನುವಂತದ್ದು ಉತ್ತಮ ಜೀವನ ನಿರ್ವಹಣೆಗೆ ಸಾಧನವಾಗಿದೆ, ಆದರಿಂದ ಪಲಾಯನ ಮಾಡುವುದು ಮಾನವ ಧರ್ಮವಲ್ಲ ಎಂಬುದನ್ನು "ಮೂಕಜ್ಜಿಯ ಕನಸುಗಳು" ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ.

ಮೂಕಜ್ಜಿಯು ತನ್ನ ಅತೀಂದ್ರಿಯ ಜ್ಞಾನದಿಂದ ತನ್ನ ಸುತ್ತಮುತ್ತಲಿನ ಬದುಕನ್ನು ಅರಿಯುವಲ್ಲಿ ಸಮರ್ಥಳಾಗಿದ್ದಳು, ಅನ್ಯರ ಮನೋಗತವನ್ನು ಅರಿಯುವಲ್ಲಿ ಶಕ್ತಳಾಗಿದ್ದಳು. "ಮನುಷ್ಯನಿಗೆ ಹೆಚ್ಚು ವಯಸ್ಸಾದಾಗ ಮನಸ್ಸಿನಲ್ಲಿ ಒಂದು ಪರಿಪಾಕ ಉಂಟಾಗುತ್ತದೆ. ಹಳೆಯ ಶ್ರೀಗಂಧ ಮರದಲ್ಲಿ ಒಳ್ಳೆಯ ಸುವಾಸನೆಯುಂಟಾಗುತ್ತದೆ" ಎಂಬ ಭಾಗವತದ ನುಡಿಯಂತೆ ಮೂಕಜ್ಜಿಯು ಜೀವನವನ್ನು ಸಾಗಿಸುತ್ತಿದ್ದಳು. ಸಂಸಾರದಿಂದ ಪಾರಮಾರ್ಥಿಕ ಜೀವನಕ್ಕೆ ಏನೂ ಧಕ್ಕೆಯಾಗುವುದಿಲ್ಲ, ಸಂಸಾರದಲ್ಲಿದ್ದುಕೊಂಡೇ ಏನೆಲ್ಲವನ್ನು ಸಾಧಿಸಬಹುದು. ತಪಸ್ಸು ಎಂದರೆ ಸಂಸಾರದಿಂದ ದೂರವಿರುವುದು ಎಂಬುದಲ್ಲ, ದೇಹ ಕಳಚುವುದೂ ಸಮ, ಸಂಸಾರ ಬಿಡುವುದೂ ಸಮ ಎಂದು ಸಂಸಾರದ ಮಹತ್ವ ಕುರಿತು ವಿವೇಚಿಸುತ್ತಾಳೆ. "ಕಲ್ಪನೆಯ ಆದರ್ಶವೊಂದನ್ನು ವಾಸ್ತವತೆಯ ಸೂತ್ರಕ್ಕೆ ಕಟ್ಟಿ

ಹಿಡಿದುಕೊಡಲು ಕಾರಂತರು ಇಲ್ಲಿ ತೋರಿರುವ ಪ್ರತಿಭೆ ಅಪೂರ್ವವಾದುದು" ಎಂಬುದನ್ನು ಬಿ.ಎನ್.ಸುಮಿತ್ರಾ ಬಾಯಿಯವರು (೧೯೯೨, ೩೯-೪೦) ಗುರುತಿಸಿದ್ದಾರೆ.

ಕುಟುಂಬದ ಕಟ್ಟುಪಾಡುಗಳು ಹೆಂಗಸಿಗಿರುವ ಅವಕಾಶವನ್ನು ಕಡಿತಗೊಳಿಸುತ್ತವೆ. ಆದರೆ ವೇಶ್ಯೆಯರಿಗೆ ಇದು ಅನ್ವಯಿಸುವುದಿಲ್ಲ, ವೇಶ್ಯೆಯರಲ್ಲಿಯೂ ಸಹ ಕೌಟುಂಬಿಕ ವಾತಾವರಣವಿರುತ್ತದೆ. ಆದರೆ ಯಾವುದೇ ಕಟ್ಟುಪಾಡುಗಳ ಬಂಧನವಿರುವುದಿಲ್ಲ ಎಂಬುದು 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯ ವಿಷಯವಾಗಿದೆ. 'ಕಾಯಕವೇ ಕೈಲಾಸ' ಎಂಬ ಶರಣರ ನುಡಿಯಂತೆ ಮಂಜುಳೆಗೆ ವೇಶ್ಯಾವೃತ್ತಿ ಪವಿತ್ರ ಕಾರ್ಯವಾಗಿತ್ತು. ಅದು ಅವರ ಪರಂಪರೆಯೂ ಆಗಿತ್ತು. ಹಲವಾರು ಜನರು ಅವಳ ಸಂಗವನ್ನು ಬಯಸಿ ಬರುತ್ತಿದ್ದರು. ಅವರಲ್ಲಿಯೇ ಒಬ್ಬರಾದ ಸುಬ್ರಾಯ ಉಳ್ಳೂರು ಅವರನ್ನು ತುಂಬ ಪ್ರೀತಿಸುತ್ತಿದ್ದಳು. ಗೌರವಿಸುತ್ತಿದ್ದಳು, ಅವರನ್ನು ತನ್ನ ಪತಿಯೆಂದು ಭಾವಿಸಿದ್ದಳು, ಅವರೀರ್ವರ ಸಂಬಂಧ ಕೇವಲ ವಿಟ ಮತ್ತು ವೇಶ್ಯೆಯರದಾಗಿರದೆ ಪತಿ ಪತ್ನಿಯರಿಗಿಂತಲೂ ಮಿಗಿಲಾಗಿತ್ತು, ಉಳ್ಳೂರರು ಮಂಜುಳೆಗೆ ಯುಗಾದಿ ಹಬ್ಬದಂದು ಉಡುಗೊರೆಯನ್ನು ನೀಡುತ್ತಿದ್ದರು. ಸುಬ್ರಾಯ ಉಳ್ಳೂರು ಅವರು ಪಾರ್ಶ್ವವಾತದಿಂದ ನರಳುತ್ತಿದ್ದರು, ಅವರ ಮಡದಿ ಲಕ್ಷ್ಮಿಯು ಅವರಿಗೆ ಶುಶ್ರೂಷೆ ಮಾಡಿ ತೈಲ ತಿಕ್ಕುತ್ತಿದ್ದಳು. ಇದನ್ನು ಮಂಜುಳೆ ಆಸೆಗಣ್ಣಿನಿಂದ ನೋಡುತ್ತ ನಿಲ್ಲುತ್ತಾಳೆ. 'ಹೆಣ್ಣಿನ ಮತ್ತೊಂದು ಹೆಸರು ಅಸೂಯೆ' ಎಂಬ ಷೇಕ್ಸ್‌ಪೀಯರ್ ಅವರ ಹೇಳಿಕೆಗೆ ಅಪವಾದವೆಂಬಂತೆ ಲಕ್ಷ್ಮಿ ಮಂಜುಳೆಯ ಮನಸ್ಸಿನ ಹಂಬಲವನ್ನರಿತು ಅವಳಿಗೂ ತೈಲ ತಿಕ್ಕಲು ಅವಕಾಶ ನೀಡುತ್ತಾಳೆ. ಇದರಿಂದ ವೇಶ್ಯೆಯೂ ಒಂದು ಹೆಣ್ಣು ಅವಳಿಗೂ ಮನಸ್ಸಿರುತ್ತದೆ, ಹೃದಯವಿರುತ್ತದೆ, ಭಾವನೆಗಳಿರುತ್ತವೆ, ಜೀವನದಲ್ಲಿ ಎಲ್ಲಕ್ಕಿಂತ ಮುಖ್ಯವಾದ ಪ್ರೀತಿ ಅವಳ ಹೃದಯದಲ್ಲಿಯೂ ತುಂಬಿಕೊಂಡಿರುತ್ತದೆ ಎಂಬುದು ಮನದಟ್ಟಾಗುತ್ತದೆ. ಲಕ್ಷ್ಮಿ ತಾನು ಕೈ ಹಿಡಿದವಳಾಗಿದ್ದರೂ, ಮಂಜುಳೆಯೂ ಸಹ ತನ್ನಂತೆಯೇ ಎಂದು ಭಾವಿಸುತ್ತಾಳೆ. ಉಳ್ಳೂರರು ಮಂಜುಳೆಯನ್ನು ಹೆಂಡತಿಗಿಂತಲೂ ಹೆಚ್ಚಾಗಿ ಪ್ರೀತಿಸುತಿದ್ದು ಅವಳ ಹೆಸರಿಗೆ ಐವತ್ತು ಮಾನೆಗೆ ಗೇಣಿ ಬರುವ ಭೂಮಿಯನ್ನು ನೀಡುತ್ತಾರೆ.

ಜೀವನವೆಂಬುದು ಅಪೂರ್ಣತೆಯಿಂದ ಪೂರ್ಣತೆಯತ್ತ ಹಲವು ನಡೆಗಳ ಪ್ರಕ್ರಿಯೆಯಾಗಿದೆ. ಅದು ಪರಂಪರಾಗತ ಸತ್ಯದೊಡನೆ ಮುಖಾಮುಖಿಯಾಗುತ್ತ ದಟ್ಟವಾದ ಅನುಭವವನ್ನು ನೀಡುತ್ತದೆ. ಜೀವನದ ವಿಶಾಲತೆ, ಅಲ್ಲಿರುವ ವೈರುದ್ಧಗಳು ಮತ್ತು ವ್ಯಾಖ್ಯೆಯನ್ನು ಮೀರಿದ ಸಂಕೀರ್ಣತೆ 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯು ಒಳಗೊಂಡಿದೆ. ಆದರೆ ಸಾಮಾನ್ಯವಾಗಿ ಹೆಣ್ಣು ತನ್ನ ಗಂಡ ತನ್ನನ್ನಲ್ಲದೆ ಬೇರೆ ಯಾರಿಗೂ ಪ್ರೀತಿಸಬಾರದು ಎಂದು ಬಯಸುತ್ತಾಳೆ. ಇದು ಕೆಟ್ಟ ಗುಣವಲ್ಲ, ಪ್ರಕೃತಿಯ ನಿಯಮ, ಆದರೆ ಈ ಕಾದಂಬರಿಯಲ್ಲಿ ಲಕ್ಷ್ಮಿ ಮಂಜುಳೆಯನ್ನು ತನ್ನ ಸಹೋದರಿಯಂತೆ ಕಾಣುವುದು ವಾಸ್ತವಕ್ಕೆ ದೂರವಾಗಿದೆ. ಕಾದಂಬರಿಕಾರರು ಆದರ್ಶದ ಹಿನ್ನೆಲೆಯಲ್ಲಿ ಸ್ತ್ರೀ ಪಾತ್ರಗಳನ್ನು ಚಿತ್ರಿಸಿದ್ದಾರೆ. ಆದರೆ ಕುವೆಂಪುರವರ 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಸುಬ್ಬಮ್ಮ ತನ್ನ ಗಂಡ ಚಂದ್ರಯ್ಯ ಗೌಡರ ಶುಶ್ರೂಷೆಯನ್ನು ವೇಶ್ಯೆಯಾದ ಗಂಗೆ ಮಾಡುತ್ತಿರುವುದನ್ನು ಕಂಡು ಸಿಡಿಮಿಡಿಗೊಳ್ಳುತ್ತಾಳೆ. "ಹೆಣ್ಣು ಏನನ್ನಾದರೂ ಸಹಿಸಿಯಾಳು, ಆದರೆ ತನ್ನ ಪ್ರೀತಿಯಲ್ಲೊಂದು ಪಾಲು ಕೊಡಲಾರಳು" ಎಂಬ ಯಶೋಧರಾ (ಗುರುಪಾದ ಮರಗುದ್ದಿ (ಸಂ) ೨೦೦೪,

೬೬) ಅವರ ಹೇಳಿಕೆಯು ವಾಸ್ತವತೆಯನ್ನು ಸೂಚಿಸುವುದರ ಜೊತೆಗೆ ಸ್ತ್ರೀಯರ ಮನೋಧರ್ಮವನ್ನು ಬಿಂಬಿಸುತ್ತದೆ. ಇಲ್ಲಿ ಕಾರಂತರಿಗಿಂತಲೂ ಕುವೆಂಪು ಅವರು ಓದುಗರಿಗೆ ಹತ್ತಿರವಾಗುತ್ತಾರೆ.

ಹೆಣ್ಣಿನ ಬದುಕನ್ನು ಮತ್ತು ಭವಿಷ್ಯವನ್ನು ಮದುವೆ ನಿರ್ಧರಿಸುತ್ತದೆ. ಅಂತೆಯೇ ಹೆಣ್ಣಿಗೆ ಕೌಟುಂಬಿಕ ಜೀವನದಲ್ಲಿ ವರ್ತಮಾನ ಮತ್ತು ಭೂತಗಳೆರಡೂ ಒಂದು ಸಂಕೀರ್ಣ ಸನ್ನಿವೇಶವನ್ನು ರೂಪಿಸುತ್ತವೆ ಎಂಬುದರ ಜಿಜ್ಞಾಸೆ "ಧರ್ಮರಾಯನ ಸಂಸಾರ" ಕಾದಂಬರಿಯಲ್ಲಿದೆ. ಮಹಾಲಕ್ಷ್ಮಿ ನಾರಾಯಣ ಹೆಬ್ಬಾರರ ಹೆಂಡತಿ. ಸಂಪ್ರದಾಯಸ್ಥ ಮಹಿಳೆ, ಗಂಡನಿಗೆ ಅತೀವ ವಿಧೇಯಳಾಗಿದ್ದಳು. ತನ್ನ ಗಂಡ ಪರಸ್ತ್ರೀಯರನ್ನು ಪ್ರೀತಿಸುತ್ತಿದ್ದಾನೆಂದು ಗೊತ್ತಿದ್ದರೂ ಆತಂಕಕ್ಕೆ ಗುರಿಯಾಗುವುದಿಲ್ಲ, ಬದಲಿಗೆ ಅವಳ ಮನೆಗೆ ಹೋಗಿ ಬರುತ್ತಾಳೆ. ಅವಳನ್ನು ಅಕ್ಕರೆಯಿಂದ ಕಾಣುತ್ತಾಳೆ. ಚಂದು ತನ್ನ ಗಂಡನ ಪ್ರೇಯಸಿ ಎಂದು ಗೊತ್ತಿದ್ದರೂ ಅವಳ ಬಗೆಗೆ ಮತ್ಸರ ಪಡುವುದಿಲ್ಲ. ಅವಳ ಕುಣಿತವನ್ನು ನೋಡಲು ಯಾವುದೇ ಆಡಂಬರವಿಲ್ಲದೆ ಅವಳ ಮನೆಗೆ ಹೋಗುತ್ತಾಳೆ. ತನ್ನ ಸಂಸಾರದ ಸುಖ-ದುಃಖಗಳನ್ನು ಅವಳೊಂದಿಗೆ ಹಂಚಿಕೊಳ್ಳುತ್ತಿದ್ದಳು. ತನ್ನ ಮಗಳ ಮದುವೆ ಕುರಿತು ಚರ್ಚಿಸುತ್ತಾಳೆ, ಮಗಳ ಸಲುವಾಗಿ ಹುಡುಕಿದ ವರ ಸರಿಯಾಗಿಲ್ಲ, ಅವನ ನಡವಳಿಕೆ ಮೃಗೀಯವಾದುದು, ಕಾಮುಕ ಎಂಬುದನ್ನು ಚಂದುವಿನಿಂದ ಅರಿಯುತ್ತಾಳೆ. ಸಂಪ್ರದಾಯದ ನಿಲುವಿನ ಮಹಾಲಕ್ಷ್ಮಿ ತನ್ನ ಅತಿಯಾದ ವಿಧೇಯತೆ ಹಾಗೂ ಹೇಡಿತನದಿಂದ ಮದುವೆಯನ್ನು ತಡೆಯಲಾಗದೆ, ದುಃಖಿಸುತ್ತಾಳೆ. ತನ್ನ ತಪ್ಪಿನಿಂದಾಗಿ ಮಗಳ ಜೀವನ ಹಾಳಾಗಲು ಪರೋಕ್ಷವಾಗಿ ಕಾರಣವಾಗುತ್ತಾಳೆ.

ಚಂದು ವೇಶ್ಯೆಯಾಗಿದ್ದರೂ ನಾರಾಯಣ ಹೆಬ್ಬಾರರನ್ನು ಪತಿಯೆಂದು ಭಾವಿಸಿದ್ದು ಅತಿಯಾಗಿ ಪ್ರೀತಿಸುತ್ತಿದ್ದಳು. ಅವರ ಹೆಂಡತಿ ಮಹಾಲಕ್ಷ್ಮಿಯನ್ನು ತನ್ನ ಒಡಹುಟ್ಟಿದ ಸಹೋದರಿಯೆಂಬಂತೆ ಸತ್ಕರಿಸುತ್ತಿದ್ದಳು. ಈ ಗುಣದಿಂದಾಗಿಯೇ ಚಂದು ಅವರ ಕುಟುಂಬದ ಓರ್ವ ಸದಸ್ಯೆಯಾಗಿದ್ದಳು. ಮಹಾಲಕ್ಷ್ಮಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡುತ್ತಾ, ವಿಷಮ ಪರಿಸ್ಥಿತಿಯಲ್ಲಿ ಅವಳಿಗೆ ಸಹಕಾರ ನೀಡುತ್ತಿದ್ದಳು.

ರಾಮದೇವ, ಕೃಷ್ಣದೇವ, ಮಹಾಲಕ್ಷ್ಮಿಯ ಮಕ್ಕಳು. ಕನಕ ರಾಮದೇವನ ಪತ್ನಿ, ಅತ್ತೆಯನ್ನು ಪ್ರೀತಿಯಿಂದ ಕಾಣದೆ ಗಂಡನ ಸಲುಗೆಯಲ್ಲಿ ಅವಳನ್ನು ಅಸಡ್ಡೆಯಿಂದ ಕಾಣುತ್ತಿದ್ದಳು. ಮನೆಗೆ ತಾನೇ ಯಜಮಾನಿ ಎಂಬಂತೆ ವರ್ತಿಸುತ್ತಿದ್ದಳು. ಮಗನೂ ಸಹ ತಾಯಿಯನ್ನು ಅನಾದಾರದಿಂದ ಕಾಣುತಿದ್ದನು. ಮಗ, ಸೊಸೆಯರ ವರ್ತನೆಯಿಂದ ಮಹಾಲಕ್ಷ್ಮಮ್ಮ ತುಂಬ ನೊಂದುಕೊಳ್ಳುತ್ತಾಳೆ. ರಾಮದೇವ ಮತ್ತು ಅವನ ಹೆಂಡತಿ ಕನಕ ಕೃಷ್ಣದೇವನನ್ನು ಪ್ರೀತಿಯಿಂದ ಕಾಣುತ್ತಿರಲಿಲ್ಲ, ಅವನನ್ನು ಮನೆಯ ಜೀತದಾಳುವಿನಂತೆ ಹಗಲು ರಾತ್ರಿ ದುಡಿಸಿಕೊಳ್ಳುತ್ತಿದ್ದರು. ಅವನ ಭವಿಷ್ಯದ ಬಗೆಗೆ ಯೋಚಿಸದೆ, ಅವನ ಮದುವೆಯನ್ನು ಮುಂದೂಡುತ್ತಿದ್ದರು. ಮದುವೆಗಾಗಿ ಪ್ರಯತ್ನಿಸುತ್ತಿರಲಿಲ್ಲ ಇದನ್ನೆಲ್ಲ ಅರಿತ ಮಹಾಲಕ್ಷ್ಮಿ ತುಂಬ ಅಸಮಾಧಾನಗೊಳ್ಳುತ್ತಾಳೆ. ಚಂದುವಿನೊಂದಿಗೆ ಚರ್ಚಿಸಿ, ಪರಿಹಾರ ಕಂಡುಕೊಳ್ಳುತ್ತಾಳೆ. ಚಂದುವಿನ ಸಹಕಾರದೊಂದಿಗೆ ಧೈರ್ಯದಿಂದ ಮನೆಯ ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾಳೆ, ಕೃಷ್ಣದೇವನ ಮದುವೆಯನ್ನು ಕಮಲಳೊಂದಿಗೆ ಮಾಡಿಸುತ್ತಾಳೆ. ಅಣ್ಣ ತಮ್ಮಂದಿರಲ್ಲಿ ಹೊಂದಾಣಿಕೆಯಿರದಿದ್ದಾಗ ಪತ್ಯೇಕವಾಗಿರಲು ಏರ್ಪಾಡು ಮಾಡುತ್ತಾಳೆ. ಕಿರಿಯ ಮಗ ಕೃಷ್ಣದೇವನೊಂದಿಗೆ ವಾಸಿಸುತ್ತಾಳೆ.

ಪರಿಸ್ಥಿತಿಯನ್ನು ಎದುರಿಸುವಲ್ಲಿ ವಿಧೇಯತೆಗಿಂತಲೂ ವ್ಯವಹಾರಿಕ ಬುದ್ಧಿ ಅವಶ್ಯಕವಾಗುತ್ತದೆ. ಮಹಾಲಕ್ಷ್ಮಮ್ಮ ತನ್ನ ಅಸಹಾಯಕತೆಯಿಂದ ಮಗಳ ಜೀವನ ಹಾಳಾಗುವಲ್ಲಿ ಕಾರಣೀಭೂತಳಾಗುತ್ತಾಳೆ. ದಿಟ್ಟತನದಿಂದ ಮಗನ ಬದುಕನ್ನು ಉಜ್ವಲಗೊಳಿಸುತ್ತಾಳೆ. ನಾರಾಯಣ ಹೆಬ್ಬಾರರ ಹೆಂಡತಿಯಾಗಿ ಸೋಲುವ ಮಹಾಲಕ್ಷ್ಮಮ್ಮ ಕೃಷ್ಣದೇವನ ತಾಯಿಯಾಗಿ ಗೆಲ್ಲುವುದು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಕಾರರು ಸಂಪ್ರದಾಯದ ಪೋಷಣೆಯನ್ನು ಸ್ತ್ರೀ ಪಾತ್ರಗಳ ಮುಖಾಂತರ ಮಾಡಿರುವುದು ವ್ಯಕ್ತವಾಗುತ್ತದೆ.

ಈ. ವಿಲಾಸಿ ಮನೋಭಾವ

ವ್ಯಕ್ತಿಗಳ ಬದುಕಿಗೆ ಅವರೇ ಸೂತ್ರದಾರರಾಗಿರುತ್ತಾರೆ, ಅವರ ಬದುಕಿನ ಏಳ್ಗೆಗೂ ಹಾಗೂ ಅವನತಿಗೂ ಅವರೇ ಕಾರಣೀಭೂತರಾಗಿರುತ್ತಾರೆ. ವಿಲಾಸಿ ಮನೋಭಾವ ಹೊಂದಿದವರು ಅನ್ಯರ ಸುಖ-ದುಃಖಗಳಿಗೆ ಸ್ಪಂದಿಸದೆ, ಯಾವಾಗಲೂ ತಮ್ಮ ಸುಖಕ್ಕಾಗಿಯೇ ಹಂಬಲಿಸುತ್ತಿರುತ್ತಾರೆ. ಅದರಿಂದ ಬೇರೆಯವರಿಗೆ ದುಃಖವಾದರೂ ಅವರಿಗೆ ಯಾವುದೇ ಪಾಪಪ್ರಜ್ಞೆ ಕಾಡುವುದಿಲ್ಲ, ಇಂತಹ ಸ್ತ್ರೀ ಪಾತ್ರಗಳನ್ನು ಕಾರಂತರ ಕಾದಂಬರಿಗಳಲ್ಲಿಯೂ ಗುರುತಿಸಬಹುದು.

ದುಡ್ಡು ಹಿಂದಿನದೆಲ್ಲವನ್ನು ಮರೆಸುತ್ತದೆ ಹಾಗೂ ಸಂತಾನ ಪ್ರಾಪ್ತಿಗಾಗಿ ಹೆಣ್ಣು ಯಾವ ಮಟ್ಟಕ್ಕೂ ಇಳಿಯಬಹುದು ಎಂಬುದನ್ನು 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮೆಯ ಪಾತ್ರದ ಮೂಲಕ ಚಿತ್ರಿಸಲಾಗಿದೆ. 'ವಿಲಾಸಮಯ ಜೀವನದಿಂದ ಕುಟುಂಬದ ಮುನ್ನಡೆಯಲ್ಲಿ ಅಡಚಣೆಯುಂಟಾಗುತ್ತದೆ' ಎಂಬುದು ಕಾದಂಬರಿಯ ಆಶಯವಾಗಿದೆ. ಆರ್ಥಿಕವಾಗಿ ಮಧ್ಯಮ ವರ್ಗದಲ್ಲಿ ಜನಿಸಿದ ಕುಸುಮೆಯು ವಕೀಲ ಸುಬ್ಬಯ್ಯನನ್ನು ಮದುವೆಯಾಗಿ ಹಳ್ಳಿಯನ್ನು ಬಿಟ್ಟು ಪಟ್ಟಣವನ್ನು ಸೇರುತ್ತಾಳೆ. ಶ್ರೀಮಂತಿಕೆಯ ವಿಲಾಸಿ ಜೀವನಕ್ಕೆ ಮಾರು ಹೋಗುತ್ತಾಳೆ. ನಗರದ ಬೆಡಗು ಬಿನ್ನಾಣಗಳಿಗೆ ಮನಸೋಲುತ್ತಾಳೆ. ದಿನೆ ದಿನೇ ಅವಳ ಆಸೆ-ಆಕಾಂಕ್ಷೆಗಳು ಹೆಚ್ಚುತ್ತಲಿದ್ದು ಅವುಗಳಿಗೆ ಕೊನೆಯೇ ಇರಲಿಲ್ಲ, ಪ್ರತಿಷ್ಠೆಯ ಸಲುವಾಗಿ ಅರೆ ಬರೆ ಇಂಗ್ಲಿಷನ್ನು ಕಲಿಯುತ್ತಾಳೆ. ವನಿತಾ ನಿಲಯದ ಪ್ರತಿಸ್ಪರ್ಧಿಯಾಗಿ 'ಸ್ತ್ರೀ ಸಮಾಜ'ವೆಂಬ ಕ್ಲಬ್ ಅನ್ನು ಆರಂಭಿಸುತ್ತಾಳೆ. ಆರ್ಥಿಕವಾಗಿ ಅವಳಿಗೆ ತೃಪ್ತಿಯೇ ಇರಲಿಲ್ಲ, ತಾವಿನ್ನು ಸಂಪಾದಿಸಬೇಕು, ಶ್ರೀಮಂತರಾಗಬೇಕು, ಸಮಾಜದಲ್ಲಿ ಎಲ್ಲರೂ ತಮ್ಮನ್ನು ಗುರುತಿಸುವಂತಾಗಬೇಕು ಎಂದು ಹಂಬಲಿಸುತ್ತಿದ್ದಳು.

ಕುಸುಮೆಗೆ ಹೆರಿಗೆಯ ಸಮಯದಲ್ಲಿ ನಿಶ್ಶಕ್ತಿಯಿಂದ ಎರಡು ಬಾರಿ ಗರ್ಭಪಾತವಾಗುತ್ತದೆ . ಹುಟ್ಟುತ್ತಲೇ ಶಿಶುವು ಶವವಾಗಿರುತ್ತದೆ. ಇದರಿಂದ ತುಂಬ ಮನನೊಂದ ಅವಳು ತನ್ನ ಭವಿಷ್ಯವನ್ನು ಕುರಿತು ಮೌಢ್ಯದಿಂದ ಜ್ಯೋತಿಷಿಯಲ್ಲಿ ಮೊರೆ ಹೋಗುತ್ತಾಳೆ. ಅದರಿಂದ ತನಗೆ ಮಕ್ಕಳ ಯೋಗವಿದೆಯೆಂದೂ ತನ್ನ ಗಂಡನಿಗೆ ಮಕ್ಕಳ ಯೋಗವಿಲ್ಲವೆಂಬುದು ತಿಳಿದುಬರುತ್ತದೆ. ಮಕ್ಕಳ ಹಂಬಲವನ್ನು ಹೊಂದಿದ್ದ ಕುಸುಮೆ ಕ್ರಮೇಣವಾಗಿ ಗಂಡನನ್ನು ಅಸಡ್ಡೆ ಮಾಡಲಾರಂಭಿಸಿದಳು, ಇದರಿಂದ ಅವರ ದಾಂಪತ್ಯ ಜೀವನ ದುಃಖಮಯವಾಗುತ್ತದೆ, ಪ್ರತಿಯೊಂದು ಮಾತಿಗೂ ಗಂಡನೊಂದಿಗೆ ಜಗಳವಾಡುತ್ತಿದ್ದಳು. ತನಗೆ ಮಕ್ಕಳ ಯೋಗವಿದೆಯೆಂದು ಜ್ಯೋತಿಷಿಯಿಂದ ಕೇಳಿದ ಬಳಿಕ ತನ್ನ ಗಂಡನ ಸ್ನೇಹಿತ ವೆಂಕಪ್ಪಯ್ಯನೊಂದಿಗೆ ಸಖ್ಯವನ್ನು ಬೆಳೆಸುತ್ತಾಳೆ. ಅವನಿಂದ ಎರಡು ಮಕ್ಕಳನ್ನು ಪಡೆಯುತ್ತಾಳೆ. ಕುಸುಮೆ ಮಕ್ಕಳ ಸಲುವಾಗಿ ಅನೈತಿಕ ಸಂಬಂಧ ಬೆಳೆಸಿದರೆ, ತ.ರಾ.ಸು ಅವರ 'ಬೇಡದ ಮಗು'

(೧೯೫೪) ಕಾದಂಬರಿಯಲ್ಲಿ ಕುಮುದ ಮಕ್ಕಳೆಂದರೆ ಭಯಭೀತಳಾಗುತ್ತಾಳೆ. ವಿದ್ಯಾವಂತೆಯಾದ ಕುಮುದ ಹೆರಿಗೆಯ ಸಮಯದಲ್ಲಿ ತಾಯಂದಿರು ಅಸುನೀಗುವುದು ತುಂಬ ಅಪರೂಪ. ಕೆಲವೊಮ್ಮೆ ದೈಹಿಕ ದೌರ್ಬಲ್ಯದಿಂದಲೂ ಹೆರಿಗೆ ವೇಳೆಯಲ್ಲಿ ತಾಯಂದಿರು ಮರಣಹೊಂದುವ ಸಾಧ್ಯತೆಯಿರುತ್ತದೆ. ಈ ವೈಜ್ಞಾನಿಕ ಸತ್ಯವನ್ನು ಅರಿಯದೆ ಆತಂಕಕ್ಕೀಡಾಗುತ್ತಾಳೆ. ಅದರಿಂದ ಮಕ್ಕಳೇ ಬೇಡ ಎನ್ನುವ ನಿರ್ಧಾರವನ್ನು ತಾಳುತ್ತಾಳೆ, ಇದು ಭಾರತೀಯರ ಸ್ತ್ರೀಯರ ಮನೋಧರ್ಮಕ್ಕೆ ವಿರುದ್ಧವಾಗಿದೆ. ಹಾಗೆಯೇ 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮೆಯ ವರ್ತನೆಯು ಸಮಾಜ ವಿಮುಖವಾಗಿದೆ.

ಕುಸುಮೆಯು ವಾಮ ಮಾರ್ಗದಿಂದ ಸಂತಾನವನ್ನು ಪಡೆದರೂ ಸಹ ಯಾವುದೇ ಪಾಪಪ್ರಜ್ಞೆಯಿಂದ ವಿಚಲಿತಳಾಗದೆ ನಿರಾಳವಾಗಿರುತ್ತಾಳೆ, ಕ್ರಮೇಣವಾಗಿ ಈ ವಿಷಯ ಅರಿತ ಸುಬ್ಬಯ್ಯ ಮೊದಲಿನಿಂದಲೂ ತನ್ನ ಕುಸುಮೆ ತನ್ನನ್ನು ವಂಚಿಸಿಯೆ ಬಾಳ್ವೆ ಸಾಗಿಸಿದಳಲ್ಲ ಎಂದು ಕೊರಗುತ್ತಾನೆ. ಆ ಕೊರಗಿನಿಂದಲೇ ಸುಬ್ಬಯ್ಯ ಮಾನಸಿಕವಾಗಿ ಕುಗ್ಗಿ ಅನಾರೋಗ್ಯಕ್ಕೆ ಈಡಾಗುತ್ತಾನೆ. ಇಂಥಹ ಸಂಧರ್ಭದಲ್ಲಿಯೂ ಕುಸುಮೆಯು ತನ್ನ ನಡವಳಿಕೆಯನ್ನು ಸಮರ್ಥಿಸಿಕೊಳ್ಳುವುದು ಹೇಯವೆನಿಸುತ್ತದೆ.

ನಗರದ ಕೌಟುಂಬಿಕ ಜೀವನವು ಹಳ್ಳಿಯ ಕೌಟುಂಬಿಕ ಜೀವನಕ್ಕಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಪ್ರತಿಷ್ಠೆಯ ಭರಾಟೆಯಲ್ಲಿ ತಮ್ಮ ಸಂಸಾರದ ಕಡೆಗೆ ಹೆಚ್ಚಿನ ಗಮನ ನೀಡದಂತಹ ಸ್ತ್ರೀಯರನ್ನು ಸಮಾಜದಲ್ಲಿ ಗುರುತಿಸಬಹುದು. ಅಂತಹ ಸ್ತ್ರೀಯರ ಚಿತ್ರಣ 'ಚಿಗುರಿದ ಕನಸು' ಕಾದಂಬರಿಯಲ್ಲಿದೆ. ಪ್ರತಿಮೆ ಹಾಗೂ ಮಿಸಸ್ ಜಯರಾಮ ಸ್ವತಂತ್ರವಾದ ಯಾವುದೇ ವ್ಯಕ್ತಿತ್ವವನ್ನು ಹೊಂದಿರಲಿಲ್ಲ, ತಮ್ಮ ಗಂಡಂದಿರ ಹುದ್ದೆಯ ಬೆಂಬಲದಿಂದ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಾರೆ. ವ್ಯವಹಾರಗಳ ಗಲಭೆಯಲ್ಲಿ, ಸಮಾಜ ಸುಧಾರಣೆಯ ಡಾಂಭಿಕತೆಯಲ್ಲಿ ತಮ್ಮ ಸಂಸಾರವನ್ನು ಕಡೆಗಾಣಿಸುತ್ತಾರೆ. ಜನ ಕಾಣುವಲ್ಲಿ, ಕೀರ್ತಿ ಬರುವಲ್ಲಿ ಕೆಲಸ ಮಾಡಬೇಕು, ಮಾಡಿದ ಕೆಲಸವನ್ನು ಮೆರೆಯಿಸಬೇಕು ಎಂಬುದು ಅವರ ಹಂಬಲವಾಗಿತ್ತು, ತಮ್ಮ ಮಕ್ಕಳನ್ನು, ಕುಟುಂಬದವರನ್ನು ಪ್ರೀತಿಸದವರು ಸಮಾಜವನ್ನು ಸುಧಾರಿಸಲು ಹೇಗೆ ಸಾಧ್ಯ? ಎಂಬ ವಿಡಂಬನೆ ಕಾದಂಬರಿಯ ಸ್ತ್ರೀ ಪಾತ್ರಗಳಿಂದ ವ್ಯಕ್ತವಾಗುತ್ತದೆ.

ದಾಂಪತ್ಯ ಜೀವನವು ಸುಖಮಯವಾಗಿರಬೇಕಾದರೆ ಸ್ತ್ರೀ ಪುರುಷರಿಬ್ಬರೂ ವೈಯಕ್ತಿಕವಾಗಿ ಬದುಕನ್ನು ಕಾಣದೆ, ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಇಬ್ಬರೂ ಏಕರೀತಿಯ ಬದುಕನ್ನು ಕಾಣಬೇಕು ಎಂಬ ಮೌಲ್ಯ "ಒಡಹುಟ್ಟಿದವರು" ಕಾದಂಬರಿಯಲ್ಲಿದೆ. ಶೇವಂತಿ ವಾಸುದೇವನನ್ನು ಮದುವೆಯಾಗುತ್ತಾಳೆ. ಅವನೊಂದಿಗೆ ಹಳ್ಳಿಯಲ್ಲಿ ಜೀವನ ಸಾಗಿಸಲು ಅವಳಿಗೆ ಇಷ್ಟವಿರಲಿಲ್ಲ, ಹಳ್ಳಿಯ ಬದುಕಿನ ಬಗೆಗೆ ತಾತ್ಸಾರ ಹೊಂದಿದ್ದಳು. ತನ್ನ ಅಹಂದಿಂದ ಹಿರಿಯರ ಬಗ್ಗೆ ಅವಳಲ್ಲಿ ಗೌರವವಾಗಲಿ, ಪ್ರೀತಿಯಾಗಲಿ, ವಿಧೇಯತೆಯಾಗಲಿ ಹೊಂದಿರಲಿಲ್ಲ, ಯಾರೊಂದಿಗೂ ಹೊಂದಾಣಿಕೆಯಾಗದಂತಹ ಸ್ವಭಾವವನ್ನು ಹೊಂದಿದ್ದಳು. ಅತ್ತೆಯ ಬಗೆಗೆ ವಿನಯವಾಗಲಿ, ನಮ್ರತೆಯಾಗಲಿ ಅವಳಲ್ಲಿ ಇರಲಿಲ್ಲ, ಅವಳನ್ನು ನಿರ್ಲಕ್ಷಿಸುತ್ತ ದಿನಾಲು ಕಚ್ಚಾಡುತ್ತಿದ್ದಳು. ಇದರಿಂದ ವಾಸು ದೇವನಿಗೆ ಮನೆಯಲ್ಲಿ ನೆಮ್ಮದಿಯಿರಲಿಲ್ಲ, 'ಇರುವುದನ್ನು ಇರುವುದರಿಂದ ಸಂತೋಷ ಪಡುವುದನ್ನು ಕಲಿತಾಗ ಮಾತ್ರ ಜೀವನವು ಸಂತೃಪ್ತಿಯಿಂದ ಕೂಡಿರುತ್ತದೆ' ಅವಾಗ ಮಾತ್ರ ಚಿಂತೆಯಿಂದ ಮುಕ್ತರಾಗಿರಲು ಸಾಧ್ಯವಾಗುತ್ತದೆ.

ಆದರೆ ಸೇವಂತಿಗೆ ವಿವಾಹ ತಂದುಕೊಡುವ ಇತರ ಸುಖ ಸೌಲಭ್ಯಗಳು, ಮೋಜುಗಳೇ ಮುಖ್ಯವಾಗುತ್ತವೆ. ದಾಂಪತ್ಯದ ಅಂತಃಸತ್ವ ಅವಳಿಗೆ ಹೊಳೆಯುವುದೇ ಇಲ್ಲ.

ಪ್ರತಿಯೊಬ್ಬರೂ ಸುಖವಾಗಿರಬೇಕೆಂದು ಬಯಸಿ ಮದುವೆಯಾಗುತ್ತಾರೆ. ಹೆಂಡತಿ ಅನುಕೂಲಳಾಗಿದ್ದರೆ ಮಾತ್ರ ಮನೆಯಲ್ಲಿ ಶಾಂತಿ, ನೆಮ್ಮದಿ ಲಭಿಸುತ್ತದೆ. ಹೆಂಡತಿ ಪ್ರತಿಕೂಲಳಾಗಿದ್ದರೆ ಸಂಸಾರದಲ್ಲಿ ಅಶಾಂತಿ ಕೂಡಿರುತ್ತದೆ. ಶೇವಂತಿಯನ್ನು ಇಷ್ಟಪಟ್ಟು ಮದುವೆಯಾದ ವಾಸುದೇವನಿಗೆ ಕೆಲವೇ ದಿನಗಳಲ್ಲಿ ತನ್ನ ಹೆಂಡತಿ 'ಪಂಜರದ ಅರಗಿಣಿಯಲ್ಲ, ಕಾನನದ ಹೆಬ್ಬುಲಿ' ಎಂಬುದರ ಅನುಭವವಾಗುತ್ತದೆ. ದಿನೆ ದಿನೆ ಅವರಿಬ್ಬರಲ್ಲಿ ಹೊಂದಾಣಿಕೆಯ ಅಭಾವದಿಂದ ಸಂಬಂಧ ಹದಗೆಡುತ್ತ ವಿಪರೀತಕ್ಕೆ ಎಡೆಮಾಡಿಕೊಡುತ್ತದೆ. ಅವರಿಬ್ಬರಲ್ಲಿ ಅಂತರ ಹೆಚ್ಚಾಗುತ್ತದೆ. ವಯಸ್ಸಾದ ಅತ್ತೆ ಕಾಲು ಜಾರಿ ಬಿದ್ದು ಅನಾರೋಗ್ಯಕ್ಕೆ ತುತ್ತಾದಾಗಲು ಸೇವಂತಿ ಮಾನವೀಯತೆಯ ದೃಷ್ಟಿಯಿಂದಲೂ ಅವಳ ಬಗ್ಗೆ ಕನಿಕರ, ಕರುಣೆ ತೋರಿಸದೆ ಉದಾಸೀನಳಾಗಿ ವರ್ತಿಸುತ್ತಾಳೆ. ಅತ್ತೆಯ ಆರೈಕೆ ಮಾಡದೆ ಉಳಿಯುತ್ತಾಳೆ. ಸೇವಂತಿ ವಾಸುದೇವರ ದಾಂಪತ್ಯ ಜೀವನ ವಿಷಮಕಾರಿಯಾಗಿತ್ತು, ಸೇವಂತಿ ಗಂಡನನ್ನು ತೊರೆದು ತವರು ಮನೆಯನ್ನು ಸೇರಿದಳು.

ಸುಂದರಗೊಳಿಸಬಹುದಾಗಿದ್ದ ಬದುಕನ್ನು ಸೇವಂತಿ ತನ್ನ ಮುಂಗೋಪ, ಆಡಂಬರದ ಸ್ವಾಭಾವ ಹಾಗೂ ಪರಿಸ್ಥಿತಿಯೊಂದಿಗೆ ಹೊಂದಾಣಿಕೆಯಾಗದೆ ಹಾಳುಗೆಡವಿಕೊಳ್ಳುತ್ತಾಳೆ. ಸ್ನೇಹಿತನಿಗೆ ಸಹಾಯ ಮಾಡಿ ಆರ್ಥಿಕತೆಯ ಅಡಚಣೆಯಿಂದ ಕಂಗಾಲಾದ ಗಂಡನಿಗೆ ಸಮಾಧಾನಪಡಿಸಿ ಹೊಂದಾಣಿಕೆಯ ಜೀವನ ಸಾಗಿಸದೆ, ಅವನಿಗೆ ಮಾನಸಿಕವಾಗಿ ಮತ್ತಷ್ಟು ಹಿಂಸೆಯನ್ನು ನೀಡುತ್ತಾಳೆ. ತವರು ಮನೆಯಲ್ಲಿದ್ದುಕೊಂಡು ಶಾಲೆಯೊಂದರಲ್ಲಿ ಅಧ್ಯಾಪಕಿ ವೃತ್ತಿಯನ್ನು ಆರಂಭಿಸುತ್ತಾಳೆ. ಗಂಡನು ಬದುಕಿದ್ದು ತವರು ಮನೆಯಲ್ಲಿ ಇರುವ ಹೆಣ್ಣು ಪತಿವ್ರತೆಯಾಗಿದ್ದರೂ ಜನರು ಅವಳ ವಿಷಯದಲ್ಲಿ ಸಂಶಯ ತಾಳುತ್ತಾರೆ. ಆದುದರಿಂದ ಹೆಣ್ಣು ತನ್ನ ಗಂಡನಿಗೆ ಪ್ರಿಯಳಾಗಿರಲಿ, ಇಲ್ಲವಾಗಿರಲಿ ನೆಂಟರು ಅವಳನ್ನು ಹೇಗಾದರೂ ಗಂಡನ ಮನೆಯಲ್ಲಿ ಇರಲೆಂದು ಬಯಸುತ್ತಾರೆ. ಅಂತೆಯೇ ವಾಸಂತಿ ತನ್ನ ತಂಗಿಯನ್ನು ಗಂಡನ ಮನೆಗೆ ಕಳುಹಿಸಲು ಪ್ರಯತ್ನಿಸುತ್ತಾಳೆ. ಶೇವಂತಿಯ ಸ್ವಭಾವವನ್ನು ಬಲ್ಲವಳಾಗಿದ್ದ ವಾಸಂತಿಯು ಅವಳ ಸಂಸಾರ ಮುರಿಯದಿರಲಿ ಎಂದು ಭಾವ ವಾಸುದೇವನೊಂದಿಗೆ ಚರ್ಚಿಸುತ್ತಾಳೆ. ಅವನ ಮನವನ್ನು ಬದಲಿಸುತ್ತಾಳೆ. ಗಂಡ ಹೆಂಡಿರನ್ನು ಒಂದು ಗೂಡಿಸುತ್ತಾಳೆ. ವಾಸಂತಿಯ ರಾಯಭಾರತ್ವದಿಂದ ಶೇವಂತಿಯ ಸಂಸಾರ ಸುಖವಾಗಿ ಸಾಗುತ್ತದೆ.

'ಒಡಹುಟ್ಟಿದವರು' ಕಾದಂಬರಿಯಲ್ಲಿ ಇಬ್ಬರು ಸ್ತ್ರೀಯರ ವಿವಿಧ ಮನೋಧರ್ಮಗಳು ಸಂಸಾರಕ್ಕೆ ಹೇಗೆ ಪೂರಕವಾಗಬಲ್ಲವು ಮತ್ತು ಮಾರಕವಾಗಬಹುದು ಎಂಬುದನ್ನು ವಿಶ್ಲೇಷಿಸಲಾಗಿದೆ. ಹೊಂದಾಣಿಕೆಯಿಂದ ಜೀವನ ಸಾಗಿಸಿದರೆ ಕೌಟುಂಬಿಕ ಜೀವನ ಸಂತೋಷವಾಗಿರಲು ಸಾಧ್ಯ ಎಂಬುದನ್ನು ವಾಸಂತಿಯ ಪಾತ್ರದ ಮೂಲಕ ನಿರೂಪಿಸಲಾಗಿದೆ. ಆಡಂಬರದ ಜೀವನ ಸಾಗಿಸುತ್ತ ಹೊಂದಾಣಿಕೆಯ ಜೀವನ ಸಾಗಿಸದಿದ್ದರೆ ಸಂಸಾರದಲ್ಲಿ ಸುಖ, ಶಾಂತಿ ಮರೀಚಿಕೆಯಾಗುತ್ತದೆ ಎಂಬುದನ್ನು ಶೇವಂತಿಯ ಪಾತ್ರದ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ.

'ಅಳಿದ ಮೇಲೆ' ಕಾದಂಬರಿಯಲ್ಲಿ ಯಶವಂತರಾಯ ಮತ್ತು ಕಮಲಮ್ಮಳ ದಾಂಪತ್ಯ ಜೀವನ ಸುಖಮಯವಾಗಿರಲಿಲ್ಲ. ಕಮಲಮ್ಮ ಸ್ವಾರ್ಥಿಯಾಗಿದ್ದು ದರ್ಪದ ಮನೋಭಾವವನ್ನು ಹೊಂದಿದ್ದಳು.

[illegible]

ಯಶವಂತರಾಯರ ಸಾಕು ತಾಯಿ ಪಾರ್ವತಮ್ಮಳೊಂದಿಗೆ ಪ್ರತಿನಿತ್ಯ ಕಚ್ಚಾಡುತ್ತಿದ್ದಳು. ಗಂಡನೊಂದಿಗೆ ಪ್ರೀತಿ, ಸಲುಗೆಯಿಂದ ಇರುತ್ತಿರಲಿಲ್ಲ ಹೀಗಾಗಿ ಅವರ ಕುಟುಂಬ ಅಶಾಂತಿಯಿಂದ ಕೂಡಿತ್ತು. "ಸಾಧ್ವಿಯೂ ಪ್ರಿಯವಾದಿನಿಯೂ ಆದ ಮಡದಿ ಯಾವನಿಗಿಲ್ಲವೋ ಅವನು ಕಾಡಿಗೆ ಹೋಗುವುದು ಲೇಸು, ಅವನಿಗೆ ಮನೆ, ಕಾಡು ಎರಡು ಒಂದೆ" ಎಂಬ ವೇದಾಂತದಂತೆ ಯಶವಂತರಾಯ ಹೆಂಡತಿಯನ್ನು ತೊರೆದು ಮುಂಬೈಗೆ ಹೋಗಿ ಅಲ್ಲಿಯೇ ನೆಲೆಸುತ್ತಾನೆ.

"ಹಣ ಮನುಷ್ಯನನ್ನೆಂದೂ ಸುಖಿಯಾಗಿ ಮಾಡಿಲ್ಲ, ಸುಖವನ್ನಂಟು ಮಾಡುವ ಸ್ವಭಾವವೂ ಅದರಲ್ಲಿಲ್ಲ" ಎಂಬ ಫ್ರಾಂಕ್ಲಿನ್‌ವರ ಹೇಳಿಕೆಯು ಸತ್ಯವಾದುದು. ಇದನ್ನೇ "ಇದ್ದರೂ ಚಿಂತೆ" ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ. ಸಾವಿತ್ರಿ ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದವಳು. ತಂದೆ ತಾಯಿಯರ ಮುದ್ದಿನಿಂದಾಗಿ ಹಟಮಾರಿ ತನವನ್ನು ಮೈಗೂಡಿಸಿಕೊಂಡು ಲೋಕದ ಮೇಲೆಲ್ಲ ತನ್ನ ಅಂಕೆಯನ್ನು ಹೊರಿಸುವ ಸ್ವಭಾವವನ್ನು ಹೊಂದಿದ್ದಳು. ತನ್ನ ಪತಿಯೊಂದಿಗೆ ವ್ಯಾಪಾರ, ವ್ಯವಹಾರದಲ್ಲಿ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿದ್ದಳು. ಅದರಿಂದ ದಿನೆ ದಿನೇ ಅವಳ ವರ್ಚಸ್ಸು ಹೆಚ್ಚತೊಡಗಿತು. ತನ್ನನ್ನು ಸಂಪೂರ್ಣವಾಗಿ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರಿಂದ ಮಕ್ಕಳ ಲಾಲನೆ-ಪಾಲನೆಯಲ್ಲಿ ಅವಳಿಗೆ ಸಂಪೂರ್ಣವಾಗಿ ಆಸಕ್ತಿವಹಿಸಲು ಸಾಧ್ಯವಾಗದೇ ಹೋಗುತ್ತದೆ. ಇದರಿಂದ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಸೂಕ್ಷ್ಮ ಸಂವೇದನೆಯ ಮಗ ಸೀತಾರಾಮ ತಾಯಿಯ ಅಸಡ್ಡೆತನದಿಂದ ಅವಳನ್ನು ದ್ವೇಷಿಸುತ್ತಾನೆ. ಇದರ ಅರಿವಿದ್ದ ಸಾವಿತ್ರಿಯು ಎಚ್ಚೆತ್ತು ಕೊಳ್ಳಬಹುದಾಗಿತ್ತು. ಆದರೆ ಸಾವಿತ್ರಿಯು ಮಕ್ಕಳ ಕಡೆಗೆ ಗಮನಹರಿಸಲೇ ಇಲ್ಲ, ಇದರ ಪರಿಣಾಮವಾಗಿ ಸೀತಾರಾಮನು ತಾಯಿಯನ್ನು ಜೀವನದುದ್ದಕ್ಕೂ ದ್ವೇಷಿಸುತ್ತಾನೆ.

ರಾಘವೇಂದ್ರರಾಯನು ಹೃದಯಾಘಾತದಿಂದ ಮರಣ ಹೊಂದುವನು. ಅವನು ಸಾವನ್ನಪ್ಪಿದ ಮೇಲೆ ಸಾವಿತ್ರಿಯು ವ್ಯವಹಾರವನ್ನೆಲ್ಲ ನಿರ್ವಹಿಸಿಕೊಂಡು ಹೋಗಲಾರಂಭಿಸಿದಳು. ಆ ಮೂಲಕ ಸಮಾಜದಲ್ಲಿ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಳು, ಆದರೆ ಜೀವನದಲ್ಲಿ ದುಡ್ಡೇ ಮುಖ್ಯವಲ್ಲ, ಕುಟುಂಬದ ಸದಸ್ಯರುಗಳೊಂದಿಗೆ ಪ್ರೀತಿಯಿಂದ ವ್ಯವಹರಿಸುವುದು ಮುಖ್ಯವಾಗುತ್ತದೆ. ಆದರೆ ಸಾವಿತ್ರಿಯು ಇದರ ಕಡೆಗೆ ಗಮನ ಹರಿಸುವುದಿಲ್ಲ, ಇದರಿಂದ ತಾಯಿಯ ಬಗೆಗೆ ಇದ್ದ ಸೀತಾರಾಮನ ರೋಷ-ಆವೇಶವು ಕ್ರಮೇಣವಾಗಿ ಹೆಚ್ಚುತ್ತಲೇ ಹೋಗುತ್ತದೆ. "ನನ್ನ ತಂದೆ ತೀರಿಕೊಳ್ಳುವ ಬದಲು ನೀನು ಸತ್ತಿದ್ದರೆ ಎಷ್ಟು ಚೆನ್ನಾಗುತ್ತಿತ್ತು?" (೧೯೮೫-೨೧೦) ಎನ್ನುವಷ್ಟರ ಮಟ್ಟಿಗೆ ತಾಯಿಯನ್ನು ದ್ವೇಷಿಸುತಿದ್ದನು. ಇದರಿಂದಾಗಿಯೇ "ಕಾರಂತರ ಕಾದಂಬರಿಗಳಲ್ಲಿನ ಮುದುಕಿಯರ ಭವ್ಯ ವ್ಯಕ್ತಿತ್ವದ ಅಡಿಯಲ್ಲಿ ವಿದ್ಯಾವಂತೆ ಮಹಿಳೆ ತೀರ ಕುಬ್ಜಳಾಗಿ ಕಾಣುತ್ತಾಳೆ. ಆ ಪಾತ್ರಗಳ ಪ್ರಖರತೆಯಲ್ಲಿ ಕರಗಿ ಹೋಗುತ್ತಾಳೇನೋ ಎಂಬ ದಿಗಿಲನ್ನು ಹುಟ್ಟಿಸುತ್ತಾಳೆ" ಎಂದು ಬಿ.ಎಸ್.ವೆಂಕಟಲಕ್ಷ್ಮಿಯವರು (ಅಶೋಕ ಟಿ.ಪಿ (ಸಂ) ೧೯೯೪, ೪೩೩) ಕಾರಂತರ ಕಾದಂಬರಿಗಳಲ್ಲಿಯ ಸ್ತ್ರೀ ಪಾತ್ರಗಳ ಚಿತ್ರಣದಲ್ಲಿರುವ ಪಕ್ಷಪಾತವನ್ನು ಗುರುತಿಸಿದ್ದಾರೆ. ಸಂಪ್ರದಾಯದಲ್ಲಿ ಆಧುನಿಕತೆಯನ್ನು ಹುಡುಕುವ ಕಾದಂಬರಿಕಾರರ ಒಲವು ಹಳ್ಳಿಯ ವಯಸ್ಸಾದ ಮುದುಕಿಯರ ಕಡೆಗೆ ಇರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿಯೇ ನಗರದ ಮಹಿಳೆಯರ ಪಾತ್ರವು

ಕೃತಕವೆಂಬಂತೆ ಚಿತ್ರಿತವಾಗಿರುವುದು ಮನದಟ್ಟಾಗುತ್ತದೆ. ಸ್ತ್ರೀಯರು ಹೆಚ್ಚಾಗಿ ಕುಟುಂಬದ ನಿರ್ವಹಣೆಯಲ್ಲಿ ಗಮನಹರಿಸಬೇಕು ಎಂಬ ಸಾಂಪ್ರದಾಯಿಕ ನಿಲುವನ್ನು ಕಾದಂಬರಿಯು ಹೊಂದಿದೆ.

ಸ್ತ್ರೀ ಪುರುಷರ ಜಗತ್ತುಗಳ ಸಾಮ್ಯ, ಭಿನ್ನತೆ, ಮಿಲನ, ಕಾತರಗಳ ಅಧ್ಯಯನ "ಕೇವಲ ಮನುಷ್ಯರು" ಕಾದಂಬರಿಯಲ್ಲಿದೆ. ವೈವಾಹಿಕ ಜೀವನವು ಸ್ತ್ರೀ ಪುರುಷರ ನಡುವಿನ ಸಂಬಂಧಗಳಲ್ಲಿನ ರೋಮಾಂಚಕ ಅನುಭವವಿದ್ದಂತೆ. ಈ ಅನುಭವ ಸುಖ ಸಂತೃಪ್ತಿಯನ್ನು ತರಬಹುದಾಗಿರುವಂತೆ, ದುಃಖ ದುರಂತವನ್ನು ಉಂಟು ಮಾಡಬಹುದು. "ಬದುಕನ್ನು ಕೇವಲ ಲಾಭ ನಷ್ಟಗಳ ಎಣಿಕೆಯಿಂದ ಅಳೆಯುವುದರಿಂದ ಬದುಕು ಸೊರಗಿತೇ ಹೊರತು ಪುಷ್ಟಿಗೊಳ್ಳಲಾರದು" ಎಂಬ ಕಾರಂತರ (ಮಾಲಿನಿ ಮಲ್ಯ (ಸಂ) ೧೯೯೯, ೬೭) ಸಂದೇಶವು ಈ ಕಾದಂಬರಿಯಲ್ಲಿದೆ.

ವಾರಿಜೆ ಹಯವದನರಾಯರ ಹೆಂಡತಿ, ಇವರ ಸಂಸಾರ ಸುಖವಾಗಿರಲಿಲ್ಲ, ಕೇವಲ ಪ್ರತಿಷ್ಟೆಗಾಗಿ ಹಂಬಲಿಸುತ್ತಿದ್ದಳು. ಇದರಿಂದಾಗಿಯೇ ಇವರ ದಾಂಪತ್ಯ ಜೀವನವು ವಿಷಮತೆಯಿಂದ ಕೂಡಿತ್ತು. ಅವರ ವಿಷಮತೆ ಆರ್ಥಿಕ ನೆಲೆಯದು ಹಾಗೂ ಸಾಮಾಜಿಕ ಪ್ರತಿಷ್ಟೆಯದು. ತಂದೆಯ ಶ್ರೀಮಂತ ಆರೈಕೆಯಲ್ಲಿ ಬೆಳೆದ ವಾರಿಜೆಗೆ ಬಡತನದ ಅನುಭವವಿರಲಿಲ್ಲ, ಆರ್ಥಿಕವಾಗಿ ಯಾವುದೇ ತೊಂದರೆಯನ್ನು ಅನುಭವಿಸಿರಲಿಲ್ಲ, ತನ್ನನ್ನು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಳು. ಸಭೆ-ಸಮಾರಂಭಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಳು. ಗಂಡನ ಜೊತೆಯಲ್ಲಿ ಪ್ರೀತಿಯಿಂದ ಸಮಯ ಕಳೆಯುವುದಕ್ಕಿಂತ ಅವಳಿಗೆ ಸಮಾಜ ಸೇವೆಯೇ ಮುಖ್ಯವಾಗಿತ್ತು. ಇದರಿಂದ ಗಂಡ ಹೆಂಡತಿಯರ ಸಂಬಂಧದಲ್ಲಿ ಅಂತರ ಅಧಿಕವಾಗಿತ್ತು. ಸ್ವಯಂ ಪ್ರತಿಷ್ಟೆಯುಳ್ಳ ವಾರಿಜೆ ಕ್ರಮೇಣವಾಗಿ ಗಂಡನನ್ನು ನಿರ್ಲಕ್ಷಿಸತೊಡಗಿದಳು. ಎಲ್ಲದರಲ್ಲೂ ತಾತ್ಸಾರ ಮನೋಭಾವನೆ ಹೊಂದಿದ ಹಯವದನರಾಯರು ಕ್ರಮೇಣವಾಗಿ ಹೆಂಡತಿಯಿಂದ ದೂರವಾದರು.

ದಾಂಪತ್ಯ ಜೀವನದಲ್ಲಿ ಗಂಡ ಹೆಂಡತಿಯರಿಬ್ಬರೂ ಪ್ರೀತಿ, ವಿಶ್ವಾಸ, ನಂಬಿಕೆ, ಹೊಂದಾಣಿಕೆಯಿಂದ ಬಾಳಬೇಕು. ಗಂಡ ಹೆಂಡತಿಯರಿಬ್ಬರೂ ತಮ್ಮ ಜೀವನಕ್ಕೆ ಸಂಬಂಧಿಸಿದ ಹೆಚ್ಚು ಸಂಗತಿಗಳನ್ನು ಮರೆಯಬೇಕು, ಅಂದಾಗ ಮಾತ್ರ ದಾಂಪತ್ಯ ಜೀವನವು ಸುಖ, ಶಾಂತಿ ನೆಮ್ಮದಿಯಿಂದ ಇರಲು ಸಾಧ್ಯ. ಆದರೆ ವಾರಿಜೆಯು ತನ್ನ ಸ್ವಯಂ ಪ್ರತಿಷ್ಟೆಗಾಗಿ ದಾಂಪತ್ಯ ಸುಖವನ್ನು ಕಡೆಗಾಣಿಸುತ್ತಾಳೆ. 'ಅವರವರ ನಂಬಿಕೆಗಳನ್ನು ನಾವು ತಿಳಿಯಲೆತ್ನಿಸದೆ ಹೋದರೆ ಅನ್ಯರ ಬದುಕಿನ ಅರ್ಥ ನಮಗಾಗದು' ಎಂಬ ಕಾರಂತರ ಸೂಕ್ತಿಯು ಕಾದಂಬರಿಯ ಆಶಯವಾಗಿದೆ.

ಕಾರಂತರ ಒಟ್ಟು ಕಾದಂಬರಿಗಳನ್ನು ಅವಲೋಕಿಸಿದಾಗ 'ಸ್ತ್ರೀ ಪುರುಷರು ಭಿನ್ನರು. ಇದಂತೂ ನಿಜ, ಆದರೆ ಅಸಮಾನರಲ್ಲ' ಎಂಬ ಓಶೋ ಅವರ ಹೇಳಿಕೆಯಂತೆ ಸ್ತ್ರೀಯರ ವ್ಯಕ್ತಿತ್ವವನ್ನು ಕುರಿತು ಚರ್ಚಿಸಿರುವುದು ಸ್ಪಷ್ಟವಾಗುತ್ತದೆ. ಕೌಟುಂಬಿಕ ಜೀವನದಲ್ಲಿ ಸ್ತ್ರೀಯರ ಸ್ಥಿತಿಗತಿ, ಅವರ ನೋವು, ನಲಿವು, ದುಃಖ, ದುಮ್ಮಾನ ಕುರಿತು ವಿವೇಚಿಸಲಾಗಿದೆ, ಪುರುಷಪ್ರಧಾನ ವ್ಯವಸ್ಥೆಯ ಪ್ರಮುಖ ಸಂಸ್ಥೆಯಾದ 'ವಿವಾಹ' ಎಂಬುದೇ ಒಂದು ಸಮಸ್ಯೆಯ ನೆಲೆಯಾಗಿದೆ. ಸ್ತ್ರೀಯು ತನ್ನ ಬದುಕಿನ ಬಗ್ಗೆ ಹೊಂದಿರುವ ಅಭಿಪ್ರಾಯ, ಅವಳ ಅಗತ್ಯ, ಅವಳ ಕುಂದು-ಕೊರತೆ, ಪರಿಹಾರ ಇದಾವುದನ್ನು ತಂದೆ ತಾಯಿಯರಾಗಲಿ, ಅಥವಾ ಕುಟುಂಬದ ಹಿರಿಯರಾಗಲಿ ಅರಿಯಲು

ಪ್ರಯತ್ನಿಸುವುದಿಲ್ಲ, ಈ ಪ್ರಪಂಚದಲ್ಲಿ ಗಂಡ ಹೆಂಡಿರ ಎಲ್ಲ ಮನೋಭಾವನೆಗಳು, ಎಲ್ಲ ದೇಹಭಾವಗಳು ಒಂದಕ್ಕೊಂದು ಹೊಂದಿಕೊಂಡಿರುವುದು ತೀರ ಅಪರೂಪವಾಗಿದೆ. ಇದನ್ನು ಹೊಂದಿಸಿಕೊಳ್ಳುವುದು ಮುಕ್ಕಾಲು ಪಾಲು ಮನುಷ್ಯನ, ಕಾಲು ಪಾಲು ಸ್ತ್ರೀ ಕೈಯಲ್ಲಿದೆ. ಅದನ್ನು ಇಬ್ಬರೂ ಅರಿತುಕೊಳ್ಳಬೇಕು. ಆದರೆ ಪುರುಷ ಪ್ರಧಾನ ಸಮಾಜವು ಇದನ್ನು ತಿರುವು ಮುರುವು ಮಾಡಿರುವುದನ್ನು ಕಾದಂಬರಿಗಳಲ್ಲಿ ಗುರುತಿಸಬಹುದಾಗಿದೆ. ಹೊಂದಾಣಿಕೆಯ ಭಾರವನ್ನೆಲ್ಲ ಸ್ತ್ರೀಯರತ್ತ ತಿರುಗಿಸಿದೆ, ಇಂಥಹ ಪುರುಷ ಪ್ರಧಾನ ಧೋರಣೆಗಳನ್ನು ಕಾದಂಬರಿಕಾರರು ಪೋಷಿಸಿಕೊಂಡು ಬಂದಿರುವುದು ಮನದಟ್ಟಾಗುತ್ತದೆ. "ಹೊಂದಾಣಿಕೆಯನ್ನು ಯಾವಾಗಲೂ ಕಾರಂತರು ಹೆಣ್ಣಿನ ಕೆಲಸವಾಗಿ ಚಿತ್ರಿಸಿರುವುದು ಕುತೂಹಲಕರ" ಎಂಬ ಬಿ.ಎನ್.ಸುಮಿತ್ರಾಬಾಯಿ (೧೯೯೭, ೨೫) ಅವರ ಹೇಳಿಕೆಯು ಕಾರಂತರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನಿಜವಾಗಿದೆ.

ಕುಟುಂಬದಲ್ಲಿ ಶಾಂತಿ, ನೆಮ್ಮದಿ ಲಭಿಸಬೇಕಾದರೆ ಗಂಡ ಹೆಂಡತಿಯರಿಬ್ಬರೂ ಪರಿಸ್ಥಿತಿಯನ್ನರಿತುಕೊಂಡು ಹೊಂದಾಣಿಕೆಯುತ ಜೀವನ ಸಾಗಿಸಬೇಕು ಎಂಬುದು ಕಾರಂತರ ನಿಲುವಾಗಿದೆ. ಆದರೆ ಪುರುಷರು ಹೊಂದಾಣಿಕೆಯಿಂದ ಜೀವನ ನಡೆಸಿದ ಕುಟುಂಬಗಳು ದುಃಖಮಯವಾಗಿರುವುದರಿಂದ, ಸ್ತ್ರೀಯರ ಹೊಂದಾಣಿಕೆಯೇ ಮುಖ್ಯ ಎಂಬುದು ಕಾದಂಬರಿಕಾರರ ಸಾಂಪ್ರದಾಯಿಕ ಒಲವು ಆಗಿರುವುದು ಸ್ಪಷ್ಟವಾಗುತ್ತದೆ. 'ಸರಸಮ್ಮನ ಸಮಾಧಿ' ಕಾದಂಬರಿಯ ಹಿರಣ್ಯ, 'ಹೆತ್ತಳಾ ತಾಯಿ' ಕಾದಂಬರಿಯ ಸುಬ್ರಾಯ, 'ಒಡಹುಟ್ಟಿದವರು' ಕಾದಂಬರಿಯ ವಾಸುದೇವ ಮುಂತಾದ ಪಾತ್ರಗಳಿಂದ ಪುರುಷರ ಹೊಂದಾಣಿಕೆಗಿಂತಲೂ ಸ್ತ್ರೀಯ ಹೊಂದಾಣಿಕೆಯೆ ಮುಖ್ಯವಾಗಿರುತ್ತದೆ ಎಂಬ ಕಾದಂಬರಿಕಾರರ ಸಾಂಪ್ರದಾಯಿಕ ನಿಲುವು ಅರಿವಾಗುತ್ತದೆ.

ಕಾದಂಬರಿಕಾರರ ಒಲವು ನಗರದ ಮಹಿಳೆಯರಿಗಿಂತ ಗ್ರಾಮೀಣ ಮಹಿಳೆಯರ ಕಡೆಗೆ ಅಧಿಕವಾಗಿದೆ. 'ಮರಳಿ ಮಣ್ಣಿಗೆ' ಕಾದಂಬರಿಯ ನಾಗವೇಣಿ, 'ಒಂಟಿದನಿ' ಕಾದಂಬರಿಯ ಶಾಲಿನಿ, 'ಇದ್ದರೂ ಚಿಂತೆ' ಕಾದಂಬರಿಯ ಸುಮಿತ್ರೆ.. ಮುಂತಾದ ಪಾತ್ರಗಳಲ್ಲಿ ಕಾರಂತರ ಮೆಚ್ಚುಗೆ ಸಂಪ್ರದಾಯದ ಕಡೆಗೆ ವಾಲುತ್ತದೆ. ನಾಗವೇಣಿ ವಿದ್ಯಾವಂತೆಯಾಗಿದ್ದು ಅನುಕೂಲವಂತೆಯೂ ಆಗಿದ್ದಳು. ಅವಳ ಬದುಕಿಗೆ ಹಲವಾರು ಮುಖಗಳಿದ್ದರೂ, ಹೊಲದಲ್ಲಿ ಬೇಸಾಯ ಮಾಡುವುದು ಸಾಂಪ್ರದಾಯಿಕತೆಯನ್ನು ಬಿಂಬಿಸುತ್ತದೆ. ಶಾಲಿನಿ ಮುಂಬೈಯಂತಹ ನಗರದಲ್ಲಿ ಬೆಳೆದವಳು, ಗಂಡನ ಮಾನಸಿಕ ಹಿಂಸೆಯನ್ನು ಪ್ರತಿಭಟಿಸಿ, ಸ್ವಯಂ ಉದ್ಯೋಗ ಮಾಡುತ್ತ ಬದುಕಬಹುದಾಗಿತ್ತು. ಆದರೆ ಸಾವಿನಲ್ಲಿ ದುರಂತವನ್ನಪ್ಪುವುದು ವಿಪರ್ಯಾಸವಾಗಿದೆ. ಸಾವಿತ್ರಿಯು ವ್ಯವಹಾರದ ಜೊತೆಯಲ್ಲಿಯೇ ಮಕ್ಕಳನ್ನು ಪ್ರೀತಿಸಬಹುದಾಗಿತ್ತು. ಆದರೆ ಅದು ಸಾಧ್ಯವಾಗಲಿಲ್ಲ, ಇವೆಲ್ಲವುಗಳನ್ನು ಗಮನಿಸಿದಾಗ ಕಾದಂಬರಿಕಾರರ ಒಲವು ಹಳ್ಳಿಯ ಮಹಿಳೆಯರ ಕಡೆಗೆ ಇರುವುದು ಸ್ಪಷ್ಟವಾಗುತ್ತದೆ. ಏಕೆಂದರೆ 'ಚೋಮನ ದುಡಿ' ಕಾದಂಬರಿಯ ಬೆಳ್ಳಿ, 'ಮರಳಿ ಮಣ್ಣಿಗೆ' ಕಾದಂಬರಿಯ ಸರಸೋತಿ, ಪಾರೋತಿ, 'ಮೊಗಪಡೆದ ಮನ' ಕಾದಂಬರಿಯ ನಂದಿನಿ, 'ಸನ್ಯಾಸಿಯ ಬದುಕು' ಕಾದಂಬರಿಯ ಸುಮಿತ್ರೆ, 'ಕರುಳಿನ ಕರೆ' ಕಾದಂಬರಿಯ ಭಾಗೀರಥಿ, 'ಸ್ವಪ್ನದ ಹೊಳೆ' ಕಾದಂಬರಿಯ ತುಂಗಮ್ಮ, 'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯ ಕಾವೇರಿ....... ಮುಂತಾದ ಸ್ತ್ರೀ ಪಾತ್ರಗಳು ಗಂಡನ ಆಶ್ರಯವಿಲ್ಲದೆ ಸ್ವಂತ ದುಡಿಮೆಯಿಂದ ಕುಟುಂಬದ ನಿರ್ವಹಣೆಯನ್ನು ಮಾಡುವುದನ್ನು ಲಕ್ಷಿಸಲಾಗಿದೆ. "ಕನ್ನಡ ಕಾದಂಬರಿ ಲೋಕದಲ್ಲೇ ಅತ್ಯಂತ ಶಕ್ತ ಗ್ರಾಮೀಣ ಸ್ತ್ರೀ ಪಾತ್ರಗಳನ್ನು

[illegible]

ಸೃಷ್ಟಿಸಿದ ಹಿರಿಮೆ ಕಾರಂತರದು" ಎಂಬ ಗಾಯತ್ರಿಯವರ (ಬರಗೂರು ರಾಮಚಂದ್ರಪ್ಪ (ಸಂ) ೧೯೯೩, ೧೨೧) ಹೇಳಿಕೆ ಇದಕ್ಕೆ ಪುಷ್ಟಿಯನ್ನು ನೀಡುತ್ತದೆ.

ಅನಾದಿಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿತಾಯಿಯ ಸ್ಥಾನ ಅಮೂಲ್ಯವಾದುದು. ಅಂತೆಯೇ ಪತ್ನಿಯು ಹೊಂದಿರದ ಅಧಿಕಾರವನ್ನು ಅವಳು ಹೊಂದಿದ್ದಾಳೆ. ಇದನ್ನು 'ಇನ್ನೊಂದೇ ದಾರಿ' ಕಾದಂಬರಿಯ ಹೊನ್ನಮ್ಮ ಹಾಗೂ 'ಧರ್ಮರಾಯನ ಸಂಸಾರ' ಕಾದಂಬರಿಯ ಮಹಾಲಕ್ಷ್ಮಮ್ಮ ಪಾತ್ರಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗುತ್ತದೆ. 'ಹೆಣ್ಣು ಏನನ್ನಾದರೂ ಸಹಿಸಿಯಾಳು ಆದರೆ ತನ್ನ ಪ್ರೀತಿಯಲ್ಲಿ ಪಾಲನ್ನು ಸಹಿಸಲಾರಳು' ಎಂಬುದು ಲೋಕಾರೂಢಿಯ ಹೇಳಿಕೆಯಾಗಿದೆ. ಆದರೆ ಕಾದಂಬರಿಕಾರರು ಆದರ್ಶದ ಹಿನ್ನೆಲೆಯಲ್ಲಿ ಈ ಹೇಳಿಕೆಯನ್ನು ಸುಳ್ಳಾಗಿಸಿರುವುದು ವಾಸ್ತವಕ್ಕೆ ತುಂಬ ದೂರವಾಗಿದೆ. 'ಮರಳಿ ಮಣ್ಣಿಗೆ' ಕಾದಂಬರಿಯ ಪಾರೋತಿ, 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯ ಲಕ್ಷ್ಮಿ, 'ಧರ್ಮರಾಯನ ಸಂಸಾರ' ಕಾದಂಬರಿಯ ಮಹಾಲಕ್ಷ್ಮಿ.... ಮುಂತಾದ ಸ್ತ್ರೀ ಪಾತ್ರಗಳು ತಮ್ಮ ಗಂಡಂದಿರು ಮತ್ತೊಂದು ಹೆಣ್ಣನ್ನು ಬಯಸಿದಾಗ ಪ್ರತಿಭಟಿಸದೆ ಹೊಂದಾಣಿಕೆಯಿಂದಿರುವುದು ತಮ್ಮ ಅಸಹಾಯಕತೆಯಿಂದಾಗಿಯೇ ಹೊರತು ಉದಾರತೆಯಿಂದಲ್ಲ, ಒಂದು ವೇಳೆ ಈ ವಿಷಯದಲ್ಲಿ ಮಹಿಳೆಯರು ಉದಾರತೆಯನ್ನು ಹೊಂದಿದ್ದೇ ಆದರೆ ಬಹುಪತ್ನಿತ್ವಕ್ಕೆ ಆಮಂತ್ರಣ ನೀಡಿದಂತಾಗುತ್ತದೆ. ಇದೆಲ್ಲವನ್ನು ಗಮನಿಸಿದಾಗ ಕಾದಂಬರಿಕಾರರು ಸ್ತ್ರೀ ಪಾತ್ರಗಳನ್ನು ಆದರ್ಶದ ನೆಲೆಯಲ್ಲಿ ಚಿತ್ರಿಸಿರುವುದು ವ್ಯಕ್ತವಾಗುತ್ತದೆ.

ಈ ಎಲ್ಲ ಸಾಂಪ್ರದಾಯಿಕ ವಿಚಾರಗಳ ಮಧ್ಯೆಯೂ ಕಾದಂಬರಿಗಳಲ್ಲಿ ಹಲವಾರು ಆಧುನಿಕ ವಿಚಾರಧಾರೆಯನ್ನು ಗುರುತಿಸಬಹುದು. 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಸುನಾಲಿನಿಯ ಆದರ್ಶ ದಾಂಪತ್ಯದ ಕುರಿತ ನಿಲುವು ಚಿಂತನಪರವಾಗಿದೆ. 'ಮೊಗಪಡೆದ ಮನ' ಕಾದಂಬರಿಯಲ್ಲಿ ವ್ಯಾಸ ಮತ್ತು ವಿಮಲೆಯರ ವಿಧವಾ ವಿವಾಹ, 'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ಸತ್ಯಭಾಮೆ ಹಾಗೂ ವಿನಾಯಕರ ಮದುವೆ, 'ಸ್ವಪ್ನದ ಹೊಳೆ'ಕಾದಂಬರಿಯಲ್ಲಿ ಕಿಟ್ಟಣ್ಣ ಮತ್ತು ಬನ್ನಿಯ ಅಂತರ್ಜಾತಿ ವಿವಾಹ, 'ಧರ್ಮರಾಯನ ಸಂಸಾರ' ಹಾಗೂ 'ಕಣ್ಣಿದ್ದೂ ಕಾಣರು', ಕಾದಂಬರಿಯಲ್ಲಿ ಪ್ರೌಢ ವಿಧವಾ ವಿವಾಹದಂತಹ ಪ್ರಗತಿಪರ ಚಿಂತನೆಗಳಂತಹ ಸಾಮಾಜಿಕ ಕಳಕಳಿಯನ್ನು ಕುರಿತು ವಿವೇಚಿಸಲಾಗಿದೆ.

'ಹೆಣ್ಣಿಗೆ ಒಂದೇ ಬಾರಿ ಮದುವೆ' ಎಂಬ ಸಾಂಪ್ರದಾಯಿಕ ಮೌಲ್ಯವನ್ನು ಪ್ರತಿನಿಧಿಸುವ ತ್ರಿವೇಣಿ, ಕೊಡಗಿನ ಗೌರಮ್ಮ, ಭೈರಪ್ಪ, ಚಂದ್ರಶೇಖರ ಕಂಬಾರ, ಸ್ವಾಮಿ ವಿವೇಕಾನಂದ ಅಂತವರ ಮಧ್ಯೆ ಶಿವರಾಮ ಕಾರಂತರು ಹೆಣ್ಣು ಮರುಮದುವೆಯಾಗಬಹುದು ಎಂಬುದನ್ನು ನಿರೂಪಿಸಿದ್ದಾರೆ. ವಿದ್ಯಾಸಾಗರ, ಗಾಂಧೀಜಿ, ಅಂಬೇಡ್ಕರ್ ಅವರು ವಿಧವಾ ವಿವಾಹ, ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿ ಬೆಂಬಲಿಸಿದರು. ಇವರ ಪ್ರಭಾವವನ್ನು ಕಾರಂತರ ಕಾದಂಬರಿಗಳಲ್ಲಿಯೂ ಗುರುತಿಸಬಹುದು.

'ವೇಶ್ಯೆಯರ ರಕ್ತ ಕಳಂಕಿತವಾದುದು, ಅವರನ್ನು ಮದುವೆಯಾಗಬಾರದು' ಎಂದು ಅ.ನ.ಕೃ ಅವರ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. "ವೇಶ್ಯೆಯರನ್ನು ಗಾಂಧಿ ಕಳ್ಳರಿಗೆ ಹೋಲಿಸುತ್ತಾರೆ" ಎಂದು ಪ್ರೀತಿ ಶುಭಚಂದ್ರ ಹೇಳಿರುವುದು (ಪಾಟೀಲ್ ಎಂ.ಎಸ್., ಸ್ವಾಮಿರಾವ್ ಕುಲಕರ್ಣಿ (ಸಂ) ೨೦೦೪, ೨೭) ವೇಶ್ಯೆಯರ ಬಗೆಗೆ ಗಾಂಧಿ

ೀಜಿಯವರಿಗಿರುವ ಒಲವು ಸ್ಪಷ್ಟವಾಗುತ್ತದೆ. ಆದರೆ ಶಿವರಾಮ ಕಾರಂತರು ವೇಶ್ಯೆಯರನ್ನು ಪೂರ್ವಗ್ರಹಪೀಡೆಯಿಂದ ಗುರುತಿಸದೆ, ಅವರಲ್ಲಿಯೂ ಮಾನವೀಯತೆಯಿರುತ್ತದೆ, ಯಾವುದೋ ಪರಿಸ್ಥಿತಿಗೆ ಸಿಲುಕಿ ಅಸಹಾಯಕತೆಯಿಂದ ವೇಶ್ಯೆಯರಾಗಿರುತ್ತಾರೆ ಎಂದು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆ. ಅವರೂ ಮದುವೆಯಾಗಿ ಸಂಸಾರಿಕ ಜೀವನ ನಡೆಸಬಹುದು ಎಂಬುದನ್ನು ಕಾದಂಬರಿಗಳಲ್ಲಿ ಪ್ರತಿಪಾದಿಸಲಾಗಿದೆ. ಇವರ ಸಮಕಾಲೀನರಾದ ಬಸವರಾಜ ಕಟ್ಟೀಮನಿಯವರ ವೇಶ್ಯೆಯರ ಬಗೆಗಿನ ಒಲವು ಕಾರಂತರಂತೆ ಪ್ರಗತಿಪರವಾಗಿದೆ.

'ಹಿಂದೂ ಉತ್ತರಾಧಿಕಾರ ಕಾನೂನು' (೧೯೫೬) ಅನ್ವಯ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀ ಪುರುಷರಿಗೆ ಸಮಪಾಲು ಇದೆ. 'ವಿಶೇಷ ವಿವಾಹ ಕಾನೂನು' (೧೯೫೪) ಪ್ರಕಾರ ಅಂತರ್ಜಾತಿ ವಿವಾಹಕ್ಕೆ ಸಂವಿಧಾನಿಕ ಮನ್ನಣೆ ಇದೆ. 'ಹಿಂದೂ ದತ್ತು ಸ್ವೀಕಾರ ಮತ್ತು ಸಂರಕ್ಷಣಾ ಕಾನೂನು' (೧೯೫೬) ನಿಯಮದಂತೆ ಗಂಡನಿಂದ ನಿರಾಕರಣೆಗೊಂಡ ಅಥವಾ ಪರಿತ್ಯಕ್ತಳಾದ ಪತ್ನಿಗೆ ಗಂಡನಿಂದ ಜೀವನಾಂಶ ಪಡೆಯುವ ಹಕ್ಕಿದೆ. ಇಂಥಹ ಹಲವಾರು ಮಹಿಳಾ ಸುಧಾರಣೆಯ ನಿಯಮಗಳನ್ನು ಕಾದಂಬರಿಗಳಲ್ಲಿ ಸಂದರ್ಭಕ್ಕನುಗುಣವಾಗಿ ಪ್ರಸ್ತಾಪಿಸಲಾಗಿದೆ.

ಒಟ್ಟಾರೆಯಾಗಿ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀಯರ ಕೌಟುಂಬಿಕ ಪ್ರಪಂಚವನ್ನು ಅವಲೋಕಿಸಿದಾಗ ಕಾದಂಬರಿಕಾರರು ಸಂಪ್ರದಾಯದಲ್ಲಿ ಆಧುನಿಕತೆಯನ್ನು ಶೋಧಿಸುವ ಪ್ರವೃತ್ತಿಯನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ.

[illegible]

ಅಧ್ಯಾಯ ೩

ಲೈಂಗಿಕ ಪ್ರಪಂಚ

ಅಧ್ಯಾಯ ೩

ಲೈಂಗಿಕ ಪ್ರಪಂಚ

ಮಾನವನು ಸಮಾಜ ಜೀವಿ. ಒಂಟಿಯಾಗಿರಲು ಬಯಸುವುದಿಲ್ಲ. ಯಾವಾಗಲೂ ಇತರರೊಂದಿಗೆ ಸಂಪರ್ಕದಿಂದ ಇರಲು ಪ್ರಯತ್ನಿಸುತ್ತಾನೆ. ಅವನು ಸದೃಢವಂತನೂ ಹಾಗೂ ಆರೋಗ್ಯವಂತನೂ ಆಗಿರಬೇಕಾದರೆ ಮೂಲಭೂತ ಅವಶ್ಯಕತೆಗಳಾದ ಗಾಳಿ, ನೀರು, ಆಹಾರ ಅತ್ಯವಶ್ಯಕವಾಗಿವೆ. ಇವುಗಳೊಂದಿಗೆ ಕಾಮವೂ ಪ್ರಮುಖವಾದುದು. ಜೀವನದ ಎಷ್ಟೋ ಅವಶ್ಯಕ ಕ್ರಿಯೆಗಳಂತೆ ಕಾಮವೂ ಅಗತ್ಯವಾಗಿದೆ. ಅನಾದಿಕಾಲದಿಂದಲೂ ಲೈಂಗಿಕತೆ ಮನುಷ್ಯನ ಜೀವನದಲ್ಲಿ ಒಂದಲ್ಲ ಒಂದು ರೀತಿ ಹಾಸುಹೊಕ್ಕಾಗಿದೆ. ಲೈಂಗಿಕತೆಯು ಬದುಕಿನ ಪ್ರಬಲವಾದ ಪ್ರೇರಣೆಯಾಗಿದ್ದು, ಮನುಷ್ಯನ ಪೂರ್ಣವ್ಯಕ್ತಿತ್ವದ ಒಂದು ಅವಿಭಾಜ್ಯ ಅಂಗವಾಗಿದೆ. ಮನುಷ್ಯನು 'ಕಾಮ'ದಿಂದ ಎಂದೆಂದೂ ಮುಕ್ತನಾಗಿರಲಾರ. ಅದು ಹುಟ್ಟಿನಿಂದ ಸಾಯುವವರೆಗೂ, ಜೀವನದ ಉದ್ದಕ್ಕೂ ಮಾನವರೊಂದಿಗೆ ಇರುತ್ತದೆ. ಲೈಂಗಿಕತೆಯ ಮೂಲ ಉದ್ದೇಶ ಸಂತಾನೋತ್ಪತ್ತಿ ಮತ್ತು ಮನುಕುಲವನ್ನು ಮುಂದುವರಿಸಿಕೊಂಡು ಹೋಗುವುದು. ಪ್ರಪಂಚದಲ್ಲಿ ಲೈಂಗಿಕತೆಯೇ ಇಲ್ಲದಿದ್ದರೆ ಸಂಪೂರ್ಣ ಜೀವಕುಲವೇ ಸ್ತಬ್ಧವಾಗುತ್ತದೆ. ಅದರ ಹೊರತಾಗಿ ಮನುಷ್ಯನ ಜೀವನವನ್ನು ಊಹಿಸಿಕೊಳ್ಳಲು ಸಹ ಸಾಧ್ಯವಿಲ್ಲ. ಮನುಷ್ಯನು ಕಾಮವನ್ನು ಹತ್ತಿಕ್ಕಲು ಪ್ರಯತ್ನಿಸಿದಷ್ಟು, ಅದರಲ್ಲಿ ಮತ್ತಷ್ಟು ಬಿಗಿದುಕೊಳ್ಳುವನು. ಮತ್ತಷ್ಟು ಬಂಧಿಯಾಗುವನು. ಇದನ್ನೆಲ್ಲ ಗಮನಿಸಿದಾಗ ಜೀವನದಲ್ಲಿ ಲೈಂಗಿಕತೆಯ ಹಿರಿಮೆ ಎಷ್ಟು ಎಂಬುದು ಮನದಟ್ಟಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಸಿಗ್ಮಂಡ್ ಫ್ರಾಯ್ಡರ್ ಹೇಳಿಕೆಯು ಔಚಿತ್ಯಪೂರ್ಣವಾಗಿದೆ. "'ಕಾಮವಾಂಛೆ'ಯೇ ಮಾನವನ ಎಲ್ಲ ಭಾವ ಭಾವನೆಗಳ ಆಚಾರ ವ್ಯವಹಾರಗಳ ಮೂಲದಲ್ಲಿರುವ ಶಕ್ತಿ".

ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದಾದ ಕಾಮವು ಸೃಜನಶೀಲವಾದುದು ಹಾಗೂ ಕ್ರಿಯಾತ್ಮಕವಾದುದು. ಇದರಿಂದ ಸ್ನೇಹವು ವೃದ್ಧಿಸುತ್ತದೆ. ಅದಕ್ಕೆ ಸ್ವಚ್ಛಂದವಾದ ಕಾಮಕ್ಕಿಂತ ಕೌಟುಂಬಿಕ ವ್ಯವಸ್ಥೆಯಲ್ಲಿ ಅರಳುವ ದಾಂಪತ್ಯ ಜೀವನವೇ ಪೂರಕವಾಗಿದೆ. ದಾಂಪತ್ಯ ಜೀವನವು ಕೇವಲ ಗಂಡು-ಹೆಣ್ಣಿನ ಶಾರೀರಿಕ ಸಂಬಂಧವಾಗಿರದೆ, ಎರಡು ಮನಸ್ಸುಗಳ ಮಿಲನವಾಗಿದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಕಾಮ-ಲೈಂಗಿಕತೆಗೆ ವಿಶಿಷ್ಟವಾದ ಸ್ಥಾನವಿದೆ. ಲೈಂಗಿಕತೆಯು ಕೇವಲ 'ಭೋಗಿಸುವ' ವಸ್ತುವಾಗಿ ಮಾತ್ರ ಉಳಿದಿಲ್ಲ. ಇದಕ್ಕೆ ಗಂಡ-ಹೆಂಡತಿಯರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ, ಹೊಂದಾಣಿಕೆ

[illegible]

[illegible]

[illegible]

ಮುಖ್ಯವಾಗುತ್ತದೆ. ಇದು ಕೇವಲ ಶಾಸ್ತ್ರದ ಚೌಕಟ್ಟಿನಿಂದ ರೂಪುಗೊಳ್ಳುವ ಸಂಬಂಧವಲ್ಲ. ಪರಸ್ಪರ ಅನುರಾಗ, ತಿಳುವಳಿಕೆಗಳ ಆಧಾರದ ಮೇಲೆ ಮಾಡಿಕೊಳ್ಳುವ ಪ್ರಜ್ಞಾಪೂರ್ವಕವಾದ ಆಯ್ಕೆಯಾಗಿದೆ. ಶಿವರಾಮ ಕಾರಂತರು ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಆತ್ಮಕಥನದಲ್ಲಿ "ಕಾಮವೊಂದೇ ಜೀವನದ ಸೂತ್ರವಲ್ಲ. ಕಾಮವು ಪಶು ಸಹಜವಾಗಿದ್ದರೂ ಅದು ಪ್ರೇಮಕ್ಕೂ ಸಹಜವಾದ ದಾರಿ. ಅವು ಅನ್ಯೋನ್ಯ ಶಕ್ತಿಗಳು. ಎಲ್ಲಿ ಸಹಜವಾದ ಪ್ರೇಮವಿದೆಯೋ ಅದೇನೆ ನಿಜವಾದ ದಾಂಪತ್ಯಕ್ಕೆ ಎಡೆಮಾಡಿಕೊಡುತ್ತದೆ" (೧೯೯೪: ೫೫) ಎನ್ನುವ ಮೂಲಕ 'ಕಾಮ'ದ ಇತಿ-ಮಿತಿಯನ್ನು ಗುರುತಿಸಿದ್ದಾರೆ.

ಸಮಾಜದಲ್ಲಿ ಗಂಡು-ಹೆಣ್ಣಿನ ಸಂಬಂಧವು ಒಟ್ಟೊಟ್ಟಿಗೆ ಸಾಮಾಜಿಕವೂ ಹೌದು; ವೈಯಕ್ತಿಕವೂ ಹೌದು. ನಿಜ ಜೀವನದಲ್ಲಿ ಶೃಂಗಾರಕ್ಕೆ ತುಂಬಾ ಪ್ರಾಮುಖ್ಯತೆ ಇದೆ. ಶೃಂಗಾರ, ನವರಸಗಳಲ್ಲಿ ಒಂದು. ಅರವತ್ತು ನಾಲ್ಕು ಕಲೆಗಳಲ್ಲಿ ಶೃಂಗಾರಕ್ಕೆ ಆದ್ಯತೆ ಹೆಚ್ಚು. ಪ್ರೇಮದಲ್ಲಿ ಶೃಂಗಾರಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಸ್ತ್ರೀ-ಪುರುಷರನ್ನು ಸದಾ ಆಯಸ್ಕಾಂತದಂತೆ ಹಿಡಿದಿಡುವ ಶಕ್ತಿ ಶೃಂಗಾರಕ್ಕಿದೆ. ಈ ಲೈಂಗಿಕ ಸಂಬಂಧವೆನ್ನುವುದು ಮನೋದೈಹಿಕ ವ್ಯಾಪಾರವಾಗಿದ್ದು, ದೇಹಕ್ಕೂ ಹಾಗೂ ಮನಸ್ಸಿಗೂ ಸಂಬಂಧಿಸಿದೆ. ಲೈಂಗಿಕ ಪ್ರಕ್ರಿಯೆಯಿಂದಾಗಿ ಶರೀರದ ಜೊತೆಗೆ, ಮನಸ್ಸು ಸಹ ಸುಕ್ಕಾಗುವುದನ್ನು ತಡೆಗಟ್ಟುತ್ತದೆ. ವಯಸ್ಸಾದರೂ ಸಹ ಆರೋಗ್ಯವಂತರಾಗಿರುತ್ತಾರೆ. ಶರೀರದ ಕದಲಿಕೆ ಒಳ್ಳೆಯ ವ್ಯಾಯಾಮವಾಗಿರುತ್ತದೆ. ಕ್ರಮವಾಗಿ ಲೈಂಗಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವ ದಂಪತಿಗಳು ಉಲ್ಲಾಸ ಹಾಗೂ ಉತ್ಸಾಹದಿಂದ ಆರೋಗ್ಯವಂತರಾಗಿರುತ್ತಾರೆ. ಸಂಭೋಗ ತಾರುಣ್ಯದ ಭಾವತೀವ್ರತೆ, ಹುರುಪು, ಉತ್ಸಾಹ, ಉತ್ಕಟತೆ, ಆಸಕ್ತಿಯನ್ನು ಸ್ಥಿರವಾಗಿಡುತ್ತದೆ. "ಪ್ರೇಮವಿಲ್ಲದೆ ಯಾವೊಬ್ಬನೂ ಎಂದು ಸುಖಿಯಾಗಿರಲಾರ, ಸ್ವಸ್ಥನಾಗಲಾರ. ಪ್ರೇಮವನ್ನು ಕಾಣದವನು ಮಿದುಳಿನ ರೋಗಕ್ಕೆ ಈಡಾಗುವನು. ಚಿಂತಾಕುಲನಾಗುವನು. ನರಗಳ ಬಿಗಿತಕ್ಕೊಳಗಾಗುವನು"-ಎಂಬ ಓಶೋರವರ ಹೇಳಿಕೆ (ಗಣೇಶ ಶರ್ಮ (ಅನು) ೧೯೯೫; ೧೫೭) ಕಾಮದ ಮಹತ್ವ ಹಾಗೂ ಅದರ ಅನಿವಾರ್ಯತೆಯನ್ನು ಕುರಿತು ಸ್ಪಷ್ಟಪಡಿಸುತ್ತದೆ.

ಹೆಣ್ಣನ್ನು ಮೊದಲು ತಾಯಿಯಾಗಿ, ಸಹೋದರಿಯಾಗಿ, ಅಪರಿಚಿತ ದೇಹ ಸೌಂದರ್ಯವಾಗಿ, ಪರಿಚಿತ ಸಖಿಯಾಗಿ, ಮತ್ತೆ ತಾಯಿಯಾಗಿ ನೋಡುವ ಗಂಡು ಇವೆಲ್ಲ ಭಾವನೆಗಳ ಒಟ್ಟು ಪರಿಪ್ರೇಕ್ಷದಲ್ಲಿ ಲೈಂಗಿಕ ಆಕರ್ಷಣೆ-ವಿಕರ್ಷಣೆಗಳ ಗೋಜಲುಗಳನ್ನು ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿರುತ್ತಾನೆ. ಲೈಂಗಿಕತೆಯ ದೆಸೆಯಿಂದಾಗಿ ಪುರುಷ ಪ್ರಧಾನ ಸಮಾಜವು ಸ್ತ್ರೀಯರಿಗೆ ಶೋಷಣೆ ಮಾಡುತ್ತ, ಹಿಂಸೆಗೆ ಗುರಿಮಾಡಿರುವುದನ್ನು ಗುರುತಿಸಬಹುದು. ಸ್ತ್ರೀಯರನ್ನು ಕೇವಲ ಭೋಗ ಜೀವನಕ್ಕೆ ಬಳಸಿಕೊಂಡಿರುವುದನ್ನು ಗುರುತಿಸಬಹುದು. ಸ್ತ್ರೀಯರನ್ನು ಕೇವಲ ಭೋಗ ಜೀವನಕ್ಕೆ ಬಳಸಿಕೊಂಡು ಅವರನ್ನು 'ಹೆರಿಗೆ ಯಂತ್ರ'ಗಳನ್ನಾಗಿ ಮಾಡಿರುವುದು ವಾಸ್ತವ ಸಮಾಜದಲ್ಲಿಯೂ ಕಂಡು ಬರುತ್ತದೆ. ಗಂಡಿಗೆ ಅನ್ವಯಿಸದ ಶೀಲದ ಪ್ರಾಮುಖ್ಯತೆ ಹೆಣ್ಣಿಗೆ ಮಾತ್ರ ಅನ್ವಯಿಸುತ್ತದೆ ಎಂಬ ಪಕ್ಷಪಾತ

ನಿಯಮಗಳು ಸಮಾಜಿಕ ವ್ಯವಸ್ಥೆಯಲ್ಲಿ ಪ್ರಸ್ತುತದಲ್ಲಿವೆ. ಹೆಣ್ಣು ಎಂಥಹ ಕಷ್ಟ ಕಾಲದಲ್ಲಿಯೂ ಶೀಲವನ್ನು ಹಾಳುಮಾಡಿಕೊಳ್ಳದೆ, ಕಾಪಾಡಿಕೊಳ್ಳಬೇಕು. ಅಂತಹ ಸಂದರ್ಭವೇನಾದರೂ ಬಂದರೆ ಆತ್ಮಸಮರ್ಪಣೆ ಮಾಡಿಕೊಳ್ಳಬೇಕು ಎಂಬ ಒತ್ತಡವನ್ನು ಹೇರಿರುವುದು ಪುರುಷ ಪ್ರಧಾನ ಸಮಾಜದ ದೌರ್ಜನ್ಯವನ್ನು ಪ್ರತಿಬಿಂಬಿಸುತ್ತದೆ. "ದೈಹಿಕವಾಗಿ ಆಕ್ರಮಣವನ್ನು ತಡೆಗಟ್ಟಲು ಅಸಾಧ್ಯವಾದಾಗ ಪ್ರಾಣ ಭಯವನ್ನು ತ್ಯಜಿಸಿ ತನ್ನನ್ನು ಕೊನೆಗಾಣಿಸಿಕೊಳ್ಳಬೇಕೆಂದು ಅವರ ಸಲಹೆ" ಎಂದು ಪ್ರೀತಿ ಶುಭಚಂದ್ರ ಅವರು (ಪಾಟೀಲ ಎಂ.ಎಸ್., ಸ್ವಾಮಿರಾವ ಕುಲಕರ್ಣಿ (ಸಂ) ೨೦೦೫; ೩೦) ಗಾಂಧೀಜಿಯವರ ಲೈಂಗಿಕ ಪಕ್ಷಪಾತ ನಿಲುವನ್ನು ಗುರುತಿಸಿದ್ದಾರೆ. ಗಾಂಧೀಜಿಯವರು ಹೆಣ್ಣಿನ ಶೀಲ ಕುರಿತು ಆಧುನಿಕ ವಿಚಾರವನ್ನು ಹೊಂದಿರದೆ, ಸಾಂಪ್ರದಾಯಿಕ ಸಮಾಜದ ಪುರುಷ ಪ್ರಧಾನ ನಿಲುವನ್ನು ಹೊಂದಿರುವುದು ಮನದಟ್ಟಾಗುತ್ತದೆ. ಇನ್ನೊಂದೆಡೆ ಗಾಂಧೀಜಿಯವರು ಇದಕ್ಕೆ ವಿರೋಧವೆಂಬಂತೆ "ಬಲತ್ಕಾರದಿಂದ ಅತ್ಯಾಚಾರಕ್ಕೆ ಒಳಗಾದ ಸ್ತ್ರೀಯರನ್ನು ತಿರಸ್ಕರಿಸಬಾರದು. ಆಕೆ ಅಶುದ್ಧಳಲ್ಲ. ಕಳಂಕಿಯೂ ಅಲ್ಲ" (ಶಿವರಾಜಪ್ಪ (ಸಂ) ೨೦೦೬ ;೬೧) ಎಂದು ಹೇಳಿರುವುದು ಲೈಂಗಿಕತೆಯ ಬಗೆಗೆ ಗಾಂಧೀಜಿಯವರು ನಿರ್ದಿಷ್ಟವಾದ ನಿಲುವನ್ನು ಹೊಂದಿರದೆ, ದ್ವಂದ್ವವನ್ನು ಹೊಂದಿದ್ದರು ಎಂಬುದು ನಿಚ್ಚಳವಾಗುತ್ತದೆ.

ಇತಿಹಾಸದ ಅವಲೋಕನೆ ಮಾಡಿದಾಗ ಸ್ತ್ರೀಯರನ್ನು ಲೈಂಗಿಕತೆಯ ಸರಕುಗಳನ್ನಾಗಿ ಉಪಯೋಗಿಸಿಕೊಂಡು ಬರುತ್ತಿರುವುದು ಅರಿವಾಗುತ್ತದೆ. ಲೈಂಗಿಕತೆಯನ್ನು ವ್ಯಾಪಾರೀ ಮನೋಭಾವದಿಂದ ವಾಣಿಜ್ಯ ಅಭಿವೃದ್ಧಿಗಾಗಿ ಬಳಸುತ್ತಿರುವ ರೀತಿ ಎಲ್ಲೆಲ್ಲೂ ಲೈಂಗಿಕತೆಯನ್ನು ಬಿಂಬಿಸುವ ಚಿತ್ರಗಳು, ವಿಫುಲವಾಗಿವೆ. ಹೆಣ್ಣಿನ ದೇಹ ಸಿರಿಯನ್ನು ಪ್ರದರ್ಶನಕ್ಕಾಗಿ ಮೀಸಲಾಗಿದುದು, ಹಲವಾರು ಪ್ರವಾಸಿ ಮಂದಿರಗಳ ಗೋಡೆಗಳ ಮೇಲೆ ವೈವಿಧ್ಯಮಯವಾಗಿ ಕೆತ್ತಲಾಗಿರುವ ಶಿಲಾ ಬಾಲಿಕೆಯರ ಭಂಗಿಯಿಂದ ಸ್ಪಷ್ಟವಾಗುತ್ತದೆ. ಧಾರ್ಮಿಕ ಕೇಂದ್ರಗಳಾದ ದೇವಸ್ಥಾನಗಳಲ್ಲಿನ, ಮಂದಿರಗಳಲ್ಲಿನ ಮಿಥುನ ಶಿಲ್ಪಗಳಲ್ಲಿ ಸ್ತ್ರೀಯರ ದೇಹ ಸೌಂದರ್ಯವನ್ನು ಹೆಚ್ಚಾಗಿ ಬಳಸಿಕೊಂಡಿರುವುದು ದೃಢವಾಗುತ್ತದೆ. ಚಲನಚಿತ್ರ, ಧಾರವಾಹಿ, ಜಾಹಿರಾತು.... ಮುಂತಾದ ಕಡೆಗಳಲ್ಲಿಯೂ ಹೆಣ್ಣನ್ನು ಪ್ರದರ್ಶನದ ಗೊಂಬೆಯನ್ನಾಗಿ ಮಾರ್ಪಡಿಸಿಕೊಂಡಿರುವುದು ನಿಚ್ಚಳವಾಗಿದೆ. ರವಿವರ್ಮರಂತಹ ಕಲಾವಿದರೂ ಕೂಡ ತಮ್ಮ ಹೆಂಡತಿಯ ದೇಹಸಿರಿಯನ್ನು ತಮ್ಮ 'ಚಿತ್ರಕಲೆ'ಗಾಗಿ ಬಳಸಿಕೊಂಡಿರುವುದು ಸಮಾಜದಲ್ಲಿನ ಸ್ತ್ರೀಯರ ಸ್ಥಿತಿ-ಗತಿಯನ್ನು ಬಿಂಬಿಸುತ್ತದೆ.

ಈ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ಸ್ತ್ರೀಯರ ಲೈಂಗಿಕ ವಿಚಾರ ಕುರಿತು ಚರ್ಚೆ, ವಿಮರ್ಶೆ, ಸಂಶೋಧನೆಗಳು ನಡೆಯುತ್ತಲೆ ಬಂದಿವೆ. "ಹೆಣ್ಣನ್ನು ಒಬ್ಬ ಮಾನವ ಜೀವಿಯಾಗಿ ಭಾವಿಸಿ ಅವಳಿಗೂ ಆಸೆ-ಆಕಾಂಕ್ಷೆಗಳಿವೆ, ಸಂಸಾರದಲ್ಲಿ ಸಮಾನ ಪಾತ್ರವಿದೆ ಎಂದು ಭಾವಿಸಿ ಗೌರವಿಸಿದ್ದನ್ನು ಕಾಣುವುದು ಆಧುನಿಕ ಕಾಲದ ಸಾಹಿತ್ಯದಲ್ಲೆ" ಎಂಬ ವೀರಣ್ಣನವರ (೧೯೯೫ ;೨೦೬) ಹೇಳಿಕೆಯು ಸ್ತ್ರೀಯ ವ್ಯಕ್ತಿತ್ವವನ್ನು ಕಾಲದಿಂದ ಕಾಲಕ್ಕೆ ಲೇಖಕರು ಹೇಗೆ ಭಿನ್ನವಾಗಿ ಚಿತ್ರಿಸಿದ್ದಾರೆ ಎಂಬುದನ್ನು

ಸ್ಪಷ್ಟಪಡಿಸುತ್ತದೆ. ಆಧುನಿಕ ಕಾಲದ ಸಾಹಿತ್ಯದಲ್ಲಿ ಕಾರಂತ, ಮಾಸ್ತಿ, ಕುವೆಂಪು, ಇನಾಂದಾರ, ತ್ರಿವೇಣಿ, ಇಂದಿರಾ, ಕಟ್ಟೀಮನಿ, ಅ.ನ.ಕೃ., ತ.ರಾ.ಸು., ಅನಂತಮೂರ್ತಿ, ಭೈರಪ್ಪ..... ಮುಂತಾದವರು ತಮ್ಮ ಸಾಹಿತ್ಯದಲ್ಲಿ ಸ್ತ್ರೀಯರ ಲೈಂಗಿಕ ಅಭಿವ್ಯಕ್ತಿಯ ಕುರಿತು ವಿವಿಧ ದೃಷ್ಟಿಕೋನಗಳಲ್ಲಿ ಚಿತ್ರಿಸಿದ್ದಾರೆ. ಶಿವರಾಮ ಕಾರಂತರು ಹೆಣ್ಣಿನ ಬದುಕನ್ನು, ಅವರ ಸಮಸ್ಯೆಗಳನ್ನು ಹಾಗೂ ಅವರ ವ್ಯಕ್ತಿತ್ವದ ಮೂಲಕ ಒಟ್ಟಾರೆ ಮಾನವರಿಗೆಲ್ಲ ಅನ್ವಯಿಸಬಹುದಾದ ಅಂಶಗಳನ್ನೇ ಸಮಸ್ಯೆಯಾಗಿ ಕಾದಂಬರಿಗಳಲ್ಲಿ ಚರ್ಚೆಗೊಡ್ಡುತ್ತಾರೆ. ಮಹಿಳೆಯರ ಬದುಕಿನ ಅನೇಕ ಮಗ್ಗುಲುಗಳನ್ನು ಅವರ ಕಾದಂಬರಿಗಳಲ್ಲಿ ಯಥಾವತ್ತಾಗಿ ಚಿತ್ರಿಸಲಾಗಿದೆ. ಸ್ತ್ರೀಯರ ಸಮಸ್ಯೆಗಳ ಮೂಲ ನೆಲೆಯನ್ನು ಕಂಡುಕೊಂಡು ಅದರ ಪರಿಹಾರಕ್ಕಾಗಿ ಉಪಾಯಗಳನ್ನು ಸೂಚಿಸಲಾಗಿದೆ. ಗಂಡಿನ ನೆಲೆಯಿಂದ ವೈಯಕ್ತಿಕವಾಗಿಯೂ, ಒಟ್ಟು ಸಮಾಜದ ನೆಲೆಯಿಂದ ಒಂದು ಸಮೂಹವಾಗಿಯೂ ಪುರುಷ ಪ್ರಧಾನ ಸಾಂಸ್ಕೃತಿಕ ಪರಿಸರವು ಹೆಣ್ಣನ್ನು ಹೇಗೆ ಪ್ರತ್ಯೇಕವಾಗಿಯೂ ಹಾಗೂ ಒಂಟಿಯಾಗಿಯೂ ಕಾಣುತ್ತದೆ ಎಂಬುದನ್ನು ಶಿವರಾಮ ಕಾರಂತರ ಕಾದಂಬರಿಗಳ ಸ್ತ್ರೀ ಪಾತ್ರಗಳ ಚಿತ್ರಣದಿಂದ ಖಚಿತಪಡಿಸಲಾಗಿದೆ.

"ಲೈಂಗಿಕ ತೃಷೆಯೆಂಬುದು ಬಹಳ ನವಿರಾದ ಬಗೆ ಬಗೆಯ ಎಳೆಗಳುಳ್ಳ ಬಲು ಸಂಕೀರ್ಣವಾದ ಮಾನಸಿಕ ಪ್ರವೃತ್ತಿ. ಅದರ ಒಲವುಗಳು ನಮ್ಮ ಬುದ್ಧಿಯ ಹಿಡಿತಕ್ಕೆ ಸುಲಭವಾಗಿ ಸಿಗುವಂತವುಗಳಲ್ಲ. ಕೇವಲ ಸಂಭೋಗಾಪೇಕ್ಷೆಗೆ ಅದು ಸಂತೃಪ್ತವಾಗುವಂತಿಲ್ಲ. ಪುರುಷನಿಗೂ ಅಲ್ಲ, ಸ್ತ್ರೀಗಂತೂ ಅಲ್ಲವೇ ಅಲ್ಲ" ಎಂಬ ಸೀತಾರಾಮಯ್ಯ ಹಾಗೂ ಪಾವೆಂ ಆಚಾರ್ಯರ (೧೯೬೬; ೪೫) ಹೇಳಿಕೆ ಲೈಂಗಿಕತೆಯ ಸಂಕೀರ್ಣತೆ ಕುರಿತು ತಿಳಿಸುತ್ತದೆ. ಕಾದಂಬರಿಕಾರರು ಸ್ತ್ರೀ ಪುರುಷರ ಪಾತ್ರಗಳ ಮೂಲಕ ಇದನ್ನು ಅಭಿವ್ಯಕ್ತಿಸಿದ್ದಾರೆ.

ಧರ್ಮಗಳು, ದಾರ್ಶನಿಕತೆ, ಸಂಸ್ಕೃತಿ, ಸಮಾಜ, ಕಾನೂನು ಇವೆಲ್ಲವೂ ಮನುಷ್ಯನ ನಡವಳಿಕೆ, ನಂಬಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ಇದರಿಂದಾಗಿ ಹಲವಾರು ವರ್ಷಗಳಿಂದ ಲೈಂಗಿಕ ಮೌಲ್ಯಗಳು ಹಾಗೆಯೇ ನಿಷಿದ್ಧತೆಗಳು ಹುಟ್ಟಿಕೊಂಡಿವೆ. ಇದನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಲೈಂಗಿಕತೆಯನ್ನು ದೈಹಿಕ, ಮಾನಸಿಕ, ಸಾಂಸ್ಕೃತಿಕ ಆಯಾಮಗಳ ಮೂಲಕ ಅಧ್ಯಯನ ಮಾಡಲಾಗಿದೆ.

ಹೆಣ್ಣು-ಗಂಡಿನ ಮೋಹ ಅವರವರು ಮಾಡಿಕೊಂಡಿದ್ದಕ್ಕಿಂತಲೂ ಹೆಚ್ಚಾಗಿ ಸೃಷ್ಟಿಯೇ ಜೀವಿಗಳೊಳಗೆ ತುಂಬಿಸಿಟ್ಟ ಪ್ರೇರಣೆಯಾಗಿದೆ ಎಂಬುದನ್ನು "ಮೂಕಜ್ಜಿಯ ಕನಸುಗಳು" ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಗಂಡು-ಹೆಣ್ಣಿನ ಮಾಯೆಯಿಂದಲೇ ಈ ಜಗತ್ತು ಉದ್ಭವಿಸಿದೆ. ಅವೆರಡೂ ಇಲ್ಲದೇ ಹೋಗಿದ್ದರೆ ಜೀವರಾಶಿಯ ಅಂತ್ಯವಾಗುತ್ತದೆ. ಜಗತ್ತೆಂಬುದು ಬರಡಾಗುತ್ತದೆ ಎಂಬುದು ಮೂಕಜ್ಜಿಯ ನಂಬಿಕೆಯಾಗಿದೆ. ಅಂತೆಯೇ ಮೂಕಜ್ಜಿಗೆ ಲೈಂಗಿಕತೆಯಲ್ಲಿ ಯಾವುದೇ ರೀತಿಯ ಅಸಹ್ಯ ಕಾಣುವುದಿಲ್ಲ. ಹೆರುವುದು ಅಸಹ್ಯವಲ್ಲ, ಇರುವುದು ಅಸಹ್ಯವಲ್ಲ, ಸಾಯುವುದೂ ಅಸಹ್ಯವಲ್ಲ, ಹುಟ್ಟಿಸುವುದು ಹೇಗೆ ಅಸಹ್ಯವಾದೀತು? ಲೈಂಗಿಕ ಕ್ರಿಯೆ ಪ್ರಕೃತಿಯ ನಿಯಮ, ಸಹಜವಾದುದು. ಲೈಂಗಿಕತೆ ಸುಖ ದಾಂಪತ್ಯಕ್ಕೆ, ದೈಹಿಕ ಹಾಗೂ ಮಾನಸಿಕ ನೆಮ್ಮದಿಗೆ ಅಗತ್ಯ. ಪ್ರಕೃತಿ ಸ್ತ್ರೀಯ ದೇಹವನ್ನು ಸಂತಾನೋತ್ಪತ್ತಿಗೆ

[illegible]

ಸಜ್ಜುಗೊಳಿಸುತ್ತದೆ. ಅದರ ಬಗೆಗೆ ಅಪಾರ್ಥ ಹೊಂದದೆ ಲೈಂಗಿಕತೆಯ ಬಗ್ಗೆ ವೈಜ್ಞಾನಿಕ ಮಾಹಿತಿ ಪಡೆಯಬೇಕು ಎಂಬುದನ್ನು ಕಾದಂಬರಿಯಲ್ಲಿ ಮೂಕಜ್ಜಿಯ ಪಾತ್ರದ ಮೂಲಕ ನಿರೂಪಿಸಲಾಗಿದೆ.

ಅನ್ಯಲಿಂಗಿಗಳಲ್ಲಿ ಪರಸ್ಪರ ಆಕರ್ಷಣೆಯಿರುತ್ತದೆ. ಜೀವಕ್ಕೆ ಒಂದು ರೂಪು ಒದಗುವುದು ಗಂಡು, ಹೆಣ್ಣಿನ ಪರಸ್ಪರ ಆಕರ್ಷಣೆಯಿಂದಲೇ ಸಾಧ್ಯವಾಗುತ್ತದೆ. ಅದನ್ನು ಅಲ್ಲಗಳೆಯಬಾರದು. ಅಲ್ಲಗಳೆದವರನ್ನು ಮೂಕಜ್ಜಿಯು ತೀವ್ರವಾಗಿ ಖಂಡಿಸುತ್ತಾಳೆ. ಜೀವನದಲ್ಲಿ ಹೆಣ್ಣಿನ ಸಂಬಂಧವನ್ನು ನಿರಾಕರಿಸುತ್ತ ಅಥವಾ ಆ ಬಗೆಯ ಸೋಗನ್ನು ಹಾಕುತ್ತ ಅನಂತರಾಯನು ವೈರಾಗ್ಯ ಜೀವನವನ್ನು ನಟಿಸುತ್ತಿದ್ದನು. ತನ್ನ ನಡವಳಿಕೆಯನ್ನು ಸಮರ್ಥಿಸುವಲ್ಲಿ ಸಮಯಕ್ಕೆ ತಕ್ಕಂತೆ ಭಗವದ್ಗೀತೆಯನ್ನು ಉಲ್ಲೇಖಿಸುತ್ತಿದ್ದನು. ಆತನ ಮನಸ್ಸಿನ ಕಪಟತನ ಹಾಗೂ ಗೋಸುಂಬೆತನವನ್ನು ಮೂಕಜ್ಜಿಯು ಗ್ರಹಿಸುತ್ತಾಳೆ. ಅವನಿಗೂ ರಾಮದಾಸನಿಗೂ ಇರುವ ವಿಕೃತ ಸಲಿಂಗ ಸಂಬಂಧವನ್ನು ಬಯಲಿಗೆಳೆದು ಖಂಡಿಸುತ್ತಾಳೆ. ಹೆಣ್ಣಿನೊಂದಿಗೆ ಆಡಬೇಕಾಗಿದ್ದ ಆಟವನ್ನು ಗಂಡಿನೊಂದಿಗೆ ಆಡುವ ಅನಂತರಾಯನ ವ್ಯಕ್ತಿತ್ವದಿಂದ ಬದುಕಿನಿಂದ ಹೊರಚಾಚಿದ ಕಾಮ ವಿಕೃತವಾಗುತ್ತದೆ ಎಂದು ಹೇಳುತ್ತಾಳೆ. ಅಸಾಧಾರಣ ಲೈಂಗಿಕ ನಡವಳಿಕೆಗಳೆಲ್ಲ ಮನೋದೌರ್ಬಲ್ಯವನ್ನು ಸೂಚಿಸುತ್ತವೆ. ಗಂಡು-ಹೆಣ್ಣಿನ ಸಂಬಂಧವೇ ಲೌಕಿಕದ ಪರಮ ಮೂಲವಾಗಿದೆ. 'ಕಾಮ' ಮಾನವನ ಬದುಕನ್ನು ಹಸನು ಮಾಡಬಲ್ಲದು, ಎಲ್ಲೆ ಮೀರಿ ವರ್ತಿಸಿದರೆ ಅದೇ 'ಕಾಮ' ಅವನ ಜೀವನವನ್ನೇ ಹದಗೆಡಿಸಲೂ ಬಲ್ಲದು. ಇದು ನಿಸರ್ಗದ ನಿಯಮವಾಗಿದೆ. 'ಜ್ಯೋತಿ' ಮನೆಯನ್ನು ಬೆಳಗಬಲ್ಲದು. ಆದರೆ ಅದರ ದುರುಪಯೋಗವಾದರೆ ಬೆಂಕಿಯಾಗಿ ಮನೆಯನ್ನು ಸುಡಲೂಬಲ್ಲದು. ಕಾಮವನ್ನು ಉತ್ತಮ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂಬುದು ಕಾದಂಬರಿಯ ಮೂಲ ಆಶಯವಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ 'ಭೂಮಿ'ಯನ್ನು ಉಪಭೋಗದ ನೆಲೆಯಲ್ಲಿಯೇ ಅರ್ಥೈಸಿಕೊಳ್ಳಲಾಗಿದೆ. ಫಲಕೊಡುವ ಭೂಮಿಯನ್ನು ಹಾಗೂ ಸಂತಾನ ಕೊಡುವ ಹೆಣ್ಣನ್ನು ಉಪಭೋಗದ ಸಾಮಗ್ರಿಯಾಗಿಯೇ ಆಲೋಚಿಸುವ ಪ್ರಕ್ರಿಯೆಯು ಪುರುಷ ಪ್ರಧಾನ ಸಮಾಜದ ನಿಲುವೇ ಆಗಿದೆ. ಅಂತೆಯೇ ಹೆಣ್ಣನ್ನು ಒಂದು ಜೀವವಾಗಿ, ಸಹಚಾರಿಣಿಯಾಗಿ ತಿಳಿಯದ ಗಂಡು ಹೊಂದಾಣಿಕೆಯ ನೆಲೆಗೆ ಅಪಚಾರವೆಸಗುತ್ತಾನೆ. ಹೆಣ್ಣುಗಳ ಜೊತೆ ಚಕ್ಕಂದವಾಡುತ್ತ ವೈವಾಹಿಕ ಜೀವನದ ಜವಾಬ್ದಾರಿಯಿಂದ ದೂರ ಸರಿಯುತಿದ್ದ ಜನಾರ್ಧನನ ಬದುಕಿನ ಪರಿಯನ್ನು ಅರಿತ ಮೂಕಜ್ಜಿ ಅವನನ್ನು ಎಚ್ಚರಿಸುತ್ತಾಳೆ. ಆದರೆ ಅವನು ತನ್ನ ತಪ್ಪನ್ನು ತಿದ್ದಿಕೊಳ್ಳುವುದಿಲ್ಲ. ಮತ್ತಷ್ಟು ದಾರಿ ತಪ್ಪುವನು. ಇದರ ಫಲವಾಗಿ ತನ್ನಿಂದ ಮೋಸಕ್ಕೊಳಗಾದ ಹೆಣ್ಣೊಬ್ಬಳನ್ನು ಬಲವಂತದಿಂದಾಗಿ ಮದುವೆಯಾಗುತ್ತಾನೆ. ಭೋಗವೆಂಬುದು ಒಂದು ಕೀಳುಮಟ್ಟದ ಹವ್ಯಾಸವಾಗಿರದೆ, ಗಂಡು-ಹೆಣ್ಣುಗಳ ಧೀರ್ಘ ಸ್ನೇಹಕ್ಕೆ ಕಾರಣವಾಗಬೇಕು ಎಂಬುದು ಕಾದಂಬರಿಯ ನಿಲುವಾಗಿದೆ.

"'ಸ್ವಚ್ಛಂದ ಕಾಮವು ಕಾರಣವಾಗಿ ಉಂಟಾಗುವ ಲೈಂಗಿಕ ಸಂಬಂಧಗಳಿಗಿಂತ ಕುಟುಂಬ ವ್ಯವಸ್ಥೆಯಲ್ಲಿ ಗಂಡ-ಹೆಂಡಿರಂತೆ ಕೂಡುವ ಸಂಬಂಧಗಳು ಕಾರಂತರಿಗೆ ಹಿತವೆನಿಸುತ್ತವೆ" ಎಂಬುದನ್ನು ಸುನೀತಾ.

ಶೆಟ್ಟಿಯವರು (೨೦೦೦; ೧೫೨) ಕಾರಂತರ ಕಾದಂಬರಿಗಳ ಸ್ತ್ರೀ ಪಾತ್ರಗಳ ಅಧ್ಯಯನದ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ರಾಮಣ್ಣ ನಾಗಿಯರು ದಂಪತಿಗಳಾಗಿದ್ದರು. ತುಂಬ ರೂಪವತಿಯಾದ ನಾಗಿಯು ಶೀನಪ್ಪನ ವಂಚನೆಗೆ ಗುರಿಯಾಗುತ್ತಾಳೆ. ಅವಳ ರೂಪವೇ ಅವಳಿಗೆ ಮುಳುವಾಗುತ್ತದೆ. ಶೀನಪ್ಪನಿಂದ ಅತ್ಯಾಚಾರಕ್ಕೊಳಗಾಗುತ್ತಾಳೆ. ಶೀಲವನ್ನು ಕಳೆದುಕೊಂಡು, ಪಾಪಪ್ರಜ್ಞೆಯಿಂದ ನರಳುತ್ತಾಳೆ. ಗಂಡನಿಗೆ ತಾನು ತಕ್ಕವಳಲ್ಲವೆಂದು ಭಾವಿಸಿ ಗಂಡನೊಂದಿಗೆ ಬಾಳ್ವೆ ಮಾಡಲು ಹಿಂಜರಿಯುತ್ತಾಳೆ. ಗಂಡನೊಂದಿಗೆ ಒಟ್ಟಿಗೆ ಬಾಳಲು ಅವಳ ಮನಃಸಾಕ್ಷಿ ಒಪ್ಪುವುದಿಲ್ಲ. ಆದರೆ ಇದನ್ನೆಲ್ಲ ಗೊತ್ತಿದ್ದರೂ ರಾಮಣ್ಣ ನಾಗಿಯನ್ನು ತುಂಬ ಪ್ರೀತಿಸುತ್ತಿದ್ದನು. ಅವಳೊಂದಿಗೆ ಬಾಳಲು ತವಕಿಸುತ್ತಿದ್ದನು. ಈ ಅತ್ಯಾಚಾರಕ್ಕೆ ನಾಗಿಯು ಹೊಣೆಯಲ್ಲ ಎಂಬುದು ಅವನ ನಂಬಿಕೆಯಾಗಿತ್ತು. ರಾಮಣ್ಣನು ಸ್ತ್ರೀಪರವಾದ ವಿಚಾರಗಳನ್ನು ಹೊಂದಿರುವುದು ಇದರಿಂದ ಮನದಟ್ಟಾಗುತ್ತದೆ. ದಾಂಪತ್ಯದ ವಿಚ್ಛೇದನೆಗಿಂತ ಮುಖ್ಯವಾದುದು ಮಾನವೀಯ ಮೌಲ್ಯಗಳ ಆಧಾರದ ಮೇಲೆ ಹೊಸ ದಾಂಪತ್ಯವನ್ನು ಕಟ್ಟಿಕೊಡುವುದು. ಮೂಕಜ್ಜಿಯು ಅದಕ್ಕಾಗಿ ಪ್ರಯತ್ನಿಸುತ್ತಾಳೆ. ಅವರ ಸಂಸಾರವನ್ನು ಒಂದುಗೂಡಿಸುತ್ತಾಳೆ. ಮೂಕಜ್ಜಿಯು ನಾಗಿಯಲ್ಲಿ ತಾದಾತ್ಮ್ಯ ಪಡೆದು ತನ್ನ ದಾಂಪತ್ಯ ನಿರ್ವಹಣೆಯ ಆಸೆಯನ್ನು ನಾಗಿಯ ಮುರಿದುಹೋದ ಸಂಸಾರವನ್ನು ಒಂದು ಗೂಡಿಸುವುದರ ಮೂಲಕ ಪೂರೈಸಿಕೊಳ್ಳುತ್ತಾಳೆ. ಈ ಹಿನ್ನೆಲೆಯಲ್ಲಿ 'ಅದುಮಿಟ್ಟ ಲೈಂಗಿಕ ಪ್ರವೃತ್ತಿಯು ಸುಪ್ತ ಪ್ರಜ್ಞೆಯ ಮೂಲಕ ತೃಪ್ತಿಯನ್ನು ಪಡೆಯುತ್ತದೆ' ಎಂಬ ಸಿಗ್ಮಂಡ್ ಫ್ರಾಯ್ಡ್‌ರ ಹೇಳಿಕೆಯು ಸಮರ್ಥನೀಯವೆನಿಸುತ್ತದೆ. ಕಾದಂಬರಿಕಾರರು ಮೂಕಜ್ಜಿಯ ಪಾತ್ರದ ಮುಖಾಂತರ ಕೌಟುಂಬಿಕ ಸಾಮರಸ್ಯಕ್ಕೆ ಮಾನ್ಯತೆ ನೀಡುವುದು ಅರಿವಾಗುತ್ತದೆ.

ತನ್ನ ಅತೀಂದ್ರಿಯ ಜ್ಞಾನದ ಬಲದಿಂದ ತನ್ನ ಸುತ್ತ ಮುತ್ತಲಿನ ಬದುಕನ್ನು ಅರಿಯುವಲ್ಲಿ ಸಮರ್ಥಳಾಗುವ ಮೂಕಜ್ಜಿ ಲೈಂಗಿಕತೆಯ ಬಗೆಗೆ ವಾಸ್ತವಿಕ ಪ್ರಜ್ಞೆಯನ್ನು ಮೂಡಿಸುತ್ತಾಳೆ. 'ಕಾಮ' ನಿಸರ್ಗದತ್ತವಾದುದು. ಮಾನವನು ಸದೃಢವಾದ ಆರೋಗ್ಯವನ್ನು ಹೊಂದಿರಬೇಕಾದರೆ ಲೈಂಗಿಕ ಪ್ರಕ್ರಿಯೆಯು ಅನಿವಾರ್ಯವಾಗಿದೆ. ಅದು ಅನಿರ್ವಚನೀಯವಾದ ಅನುಭವವನ್ನು ನೀಡುತ್ತದೆ. "ಕಾಮದಿಂದ ಯಾವ ಯಾವ ಅನುಭವಗಳು ದೊರೆಯುವವೋ ಅವು ಕಾಮಕ್ಕೆ ಹೊರತಾಗಿ ಬೇರೆ ಮಾರ್ಗಗಳಿಂದಲೂ ದೊರೆಯುವಂತಿದ್ದರೆ, ಮಾನವನ ಚಿತ್ತವೂ ಕಾಮದ ಕಡೆಗೆ ಮುನ್ನುಗ್ಗುವುದು ತನಗೆ ತಾನೇ ನಿಂತು ಹೋಗುವುದು" ಎಂಬ ಓಶೋರವರ (ಗಣೇಶ ಶರ್ಮ (ಅನು) ೧೯೮೫; ೪೨) ಹೇಳಿಕೆಯು 'ಕಾಮ'ದ ಮಹತ್ವ, ಅದರಿಂದ ದೊರೆಯುವ ತೃಪ್ತಿ ಎಂತಹದು ಎಂಬುದನ್ನು ದೃಢಪಡಿಸುತ್ತದೆ. ಪುರುಷಾರ್ಥಗಳಲ್ಲಿ 'ಕಾಮ'ವೂ ಒಂದು. ಅದರಿಂದ ದೊರೆಯುವಂತಹ ತೃಪ್ತಿ, ಸುಖ, ಆನಂದ, ಅನುಭವ ಬೇರೆ ಇನ್ನಾವುದರಿಂದಲೂ ದೊರೆಯುವುದಿಲ್ಲ. ಲೈಂಗಿಕ ಕ್ರಿಯೆಯನ್ನು ಮತ್ತೊಂದು ಕ್ರಿಯೆಯೊಂದಿಗೆ ಹೋಲಿಸಲು ಸಾಧ್ಯವೇ ಇಲ್ಲ. ಲೈಂಗಿಕ ಮಿಲನವೇ ಅತ್ಯಂತ ಹೆಚ್ಚಿನ ತೃಪ್ತಿ ಹಾಗೂ ಸುಖವನ್ನು ಕೊಡುತ್ತದೆ. ಅದನ್ನು ಇತರರ ವರ್ಣನೆಯಿಂದ ಪಡೆಯಲು ಸಾಧ್ಯವಿಲ್ಲ. ಅಂತೆಯೇ ಮಾನವನು ತನ್ನ ಸ್ವಂತ ಅನುಭವದಿಂದ ಭಾವಪ್ರಾಪ್ತಿಯನ್ನು ಪಡೆಯಲು ಹಾತೊರೆಯುತ್ತಾನೆ.

ಆದ್ದರಿಂದ ಕಾಮವನ್ನು ತಿರಸ್ಕರಿಸದೆ ಪುರಸ್ಕರಿಸಬೇಕು ಎಂಬುದು ಕಾದಂಬರಿಯ ಆಶಯವಾಗಿದೆ. ಕಾಮವನ್ನು ಆರಾಧಿಸುವುದೂ ತಪ್ಪು, ಧಿಕ್ಕರಿಸುವುದೂ ತಪ್ಪು. ಅದನ್ನು ಸ್ವಚ್ಛಂದ ಮನಸ್ಸಿನಿಂದ ಒಪ್ಪಿಕೊಳ್ಳಬೇಕು ಎಂಬುದನ್ನು ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ವೇಶ್ಯೆಯರನ್ನು ಕುರಿತು ಹಲವಾರು ಸಾಹಿತಿಗಳು ಬರೆದಿದ್ದಾರೆ. ಚಂಪು ಕಾವ್ಯದ ಅಷ್ಟಾದಶ ವರ್ಣನೆಗಳಲ್ಲಿ 'ವೇಶ್ಯಾವಾಟಿಕೆ'ಯ ವರ್ಣನೆಯು ಪ್ರಮುಖವಾಗಿತ್ತು. ಕಾವ್ಯದಲ್ಲಿ ವೇಶ್ಯೆಯರ ಅಗತ್ಯತೆ ಇಲ್ಲದಿದ್ದರೂ ಕೂಡ ಸಾಂದರ್ಭಿಕವಾಗಿ ವಿವರಿಸಲಾಗುತ್ತಿತ್ತು. ಹೊಸಗನ್ನಡ ಸಾಹಿತ್ಯದಲ್ಲಿ ವೇಶ್ಯೆಯರ ಸ್ಥಿತಿ-ಗತಿ ಕುರಿತು ಹಲವಾರು ಕಾದಂಬರಿಗಳು ರಚನೆಯಾಗಿವೆ. ಎಂ.ಕೆ.ಇಂದಿರಾ, ತ್ರಿವೇಣಿ, ಫಣಿಯಮ್ಮ ಹಲವಾರು ಜನ ಲೇಖಕಿಯರು ವೇಶ್ಯೆಯರ ಬಗೆಗಿನ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ಬರೆದಿದ್ದಾರೆ. ಅ.ನ.ಕೃ.ರವರ 'ನಗ್ನಸತ್ಯ', 'ಶನಿ ಸಂತಾನ', ತ.ರಾ.ಸು. ಅವರ 'ಮಸಣದ ಹೂ', ಕಟ್ಟಿಮನಿಯವರ 'ಖಾನಾವಳಿಯ ಲೀಲಾ', 'ಬೀದಿಯಲ್ಲಿ ಬಿದ್ದವಳು', 'ಮಣ್ಣು ಮತ್ತು ಹೆಣ್ಣು' .... ಮುಂತಾದ ಕಾದಂಬರಿಗಳಲ್ಲಿ ವೇಶ್ಯೆಯರ ಸ್ಥಿತಿ-ಗತಿಗಳನ್ನು ಕುರಿತು ಚಿತ್ರಿಸಲಾಗಿದೆ. ಶಿವರಾಮ ಕಾರಂತರ ಹಲವಾರು ಕಾದಂಬರಿಗಳಲ್ಲಿಯೂ ಸಹ ವೇಶ್ಯೆಯರ ಜೀವನದ ರೀತಿ ನೀತಿಯನ್ನು ಕುರಿತು ಪ್ರಕಟಿಸಲಾಗಿದೆ. "ಪುರುಷರ ದುಷ್ಟ ಆಕ್ರಮಕ ಹಾಗೂ ಕಾಮಕ ಪ್ರವೃತ್ತಿಯನ್ನು ಖಂಡಿಸುತ್ತಲೇ, ಸ್ತ್ರೀಯರ ಸಹನೆಗೆ ರಕ್ಷಣಾ ಗುಣಕ್ಕೆ ಸಂಪ್ರದಾಯವನ್ನು ತಿದ್ದುಪಡಿಗಳೊಡನೆ ಉಳಿಸಿಕೊಳ್ಳುವ ಪ್ರವೃತ್ತಿಗೆ ತಿರುಮಲಾಂಬ ಅವರು ತಮ್ಮ ಕೃತಿಗಳಲ್ಲಿ ಒತ್ತು ಕೊಡುತ್ತಾರೆ" ಎಂದು ರಾಮಚಂದ್ರನ್‌ರವರು (ನಾಯಕ್ ಜಿ.ಎಚ್. (ಸಂ) ೨೦೦೦; ೯೪) ಗುರುತಿಸಿದ್ದಾರೆ. ಇದು ತ್ರಿವೇಣಿ. ಎಂ.ಕೆ.ಇಂದಿರಾರವರ ಕಾದಂಬರಿಗಳ ಸ್ತ್ರೀಪಾತ್ರಗಳಿಗೂ ಅನ್ವಯಿಸುತ್ತದೆ. ಏಕೆಂದರೆ 'ಗೃಹಿಣಿಯ ಬದುಕೇ ಹೆಣ್ಣಿಗೆ ಆದರ್ಶ' ಎಂಬ ಸರಳ ತೀರ್ಮಾನವನ್ನು ಇವರ ಕಾದಂಬರಿಗಳಲ್ಲಿ ಕಾಣಬಹುದು. ಭಾರತೀಯ ಸಂಸ್ಕೃತಿಯ ಪುನರುತ್ಥಾನ, ಪುನರುಜ್ಜೀವನದ ತತ್ವದಲ್ಲಿ ಅ.ನ.ಕೃ., ತ.ರಾ.ಸು.ರವರು ನಂಬಿಕೆ ಹೊಂದಿದ್ದರು. 'ಕಣ್ಣೀರು' (೧೯೪೭) ಕಾದಂಬರಿಯಲ್ಲಿ ಅ.ನ.ಕೃ ಅವರು ವೇಶ್ಯೆಯರಿಗೆ ಮದುವೆಯಾದರೆ ಅವರಿಗೆ ಹುಟ್ಟುವ ಮಕ್ಕಳು ಅಂಗವೈಕಲ್ಯತೆಯಿಂದ ಬಳಲುತ್ತವೆ ಎಂದು ಪಾತ್ರದ ಮುಖಾಂತರ ಹೇಳಿಸಿರುವುದು ತಿಳಿಯುತ್ತದೆ. "ಹೆಣ್ಣನ್ನು ಪರಂಪರಾಗತ ಧಾರ್ಮಿಕ, ನೈತಿಕ ಚೌಕಟ್ಟಿನಲ್ಲಿ ಇರಿಸಬಯಸುವ ಅ.ನ.ಕೃ. ಪ್ರಚ್ಛನ್ನವಾಗಿ ಸಂಪ್ರದಾಯವಾದಿಯಾಗಿಯೇ ಆಗಿದ್ದಾರೆಂಬುದಕ್ಕಿವು ಸ್ಪಷ್ಟ ಉದಾಹರಣೆಯಾಗಿವೆ" ಎಂದು ಶ್ಯಾಮಸುಂದರ ಬಿದರಕುಂದಿ (ವಿವಿಧ ಲೇಖಕರು (ಸಂ); ೧೯೮೭-೫೯) ಯವರು ಗುರುತಿಸಿದ್ದಾರೆ.

೧. ಸರಸ ದಾಂಪತ್ಯ

ಭಾರತೀಯ ಸಂಸ್ಕೃತಿಯಲ್ಲಿ 'ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗುತ್ತವೆ' ಎಂಬುದನ್ನು ಬಲವಾಗಿ ನಂಬಲಾಗಿದೆ. ಅಂತೆಯೇ ಮದುವೆಯನ್ನು ಪವಿತ್ರ ಕಾರ್ಯವೆಂದು ಭಾವಿಸಲಾಗಿದೆ. ಇದು ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ ಹಾಗೂ ಆರ್ಥಿಕವಾಗಿಯೂ ಪ್ರಾಮುಖ್ಯತೆಯನ್ನು

[illegible]

ಪಡೆದುಕೊಂಡಿದೆ. 'ವಿವಾಹ' ಶಾಶ್ವತ ನೆಲೆಗಟ್ಟಿನ ಮೇಲೆ ನಿಲ್ಲಬೇಕಾದರೆ ಸತಿ-ಪತಿಗಳಿಬ್ಬರಲ್ಲಿ ಆಸಕ್ತಿ, ಅಭಿರುಚಿಗಳಲ್ಲಿ ಹೊಂದಾಣಿಕೆ ಮುಖ್ಯವಾಗುತ್ತದೆ. ಇಬ್ಬರಲ್ಲೂ ಸಹಾನುಭೂತಿ, ಸಂಯಮ ತುಂಬಾ ಅಗತ್ಯ. ಪರಸ್ಪರರ ಕೆಲಸಗಳಲ್ಲಿ ಸಹಾಯ ಮಾಡಬೇಕು. ಗೌರವ ಇರಬೇಕು. ಇದರಿಂದ ದಂಪತಿಗಳಿಬ್ಬರು ಸಾಮರಸ್ಯಭರಿತವಾದ ಕೌಟುಂಬಿಕ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ. ಕಾರಂತರ ಕಾದಂಬರಿಗಳಲ್ಲಿ 'ಸರಸ ದಾಂಪತ್ಯ' ಕುರಿತಂತೆ ಸ್ತ್ರೀ ಪಾತ್ರಗಳ ಮುಖಾಂತರ ವಿವೇಚಿಸಲಾಗಿದೆ.

ದಾಂಪತ್ಯ ಜೀವನವು ಸುಖ-ದುಃಖಗಳ ಸಂಗಮವಾಗಿದೆ. ಹೊಂದಾಣಿಕೆಯುತ ಜೀವನ ಸಾಗಿಸಿದರೆ ಸುಖವಾಗಿರಬಹುದು ಎಂಬುದು 'ಬೆಟ್ಟದ ಜೀವ' ಕಾದಂಬರಿಯ ಕಥಾಹಂದರವಾಗಿದೆ. 'ದಾಂಪತ್ಯ' ಎನ್ನುವಂಥದ್ದು ದೈಹಿಕ ಹಾಗೂ ಮಾನಸಿಕ ಸಂಬಂಧವಾಗಿದ್ದು, ಯಾವಾಗಲೂ ಚಿರನೂತನವಾಗಿರುವಂಥದ್ದು. ಅನುಭವಿಸುತ್ತಿದ್ದಂತೆ ಅದರ ಸವಿಯು ಮತ್ತಷ್ಟು ಹೆಚ್ಚುತ್ತದೆ. ಗಂಡ-ಹೆಂಡಿರಿಬ್ಬರೂ ಪರಸ್ಪರವಾಗಿ ಹೊಸತನ್ನು ಪಡೆಯುವ ಉತ್ಸಾಹದಲ್ಲಿರಬೇಕು. ಇದರಿಂದಾಗಿಯೇ ಗೋಪಾಲಯ್ಯ-ಶಂಕರಿ ವೃದ್ಧ ದಂಪತಿಗಳಾಗಿದ್ದರೂ, ಒಬ್ಬರಿಗೊಬ್ಬರು ಹೊಸಬರಾಗಿ ಕಾಣುತ್ತಿದ್ದರು. ನವ ವಿವಾಹಿತ ವಧು-ವರರಂತೆ ಅನ್ಯೋನ್ಯವಾಗಿದ್ದರು. 'ಪ್ರೇಮವೆಂದರೆ ಕೊಡುವುದೇ ವಿನಃ ತೆಗೆದುಕೊಳ್ಳುವುದಲ್ಲ' ಎಂಬ ವೇದಾಂತದಂತೆ ಬದುಕುತ್ತಿದ್ದರು. ಅವರು ಒಬ್ಬರು ಇನ್ನೊಬ್ಬರಿಗೆ ಬಿಟ್ಟುಕೊಟ್ಟು ಬಾಳುತ್ತಿದ್ದರೆ ಹೊರತು ಒಬ್ಬರು ಇನ್ನೊಬ್ಬರಿಂದ ಕಿತ್ತುಕೊಂಡು ಬಾಳಿದವರಲ್ಲ. ಹಾಗಾಗಿಯೇ ಅವರ ದಾಂಪತ್ಯ ಜೀವನವು ಸುಖಮಯವಾಗಿತ್ತು. "ತಾತ್ಕಾಲಿಕ ಮೋಹವು ಚಿರಕಾಲದ ತನಕ ಉಳಿಯಬೇಕಾದರೆ ಗಂಡು-ಹೆಣ್ಣುಗಳ ಮನೋವೃತ್ತಿ, ಆಸಕ್ತಿಯಲ್ಲಿ, ಉದ್ದೇಶದಲ್ಲಿ, ಸ್ನೇಹಗಳಲ್ಲಿ ಹೊಂದಿಕೆಬೇಕು. ಅವರ ಶಾರೀರಿಕ, ಮಾನಸಿಕ ಬಯಕೆಗಳೂ ಮೇಳಗೊಳ್ಳಬೇಕು" ಎಂಬ ಶಿವರಾಮ ಕಾರಂತರ (ಮಾಲಿನಿ ಮಲ್ಯ (ಸಂ) ೧೯೯೯; ೦೭) ಹೇಳಿಕೆಯು ದಾಂಪತ್ಯ ಜೀವನ ಹೇಗಿರಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗೋಪಾಲಯ್ಯ ಶಂಕರಿಯರ ದಾಂಪತ್ಯ ಜೀವನವು ಇದಕ್ಕೆ ಹೊರತಾಗಿರಲಿಲ್ಲ. ಅವರಿಬ್ಬರು ಪರಸ್ಪರ ಸಹಾಯ, ಸಹಕಾರ ಹಾಗೂ ಹೊಂದಾಣಿಕೆಯಿಂದ ಜೀವನ ಸಾಗಿಸುತ್ತಿದ್ದರು.

ಯಾವ ಕುಟುಂಬದಲ್ಲಿ ಗಂಡನಿಂದ ಹೆಂಡತಿಯು, ಹೆಂಡತಿಯಿಂದ ಗಂಡನೂ ತೃಪ್ತರಾಗಿ ಆನಂದವನ್ನು ಪಡೆಯುತ್ತಾರೋ, ಅಲ್ಲಿ ಯಾವಾಗಲೂ ಮಂಗಳ ಉಂಟಾಗುತ್ತದೆ ಎಂಬುದು 'ಬೆಟ್ಟದ ಜೀವ' ಕಾದಂಬರಿಯ ಆಶಯ.

ಪ್ರೀತಿಯೆನ್ನುವಂತದ್ದು ಮಾನಸಿಕವಾದ ತುಡಿತ. ಅದು ಬೆಳೆಯಲು ಜಾತಿ, ಅಂತಸ್ತು, ವಯಸ್ಸು ಯಾವುದು ಅಡ್ಡಿಯಾಗುವುದಿಲ್ಲ. ಅದು ಆಕಸ್ಮಿಕ ಹಾಗೂ ಸಹಜವಾಗಿಯೇ ಮೂಡುತ್ತದೆ, ಮನದಲ್ಲಿ ಬೇರೂರುತ್ತದೆ. ಇದಕ್ಕೆ ಒಂದು ಉತ್ತಮವಾದ ನಿದರ್ಶನವೆಂದರೆ "ಶನೀಶ್ವರನ ನೆರಳಲ್ಲಿ" ಕಾದಂಬರಿಯ ಸೀತೆ-ಶಿವಣ್ಣರ ಪ್ರೇಮ ಪ್ರಸಂಗ. ಶಿವಣ್ಣನು ಅನಾರೋಗ್ಯದಿಂದ ಬಳಲುತ್ತಿರುವಾಗ ಸೀತೆ ಊಟ, ಉಪಚಾರಗಳ ಜೊತೆಗೆ ಅವನನ್ನು ಆರೈಕೆ ಮಾಡುತ್ತಾಳೆ. ಇದಕ್ಕೆ ಪ್ರತಿಯಾಗಿ ಶಿವಣ್ಣನು ಹಣ ಕೊಡಲು ಮುಂದಾದಾಗ, ನಾವಿಲ್ಲಿ ಅನ್ನ ಮಾರುವುದಕ್ಕೆ ಕುಳಿತಿದ್ದೇವೆಯೇ? ಎಂದು ನಯವಾಗಿ ತಿರಸ್ಕರಿಸುತ್ತ

ಔದಾರ್ಯವನ್ನು ಮೆರೆಯುತ್ತಾಳೆ. ‘ಪ್ರೀತಿಯ ಇನ್ನೊಂದು ಮುಖ ತ್ಯಾಗ’ ಎಂಬಂತೆ ಶಿವಣ್ಣನನ್ನು ನಿರ್ಮಲವಾದ ಮನಸ್ಸಿನಿಂದ ಸತ್ಕರಿಸುತ್ತಾಳೆ. ಇದರಿಂದ ಅವರಲ್ಲಿ ದಿನ-ದಿನೇ ಪ್ರೇಮಾಂಕುರವಾಗುತ್ತದೆ. ಜಾತಿಯ ಕಟ್ಟಳೆಯನ್ನು ಮೀರಿ ಅವರಿಬ್ಬರು ಮದುವೆಯಾಗುತ್ತಾರೆ. ‘ವಿಶೇಷ ವಿವಾಹ ಕಾನೂನು’ (೧೯೫೪) ಅನ್ವಯ ಅಂತರ್ಜಾತಿ ವಿವಾಹಗಳಿಗೆ ಸಂವಿಧಾನವು ಮನ್ನಣೆ ನೀಡಿದೆ. ಪ್ರಸ್ತುತ ಸಮಾಜದ ಆಚಾರ -ವಿಚಾರ, ಕಾನೂನು -ಕಟ್ಟಳೆಗಳನ್ನು ಈ ಕಾದಂಬರಿಯಲ್ಲಿ ಗುರುತಿಸಲಾಗಿದೆ. ಪೆರಿಯಾರ್, ರಾಮಸ್ವಾಮಿ ನಾಯ್ಕರ್, ಅಂಬೇಡ್ಕರ್, ಗಾಂಧೀಜಿ.... ಮುಂತಾದ ಸಮಾಜ ಸುಧಾರಕರು ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದ್ದಾರೆ. ಅವರ ಪ್ರಭಾವವನ್ನು ಕಾರಂತರ ವ್ಯಕ್ತಿತ್ವದ ಮೇಲೆ ಆಗಿರುವುದನ್ನು ಸ್ಪಷ್ಟವಾಗಿ ಅರಿಯಬಹುದು.

“ಹೆಂಡತಿಯ ಸಹವಾಸಕ್ಕೆ ಹೋಗುವಾಗ ಯಾವಾತನು ಒಂದು ದೇವಾಲಯದೊಳಗೆ ಹೋಗುತ್ತಿರುವೆನೆಂಬ ಭಾವದಲ್ಲಿ ಹೋಗುವನೋ, ಓರ್ವ ಪತ್ನಿಯು ತನ್ನ ಪತಿಯೊಂದಿಗೆ ಸಮಾಗಮಕ್ಕಾಗಿ ಹೋಗುವಾಗ ಪರಮಾತ್ಮನ ಬಳಿ ಹೋಗುತ್ತಿರುವೆನೆಂಬ ಭಾವದಿಂದ ಹೋಗುವಳೋ ಆಗ ಅವರಿಬ್ಬರ ಕಾಮವು ದಿವ್ಯವೆನಿಸುವುದು” ಎಂಬ ಓಶೋರವರ (ಗಣೇಶ ಶರ್ಮ (ಅನು) ೧೯೯೫; ೧೫) ಹೇಳಿಕೆಯು ಕಾಮದ ಸಾರ್ಥಕತೆಯನ್ನು ಕುರಿತು ಸ್ಪಷ್ಟಪಡಿಸುತ್ತದೆ. ಸೀತೆ- ಶಿವಣ್ಣನವರ ಸಂಬಂಧವೂ ಇದಕ್ಕೆ ಹೊರತಾಗಿರಲಿಲ್ಲ. ಇದರಿಂದಾಗಿಯೇ ‘ಮದುವೆ’ ಎಂಬುದು ಪರಿಪೂರ್ಣ ಜೀವನಕ್ಕೆ ನಾಂದಿ ಎಂಬಂತಹ ಮೌಲ್ಯಾಧಾರಿತ ಹೇಳಿಕೆಗಳು ಪ್ರಚಲಿತದಲ್ಲಿವೆ.

ಪ್ರೀತಿ-ಪ್ರೇಮ ಸರ್ವವ್ಯಾಪಿಯಾದುದು. ಪ್ರೇಮ ಮನುಷ್ಯನ ಅಂತಃಕರಣದಲ್ಲೂ ತುಂಬಿದೆ. ಆದರೆ ಅದಕ್ಕೆ ಅವಕಾಶ ಬೇಕಾಗಿದೆ. ಪ್ರಕಟವಾಗಲು ಸ್ಥಳ ಬೇಕಾಗಿದೆ ಎಂಬ ವಾಸ್ತವತೆಯನ್ನು ‘ಕೇವಲ ಮನುಷ್ಯರು’ ಕಾದಂಬರಿಯಲ್ಲಿ ಬಿಂಬಿಸಲಾಗಿದೆ. ಯೌವ್ವನದಲ್ಲಿ ವೈಧವ್ಯ ಪ್ರಾಪ್ತವಾದರೆ, ಸಹ್ಯವಾಗದ ಜೀವನವನ್ನು ಸಾಗಿಸಬೇಕಾಗುತ್ತದೆ. ಹೊಟ್ಟೆ ಹಸಿವು ಮತ್ತು ದೈಹಿಕ ಹಸಿವು ಅವಳನ್ನು ತೀವ್ರವಾಗಿ ಕಾಡುತ್ತಿರುತ್ತದೆ. ಹೊಟ್ಟೆ ಹಸಿವನ್ನು ಹೇಗಾದರೂ ತುಂಬಬಹುದು. ಆದರೆ ದೈಹಿಕ ಹಸಿವು ತುಂಬ ಅಪಾಯಕಾರಿಯಾಗಿದ್ದು, ಸಹಜವಾಗಿ ತುಂಬಲಾಗುವುದಿಲ್ಲ. ಗಂಡನಿಂದ ದೂರವಿದ್ದ ಕಾವೇರಿಯ ಸ್ಥಿತಿಯು ಇದಕ್ಕೆ ಹೊರತಾಗಿರಲಿಲ್ಲ. ಕಾವೇರಿಯು ಉಪಜೀವನಕ್ಕಾಗಿ ಹಯವದನರಾಯರ ಮನೆಯಲ್ಲಿ ಅಡುಗೆ ಕೆಲಸದವಳಾಗಿ ಸೇರುತ್ತಾಳೆ. ಕ್ರಮೇಣವಾಗಿ ಅವರ ಮೈ-ಮನಗಳಿಗೆ ಸುಖ ಕೊಡುವ ಆತ್ಮೀಯ ಸಖಿಯಾಗುತ್ತಾಳೆ. ನೋವು-ನಲಿವನ್ನು ಹಂಚಿಕೊಳ್ಳುವ ಗೆಳತಿಯಾಗುತ್ತಾಳೆ. ತನ್ನ ದೇಹ ಹಾಗೂ ಮನಸ್ಸಿಗೆ ತೃಪ್ತಿ ತಂದ ಹಯವದನರಾಯರನ್ನು ಮನಪೂರ್ವಕವಾಗಿ ತುಂಬ ಪ್ರೀತಿಸುತ್ತಾಳೆ. ಲೈಂಗಿಕ ಒತ್ತಡಗಳನ್ನು ತಮ್ಮಿಂದ ಮೀರಲು ಸಾಧ್ಯವಿಲ್ಲವೆಂಬ ವಿನಮ್ರತೆ ಕಾವೇರಿಯಲ್ಲಿದೆ. ಅಂತೆಯೇ ಸಮಯ ಸಿಕ್ಕಾಗಲೆಲ್ಲ ಹಯವದನರಾಯರೊಂದಿಗೆ ದೈಹಿಕವಾಗಿ ಸಂಧಿಸುತ್ತಿದ್ದಳು. ಗಂಡ -ಹೆಂಡತಿಯರಂತೆ ಸುಖವಾಗಿದ್ದು, ಉತ್ತಮ ದಾಂಪತ್ಯ ಜೀವನವನ್ನು ಹೊಂದಿದ್ದಳು. “ಪತಿ-ಪತ್ನಿಯರು ಕಾಮವನ್ನು, ಸಂಭೋಗವನ್ನು ಅರಿತು ಮನದಟ್ಟು ಮಾಡಿಕೊಳ್ಳಲು ಪ್ರಯತ್ನಿಸಿದರೆ ಅವರು ಪರಸ್ಪರ ಗೆಳೆಯರಾಗಬಹುದು,

[illegible]

ಪರಸ್ಪರ ಕಾಮವನ್ನು ರೂಪಾಂತರಿಸಿಕೊಳ್ಳುವುದರಲ್ಲಿ ಸಹ ಯೋಗಿಯಾಗಬಲ್ಲರು" ಎಂಬ ಓಶೋರವರ ಹೇಳಿಕೆ (ಗಣೇಶ ಶರ್ಮ (ಅನು) ೧೯೯೫;೬೦) ಸತಿ-ಪತಿಯರು ಲೈಂಗಿಕ ಕ್ರಿಯೆಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕು, ಅದನ್ನು ಸ್ನೇಹದಲ್ಲಿ ಹೇಗೆ ಪರಿವರ್ತಿಸಬೇಕು ಎಂಬುದನ್ನು ಪ್ರಚುರಪಡಿಸುತ್ತದೆ. ಕಾವೇರಿ ಹಯವದನರಾಯರ ನಡೆ, ನುಡಿ, ಆಚಾರ- ವಿಚಾರಗಳನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡು, ಅವರೊಂದಿಗೆ ಹೊಂದಾಣಿಕೆಯುತ ಜೀವನವನ್ನು ಸಾಗಿಸುತ್ತಿದ್ದಳು.

ದಾಂಪತ್ಯವೆನ್ನುವುದು ಶಾಸ್ತ್ರದ ಚೌಕಟ್ಟಿನಲ್ಲಿ ರೂಪುಗೊಳ್ಳುವ ಸಂಬಂಧವಲ್ಲ. ಪರಸ್ಪರ ಅನುರಾಗ, ತಿಳುವಳಿಕೆಗಳ ಆಧಾರದ ಮೇಲೆ ರೂಢಿಸಿಕೊಳ್ಳುವ ಪ್ರಜ್ಞಾ-ಪೂರ್ವಕ ಆಯ್ಕೆಯಾಗಿದೆ ಎಂಬುದನ್ನು ಕಾವೇರಿ-ಹಯವದನರಾಯರ ದಾಂಪತ್ಯ ಜೀವನದಿಂದ ಕಂಡುಕೊಳ್ಳಲಾಗಿದೆ. ಇಳಿವಯಸ್ಸಿನಲ್ಲಿ ಲೈಂಗಿಕ ಪ್ರವೃತ್ತಿ, ಅದರ ಅನಿವಾರ್ಯತೆ, ಅಷ್ಟಾಗಿ ಇರುವುದಿಲ್ಲ ಎನ್ನುವುದು ಸಾಮಾನ್ಯರ ಸ್ಥೂಲವಾದ ಅಭಿಪ್ರಾಯ. ಆದರೆ ಕಾದಂಬರಿಕಾರರು ಇದರ ಸಾಧ್ಯತೆಯನ್ನು ಕಾವೇರಿಯ ಪಾತ್ರದ ಹಿನ್ನೆಲೆಯಲ್ಲಿ ದೃಢಪಡಿಸಿದ್ದಾರೆ. "ಪ್ರೇಮಕ್ಕೆ ವಯಸ್ಸು ಅಡ್ಡಿಯಾಗುವುದಿಲ್ಲ" ಎಂಬುದನ್ನು ವಿಶ್ಲೇಷಿಸಿದ್ದಾರೆ. ಇದಕ್ಕೆ ಪೂರಕವೆಂಬಂತೆ "ಹೆಣ್ಣು ತನ್ನ ಲೈಂಗಿಕ ಸಾಮರ್ಥ್ಯದ ತುತ್ತ ತುದಿಗೇರುವುದು ಮೂವತ್ತರ ಅಂಚಿನಲ್ಲಿ ಎಂದು ಅಧ್ಯಯನಗಳು ಹೇಳುತ್ತವೆ ('ಕನ್ನಡ ಪ್ರಭ' (ನವ್ಹೆಂಬರ್ ೧೫, ೨೦೦೮) ಎಂಬುದು ಕಾದಂಬರಿಯ ಲೈಂಗಿಕ ನಿಲುವಿಗೆ ಪುಷ್ಟಿ ನೀಡುತ್ತದೆ.

ವೇಶ್ಯೆಯರನ್ನು ಸಮಾಜದ ಅನಿಷ್ಟವೆಂಬಂತೆ ಕಂಡರೂ ಕೆಲವೊಬ್ಬರು ಅದಕ್ಕೆ ಅಪವಾದವೆಂಬಂತೆ ಬದುಕುತ್ತಾರೆ ಎಂಬುದನ್ನು 'ಕರುಳಿನ ಕರೆ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಚಂಪೆಯು ವೇಶ್ಯೆಯಾಗಿದ್ದರೂ ವೃತ್ತಿನಿರತ ವೇಶ್ಯೆಯಾಗಿರಲಿಲ್ಲ. ತನ್ನ ದೇಹವನ್ನು ಪರರಿಗೆ ಮಾರಿಕೊಳ್ಳದೆ ವಾಸುದೇವಯ್ಯನೊಂದಿಗೆ ಮಾತ್ರ ಸಂಬಂಧವನ್ನು ಹೊಂದಿದ್ದಳು. ಅವನೊಂದಿಗೆ ನಿಷ್ಠೆಯಿಂದ ಬದುಕುತ್ತಿದ್ದಳು. ವಾಸುದೇವಯ್ಯನವರ ತರುಣ ಮನಸ್ಸಿಗೆ ವಿರಹದ ಯಾತನೆ, ಪ್ರೇಮದ ಕೊರತೆ ಪ್ರಾಪ್ತಿಸಿದಾಗ ಅವಳಿಂದ ಶಾಂತಿ ಮತ್ತು ಪ್ರೀತಿ ದೊರಕಿತ್ತು. ವಾಸುದೇವಯ್ಯನೂ ಸಹ ಚಂಪಿಯನ್ನು ತುಂಬ ಪ್ರೀತಿಸುತ್ತಿದ್ದನು. "ನೀನು ನನಗೆ ದ್ರೋಹ ಮಾಡದೆ ಹೋದರೆ ನೀನು ಸಾಯುವ ತನಕ ಅಥವಾ ನಾನು ಸಾಯುವ ತನಕ ಬಾಳಿಸುತ್ತೇನೆ" ಎಂದು ಅವಳಿಗೆ ವಚನ ನೀಡುವುದು ಅವರೀರ್ವರ ಸಂಬಂಧವನ್ನು ನಿರೂಪಿಸುತ್ತದೆ.

ವಾಸುದೇವಯ್ಯನವರ ಹೆಂಡತಿ ಕಲ್ಯಾಣಿಗೆ ತನ್ನ ಗಂಡ ಮತ್ತೊಂದು ಹೆಂಗಸಿನೊಂದಿಗೆ ಸಂಬಂಧವನ್ನು ಹೊಂದಿದ್ದಾನೆ ಎಂಬುದು ಗೊತ್ತಿದ್ದರೂ ಸಹ ವಿಚಲಿತಳಾಗುವುದಿಲ್ಲ. "ನನ್ನನ್ನು ಅವರು ಕಡಿಮೆಯಾಗಿ ಕಂಡಿಲ್ಲ, ಪ್ರೀತಿಸಿದೆ ಹೋಗಿಲ್ಲ. ನನಗಿಂತ ಮೊದಲೇ ಬಂದವಳೆಂದು ಕಾಣುತ್ತದೆ. ನಾನೇಕೆ ಇಲ್ಲದ ಚಿಂತೆ ಹಚ್ಚಿಕೊಳ್ಳಬೇಕು" ಎಂದು (೨೦೦೩, ಸಂ-೮, ಕಾ-೭, ೮೭) ನಿಟ್ಟುಸಿರು ಬಿಡುವಳು.

ವೇಶ್ಯಾಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ಹೆಣ್ಣು ವೇಶ್ಯೆಯಾಗುವುದಿಲ್ಲ. ಅವಳೂ ಸಹ ಗರತಿಯಂತೆ ಒಬ್ಬನೊಂದಿಗೆ ಬದುಕಬಲ್ಲಳು ಎಂಬುದು 'ಕರುಳಿನ ಕರೆ' ಕಾದಂಬರಿಯಲ್ಲಿದೆ. ತನ್ನ ಗಂಡ ಪರಸ್ತ್ರೀಯೊಂದಿಗೆ ಅಥವಾ ವೇಶ್ಯೆಯೊಂದಿಗೆ ಸಂಬಂಧವನ್ನು ಹೊಂದಿದ್ದಾನೆ ಎಂಬುದು ಹೆಂಡತಿಗೆ

ತಿಳಿದರೂ ಪ್ರತಿಭಟಿಸದೆ ಅವರೊಂದಿಗೆ ಹೊಂದಾಣಿಕೆಯಿಂದ ಬಾಳುತ್ತಾಳೆ. ಅದು ಅವಳ ಮಾನವೀಯ ಮೌಲ್ಯವೆಂಬಂತೆ ಕಾದಂಬರಿಯಲ್ಲಿ ಬಿಂಬಿತವಾಗಿದೆ. ಆದರೆ ಅದು ವಾಸ್ತವವೆನಿಸದು. ಸ್ತ್ರೀಯರು ಅಸಹಾಯಕತೆಯಿಂದ ಪ್ರತಿಭಟಿಸದೆ ಇರಬಹುದೇ ಹೊರತು ಅವರನ್ನು ತನ್ನ ಗಂಡನ ಪ್ರೀತಿಯೊಂದಿಗೆ ಹಂಚಿಕೊಳ್ಳಲು ಬಯಸುವುದಿಲ್ಲ. ಕಾದಂಬರಿಯಲ್ಲಿ ಸ್ತ್ರೀಯರ ಅಸಹಾಯಕತೆಯನ್ನೇ ಆದರ್ಶವೆಂಬಂತೆ ಚಿತ್ರಿಸಲಾಗಿದೆ.

'ಜಾರುವ ದಾರಿಯಲ್ಲಿ', ಕಾದಂಬರಿಯ ಗುಲಾಬಿ ವೇಶ್ಯೆಯಾಗಿದ್ದು, ತಾನೂ ಮದುವೆಯಾಗಬೇಕು ಎಂದು ಬಯಸಿದರೆ, 'ಬತ್ತದ ತೊರೆ', ಕಾದಂಬರಿಯ ವಿನತೆ ವೇಶ್ಯೆಯ ಮಗಳಾಗಿದ್ದರೂ ಸಮಾಜವನ್ನು ಎದುರಿಸಿ ಮದುವೆಯಾಗುತ್ತಾಳೆ. ಆದರೆ 'ಅಳಿದ ಮೇಲೆ' ಕಾದಂಬರಿಯ ಸರಸಿ ವೇಶ್ಯೆಯಾಗಿದ್ದರೂ ಧರ್ಮ ಪತ್ನಿಗಿಂತಲೂ ಹೆಚ್ಚಾಗಿ ವಿಧೇಯಳಾಗಿ ಬಾಳುತ್ತಾಳೆ. 'ಪ್ರೀತಿ ಪ್ರೀತಿಸುತ್ತಲೇ ಕಲಿಯಬೇಕಾದ ಕಲಿಯುತ್ತಲೇ ಕರಗತ ಮಾಡಿಕೊಳ್ಳಬೇಕಾದ ಮನೋಸ್ಥಿತಿಯಾಗಿದೆ' ಎಂಬ ಸೂಕ್ತಿ ಸತ್ಯವಾಗಿದೆ. ಸರಸಿಯು ನಿಷ್ಠೆಯಿಂದ ಯಶವಂತರಾಯನನ್ನು ಜೀವನವಿಡಿ ಪ್ರೀತಿಸುತ್ತಾಳೆ. ಅವರನ್ನೇ ಗಂಡನೆಂದು ಪೂಜಿಸುತ್ತಾಳೆ. 'ಪ್ರೇಮವು ನಿರಂತರವಾಗಿಯೂ ಪ್ರತೀಕ್ಷೆ ಮಾಡುತ್ತಿರುತ್ತದೆ' ಎಂಬ ಸೂಕ್ತಿಯಂತೆ ಯಶವಂತರಾಯರಿಂದ ದೂರವಿದ್ದರೂ ಅವರನ್ನು ಕಾಯುತ್ತ ಪ್ರೀತಿಸುತ್ತಿದ್ದಳು. ಪ್ರೀತಿಸುತ್ತ ಕಾಯುತ್ತಿದ್ದಳು. ಅವರ ಪ್ರೀತಿಗಾಗಿ ಹಂಬಲಿಸುತ್ತಿದ್ದಳು.

"ವಿವಾಹದಲ್ಲಿ ಪ್ರೇಮವು ದೊರೆಯದಿದ್ದಾಗ ಅದಕ್ಕೆ ವಿರುದ್ಧವಾಗಿ ಪ್ರೇಮವನ್ನರಸಲು ನುಗ್ಗ ತೊಡಗುವುದು. ವೇಶ್ಯೆಯರು ಹುಟ್ಟುವುದು ವಿವಾಹದ ದೆಸೆಯಿಂದಲೇ. ವಿವಾಹವೆಂಬುದೇ ಮೂಲದಾರಿ. ಅದೇ ವೇಶ್ಯೆಯರನ್ನು ಹುಟ್ಟಿಸುವ ತಾಯಿಬೇರು" ಎಂಬ ಓಶೋ (ಗಣೇಶ ಶರ್ಮ (ಅನು) ೧೯೯೫: ೧೫೫-೧೫೬) ರವರ ಹೇಳಿಕೆಯು ಇಲ್ಲಿ ಉಲ್ಲೇಖನಿಯ. ವಿವಾಹವಾದ ಪುರುಷರು ಅಧಿಕ ಪ್ರಮಾಣದಲ್ಲಿ ವ್ಯಭಿಚಾರಿಗಳಾಗುತ್ತಾರೆ. ಅವರ ವೈವಾಹಿಕ ಜೀವನ ತೃಪ್ತಿಕರವಾಗಿರುವುದಿಲ್ಲ. ಪತಿ-ಪತ್ನಿಯರ ಸಾಂಸ್ಕೃತಿಕ ಭಿನ್ನತೆಯಿಂದ ಅವರಲ್ಲಿ ಮಾನಸಿಕ ಸ್ನಿಗ್ಧತೆಯಿರುವುದಿಲ್ಲ. ಇದರಿಂದಾಗಿ ಪತ್ನಿಯ ಲೈಂಗಿಕ ಸಂಪರ್ಕದಲ್ಲಿ ಅವರಿಗೆ ಆಸೆ ಇರುವುದಿಲ್ಲ. ಅದನ್ನು ಬೇರೊಬ್ಬರಿಂದ ಪಡೆಯಲು ಬಯಸುತ್ತಾರೆ. ಯಶವಂತರಾಯರು ಪತ್ನಿ ಕಮಲಮ್ಮಳಲ್ಲಿ ಕಾಣದ ಪ್ರೇಮೋಪಭೋಗವನ್ನು ಸರಸಿಯಲ್ಲಿ ಕಾಣುತ್ತಾರೆ. ಹೊಸ ಅನುಭವದ ಆಸೆ ಲೈಂಗಿಕ ಸಂಪರ್ಕದಿಂದ ಹೆಚ್ಚಾಗುತ್ತದೆ. ಅದರಿಂದಾಗಿಯೇ ಸರಸಿಯೊಂದಿಗಿನ ಅವರ ಸಂಬಂಧವು ಪತಿ -ಪತ್ನಿಯರಿಗಿಂತಲೂ ಮಿಗಿಲಾಗಿತ್ತು.

'ಪ್ರೇಮಕ್ಕೆ ಕೊಡುವ ಭಾಷೆ ಮಾತ್ರ ಗೊತ್ತು. ಕೊಳ್ಳುವ ಭಾಷೆ ಅದಕ್ಕೆ ತಿಳಿಯದು' ಎಂಬ ಸೂಕ್ತಿಯಂತೆ ಸರಸಿ ಯಶವಂತರಾಯರಿಂದ ಏನನ್ನು ನಿರೀಕ್ಷಿಸಿರಲಿಲ್ಲ. ಸರಸಿ ದುಡ್ಡಿಗಾಗಿ ಕಹಿಯಾಗುವದಿಲ್ಲ. ಆದರೆ ಅವರ ಹೆಂಡತಿ ಕಮಲಮ್ಮ ದುಡ್ಡಿಗಾಗಿ ಕಹಿಯಾಗುತ್ತಾಳೆ. ಕಮಲಮ್ಮಳಂತೆ ಯಶವಂತರಾಯರು ಸರಸಿಯನ್ನೂ ಬಿಟ್ಟು ಹೋಗುತ್ತಾರೆ. ಇದರಿಂದ ಕಮಲಮ್ಮ ಅವರನ್ನು ದೂರುತ್ತಾಳೆ. ಆದರೆ ಸರಸಿ ದೂರು ವುದಿಲ್ಲ. ಎಲ್ಲಿಯಾದರೂ ಇರಲಿ ಕ್ಷೇಮದಿಂದಿರಲಿ ಎಂದು ಹಾರೈಸುತ್ತಾಳೆ. ಅವರ ಹಣವನ್ನು

[illegible]

ನಿರಾಕರಿಸಿ ತನ್ನ ಮತ್ತು ಯಶವಂತರ ಪ್ರೇಮ ಹಣದ ಅಳತೆಗಿಂತಲೂ ಮೀರಿದ್ದೆಂದು ಹೇಳಿ ಯಶವಂತರನ್ನು 'ದಿವ್ಯಪ್ರೇಮಿ'ಯ ಸ್ಥಾನದಲ್ಲಿ ನಿಲ್ಲಿಸಿ ಬಿಡುತ್ತಾಳೆ. 'ಪ್ರೀತಿ ಕೊಡುವುದೇ ಹೊರತು ತೆಗೆದುಕೊಳ್ಳುವುದಲ್ಲ. ಕೊಡುವುದು ಪಡೆಯುವುದಕ್ಕಿಂತ ಹರ್ಷದಾಯಕವಾಗಿರುತ್ತದೆ' ಎಂಬ ವೇದಾಂತದಂತೆ ಸರಸಿಯು ಬದುಕುತ್ತಾಳೆ.

ಕಮಲಮ್ಮ-ಸರಸಿ, ಇವರೀರ್ವರು ತದ್ವಿರುದ್ಧವಾದ ಗುಣಗಳನ್ನು ಹೊಂದಿದ್ದರು. ಒಬ್ಬರದು ಅಹಂನಿಂದ ಕೂಡಿದ್ದರೆ, ಮತ್ತೊಬ್ಬರದು ಸೇವಾ ಮನೋಭಾವವನ್ನು ಹೊಂದಿತ್ತು. ವಿವಾಹಬಾಹಿರ ಸಂಬಂಧಗಳಲ್ಲಿ ಸ್ತ್ರೀಯು ನಿಯತ್ತನ್ನು ಪಾಲಿಸುತ್ತ, ನೆಚ್ಚಿದವನನ್ನು ತೃಪ್ತಿಪಡಿಸುತ್ತ ಅಪವಾದಗಳನ್ನು ತಾನೊಬ್ಬಳೇ ಸಹಿಸಿಕೊಳ್ಳುವ ಕ್ಷಮಾಶೀಲೆಯಾಗಿ ಸರಸಿಯ ಪಾತ್ರವು ಚಿತ್ರಣಗೊಂಡಿದೆ. ಕಾದಂಬರಿಯಲ್ಲಿ ವೇಶ್ಯೆಯ ಆದರ್ಶವನ್ನು ಹೆಚ್ಚಾಗಿ ಚಿತ್ರಿಸಲಾಗಿದೆ. ಸಂಪ್ರದಾಯದ ನೆಲೆಯಲ್ಲಿಯೇ ಸರಸಿಯ ವ್ಯಕ್ತಿತ್ವವನ್ನು ನಿರೂಪಿಸಿರುವುದು ಸ್ಪಷ್ಟವಾಗುತ್ತದೆ.

ಪ್ರೇಮವೆಂಬುದು ಒಬ್ಬ ವ್ಯಕ್ತಿ ಹಾಗೂ ಮತ್ತೊಬ್ಬ ವ್ಯಕ್ತಿಯ ನಡುವೆ ಇದ್ದ ಎಲ್ಲ ಗೋಡೆಗಳು ಬಿದ್ದು ಹೋಗುವಂತೆ ಮಾಡುತ್ತವೆ. ಎರಡು ಪ್ರಾಣಗಳು ಸಂಯುಕ್ತವಾಗಿ ಒಂದಾಗುತ್ತವೆ ಎಂಬ ಸಂದೇಶವನ್ನು 'ಅಳಿದ ಮೇಲೆ' ಕಾದಂಬರಿಯು ಒಳಗೊಂಡಿದೆ. ಸರಸಿ ಮತ್ತು ಯಶವಂತರಾಯರ ಸಂಬಂಧ ತುಂಬ ಗಾಢವಾಗಿತ್ತು. ಸರಸಿ ವೇಶ್ಯೆಯಾಗಿದ್ದರೂ ಯಶವಂತರಾಯನನ್ನು ಗಂಡನೆಂದು ಭಾವಿಸಿ ಪ್ರೀತಿಸುತ್ತಿದ್ದಳು, ಪೂಜಿಸುತ್ತಿದ್ದಳು. ಅವರೀರ್ವರದು ಪಕ್ವವಾದ ಮನಗಳ ಮಿಲನವಾಗಿತ್ತು. ಅವರಲ್ಲಿ ಹುಟ್ಟಿದ ಪ್ರೀತಿಯು ಕೇವಲ ಯೌವ್ವನದ ಪ್ರೇರಣೆಯಿಂದ ಹುಟ್ಟಿದ ವಾಸನಾಭಾವವಾಗಿರಲಿಲ್ಲ. ಬದಲಿಗೆ ಅದು ವಾಸನೆಯ ರೂಪಾಂತರವಾಗಿತ್ತು.

ಪ್ರೀತಿ ದೈಹಿಕವಾಗಿಯೂ ಹಾಗೂ ಮಾನಸಿಕವಾಗಿಯೂ ಇದ್ದಲ್ಲಿ ಮಾತ್ರ ಸಂಬಂಧ ಗಾಢವಾಗಿರುತ್ತದೆ ಎಂಬುದನ್ನು ಸರಸಿ-ಯಶವಂತರಾಯರ ಪಾತ್ರಗಳ ಹಿನ್ನೆಲೆಯಲ್ಲಿ 'ಅಳಿದ ಮೇಲೆ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಸಂಭೋಗ ಕೇವಲ ಒಂದು ಭೌತಿಕ ಕ್ರಿಯೆಯಲ್ಲ. ಅದೊಂದು ಸೌಂದರ್ಯದ ಅಭಿವ್ಯಕ್ತಿ ಎಂಬುದರ ಚಿತ್ರಣ 'ಮೈ ಮನಗಳ ಸುಳಿಯಲ್ಲಿ" ಕಾದಂಬರಿಯಲ್ಲಿದೆ. ಕಾಮವು ಕೇವಲ ದೈಹಿಕ ಹಂಬಲಗಳನ್ನು ತಣಿಸುವ, ಹಸಿವನ್ನು ಹಿಂಗಿಸುವ ಸಾಧನವಲ್ಲ. ಅದು ಮನೋದೈಹಿಕ ವ್ಯಾಪಾರವಾಗಿದೆ ಎಂಬುದನ್ನು ಮಂಜುಳೆಯ ಪಾತ್ರದ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ಮಂಜುಳೆ ವೇಶ್ಯೆಯಾಗಿದ್ದರೂ ಕೇವಲ ದೈಹಿಕ ತೃಪ್ತಿಗಾಗಿ ಪರಿತಪಿಸದೆ ಮೈ ಮನಗಳೆರಡರ ತೃಪ್ತಿಗಾಗಿ ಹಂಬಲಿಸುತ್ತಿದ್ದಳು. ಮಂಜುಳೆಯು ಸುಬ್ರಾಯ ಉಳ್ಳೂರು ಅವರನ್ನು ತುಂಬ ಪ್ರೀತಿಸುತ್ತಿದ್ದಳು. ಗಂಡನೆಂದು ಭಾವಿಸಿ ಪೂಜಿಸುತ್ತಿದ್ದಳು. ಅವರೀರ್ವರ ಸಂಬಂಧವು ಉತ್ತಮ ದಾಂಪತ್ಯ ಜೀವನಕ್ಕೆ ನಿದರ್ಶನವಾಗಿತ್ತು. ಮೈಯ ಆಕರ್ಷಣೆ ಕಳೆದ ಮೇಲೆಯೂ ಅಂದರೆ ಮುಪ್ಪಿನಲ್ಲಿಯೂ ದಂಪತಿಗಳು ಪರಸ್ಪರರನ್ನು ಹರೆಯದಲ್ಲಿದ್ದಂತೆಯೇ ಪ್ರೀತಿಸುತ್ತ ಸಾಗುವ ಜೀವನವೇ ಸಾರ್ಥಕ ದಾಂಪತ್ಯ ಎಂಬುದನ್ನು ಮಂಜುಳೆ ಹಾಗೂ ಉಳ್ಳೂರು ಸುಬ್ರಾಯರ ಪಾತ್ರಗಳಿಂದ ಈ ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ.

ವೇಶ್ಯೆಯೊಬ್ಬಳ ಅಂತರಂಗ, ಜೀವನದ ನೋವು-ನಲಿವುಗಳನ್ನು, ಸುಖ-ದುಃಖಗಳನ್ನು ಅವಳ ಒಳತೋಟಿ, ಕಾತರ ಹೊಯ್ದಾಟ ಮುಂತಾದ ಸಂಗತಿಗಳನ್ನು "ಮೈ ಮನಗಳ ಸುಳಿಯಲ್ಲಿ" ಕಾದಂಬರಿಯು ಒಳಗೊಂಡಿದೆ. ವೇಶ್ಯೆಯರ ಆಸೆ ಆಕಾಂಕ್ಷೆಗಳು, ಸ್ಥಾನಮಾನಗಳು, ಕಾಮಜೀವನದ ತೃಪ್ತಿ, ಅತೃಪ್ತಿಗಳು, ಪ್ರಾಸಂಗಿಕವಾಗಿ ಅನುಭವಿಸಬೇಕಾಗಿ ಬರುವ ಸಂಕಟ ಮತ್ತು ರೋಗಜನ್ಯ ಮೈ ಮನಗಳ ಯಾತನೆ... ಮುಂತಾದ ಸಮಸ್ಯೆಗಳನ್ನು ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

ವೇಶ್ಯೆಯರಲ್ಲಿ ಹಲವಾರು ಬಗೆಯ ವೇಶ್ಯೆಯರಿರುತ್ತಾರೆ. "ಅನುಸರಿಸುವ ವೃತ್ತಿಯಿಂದ, ಸಾಮಾಜಿಕ ಸ್ಥಾನಮಾನದಿಂದ, ಬಹಿರಂಗ ಸ್ಥಳದಲ್ಲಿ ಶೃಂಗಾರ ಚೇಷ್ಟೆಯಿಂದ, ವಿಟರನ್ನು ಆಕರ್ಷಿಸುವ ವಿಧಾನದಿಂದ ವೇಶ್ಯೆಯರ ಮಾದರಿಯನ್ನು ನಿರ್ಧರಿಸಲಾಗಿದೆ" ಎಂದು ಶಿವಣ್ಣನವರು (೧೯೮೪; ೧೬೪) ಗುರುತಿಸಿದ್ದಾರೆ. ಅವುಗಳೆಂದರೆ ೧. ಬಿರಿಯಾ ೨. ದೀರೇದಾರರು ೩. ತಕ್ಯಾಯಿಗಳು ೪. ವಲಸೆ ಹೋಗುವರು ೫. ನೈತಿಕ ಅಧಃಪತನಕ್ಕೊಳಗಾದವರು. ಬಿರಿಯಾ ಮತ್ತು ದೀರೇದಾರರು ವಂಶಪಾರಂಪರ್ಯವಾಗಿ ಆ ಕಸುಬನ್ನು ಅನುಸರಿಸುತ್ತಾರೆ. ಇವರಲ್ಲಿ ಲೈಂಗಿಕ ವ್ಯಾಪಾರ ತಾಯಿಯಿಂದ ಮಗಳಿಗೆ ವರ್ಗಾಯಿಸಲ್ಪಡುವುದು. ತಕ್ಯಾಯಿಗಳು ಒಂದು ನಿಗದಿಯಾದ ಜಾಗದಲ್ಲಿ ಮಾತ್ರ ಅದನ್ನು ಮುಂದುವರಿಸುವರು.

'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಬಿರಿಯಾ ಮತ್ತು ದೀರೇದಾರರು ಪದ್ಧತಿಯ ವೇಶ್ಯೆಯರನ್ನು ಗುರುತಿಸಬಹುದು. ಇದು ನಾಲ್ಕು ತಲೆಮಾರಿನ ಕಥೆಯನ್ನು ಒಳಗೊಂಡಿದೆ. ವೇಶ್ಯೆಯರ ಲೈಂಗಿಕ ಸಂಪರ್ಕದಲ್ಲಿ ಸ್ವೇಚ್ಛಾಪರತೆ ಕಂಡುಬಂದರೂ ಕೆಲವರೊಡನೆ ಹೆಚ್ಚಿನ ಆಕರ್ಷಣೆ ಇರುತ್ತದೆ ಎಂಬುದನ್ನೂ ಮಂಜುಳೆಯ ಜೀವನದಿಂದ ತಿಳಿಯಬಹುದು. ಮಂಜುಳೆಯ ಬದುಕಿನಲ್ಲಿ ಹಲವಾರು ಪುರುಷರು ಬಂದು ಹೋಗುತ್ತಾರೆ. ಕಂಡಲೂರಿನ ವಾಸುದೇವ ಪೈ. ಸುಬ್ರಾಯ ಉಳ್ಳೂರು, ಮುರಗೋಡು ನಂಜಪ್ಪ, ಮೆಕ್ಕಿಮನೆ ಸುಬ್ರಾಯ, ಲಕ್ಷ್ಮಣ ತೀರ್ಥ..... ಮುಂತಾದವರು ಮಂಜುಳೆಯಲ್ಲಿ ಪ್ರೀತಿ ಬಯಸಿದವರಾದರೂ ಸುಬ್ರಾಯ ಉಳ್ಳೂರು ಹಾಗೂ ಲಕ್ಷ್ಮಣತೀರ್ಥರು ಮಂಜುಳೆಯ ಜೀವನದ ಮೇಲೆ ತುಂಬ ಪ್ರಭಾವವನ್ನು ಬೀರಿದ್ದರು. ಇವರು ಮಂಜುಳೆಯಿಂದ ಕೇವಲ ಲೈಂಗಿಕಾಪೇಕ್ಷೆಯನ್ನು ಹೊಂದಿರದೆ ಅದರೊಂದಿಗೆ ಮಾನಸಿಕ ತೃಪ್ತಿಯನ್ನು ಬಯಸುತ್ತಿದ್ದರು,

ಮೈಯ ಬಯಕೆ ಮತ್ತು ಮನಸ್ಸಿನ ತೃಪ್ತಿಗಳೆಂಬ ದ್ವಿಮುಖ ತುಯ್ತಗಳಿಗೆ ಸಿಕ್ಕಿರುವ ಮಂಜುಳೆಯು ಸುಬ್ರಾಯ ಉಳ್ಳೂರು ಅವರನ್ನು ಪ್ರೀತಿಸುತ್ತಾಳೆ. ಪತಿಗಿಂತಲೂ ಹೆಚ್ಚಾಗಿ ಭಾವಿಸುತ್ತಾಳೆ. ಆದರೆ ಮಂಜುಳೆಯ ಬಾಳಿನಲ್ಲಿ ಪ್ರವೇಶಿಸುವ ಹೊತ್ತಿಗೆ ಉಳ್ಳೂರರ ವಯಸ್ಸು ಮಾಗಿರುತ್ತದೆ. ಮಕ್ಕಳನ್ನು ಪಡೆಯಬೇಕೆಂಬ ಅವಳ ಆಸೆಯು ಉಳ್ಳೂರರ ಸಂಗದಿಂದ ಕೈಗೂಡುವುದಿಲ್ಲ. ಗಾಂಧೀಜಿಯವರ ಚಿಂತನೆಯಂತೆ 'ಸಂಭೋಗ ಕೇವಲ ಸಂತಾನ ಪ್ರಾಪ್ತಿಗಾಗಿಯೆ' ನಡೆಯಬೇಕು ಎಂಬುದು ಒಪ್ಪಿತವಾಗುವುದಿಲ್ಲ. ಒಂದು ವೇಳೆ ಸಂತಾನಪ್ರಾಪ್ತಿಗಾಗಿಯೇ ಸಂಭೋಗ ಮಾಡಬೇಕು ಎಂಬುದಾದರೆ ಮಂಜುಳೆ ಸುಬ್ರಾಯ ಉಳ್ಳೂರರಿಂದ ಪ್ರೀತಿಯನ್ನು ಪಡೆಯಲಾಗುತ್ತಿರಲಿಲ್ಲ. ಪ್ರೀತಿಯೆಂದರೆ ಕೇವಲ ಯೌವ್ವನದಲ್ಲಿಯೇ ಉದ್ಭವಿಸುವಂತಹ ವಾಸನಾಭಾವವಲ್ಲ. ಆ ವಾಸನಾಪ್ರವೃತ್ತಿಗೆ ಸ್ತ್ರೀ ಪುರುಷರಿಬ್ಬರ

[illegible]

ಮುಕ್ತ ವಿಚಾರಗಳ ಅಂತಃಕರಣದ ಜೊತೆ ದೊರೆತರೆ ಮಾತ್ರ ಸಂಬಂಧವು ಹಿತವೆನಿಸುತ್ತದೆ ಎಂಬದನ್ನು ಮಂಜುಳೆಯ ಪಾತ್ರದ ಮೂಲಕ ಸ್ಪಷ್ಟಪಡಿಸಲಾಗಿದೆ.

ಸಾಮಾನ್ಯವಾಗಿ ವೇಶ್ಯೆಯರಲ್ಲಿ ಕೆಲವೊಂದು ಲಕ್ಷಣಗಳನ್ನು ಗುರುತಿಸಬಹುದು. ಕಣ್ಣಲ್ಲಿ ಒಬ್ಬನನ್ನು ಕರೆಯುವುದು, ಕೈಯಿಂದ ಬೇರೊಬ್ಬನನ್ನು ನೇವರಿಸುವುದು, ಬಾಯಿಂದ ಮತ್ತೊಬ್ಬನನ್ನು ಉಪಚರಿಸುವುದು ಹಾಗೂ ಮೈಯಿಂದ ಇನ್ನೊಬ್ಬನನ್ನು ಸುಖ ಪಡಿಸುವುದು. ಇಂತವರು ಈ ವೃತ್ತಿಯ ಮುಖ್ಯ ಉದ್ದೇಶ ಹಣ ಸಂಪಾದನೆ ಎಂದು ಬಲವಾಗಿ ನಂಬಿರುತ್ತಾರೆ. ಬಾಡಿಗೆಗೆ ಶರೀರವನ್ನು ಮಾರುವುದು. ಶರೀರವನ್ನು ಲಾಭಕ್ಕಾಗಿ ಉಪಯೋಗಿಸಿಕೊಳ್ಳುವುದು. ಇದು ಅವರ ದಿನನಿತ್ಯ ಜೀವನದ ರೂಢಿಯಾಗಿರುವುದು. ಇಂತಹ ಕೀಳುಮಟ್ಟದ ವೇಶ್ಯೆಯರನ್ನು ಕುರಿತು ಕಾರಂತರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿಲ್ಲ. ಬದಲಿಗೆ ಆದರ್ಶದ ಹಿನ್ನೆಲೆಯಲ್ಲಿ ಸುಧಾರಣೆಯ ಪರಿಧಿಯಲ್ಲಿ ವೇಶ್ಯೆಯರನ್ನು ಅನಾವರಣಗೊಳಿಸಿದ್ದಾರೆ. ಓಶೋರವರ "ವೇಶ್ಯೆಯರು ಹುಟ್ಟುವರು. ಸಮಾಜದಲ್ಲಿ ಅನಾಚಾರ ಬೆಳೆಯುವುದು. ವ್ಯಭಿಚಾರ ವೃದ್ಧಿಸುವುದು. ವಿವಾಹ ವಿಚ್ಛೇದನೆಗಳುಂಟಾಗುವವು" (ಗಣೇಶ ಶರ್ಮ (ಅನು) ೧೯೯೫, ೧೫೭) ಎಂಬ ಹೇಳಿಕೆ ಸರ್ವಸಮ್ಮತವಲ್ಲ. ಇದಕ್ಕೆ ಮಂಜುಳೆಯ ಪಾತ್ರ ಅಪವಾದವಾಗಿದೆ. ಮಂಜುಳೆಯಿಂದ ಸುಬ್ರಾಯ ಉಳ್ಳೂರರ ಕುಟಂಬಕ್ಕೆ ಯಾವ ರೀತಿಯ ಹಾನಿಯುಂಟಾಗುವುದಿಲ್ಲ. ಬದಲಿಗೆ ಉಳ್ಳೂರು ಸುಬ್ರಾಯರ ಹೆಂಡತಿ ಹಾಗೂ ಮಂಜುಳೆ ತೀರ ಆತ್ಮೀಯರಂತೆ ಇರುತ್ತಾರೆ. 'ವೇಶ್ಯೆಯರೆಲ್ಲ ಕೆಟ್ಟವರು' ಎಂಬ ಲೋಕ ರೂಢಿಗೆ ಕಾದಂಬರಿಯಲ್ಲಿ ಆದರ್ಶದ ಹಿನ್ನೆಲೆಯಲ್ಲಿ ವೇಶ್ಯೆಯರೂ ಸಂಸಾರವಂತರಾಗಿರುವ ಸಾಧ್ಯತೆಯಿರುತ್ತದೆ ಎಂಬುದನ್ನು ಮಂಜುಳೆಯ ಪಾತ್ರದ ಮೂಲಕ ಪ್ರಕಟಿಸಲಾಗಿದೆ.

'ಕಾಯಕವೇ ಕೈಲಾಸ' ಎಂಬ ಶರಣರ ಹೇಳಿಕೆಯಂತೆ ಮಂಜುಳೆಗೆ ವೇಶ್ಯಾವೃತ್ತಿಯ ಬಗೆಗೆ ಗೌರವವಿತ್ತು. ತನ್ನನ್ನು ಬಯಸಿ ಬಂದವರೊಂದಿಗೆ ಆತ್ಮೀಯವಾಗಿ ವರ್ತಿಸುತ್ತ, ಸತ್ಕಾರವನ್ನು ಮಾಡುತ್ತಿದ್ದಳು. ಮಂಜುಳೆಯು ಸುಬ್ರಾಯ ಉಳ್ಳೂರರಿಂದ ಕೇವಲ ಮಾನಸಿಕ ತೃಪ್ತಿಯನ್ನು ಪಡೆದರೆ, ಲಕ್ಷ್ಮಣ ತೀರ್ಥರಿಂದ ದೈಹಿಕ ಮತ್ತು ಮಾನಸಿಕ ತೃಪ್ತಿಗಳೆರಡನ್ನು ಪಡೆಯುತ್ತಾಳೆ. 'ಪ್ರೀತಿಯ ಸೆರಗಿನ ಸೋಂಕು ತಗುಲಿದ ಅತಿ ಸಾಮಾನ್ಯನೂ ಕೂಡ ಅಲೌಕಿಕ ಜೀವಿಯೇ' ಎಂಬ ವೇದಾಂತದಂತೆ ಅನುಭವವನ್ನು ಪಡೆಯುತ್ತಾಳೆ.

'ಮೈ ಮನಗಳ ಸುಳಿಯಲ್ಲಿ', ಕಾದಂಬರಿಯಲ್ಲಿ ವೇಶ್ಯಾಪದ್ಧತಿಯನ್ನು ವಿವಿಧ ದೃಷ್ಟಿಕೋನಗಳಲ್ಲಿ ಸ್ತ್ರೀ ಪಾತ್ರಗಳ ಮುಖಾಂತರ ಕಾದಂಬರಿಕಾರರು ಅನಾವರಣಗೊಳಿಸಿದ್ದಾರೆ. ವೇಶ್ಯಾವೃತ್ತಿಯನ್ನು ಗೌರವದಿಂದ ಕಾಣುವ ಮಂಜುಳೆಯ ವ್ಯಕ್ತಿತ್ವ, ವೇಶ್ಯಾವೃತ್ತಿಯನ್ನು ಕೀಳೆಂದು ಭಾವಿಸುವ ಚಂದ್ರಿಯ ಮನೋಭಾವ ಪರಸ್ಪರ ವಿರೋಧಗಳಾಗಿವೆ. ಮಂಜುಳೆಯ ಪಾತ್ರ ಚಿತ್ರಣ ಆದರ್ಶದ ಹಿನ್ನೆಲೆಯಲ್ಲಿದ್ದರೆ, ಚಂದ್ರಿಯ ಪಾತ್ರವು ಪ್ರಗತಿಪರ ಧೋರಣೆಯನ್ನು ಅಭಿವ್ಯಕ್ತಪಡಿಸುವುದು ಸ್ಪಷ್ಟವಾಗುತ್ತದೆ.

'ಸಂಸಾರದಲ್ಲಿ ಹೆಣ್ಣು ಗಂಡಿಗೆ ಅಧೀನವಾಗಿರುತ್ತಿದ್ದರೆ ವೇಶ್ಯಾಗೃಹದಲ್ಲಿ ಗಂಡು ವೇಶ್ಯೆಯ ದಾಸನಾಗಿರುತ್ತಿದ್ದ' ಎಂಬುದು ಲೋಕಾರೂಢಿಯ ಮಾತು. 'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ

ಕುವೆಂಪು ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆ ಹೇಳಿಕೆಯನ್ನು ಉಲ್ಲೇಖಿಸಬಹುದು. ನಾರಾಯಣ ಹೆಬ್ಬಾರರು ತಮ್ಮ ಹೆಂಡತಿ ಮಹಾಲಕ್ಷ್ಮಿಗಿಂತ ಪ್ರೇಯಸಿ 'ಚಂದು'ಳನ್ನು ತುಂಬ ಪ್ರೀತಿಸುತ್ತಿದ್ದರು. ಅವಳೊಂದಿಗೆ ತಮ್ಮ ಎಲ್ಲ ಸುಖ-ದುಃಖಗಳನ್ನು ಹಂಚಿಕೊಳ್ಳುತ್ತಿದ್ದರು. ಹೆಂಡತಿಯಿಂದ ಮರೆಮಾಚಿದ ವಿಷಯವನ್ನು ಪ್ರೇಯಸಿಗೆ ತಿಳಿಸುತ್ತಿದ್ದರು. ಅಂತೆಯೇ ಚಂದು ನಾರಾಯಣ ಹೆಬ್ಬಾರರನ್ನು ಪತಿಯೆಂದೇ ಭಾವಿಸಿ ಪ್ರೀತಿಸುತ್ತಿದ್ದಳು. ಚಂದುವಿಗೆ ಮಕ್ಕಳಿರಲಿಲ್ಲ. ಮಕ್ಕಳಿಗಾಗಿ ಹಂಬಲಿಸುತ್ತಿದ್ದಳು. ನಾರಾಯಣ ಹೆಬ್ಬಾರರ ಪತ್ನಿ ಮಹಾಲಕ್ಷ್ಮಿಯ ಮಕ್ಕಳನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದಳು. ಮಕ್ಕಳಿಲ್ಲದ ಕೊರಗನ್ನು ಅವರ ಮಕ್ಕಳಿಂದ ಪಡೆಯುತ್ತಿದ್ದಳು. ಅವರ ಸುಖ ದುಃಖಗಳಿಗೆ ಸ್ಪಂದಿಸುತ್ತಿದ್ದಳು. ಈ ಸಂಬಂಧದಿಂದಾಗಿಯೇ ಮಹಾಲಕ್ಷ್ಮಿಯನ್ನು ಒಡಹುಟ್ಟಿದ ಸಹೋದರಿ ಎಂದು ಭಾವಿಸುತ್ತಿದ್ದಳು. ತನ್ನ ಜೀವನವನ್ನು ಅವಳ ಕುಟುಂಬಕ್ಕಾಗಿ ಮುಡುಪಾಗಿಟ್ಟಿದ್ದಳು. ನಾರಾಯಣ ಹೆಬ್ಬಾರರು ಸಾವನ್ನಪ್ಪಿದಾಗ ಮಹಾಲಕ್ಷ್ಮಿಗೆ ಸಾಂತ್ವಾನ ಹೇಳುತ್ತಾಳೆ. ಅವಳ ಕುಟುಂಬದಲ್ಲಿ ಓರ್ವ ಸದಸ್ಯೆಯಾಗಿ ಮಹಾಲಕ್ಷ್ಮಿಗೆ ಸಹಾಯ ಸಹಕಾರ ಮಾಡುತ್ತ ಬದುಕುತ್ತಾಳೆ.

ತಾಯ್ತನದ ಬಯಕೆ ಕಾರಂತರು ಕಂಡಂತೆ ಹೆಣ್ಣು ಜೀವನದ ಒಂದು ಆಂತರಿಕ ಆಸೆ ಮಾತ್ರವಲ್ಲ, ಉತ್ಕಟೇಚ್ಛೆಯಾಗಿದೆ. ಇದನ್ನು ಗರತಿಯರಲ್ಲಿಯೂ, ಪತಿತೆಯರಲ್ಲಿಯೂ ಕಾಣಬಹುದು. ಇದರಿಂದಾಗಿಯೇ ಚಂದು ಮಹಾಲಕ್ಷ್ಮಿಯ ಕುಟುಂಬದೊಂದಿಗೆ ಉತ್ತಮವಾದ ಬಾಂಧವ್ಯವನ್ನು ಹೊಂದಿದ್ದಳು.

ವೇಶ್ಯೆಯರಿಂದ ಕುಟುಂಬ ಹಾಳಾಗುವವು ಎಂಬ ಪರಂಪರಾಗತ ನಂಬಿಕೆಯನ್ನು ಸ್ತ್ರೀ ಪಾತ್ರಗಳಿಂದ ಸುಳ್ಳಾಗಿಸಿದ್ದಾರೆ. ಅವರಿಂದ ಕುಟುಂಬಕ್ಕೆ ಸಹಾಯ ಸಹಕಾರ ದೊರೆಯುತ್ತವೆ ಎಂಬುದನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಅನಾವರಣಗೊಳಿಸಿದ್ದಾರೆ. ಇದರಿಂದಾಗಿಯೇ ತಮ್ಮ ಗಂಡಂದಿರು ವೇಶ್ಯೆಯರ ಸಹವಾಸ ಮಾಡಿದರೂ ಪ್ರತಿರೋಧ ವ್ಯಕ್ತಪಡಿಸದೆ ಅವರನ್ನು ತಮ್ಮ ಸಹೋದರಿಯೆಂಬಂತೆ ಕಾಣುತ್ತಾರೆ ಎಂದು ಚಿತ್ರಿಸಿದ್ದಾರೆ. ಇದು ವಾಸ್ತವಕ್ಕೆ ದೂರವೆನಿಸುತ್ತದೆ. ಪ್ರಸ್ತುತ ಸಮಾಜದಲ್ಲಿ ತಮ್ಮ ಗಂಡಂದಿರು ಎರಡನೆ ಮದುವೆಯಾದರೆ ಅವಳೊಂದಿಗೆ ಹೊಂದಾಣಿಕೆಯಾಗದೆ ಪ್ರತ್ಯೇಕವಾಗಿರುವವರನ್ನು ಗುರುತಿಸಬಹುದು. ಅಂಥವರಲ್ಲಿ ವೇಶ್ಯೆಯರ ಸಹವಾಸ ಮಾಡಿದರೂ ಪ್ರತಿರೋಧಿಸದೆ ಹೊಂದಾಣಿಕೆಯಿಂದ ಇರುವವರು ಎಂಬುದು ಕೇವಲ ಆದರ್ಶವಾಗಿದೆಯೇ ಹೊರತು ವಾಸ್ತವವಲ್ಲ.

೨. ವಿರಸ ದಾಂಪತ್ಯ

ವಧು-ವರರಿಬ್ಬರೂ ಪ್ರತ್ಯೇಕ ವಾತಾವರಣದಲ್ಲಿ ಬೆಳೆದು, ವಿಭಿನ್ನವಾದ ಆಚಾರ-ವಿಚಾರಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಮದುವೆಯಾದ ನಂತರ ವಧು ಅಪರಿಚಿತ ಮನೆಯನ್ನು ಸೇರುತ್ತಾಳೆ. ಆ ಮನೆಯ ಸದಸ್ಯರೆಲ್ಲರ ಅಭಿರುಚಿಗಳನ್ನು ತಿಳಿದುಕೊಂಡು ಅವರೊಂದಿಗೆ ಹೊಂದಿಕೊಂಡು ಹೋಗಲು ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಇದಕ್ಕೆ ಗಂಡಿನ ಕುಟುಂಬದ ಸದಸ್ಯರು ಮದುಮಗಳೊಂದಿಗೆ ಸಹಾಯ, ಸಹಕಾರ, ಸಂಯಮದಿಂದ ನಡೆದುಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಆದರೆ ಪುರುಷಪ್ರಧಾನ

ಸಮಾಜವು ಹೊಂದಾಣಿಕೆಯ ಭಾರವನ್ನೆಲ್ಲ ಸ್ತ್ರೀಯರ ಪಾಲಿಗಿರಿಸಿರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿಯೇ ಕುಟುಂಬದಲ್ಲಿ ಅಶಾಂತಿ, ಮನಃಸ್ತಾಪ, ಹೊಂದಾಣಿಕೆಯ ಅಭಾವದಿಂದ ಪತಿ-ಪತ್ನಿಯರಲ್ಲಿ ವಿರಸವುಂಟಾಗುತ್ತದೆ. ಕಾದಂಬರಿಕಾರರು ವಿರಸದಾಂಪತ್ಯಕ್ಕೆ ಕಾರಣಗಳು, ಅವುಗಳಿಂದ ಸಮಾಜದಲ್ಲಾಗುವ ದುಷ್ಪರಿಣಾಮಗಳು, ಅವುಗಳ ಪರಿಹಾರ ಕುರಿತು ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ಮಂಗಳಾ ಅವರ ಪ್ರಕಾರ "ದಂಪತಿ" ಎಂಬ ಹೆಸರಿನ ಮೂಲ ಅರ್ಥವೇ "ಮನೆಗೆ ಇಬ್ಬರೂ ಒಡೆಯರು" (೨೦೦೧; ೦೮) ಇದು ಸಾಧ್ಯವಾಗಬೇಕಾದರೆ ದಂಪತಿಗಳಲ್ಲಿ ಪರಸ್ಪರ ಬುದ್ಧಿಶಕ್ತಿಗಳ ಸಮಾವೇಶವಾಗಬೇಕು. ವಿಚಾರಗಳ ಏಕೀಕರಣವಾಗಬೇಕು ಎಂಬುದರ ಜಿಜ್ಞಾಸೆ "ಸರಸಮ್ಮನ ಸಮಾಧಿ" ಕಾದಂಬರಿಯಲ್ಲಿದೆ. ಈ ಕಾದಂಬರಿಯಲ್ಲಿ ದಾಂಪತ್ಯ ಜೀವನದ ವಿವಿಧ ಆಯಾಮಗಳನ್ನು ಚರ್ಚಿಸಲಾಗಿದೆ. ಸಮಾಜದಲ್ಲಿ ಹೆಣ್ಣಿನ ಸ್ಥಾನವನ್ನು ಕುರಿತಾದ ಆಲೋಚನೆಗಳು ಕಾದಂಬರಿಯಲ್ಲಿ ಪ್ರಮುಖವಾದ ವಿಷಯಗಳಾಗಿವೆ. ಲೈಂಗಿಕ ಸಮಸ್ಯೆಯಿಂದಾಗಿ ದಾಂಪತ್ಯ ಜೀವನವು ವಿರಸಮಯವಾಗುತ್ತದೆ. ಅತೃಪ್ತ ಕಾಮನೆಗಳು ವಿಕೋಪದಿಂದಾಗಿ ಅನೈತಿಕ ಸಂಬಂಧಗಳಲ್ಲಿ ಪರ್ಯಾವಸಾನವಾಗುತ್ತವೆ. ಲೈಂಗಿಕ ಅವಶ್ಯಕತೆಗಳಲ್ಲಿ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಹೊಂದಾಣಿಕೆಯುಂಟಾಗದೆ ಮೂಡಿದ ಕಂದಕವನ್ನು ಈ ಕಾದಂಬರಿಯಲ್ಲಿ ನಿಷ್ಠುರವಾಗಿ ಸೂಚಿಸಲಾಗಿದೆ. ಗಂಡ-ಹೆಂಡತಿಯರ ಮನಸ್ಸು ಒಂದಾಗದೆ ಇದ್ದಲ್ಲಿ ಲೈಂಗಿಕತೆಯಲ್ಲಿ ಸಂತೃಪ್ತಿ ದೊರೆಯದು ಎಂಬುದು ಕಾದಂಬರಿಯ ಮೂಲ ಆಶಯವಾಗಿದೆ.

ಅಣ್ಣಪ್ಪ ಕಮ್ತಿ ಮತ್ತು ಸುನಾಲಿನಿ ಇಬ್ಬರೂ ವಿದ್ಯಾವಂತರು. ಆದರೆ ಅವರೀರ್ವರಲ್ಲಿ ಹೊಂದಾಣಿಕೆಯಿರಲಿಲ್ಲ. ಹೊಂದಾಣಿಕೆಯ ಅಭಾವದಿಂದಾಗಿ ಅವರ ದಾಂಪತ್ಯ ಜೀವನವು ವಿಷಮಕಾರಿಯಾಗಿತ್ತು. ವ್ಯಾಪಾರಸ್ಥನಾದ ಅಣ್ಣಪ್ಪ ಕಮ್ತಿಯು ಹೆಂಡತಿಯೊಂದಿಗೆ ಪ್ರೀತಿಯ ಮಾತುಗಳನ್ನಾಡದೆ, ಸದಾ ಅಂಗಡಿಯ ವ್ಯಾಪಾರ ಕುರಿತು ಚರ್ಚಿಸುತ್ತಿರುತ್ತಾನೆ. "ಸ್ತ್ರೀಯೊಡನೆ ಹೃದಯ ಚರ್ಚಿಸಬಲ್ಲದೇ ಹೊರತು ಬುದ್ಧಿಯಲ್ಲ" ಎಂಬ ಸೂಕ್ತಿಯನ್ನು ಅರಿಯದ ಅಣ್ಣಪ್ಪ ಕಮ್ತಿಯು ದುಡ್ಡಿಗಾಗಿ ಬಡಿದಾಡುತ್ತಿದ್ದನು. ಹಣಕಾಸಿನ ಗಳಿಕೆಯೇ ಯಶಸ್ವಿ ಬದುಕಿನ ಏಕೈಕ ಮಾನದಂಡವೆಂದೂ, ಮಾನವೀಯ ಪ್ರೇಮ ಸಂಬಂಧಗಳೂ ಕೂಡ ಮಾರುಕಟ್ಟೆಯಲ್ಲಿ ದೊರೆಯುವ ವಸ್ತುವೆಂಬಂತೆ ವರ್ತಿಸುತ್ತಿದ್ದನು. ದುಡ್ಡಿದ್ದರೆ ಎಲ್ಲವನ್ನು ಕೊಂಡುಕೊಳ್ಳಬಹುದು, ದುಡ್ಡಿನಿಂದ ಏನು ಬೇಕಾದರೂ ಮಾಡಬಹುದು ಎಂಬ ದುಡ್ಡಿನ ಮದವನ್ನು ಹೊಂದಿದ್ದನು. ಅಂತೆಯೇ ದುಡ್ಡಿನ ವ್ಯಾಮೋಹದಲ್ಲಿ ಹೆಂಡತಿಯನ್ನು ತಾತ್ಸಾರದಿಂದ ಕಾಣುತ್ತಿದ್ದನು. "ಸಂಸಾರಕ್ಕೆ ನೆರವಾಗದ ವಿದ್ಯೆ ಎಷ್ಟಿದ್ದರೇನು? ಎರಡು ಅಪರಿಚಿತ ಹೆಣ್ಣು-ಗಂಡುಗಳನ್ನು ಬೇರೆ ಬೇರೆ ಬೆಳಸಿ, ಒಂದು ದಿವಸ ಅವರನ್ನು ಮಂಟಪದೊಳಗೆ ಕುಳ್ಳಿರಿಸಿ ದಾಂಪತ್ಯದಲ್ಲಿ ಬೆಸೆಯುತ್ತೇವೆ ಎಂಬುದು ಭ್ರಮೆಯಲ್ಲವೆ?" (೨೦೦೩ ಸಂ-೩, ಕಾ-೨, ೧೧೬) ಎಂದು ಸುನಾಲಿನಿ ಸಾಂಪ್ರದಾಯಿಕ ಮದುವೆಯ ವ್ಯವಸ್ಥೆಯನ್ನು ಕುರಿತು ಅಸಮಧಾನ ವ್ಯಕ್ತಪಡಿಸುತ್ತಾಳೆ. ಭೋಗವೆಂಬುದು ಬರಿಯ ಸಂತಾನೋತ್ಪತ್ತಿಯ ಸಾಧನವಾಗದೆ, ಗಂಡು-ಹೆಣ್ಣುಗಳ ದೀರ್ಘ ಸ್ನೇಹಕ್ಕೆ

[illegible]

ಕಾರಣವಾಗಬೇಕು ಎಂದು ಬಯಸುತ್ತಾಳೆ. ದಾಂಪತ್ಯ ಜೀವನ ಸಾರ್ಥಕವಾಗಬೇಕಾದರೆ ಗಂಡ-ಹೆಂಡಿರ ಮನಸ್ಸು ತಿಕ್ಕಾಡದೆ ಪರಸ್ಪರ ಒಬ್ಬರಿಗೊಬ್ಬರ ಸಲುವಾಗಿ ಸ್ಪಂದಿಸಬೇಕು ಎಂಬುದನ್ನು ಸಾನಾಲಿನಿಯ ಪಾತ್ರದಿಂದ ವಿವೇಚಿಸಲಾಗಿದೆ. ಆದರೆ ಅಣ್ಣಪ್ಪ ಕಮ್ತಿಗೆ ದಾಂಪತ್ಯ ಜೀವನಕ್ಕಿಂತ ವ್ಯವಹಾರಿಕ ಜೀವನವೇ ಮುಖ್ಯವಾಗಿತ್ತು.

, ಸಂತಾನಕ್ಕಾಗಿಯೇ ಸಂಭೋಗವನ್ನು ನಡೆಸಬೇಕು ಎಂಬುದು ಗಾಂಧೀಜಿಯವರ ವಾದವಾಗಿತ್ತು. "ಸಂತಾನಾಸಕ್ತಿ ಇಲ್ಲದೆ ಸಂಭೋಗ ನಿಷಿದ್ಧ" (ಕೃಷ್ಣ ಮೂರ್ತಿರಾವ್ (ಅನು) ೧೯೪೭; ೪೬) ಹೆಣ್ಣನ್ನು ಗರ್ಭಾಶಯ ಕೇಂದ್ರಿತವಾಗಿ ಗ್ರಹಿಸುವುದು ಪಿತೃಪ್ರಧಾನತೆಯ ಬಹುಮುಖ್ಯ ಲಕ್ಷಣವಾಗಿದೆ. ಹೆಣ್ಣಿನ ದೇಹವು ಪುರುಷನ ವಂಶವನ್ನು ಬೆಳೆಸುವ ಕ್ಷೇತ್ರವಾಗಿದೆ ಎಂಬ ಪುರುಷ ಪ್ರಧಾನ ನಿಲುವಿಗೆ ಗಾಂಧೀಜಿಯವರ ಧೋರಣೆಯು ಪುಷ್ಟಿಯನ್ನು ನೀಡುತ್ತದೆ. "ಪುರುಷನಲ್ಲಿಯ ಸಂತಾನಾಭಿವೃದ್ಧಿಯ ಕಾಳಜಿಗೆ ಮಹಿಳೆ ಬಳಕೆಯ ಮಾಧ್ಯಮವಾದಳು" ಎಂಬ ಶೈಲಜಾ ಹಿರೇಮಠ (೨೦೦೪; ೧೬) ಅವರ ಹೇಳಿಕೆ ಪ್ರಸ್ತುತ ಸಮಾಜದಲ್ಲಿನ ಹೆಣ್ಣಿನ ಸ್ಥಿತಿ-ಗತಿಯನ್ನು ಕುರಿತು ಸ್ಪಷ್ಟಪಡಿಸುತ್ತದೆ. ಈ ವಿಚಾರವನ್ನು ಕಾರಂತರು ಸಮ್ಮತಿಸುವುದಿಲ್ಲ. "ಸಂತಾನೋತ್ಪಾದನೆಯೇ ಕಾಮದ ಸರ್ವಸ್ವ ಎಂಬ ನೈತಿಕವಾದವು ಜೀವನದಲ್ಲಿ ಕಾಣಿಸದಂತ ವಸ್ತು. ಭೋಗವೆಂಬುದು ಬರಿಯ ಸಂತಾನೋತ್ಪತ್ತಿ ಸಾಧನವಾಗದೆ ಗಂಡು ಹೆಣ್ಣುಗಳ ದೀರ್ಘ ಸ್ನೇಹಕ್ಕೆ ಕಾರಣವಾಗುತ್ತದೆ" ಎಂದು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ (೧೯೯೪; ೭೧) ಹೇಳಿರುವುದು ವಾಸ್ತವ ವಿಚಾರವಾಗಿದೆ. ಸಂಭೋಗ ಕೇವಲ ಸಂತಾನಕ್ಕಾಗಿಯೇ ಮಾತ್ರ ಮೀಸಲಾಗಿದ್ದರೆ ಸ್ತ್ರೀ-ಪುರುಷರ ಸಂಬಂಧದಲ್ಲಿ ಗಾಢತೆಯಿರುವುದಿಲ್ಲ. ಅವರಲ್ಲಿ ಉತ್ತಮ ಬಾಂಧವ್ಯ ಮೂಡಲು ಸಾಧ್ಯವಾಗುವುದಿಲ್ಲ. ಸಂಭೋಗ ಕೇವಲ ಸಂತಾನಕ್ಕಾಗಿ ಮಾತ್ರವಿರದೆ ಸತಿ-ಪತಿಗಳು ಪರಸ್ಪರ ಒಬ್ಬರನ್ನೊಬ್ಬರು ಅರಿತುಕೊಂಡು ಪ್ರೀತಿಯಿಂದ ಬಾಳುವುದಕ್ಕೆ ಉತ್ತಮ ವೇದಿಕೆಯಾಗಿದೆ. ಗರ್ಭನಿಂತ ಹದಿನೈದು ದಿನಗಳ ನಂತರವೇ ತಾಯಿಗೆ ಅದರ ಬಗ್ಗೆ ಅನುಭವ, ಅನುಮಾನ ಉಂಟಾಗುತ್ತದೆ. ಪ್ರಕೃತಿಯ ನಿಯಮವೂ ಕೂಡ ಇದಕ್ಕೆ ಪೂರಕವಾಗಿದೆ. ಇದರಿಂದಲೇ ಮಾನವರಲ್ಲಿ ದೀರ್ಘ ಕಾಲ ಸ್ನೇಹ, ಪ್ರೀತಿ ಇರಲು ಸಾಧ್ಯವಾಗುತ್ತದೆ. ಈ ಮೇಲಿನ ವಿವರಗಳನ್ನು ಗಮನಿಸಿದಾಗ ಗಾಂಧೀಜಿಯವರ ಆಲೋಚನೆಗಳು ಪಿತೃಪ್ರಧಾನ ಸಮಾಜವನ್ನು ಪ್ರತಿನಿಧಿಸುತ್ತವೆ ಹಾಗೂ ಪ್ರಕೃತಿಯ ವಿರುದ್ಧವಾಗಿರುವುದು ದೃಢವಾಗುತ್ತದೆ. ಬ್ರಹ್ಮಚರ್ಯ ಆದರ್ಶದ ಪಾಲನೆಯಲ್ಲಿ ಈ ವಿಚಾರಗಳು ರೂಪುಗೊಂಡಿವೆ. ಗಾಂಧೀಜಿಯವರ ವಿಚಾರಗಳಿಗಿಂತ ಕಾರಂತರ ವಿಚಾರಗಳು ಹೆಚ್ಚು ಮೌಲ್ಯೀಕವೂ ಹಾಗೂ ವಾಸ್ತವವೆನಿಸುತ್ತವೆ.

ಸುನಾಲಿನಿಯು ಸ್ವಾಭಿಮಾನಿಯಾಗಿದ್ದಳು. ಹೆಣ್ಣು ಕೇವಲ ಭೋಗವಸ್ತುವಲ್ಲ, ಆಕೆಗೂ ಮನಸ್ಸಿದೆ ಎಂಬುದನ್ನು ಸಾರಲು ಪ್ರಯತ್ನಿಸುವಳು. ಆದರೆ ಅವಳ ವಿಚಾರಗಳಿಗೆ ಗಂಡನ ಮನೆಯಲ್ಲಿ ಯಾರೂ ಸ್ಪಂದಿಸುವುದಿಲ್ಲ. "ದಾಂಪತ್ಯದ ಒಳಗೆ ತೃಪ್ತಿ ದೊರೆಯದಾಗ ಮೈ ಮನಗಳು ಹೊರಗಿನಿಂದ ತೃಪ್ತಿಯನ್ನು ಬಯಸುತ್ತವೆ. ನೀತಿಯ ಹೆದರಿಕೆಯಿಂದ, ಅವಕಾಶಗಳ ಅಭಾವದಿಂದ ಅದು ಸಾಧ್ಯವಾಗದಾಗ ಮನಸ್ಸು

[illegible]

ವಿಪರೀತಕ್ಕಿಳಿಯುತ್ತದೆ" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಹೇಳಿರುವುದನ್ನು (೧೯೯೪; ೧೫) ವಿರಸ ದಾಂಪತ್ಯದಲ್ಲಿ ನೊಂದ ಸ್ತ್ರೀಯ ಮನೋಸ್ಥಿತಿಯ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು. ಸುನಾಲಿನಿಯ ಪರಿಸ್ಥಿತಿಯು ಇದಕ್ಕೆ ಹೊರತಾಗಿರಲಿಲ್ಲ. ಅಣ್ಣಪ್ಪ ಕಮ್ತಿಯು ಮತ್ತೊಂದು ಮದುವೆಯಾಗುತ್ತೇನೆಂದು ಹೇಳಿದಾಗ, ಸುನಾಲಿನಿಯು ಸಂಯಮದಿಂದ ಅದನ್ನು ತಡೆಯಲು ಪ್ರಯತ್ನಿಸಬಹುದಾಗಿತ್ತು. ಆದರೆ ದುಡುಕುತನ, ಉದ್ವೇಗದಿಂದ ನಿಮ್ಮಂತೆ ನಾನೂ ಇದೆ ಮನೆಯಲ್ಲಿ ನಾಲ್ಕು ಮಂದಿಯನ್ನು ಕರೆಯಬಲ್ಲೆ ಎಂದು ಸವಾಲೆಸೆಯುತ್ತಾಳೆ. ಇಬ್ಬರ ಅತಿರೇಕದ ವರ್ತನೆಗಳಿಂದ ಅವರಲ್ಲಿ ಅಂತರ ಅಧಿಕವಾಗುತ್ತದೆ. ಒಬ್ಬರಿಂದೊಬ್ಬರು ವಿಮುಖರಾಗಿ, ಸಂಸಾರದ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುವರು.

ಸುನಾಲಿನಿ ಗಂಡನಿಂದ ತಿರಸ್ಕೃತಳಾಗಿದ್ದರೆ, ಭಾಗೀರಥಿಯು ಮಾವನ ದುಡುಕುತನದಿಂದಾಗಿ ಗಂಡನನ್ನು ತೊರೆದು ತವರುಮನೆ ಸೇರುವಳು. ಗಂಡ ಅವಳನ್ನು ಪ್ರೀತಿಯಿಂದ ಕರೆದರೂ ದುರಾಭಿಮಾನದಿಂದ, ಅಸಡ್ಡೆಯಿಂದ ವರ್ತಿಸುವಳು. ಇದರಿಂದಾಗಿ ಭಾಗೀರಥಿ ತನ್ನ ದಾಂಪತ್ಯ ಜೀವನವನ್ನು ತಾನೇ ಹಾಳು ಮಾಡಿಕೊಳ್ಳುವಳು. 'ದಾಂಪತ್ಯ ಜೀವನ ಸುಖವಾಗಿರಬೇಕಾದರೆ ಹೆಂಡತಿ ಮರೆಯಬೇಕು, ಗಂಡ ಕ್ಷಮಿಸಬೇಕು' ಎಂಬುದು ಸಂಸಾರದ ಗುಟ್ಟು. ಆದರೆ ಭಾಗೀರಥಿಯು ಮಾವನ ಬೈಗುಳವನ್ನು ಮರೆಯದೆ, ಅದು ತನಗಾದ ಅವಮಾನವೆಂದು ಬಗೆಯುತ್ತಾಳೆ. ಮುಂದಾಲೋಚನೆಯನ್ನು ಮಾಡದೆ ತವರುಮನೆಗೆ ಹೋಗುತ್ತಾಳೆ.

ಹಿರಣ್ಯನು ತನ್ನ ಹೆಂಡತಿ ಭಾಗೀರಥಿಯನ್ನು ತುಂಬ ಪ್ರೀತಿಸುತ್ತಿದ್ದನು. ಅವಳಿರದ ಜೀವನ, ಜೀವನವೇ ಅಲ್ಲ ಎಂಬಂತೆ ಅವಳನ್ನು ಕರೆತರಲು ಅವಳ ತವರು ಮನೆಗೆ ಹೋಗುತ್ತಾನೆ. ಭಾಗೀರಥಿಯದು ದುಡುಕು ಸ್ವಭಾವವಾಗಿತ್ತಾದರೂ ಮನಸ್ಸು ನಿರ್ಮಲವಾಗಿತ್ತು, ನಿರ್ವಂಚನೀಯವಾಗಿತ್ತು. ಅಂತೆಯೇ ಮಾವನ ಮನೆಯಿಂದ ತಾನು ಬಂದಂದಿನಿಂದ ನಡೆದ ಕಥೆ-ವ್ಯಥೆಯನ್ನು ತಡೆಯಿಲ್ಲದೆ ಶಾಂತವಾಗಿ ಗಂಡನಿಗೆ ಹೇಳುತ್ತಾಳೆ. ಅವಳ ಪ್ರಮಾಣಿಕತೆಯನ್ನು ಮೆಚ್ಚಿದ ಹಿರಣ್ಯನು ಹೆಂಡತಿಯ ತಪ್ಪುಗಳನ್ನು ಮನ್ನಿಸಿ ತನ್ನೊಂದಿಗೆ ಕರೆದೊಯ್ಯುವನು. ಹಿರಣ್ಯನ ಪಾತ್ರದಿಂದ ಪುರುಷ ಪ್ರಧಾನ ಸಮಾಜದ ನಿಲುವು ಬದಲಾಗಬೇಕು ಎಂಬುದನ್ನು ಕಾದಂಬರಿಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

'ಸರಸಮ್ಮನ ಸಮಾಧಿ' ಕಾದಂಬರಿಯು ೪-೫ ಕುಟುಂಬಗಳ ವಿಷಮ ದಾಂಪತ್ಯ ಜೀವನವನ್ನು ಒಳಗೊಂಡಿದೆ. ಕುಟುಂಬ ವ್ಯವಸ್ಥೆಯೊಳಗಣ ಅಸಂತುಷ್ಟಿ ಹೊರಗೆ ಸ್ಫೋಟಗೊಳ್ಳದೆ ಒಳಗೊಳಗೆ ಕುದಿಯುತ್ತಿರುವ ಆವಿಗೆಯ ಬೆಂಕಿಯಂತೆ ತಿಮ್ಮಪ್ಪಯ್ಯನ ಹೆಂಡತಿ ಜಾನಕಿ, ರಾಮಯ್ಯನ ಮಗಳು ಜಲಜಾಕ್ಷಿ, ಅಣ್ಣಪ್ಪ ಕಮ್ತಿಯ ಹೆಂಡತಿ ಸುನಾಲಿನಿ, ಸೀತಾ, ರಾಮನ ಪತ್ನಿ ನಾಗವೇಣಿ ಕಾಣಿಸಿಕೊಳ್ಳುತ್ತಾರೆ. "ಮನಸ್ಸು ಜೀವಪರವಾದ ಸ್ವಾತಂತ್ರ್ಯವನ್ನು ಪಡೆಯಬೇಕು. ಅದಕ್ಕಾಗಿ ಅದು ಸಂಪ್ರದಾಯ, ಜಡತೆ, ದಬ್ಬಾಳಿಕೆಗಳಿಂದ ಮುಕ್ತವಾಗುವುದು ಅಗತ್ಯ" ಎಂದು ಅಶೋಕ ಟಿ.ಪಿ.ಯವರು (೧೯೮೭; ೪೭) ಕಾದಂಬರಿಯ ಆಶಯವನ್ನು ಗುರುತಿಸಿದ್ದಾರೆ. ಈ ರೀತಿಯಾದಾಗ ಮಾತ್ರ ಒಂದು ವಿಷಮ ದಾಂಪತ್ಯ

ಮುಂದಿನ ತಲೆಮಾರಿನವರ ಬದುಕನ್ನು ವಿಷಮತೆಯಿಂದ ಪಾರು ಮಾಡಲು ಸಾಧ್ಯವಾಗುತ್ತದೆ. ಆರೋಗ್ಯವಂತ ದಾಂಪತ್ಯಕ್ಕೆ, ದಂಪತಿಗಳಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರಿತಿರಬೇಕು. ಮದುವೆ ಯಾವುದೋ ಒತ್ತಾಯದ ಕೆಲಸವಲ್ಲ, ಹಾಗೆಯೇ ಮೋಜು ಕೂಡ ಅಲ್ಲ ಎಂಬುದು ಕಾದಂಬರಿಯ ಸ್ತ್ರೀ ಪಾತ್ರಗಳಿಂದ ನಿಖರವಾಗುತ್ತದೆ.

ದಾಂಪತ್ಯ ಜೀವನದ ವಿಷಮತೆಯ ಕಾರಣವನ್ನು ಕಾರಂತರು ಸಾಮಾಜಿಕ ಸಂಪ್ರದಾಯಗಳ ಅವಿವೇಕತನದಲ್ಲಿ ಕಂಡು ಅದನ್ನು ವಿಡಂಬಿಸಿದ್ದಾರೆ. "ಕಾಮದ ಅತೃಪ್ತಿ ಭೂತದಿಂದ ಹಿಡಿದು ಉಂಡಾಡಿಯಾದ ಯುವಕನವರೆಗೂ ಪೀಡಿಸಿ ಕಾಡಿಸುವ ಶಕ್ತಿಯಾದುದನ್ನು" ಕುರ್ತುಕೋಟಿಯವರು ಗುರುತಿಸಿದ್ದಾರೆ(೨೦೦೨; ೧೯೨)..

ಗಂಡನಾದವನಿಗೆ ಯಾವುದೇ ಹೆಚ್ಚಿನ ದಕ್ಷತೆ, ಚಾತುರ್ಯ, ಹೃದಯವಂತಿಕೆ ಇಲ್ಲದಿದ್ದರೂ ಕೇವಲ ತಾನು ಗಂಡು, ತಾನು ಮನೆಯ ಯಜಮಾನ ಎಂಬುದೊಂದೇ ಆತನ ದರ್ಪ, ಅಹಂಕಾರ, ದೈರ್ಜನ್ಯಗಳೆಲ್ಲಕ್ಕೂ ಕೇಂದ್ರ ಶಕ್ತಿಯಾಗಿರುವುದನ್ನು "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ಗುರುತಿಸಲಾಗಿದೆ. ರಾಮ ಐತಾಳ ಹಾಗೂ ಪಾರೋತಿಯರ ದಾಂಪತ್ಯ ಜೀವನ ಸುಖಕರವಾಗಿರಲಿಲ್ಲ. ಏಕೆಂದರೆ ಪಾರೋತಿಯ ಜಾತಕದಲ್ಲಿ ಸಂತಾನಫಲವಿರಲಿಲ್ಲ. ಎಲ್ಲರಂತೆ ತಾನೂ ಒಂದು ಕೂಸನ್ನು ಪಡೆದು ಸುಖ ಸವಿಯಬೇಕೆಂದು ಹಂಬಲಿಸುತ್ತಿದ್ದ ಅವಳಿಗೆ ಇದರಿಂದ ತುಂಬ ದುಃಖವಾಯ್ತು. ಪಾರೋತಿ ರಸಿಕಳಲ್ಲವಾದರೂ ಸಹನೆಯ ಮೂರ್ತಿಯಾಗಿದ್ದಳು. ಪಾರೋತಿಯಿಂದ ಸಂತಾನಭಾಗ್ಯವಿಲ್ಲವೆಂದು ಅರಿತ ರಾಮ ಐತಾಳರು ಸತ್ಯಭಾಮೆಯನ್ನು ಮದುವೆಯಾಗಿ ಅವಳಿಂದ ಮಕ್ಕಳನ್ನು ಪಡೆಯುತ್ತಾರೆ. ಇದರಿಂದ ಕ್ರಮೇಣವಾಗಿ ಪಾರೋತಿಯನ್ನು ಅಸಡ್ಡೆ ಮಾಡಲಾರಂಭಿಸಿದರು. 'ಲೈಂಗಿಕ ಪ್ರಕ್ರಿಯೆ'ಯಿಂದಾಗಿಯೇ ಸತ್ಯಭಾಮೆಯು ರಾಮ ಐತಾಳರಿಗೆ ಪಾರೋತಿಗಿಂತಲೂ ಪ್ರಿಯಳಾಗುತ್ತಾಳೆ. ಕಾದಂಬರಿಯಲ್ಲಿ ಹೆಣ್ಣಿಗೆ 'ಸಂತಾನಭಾಗ್ಯ' ಮುಖ್ಯವಾದುದು ಎಂಬುದನ್ನು ರಾಮ ಐತಾಳರ ಎರಡನೆಯ ಮದುವೆಯ ಚಿತ್ರಣದಿಂದ ನಿರೂಪಿಸಲಾಗಿದೆ.

ಚೆಲವು, ಒಲವು, ನೋವು-ನಲಿವು, ಸೌಂದರ್ಯ ಸ್ವಾರಸ್ಯಗಳ ಅನುಪಮ ಸಂಗಮ "ನಂಬಿದವರ ನಾಕ ನರಕ" ಕಾದಂಬರಿಯಲ್ಲಿದೆ. ವಾಗ್ದೇವಿಯು ತನ್ನ ಗಂಡ ಕೀಳು ಕುಲದವನು ಎಂಬ ಮೌಢ್ಯದಿಂದ ಗಂಡನಿಂದ ದೈಹಿಕವಾಗಿ ದೂರವಿರುತ್ತಾಳೆ. ಸಂಸಾರದಲ್ಲಿದ್ದೂ ಸನ್ಯಾಸಿನಿಯಂತೆ ಬದುಕುತ್ತಾಳೆ. ಗಂಡನೊಂದಿಗೆ ಬೆರೆಯುವುದಿಲ್ಲ. ಬದಲಾವಣೆಯನ್ನು ದೇಹ ಒಂದು ರೀತಿಯಲ್ಲಿ ಸ್ವೀಕರಿಸಿದರೆ, ಮನಸ್ಸು ಮತ್ತೊಂದು ರೀತಿಯಲ್ಲಿ ಸ್ವೀಕರಿಸುತ್ತದೆ. ದೇಹ-ಮನಸ್ಸುಗಳು ಒಂದಕ್ಕೊಂದು ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸಾಧ್ಯವಾಗದಾಗ ವ್ಯಕ್ತಿಯ ಬದುಕು ಸಂಘರ್ಷ, ತಾಕಲಾಟಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಗಂಡನಿಂದ ದೂರವುಳಿದಿದ್ದ ವಾಗ್ದೇವಿಯು ಕಾಮದಿಂದ ವಂಚಿತಳಾಗಿ ಮನೋವ್ಯಾಕುಲಕ್ಕೆ ಗುರಿಯಾಗುತ್ತಾಳೆ.

ತಾಯ್ತನದ ಹಂಬಲವೊಂದಿದ್ದ ವಾಗ್ದೇವಿ ತನ್ನ ಗಂಡ ಕೀಳು ಜಾತಿಯವನು ಎಂಬ ಮೌಢ್ಯದಿಂದಾಗಿ ಅವನೊಂದಿಗೆ ಬೆರೆಯುವುದಿಲ್ಲ. 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮೆ, 'ಒಂಟಿದನಿ' ಕಾದಂಬರಿಯ

[illegible]

ಕಾಂತಿಬೆನ್‌ಳಂತೆ ತಾಯ್ತನದ ಹಂಬಲದಿಂದಾಗಿ ಪರ ಪುರುಷರೊಂದಿಗೆ ಸಂಬಂಧವನ್ನು ಹೊಂದಲಿಲ್ಲ. ಬದಲಿಗೆ ಶಕ್ತಿಪೂಜೆಗೆ ಸಿದ್ಧವಾಗಿ ಸ್ವಾಮಿಯ ಬಳಿಗೆ ಮೊರೆಯಿಡುತ್ತಾಳೆ. ಭವಾನಂದ ಸ್ವಾಮಿಗಳು ವಾಗ್ದೇವಿಗೆ ಅಫೀಮು ತಿನ್ನಿಸಿ ಪೂಜೆಯ ನೆಪದಲ್ಲಿ ಅವಳನ್ನು ಸಂಭೋಗಿಸಿರಬಹುದಾದ ಸನ್ನಿವೇಶ ಕಾದಂಬರಿಯಲ್ಲಿ ಬರುತ್ತದೆ. ಇದಕ್ಕೆ ಪೂರಕವೆಂಬಂತೆ ನಗ್ನಾವಸ್ಥೆಯಲ್ಲಿ ಗುಡಿಯ ಪ್ರಾಂಗಣದಲ್ಲಿ ನಿಶ್ಚೇಷ್ಟಿತಳಾಗಿ ಬಿದ್ದುದನ್ನು ಪರಮ ಕಂಡು ಅವಳನ್ನು ಉಪಚರಿಸುತ್ತಾನೆ.

ವಾಗ್ದೇವಿಯು ಎಳೆಯನಾದ ಹಾಗೂ ಶ್ರೀಮಂತನಾದ ನಾಗೇಂದ್ರನನ್ನು ಮದುವೆಯಾಗಿದ್ದಳು. ಮೌಢ್ಯದಿಂದ ಹೊರಬಂದು, ಹೊಂದಾಣಿಕೆಯಿಂದ ಬದುಕಿ ಲೈಂಗಿಕ ತೃಪ್ತಿಯನ್ನು ಪಡೆಯಬಹುದಾಗಿತ್ತು. ಆದರೆ ಮೇಲು-ಕೀಳೆಂಬ ಜಾತಿಯತೆಯಿಂದಾಗಿ ವಾಗ್ದೇವಿ ತನ್ನ ಜೀವನವನ್ನು ಹಾಳುಗೆಡವಿಕೊಳ್ಳುತ್ತಾಳೆ. ಮನೋವಿಕಾರದಿಂದ ದುರಂತಕ್ಕೀಡಾಗುತ್ತಾಳೆ. ಇಂಥಹ ಹಲವಾರು ಪ್ರಸಂಗಗಳನ್ನು ಇಂದಿಗೂ ಸಮಾಜದಲ್ಲಿ ಗುರುತಿಸಬಹುದು. ಸಮಕಾಲೀನ ಸಮಾಜದ ಚಿತ್ರಣವನ್ನು ಈ ಕಾಂದಬರಿಯು ಒಳಗೊಂಡಿದೆ.

ಗಂಡು-ಹೆಣ್ಣಿನ ಸಂಬಂಧವು ಹೇಗಿರಬಾರದು ಎಂಬುದನ್ನು "ಧರ್ಮರಾಯನ ಸಂಸಾರ" ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಲೈಂಗಿಕ ದಬ್ಬಾಳಿಕೆಯಿಂದ ಹೆಣ್ಣಿನ ಮನಸ್ಸು ಹೇಗೆ ಬದಲಾಗಬಹುದು ಎಂಬುದನ್ನು ಸರಸ್ವತಿಯ ಪಾತ್ರ ಚಿತ್ರಣದಿಂದ ಕಾದಂಬರಿಕಾರರು ಸ್ಪಷ್ಟಪಡಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಮಹಾಬಲಯ್ಯ ಎಂಬ ಮಧ್ಯಮ ವಯಸ್ಸಿನವನೊಂದಿಗೆ ಸರಸ್ವತಿಯ ಮದುವೆಯಾಗುತ್ತದೆ. ಮಹಾಬಲಯ್ಯ ಅಜಾನುಬಾಹುವಾಗಿದ್ದು, ತುಂಬ ಕ್ರೂರಿಯಾಗಿದ್ದನು. ಪ್ರಾಣಿಗಳ ರೀತಿಯಲ್ಲಿ ಅಮಾನವೀಯತೆಯಿಂದ ಅವಳನ್ನು ಬೆತ್ತಲೆಗೊಳಿಸಿ ಸಂಭೋಗಿಸುತ್ತಿದ್ದನು. ಇದು ಅವನ ಮನೋದೌರ್ಬಲ್ಯ ಹಾಗೂ ಮಾನಸಿಕ ರೋಗವನ್ನು ಸೂಚಿಸುತ್ತದೆ. "ಸ್ಯಾಡಿಸಮ್" ಎಂಬುದು ಸಂಭೋಗ ಕಾಲದಲ್ಲಿ ಆಚರಿಸುವ ಕ್ರೌರ್ಯ. ಹೀಗೆ ಕ್ರೂರವಾಗಿ ವರ್ತಿಸಿದರೆ ಮಾತ್ರ ವ್ಯಕ್ತಿಗೆ ಸಂಭೋಗದಿಂದ ತೃಪ್ತಿ ಕಂಪನವಾಗುತ್ತದೆ" ಎಂಬ ರಾಮರಾವ್ ಎಸ್. ಅವರ (೧೯೯೩; ೫೫) ಹೇಳಿಕೆಯನ್ನು ಗಮನಿಸಿದಾಗ ಕಾದಂಬರಿಯಲ್ಲಿ ಲೈಂಗಿಕತೆಯ ವಿವಿಧ ಆಯಾಮಗಳ ಕುರಿತು ಜಿಜ್ಞಾಸೆ ಮಾಡಿರುವುದು ಸ್ಪಷ್ಟವಾಗುತ್ತದೆ. ಹಾಗೂ ವಿವಿಧ ರೀತಿಯ ಅಸಾಧಾರಣ ಲೈಂಗಿಕ ನಡವಳಿಕೆಗಳ ಕುರಿತು ಪ್ರಸ್ತಾಪಿಸಿರುವುದು ಮನದಟ್ಟಾಗುತ್ತದೆ.

ಸರಸ್ವತಿಯು ಮೈನೆರೆಯುವ ಮೊದಲೇ ಪ್ರಥಮ ಸಮಾಗಮದ ಕಹಿ ಅನುಭವವನ್ನು ಪಡೆಯುತ್ತಾಳೆ. "ಸ್ತ್ರೀ ವ್ಯಕ್ತಿಯ ಒಪ್ಪಿಗೆ ಇದ್ದರೂ ಆಕೆ ಹದಿನಾರು ವರ್ಷಗಳಿಗಿಂತ ಚಿಕ್ಕವಳಾಗಿದ್ದರೆ, ಕಾನೂನಿನ ಪ್ರಕಾರ ಅದು ಬಲತ್ಕಾರ ಸಂಭೋಗವೆಂದು ಪರಿಗಣಿಸಲ್ಪಡುತ್ತದೆ" ಎಂಬ ರಾಮರಾವ್ ಎಸ್. (೧೯೯೩; ೫೪) ಅವರ ಹೇಳಿಕೆಯು ಪ್ರಸ್ತುತದಲ್ಲಿ ಜಾರಿಗೆಯಲ್ಲಿ ಇಲ್ಲ. ಕೇವಲ ಕಾನೂನು ಶಾಸ್ತ್ರದಲ್ಲಿಯೇ ಉಳಿದಿರುವುದು ವಿಪರ್ಯಾಸವಾಗಿದೆ. ಇಂಥಹ ಘಟನೆಗಳು ಇಂದಿಗೂ ಹಲವಾರು ನಡೆಯುತ್ತಿವೆ. ಸ್ವತಃ ಹೆಂಡತಿಯೊಡನೆ ಕೂಡ, ಆಕೆ ಹದಿನಾರು ವರ್ಷ ವಯಸ್ಸಿನೊಳಗಿನವಳಾಗಿದ್ದರೆ, ಸಂಭೋಗ ಬಲತ್ಕಾರ ಸಂಭೋಗವೆಂದೇ ಪರಿಗಣಿಸಲ್ಪಟ್ಟು ಶಿಕ್ಷಾರ್ಹವಾಗುತ್ತದೆ. ಇದು ಕೇವಲ 'ಕಾನೂನು' ಶಾಸ್ತ್ರದಲ್ಲಿ ಇದ್ದರೆ ಸಾರ್ಥಕವಾಗುವುದಿಲ್ಲ. ಅದು ಸಮಾಜದಲ್ಲಿ ಜಾರಿಯಾಗಬೇಕು. ಮಹಾಬಲಯ್ಯನು ಸರಸ್ವತಿಯಿಂದ

ತೃಪ್ತಿಯನ್ನು ಪಡೆಯಲಿಲ್ಲ. 'ಅವಳು ಹೆಣ್ಣಲ್ಲ ;ಶಿಖಂಡಿ' ಎಂದು ಜರಿಯುತ್ತಾನೆ. ಮಹಾಬಲಯ್ಯನಿಂದ ಅನುಭವಿಸುವ ಲೈಂಗಿಕ ಹಿಂಸೆ ಅವಳಲ್ಲಿ ವಿಚಿತ್ರ ರೀತಿಯ ಪ್ರತಿಭಟನೆಯ ಕಿಚ್ಚನ್ನು ಮೂಡಿಸುತ್ತದೆ. ಅವಳು ತವರು ಮನೆಗೂ ಹೋಗದೆ, ಅವನೊಂದಿಗೆ ಸಮಾಗಮವೂ ಹೊಂದದೆ ಪ್ರತಿಭಟಿಸುತ್ತಾಳೆ. ಲೈಂಗಿಕ ಸಾಫಲ್ಯವಿಲ್ಲದ್ದಲ್ಲಿ ವೈವಾಹಿಕ ಜೀವನ ಹದಗೆಡುತ್ತದೆ. ಹಾಗೂ ಅದೊಂದು ಅತ್ಯಂತ ದುಷ್ಟವಾದ, ಕ್ರೂರವಾದ ಬಂಧನವಾಗುತ್ತದೆ. ಇದಕ್ಕೆ ಸರಸ್ವತಿಯ ದಾಂಪತ್ಯ ಜೀವನ ಸಾಕ್ಷಿಯಾಗಿದೆ.

ಸರಸ್ವತಿ ತನ್ನ ಗಂಡನ ಅಮಾನವೀಯ ಕ್ರೌರ್ಯಕ್ಕೆ ಪ್ರತಿಯಾಗಿ ಮನೆಯಲ್ಲಿ ಕೆಲಸಕ್ಕಿದ್ದ ಯುವಕ ನಾಗಪ್ಪಯ್ಯನೊಂದಿಗೆ ಸಂಬಂಧ ಬೆಸೆಯುತ್ತಾಳೆ. ಅವನೊಂದಿಗೆ ದೈಹಿಕ ಸಂಪರ್ಕ ಹೊಂದಿ ಮಗುವನ್ನು ಪಡೆಯುತ್ತಾಳೆ. ಕ್ರೂರ ಗಂಡನ ಆಸ್ತಿಗೆ ವಾರಸುದಾರನನ್ನು ಕೊಡುತ್ತಾಳೆ. ಕಾದಂಬರಿಕಾರರಿಗೆ ಇದು ಲಂಪಟತೆಯಾಗಿ, ಹಾದರವಾಗಿ ಕಾಣುವುದಿಲ್ಲ. ಇದನ್ನು ಬದುಕಿನ ಸಹಜ ಕ್ರಿಯೆಯೆಂಬಂತೆ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ವಿಷಮತೆ ತನ್ನ ಉಚ್ಛ್ರಾಯ ಸ್ಥಿತಿಗೆ ಮುಟ್ಟಿದಾಗ ಸರಸ್ವತಿ ನಾಗಪ್ಪಯ್ಯನಿಗೆ ಮನ ಸೋತದ್ದು ನೈಜವಾದುದು ಹಾಗೂ ಕ್ಷಮಾರ್ಹವಾದುದು ಎಂಬ ಸನ್ನಿವೇಶ ಕಾದಂಬರಿಯಲ್ಲಿದೆ.

ಲೈಂಗಿಕ ಅತ್ಯಾಚಾರಕ್ಕೊಳಗಾದ ಮನಸ್ಸು ಯಾವ ರೀತಿಯಲ್ಲಿ ಗಟ್ಟಿಯಾಗುತ್ತದೆ. ಹಾಗೂ ಅವಳು ಹೇಗೆ ಧೈರ್ಯದಿಂದ ಪರಿಸ್ಥಿತಿಯನ್ನು ನಿಭಾಯಿಸಬಹುದು ಎಂಬುದನ್ನು ಸರಸ್ವತಿಯ ಪಾತ್ರದ ಮುಖಾಂತರ 'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ. ಸ್ತ್ರೀಯರಲ್ಲಿ ಪ್ರತಿರೋಧಕ ಶಕ್ತಿ ವಿಪುಲವಾಗಿರುತ್ತದೆ ಎಂಬುದು ಸರಸ್ವತಿಯ ಪಾತ್ರದಿಂದ ತಿಳಿಯಬಹುದು.

ಇಂಥಹ ವಿಷಯವನ್ನು ಒಳಗೊಂಡಂತೆ ಹಲವಾರು ಕಾದಂಬರಿಗಳು ಸಮಕಾಲೀನ ಸಾಹಿತ್ಯದಲ್ಲಿ ರಚನೆಗೊಂಡಿವೆ. ನಿರಂಜನರ 'ಏಕಾಂಗಿನಿ' (೧೯೭೫) ಕಾದಂಬರಿಯೂ ಸಹ ಇಂಥದೇ ವಿಷಯವನ್ನು ಒಳಗೊಂಡಿದೆ. ಸುನಂದ ಗಂಡನಿಂದ ನಿತ್ಯ ದೈಹಿಕ ಹಾಗೂ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಾಳೆ. ಅದು ಮಿತಿಮೀರಿದಾಗ ಕೊನೆಗೆ ವೈವಾಹಿಕ ಸಂಬಂಧವನ್ನು ಮೆಟ್ಟಿ ನಿಲ್ಲುತ್ತಾಳೆ. ಗಂಡನಿಂದ ವಿಚ್ಛೇದನೆ ಪಡೆದು, ತನ್ನ ಗರ್ಭದಲ್ಲಿಯ ಮಗುವನ್ನು ಉಳಿಸಿಕೊಂಡು ಏಕಾಂಗಿಯಾಗಿ ಬಾಳಲು ನಿರ್ಧರಿಸುವಳು. ಬರಗೂರು ರಾಮಚಂದ್ರಪ್ಪನವರ 'ಸೂರ್ಯ' ಕಾದಂಬರಿಯಲ್ಲಿ ಜಮಿನ್ದಾರ ತನ್ನ ಹೆಂಡತಿ ಸೀತೆಯ ಬಯಕೆಯನ್ನು ತೀರಿಸಲಾಗದ ದೌರ್ಬಲ್ಯವನ್ನು ಹೊಂದಿದ್ದನು. ಗಂಡಸ್ತನ ಸತ್ತ ಅವನ ರೋಗಿಷ್ಟ ಸ್ಥಿತಿಯಿಂದ ಹೈರಾಣಾಗಿ ತಾನು ಬಿಡುಗಡೆ ಹೊಂದಬೇಕೆಂದು ಸೀತೆ ಹಂಬಲಿಸುತ್ತಿರುತ್ತಾಳೆ. ಜೀತದಾಳು ಕರಿಯನ ಜೊತೆ ಸಂಬಂಧ ಬೆಳೆಸುತ್ತಾಳೆ. ಕೊನೆಗೆ ಅವಳು ತನ್ನ ಕುಟುಂಬವನ್ನು ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಧಿಕ್ಕರಿಸಿ ಕರಿಯನೊಂದಿಗೆ ಮದುವೆಯಾಗಿ ಬಾಳುತ್ತಾಳೆ.

ಮೇಲಿನ ಎಲ್ಲ ಕಾದಂಬರಿಗಳನ್ನು ಅವಲೋಕಿಸಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಸ್ತ್ರೀಯರು ತಮ್ಮ ಗಂಡಂದಿರ ದೌರ್ಜನ್ಯವನ್ನು ಒಂದು ಹಂತದವರೆಗೆ ಸಹಿಸಿಕೊಳ್ಳುತ್ತಾರೆ. ಅದು ಎಲ್ಲೆ ಮೀರಿದಾಗ ಅದನ್ನು ಪ್ರತಿಭಟಿಸಿ, ಸಂಪ್ರದಾಯಕ್ಕೆ ವಿರುದ್ಧವಾಗಿ ಸ್ವತಂತ್ರವಾದ ಬದುಕನ್ನು ನಿರ್ವಹಿಸುವ

ತುಡಿತವನ್ನು ಹೊಂದಿರುತ್ತಾರೆ ಎಂಬುದು ಮನವರಿಕೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಶಿವರಾಮ ಕಾರಂತ, ನಿರಂಜನ ಹಾಗೂ ಬರಗೂರು ರಾಮಚಂದ್ರಪ್ಪ ಅವರ ವಿಚಾರಗಳಲ್ಲಿ ಸಾಮ್ಯವನ್ನು ಗುರುತಿಸಬಹುದು.

ದಾಂಪತ್ಯದ ಇಲ್ಲವೆ ಲೈಂಗಿಕ ಸಾಮರಸ್ಯಕ್ಕೆ ಹೆಣ್ಣು-ಗಂಡುಗಳ ಮನೋದೈಹಿಕ ತರಂಗಗಳಲ್ಲಿನ ಹೊಂದಾಣಿಕೆ ಮುಖ್ಯವಾಗುವುದೇ ಹೊರತು ಬೇರೆ ಬಗೆಯ ಕಾರಣಗಳು ಅನಿವಾರ್ಯವಲ್ಲ ಎಂಬುದನ್ನು "ಕಣ್ಣಿದ್ದರೂ ಕಾಣರೂ" ಕಾದಂಬರಿಯಲ್ಲಿ ಪ್ರಸ್ತಾಪಿಸಲಾಗಿದೆ. ಸುನಾಲಿನಿ-ಗಂಗಾಧರ ಅಮ್ಮಾಡಿಯವರ ದಾಂಪತ್ಯ ಜೀವನವು ಸುಖಕರವಾಗಿರಲಿಲ್ಲ. ಅವರಿಬ್ಬರ ವ್ಯಕ್ತಿತ್ವ ವಿಭಿನ್ನವಾಗಿತ್ತು. ಅವರ ಆಸೆ, ನಿಲುವು, ಧೋರಣೆ, ಅಭಿರುಚಿ, ನಡವಳಿಕೆಗಳಲ್ಲಿ ಹೊಂದಾಣಿಕೆಯಿರಲಿಲ್ಲ. ಕುಟುಂಬದ ನಾಯಕತ್ವಕ್ಕಾಗಿ ಪರಸ್ಪರ ಕಚ್ಚಾಡುತ್ತಿದ್ದರು. ಇದರಿಂದ ಸತಿ-ಪತಿಗಳ ಸಂಬಂಧ ಮಾನವೀಯತೆಯಿಂದ ಕೂಡಿರದೆ ಕೇವಲ ಯಾಂತ್ರಿಕವಾಗಿತ್ತು. ಅವರಲ್ಲಿ ಲೈಂಗಿಕ ಸಾಮರಸ್ಯವಿರಲಿಲ್ಲ. 'ಲೈಂಗಿಕ ತೃಪ್ತಿ ದಾಂಪತ್ಯವನ್ನು ಬೆಸೆದರೆ, ಲೈಂಗಿಕ ಅತೃಪ್ತಿ ದಾಂಪತ್ಯವನ್ನು ಒಡೆಯುತ್ತದೆ' ಎಂಬ ಸೂಕ್ತಿಯಂತೆ ಅವರ ಸಂಸಾರ ವಿರಸದಿಂದ ಕೂಡಿತ್ತು.

ಗಂಗಾಧರ ಅಮ್ಮಾಡಿ ನಿಧನರಾದ ಮೇಲೆ ಸುನಾಲಿನಿ ಒಂಟಿಯಾಗುತ್ತಾಳೆ. ತನ್ನ ಒಂಟಿತನವನ್ನು ನೀಗಿಸಿಕೊಳ್ಳಲು ಕಾಸರಕನ ಜೊತೆಯನ್ನು ಬಯಸುತ್ತಾಳೆ. ಸುನಾಲಿನಿ ಕಾಸರಕನೊಂದಿಗೆ ಮದುವೆಯಾಗಿ ಜೀವಿಸಲು ಕೈಗೊಳ್ಳುವ ನಿರ್ಧಾರದ ಮೂಲಕ ತನ್ನ ಬದುಕನ್ನು ಸರಿದೂಗಿಸುವ ಪ್ರಯತ್ನ ಮಾಡುತ್ತಾಳೆ. ಆದರೆ ಮಧ್ಯಮ ವಯಸ್ಸಿನಲ್ಲಿ ಮದುವೆಯಾದ ಸುನಾಲಿನಿ ಶೃಂಗಾರ ತಾರುಣ್ಯದಿಂದ ತುಸು ವಂಚಿತಳಾಗುತ್ತಾಳೆ. ಸಂತಾನವನ್ನು ಪಡೆಯುವ ಸಾಧ್ಯತೆ ಅವಳಿಗೆ ಇಲ್ಲವಾಗಿದ್ದು, ಅವಳ ಮನದಲ್ಲಿ ತೀವ್ರವಾದ ಅಶಾಂತಿ, ಕೊರತೆಯ ಭಾವಗಳನ್ನು ಹುಟ್ಟಿಸುತ್ತದೆ.

'ಮೈಯ ಹಂಬಲದ ಹೊಸದರಲ್ಲಿದ್ದ ಕಾವು ಅನಿವಾರ್ಯವಾಗಿ ಕಾಲಾಂತರದಲ್ಲಿ ತಣಿಯುತ್ತದೆ' ಎಂಬುದನ್ನು ಕಾದಂಬರಿಯಲ್ಲಿ ಸ್ತ್ರೀಪಾತ್ರಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಆದರೆ ಲೈಂಗಿಕತೆಯ ಚಟುವಟಿಕೆಗೆ ವಯಸ್ಸು ಅಡ್ಡಿಯಾಗುವುದಿಲ್ಲ. ಗಂಡ-ಹೆಂಡತಿ ವೈವಿಧ್ಯಮಯವಾಗಿ ತಮ್ಮೊಳಗೆ ಲೈಂಗಿಕ ಚಟುವಟಿಕೆ ನಡೆಸುವುದರಿಂದ ಅವರಲ್ಲಿ ಆತ್ಮೀಯ ಅನ್ಯೋನ್ಯತೆ ಬೆಳೆಯುತ್ತದೆ. ಅದು ಅವರ ಮಾನಸಿಕ ಆರೋಗ್ಯವನ್ನು ವೃದ್ಧಿಸುತ್ತದೆ.

೩. ಕಾಮದಾಹ

ಮಾನವನು ದೈಹಿಕವಾಗಿಯೂ ಮತ್ತು ಮಾನಸಿಕವಾಗಿಯೂ ಸದೃಢವಾಗಿರಬೇಕಾದರೆ ಲೈಂಗಿಕ ಚಟುವಟಿಕೆಗಳು ತುಂಬ ಪ್ರಧಾನವಾಗಿವೆ. ಆ ಲೈಂಗಿಕ ಪ್ರಕ್ರಿಯೆಯು ಸಮತೋಲನದಿಂದ ಕೂಡಿರಬೇಕು. ಅದು ಅತಿಯಾದರೆ ಜೀವನವನ್ನೇ ನಾಶಮಾಡುತ್ತದೆ. ಅತಿಯಾದ ಲೈಂಗಿಕ ದಾಹವನ್ನು ಹೊಂದಿದಂತಹ ಸ್ತ್ರೀಯರ ಚಿತ್ರಣವನ್ನು ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ ಬಿಂಬಿಸಿದ್ದಾರೆ.

ಲೈಂಗಿಕ ದೌರ್ಬಲ್ಯದಿಂದ ಹೆಣ್ಣು ಹೇಗೆ ಅಸಹಾಯಕ ಆಗಬಲ್ಲಳು ಹಾಗೂ ಹೇಗೆ ಮೋಸಗೊಳ್ಳುವಳು ಎಂಬುದನ್ನು "ಮರಳಿಮಣ್ಣಿಗೆ" ಕಾದಂಬರಿಯಿಂದ ತಿಳಿಯಬಹುದು. ನಾಗವೇಣಿ -ಲಕ್ಷ್ಮಿನಾರಾಯಣರ ದಾಂಪತ್ಯ ಜೀವನ ಸುಖಕರವಾಗಿರಲಿಲ್ಲ. ಲಕ್ಷ್ಮಿನಾರಾಯಣನು 'ಉಂಡಾಡಿ ಗುಂಡ'ನಂತೆ ಕೆಲಸ ಕಾರ್ಯಗಳಿಲ್ಲದೆ ಊರೂರು ಅಲೆಯುತಿದ್ದನು. ಹಲವಾರು ಸ್ತ್ರೀಯರೊಂದಿಗೆ ಲೈಂಗಿಕ ಸಂಬಂಧವನ್ನು ಹೊಂದಿದ್ದನು. ಇದರಿಂದ ಅವನ ಆರೋಗ್ಯ ಹದೆಗೆಟ್ಟಿತ್ತು. ಹಾಗಾಗಿ ಅವನೊಂದಿಗಿನ ಸಮಾಗಮದಿಂದ ನಾಗವೇಣಿಯು ಅನಾರೋಗ್ಯಕ್ಕೆ ಬಲಿಯಾಗುವಳು. ತನ್ನ ಗಂಡನ ಆರೋಗ್ಯ ಸರಿಯಿಲ್ಲವೆಂದು ಗೊತ್ತಿದ್ದರೂ ಆತನಿಂದ ದೂರವಿರಲು ನಾಗವೇಣಿಗೆ ಸಾಧ್ಯವಾಗಲಿಲ್ಲ. ಅವಳಲ್ಲಿಯ ಕಾಮವು ಪತಿಯಿಂದ ದೂರವಿರಲು ಬಯಸಲಿಲ್ಲ. ತನ್ನ ಲೈಂಗಿಕ ದೌರ್ಬಲ್ಯದಿಂದ ಗಂಡನ ಅನಾದರ, ಅನ್ಯಾಯ, ಹಿಂಸೆಯೆಲ್ಲವನ್ನು ಮರೆತು ಮತ್ತೆ ಅವನೊಂದಿಗೆ ಸೇರ ಬಯಸುತ್ತಾಳೆ. ಒಮ್ಮೆ ಮಗು ಶವವಾಗುತ್ತಲೇ ಜನಿಸಿತ್ತಾದರೂ ಮಗುವಿನ ಬಯಕೆಯಿಂದ ಮತ್ತೇ ಅವನ ಸಖ್ಯವನ್ನು ಬಯಸಿ 'ರಾಮ'ನಿಗೆ ಜನ್ಮ ನೀಡುತ್ತಾಳೆ. ಶರೀರದ ಬಯಕೆ ಅವಳಿಗೆ ಆವರಿಸಿದ್ದರಿಂದ ಹಲವು ದಿನಗಳ ಬಳಿಕ ಮತ್ತೆ ಕೂಡುತ್ತಾಳೆ. ತನ್ನ ಲೈಂಗಿಕ ದೌರ್ಬಲ್ಯದಿಂದಾಗಿಯೇ ಗಂಡನಿಂದ ಮೋಸಕ್ಕೊಳಗಾಗುತ್ತಾಳೆ.

ಕಾದಂಬರಿಯಲ್ಲಿ ನಾಗವೇಣಿಯ ಲೈಂಗಿಕ ದೌರ್ಬಲ್ಯದ ಮೂಲಕ ಕಾಮದ ಪರಾಕಾಷ್ಠೆಯನ್ನು ಸೂಚಿಸಿದ್ದಾರೆ. ಗಂಡು-ಹೆಣ್ಣಿನ ಲೈಂಗಿಕ ಆಕರ್ಷಣೆಯು ಹಳೆಯದೆಲ್ಲವನ್ನು ಮರೆಯಿಸಿ ಹೊಸ ಬದುಕಿನ ಸಾಧ್ಯತೆಗಳನ್ನೇ ತೆರೆಯುವಷ್ಟು ಸಾಮರ್ಥ್ಯವನ್ನು ಹೊಂದಿರುತ್ತದೆ ಎಂಬುದು ನಾಗವೇಣಿಯ ಪಾತ್ರದಿಂದ ಸ್ಪಷ್ಟವಾಗುತ್ತದೆ. ಇದರಿಂದಲೇ ಸ್ತ್ರೀ ಪುರುಷರು ಲೈಂಗಿಕತೆಯ ವಿಷಯದಲ್ಲಿ ಮತ್ತೆ ಮತ್ತೆ ಎಡವುದನ್ನು ಗುರುತಿಸಬಹುದು. ಇದರಿಂದಾಗಿಯೇ "ಸ್ತ್ರೀ ಸಾಧ್ಯವಾದಾಗ ನಗುತ್ತಾಳೆ. ಆದರೆ ನೆನಸಿಕೊಂಡಾಗಲೆಲ್ಲ ಅಳುತ್ತಾಳೆ" ಎಂಬ ಲೋಕರೂಢಿಯ ಮಾತು ನಾಗವೇಣಿಯ ಪಾತ್ರಕ್ಕೆ ಅನ್ವಯಿಸುತ್ತದೆ. ನಾಗವೇಣಿಯು ವಿದ್ಯಾವಂತೆ. ಆದರೂ ಲೈಂಗಿಕ ದೌರ್ಬಲ್ಯದಿಂದ ಮುಕ್ತಳಾಗಲು ಸಾಧ್ಯವಾಗುವುದಿಲ್ಲ. ಆ ದೌರ್ಬಲ್ಯದಿಂದಾಗಿಯೇ ತನಗಾದ ಅನ್ಯಾಯವನ್ನು ಮರೆತು ಗಂಡನೊಂದಿಗೆ ಸೇರುತ್ತಾಳೆ. ಅದರಿಂದ ಮತ್ತೆ ಕಷ್ಟ ನಷ್ಟಗಳನ್ನು ಅನುಭವಿಸುತ್ತಾಳೆ. 'ಮರಳಿ ಮಣ್ಣಿಗೆ' ಯಲ್ಲಿ ಕಾದಂಬರಿಕಾರರು ನಾಗವೇಣಿಯ ಲೈಂಗಿಕ ದೌರ್ಬಲ್ಯಕ್ಕೆ ಅನುಕಂಪ ಸೂಚಿಸಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಾರಂತರು ಉದಾರವಾದ ಲೈಂಗಿಕ ನಿಲುವನ್ನು ಹೊಂದಿರುವುದು ಮನವರಿಕೆಯಾಗುತ್ತದೆ.

ಕಾಮ ಸರ್ವವ್ಯಾಪಿಯಾದುದು. ಅದಕ್ಕೆ ಎಲ್ಲ ಸ್ಥಳವೂ ಒಂದೇ. ಅದು ಮನೆಯಾಗಿರಲಿ, ದೇವಾಲಯವಾಗಿರಲಿ ಅಥವಾ ಆಶ್ರಮವಾಗಿರಲಿ ಎಲ್ಲೆಂದರಲ್ಲಿ ವ್ಯಾಪಿಸಿಕೊಳ್ಳುತ್ತದೆ ಎಂಬುದನ್ನು "ಮೊಗ ಪಡೆದ ಮನ" ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಸುಮನಾಬಾಯಿ ಆಶ್ರಮದಲ್ಲಿದ್ದರೂ ಕಾಮದ ಸೆಳೆತಕ್ಕೆ ಬಲಿಯಾಗುತ್ತಾಳೆ. ಮನಸ್ಸು ನಿಗ್ರಹದಲ್ಲಿದ್ದರೆ ಮಾತ್ರ ಲೈಂಗಿಕ ದೌರ್ಬಲ್ಯದಿಂದ ಮುಕ್ತರಾಗಲು ಸಾಧ್ಯ. ಇಲ್ಲದಿದ್ದರೆ ಎಲ್ಲಿ ಹೋದರೂ ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಮನದಟ್ಟಾಗುತ್ತದೆ. ಮೇಡಮ್ ಟೂಬಾಳು ನಡುವಯಸ್ಸಿನವಳಾಗಿದ್ದಳು. ಶೃಂಗಾರಮಯ ಜೀವನದ

ಅನುಭವವನ್ನು ಹೊಂದಿದ್ದಳು. ಆದರೆ ಪತಿಯಿಂದ ದೂರವಾದ ಬಳಿಕ ಕೆಲವು ಸಮಯ ವಿರಕ್ತಿಯಿಂದ ಬಾಳಿದಳು. ಆದರೆ ವ್ಯಾಸನ ಸಹಚರೆಯಲ್ಲಿ ಅವಳ ಸುಪ್ತ ಆಕಾಂಕ್ಷೆಗಳು ತಿರುಗಿ ಚಿಗುರಿದವು. ಆದರೆ ಅವಳ ಬಯಕೆಗಳು ಈಡೇರದಿದ್ದಾಗ ಅವಳಿಗೆ ತುಂಬ ನೋವಾಗುತ್ತದೆ.

ಕಾಮದ ಸೆಳೆತವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಅದು ಪ್ರಕೃತಿ ನಿಯಮ ಎಂಬ ಧೋರಣೆಯನ್ನು ಕಾದಂಬರಿಯಲ್ಲಿ ಬಿಂಬಿಸಲಾಗಿದೆ. "ಇಂದ್ರಿಯಾಸಕ್ತಿ ಹತೋಟಿಯಲ್ಲಿಡುವುದು ಮತ್ತು ದಮನ ಮಾಡುವುದು ತಪ್ಪು. ಇಂದ್ರಿಯಾಸಕ್ತಿ ಪೂರ್ಣ ತೃಪ್ತಿಗೊಳಿಸುವುದು ಮತ್ತು ಸ್ವಚ್ಛಂದ ಪ್ರೇಮ ಜೀವನ ನಡೆಸುವುದು ಇದೇ ಸ್ವಾಭಾವಿಕ ಎಂಬ ಭಾವನೆ ಹರಡುತ್ತಿದೆ. ಇದಕ್ಕಿಂತ ವಿನಾಶಕಾರಕ ಭಾವನೆ ಬೇರೊಂದಿಲ್ಲ" ಎಂಬ ಗಾಂಧೀಜಿಯವರ (ಕೃಷ್ಣಮೂರ್ತಿ (ಅನು) ೧೯೪೭; ೪೭) ಆತಂಕವು ವಾಸ್ತವವಾಗಿರದೆ, ಕೇವಲ ಆದರ್ಶವಾಗಿದೆ. ಸ್ವಚ್ಛಂದ ಪ್ರೇಮ ಜೀವನ ನಡೆಸುವುದು ಸರಿಯಲ್ಲ. ಆದರೆ ಇಂದ್ರಿಯಗಳು ನಮ್ಮ ವೈರಿಗಳು ಎಂಬ ಭಾವನೆ ಸರಿಯಾದುದಲ್ಲ. ಕಾರಂತರ ವ್ಯಕ್ತಿತ್ವದಲ್ಲಿ "ಬಾಳು ನನಗೆ ಮುಖ್ಯ. ಅದನ್ನು ತಿಳಿಯಲು ಬೇಕಾಗುವ ಸಾಧನಗಳೂ ಅಷ್ಟೇ ಮುಖ್ಯ. ಇಂದ್ರಿಯಗಳು ನಮ್ಮ ವೈರಿಗಳಲ್ಲ; ಅವುಗಳಿಂದಾಗಿ ಬೆಳೆಯುವ ಮನಸ್ಸು, ಬುದ್ಧಿಗಳೂ ನಮ್ಮ ವೈರಿಗಳಾಗಲಾರವು. ಅವು ನಮ್ಮ ಜೀವನದ ಪ್ರಾಮುಖ್ಯ ಸಾಧನಗಳು" ಎಂಬುದನ್ನು ಬಸವರಾಜ ಆರ್. (೧೯೯೯; ೦೪) ಅವರು ಗುರುತಿಸಿದ್ದಾರೆ. ಇದರಿಂದ ಗಾಂಧೀಜಿಯವರ ಹಾಗೂ ಕಾರಂತರ ವೈಯಕ್ತಿಕ ಭಿನ್ನತೆಯನ್ನು ಅರಿಯಲು ಸಾಧ್ಯವಾಗುತ್ತದೆ. ಪಂಚೇಂದ್ರಿಯಗಳ ಗುಣವನ್ನು ಕೇವಲ ವಾಸನಾಮಯ ಜಗತ್ತಿಗೆ ಹೊಂದಿಸಬಾರದು ಎಂಬುದು ಸ್ಪಷ್ಟವಾಗುತ್ತದೆ.

ಒಲುಮೆ, ಶೃಂಗಾರಗಳ ಹಂಬಲ, ನಿರಂತರ ವಿಷಯಲಾಲಸೆಯ ಹಂಬಲ ಹೊಂದಿದ ಸ್ತ್ರೀಯರನ್ನು ಕುರಿತ ಕಥಾಹಂದರವನ್ನು 'ಬತ್ತದ ತೊರೆ' ಕಾದಂಬರಿಯು ಹೊಂದಿದೆ. ಅಂಜಲಿಯ ಸ್ವಭಾವ ಸ್ವಚ್ಛಂದವಾಗಿತ್ತು. ಯೌವ್ವನದಲ್ಲಿ ದೊರೆಯಬಹುದಾದ ಆನಂದ ತೃಪ್ತಿ, ಸುಖ ಮುಪ್ಪಿನಲ್ಲಿ ದೊರೆಯುವುದಿಲ್ಲ. ಬದುಕಿನಲ್ಲಿ ಆನಂದವೇ ಮುಖ್ಯವಾಗಿರುವಾಗ ಯಾರಿಂದ ಅದು ದೊರೆತರೇನು ಎಂಬ ಮನೋಭಾವವನ್ನು ಹೊಂದಿದ್ದಳು. 'ಕಾಮ ಹುಟ್ಟುತ್ತದೆ; ಮಿಲನ ಅನುಭವಿಸುತ್ತದೆ; ತೃಪ್ತಿ ಸಾಯುತ್ತದೆ' ಎಂಬ ವೇದಾಂತದಂತೆ ಸುಖ ಭೋಗದ ಜೀವನವನ್ನು ನಡೆಸುತ್ತಿದ್ದಳು. ಹಲವಾರು ಜನರೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿದ್ದರೂ ಆವಳಿಗೆ ಯಾವುದೇ ರೀತಿಯ ಅಪರಾಧ ಭಾವನೆಯಾಗಲಿ, ಪಶ್ಚಾತ್ತಾಪವಾಗಲಿ ಆಗುವುದಿಲ್ಲ. ಹೆಣ್ಣಿನ ಜನ್ಮವಿರುವುದೇ ಸುಖ-ಸಂತೋಷವನ್ನು ಅನುಭವಿಸಲಿಕ್ಕೆ ಎಂಬಂತೆ ಬದುಕಿದ್ದಳು.

ದಾಂಪತ್ಯ ಜೀವನ ಸುಖಮಯವಾಗಿರಬೇಕಾದರೆ ಸತಿ-ಪತಿಗಳು ಪರಸ್ಪರ ಹೊಂದಿಕೊಂಡಿರುವುದು ಅಗತ್ಯ. ಪ್ರೀತಿ, ವಿಶ್ವಾಸ, ನಂಬಿಕೆಗಳ ಜೊತೆಗೆ ದಾಂಪತ್ಯ ಜೀವನದ ಬಗ್ಗೆ ವೈಜ್ಞಾನಿಕ ತಿಳುವಳಿಕೆಯೂ ಇದ್ದರೆ, ಅವರ ಸಂಬಂಧ ಅರ್ಥಪೂರ್ಣವಾಗುತ್ತದೆ ಎಂಬುದನ್ನು "ನಂಬಿದವರ ನಾಕ ನರಕ" ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ. ಸತ್ಯಭಾಮೆಯು ಗಂಡನಿಂದ ದೂರವಿದ್ದಳು. ಕೆಲವು ವರ್ಷಗಳ

ಕಾಲವೇ ಮನಸ್ಸನ್ನು ಅದುಮಿ ಹಿಡಿದು ಬದುಕಿದ ಸತ್ಯಭಾಮೆಯ ಯೌವ್ವನ ಸಹಜಲಾಲಸೆಯು ಕುರುಡು ಸೀಮೆಯನ್ನು ಮುಟ್ಟಿತು. ಶರೀರವು ತನ್ನ ಪಾಲನ್ನು ಬಯಸುತ್ತದೆ. ಆ ಸುಖ ನಿರಾಕೃತಳಾದ ಅವಳು ಕಟ್ಟಳೆಯ ನಿರ್ಬಂಧದಲ್ಲಿ ಬದುಕಿದ್ದರೂ, ಮನಸ್ಸು ಅನಿರ್ಬಂಧದ ಎಲ್ಲೆಯನ್ನು ಮುರಿಯಲು ತವಕಿಸುತ್ತಿತ್ತು. "ದಾಂಪತ್ಯದ ವಿಷಮತೆಯಲ್ಲಿ ಮೈದಾಳುವ ಅತೃಪ್ತ ಕಾಮವು ಸಂಕೀರ್ಣತೆಯಲ್ಲೂ ಗೌಣವೆನಿಸದೆ ಅಧಃಪತನವೆಂಬ ಘೃಣತೆಗೂ ಒಳಗಾಗದೇ ಸಹಜ ಮನೋವೃತ್ತಿಯ ಪರಿಣಾಮವಾಗಿ ಹೆಡೆ ಎತ್ತುತ್ತದೆ" ಎಂಬ ಈಶ್ವರ ಪ್ರಸಾದರ (ಶ್ರೀಧರ ಎಚ್.ಜಿ (ಸಂ) ೨೦೦೨; ೩೯-೪೦) ಹೇಳಿಕೆ ವಿಷಮ ದಾಂಪತ್ಯದಲ್ಲಿ ಸ್ತ್ರೀಯ ಮನೋಸ್ಥಿತಿ ಹೇಗಿರುತ್ತದೆ ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಸತ್ಯಭಾಮೆಗೆ ಬದುಕಿನ ಹಂಬಲ ಅವಳನ್ನು ಕಾಮಕ್ಕೆ ಅಂಟಿಕೊಂಡಿರುವ ಮಡಿವಂತಿಕೆಯ ಮೌಲ್ಯವನ್ನು ಮಾನ್ಯಮಾಡದಂತೆ ಪ್ರೇರಿಸುತ್ತದೆ. ಸತ್ಯಭಾಮೆ ಗಂಡನಿಂದ ಪಡೆಯಬೇಕಾದ ಸುಖವನ್ನು ತೀರ ಪಡೆಯದೆ ಹೋದಾಗ ಮೈದುನ ಪರಮನಿಂದ ದೇಹ ಸುಖವನ್ನು ಯಾಚಿಸುತ್ತಾಳೆ. ಇದು ಅವಳ ಮಟ್ಟಿಗೆ ಜೀವಪರವಾದುದು. ಆದರೆ ಪರಮ ಅತ್ತಿಗೆಯನ್ನು ಗೌರವಿಸುತ್ತಿದ್ದರಿಂದ ನಯವಾಗಿ ತಿರಸ್ಕರಿಸುತ್ತಾನೆ.

ಸಾವಿತ್ರಮ್ಮ ಸಂಪ್ರದಾಯದ ಮನೋಭಾವದವಳು. ದಾಂಪತ್ಯ ಜೀವನದ ಬಗ್ಗೆ ವೈಜ್ಞಾನಿಕ ತಿಳುವಳಿಕೆಯನ್ನು ಹೊಂದಿರಲಿಲ್ಲ. ಮೌಢ್ಯದಿಂದ ತನ್ನ ಸೊಸೆಯ ಶೀಲವನ್ನು ಅನುಮಾನಿಸಿ ತವರುಮನೆಗೆ ಕಳುಹಿಸುತ್ತಾಳೆ. ಗಂಡನಿಂದ ತಿರಸ್ಕೃತಳಾದ ಅವಳಿಗೆ ಕಾಮವನ್ನು ತಡೆಯಲಾಗುವುದಿಲ್ಲ. ಕಾಮ ಅನ್ನುವಂತದ್ದು ಕೇವಲ ಬಯಸುವ ಹಂತವಷ್ಟೇ ಅಲ್ಲ. ಅದು ಪಡೆದುಕೊಳ್ಳುವ ತುಡಿತ, ಹೀರಿಕೊಳ್ಳುವ ದಾಹವಾಗಿದೆ. ಅದು ತನ್ನದು, ತನ್ನದಾಗಲೇಬೇಕು ಎಂಬ ಮಿಡಿತವನ್ನು ಹೊಂದಿರುತ್ತದೆ. ಒಂದೇ ಗುಟುಕಿಗೆ ಎಲ್ಲವನ್ನು ಹೀರಿಕೊಳ್ಳಬೇಕು ಎಂಬ ಆತುರ ಸತ್ಯಭಾಮೆಗಿತ್ತು. ಮನೆಗೆ ಬಂದ ತನ್ನ ನಾದಿನಿಯ ಸಹೋದರ ಅವಿವಾಹಿತ ಆದರ್ಶವಾದಿ ತರುಣ ಇಡಗುಂಜಿಯ ವಿನಾಯಕನೊಂದಿಗೆ ಹೊರಟು ಹೋಗುತ್ತಾಳೆ. ವಿನಾಯಕ ಸತ್ಯಭಾಮೆಯನ್ನು ಸೂಳೆಯಾಗಿ ಹಾರಿಸಿಕೊಂಡು ಹೋಗದೆ, ಮದುವೆಯಾಗುತ್ತಾನಲ್ಲ ಎಂಬ ಸಂತೋಷದಿಂದ ರಾಮಕೃಷ್ಣನು ತಂಗಿಯ ವರ್ತನೆಯನ್ನು ಸಹಾನುಭೂತಿಯಿಂದ ಕಾಣುತ್ತಾನೆ. ರಾಮಕೃಷ್ಣನ ಪಾತ್ರದಲ್ಲಿ ಕಾದಂಬರಿಕಾರರ ನಿಲುವನ್ನು ಗುರುತಿಸಬಹುದು.

ಕಾರಂತರ ಸಮಕಾಲೀನರಾದ ತ್ರಿವೇಣಿಯವರು ತಮ್ಮ ಕಾದಂಬರಿಗಳಲ್ಲಿ ವಿವಾಹ ಬಾಹಿರ ಸಂಬಂಧಗಳನ್ನು ತಿರಸ್ಕರಿಸಿ, ಪತಿಯೇ ಪರದೈವವೆಂಬಂತೆ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸ್ತ್ರೀ ಪಾತ್ರಗಳನ್ನು ಚಿತ್ರಿಸಿದ್ದಾರೆ. ಆದರೆ ಶಿವರಾಮ ಕಾರಂತರು ವಿವಾಹ ಬಾಹಿರ ಸಂಬಂಧವು ಮಾನವೀಯತೆಯಿಂದ ಕೂಡಿದ್ದರೆ ಅದನ್ನು ಪ್ರೋತ್ಸಾಹಿಸುತ್ತಿದ್ದರು. ಇದನ್ನು ಅವರು ಚಿತ್ರಿಸಿದ ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದು. "ಗಂಡನಿಂದ ತ್ಯಜಿಸಲ್ಪಟ್ಟವಳು ಬೇರೆ ಮದುವೆಯಾಗುವ ದಾರಿಯೊಂದು ಉಂಟು ಎಂಬುದನ್ನು ಕಾದಂಬರಿ ಖಂಡಿತವಾಗಿಯೂ ಸತ್ಯಳ ಪಾತ್ರದ ಮೂಲಕ ತೋರಿಸಿಕೊಡುತ್ತದೆ" ಎಂದು

ಮಾಧವ ಕುಲಕರ್ಣಿಯವರು ಕಾದಂಬರಿಯ ಮೂಲ ಆಶಯವನ್ನು ಗುರುತಿಸಿದ್ದಾರೆ. (೨೦೦೧; ೪೭) ಅಂತೆಯೇ ಕಾದಂಬರಿಯಲ್ಲಿ ಸತ್ಯಭಾಮೆಯ ಮರು ಮದುವೆ ಸಹಜವೆಂಬಂತೆ ಚಿತ್ರಿಸಲಾಗಿದೆ.

ವಾಗ್ದೇವಿಯು ತನ್ನ ಮೌಢ್ಯದಿಂದ, ಸಂಪ್ರದಾಯದ ಜಾತಿವ್ಯವಸ್ಥೆಯಿಂದ ಬದುಕನ್ನು ಹಾಳುಗೆಡವಿಕೊಳ್ಳುತ್ತಾಳೆ. ಆದರೆ ಸತ್ಯಭಾಮೆಯು ವಾಸ್ತವತೆಯ ಪ್ರಜ್ಞೆಯಲ್ಲಿ ತನ್ನ ಬಾಳನ್ನು ಹಸನುಗೊಳಿಸಿಕೊಳ್ಳುತ್ತಾಳೆ. ಶಾಸ್ತ್ರ, ಸಂಪ್ರದಾಯಗಳಿರುವುದು ಮಾನವರ ಒಳಿತಿಗಾಗಿಯೇ ಹೊರತು ಮಾನವರನ್ನು ಬಂಧನದಲ್ಲಿ ಬಿಗಿಗೊಳಿಸುವುದಕ್ಕಲ್ಲ ಎಂಬುದು 'ನಂಬಿದವರ ನಾಕ ನರಕ' ಕಾದಂಬರಿಯ ಆಶಯವಾಗಿದೆ. 'ಅವರವರ ನಂಬಿಕೆ, ಅವರವರ ಜೀವನದ ಊರುಗೋಲು' ಎಂಬ ಸೂಕ್ತಿಯನ್ನು ವಾಗ್ದೇವಿ ಹಾಗೂ ಸತ್ಯಭಾಮೆಯ ಪಾತ್ರದ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. "ಪ್ರೇಮದ ಹಂಬಲ, ಕಾಮದ ಹತ್ತಿಕ್ಕುವಿಕೆ, ಸಂತಾನದ ಹಂಬಲಗಳು ಮಹಿಳೆಯರನ್ನು ಸಾಂಪ್ರದಾಯಿಕ ಬದುಕಿಗೆ ಭಿನ್ನವಾದ ದಾರಿಗಳನ್ನು ಹುಡುಕಲು ಪ್ರೇರೇಪಿಸಬಹುದು" ಎಂದು ಸುಮಿತ್ರಾಬಾಯಿ ಬಿ.ಎನ್.ರವರು(೧೯೯೭:೨೮) ಸ್ತ್ರೀಯರ ಮನೋಸ್ಥಿತಿಯನ್ನು ಅರಿಯಲು ಪ್ರಯತ್ನಿಸಿದ್ದಾರೆ.

ಹೆಣ್ಣು ತನ್ನ ಲೈಂಗಿಕ ಚಟುವಟಿಕೆಗಳಿಂದ ಬಯಕೆಗಳನ್ನು ಹೇಗೆ ಪೂರೈಸಿಕೊಳ್ಳುವಳು ಎಂಬುದನ್ನು 'ಅಳಿದ ಮೇಲೆ' ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಯಶವಂತರಾಯರು ತಮ್ಮ ಹೆಂಡತಿ ಕಮಲಮ್ಮಳೊಂದಿಗೆ ಹೊಂದಾಣಿಕೆಯ ಜೀವನ ನಡೆಸುವಲ್ಲಿ ವಿಫಲರಾಗುತ್ತಾರೆ. ಮುಂಬೈಗೆ ಹೋಗಿ ಅಲ್ಲಿಯೆ ನೆಲೆಸುತ್ತಾರೆ. ತಮ್ಮ ಒಂಟಿತನವನ್ನು ಹೋಗಲಾಡಿಸಲು ಮೇರಿಯ ಸನಿಹವನ್ನು ಬಯಸುತ್ತಾರೆ. ಇದಕ್ಕೆ ಪ್ರತಿಯಾಗಿ ಮೇರಿಯೂ ಸಹ ಅವರಿಂದ ದೈಹಿಕ ಸುಖವನ್ನು ಭೋಗಿಸುತ್ತ, ಹಣವನ್ನು ಸುಲಿಯುತ್ತಿದ್ದಳು. ಅವಳು ಯಶವಂತರಾಯರಿಂದ ಪ್ರೀತಿಯನ್ನು ಬಯಸದೆ, ಕೇವಲ ದೈಹಿಕ ಸುಖವನ್ನು ಮಾತ್ರ ಪಡೆದಳು. ಅಂತೆಯೇ ಯಶವಂತರಾಯರೊಂದಿಗಿನ ಅವಳ ಸಂಬಂಧ ಕೇವಲ ಯಾಂತ್ರಿಕವಾಗಿತ್ತು, ಗಟ್ಟಿಯಾಗಿರಲಿಲ್ಲ. ಕೇವಲ ಲೈಂಗಿಕಾಕರ್ಷಣೆಯಿಂದ ದೇಹ ಸುಖ ಪಡೆದರೆ ಸಂಬಂಧ ಗಟ್ಟಿಗೊಳ್ಳುವುದಿಲ್ಲ, ತಾತ್ಪೂರ್ತಿಕವಾಗಿರುತ್ತದೆ ಎಂಬುದನ್ನು ಮೇರಿಯ ಪಾತ್ರದಿಂದ ನಿರೂಪಿಸಲಾಗಿದೆ.

ಯೌವ್ವನದ ಹೊಳೆಯಲ್ಲಿ ಹುಚ್ಚು ಪ್ರೀತಿಗೆ ಮೋಹಿತಳಾಗಿ ಜೀವನದಲ್ಲಿ ಉಂಟಾಗುವ ಕಷ್ಟಗಳಿಗೆ ಹೆಣ್ಣು ಹೇಗೆ ಗುರಿಯಾಗುತ್ತಾಳೆ ಎಂಬುದನ್ನು "ಸ್ವಪ್ನದ ಹೊಳೆ" ಕಾದಂಬರಿಯ 'ಬನ್ಸಿ' ಪಾತ್ರದ ಮೂಲಕ ಚಿತ್ರಿಸಲಾಗಿದೆ.

ಬನ್ಸಿ ಎಂಬ ವಿದ್ಯಾರ್ಥಿನಿ ಮೋಹದ ಬಲೆಯಲ್ಲಿ ಸಿಲುಕಿ ವಿಷಯಲಾಲಸೆಯಿಂದ ಮೇಸ್ಟ್ರು ಮಡುಗಾಂವಕರನ ಮೋಸಕ್ಕೆ ಬಲಿಯಾಗಿ ಗರ್ಭ ಧರಿಸುತ್ತಾಳೆ. ಇದು ಇಂದಿನ ಗುರು-ಶಿಷ್ಯರ ಸಂಬಂಧದ ವಿಡಂಬನೆಯಾಗಿದೆ. "ಪುರುಷ ತೂಕ ತಪ್ಪದೇ ಸ್ತ್ರೀ ತೂಕವನ್ನು ಕಳೆದುಕೊಳ್ಳಲಾರಳು" ಎಂಬ ಎಂ.ಎಸ್.ಪಾಟೀಲರ (ಮನು ಬಳಿಗಾರ (ಸಂ) ೧೯೯೯; ೮೪) ಹೇಳಿಕೆಯು ದ್ವಂದ್ವತೆಯಿಂದ ಕೂಡಿದೆ. ಏಕೆಂದರೆ ಮಡಗಾಂವಕರ್ ಬನ್ಸಿಯ ವಿಷಯದಲ್ಲಿ ಎಡವುತ್ತರಾದರೂ ಸಂಪೂರ್ಣ ತಪ್ಪು ಅವರದಲ್ಲ, ಬನ್ಸಿಯೂ ಅದರಲ್ಲಿ ಪಾಲುಗಾರಳಾಗಿದ್ದಾಳೆ. ಅಂತೆಯೇ ತನ್ನ ತಪ್ಪಿನಿಂದಾಗಿ ಪಶ್ಚಾತ್ತಾಪಪಟ್ಟು

ಅವಮಾನಿತಳಾಗಿ ಪ್ರಾಯಶ್ಚಿತ್ತವೆಂಬಂತೆ ಆತ್ಮಹತ್ಯೆಗೆ ಯತ್ನಿಸುತ್ತಾಳೆ. ಇದನ್ನು ಅರಿತ ಪ್ರೊ.ಕೃಷ್ಣರಾಯರು ತಮ್ಮ ಸ್ನೇಹಿತ ಡಾ. ಭಟ್ಟರಿಂದ ಬನ್ನಿಯ ಗರ್ಭಪಾತವನ್ನು ಮಾಡಿಸಿ ಮದುವೆಯಾಗುತ್ತಾರೆ.

ಬನ್ನಿಯನ್ನು ಗರ್ಭಸಹಿತ ಮದುವೆಯಾಗಿ ಸಮಾಜದ ನಿಂದನೆಗೆ ಗುರಿಯಾಗಲು ಪ್ರೊ. ಕೃಷ್ಣರಾಯರಿಗೆ ಇಷ್ಟವಿರಲಿಲ್ಲ. ಆಧುನಿಕ ಸಮಾಜದಲ್ಲಿ ಮರ್ಯಾದವಂತರು ಮಾಡುವಂತೆ ಕೃಷ್ಣರಾಯ ಬನ್ನಿಯ ಗರ್ಭವನ್ನು ಗುಪ್ತವಾಗಿ ಕರಗಿಸುವಲ್ಲಿ ಸಹಾಯ ಮಾಡುತ್ತಾನೆ. ಸಮಕಾಲೀನ ಸಮಾಜದಲ್ಲಿ ಇಂಥಹ ಹತ್ತು ಹಲವಾರು ಪ್ರಸಂಗಗಳನ್ನು ಗುರುತಿಸಬಹುದು. ಅವಳ ಗರ್ಭ ಕರಗಿದ ಮೇಲೆ ಮದುವೆಯಾಗುತ್ತಾನೆ. ಇಂಥಹ ಪ್ರಜ್ಞೆಯ ಗೆರೆ ಎಳೆದುಕೊಂಡವನು ಕೃಷ್ಣನೆನಿಸಿದರೂ ಅದೆಲ್ಲ ಕಾದಂಬರಿಕಾರರ ಪ್ರಜ್ಞೆಯ ಇತಿಮಿತಿಗೆ ಸೇರುತ್ತದೆ.*

ಅಚಾತುರ್ಯದಿಂದ ಆದ ಗರ್ಭವನ್ನು ವೈಜ್ಞಾನಿಕವಾಗಿ ಕರಗಿಸಿಕೊಂಡು ನೆಮ್ಮದಿಯುತ ಜೀವನವನ್ನು ಸಾಗಿಸಬಹುದು ಎಂಬುದನ್ನು "ಸ್ವಪ್ನದ ಹೊಳೆ" ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ವೇಶ್ಯೆಯೊಬ್ಬಳ ಲೈಂಗಿಕ ಬಯಕೆಯನ್ನು ಕುರಿತು 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಪರಿಶೀಲಿಸಲಾಗಿದೆ. ವೇಶ್ಯೆಯಾದ ಮಂಜುಳೆ ಸಾಮಾನ್ಯ ವೇಶ್ಯೆಯರಂತೆ ಕಾಮುಕಳಾಗಿರಲಿಲ್ಲ. ಆದಾಗ್ಯೂ ಲೈಂಗಿಕ ದೌರ್ಬಲ್ಯವನ್ನು ಹೊಂದಿದ್ದಳು. ಗಂಡು ತಾನಾಗಿಯೇ ಸನಿಹ ಬಂದರೆ ಒಲ್ಲೆ ಎನ್ನುವ ಮಾನಸಿಕ ನಿಗ್ರಹ ಅವಳಲ್ಲಿ ಇರಲಿಲ್ಲ. ಪ್ರಣಯ ಭಾವನೆ ಹಾಗೂ ರತಿ ಕ್ರೀಡೆಯ ಸಾರತತ್ವಗಳನ್ನು ಪಡೆಯಬೇಕೆಂದು ಬಯಸಿ ತನ್ನ ಬದುಕಿನ ಉದ್ದಕ್ಕೂ ಅವುಗಳಿಗಾಗಿ ತವಕಿಸುತ್ತಾಳೆ. ಕೇವಲ ಪಶು ಸಹಜವಾದ ಕಾಮಕೇಳಿ ಮನಸ್ಸಿನ ಸಾಂಗತ್ಯವಿಲ್ಲದೆ, ಅಭಿರುಚಿ ಸಂಸ್ಕಾರಗಳು ಒಗ್ಗೂಡದ ದೈಹಿಕಭೋಗ ಹೆಣ್ಣು-ಗಂಡುಗಳನ್ನು ಕೊನೆಯವರೆಗೂ ಪ್ರೀತಿಯಿಂದ ಇರುವಂತೆ ಒಂದುಗೂಡಿಸಲಾರದು. ಮೈಗೆ ತನ್ನದೇ ಆದ ಹಂಬಲ, ಆಸೆ-ಆಕಾಂಕ್ಷೆಗಳಿದ್ದರೂ, ತನ್ನದೇ ಆದ ಸಂವೇದನೆ ರುಚಿಗಳಿದ್ದರೂ, ಮೈ ಮನಗಳು ಸಮರಸವಾಗಿ ಮೇಳೈಸದೆ, ಪರಸ್ಪರ ಅನುಕಂಪಿಸದೆ, ಪ್ರತಿಸ್ಪಂದಿಸದೆ ಹೋದಲ್ಲಿ ಗಂಡು ಹೆಣ್ಣುಗಳ ಸಂಬಂಧ ಸುಗಮವಾಗಲಾರದು, ಬಹುಕಾಲ ತಾಳಲಾರದು ಎಂಬುದು ಮಂಜುಳೆಯ ಅನಿಸಿಕೆಯಾದರೂ ಕಾದಂಬರಿಕಾರರ ಒಲವನ್ನು ಸೂಚಿಸುತ್ತದೆ.

ಮೈ ಮನಗಳ ಹಂಬಲವೊಂದಿದ್ದ ಮಂಜುಳೆ ಕಂಡಲೂರಿನ ವಾಸುದೇವ ಪೈಗಳೊಂದಿಗೆ ದೈಹಿಕವಾಗಿ ಸೇರಿದಳು. ಅವರ ಮೃಗೀಯ ರೀತಿಯ ವರ್ತನೆಯನ್ನು ಕಂಡು ತುಂಬ ನೊಂದಳು. ಪೈಗಳಿಂದ ಅವಳಿಗೆ ದೈಹಿಕ ಸುಖ ದೊರೆಯಿತೆ ಹೊರತು ಮಾನಸಿಕ ಸುಖ, ನೆಮ್ಮದಿ ದೊರೆಯಲಿಲ್ಲ. ಪ್ರೀತಿಯು ಲೈಂಗಿಕತೆಯ ಫಲಿತಾಂಶವಲ್ಲ. ಅದರ ಬದಲು ಲೈಂಗಿಕ ತೃಪ್ತಿಯ ಅನುಭವವಾಗಲಿ ಅಥವಾ ಲೈಂಗಿಕ ತಂತ್ರಗಳ ಅರಿವಾಗಲೀ ಪ್ರೀತಿಯ ಪರಿಣಾಮವಾಗಿ ಮಾತ್ರ ಉಂಟಾಗಲು ಸಾಧ್ಯವಾಗುತ್ತದೆ.

ಅತ್ಯಾಚಾರದಿಂದಾಗಿ ಗರ್ಭಿಣಿಯಾಗುವ ಮಹಿಳೆಯರ ಸಲುವಾಗಿ ೧೯೭೦ರಲ್ಲಿ 'ವೈದ್ಯಕೀಯ ಗರ್ಭಪಾತ ಅಧಿನಿಯಮ' ಜಾರಿಗೆ ಬಂದಿದೆ. ಇದರ ಮುನ್ಸೂಚನೆಯನ್ನು "ಸ್ವಪ್ನದ ಹೊಳೆ" ಕಾದಂಬರಿಯಲ್ಲಿ ಗುರುತಿಸಬಹುದು.

[illegible]

ಅಂತೆಯೇ ಪ್ರೀತಿ ಮತ್ತು ಬೆರೆಯುವಿಕೆಗಳ ಒಂದು ಹೊಸ ರೂಪವೇ ಲೈಂಗಿಕ ಬಯಕೆಯಾಗಿದೆ ಎಂಬುದರ ನಿರೂಪಣೆ ಕಾದಂಬರಿಯಲ್ಲಿದೆ.

'ಕಾವಿ' ಗೂ ಕಾಮವನ್ನು ನಿಯಂತ್ರಿಸುವ ಸಾಧ್ಯತೆ ತುಂಬ ಕಡಿಮೆ ಎಂಬುದನ್ನು ಕಾದಂಬರಿಕಾರರು ಲಕ್ಷ್ಮಣತೀರ್ಥರ ಪಾತ್ರದಿಂದ ನಿರೂಪಿಸಿದ್ದಾರೆ. ಲೈಂಗಿಕ ವಿಷಯದಲ್ಲಿ ಅವರು ತೀರ ಮುಗ್ಧರಾಗಿದ್ದರು. ಹಾಗೂ ಅನನುಭವಿಗಳಾಗಿದ್ದರು. ಇವರಿಂದ ಮಂಜುಳೆಯು ದೈಹಿಕ ಮತ್ತು ಮಾನಸಿಕ ತೃಪ್ತಿಯನ್ನು ಹೊಂದುತ್ತಾಳೆ. ಲೈಂಗಿಕ ಜೀವನದಲ್ಲಿ ಶರೀರದ ಹಸಿವಿನೊಡನೆ ಮನಸ್ಸಿನ ಹಸಿವೂ ಹುರಿಯಾಗಿ ಹೆಣೆದುಕೊಂಡು ತೃಪ್ತಿಯನ್ನು ಕಾಮಿಸುತ್ತದೆ. 'ಮೈ ಮನಗಳು ಒಂದಾಗಿರುವಂತಹ ರತಿ ಕ್ರೀಡೆಯೇ ಪರಸ್ಪರರಿಗೆ ಪೂರ್ಣತೆಯನ್ನು ತಂದು ಕೊಡುವುದು' ಎಂಬ ಸೂಕ್ತಿಯಂತೆ ಮಂಜುಳೆಯು ಅವರೊಂದಿಗೆ ಸುಖದ ಪರಮಾವಧಿಯನ್ನು ಪಡೆಯುತ್ತಾಳೆ. "ಪುರುಷನು ಪ್ರೇಮದಲ್ಲಿ ಗಹನವಾಗಿ ಹೋದಂತೆಲ್ಲಾ ಅವನು ಮಗುವಾಗುವನು" ಎಂಬುದನ್ನು ಓಶೋರವರು (ಗಣೇಶ ಶರ್ಮ (ಅನು) ೧೯೯೫; ೧೦೨) ಗುರುತಿಸಿದ್ದಾರೆ. ಲಕ್ಷ್ಮಣತೀರ್ಥರೂ ಸಹ ಸಂಭೋಗದಿಂದ ಸಮಾಧಿಯ ತೃಪ್ತಿಯನ್ನು ಪಡೆಯುವರು.

ಸಮಕಾಲೀನ ಸಾಹಿತ್ಯದಲ್ಲಿ ಕಾವಿ ಮತ್ತು ಕಾಮದ ಸಂಬಂಧವನ್ನು ಕುರಿತು ಹಲವಾರು ಕಾದಂಬರಿಗಳು ರಚನೆಯಾಗಿವೆ. ಬಸವರಾಜ ಕಟ್ಟೀಮನಿಯವರ "ಜರತಾರಿ ಜಗದ್ಗುರು" (೧೯೫೮) ಹಾಗೂ 'ಮೋಹದ ಬಲೆಯಲ್ಲಿ' (೧೯೫೨) ಕಾದಂಬರಿಯಲ್ಲಿ ಕಾವಿಗೆ ಕಾಮವನ್ನು ತಡೆಯುವ ಶಕ್ತಿಯಿಲ್ಲ. ಸ್ವಾಮೀಜಿಗಳೂ ಸಹ ಸಾಮನ್ಯರಂತೆ ಲೈಂಗಿಕ ದೌರ್ಬಲ್ಯ ಹೊಂದಿರುತ್ತಾರೆ ಎಂದು ಸಂಪ್ರದಾಯ ಸಮಾಜದ ವಿಡಂಬನೆಯನ್ನು ಮಾಡಿದ್ದಾರೆ. ವಿರಕ್ತರೆನ್ನಿಸಿಕೊಂಡ ಕೆಲವು ಮಠಾಧಿಪತಿಗಳ ನಿಜವಾದ ಜೀವನ ಎಷ್ಟು ಕೊಳಕಾಗಿರುತ್ತದೆ ಎಂಬುದನ್ನು 'ಮೋಹದ ಬಲೆಯಲ್ಲಿ' ಕಾದಂಬರಿಯಲ್ಲಿ ಸಿದ್ಧವೀರರ ಚಾರಿತ್ರ್ಯದ ಮೂಲಕ ಚಿತ್ರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಟ್ಟೀಮನಿ ಹಾಗೂ ಕಾರಂತರ ವಿಚಾರಗಳಲ್ಲಿ ಸಾಮ್ಯವನ್ನು ಕಾಣಬಹುದು.

'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯ ಶಾರೀಯ ವ್ಯಕ್ತಿತ್ವವು ಮಂಜುಳೆಯ ವ್ಯಕ್ತಿತ್ವಕ್ಕಿಂತ ಭಿನ್ನವಾಗಿತ್ತು. ಮಂಜುಳೆಯಂತೆ ಮೈ ಮನಗಳ ತೃಪ್ತಿಗಾಗಿ ಅವಳು ಹಂಬಲಿಸುತ್ತಿರಲಿಲ್ಲ. ಬದಲಿಗೆ ಸಾಮಾನ್ಯ ವೇಶ್ಯೆಯರಂತೆ ಕೇವಲ ದೈಹಿಕ ಸುಖಕ್ಕಾಗಿ ತವಕಿಸುತ್ತಿದ್ದಳು. ವೇಶ್ಯೆಯೊಬ್ಬಳ ಆತ್ಮವೃತ್ತಾಂತವನ್ನು "ಮೈ ಮನಗಳ ಸುಳಿಯಲ್ಲಿ" ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ. ಮನುಷ್ಯ ಜೀವನದ ವಿಸ್ಮಯವಾದ ಲೈಂಗಿಕ ಸಂಬಂಧ, ಹೆಣ್ಣು-ಗಂಡುಗಳ ಸಂಬಂಧ, ಮೈ ಮನಗಳ ಸಂಬಂಧ, ಅವುಗಳಲ್ಲಿನ ಸೆಳೆತ, ಚೆಲುವು, ಹಾಗೆಯೇ ಅವುಗಳಲ್ಲಿನ ವಿರೋಧ, ಅಸಹ್ಯಗಳನ್ನು ಒಬ್ಬಳು ಗರತಿಯಲ್ಲದವಳ ಬಾಳಿನ ಮುಖದಿಂದ ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಮನುಷ್ಯ ಜೀವನದ ಪ್ರಬಲ ಶಕ್ತಿಯಾದ ಲೈಂಗಿಕ ಸಂಬಂಧದ, ಹೆಣ್ಣು ಗಂಡುಗಳ ಸಂಬಂಧದ ಎಲ್ಲ ಮುಖಗಳನ್ನು ಪರಿಶೀಲಿಸುವುದರ ಮೂಲಕ ಬಾಳಿನ ಅರ್ಥ-ಗುರಿಗಳನ್ನು ಕಾದಂಬರಿಯಲ್ಲಿ ಗುರುತಿಸಲಾಗಿದೆ.

ಲೈಂಗಿಕ ದಾಹದ ಪರಾಕಾಷ್ಠೆಯನ್ನು ಶಾಂತಾಬಾಯಿ ಪಾತ್ರದ ಮುಖಾಂತರ "ಕೇವಲ ಮನುಷ್ಯರು" ಕಾದಂಬರಿಯಲ್ಲಿ ಪರಾಮರ್ಶಿಸಲಾಗಿದೆ. ಶಾಂತಾಬಾಯಿ ವಿಶ್ವನಾಥನ ಮಡದಿ. ತುಸು ಅಹಂಕಾರದ ಸ್ವಭಾದವಳು. ಜೊತೆಯಲ್ಲಿಯೇ ಅತಿಯಾದ ಕಾಮುಕತೆಯನ್ನು ಹೊಂದಿದ್ದಳು. ಮನುಷ್ಯನ ಮೊದಲ ಪ್ರೇಮ ಆತನ ಮೇಲೆಯೆ ಇರುತ್ತದೆ. ಅದು ಅಂಧತೆ, ಅಹಂಕಾರಗಳಿಂದ ತುಂಬಿರುತ್ತದೆ. ತನ್ನ ಆತ್ಮ ಪೂಜೆಯಲ್ಲಿಯೇ ತಲ್ಲೀನವಾಗಿರುತ್ತದೆ. ಹೀಗಾಗಿ ತನ್ನನ್ನು ತಾನು ಪ್ರೀತಿಸುತ್ತ, ಮನುಷ್ಯನು ಕ್ಷುದ್ರ ಸುಖ -ದುಃಖಗಳಿಗೆ ಶಾಶ್ವತ ಬಂಧಿಯಾಗುತ್ತಾನೆ. ಅಂತೆಯೇ ಅನೇಕ ಬಾರಿ ದಣಿದು ಬಂದು ಮಲಗಿದ ಗಂಡನನ್ನು ಹೊತ್ತಿಲ್ಲದ ಹೊತ್ತಿನಲ್ಲೂ ಎಬ್ಬಿಸಿ ತನ್ನ ದೇಹದ ಬಯಕೆ ತೀರಿಸಿಕೊಳ್ಳುತ್ತಿದ್ದಳು. ಆದರೆ ಅವರಿಂದ ಮಕ್ಕಳಾಗದ ಕಾರಣ ಒಂದು ದಿನ ಗಂಡ ವಿಶ್ವನಾಥಯ್ಯನನ್ನು ನೀನು 'ಗಂಡಸಲ್ಲ'ವೆಂದು ಮೂದಲಿಸುತ್ತಾಳೆ. ಅವನಿಂದ ದೂರವಿರಲು ಆರಂಭಿಸುತ್ತಾಳೆ. ಅವನನ್ನು ಹಾಸಿಗೆಗೆ ಸೇರಿಸಿಕೊಳ್ಳದೆ, ಒಂದೇ ಸೂರಿನಡಿಯಲ್ಲಿ ಪತಿಯೊಂದಿಗೆ ಜೀವಿಸುತ್ತಾಳೆ. ಆದಾಗ್ಯೂ ಅತೃಪ್ತ ಬಯಕೆ ಅವಳಲ್ಲಿ ಹುದುಗಿಕೊಂಡಿತ್ತು. ವಿಶ್ವನಾಥಯ್ಯನು ತನ್ನ ಹಂಡತಿಯ ಸ್ವಭಾವವನ್ನು ಬಲ್ಲವನಾಗಿದ್ದರಿಂದ ಅದರ ಬಗೆಗೆ ತಲೆಕೆಡಿಸಿಕೊಳ್ಳದೆ ತನ್ನನ್ನು ಸ್ವಾಮೀಜಿಯ ಸೇವೆಯಲ್ಲಿ ತೊಡಗಿಸಿಕೊಂಡಿದ್ದನು.

'ಬಯಕೆ ಯಾವಾಗಲೂ ನಮ್ಮ ಕೊರತೆಯನ್ನು ಸೂಚಿಸುತ್ತದೆ' ಎಂಬ ಸೂಕ್ತಿಯಂತೆ ಶಾಂತಾಬಾಯಿಯು ಮುಕುಂದ ಕಮ್ತಿಯವರಿಂದ ದೈಹಿಕ ಸುಖ ನೀಗಿಸಿಕೊಳ್ಳಲು ಬಯಸಿದಳು. ತನ್ನ ಒನಪು-ವೈಯ್ಯಾರಗಳಿಂದ ಅಭಿನ್ನಾನಂದ ಸ್ವಾಮೀಜಿಯವರನ್ನು ತನ್ನ ಕಾಮಪಿಪಾಸೆಗೆ ಬಲಿಹಾಕುತ್ತಾಳೆ. ಗಂಡನಿಂದ ಪಡೆಯದ ತೃಪ್ತಿಯನ್ನು, ಆನಂದವನ್ನು ಸ್ವಾಮೀಜಿಯವರಿಂದ ಪಡೆಯುತ್ತಾಳೆ. ಮಳೆಗಾಲದ ಉಪಟಳ ಆ ಉಭಯತರರ ಜೀವನದಲ್ಲಿ ಸುಖಾನುಭವದ ಅವಕಾಶ ಮಾಡಿಕೊಟ್ಟಿತು. ಹೀಗೆ ಶಾಂತಾಬಾಯಿಯು ಸ್ವಾಮೀಜಿಯೊಂದಿಗೆ ಗಂಡನಿಗೆ ತಿಳಿಯದಂತೆ ಗುಪ್ತವಾಗಿ ಸಂಬಂಧವನ್ನು ಹೊಂದಿ ತನ್ನ ತೃಷೆಯನ್ನು ನೀಗಿಸಿಕೊಳ್ಳುತ್ತಾಳೆ. ಅವರಿಂದ ಮಕ್ಕಳಾದರೇನು ಗತಿ ಎಂಬ ಆತಂಕದಿಂದ ಅದನ್ನು ಸರಿದೂಗಿಸಲು ಮತ್ತೆ ಗಂಡನೊಂದಿಗೆ ಸೇರಬಯಸುತ್ತಾಳೆ. ಆತನಲ್ಲಿ ಪಶ್ಚಾತ್ತಾಪದಿಂದ ಕ್ಷಮೆ ಯಾಚಿಸುವಂತೆ ನಟಿಸುತ್ತಾಳೆ. ಇಷ್ಟು ದಿನ ತಾನು ದೂರವಾದುದು ತಪ್ಪಾಯ್ತು ಎಂದು ಗೋಗರೆಯುತ್ತಾಳೆ. ಮುಗ್ಧ ವಿಶ್ವನಾಥಯ್ಯನನ್ನು ವಂಚಿಸುತ್ತಾಳೆ. ಶಾಂತಾಬಾಯಿಗೆ ಅಭಿನ್ನಾನಂದ ಸ್ವಾಮೀಜಿಯವರಿಂದ ದೈಹಿಕದಾಹ ಇಂಗಿದರೂ ಸಹ ಮಕ್ಕಳಾಗಲಿಲ್ಲ. ತನಗೆ ಮಕ್ಕಳಾಗದಿದ್ದುದ್ದಕ್ಕೆ ತನ್ನಲ್ಲಿಯೇ ದೋಷವಿರಬೇಕೆಂದು ದುಃಖಿಸುತ್ತಾಳೆ. "ವಾಸನೆಯ ಹುಚ್ಚು ಅಲ್ಪ ಸಮಯದ್ದು, ಆದರೆ ಅದರ ಪಶ್ಚಃ ತ್ತಾಪ ಬಹು ಸಮಯದ್ದು" ಎಂಬ ಶೀಲರ್ ಅವರ ಹೇಳಿಕೆಯಂತೆ ಮರುಕ ಪಡುತ್ತಾಳೆ.

"ವ್ಯಕ್ತಿತ್ವದ ವಿಕಾಸ, ಮನಸ್ಸಿನಲ್ಲಿ ಆಗುವ ಬದಲಾವಣೆ ಕಾರಂತರ ಕಾದಂಬರಿಗಳ ಬಹುಮುಖ್ಯ ಮೌಲ್ಯ" ಎಂಬುದನ್ನು ರಾಮಚಂದ್ರದೇವ (......; ೯೮) ಅವರು ಗುರುತಿಸಿದ್ದಾರೆ. ಕೆಲವು ವ್ಯಕ್ತಿಗಳು ತಮ್ಮನ್ನು ತಾವು ಲೈಂಗಿಕ ಸಂಬಂಧಗಳ ಮೂಲಕ ಕಂಡುಕೊಳ್ಳುವ, ಹೊಸ ಮನುಷ್ಯರಾಗುವ ಪ್ರಕ್ರಿಯೆಯನ್ನು ಈ ಕಾದಂಬರಿಯಲ್ಲಿ ಪರಿಶೀಲಿಸಲಾಗಿದೆ. ಇಲ್ಲಿ ಮಾನವನ ಅತೃಪ್ತಕಾಮ ಅದುಮಿಡಲಾಗದ

ಮೋಹವಾಗಿ, ಪ್ರೀತಿ ನಿರ್ಬಂಧಗಳನ್ನು ಮೀರಿ ತನ್ನ ಪ್ರಬಲ ಆಸೆ ತೀರಿಸಿಕೊಳ್ಳುವ ಬಗ್ಗೆ ವಾಸ್ತವವಾಗಿ ಕಾದಂಬರಿಯಲ್ಲಿ ಮೂಡಿಬಂದಿದೆ.

"ಪ್ರೇಮ ವಿಕಾಸವೇ ಕಾಮಶಕ್ತಿಯ ರೂಪಾಂತರಣೆ" ಎಂಬ ಸೂಕ್ತಿಯನ್ನು ಜ್ವಾಲೆಯ ಪಾತ್ರ ಚಿತ್ರಣದಿಂದ 'ಇಳೆಯೆಂಬ' ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ. ಜ್ವಾಲೆಯು ಶ್ಯಾಮರಾಯನ ಮಾತುಗಾರಿಕೆಗೆ ಮರುಳಾಗಿ ಅವನನ್ನು ಪ್ರೀತಿಸುತ್ತಾಳೆ. ಅವನೊಂದಿಗೆ ಚೆಲ್ಲುಚೆಲ್ಲಾಗಿ ತಿರುಗಾಡುತ್ತ ಅವನ ಸ್ಪರ್ಶಸುಖದಿಂದ ಪುಳಕಿತಳಾಗುತ್ತಾಳೆ. ಅಂತೆಯೇ 'ಕಾಮವೆಂದರೆ ಸ್ಪರ್ಶ, ಕೋಮಲತೆ' ಎಂದು ವ್ಯಾಖ್ಯಾನಿಸಲಾಗುತ್ತದೆ. ಇದರಿಂದಾಗಿಯೇ ಶ್ಯಾಮರಾಯನೊಂದಿಗೆ ಸಂಬಂಧವನ್ನು ಹೊಂದಿ ದೈಹಿಕ ಸುಖವನ್ನು ಅನುಭವಿಸುತ್ತಾಳೆ. ಅವನೊಂದಿಗೆ ಮದುವೆಯಾಗುವ ಕನಸನ್ನು ಕಾಣುತ್ತಾಳೆ. 'ಸ್ತ್ರೀ-ಪುರುಷರ ಮಿಲನದಲ್ಲಿ ಅಹಂಕಾರವು ಅಡಗಿ ಪ್ರೀತಿಯು ಹುಟ್ಟಿಕೊಳ್ಳುತ್ತದೆ' ಎಂಬ ಸೂಕ್ತಿಯಂತೆ ಜ್ವಾಲೆಯು ಶ್ಯಾಮರಾಯನ ಸಖ್ಯವನ್ನು ಬಯಸುತ್ತಾಳೆ. ಆದರೆ ಶ್ಯಾಮರಾಯನು ಬೇರೆಯವಳನ್ನು ಮದುವೆಯಾಗಿ ಜ್ವಾಲೆಗೆ ಮೋಸ ಮಾಡುತ್ತಾನೆ. 'ಪ್ರೇಮ ಗಂಡಸಿನ ಜೀವನದಲ್ಲಿ ಒಂದು ಘಟನೆಯಾದರೆ, ಅದು ಹೆಣ್ಣಿನ ಜೀವನದಲ್ಲಿ ಸಂಪೂರ್ಣ ಇತಿಹಾಸವಾಗುತ್ತದೆ' ಎಂಬ ನೀತಿಯಂತೆ ಜ್ವಾಲೆಯು ತನ್ನ ಪ್ರೇಮ ಪ್ರಸಂಗದಿಂದ ಪಾಠವನ್ನು ಕಲಿತು, ಧೈರ್ಯದಿಂದ ಜೀವನವನ್ನು ಸಾಗಿಸುತ್ತಾಳೆ. ಬ್ಯಾಂಕೊಂದರಲ್ಲಿ ಕಾರ್ಯನಿರ್ವಹಿಸುತ್ತ ಬದುಕುತ್ತಾಳೆ. ಪ್ರಗತಿಶೀಲ ಸಾಹಿತಿಗಳಂತೆ ದುಡಿಮೆಯ ಮೂಲಕವೇ ಹೆಣ್ಣು ಸ್ವತಂತ್ರವಾದ ಜೀವನವನ್ನು ನಡೆಸಲು ಸಾಧ್ಯ ಎಂಬುದನ್ನು ಜ್ವಾಲೆಯ ಪಾತ್ರದಿಂದ ನಿರೂಪಿಸಲಾಗಿದೆ.

ಅರುಂಧತಿ ಪಾಟೀಲ ಜ್ವಾಲೆಯ ಸಹೋದ್ಯೋಗಿಯಾಗಿದ್ದಳು. ಗಂಡನಿಂದ ವಿಚ್ಛೇದನೆ ಪಡೆದು ಮಗುವಿನೊಂದಿಗೆ ಜೀವನವನ್ನು ಸಾಗಿಸುತ್ತಿದ್ದಳು. ಗಂಡನಿಂದ ಅವಳಿಗೆ ಮೋಸವಾಗಿತ್ತಾದರೂ ಅವನ ಮುಖವನ್ನು ಕಾಣುತ್ತಲೆ ಅದೆಲ್ಲವನ್ನು ಮರೆತು ಅವನ ಸನಿಹವನ್ನು ಬಯಸುತ್ತಾಳೆ. ಅಂತೆಯೇ "ಮನುಷ್ಯನ ಅಂತಸ್ತರದಲ್ಲಿರುವ ಕಾಮ ಶಕ್ತಿಯು ವಿದ್ಯುತ್ತಿಗಿಂತ ಮಿಗಿಲಾದುದು" ಎಂಬ ಓಶೋರವರ (ಗಣೇಶ ಶರ್ಮ (ಅನು) ೧೯೯೫; ೩೮) ಹೇಳಿಕೆಯು ಸಾರ್ವಕಾಲಿಕವಾದುದು. 'ದುರ್ಬಲ ಶರೀರವು ಮನಸ್ಸನ್ನು ದುರ್ಬಲಗೊಳಿಸುವುದು' ಎಂಬ ರೂಸೋ ಅವರ ಹೇಳಿಕೆಯು ಇದನ್ನೇ ಸ್ಪಷ್ಟಪಡಿಸುತ್ತದೆ. ಅರುಂಧತಿ ಪಾಟೀಲ ಪತಿಯ ಮೇಲಿನ ಅನುಕಂಪಕ್ಕೆ ಗುರಿಯಾಗುತ್ತಾಳೆ. ಅವನೊಬ್ಬನನ್ನೇ ತನ್ನ ಬಳಿಯಲ್ಲಿ ಕಂಡಾಗ ಅವಳ ಶರೀರದ ಸುಪ್ತ ಬಯಕೆಗಳೆಲ್ಲವೂ ಹೊತ್ತಿ ಉರಿಯುತ್ತವೆ.

'ಇಳೆಯೆಂಬ' ಕಾದಂಬರಿಯಲ್ಲಿ ಕಾದಂಬರಿಕಾರರು ಸ್ತ್ರೀಯರಿಬ್ಬರ ಮಾನಸಿಕ ಸ್ಥೈರ್ಯ ಕುರಿತು ಚಿತ್ರಿಸಿದ್ದಾರೆ. ಜ್ವಾಲೆಯು ಶ್ಯಾಮರಾಯನೊಂದಿಗೆ ದೈಹಿಕ ಸುಖವನ್ನು ಅನುಭವಿಸಿದರೂ ಅವನ ವಂಚನೆಯಿಂದ ಮತ್ತೆ ಅವನೊಂದಿಗೆ ಬೆರೆಯಲು ಬಯಸುವುದಿಲ್ಲ. ತನ್ನ ಮಾನಸಿಕ ಸ್ಥೈರ್ಯವನ್ನು ಕಳೆದುಕೊಳ್ಳದೆ, ಲೈಂಗಿಕ ದೌರ್ಬಲ್ಯಕ್ಕೆ ಈಡಾಗದೆ ಅವನ ಸಮ್ಮುಖದಲ್ಲಿಯೇ ನಿರ್ಭೀತಿಯಿಂದ ಜೀವಿಸುತ್ತಾಳೆ. ಆದರೆ ಅರುಂಧತಿಯು ಗಂಡನಿಂದ ಮೋಸಗೊಂಡು ವಿಚ್ಛೇದನೆ ಪಡೆದಿದ್ದರೂ ಅವನ ಮುಖವನ್ನು ಕಾಣುತ್ತಲೇ ಅವನ ಸನಿಹವನ್ನು ಬಯಸುತ್ತಾಳೆ. ಲೈಂಗಿಕ ದೌರ್ಬಲ್ಯದಿಂದ ಗಂಡನಿಂದ

ಸುಖವನ್ನು ಯಾಚಿಸುತ್ತಾಳೆ. ಈ ಎರಡು ಸ್ತ್ರೀ ಪಾತ್ರಗಳಿಂದ ಲೈಂಗಿಕತೆಯ ವಿವಿಧ ಆಯಾಮಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ಅತೀವ ಕಾಮದಾಹದಿಂದ ಹೆಣ್ಣು ಯಾವ ಮಟ್ಟಕ್ಕೆ ಹೋಗಬಹುದು ಎಂಬುದನ್ನು 'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಮಾಚಿಯ ಪಾತ್ರದ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

"ಎಲ್ಲ ಬಗೆಯ ಜನಗಳಿಗೂ ಬಾಳ್ವೆಗಳಿಗೂ ಒಂದೇ ಉತ್ತರ ನ್ಯಾಯವಾಗಲಾರದು" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. (೨೦೦೪; ೦೪) ವೇಶ್ಯೆಯರ ಮನೋಸ್ಥಿತಿಯನ್ನು ಕುರಿತು ವಿವಿಧ ಆಯಾಮಗಳಲ್ಲಿ ಕಾದಂಬರಿಯಲ್ಲಿ ವಿಶ್ಲೇಷಿಸಿದ್ದಾರೆ. ಚಂದುವಿನ ವ್ಯಕ್ತಿತ್ವದಲ್ಲಿ ಮಾನವೀಯ ಮೌಲ್ಯಗಳಿದ್ದರೆ, ಮಾಚಿಯು ಕೀಳು ಮನೋಭಾವದ ವೇಶ್ಯೆಯಾಗಿದ್ದಳು. ಮಾಚಿಯು ಮಹಾಬಲಯ್ಯನೊಂದಿಗೆ ಸಂಬಂಧವನ್ನು ಹೊಂದಿದ್ದಳು. ಆದರೆ ಅವನನ್ನು ಪ್ರೀತಿಸುತ್ತಿರಲಿಲ್ಲ. ಅವನಿಂದ ದೈಹಿಕ ಸುಖ ಮತ್ತು ಐಷಾರಾಮಿ ಜೀವನವನ್ನು ನಿರೀಕ್ಷಿಸುತ್ತಿದ್ದಳು. ಕಾದಂಬರಿಕಾರರಿಗೆ ಪ್ರಸ್ತುತ ಸಮಾಜದಲ್ಲಿರುವ ವೇಶ್ಯೆಯರಿಗಿಂತ ಆದರ್ಶದ ವ್ಯಕ್ತಿತ್ವವನ್ನು ಹೊಂದಿದ ವೇಶ್ಯೆಯರ ಕಡೆಗೆ ಹೆಚ್ಚು ಒಲವು ಇರುವುದು ಸ್ಪಷ್ಟವಾಗುತ್ತದೆ.

೪. ವಿವಾಹ ಬಾಹಿರ ಸಂಬಂಧಗಳು

'ಲೈಂಗಿಕತೆ ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದು. ಇದನ್ನು ವಯಸ್ಸಿಗನುಗುಣವಾಗಿ, ಹಾಗೂ ಕಾಲಕ್ಕನುಗುಣವಾಗಿ ಪೂರೈಸದೆ ಹೋದರೆ ಜೀವನವು ದುರಂತಮಯವಾಗುತ್ತದೆ. ಹಾಗಾಗಿ ವಿವಾಹ ಬಾಹಿರ ಸಂಬಧಗಳೂ ಉದ್ಭವಿಸುತ್ತವೆ. ಈ ಸಂಬಂಧಗಳನ್ನು ಕುರಿತಂತೆ ಕಾರಂತರು ತಮ್ಮ ಕಾದಂಬರಿಗಳಲ್ಲಿ ಸಾಧಕ-ಬಾಧಕಗಳನ್ನು ಚರ್ಚಿಸಿದ್ದಾರೆ. 'ಕಾಮ' ಮಾನವನ ಪ್ರವೃತ್ತಿಗಳಲ್ಲಿ ಒಂದು. ಅದೊಂದು ನೈಸರ್ಗಿಕ ನಿಯಮ. ಗಂಡು-ಹೆಣ್ಣಿನ ಸಂಬಂಧವು ಒಂದು ಜೈವಿಕ ಅನಿವಾರ್ಯವಾಗಿದೆ. ಇದರಲ್ಲಿ ಯಾವುದೇ ಅತಿರೇಕವಾಗಲಿ, ವಿಶೇಷತೆಯಾಗಲಿ ಇಲ್ಲ. 'ಚೋಮನ ದುಡಿ' ಕಾದಂಬರಿಯ ಬೆಳ್ಳಿಯ ಪಾತ್ರವು ಇದಕ್ಕೆ ಅಪವಾದವಲ್ಲ. ಏಕೆಂದರೆ ಮನುಷ್ಯನು ಬಾಯಾರಿದಾಗ ಸಿಹಿಯಾದ ನೀರನ್ನು ಕುಡಿಯುತ್ತಾನೆ. ಹಸಿವಿನಿಂದ ಪೀಡಿತನಾದಾಗ ಅನ್ನವನ್ನು ತಿನ್ನುತ್ತಾನೆ. ಹಾಗೆಯೇ ಕಾಮದ ಬೆಂಕಿ ಜ್ವಲಿಸಲಾಗಿ ಪ್ರಿಯಳನ್ನು ಅಥವಾ ಪ್ರಿಯತಮನನ್ನು ಬಿಗಿದಪ್ಪುತ್ತಾನೆ. ಇದು ಮಾನವನ ಸಹಜವಾದ ಗುಣ ಧರ್ಮವಾಗಿದೆ.

ಬೆಳ್ಳಿಯು ತರುಣಿ, ಅವಳಲ್ಲಿ ವಯಸ್ಸಿಗನುಗುಣವಾಗಿ ಕಾಮ ಪೂರಿತವಾದ ಆಸೆ-ಆಕಾಂಕ್ಷೆಗಳಿದ್ದವು. ಅದರ ಪೂರೈಕೆಗೆ ಮದುವೆಯ ಅವಶ್ಯಕತೆಯಿತ್ತು. ಮದುವೆಯು ಸಮಾಜದಲ್ಲಿ ಗಂಡು-ಹೆಣ್ಣಿನ ಅಧಿಕೃತ ಲೈಂಗಿಕ ಸಂಬಂಧವನ್ನು ಮನ್ನಿಸುತ್ತದೆ. ಆದರೆ ಚೋಮನಿಗೆ ಬಡತನದಿಂದಾಗಿ ಬೆಳ್ಳಿಯ ಮದುವೆ ವಯಸ್ಸಿಗನುಗುಣವಾಗಿ ಮಾಡಲಾಗುವುದಿಲ್ಲ. ಚನಿಯ, ಗುರುವರು ತಂದೆ ಮಾಡಿದ ಸಾಲವನ್ನು

[illegible]

ತೀರಿಸಲು ಕಾಫಿ ತೋಟಕ್ಕೆ ದುಡಿಯಲು ಹೋಗುತ್ತಾರೆ. ಆದರೆ ಕುಡಿತದಿಂದಾಗಿ ಸಾಲ ತೀರಿಸಲಾಗದೆ ಮನೆಗೆ ಹಿಂದಿರುಗುತ್ತಾರೆ. ಆ ಸಂದರ್ಭದಲ್ಲಿ ಬೆಳ್ಳಿಯು ತಂದೆಯ ಸಾಲವನ್ನು ತೀರಿಸಲು ಕಾಫಿ ತೋಟಕ್ಕೆ ಹೋಗುವ ಪರಿಸ್ಥಿತಿಯು ನಿರ್ಮಾಣವಾಗುತ್ತದೆ. "ಲೈಂಗಿಕ ಹಸಿವಿನ ಎದುರು ಸಂಯಮ ಸಾಧಿಸಲಾಗದ ಮಾನವ ದೌರ್ಬಲ್ಯದಿಂದ ತಪ್ಪು ಹಾದಿಗಿಳಿಯುತ್ತಾನೆ" ಎಂಬ ಸೂಕ್ತಿಯಂತೆ ಲೈಂಗಿಕಾಪೇಕ್ಷೆಯನ್ನು ಹೊಂದಿದ್ದ ಬೆಳ್ಳಿಯು ಮನ್ವೇಲನ ಕಾಮಚೇಷ್ಟೆಗಳಿಗೆ ಪ್ರತಿರೋಧ ವ್ಯಕ್ತಪಡಿಸದೆ, ತನಗೆ ತಿಳಿಯದಂತೆಯೇ ಸ್ಪಂದಿಸುತ್ತಾಳೆ. ಸುಖವನ್ನು ಅನುಭವಿಸುತ್ತಾಳೆ. "ಹೆಂಗಸರ ಮುಖ ಯಾವಾಗಲೂ ಶುದ್ಧ, ಹಕ್ಕಿಗಳು ಬೀಳಿಸಿದ ಹಣ್ಣಿನಂತೆ, ಕರುಚೀಪಿದ ಮೊಲೆಯಂತೆ, ಬೇಟೆಯಲ್ಲಿ ನಾಯಿ ಕಚ್ಚಿದ ಮೃಗದಂತೆ ಎಂಜಲಲ್ಲ" ಎಂಬುದು ಲೋಕರೂಢಿಯ ಹೇಳಿಕೆ. ಅಂತೆಯೇ ಬೆಳ್ಳಿಗೆ ತಾನು ಮಾಡಿದ್ದು ತಪ್ಪು ಎಂದು ಅನ್ನಿಸುವುದೇ ಇಲ್ಲ. ಇದರಿಂದಾಗಿ ಅವಳ ಮನಸ್ಸು ಮನ್ವೇಲನ ಸಂಗಕ್ಕಾಗಿ ತವಕಿಸುತ್ತಿತ್ತು. ಅವನೊಂದಿಗೆ ಮದುವೆಯಾಗುವ ಕನಸನ್ನು ಕಾಣುತ್ತಿದ್ದಳು. ಆದರೆ "ಸಾಂಪ್ರದಾಯಿಕ ಧಾರ್ಮಿಕ ಪರಿಸರದಲ್ಲಿ ಹೆಣ್ಣಿಗೆ ತನ್ನ ಬದುಕನ್ನು ಕುರಿತು ತಾನೇ ಯೋಚಿಸಬಲ್ಲ, ಆಯ್ದುಕೊಳ್ಳಬಲ್ಲ ಸ್ವಾತಂತ್ರ್ಯವನ್ನು ಧಾರ್ಮಿಕ ಕಟ್ಟುಪಾಡುಗಳು ನಿರಾಕರಿಸುತ್ತವೆ" ಎಂಬ ಸುಮಿತ್ರಾ ಬಾಯಿಯವರ (೧೯೯೭ ;೦೩) ಹೇಳಿಕೆ ಅಂದಿನ ಸಾಮಾಜಿಕ ಸ್ಥಿತಿ-ಗತಿಯನ್ನು ಕುರಿತು ತಿಳಿಸುತ್ತದೆ. ಕೆಳವರ್ಗದವಳಾದ ಬೆಳ್ಳಿ, ಕ್ರೈಸ್ತ ಧರ್ಮದವನಾದ ಮನ್ವೇಲನೊಂದಿಗೆ ಮದುವೆಯಾಗುವುದು ಸಾಧ್ಯವಾಗುವುದಿಲ್ಲ. ಇಂದು ಮತಾಂತರ ಪ್ರಕ್ರಿಯೆಗಳು ಹೆಚ್ಚುತ್ತಲಿವೆ. ಅಂಬೇಡ್ಕರ್ ಅವರು ೧೯೫೬, ಅಕ್ಟೋಬರ್ ೧೪ರಂದು ಬೌದ್ಧ ಮತವನ್ನು ಸ್ವೀಕಾರ ಮಾಡಿರುವುದು ಮತಾಂತರ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಕ ಘಟನೆಯಾಗಿದೆ. ೧೯೩೩ರ ಸುಮಾರಿನಲ್ಲಿ ಧಾರ್ಮಿಕ ಕಟ್ಟುಪಾಡುಗಳು ತುಂಬ ಬಿಗಿಯಾಗಿದ್ದವು. ಆ ಸಮಯದಲ್ಲಿ ದಲಿತರ ಬದುಕನ್ನು ಕುರಿತು ರಚನೆಯಾದ ಕಾದಂಬರಿಗಳಲ್ಲಿ 'ಚೋಮನ ದುಡಿ' ಪ್ರಮುಖವಾದುದು. ಅಂಥಹ ಸಮಯದಲ್ಲಿ ಮತಾಂತರ ಕಷ್ಟಕರವಾಗಿತ್ತು ಎಂಬುದನ್ನು ಕಾದಂಬರಿಯಲ್ಲಿ ಗುರುತಿಸಲಾಗಿದೆ.

ಬೆಳ್ಳಿ ಮತ್ತು ಮನ್ವೇಲನ ವಿವಾಹಬಾಹಿರ ಸಂಬಂಧದ ಬಗ್ಗೆ ಚೋಮನಿಗೆ ತಿಳಿದಾಗ ಮೊದಲು ಕ್ರೋಧಗೊಳ್ಳುತ್ತಾನೆ. ಕ್ಷಣಾರ್ಧದಲ್ಲಿಯೇ ಮರೆತು ನಾನೂ ಅವಳಂತೆ ಹೆಣ್ಣಾಗಿದ್ದರೆ ನನ್ನ ಪಾಡೇನು? ಎಂದು ಮರುಕ ಪಡುತ್ತಾನೆ. ಕಾದಂಬರಿಕಾರರು ಚೋಮನ ಪಾತ್ರದಿಂದ ಬೆಳ್ಳಿಯದು ಅನೈತಿಕ ಸಂಬಂಧವಲ್ಲ, ಸಹಜವಾದ ಕ್ರಿಯೆ ಎಂಬಂತೆ ನಿರೂಪಿಸಿದ್ದಾರೆ. "ಬದುಕಿನ ಒಂದು ಮೂಲಭೂತ ಅಂಶವಾದ ಕಾಮವನ್ನು ಕಾರಂತರು ಆರಾಧಿಸುವುದೂ ಇಲ್ಲ, ಧಿಕ್ಕರಿಸುವುದೂ ಇಲ್ಲ, ಒಪ್ಪಿಕೊಳ್ಳುತ್ತಾರೆ" ಎಂಬ ಅಶೋಕ ಟಿ.ಪಿ.ಯವರ (೧೯೮೨; ೧೩) ಹೇಳಿಕೆಯು ಲೈಂಗಿಕತೆಯ ಕುರಿತು ಕಾರಂತರ ನಿಲುವನ್ನು ದೃಢಪಡಿಸುತ್ತದೆ.

ಹೆಣ್ಣು ಮಕ್ಕಳು ವಯಸ್ಸಿಗನುಗುಣವಾಗಿ ಮದುವೆಯಾಗಬೇಕು, ಮದುವೆಯನ್ನು ಮುಂದೂಡಿದಂತೆ ಅವರ ಲೈಂಗಿಕ ಬಯಕೆಗಳನ್ನು ಮುಂದೂಡಲಾಗುವುದಿಲ್ಲ. ಇದರಿಂದ ವಿವಾಹ ಬಾಹಿರವಾದ ಸಂಬಂಧಗಳು ಉದ್ಭವಿಸಬಹುದು ಎಂಬುದನ್ನು ಬೆಳ್ಳಿಯ ಪಾತ್ರದ ಹಿನ್ನೆಲೆಯಲ್ಲಿ 'ಚೋಮನ ದುಡಿ'

ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ನಿಸರ್ಗ ಸಹಜವಾದ ಕಾಮ ವೈಯಕ್ತಿಕ ಬದುಕಿನಲ್ಲಿ, ಸಾಮಾಜಿಕ ಬದುಕಿನಲ್ಲಿ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ ಎಂಬುದು ಕಾದಂಬರಿಯ ಆಶಯವಾಗಿದೆ.

ಲೈಂಗಿಕತೆಯು ಮನುಷ್ಯ ಪ್ರವೃತ್ತಿಯ ಸಹಜ ಅಭಿವ್ಯಕ್ತಿ. ಇದು ಎಲ್ಲರಲ್ಲಿಯೂ ಇರುವಂತದ್ದು. ಆದರೆ ಅಭಿವ್ಯಕ್ತಿಯು ಭಿನ್ನವಾಗಿರುತ್ತದೆ. ಏಕೆಂದರೆ ಕಾಮವು ಶರೀರದಲ್ಲಿ ಭಿನ್ನ-ಭಿನ್ನ ರೂಪದಲ್ಲಿ ಅಡಗಿಕೊಂಡಿರುವ ಸೌಂದರ್ಯ ಮತ್ತು ಆನಂದವಾಗಿದೆ. ಅದು ಕಾಲಕ್ಕನುಗುಣವಾಗಿ, ವಯಸ್ಸಿಗನುಗುಣವಾಗಿ ಉದ್ಭವವಾಗುತ್ತದೆ ಎಂಬುದನ್ನು 'ಮುಗಿದ ಯುದ್ಧ' ಕಾದಂಬರಿಯಲ್ಲಿ ಪರಿಶೀಲಿಸಲಾಗಿದೆ. ಸುಬ್ಬಿ ಬಡತನದಲ್ಲಿ ಬೆಳೆದವಳು. ತರುಣಿಯಾಗಿದ್ದಳು. ಅವಳ ವಯಸ್ಸು ಲೈಂಗಿಕತೆಯ ಪರಿಪಕ್ವತೆಯನ್ನು ಮೀಟಿ ಗಂಡಿನ ಬಯಕೆಯಿಂದ ಸಂಗಾತಿಗಾಗಿ ಹಂಬಲಿಸುತ್ತಿತ್ತು. ಅವಳ ಅಜ್ಜನು ಅವಳಿಗಾಗಿ ವರನನ್ನು ಹುಡುಕಿ ತರಲು ವಿಳಂಬ ಮಾಡುತ್ತಿರಲು, ಅದನ್ನು ತಡೆದುಕೊಳ್ಳಲು ಅವಳಿಂದ ಸಾಧ್ಯವಾಗಲಿಲ್ಲ. ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಧಣಿಯಾದ ಅಚ್ಯುತನೊಂದಿಗೆ ಸಂಬಂಧವನ್ನು ಬೆಸೆಯುತ್ತಾಳೆ. ಹೆಣ್ಣಿಗೆ ಗಂಡು ಬೇಕು, ಗಂಡಿಗೆ ಹೆಣ್ಣು ಬೇಕು, ಇದು ನಿಸರ್ಗ ನಿಯಮ ಎಂಬುದು ಕಾದಂಬರಿಯ ಕಥಾಹಂದರವಾಗಿದೆ.

ಅಚ್ಯುತನು ಸುಬ್ಬಿಯ ಲೈಂಗಿಕ ತೃಷೆಯನ್ನು ಸಮರ್ಥಿಸುತ್ತಾನೆ. "ಜೀವನ ಬರಿಯ ಶಾಸ್ತ್ರದ ಅಕ್ಷರಗಳನ್ನೇ ಆಧರಿಸಿಲ್ಲ. ಅವಳ ಪಾಲಿಗೆ ಗಂಡಿಲ್ಲ. ಅನೂಕೂಲ ದಾಂಪತ್ಯವಿಲ್ಲವೆಂದ ಮಾತ್ರಕ್ಕೆ ಮಾಂಸ ತನ್ನ ಬಯಕೆಯನ್ನು ಬೇಡುವುದೇನು ತಪ್ಪು? ಯಾರು ಎಷ್ಟು ದಿನ ಸುಮ್ಮನಿದ್ದಾರು? ಶರೀರ ಧರ್ಮವೂ ಒಂದು ಧರ್ಮವಲ್ಲವೇ? (೨೦೦೩, ಸಂ.-೬, ಕಾ-೫, ೨೨೧) ಎಂಬಂತೆ ಸಮರ್ಥಿಸುವುದು ಪುರುಷ ಪ್ರಧಾನ ಸಮಾಜದ ನಿಲುವಾಗಿದೆ. ಲೈಂಗಿಕತೆಯ ದಾಹವು ಮದುವೆಯ ಚೌಕಟ್ಟಿಗಾಗಿ ಕಾಯುವುದಿಲ್ಲ. ಅದು ನಿರಂತರವಾಗಿರುತ್ತದೆ. ದೈಹಿಕ ಸುಖಕ್ಕಾಗಿ ಸಮಯ ಹೊಂಚು ಹಾಕುತ್ತಿರುತ್ತದೆ ಎಂಬುದನ್ನು ಸುಬ್ಬಿಯ ಪಾತ್ರದ ಮುಖಾಂತರ ನಿರೂಪಿಸಲಾಗಿದೆ.

ವರನ ಅರ್ಹತೆಯಿಂದ ಯೋಚಿಸದೆ, ತನ್ನ ಮನಸ್ಸಿಗೆ ತೋರಿದಂತೆ ತಂದೆಯು ಮಗಳನ್ನು ಯಾರಿಗಾದರೂ ಕೊಟ್ಟು ಮದುವೆ ಮಾಡಿದರೆ, ಹೆಣ್ಣು ತನ್ನ ಸ್ವೇಚ್ಛಾವರ್ತನೆಯಿಂದ ಹುಟ್ಟಿದ ಮತ್ತು ಸೇರಿದ ಮನೆಗಳೆರಡನ್ನು ಹಾಳು ಮಾಡುವ ಸಾಧ್ಯತೆಯಿರುತ್ತದೆ. ಹಾಗಾಗಿ ಮದುವೆಗಿಂತ ಮುಂಚೆ ವಧು-ವರರ ಒಪ್ಪಿಗೆ ಪಡೆಯಬೇಕು. ಆದರೆ ಸುಬ್ಬಿಯ ಅಜ್ಜ ಅವಳಿಗೆ ತಿಳಿಸದಂತೆ ಕಾಳ ಎಂಬುವವನನ್ನು ಹುಡುಕಿ ಅವನೊಂದಿಗೆ ಮದುವೆ ಮಾಡಿಸುತ್ತಾನೆ. ಇದರಿಂದ ಸುಬ್ಬಿಯು ಸಂತೃಪ್ತಳಾಗದೆ ತೃಪ್ತಿಯನ್ನರಸುತ್ತ ಯಾರಿಂದೋ ಓಡಿ ಹೋಗುತ್ತಾಳೆ. ಅತಿಯಾದ ಕಾಮದಾಹವನ್ನು ಹೊಂದಿದ್ದ ಹೆಣ್ಣು ಯಾರಿಂದಲೂ ತೃಪ್ತಿ ಹೊಂದದೆ ಜೀವನವನ್ನು ಹಾಳು ಮಾಡಿಕೊಳ್ಳುವಳು ಎಂಬುದನ್ನು ಸುಬ್ಬಿಯ ಪಾತ್ರದ ಹಿನ್ನೆಲೆಯಲ್ಲಿ ಅಭಿವ್ಯಕ್ತಪಡಿಸಲಾಗಿದೆ.

ಅಚ್ಯುತ ಮತ್ತು ರುಕ್ಮಿಣಿಯರ ದಾಂಪತ್ಯ ಜೀವನವು ಸುಖಮಯವಾಗಿತ್ತು. ಆದರೆ ವರ್ಷಕ್ಕೊಂದು ಮಗುವಿನ ಹೆರಿಗೆಯಿಂದ ಅವಳು ಅಶಕ್ತಳಾಗುತ್ತಾಳೆ. ವರ್ಷ ವರ್ಷ ಹಡೆಯುತ್ತ ಹೋದರೆ ಅವಳ ಆರೋಗ್ಯ ಕ್ಷಯಕ್ಕೆ ತಿರುಗುವ ಸಾಧ್ಯತೆಯಿದೆ ಎಂದು ಡಾ.ಶ್ಯಾಮರಾಯರು ಎಚ್ಚರಿಕೆಯನ್ನು ನೀಡಿದ್ದರು.

[illegible]

ರುಕ್ಮಿಣಿಯೊಂದಿಗೆ ಸೇರುವುದು ಒಳಿತಲ್ಲವೆಂದು ಗೊತ್ತಿದ್ದರೂ ಕಾಮದಾಹದಿಂದಾಗಿ ಪದೆ-ಪದೆ ಅವಳೊಂದಿಗೆ ಸೇರುತ್ತಿದ್ದನು. ಇದರಿಂದ ರುಕ್ಮಿಣಿಯ ಐದನೆ ಹೆರಿಗೆಯಲ್ಲಿ ಮೃತ ಶಿಶುವಿನ ಜನನವಾಗುತ್ತದೆ. ಅವಳು ತುಂಬ ಅಶಕ್ತಳಾಗಿದ್ದು, ತೀರ ಬರಿಯ ಎಲುಬು ಚರ್ಮವಾಗಿದ್ದಳು. ಮುಖ ತೀರ ಕಾಂತಿ ಹೀನವಾಗಿತ್ತು. ಇದು ಅಚ್ಯುತನಲ್ಲಿ ಪಶ್ಚಾತ್ತಾಪವನ್ನು ಉಂಟುಮಾಡುತ್ತದೆ. ಅವನು ತುಂಬ ನೊಂದುಕೊಳ್ಳುತ್ತಾನೆ.

ಅತಿಯಾದ ಲೈಂಗಿಕಾಸೆಯಿಂದ ಸ್ತ್ರೀ-ಪುರುಷರ ಜೀವನವು ಹಾಳಾಗಬಲ್ಲದು. ಸಂತಾನದ ಆಯ್ಕೆಯಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿರಬೇಕು. ಇಲ್ಲದಿದ್ದರೆ ಸ್ತ್ರೀಯು ಕೇವಲ 'ಹೆರಿಗೆ ಯಂತ್ರ'ವಾಗಿ ಉಳಿಯುವಳು ಎಂಬ ಸಾಮಾಜಿಕ ಕಳಕಳಿಯನ್ನು 'ಮುಗಿದ ಯುದ್ಧ' ಕಾದಂಬರಿಯಲ್ಲಿ ಗಮನಿಸಬಹುದು.

'ಕುಡಿಯರ ಕೂಸು' ಕಾದಂಬರಿಯಲ್ಲಿ ಅತೃಪ್ತ ಕಾಮದ ಕುರಿತ ಚಿತ್ರಣವಿದೆ. ಗಿಡ್ಡಿಯು ರೂಪವತಿಯೂ ಹದಿಹರೆಯದವಳೂ ಆಗಿದ್ದಳು. ಅವಳ ರೂಪ ಲಾವಣ್ಯಕ್ಕೆ ವಲ್ಲಿಬ್ರಗಾಂಜನು ಮನಸೋತು, ಕಾರ್ಕಳಕ್ಕೆ ಕೆಲಸದ ನೆಪವಾಗಿ ಕರೆದುಕೊಂಡು ಹೋಗುವನು. ಅವಳನ್ನು ಪಾದ್ರಿ ಮತಕ್ಕೆ ಮತಾಂತರಿಸಿ ಮದುವೆಯಾಗಬೇಕೆಂದು ಬಯಸಿದನು. ಸ್ಪರ್ಶಪ್ರೇರಿತವಾದ, ವಯಸ್ಸಹಜವಾದ ಕಾಮದ ಹಸಿವು ಅವಳನ್ನು ವಲ್ಲಿಯ ಸ್ನೇಹಕಾಂಕ್ಷಿಯನ್ನಾಗಿ ಮಾಡಿತು. ಅನುರಾಗ ಬಲಿತು, ತಂದೆ-ತಾಯಿ, ಕುಲ-ಸಂಸ್ಕೃತಿಗಳೆಲ್ಲವನ್ನು ಮರೆತಳು. ದೈಹಿಕ ಸಂಬಂಧದಿಂದ ಯೌವ್ವನ ಸಹಜವಾದ ಬಯಕೆಯನ್ನು ತೀರಿಸಿಕೊಂಡಳು. ಅವಳಲ್ಲಿಯ ಪ್ರೇಮ ಕಾಮದಲ್ಲಿ ರೂಪಾಂತರಗೊಂಡಾಗ ಕಾರ್ಕಳದಿಂದ ಹಿರಿಮಲೆಗೆ ಬಂದಿದ್ದರೂ, ಅವಳ ಜೀವ ಅವನಿಗಾಗಿ ಹಂಬಲಿಸುತ್ತಿತ್ತು. ಅವನನ್ನು ಎಂದು ಕಂಡೆನು, ಯಾವಾಗ ಸಂಧಿಸೇನು ಎಂಬ ತುಡಿತ ಅವಳಲ್ಲಿ ದಿನೇ-ದಿನೇ ಹೆಚ್ಚುತ್ತಲಿತ್ತು. ಅವನಿಂದ ಪಡೆದ ಸುಖಕ್ಕಾಗಿ ಅವಳ ಮೈ -ಮನಸ್ಸುಗಳೆರಡೂ ಅವನಿಗಾಗಿ ತವಕಿಸುತ್ತಿದ್ದವು. ಲೈಂಗಿಕತೆಯು ಕೇವಲ ದೈಹಿಕವಾಗಿದ್ದರೆ ಅದನ್ನು ಮರೆಯಬಹುದು. ಆದರೆ ದೈಹಿಕದ ಜೊತೆಗೆ ಮಾನಸಿಕವಾಗಿ ಬೆರೆತು ಹೋಗಿದ್ದರೆ ಅದನ್ನು ಮರೆಯುವುದು ತುಂಬ ಕಷ್ಟವಾಗುತ್ತದೆ.

ಗಿಡ್ಡಿಯು ವಲ್ಲಿಬ್ರಗಾಂಜನಿಂದ ಗರ್ಭಧರಿಸಿ ಮೈ ಕೈ ತುಂಬಿದವಳಾಗಿ ಕಂಡಾಗಲಂತೂ ಜನರ ನಿಂದನೆಗೆ ಗುರಿಯಾಗುತ್ತಾಳೆ. ಏಕೆಂದರೆ ಮದುವೆಗೆ ಮುಂಚೆನೆ ಗರ್ಭಧರಿಸಿದವರನ್ನು ಸಮಾಜ ಒಪ್ಪುವುದಿಲ್ಲ. "ವಿವಾಹ ಬಾಹಿರ ತಾಯ್ತನವನ್ನು ಶಾಪ ಅಂತಲೇ ಹೇಳುತ್ತದೆ ಸಮಾಜ" ಎಂಬ ಧರಣಿದೇವಿ ಮಾಲಗತ್ತಿಯವರ (೨೦೦೪; ೦೫) ಹೇಳಿಕೆಯು ಪ್ರಸ್ತುತವೆನಿಸುತ್ತದೆ.

ಕಾರಂತರ ಸಮಕಾಲೀನರಾದ ಸಾವಿತ್ರಮ್ಮ ಎಚ್.ವಿ.ಯವರ "ಸುಪ್ತ ಬಯಕೆ" ಕತೆಯ ಸೀತೆ ಮದುವೆಯಾಗದೆ ರೂಢಿಗತ ಅಪರಾಧಿ ಪ್ರಜ್ಞೆಯಿಂದ ನರಳದೆ ಅತ್ಯಂತ ಶಾಂತವಾಗಿ, ಗಂಭೀರವಾಗಿ ಬದುಕುತ್ತಾಳೆ. ಇದು ಸಾವಿತ್ರಮ್ಮನವರ ಪ್ರಗತಿಪರ ನಿಲುವಾಗಿದೆ. ಆದರೆ "ಕುಡಿಯರ ಕೂಸು" ಕಾದಂಬರಿಯಲ್ಲಿ ಸಂಪ್ರದಾಯಿಕ ಸನ್ನಿವೇಶಗಳಿವೆ. ಆದರೂ ಸಂಪ್ರದಾಯದಲ್ಲಿ ಆಧುನಿಕತೆಯನ್ನು ಗುರುತಿಸಬಹುದಾಗಿದೆ. ತನ್ನ ಗರ್ಭಧಾರಣೆಯ ವಿಷಯ ತನ್ನ ಗಂಡನಿಗೆ ತಿಳಿದರೆ ಬದುಕು ಹಾಳಾಗುತ್ತದೆ

ಎಂಬುದನ್ನರಿತ ಗಿಡ್ಡಿಯು ತನ್ನ ಗಂಡನಿಗೆ ತಿಳಿಯದಂತೆ ಗರ್ಭವನ್ನು ಇಳಿಸಿಕೊಳ್ಳುತ್ತಾಳೆ. ದುರಂತವಾಗಬಹುದಾಗಿದ್ದ ಬದುಕನ್ನು ಕರಿಯನ ಸಹಾಯದಿಂದ ಸರಿಪಡಿಸಿಕೊಳ್ಳುತ್ತಾಳೆ.

ಪ್ರಸ್ತುತ ಸಮಾಜದಲ್ಲಿ ಗರ್ಭಧರಿಸಿದ ಮಹಿಳೆಯರು ಗರ್ಭವನ್ನು ಕರಗಿಸಿಕೊಂಡು ಮದುವೆಯಾಗುತ್ತಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಅಂದಿನ ಸಮಕಾಲೀನ ಪರಿಸ್ಥಿತಿಗಳನ್ನು ಅರಿಯಬಹುದು. ಗಿಡ್ಡಿಯ ಗರ್ಭಧಾರಣೆ ಊರ ಜನರ ನಿಂದನೆಗೆ ಗುರಿಯಾಗುತ್ತದೆ. ಆದರೆ ಗಿಡ್ಡಿಯ ಗಂಡ ತಿಮ್ಮನಿಗೆ ಮಾತ್ರ ಅದರ ಬಗ್ಗೆ ತಿಳಿದಿರಲಿಲ್ಲವೆಂದರೆ ಸೋಜಿಗವೆನಿಸುತ್ತದೆ. ಕಾದಂಬರಿಕಾರರು ಗಿಡ್ಡಿಯ ಸಂಸಾರವನ್ನು ಸುಖಮಯವಾಗಿಸಲು ಇದನ್ನು ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಲೈಂಗಿಕ ಕ್ರಿಯೆಯು ಕೇವಲ ದೈಹಿಕವಾಗಿದ್ದರೆ ಅದರ ಸಂಬಂಧ ಗಟ್ಟಿಯಾಗಿರುವುದಿಲ್ಲ ಎಂಬುದನ್ನು "ಸ್ವಪ್ನದ ಹೊಳೆ" ಕಾದಂಬರಿಯಲ್ಲಿ ಪ್ರಸ್ತಾಪಿಸಲಾಗಿದೆ. ಲಲಿತೆಯ ಮನೆಯಲ್ಲಿ ಕಿಟ್ಟನು ವಿದ್ಯಾಭ್ಯಾಸಕ್ಕೆಂದು ತಂಗಿದ್ದನು. ತರುಣಿಯಾದ ಲಲಿತೆಯು ಕಿಟ್ಟನಿಂದ ವ್ಯಾಮೋಹಿತಳಾದಳು. ಆ ವ್ಯಾಮೋಹ ಅನುರಾಗದಲ್ಲಿ ಪರ್ಯಾವಸಾನವಾಯ್ತು. ಅವನನ್ನು ಪ್ರೀತಿಸಲಾರಂಭಿಸಿದಳು. ಅವನೂ ತನ್ನನ್ನು ಪ್ರೀತಿಸುತ್ತಿದ್ದಾನೆಂದು ಖಚಿತವಾದ ಮೇಲೆ ಅವನಿಂದ ಸ್ಪರ್ಶಸುಖವನ್ನು ಬಯಸುತ್ತಾಳೆ. 'ಸ್ಪರ್ಶಸುಖ ಲೈಂಗಿಕತೆಯ ಮೊದಲ ಹೆಜ್ಜೆ' ಯಾಗಿದೆ. ಪ್ರೀತಿ ಮನುಷ್ಯನಲ್ಲಿರುವ ಅತ್ಯಂತ ಕ್ರಿಯಾಶೀಲ ಶಕ್ತಿಯಾಗಿದೆ. ಆ ಕ್ರಿಯಾಶೀಲತೆಯಿಂದಲೇ ಲಲಿತೆ ಹಗಲಿರುಳು ಅವನ ಧ್ಯಾನದಲ್ಲಿಯೇ ಮಗ್ನಳಾಗಿರುತ್ತಿದ್ದಳು. ಕಿಟ್ಟನಿಂದ ಲೈಂಗಿಕ ಸುಖವನ್ನು ಪಡೆಯಲು ತವಕಿಸುತ್ತಿದ್ದಳು. ಮನೆಯೊಂದರಲ್ಲಿ ಕಿಟಕಿಯ ಮೂಲಕ ಏನನ್ನೋ ನೋಡುತ್ತ ನಿಂತಿದ್ದ ಕಿಟ್ಟನನ್ನು ಲಲಿತೆ ಅವನ ಹಿಂದಿನಿಂದ ಬಂದವಳೇ ಕಿಟ್ಟನ ಕಣ್ಣುಗಳನ್ನು ತನ್ನ ಎರಡು ಕೈಗಳಿಂದ ಒತ್ತಿ ಹಿಡಿದಳು. ಅವಳ ಕಣ್ಣು, ತುಟಿಗಳ ಬೇಡಿಕೆ ಕಾಮಪೂರಿತವಾಗಿತ್ತು. ಅವಳ ಕೆಂದುಟಿಗಳು ಅವನ ತುಟಿಗಳನ್ನು ಒತ್ತಿ ಚುಂಬಿಸಿದವು. ಅವರಿಬ್ಬರ ಪ್ರೇಮವು ಆ ರೀತಿಯಲ್ಲಿ ಸಮಾಗಮವಾಯ್ತು.

ಪ್ರೀತಿಸುವುದು ಅತ್ಯಂತ ವೈಯಕ್ತಿಕವಾದ ಸಂಗತಿಯಾಗಿದೆ. ಅವರೀರ್ವರ ಪ್ರೇಮವು ಯಾರಿಗೂ ಗೊತ್ತಾಗದಂತೆಯೇ ಮುಕ್ತಾಯವಾಗುತ್ತದೆ. ಪರಿಸ್ಥಿತಿಯಿಂದಾಗಿ ಅವರಿಬ್ಬರ ಮದುವೆ ನೆರವೇರುವುದಿಲ್ಲ. ಇದರಿಂದ ಲಲಿತೆಯು ದುಃಖಿತಳಾಗದೆ ಮತ್ತೊಬ್ಬನೊಂದಿಗೆ ಮದುವೆಯಾಗಿ ಸುಖವಾಗಿ ಬದುಕುತ್ತಾಳೆ. ಅವಳಿಗೆ ಯಾವುದೇ ರೀತಿಯ ಅಪರಾಧ ಭಾವನೆ ಕಾಡುವುದಿಲ್ಲ. ಏಕೆಂದರೆ ಅವರೀರ್ವರ ಸಂಬಂಧವು ಕೇವಲ ದೈಹಿಕತೆಗೆ ಮಾತ್ರ ಸೀಮಿತವಾಗಿತ್ತು. ಮನಸ್ಸುಗಳು ಬೆರೆತಿರಲಿಲ್ಲ. ಲೈಂಗಿಕತೆಯಲ್ಲಿ ದೇಹ-ಮನಸ್ಸುಗಳು ಬೆರೆತಾಗ ಮಾತ್ರ ಸಂಬಂಧ ಗಾಢವಾಗಿರುತ್ತದೆ. ಈ ವಿಷಯವನ್ನು ಒಳಗೊಂಡಂತೆ ಸಮಕಾಲೀನ ಸಾಹಿತ್ಯದಲ್ಲಿ ಹಲವಾರು ಕಾದಂಬರಿಗಳು ರಚನೆಯಾಗಿವೆ. ತ್ರಿವೇಣಿಯವರ 'ಶರಪಂಜರ' (೧೯೬೫) ಕಾದಂಬರಿಯ ಕಾವೇರಿಯ ಪಾತ್ರ ಇದಕ್ಕೆ ವ್ಯತಿರಿಕ್ತವಾಗುತ್ತದೆ. ಕಾವೇರಿ ವಿವಾಹಪೂರ್ವ ಸಂಬಂಧದಿಂದ ನರಳುವುದು, ಅದರಿಂದ ಮನೋರೋಗಿಯಾಗುವುದು ಕಾದಂಬರಿಯ ಪ್ರಮುಖ ವಿಷಯವಾಗಿದೆ. ಕಾವೇರಿಯು ಹಳೆಯದೆಲ್ಲವನ್ನು ಮರೆತು ಸುಖವಾದ ಜೀವನ ಸಾಗಿಸುವ ಸಾಧ್ಯತೆಗಳಿದ್ದವು.

ಆದರೆ ಕಾವೇರಿಗೆ ಅದು ಸಾಧ್ಯವಾಗುವುದಿಲ್ಲ. ಆದರೆ ಕಾರಂತರ 'ಸ್ವಪ್ನದ ಹೊಳೆ' ಕಾದಂಬರಿಯ ಲಲಿತೆಗೆ ಅದು ಸಾಧ್ಯವಾಗುತ್ತದೆ. ಈ ಎರಡು ಸನ್ನಿವೇಶಗಳು ಕಾರಂತರ ಮತ್ತು ತ್ರಿವೇಣಿಯವರ ವಿಚಾರಗಳನ್ನು ಸ್ಪಷ್ಟಪಡಿಸುತ್ತವೆ. ಲೈಂಗಿಕತೆಯು ಕೇವಲ ದೈಹಿಕವಾಗಿದ್ದರೆ ಸಂಬಂಧ ಗಟ್ಟಿಯಾಗಿರುವುದಿಲ್ಲ. ಮರೆಯುವ ಸಾಧ್ಯತೆಗಳಿರುತ್ತವೆ. ಆದರೆ ತ್ರಿವೇಣಿಯವರು ಲೈಂಗಿಕ ಸುಖ ಗಂಡನಿಂದಲೇ ಪಡೆಯಬೇಕು ಎಂಬ ವಿಚಾರವನ್ನು ಹೊಂದಿರುವುದು ಪುರುಷ ಪ್ರಧಾನ ವ್ಯವಸ್ಥೆಯ ಹಿನ್ನೆಲೆಯಲ್ಲಿಯೇ ಎಂಬುದು ಅರಿವಾಗುತ್ತದೆ.

೫. ಅನೈತಿಕತೆ

ಕುಟುಂಬವು ಉತ್ತಮ ಲೈಂಗಿಕತೆಯ ವೇದಿಕೆಯಾಗಬೇಕು. ಅದನ್ನು ಉಪಯೋಗಿಸಿಕೊಳ್ಳುವಲ್ಲಿ ಗಂಡ -ಹೆಂಡಿರ ಮನಸ್ಸು ಪರಸ್ಪರರಿಗಾಗಿ ತುಡಿಯುತ್ತಿರಬೇಕು. ಅಂದಾಗ ಮಾತ್ರ ದಾಂಪತ್ಯ ಜೀವನವು ಸಾಮರಸ್ಯದಿಂದ ಕೂಡಿರಲು ಸಾಧ್ಯ. ಇಲ್ಲದಿದ್ದರೆ ಪರರನ್ನು ಆಶ್ರಯಿಸಿ ತೃಪ್ತಿಹೊಂದಲು ಬಯಸುತ್ತದೆ ಎಂಬುದನ್ನು 'ಒಡಹುಟ್ಟಿದವರು' ಕಾದಂಬರಿಯಲ್ಲಿ ವಿವೇಚಿಸಲಾಗಿದೆ. ಹೊಂದಾಣಿಕೆಯ ಅಭಾವದಿಂದ ಶೇವಂತಿ ವಾಸುದೇವರ ದಾಂಪತ್ಯ ಜೀವನವು ವಿರಸಮಯವಾಗಿತ್ತು. ಈ ವಿರಸಮಯ ಜೀವನದಲ್ಲಿ ಶೇವಂತಿ ಹೆಚ್ಚು ಬಾದೆಗೊಳಗಾಗುತ್ತಾಳೆ, ಏಕಾಂಗಿಯಾಗುತ್ತಾಳೆ. ಏಕಾಂಗಿತನವನ್ನು ನಿವಾರಿಸಿಕೊಳ್ಳುವುದು ಮನುಷ್ಯನ ಅತ್ಯಂತ ಆಳವಾದ ಅವಶ್ಯಕತೆಯಾಗಿದೆ. ಅಂತೆಯೇ ಒಂಟಿತನದಿಂದ ಹೊರಬರುವ ಆತುರದಲ್ಲಿ ಸೇವಂತಿಯು ಸ್ವಾಮಿರಾಯನೊಂದಿಗೆ ಪತ್ರ ವ್ಯವಹಾರ ನಡೆಸುತ್ತಾಳೆ. ಅದು ಅವಳ ಲೈಂಗಿಕ ಆಸಕ್ತಿಯನ್ನು ಸೂಚಿಸುವುದರ ಜೊತೆಗೆ ಅವಳ ಮನದ ಅಧಃಪತನವನ್ನು ಸೂಚಿಸುತ್ತದೆ.

ದಾಂಪತ್ಯ ಜೀವನವು ಹೊಂದಾಣಿಕೆಯಿಂದ ಕೂಡಿದ್ದರೆ ಮಾತ್ರ ದಂಪತಿಗಳು ಲೈಂಗಿಕ ಚಟುವಟಿಕೆಯಲ್ಲಿ ಅರ್ಥಪೂರ್ಣವಾದ ತೃಪ್ತಿಯನ್ನು ಪಡೆಯಬಹುದು. ಇಲ್ಲದಿದ್ದಲ್ಲಿ ಕುಟುಂಬದಲ್ಲಿ ಮನಃಶಾಂತಿ ಉಳಿಯುವುದಿಲ್ಲ ಎಂಬುದು ಈ ಕಾದಂಬರಿಯ ಆಶಯವಾಗಿದೆ. ಸುಮಂಗಲೆಯು ತನ್ನ ಗಂಡ ವಿಶ್ವನಾಥನಿಂದ ದೂರವಿದ್ದಳು. ಇದರಿಂದಾಗಿ ಅವಳಲ್ಲಿ ಹುದುಗಿದ್ದ ಪ್ರಕೃತಿದತ್ತವಾದ ಕಾಮದ ಹಸಿವು ಉಲ್ಬಣಗೊಂಡು ಪರರನ್ನು ಆಶ್ರಯಿಸಲು ತವಕಿಸುತ್ತಿತ್ತು. ವಾಸುದೇವನಲ್ಲಿ ತನ್ನ ದಾಹವನ್ನು ಪೂರೈಸಿಕೊಳ್ಳಲು ಬಯಸಿದಳು. ಇತ್ತ ವಾಸುದೇವನೂ ಸಹ ಹೆಂಡತಿಯಿಂದ ದೂರ ಉಳಿದಿದ್ದನು. ಇದರಿಂದಾಗಿ ಅವರಿಬ್ಬರಲ್ಲಿ ಸ್ನೇಹ ಅಂಕುರಿಸಿತು. ಆ ಸ್ನೇಹ ಅವರಿಬ್ಬರ ಕಾಮ ಪೂರೈಕೆಗೆ ಆಸರೆಯಾಯಿತು.

ಲೈಂಗಿಕ ಪ್ರಕ್ರಿಯೆಯು ಯಾವಾಗ, ಯಾರನ್ನು ಬಯಸುತ್ತದೆ ಎಂಬುದನ್ನು ನಿಖರವಾಗಿ ಹೇಳಲಾಗದು. ಹಾಗೂ ಅದಕ್ಕೆ ಕಾರಣಗಳನ್ನು ಸಹ ನೀಡಲಾಗದು ಎಂಬುದನ್ನು 'ಆಳಿದ ಮೇಲೆ' ಕಾದಂಬರಿಯು ಒಳಗೊಂಡಿದೆ. 'ಪ್ರೀತಿ ನಿಷ್ಕಾರಣವಾಗಿರಬೇಕು, ದ್ವೇಷ ಸಕಾರಣವಾಗಿರಬೇಕು' ಎಂಬುದು ಲೋಕರೂಢಿಯ ಮಾತು. ಹಾಗಾಗಿಯೇ ಯಶವಂತರಾಯರು ಸರಸಿಯಲ್ಲಿ ಕಂಡದ್ದನ್ನು, ಕಮಲಮ್ಮ ಮುರ್ಡೇಶ್ವರ ವಕೀಲರಲ್ಲಿ ಕಂಡಿರಬಹುದು. ಅದಕ್ಕಾಗಿಯೇ ಕಮಲಮ್ಮ ಗಂಡ ಯಶವಂತರಾಯನನ್ನು ತಿರಸ್ಕರಿಸಿ ಅವರನ್ನು ತುಂಬ ಪ್ರೀತಿಸುತ್ತಿದ್ದಳು.

ಅನ್ಯಲಿಂಗಿಗಳ ಆಸಕ್ತಿ ಪ್ರೀತಿಯ ಮೊದಲ ಹಂತವಾಗಿರುತ್ತದೆ ಎಂಬುದರ ವಿವರಣೆ "ಇದ್ದರೂ ಚಿಂತೆ" ಕಾದಂಬರಿಯು ಒಳಗೊಂಡಿದೆ. ಸಾವಿತ್ರಿ ಶ್ರೀಮಂತ ಮನೆತನದಲ್ಲಿ ಬೆಳೆದವಳು. ಮಧ್ಯಮ ವರ್ಗದಲ್ಲಿ ಬೆಳೆದ ರಾಘುವೇಂದ್ರರಾಯನೊಂದಿಗೆ ಮದುವೆಯಾಗುತ್ತಾಳೆ. ಇದರಿಂದ ಸಹಜವಾಗಿಯೇ ಸಾವಿತ್ರಿಯು ಆರ್ಥಿಕ ವಿಷಯದಲ್ಲಿ 'ಮೇಲುಗೈ' ಸಾಧಿಸುತ್ತಾಳೆ. ಸದಾಶಿವರಾಯ ರಾಘುವೇಂದ್ರರಾಯರ ಸ್ನೇಹಿತ. ಸದಾಶಿವರಾಯ ಆರ್ಥಿಕವಾಗಿ ತೊಂದರೆಯಲ್ಲಿದ್ದಾಗ ಸಾವಿತ್ರಿಯು ತನ್ನ ಗಂಡನಿಗೆ ತಿಳಿಯದಂತೆ 'ಐದು ಸಾವಿರ' ರೂಪಾಯಿಗಳನ್ನು ಸಹಾಯವಾಗಿ ಅವನಿಗೆ ನೀಡುತ್ತಾಳೆ. ಈ ಗೌಪ್ಯತೆ ಅವರೀರ್ವರ ಸಂಬಂಧ ಕುರಿತು ಸಂಶಯಕ್ಕೆ ಅನುವು ಮಾಡಿಕೊಡುತ್ತದೆ. ಆದರೆ ಅವರೀರ್ವರ ಸಂಬಂಧ ಕುರಿತು ಕಾದಂಬರಿಯಲ್ಲಿ ವಾಚ್ಯವಾಗಿ ಬಂದಿಲ್ಲ. ಬದಲಿಗೆ ಅವಳ ಮಗ ಸೀತಾರಾಮನ ಮೌನದಲ್ಲಿ, ಸಿಟ್ಟಿನಲ್ಲಿ ವ್ಯಕ್ತವಾಗುತ್ತದೆ. ಅದರ ಪರಿಣಾಮವಾಗಿ ಸೀತಾರಾಮ ತಾಯಿಯನ್ನು ಜೀವನ ಪರ್ಯಂತವಾಗಿ ದ್ವೇಷಿಸುತ್ತಾನೆ. ಪ್ರೀತಿಯು ವಿಭಿನ್ನ ರೂಪದಲ್ಲಿ ಅನಾವರಣಗೊಳ್ಳುವುದನ್ನು ಈ ಕಾದಂಬರಿಯಲ್ಲಿ ಕಾಣಬಹುದು.

೬. ಸಂತಾನಪೇಕ್ಷೆ

ಹೆಣ್ಣಿಗೆ ಸಂತಾನಭಾಗ್ಯ ಪವಿತ್ರವಾದುದು. ಹೆಣ್ಣಾದವಳು ತನ್ನ ಜೀವನದಲ್ಲಿ ಅನುಭವಿಸುವ ಆತ್ಮಾನಂದದ ಕ್ಷಣವೆಂದರೆ ತಾಯಿಯಾಗುವ ಹೊತ್ತು. ಹೆಣ್ತನ ಸಾರ್ಥಕವಾಗುವುದೇ ತಾಯ್ತನದಲ್ಲಿ. ತಾಯಿಯಾಗದ ಹೊರತು ಯಾವ ಮಹಿಳೆಗೂ ನೆಮ್ಮದಿ ಸಿಗುವುದಿಲ್ಲ. ತಾಯಿಯಾಗದ ಹೆಣ್ಣಿನ ಜೀವನ ನಿರರ್ಥಕವಾದುದು ಎಂಬ ಭಾವನೆ ಭಾರತೀಯ ಸಂಸ್ಕೃತಿಯಲ್ಲಿದೆ. ಹಾಗೆಯೇ ಪ್ರತಿಯೊಂದು ಹೆಣ್ಣು ತಾನು ತಾಯಿಯಾಗಲು ಬಯಸುತ್ತಾಳೆ. ಅದಕ್ಕಾಗಿ ಅವಳು ಎಂಥಹ ಹೇಯ ಕೃತ್ಯಕ್ಕೂ ಮುಂದಾಗುವಳು. ಶಿಶು ಮೋಹಕ್ಕೊಳಗಾದ ಮಾತೆಯರು ಎಂಥಹ ಪಾಪಕೃತ್ಯಕ್ಕೂ ಹೇಸದಿರುವುದಕ್ಕೆ ಇತಿಹಾಸದ ಪುಟ ತಿರುವಿದರೆ ಅನೇಕ ನಿದರ್ಶನಗಳು ದೊರಕುತ್ತವೆ. ಇದನ್ನು 'ಹೆತ್ತಳಾ ತಾಯಿ' ಕಾದಂಬರಿಯಲ್ಲಿ ಗುರುತಿಸಬಹುದು.

ಕುಸುಮೆಯು ಹಳ್ಳಿಯ ಬಡ ಕುಟುಂಬದಲ್ಲಿ ಬೆಳೆದವಳಾಗಿದ್ದರೂ ಶ್ರೀಮಂತಿಕೆಯ ಬಯಕೆಯನ್ನು ಹೊಂದಿದ್ದಳು. ವಕೀಲ ಸುಬ್ಬಯ್ಯನನ್ನು ಮದುವೆಯಾದಾಗ ಅವಳ ಬದುಕಿನ ರೀತಿ-ನೀತಿಗಳೇ ಬದಲಾಗುತ್ತವೆ. "ತುರಣಿಯಾದವಳಿಗೆ ಗಂಡನ್ನಲ್ಲದೆ ಇನ್ನೇನೂ ಬೇಡ, ಗಂಡ ಸಿಗುತ್ತಲೇ ಅವಳಿಗೆ ಎಲ್ಲ ಬೇಕಾಗುತ್ತದೆ" ಎಂಬ ಆಂಗ್ಲ ನಾಣ್ನುಡಿಯಂತೆ ಕುಸುಮೆಯ ಬಯಕೆ, ಬೇಡಿಕೆಗಳು ದಿನೆ-ದಿನೇ ಹೆಚ್ಚಾಗುತ್ತವೆ. ತನ್ನನ್ನು ಅತಿಯಾಗಿ ಪ್ರೀತಿಸುವ ಗಂಡನಿಗೆ ಬಟ್ಟೆ, ಬಂಗಾರ, ಸಿನಿಮಾ, ಮಹಿಳಾ ಸಮಾಜ ಎಂದು ಹಲವಾರು ಹಂಬಲಗಳನ್ನು ವ್ಯಕ್ತಪಡಿಸಿ ದುಂದು ವೆಚ್ಚ ಮಾಡಹಚ್ಚುತ್ತಾಳೆ.

ಮಕ್ಕಳ ಹಂಬಲವನ್ನು ಹೊಂದಿದ್ದ ಕುಸುಮೆಗೆ ಮೊದಲೆರಡು ಹೆರಿಗೆಯಲ್ಲಿ ಮಕ್ಕಳು ಮರಣ ಹೊಂದಿದಾಗ ತುಂಬ ದಿಗಿಲುಗೊಳ್ಳುತ್ತಾಳೆ. ಹತಾಶಳಾಗಿ ಜ್ಯೋತಿಷಿಯ ಹತ್ತಿರ ತನಗೆ ಮಕ್ಕಳ

ಯೋಗವಿದೆಯೋ, ಇಲ್ಲವೋ ಎಂದು ಕೇಳುತ್ತಾಳೆ. ತನಗೆ ಮಕ್ಕಳ ಭಾಗ್ಯವಿದೆಯೆಂದೂ, ತನ್ನ ಗಂಡನಿಗೆ ಆ ಅದೃಷ್ಟವಿಲ್ಲವೆಂದು ಕೇಳಿ ತಿಳಿದಳು. ಅದರಿಂದ ಗಂಡನನ್ನು ಅಸಡ್ಡೆ ಮಾಡಲಾರಂಭಿಸಿದಳು. ಅನ್ಯರ ಮಕ್ಕಳನ್ನು ಕಂಡು ತನಗೆ ಮಕ್ಕಳಿಲ್ಲವಲ್ಲವೆಂದು ಮರುಗುತಿದ್ದಳು. ಆದರೆ ಅವಳಲ್ಲಿಯ ಮಕ್ಕಳ ಹಂಬಲ ಮಾತ್ರ ತೀವ್ರಗೊಳ್ಳುತ್ತಿತ್ತು. ಅದರೊಂದಿಗೆ ಲೈಂಗಿಕ ಹಸಿವು ಸೇರಿಕೊಂಡಾಗ ಕುಸುಮೆಯ ಅಂತರಂಗ ಪರ ಪುರುಷನನ್ನು ಬಯಸುತ್ತಿತ್ತು. "ಸ್ತ್ರೀ ಪುರುಷನಷ್ಟು ಇಂದ್ರಿಯಾಸಕ್ತಳು ಎಂದು ನಾನು ನಂಬುವುದಿಲ್ಲ. ಇಂದ್ರಿಯ ನಿಗ್ರಹ ಮಾಡುವುದು ಗಂಡಸಿಗಿಂತ ಹೆಚ್ಚು ಸುಲಭ" ಎಂಬ ಗಾಂಧೀಜಿಯವರ ಹೇಳಿಕೆ (ಕೃಷ್ಣಮೂರ್ತಿರಾವ್ (ಅನು) ೧೯೪೭; ೪೯) ಎಲ್ಲರಿಗೂ ಅನ್ವಯಿಸುವುದಿಲ್ಲ. ಲೈಂಗಿಕಾಸೆಯ ಮುಂದೆ ಸ್ತ್ರೀ-ಪುರುಷರು ಸಮಾನರು. ಲೈಂಗಿಕ ದೌರ್ಬಲ್ಯವನ್ನು ಇಬ್ಬರಲ್ಲೂ ಗುರುತಿಸಬಹುದು. ಇದರಿಂದಾಗಿಯೇ ಕುಸುಮೆ ತನ್ನ ಗಂಡನ ಸ್ನೇಹಿತ ವೆಂಕಪ್ಪನ ಸಖ್ಯವನ್ನು ಬಯಸುತ್ತಾಳೆ. ಅತ್ತ ವೆಂಕಪ್ಪನೂ ಸಹ ಹೆಂಡತಿ ಮಡಿದ ಮೇಲೆ ಒಬ್ಬಂಟಿಗನಾಗಿದ್ದನು. ಕಾಮದಾಹದಿಂದ ಆತನೂ ತೊಳಲಾಡುತ್ತಿದ್ದನು. ಇದರಿಂದ ವೆಂಕಪ್ಪನ ಮನದ ಮೂಲೆಯಲ್ಲಿ ಇಂತಹ ಅವಕಾಶದ ಸಲುವಾಗಿ ತವಕಿಸುತ್ತಿತ್ತು. ಕುಸುಮೆ ತನ್ನ ಸ್ನೇಹಿತನ ಹೆಂಡತಿ ಎಂಬುದನ್ನು ಮರೆತು ಅವಳೊಂದಿಗೆ ಸಖ್ಯವನ್ನು ಬೆಳೆಸುತ್ತಾನೆ. ಇದರಿಂದ ಅತೃಪ್ತ ಎರಡು ದೇಹಗಳು ಒಂದಾದವು. ಇದರ ಪ್ರತಿಫಲವಾಗಿ ಕುಸುಮೆಯು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆದರೆ ಇದು ಸುಬ್ಬಯ್ಯನಿಗೆ ಗೊತ್ತಾಗುವುದಿಲ್ಲ. ಆ ಮಗು ತನ್ನದೆಂದೇ ತಿಳಿದು ಪ್ರೀತಿಸುತ್ತಾನೆ.

ಕುಸುಮೆ ಮಕ್ಕಳ ಹಂಬಲದಿಂದಾಗಿ ವೆಂಕಪ್ಪನೊಂದಿಗೆ ದೈಹಿಕ ಸಂಬಂಧವನ್ನು ಹೊಂದಿ ಗಂಡು ಮಗು ಪಡೆದಳು. ಆದರೆ ಅವಳಿಗೆ ಅದರಿಂದ ತೃಪ್ತಿಯಾಗಲಿಲ್ಲ. ಮತ್ತೊಮ್ಮೆ ಅವನೊಂದಿಗೆ ಸೇರಲು ಬಯಸಿ ಅಧಃಪತನದತ್ತ ಸಾಗುವಳು. ವೆಂಕಪ್ಪನಿಂದ ಹೆಣ್ಣು ಮಗುವನ್ನು ಪಡೆಯುವಳು. ಕಾಲ ಕಳೆದಂತೆ ಕ್ರಮೇಣವಾಗಿ ಸುಬ್ಬಯ್ಯನಿಗೆ ಆ ಮಕ್ಕಳು ತನ್ನವಲ್ಲವೆಂಬುದು ತಿಳಿಯುತ್ತದೆ. ಏಕೆಂದರೆ ಆ ಸಮಯದಲ್ಲಿ ಸುಬ್ಬಯ್ಯನು ಅನಾರೋಗ್ಯದಿಂದ ಹಾಸಿಗೆಯಲ್ಲಿದ್ದನು. ಯಾವತ್ತೂ ಹೆಂಡತಿಯೊಂದಿಗೆ ಸಮಾಗಮ ಮಾಡಿರಲಿಲ್ಲ. ಇದಕ್ಕೆ ವೆಂಕಪ್ಪನೇ ಕಾರಣ ಎಂದು ತಿಳಿದು ತುಂಬ ದುಃಖಿಸುತ್ತಾನೆ. ಹೆಂಡತಿ ತನಗೆ ಮೋಸ ಮಾಡಿದಳೆಂದು ತುಂಬ ನೊಂದುಕೊಳ್ಳುತ್ತಾಳೆ.

ಮನೆಯಲ್ಲಿ ವಾಸಿಸುವುದು ಸುಖಕ್ಕಾಗಿಯಷ್ಟೇ. ಆ ಸುಖ ಪತ್ನಿ ಮೂಲಕವಾದುದು. ಹೆಂಡತಿ ಅನುಕೂಲಳಾಗಿದ್ದರೆ ಅದರಿಂದ ಸ್ವರ್ಗವೆ. ಹೆಂಡತಿ ಪ್ರತಿಕೂಲಳಾಗಿದ್ದರೆ ನರಕವೇ ಎಂಬಂತಾಯ್ತು ಸುಬ್ಬಯ್ಯನ ಮನಸ್ಥಿತಿ. ಮನಸ್ಸಿನ ವಿಪ್ಲವದಿಂದಾಗಿ ಸುಬ್ಬಯ್ಯನ ಆರೋಗ್ಯವು ಹಾಳಾಯ್ತು. ಆದರೆ ಕುಸುಮೆಗೆ ಮಾತ್ರ ತಾನು ಮಾಡಿದುದು ತಪ್ಪು ಎಂದು ಅನ್ನಿಸಲೇ ಇಲ್ಲ. ಪಶ್ಚಾತ್ತಾಪವೂ ಪಡಲಿಲ್ಲ. ಬದಲಿಗೆ ತಾನು ಮಾಡಿದ್ದೇ ಸರಿ ಎಂದು ಸಮರ್ಥಿಸಿಕೊಂಡಳು. ಒಂದು ವೇಳೆ ಕುಸುಮೆ ತಗ್ಗಿ-ಬಗ್ಗಿದ್ದರೆ, ಸುಬ್ಬಯ್ಯನಲ್ಲಿ ಕ್ಷಮೆ ಕೇಳಿದ್ದರೆ ಎಂಥಹ ಅಕ್ಷಮ್ಯ ಅಪರಾಧವನ್ನು ಸಹ ಆತನು ಮನ್ನಿಸುತ್ತಿದ್ದನು. ಆದರೆ ಕುಸುಮೆ ಮಾತ್ರ ತನ್ನ ಕಾರ್ಯದಿಂದಾಗಿ ಮುಜುಗರ ಪಡಲೆ ಇಲ್ಲ. ತನ್ನಿಂದ ತಾನೇ ತನ್ನ

ಸಂಸಾರವನ್ನು ಹಾಳು ಗೆಡವಿಕೊಳ್ಳುತ್ತಾಳೆ. ಕುಸುಮೆ ಹೆತ್ತು ತಾಯಿಯಾದಳೇನೋ ನಿಜ. ಆದರೆ ಸತ್ತು ತಾಯಿಯಾದಳು!

'ಹೆತ್ತಳಾ ತಾಯಿ' ಕಾದಂಬರಿಯಲ್ಲಿ ಮಹಿಳೆ ಸಂತಾನ ಪ್ರಾಪ್ತಿಗಾಗಿ ಏನೆಲ್ಲ ಮಾಡುವ ಸಾಧ್ಯತೆಯಿದೆ ಎಂಬುದನ್ನು ಚಿತ್ರಿಸಲಾಗಿದೆ. ಕೌಟಿಂಬಿಕ ವ್ಯವಸ್ಥೆಯಲ್ಲಿ ಮಕ್ಕಳನ್ನು ಪಡೆಯಲು ಸಾಧ್ಯವಾಗದಾಗ ದತ್ತುಪುತ್ರನನ್ನು ಪಡೆಯಬಹುದಾಗಿತ್ತು. ಆದರೆ ಪರ ಪುರುಷನ ಸಂಗದಿಂದಾಗಿ ಮಕ್ಕಳನ್ನು ಪಡೆದುದು ಅವಳ ಲೈಂಗಿಕ ದೌರ್ಬಲ್ಯವನ್ನು ಸೂಚಿಸುತ್ತದೆ. ಭಾರತೀಯ ಸಂಪ್ರದಾಯದಲ್ಲಿ 'ತಾಯಿಯೇ ದೇವರು', 'ಹೆಣ್ಣಿಗೆ ತಾಯ್ತನ ಅನಿವಾರ್ಯ' ಎಂಬ ಸಾಮಾಜಿಕ ಮೌಲ್ಯಗಳೇ ಕುಸುಮೆಗೆ ಅನೈತಿಕ ಮಾರ್ಗ ಹಿಡಿಯಲು ಕಾರಣವಾದವೇ ಎಂಬ ಅನುಮಾನ ಮೂಡುತ್ತದೆ. ಏಕೆಂದರೆ 'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ' ಎಂಬ ನಂಬಿಕೆ ನಮ್ಮ ಜಾನಪದ ಸಾಹಿತ್ಯದಲ್ಲಿಯೂ ಗುರುತಿಸಬಹುದು. ಮಕ್ಕಳಿಲ್ಲದವರಿಗೆ ಸಮಾಜದಲ್ಲಿ ಬಂಜೆ ಎಂದು ಹಿಯ್ಯಾಳಿಸಲಾಗುತ್ತದೆ. ಹೆಣ್ಣನ್ನು ದೇವರೆಂದು ಗುರುತಿಸದೆ, 'ತಾಯಿಯೇ ದೇವರು' ಎಂದು ನಂಬಿರುವ ಸಾಂಪ್ರದಾಯಿಕ ಸಮಾಜವು ಹೆಣ್ಣಿಗೆ ತಾಯ್ತನವನ್ನು ಅನಿವಾರ್ಯವಾಗಿಸಿದೆ. ಇದರಿಂದಾಗಿಯೇ ಬಂಜೆಯ ದುಃಖವನ್ನು ತಾಳಲಾರದ ಹೆಣ್ಣು 'ಕಂದನ ಕೊಡು ಶಿವನೆ, ಬಂಧನ ಪಡಲಾರೆ' ಎಂದು ಶಿವನಲ್ಲಿ ಮೊರೆಯಿಡುತ್ತಾಳೆ. ಈ ಸ್ಥಿತಿಯು ಇಂದು ಬದಲಾಗಬೇಕು ಎಂಬುದು ಕಾದಂಬರಿಯ ಆಶಯವಾಗಿದೆ.

ಅಸಹನೀಯ ಬದುಕು, ಸಂತಾನಾಪೇಕ್ಷೆಯಿಂದ ಪ್ರಚೋದಿತಗೊಳ್ಳುವ ಲೈಂಗಿಕತೆ "ಕುಡಿಯರ ಕೂಸು" ಕಾದಂಬರಿಯಲ್ಲಿದೆ. ಕೆಂಪಿಯದು ಅತೃಪ್ತ ಕಾಮಜೀವನ. ಮುಕ್ತ ಲೈಂಗಿಕತೆಗೆ ಮಾರು ಹೋಗಿದ್ದಳು. ಅದರ ಮೂಲಕ ತನಗೆ ಸಂತಾನಭಾಗ್ಯ ದೊರೆಯಬಹುದೆಂಬ ಆಶಾಭಾವನೆಯನ್ನು ಹೊಂದಿದ್ದಳು. ಅವಳ ಲೈಂಗಿಕ ದಾಹ ಕೇವಲ ದೈಹಿಕ ತೃಪ್ತಿಗೆ ಸೀಮಿತವಾಗಿರದೆ, ಮಕ್ಕಳ ಸಲುವಾಗಿ ಆತೊರೆಯುತ್ತಿತ್ತು. ತುಕ್ರನ ಸಾಹಸ, ಶೌರ್ಯವನ್ನು ಮೆಚ್ಚಿ ಮದುವೆಯಾದ ಕೆಂಪಿಯು ಅವನಿಂದ ಮಕ್ಕಳಾಗದೇ ಇದ್ದಾಗ ಹತಾಶಳಾಗುತ್ತಾಳೆ. ಇದರ ಕೊರಗನ್ನು ನೀಗಿಸಿಕೊಳ್ಳಲು ಬೂದನೊಂದಿಗೆ ಮದುವೆಯಾಗುತ್ತಾಳೆ. ಆದರೆ ಅವನಿಂದಲೂ ಮೈ ಸುಖದ ತೃಪ್ತಿಯು ಸಂಪೂರ್ಣ ದೊರೆಯದೆ ಹೋದಾಗ ಇತರ ಪುರುಷರಲ್ಲಿ ಪಡೆಯಲು ಬಯಸುತ್ತಾಳೆ. ಇದರಿಂದಾಗಿಯೇ ಚೆಲುವಿನ ಅಥವಾ ಬಲಿಷ್ಟ ಗಂಡುಗಳನ್ನು ಕಂಡಾಗಲೆಲ್ಲ ಅವಳ ಮನಸ್ಸು ಚಂಚಲವಾಗುತ್ತದೆ. ತಿರುಮಲ ಭಟ್ಟರೊಂದಿಗೂ ದೈಹಿಕ ಸಂಬಂಧವನ್ನು ಹೊಂದುವಳು. ಆದರೆ ಸಂತಾನಭಾಗ್ಯ ಮಾತ್ರ ದೊರೆಯಲಿಲ್ಲ. ಕಾಮದ ಹಸಿವು. ಸಂತಾನಾಪೇಕ್ಷೆಯಲ್ಲಿ ನೀಗದೆ ಇದ್ದಾಗ ಇತರರ ಸೌಂದರ್ಯ, ಅವರ ಮಕ್ಕಳನ್ನು ಕಂಡು ಕರುಬುತ್ತಾಳೆ. ಇದರಿಂದ ಅವಳ ಮಾನಸಿಕ ನೆಮ್ಮದಿಯು ಹಾಳಾಗುತ್ತದೆ. ಇದರಿಂದ ಕೆಂಪಿಯ ಬದುಕು ಆಘಾತವನ್ನು ಅನುಭವಿಸುತ್ತದೆ. ಮಾನಸಿಕ ಸ್ಥಿಮಿತವನ್ನು ಕಳೆದುಕೊಂಡು ಮರಣ ಹೊಂದುತ್ತಾಳೆ. ಮಾನವನ ಮನಸ್ಸಿನ ಮೇಲೆ ಕಾಮ-ಪ್ರೇಮಗಳು ಹೆಚ್ಚು ಒತ್ತಡವನ್ನು ತರುತ್ತವೆ. ಅವು ನಿರಾಸೆಯ ಹಂತದಲ್ಲಿ

ಹಿಂಸಾಚಾರದಂತಹ ಅಮಾನುಷ ವರ್ತನೆಯ ಸ್ಪರ್ಧೆ, ಅಸೂಯೆಗಳಿಗೆ ದಾರಿ ಮಾಡಿಕೊಡುತ್ತವೆ ಎಂಬುದನ್ನು ಕೆಂಪಿಯ ಪಾತ್ರದ ಮುಖಾಂತರ ನಿರೂಪಿಸಲಾಗಿದೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ಲೈಂಗಿಕತೆಯ ವಿಭಿನ್ನ ನಿಲುವುಗಳನ್ನು ಇಬ್ಬರು ಸ್ತ್ರೀಯರ ವ್ಯಕ್ತಿತ್ವದ ಮೂಲಕ ಪ್ರಕಟಿಸಲಾಗಿದೆ.

"ಇಂದ್ರಿಯಾಸಕ್ತಿ ನಿಗ್ರಹಿಸಿ ಅದಕ್ಕೊಂದು ಪವಿತ್ರ ಸ್ವರೂಪ ಕೊಡುವುದೇ ವಿವಾಹದ ಘನ ಉದ್ದೇಶ' ಎಂಬುದು ಗಾಂಧೀಜಿಯವರ (ಕೃಷ್ಣಮೂರ್ತಿ ರಾವ್ (ಅನು) ೧೯೪೭; ೪೯) ಧೋರಣೆಯಾಗಿತ್ತು. ಆದರೆ ಕಾರಂತರು ತಾಯ್ತನದ ಹಂಬಲವನ್ನು ಮದುವೆಯ ಚೌಕಟ್ಟಿನೊಳಗೆ ಪೂರೈಸಿಕೊಳ್ಳಬೇಕು. ಅದೂ ಪತಿಯಿಂದಲೇ ದೊರೆಯಬೇಕು ಎಂಬ ನಿಲುವನ್ನು ಹೊಂದಿದ್ದರು. ವಿವಾಹದ ಉದ್ದೇಶದ ವಿಚಾರಗಳಲ್ಲಿ ಕಾರಂತ ಮತ್ತು ಗಾಂಧೀಜಿಯವರಿಗೆ ಭಿನ್ನತೆಗಳಿವೆ. ಒಂದು ವಾಸ್ತವವಾಗಿದ್ದರೆ, ಮತ್ತೊಂದು ಆದರ್ಶವಾಗಿದೆ. "ಬತ್ತದ ತೊರೆ" ಕಾದಂಬರಿಯಲ್ಲಿ ತಾಯ್ತನದ ಹಂಬಲ ಮದುವೆಯ ಚೌಕಟ್ಟಿನೊಳಗೆ ನೀಗಬೇಕು ಎಂಬ ಆಶಯವಿದೆ. ತಾಯ್ತನದ ಹಂಬಲ, ತಾಯಿಯಾಗದೆ ತಾನು ಒಂಟಿಯಾಗಿ ಸಾಯಬಾರದು ಎಂಬ ಸ್ತ್ರೀಯರ ಮನೋವಿಲಾಸವನ್ನು ಈ ಕಾದಂಬರಿಯಲ್ಲಿ ಚರ್ಚಿಸಲಾಗಿದೆ. ಮನುಷ್ಯನ ಸುಖಕ್ಕೆ ಕಾಮ, ಪ್ರೇಮಗಳು ಎಷ್ಟು ಕಾರಣವಾಗುತ್ತವೆಯೋ ಅಷ್ಟೇನೆ ದುಃಖಕ್ಕೂ ಮೂಲವಾಗುತ್ತವೆ ಎಂಬುದನ್ನು ಕಾದಂಬರಿಕಾರರು ಸ್ತ್ರೀ ಪಾತ್ರಗಳ ಮೂಲಕ ನಿರೂಪಿಸಿದ್ದಾರೆ.

'ಮಂಜುಳೆ ವಿದ್ಯಾವಂತೆ, ತನ್ನ ಸಹಪಾಠಿ ಮನೋಹರನೊಂದಿಗೆ ಸ್ವಚ್ಛಂದವಾಗಿ ವಿಹರಿಸುತ್ತಿದ್ದಳು. ಅವನಿಂದ ಶರೀರದ ಬಯಕೆಯನ್ನು ಈಡೇರಿಸಿಕೊಂಡಳು. ಅವನಿಂದ ಗರ್ಭಧರಿಸಿ ಮದುವೆಯಾಗಲು ಬಯಸಿದಳು. ಆದರೆ ಮದುವೆಯಾಗಲು ಸಾಧ್ಯವಾಗದಿದ್ದಾಗ ನಿರಾಶಳಾಗಿ ಗರ್ಭಪಾತ ಮಾಡಿಸಿಕೊಳ್ಳುತ್ತಾಳೆ. ತಾನು ಮದುವೆಯಾಗಬೇಕು ಎಂಬ ಬಯಕೆಯಿಂದ ಪ್ರಿಯನನ್ನು ಅರಸುತ್ತಾಳೆ. ದುಡುಕುತನದಿಂದ ದೊರೆಸ್ವಾಮಿ ಎಂಬ ವಿವಾಹಿತನನ್ನು ಪ್ರೀತಿಸಿ ಗರ್ಭಧರಿಸುತ್ತಾಳೆ. ಅನೈತಿಕತೆಯಿಂದ ಕೂಡಿದ ಗರ್ಭವನ್ನು ಕರಗಿಸಿಕೊಳ್ಳುತ್ತಾಳೆ. ತಾನು ತಾಯಿಯಾಗಬೇಕು ಎಂಬ ಅಂಧ ವಿಶ್ವಾಸದಿಂದ ಯಾರ್ಯಾರೋ ಸಂಗಮಾಡಿ ನಿರಾಶಳಾಗುತ್ತಾಳೆ. "ಹೆಂಗಸರೆಲ್ಲರೂ ತಾಯಿಯರಾಗಲು ಹಂಬಲಿಸುವರೆಂಬುದು ನಿಜವೇ? ತಾಯ್ತನದ ಇಕ್ಕಟ್ಟು, ಆಯಾಸ, ಕ್ಲೇಶಗಳಿಂದ ಯಾರೂ ಯಾವತ್ತೂ ರೋಸಿ ಹೋಗಿಲ್ಲವೇ? ಆಯ್ಕೆಯ ಅವಕಾಶವನ್ನು ಮುಕ್ತವಾಗಿ ಕೊಟ್ಟರೂ ಸ್ತ್ರೀಯರೆಲ್ಲರೂ ತಾಯಿಯಂದಿರಾಗಲು ಓಡಿಹೋಗುತ್ತಾರೆಯೇ?" ಎಂಬ ವಿಜಯ ದಬ್ಬೆ(ಬರಗೂರು ರಾಮಚಂದ್ರಪ್ಪ (ಸಂ) ೧೯೯೩; ೬)ಯವರ ಪ್ರಶ್ನೆಯು ಕುತೂಹಲಕಾರಿಯಾಗಿದೆ. ಕಾದಂಬರಿಕಾರರು ಹೆಣ್ಣನ್ನು ತಾಯಿಯಾಗಿಯೇ ಚಿತ್ರಿಸಲು ಬಯಸಿದ್ದಾರೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಅವರ ಒಲವು 'ತಾಯಿಯೇ ದೇವರು' ಎಂಬ ಸಾಂಪ್ರದಾಯಿಕ ಮೌಲ್ಯದ ಕಡೆಗೆ ಇರುವುದು ವ್ಯಕ್ತವಾಗುತ್ತದೆ.

ಮಂಜುಳೆ ಅನಾಥಾಲಯದ ಮೇಲ್ವಿಚಾರಕಿಯಾಗಿ ಕಾರ್ಯನಿರ್ವಹಿಸುತ್ತಾಳೆ. ಆದರೆ ಅಲ್ಲಿಯ ಮಕ್ಕಳಲ್ಲಿ ತನ್ನದು ಎಂಬ ಭಾವನೆ ಅವಳಿಗೆ ಬರುವುದೇ ಇಲ್ಲ. ಅದಕ್ಕಾಗಿ ಅವಳು ತುಂಬ ಸಂಕಟ ಪಡುತ್ತಾಳೆ. "ನಾನು ತಾಯಿಯಾಗದೆ ಸಾಯಲಾರೆ, ನಾನು ಹೆಣ್ಣು; ಅದಕ್ಕಾಗಿ ಹುಟ್ಟಿದವಳು ನಾನು

ಎಂದು ನನ್ನ ಹೃದಯ ಹೇಳುತ್ತದೆ" (೨೦೦೩ ಸಂ.೯, ಕಾ.೮, ೪೯೫) ಎಂದು ತನ್ನ ಗೆಳತಿಯೊಂದಿಗೆ ದುಃಖವನ್ನು ತೋಡಿಕೊಳ್ಳುತ್ತಾಳೆ. ಮದುವೆಯ ಚೌಕಟ್ಟಿನೊಳಗೆ ತಾನು ತಾಯಿಯಾದಲ್ಲಿ ಮಾತ್ರ ಅದು ಅರ್ಥಪೂರ್ಣವಾದುದು, ಸಹಜವಾದುದು ಎಂಬ ಭಾವನೆಯನ್ನು ಮಂಜುಳೆಯು ಹೊಂದಿದ್ದಳು.

ನಗರದ ವಿದ್ಯಾವಂತ ಮಹಿಳೆಯರ ಕುರಿತು ಕಾದಂಬರಿಕಾರರಲ್ಲಿ ಸ್ಪಷ್ಟವಾದ ನಿಲುವು ಇರದೆ ಇರುವುದು ಸ್ಪಷ್ಟವಾಗುತ್ತದೆ. ಮಂಜುಳೆ ತಾನು ತಾಯಿಯಾಗಬೇಕೆಂದು ಬಯಸುವುದು ಸಹಜವಾಗಿದೆ. ಆದರೆ ಮದುವೆಗೆ ಮುಂಚೆನೆ ಎರಡು ಬಾರಿ ಗರ್ಭಧರಿಸಿ, ಮದುವೆಯಾಗದೆ ನಿರಾಶಳಾಗಿ ಗರ್ಭಪಾತ ಮಾಡಿಸಿಕೊಳ್ಳುವುದು ವಾಸ್ತವ ಎನಿಸಲಾರದು. ಕಾದಂಬರಿಯಲ್ಲಿ ಉದ್ದೇಶಪೂರ್ವಕವಾಗಿಯೇ ಮಂಜುಳೆಯ ಜೀವನ ಅಸ್ತವ್ಯಸ್ತವಾಗುವಂತೆ ಚಿತ್ರಿಸಲಾಗಿದೆ. ಅನಾಥಾಲಯದ ಮೇಲ್ವಿಚಾರಕಿಯಾಗಿ ಕಾರ್ಯನಿರ್ವಹಿಸುವ ಅವಳಿಗೆ ಅಲ್ಲಿಯ ಮಕ್ಕಳಲ್ಲಿ ತನ್ನದು ಎಂಬ ಭಾವನೆ ಬರುವುದಿಲ್ಲ ಎಂಬಂತೆ ಕಾದಂಬರಿಯಲ್ಲಿ ಬಿಂಬಿಸಲಾಗಿದೆ. ಮಕ್ಕಳನ್ನು ಪಡೆಯದ ವೃದ್ಧೆಯರು ಲೋಕದ ಮಕ್ಕಳನ್ನು ತಮ್ಮ ಮಕ್ಕಳೆಂದು ತಿಳಿಯಲು ಸಾಧ್ಯವಾಗುತ್ತದೆ. ಆದರೆ ನಗರದ ವಿದ್ಯಾವಂತ ಮಹಿಳೆಯರಿಗೆ ಅದು ಸಾಧ್ಯವಾಗುವುದಿಲ್ಲ. ಇದರಿಂದ ಗ್ರಾಮೀಣ ಮಹಿಳೆಯರ ಕಡೆಗೆ ಕಾದಂಬರಿಕಾರರ ಒಲವಿರುವುದು ಸ್ಪಷ್ಟವಾಗುತ್ತದೆ. ಸ್ತ್ರೀ ಸಮುದಾಯವನ್ನು ಸಮಾನರಾಗಿ ಕಾಣದೆ ಅವರಲ್ಲಿಯೆ ಭೇದ-ಭಾವ ಗುರುತಿಸಿರುವುದು ಸ್ಪಷ್ಟವಾಗುತ್ತದೆ. ಮಂಜುಳೆಯ ಪಾತ್ರದಿಂದ ಲೈಂಗಿಕತೆಯು ವಿವಾಹ ಬಂಧನದಲ್ಲಿ ನೆರವೇರಿದರೆ ಮಾತ್ರ ಜೀವನ ಸಾರ್ಥಕವಾಗುವುದು. ವಿವಾಹ ಬಾಹಿರವಾಗಿದ್ದರೆ ಮನಃಶಾಂತಿಯನ್ನು ಕದಡಿಸುವುದು ಎಂಬ ಸತ್ಯಾಂಶವನ್ನು ನಿರೂಪಿಸಲಾಗಿದೆ,

ತಮ್ಮ ಗಂಡಂದಿರ ಆತ್ಮವಂಚನೆ, ಅಪ್ರಮಾಣಿಕತೆಯನ್ನು ಬಯಲಿಗೆಳೆಯುವಲ್ಲಿ ಹೆಂಡತಿ ಯಾವ ಮಾರ್ಗ ಹಿಡಿಯಬಹುದು ಎಂಬುದರ ಉಲ್ಲೇಖ 'ಒಂಟಿದನಿ' ಕಾದಂಬರಿಯಲ್ಲಿದೆ. ಚಂದೂಲಾಲ್ ಶಹಾ ಮಧ್ಯಮ ವಯಸ್ಸಿನವರಾಗಿದ್ದು, ಕಾಂತಿಬೆನ್ ಎಂಬ ಯುವತಿಯನ್ನು ಮದುವೆಯಾಗುತ್ತಾರೆ. ತಮಗೆ ಮಕ್ಕಳಾಗದಂತೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರೂ ಹೆಂಡತಿಯಿಂದ ಆ ವಿಷಯವನ್ನು ಮರೆಮಾಚಿದ್ದರು. ಮಕ್ಕಳ ವಿಷಯ ಬಂದಾಗಲೆಲ್ಲ ಚಂದೂಲಾಲ್ ಶಹಾರವರು 'ಕರ್ಮಸಿದ್ಧಾಂತ'ದ ಬಗೆಗೆ ಉಪನ್ಯಾಸ ಮಾಡುತ್ತ ಮಕ್ಕಳಾಗದಿರುವುದಕ್ಕೆ ಪೂರ್ವ ಜನ್ಮದ 'ಕರ್ಮಫಲ'ವೇ ಕಾರಣ ಎಂದು ಹೇಳುತ್ತ, ಅವಳನ್ನು ಸಮಾಧಾನ ಪಡಿಸುತ್ತಿದ್ದರು. ಇದರಿಂದ ಕಾಂತಿಬೆನ್ ಸಂತಾನದ ಹಂಬಲದಿಂದಾಗಿ ಹಲವಾರು ದೇವರಿಗೆ ಹರಕೆ ಹೊರುವಳು.

ಕಾಲಕ್ರಮೇಣವಾಗಿ ಕಾಂತಿಬೆನ್‌ಗೆ ತನಗೆ ಮಕ್ಕಳಾಗದಿರಲು ತನ್ನ ಗಂಡನೆ ಕಾರಣವೆಂದು ತಿಳಿಯುತ್ತದೆ. ಅವರು ಮಕ್ಕಳಾಗದಿರುವಂತೆ ಮಾಡಿಸಿಕೊಂಡ ಶಸ್ತ್ರ ಚಿಕಿತ್ಸೆ ಬಗ್ಗೆ ಕೇಳಿ ಕಾಂತಿಬೆನ್‌ಗೆ ದುಃಖವಾಗುತ್ತದೆ. ತನಗೆ ಶಹಾರವರಿಂದ ಅನ್ಯಾಯವಾಯಿತೆಂದು ಮರುಗುತ್ತಾಳೆ. ಮಕ್ಕಳ ಹಂಬಲವಿರುವ ಅವಳು ಅನಂತಕೃಷ್ಣನತ್ತ ಒಲವು ತೋರಿಸುವಳು. ಅವನಿಂದ ತನ್ನ ಕೊರಗನ್ನು ನೀಗಿಸಿಕೊಳ್ಳಲು ಪ್ರಯತ್ನಿಸಿದಳು. ಅವನೊಂದಿಗೆ ದೈಹಿಕ ಸಂಬಂಧವನ್ನು ಹೊಂದಿ ಗರ್ಭವತಿಯಾಗುವಳು. "ಭೋಗ ಕ್ರಿಯೆ ಕಳೆದ

[illegible]

[illegible]

ಬಳಿಕವೂ ಮನುಷ್ಯನ ಭಾವನೆಗಳ ಒತ್ತಡವು ಉಳಿಯುತ್ತದೆ. ಪ್ರಣಯವು ಕ್ರಮೇಣ ಗೆಳೆತನವಾಗಿ ಪರಿಣಮಿಸುತ್ತದೆ" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ ಹುಚ್ಚು ಮನಸ್ಸಿನ ಹತ್ತು ಮುಖಗಳು ಕೃತಿಯಲ್ಲಿ ಹೇಳಿರುವುದನ್ನು ನೆನಪಿಸಿಕೊಳ್ಳಬಹುದು. (೨೦೦೪;೧೩೮) ಅವರೀರ್ವರಲ್ಲಿ ಸ್ನೇಹ ಉಳಿದುಕೊಳ್ಳುತ್ತದೆ.

ಕಾಂತಿಬೆನ್ ಗರ್ಭವತಿಯಾದುದನ್ನು ಕಂಡು ಚಂದೂಲಾಲ್ ಶಹಾರಿಗೆ ಆಶ್ಚರ್ಯ. ಅನುಮಾನಗಳು ಉಂಟಾದವು. ಅವಳಿಗೆ ನೀನು ಅಪ್ರಮಾಣಿಕಳು ಎಂದು ಗದರಿಸಿದರು. ಇದಕ್ಕೆ ಪ್ರತಿಯಾಗಿ ಕಾಂತಿಬೆನ್‌ಳು "ಅದಕ್ಕೆ ಕಾರಣರಾದವರಿದ್ದರೆ ಅದು ನೀವೇ... ಮದುವೆ ಮಾಡಿಕೊಂಡು ಮನೆಗೆ ಕರೆದು ತಂದು, ನನಗೆ ತಿಳಿಸದೆಯೇ ಮಕ್ಕಳಾಗದಂತೆ ಚಿಕಿತ್ಸೆ ಮಾಡಿಕೊಂಡವರು. ನನಗಂತು ಮಕ್ಕಳು ಬೇಕೇ ಬೇಕೆಂದಿದೆ. ನಿಮ್ಮ ವಿಲೆಪಾರ್ಲೆಯ....." ಎಂದಾಗ (೧೯೯೧; ೧೭೬-೧೭೭) ಶಹಾರವರು ಥರಥರಿಸಿದರು. ತಮ್ಮ ತಪ್ಪನ್ನರಿತ ಅವರು ಮರುಮಾತಾಡದೆ ಸುಮ್ಮನಾದರು.

ಕಾದಂಬರಿಯಲ್ಲಿ ಕಾಂತಿಬೆನ್‌ಳ ಕ್ರಿಯೆಗೆ ಸಹಾನುಭೂತಿಯ ಧ್ವನಿಯಿದೆ. ಸಹೃದಯ ಓದಗರೂ ಸಹ ಅದನ್ನು ಸಹಾನುಭೂತಿಯಿಂದ ಸ್ವೀಕರಿಸುತ್ತಾರೆ. ಕಾರಣ ಇಲ್ಲಿ ಮನೋವೈಜ್ಞಾನಿಕವೇ ಹೊರತು ನೈತಿಕವಲ್ಲ. ಮನೋವೈಜ್ಞಾನಿಕತೆ ನೈತಿಕತೆಗಿಂತ ಹೆಚ್ಚು ಮೃದುವಾಗಿ ಮನುಷ್ಯ ಸಂಬಂಧಗಳನ್ನು ಅಳೆದು ನೋಡುತ್ತದೆ. "ಸಂತಾನಾಸಕ್ತಿ ಇಲ್ಲದವನು ವಿವಾಹವನ್ನೇ ಮಾಡಿಕೊಳ್ಳಬಾರದು. ಇಂದ್ರಿಯ ತೃಪ್ತಿಗಾಗಿ ಮಾಡಿಕೊಳ್ಳುವ ಮದುವೆ ಮದುವೆಯೇ ಅಲ್ಲ; ವ್ಯಭಿಚಾರ" ಎಂಬ ಗಾಂಧೀಜಿಯವರ (ಕೃಷ್ಣಮೂರ್ತಿರಾವ್ (ಅನು) ೧೯೪೭; ೪೬) ಹೇಳಿಕೆಯಂತೆ ಚಂದೂಲಾಲ್ ಶಹಾರವರ ವರ್ತನೆಯು ಖಂಡನೀಯವಾಗಿದೆ.

ಸಮಕಾಲೀನ ಕಾದಂಬರಿಗಳಲ್ಲಿ ಇಂತಹ ಹಲವಾರು ಪ್ರಸಂಗಗಳನ್ನು ಗುರುತಿಸಬಹುದು. ಇನಾಂದಾರರ 'ಮಂಜು ಮುಸುಕಿದ ದಾರಿ' (೧೯೬೫) ಕಾದಂಬರಿಯಲ್ಲಿ ತನ್ನ ಗಂಡನಿಂದ ಪಡೆಯದ ಸಂತಾನವನ್ನು ಪರ ಪುರುಷನಿಂದ ಪಡೆಯುವ ಸುಮಿತ್ರೆಯ ವರ್ತನೆಯನ್ನು ಸಹಾನುಭೂತಿಯಿಂದ ಕಾಣಲಾಗಿದೆ. ಗೋಪಾಲ ಅನುವಂಶಿಕವಾಗಿ ಬಂದ ದೋಷಿತ ಸಂತಾನವನ್ನು ಮುಂದುವರೆಸಲು ಬಯಸದೆ 'ಸಂತಾನ ಹರಣ' ಚಿಕಿತ್ಸೆ ಮಾಡಿಸಿಕೊಂಡಿರುತ್ತಾನೆ. ಇದರಿಂದ ಅವನ ಹೆಂಡತಿ ಸುಮಿತ್ರೆ ಪರ ಪುರುಷ ಸುಬ್ಬರಾಯನೊಂದಿಗೆ ಸಂಬಂಧವನ್ನು ಹೊಂದಿದಾಗ, ತನ್ನಿಂದ ದೊರೆಯದಿರುವುದನ್ನು ಬಯಸಿ ಅವಳು ಸುಬ್ಬರಾಯನನ್ನು ಆಪೇಕ್ಷಿಸಿದ್ದಾಳೆ ಎಂದು ಸಂಕಟ ಪಡುತ್ತಾನೆ. ಆದರೆ ಸುಮಿತ್ರೆ ಮಕ್ಕಳಿಗಾಗಿ ಹಂಬಲಿಸಬಾರದೆಂದು ಬಯಸುವುದಿಲ್ಲ. ಅವಳ ಸಂತೋಷವೇ ಮುಖ್ಯವೆಂದು ಭಾವಿಸಿ ಅವಳ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವುದಿಲ್ಲ. "ಸುಮಿತ್ರೆಯ ಸ್ತ್ರೀ ಸ್ವಾತಂತ್ರ್ಯ, ಸ್ವೇಚ್ಛಾಚಾರಕ್ಕೆ ಹರಿದು ಲೈಂಗಿಕ ಆಸಕ್ತಿಯಾಗಿ ಪರಿಣಮಿಸಿದುದರ ಚಿತ್ರಣ ಇಲ್ಲಿದೆ" ಎಂದು ಮೋಹನ ಕುಂಟಾರ್ (೧೯೯೪; ೩೫) ಅವರು ಗುರುತಿಸಿದ್ದಾರೆ.

ಶಿವರಾಮ ಕಾರಂತರ ಹಾಗೂ ಇನಾಂದಾರರ ವಿಚಾರಗಳಲ್ಲಿ ಸಾಮ್ಯವಿದೆ. ಗಂಡನಿಂದ ಮಕ್ಕಳನ್ನು ಪಡೆಯಲು ಸಾಧ್ಯವಾಗದಾಗ ಮಕ್ಕಳ ಬಯಕೆಯಿಂದ ಅನ್ಯಪುರುಷರೊಂದಿಗೆ ಸಮಾಗಮ ಹೊಂದಿ ಮಕ್ಕಳನ್ನು ಪಡೆಯುವ ಸಾಧ್ಯತೆಯಿದೆ ಎಂಬುದರ ಉಲ್ಲೇಖವಿದೆ. ಹೆಣ್ಣಿಗೆ ತಾಯ್ತನ ಅಮೂಲ್ಯವಾದುದು

[illegible]

ಎಂಬ ಮೌಲ್ಯವನ್ನು ಪ್ರತಿಪಾದಿಸುತ್ತಾರೆ. ಆದರೆ ಭೈರಪ್ಪನವರ 'ಜಲಪಾತ' (೧೯೬೭) ಕಾದಂಬರಿಯಲ್ಲಿ ಸ್ತ್ರೀಯು ಅನ್ಯ ಪುರುಷನಿಂದ ಗರ್ಭಧಾರಣೆ ಮಾಡಲು ಬಯಸುವುದಿಲ್ಲ ಎಂಬುದರ ಪರಾಮರ್ಶೆ ಇದೆ. ನಾಡಗೌಡ-ಸುಧಾಬಾಯಿ ದಂಪತಿಗಳಾಗಿದ್ದರು. ನಾಡಗೌಡನಿಗೆ ಸಕ್ಕರೆ ಖಾಯಿಲೆಯಿತ್ತು. ಅದರಿಂದ ತನ್ನ ಮುಂದಿನ ಸಂತಾನವೂ ತೊಂದರೆಗೆ ಸಿಲುಕಬಾರದು ಎಂಬ ವಿಪರೀತ ಬುದ್ಧಿಯನ್ನು ಹೊಂದಿದ್ದನು. ಇದರಿಂದ ತನ್ನಿಂದ ಮಕ್ಕಳಾಗಬಾರದೆಂದು 'ಸಂತಾನ ಹರಣ' ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುತ್ತಾನೆ. ಬೇರೆ ಪುರುಷನ ವೀರ್ಯದಿಂದ ಮಕ್ಕಳನ್ನು ಪಡೆಯುವ ಯೋಜನೆ ಕುರಿತು ಹೆಂಡತಿಯೊಂದಿಗೆ ಸಮಾಲೋಚಿಸುತ್ತಾನೆ. ಆದರೆ ಸಂಪ್ರದಾಯಶೀಲಳಾದ ಸುಧಾಬಾಯಿಯು ಅದಕ್ಕೆ ಸಮ್ಮತಿಸುವುದಿಲ್ಲ. ಪತಿವ್ರತೆಯಾದ ತಾನು ಈ ಕೆಲಸಕ್ಕೆ ಒಪ್ಪಲಾರೆ ಎಂದು ಹೇಳುತ್ತಾಳೆ. ಗಂಡನ ಒತ್ತಡ ಹೆಚ್ಚಾದಾಗ ಚಲಿಸುವ ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. 'ವಿಪರೀತ ಬುದ್ಧಿ ವಿನಾಶಕ್ಕೆ ಕಾರಣ' ಎಂಬಂತೆ ನಾಡಗೌಡ ತನ್ನ ಪತ್ನಿಯ ಸಾವಿಗೆ ಕಾರಣನಾಗುತ್ತಾನೆ. ಈ ಕಾದಂಬರಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಲಾಗಿದೆ.

ವೇಶ್ಯೆಯರಲ್ಲಿಯೂ ತಾಯ್ತನದ ಹಂಬಲವಿರುತ್ತದೆ ಎಂಬುದನ್ನು "ಮೈ ಮನಗಳ ಸುಳಿಯಲ್ಲಿ" ಕಾದಂಬರಿಯಲ್ಲಿ ಗುರುತಿಸಲಾಗಿದೆ. ಮಂಜುಳೆಯು ಸುಬ್ರಾಯ ಉಳ್ಳೂರು ಅವರನ್ನು ತುಂಬ ಪ್ರೀತಿಸುತ್ತಿದ್ದಳು. ಅವಳಿಗೆ ಅವರಿಂದ ಕೇವಲ ಮಾನಸಿಕ ತೃಪ್ತಿ ದೊರೆಯಿತೆ ಹೊರತು ದೈಹಿಕ ತೃಪ್ತಿ ಮಾತ್ರ ದೊರೆಯಲಿಲ್ಲ. ಇದರಿಂದಾಗಿ ಅವಳಲ್ಲಿರುವ 'ಮಕ್ಕಳ ಹಂಬಲ' ಈಡೇರುವುದಿಲ್ಲ. ಮಗುವಿನ ಹಂಬಲದಿಂದಾಗಿ ಮುರುಗೋಡು ನಂಜಪ್ಪ ಅವರೊಂದಿಗೆ ದೈಹಿಕವಾಗಿ ಸಂಧಿಸುತ್ತಾಳೆ. ಮಗುವಿನ ಜನನವಾಗುತ್ತದೆಯಾದರೂ ಮಗು ಸತ್ತು ಹುಟ್ಟುತ್ತದೆ. ಗಂಡಸರಿಗೆ ಲೈಂಗಿಕ ತೃಪ್ತಿಯನ್ನು ಕೊಡುವುದೇ ಉಪಜೀವನವಾದ ಸೂಳೆ, ಸ್ವತಃ ಒಮ್ಮೆ ಕೂಡ ಮೈ ಮನಗಳೆರಡಕ್ಕೂ ಸಮಾನ ಸಂತುಷ್ಟಿ ಕೊಡುವ ಸಂಸರ್ಗವನ್ನು ಪಡೆಯಲು ಸಾರ್ಥಕವಾಗುವುದಿಲ್ಲ.

೭. ಪ್ರತಿಭಟನೆ

ಲೈಂಗಿಕ ಪ್ರವೃತ್ತಿ ಪ್ರಕೃತಿದತ್ತವಾದ ವರ. ಅದು ಸ್ವಚ್ಛಂದವಾದ ವಾತಾವರಣವನ್ನು ಬಯಸದೆ, ಕೌಟುಂಬಿಕ ಚೌಕಟ್ಟು, ಪರಸ್ಪರ ಪ್ರೀತಿ ವಿಶ್ವಾಸ, ನಂಬಿಕೆ ಹಾಗೂ ಭದ್ರತೆಯನ್ನು ಬಯಸುತ್ತದೆ. ಇಲ್ಲದಿದ್ದರೆ ಅದನ್ನು ತಿರಸ್ಕರಿಸುತ್ತದೆ.

ಹೆಣ್ಣಿನ ಮುಗ್ಧನಗೆ ಎಷ್ಟರಮಟ್ಟಿಗೆ ಅಪಾರ್ಥವನ್ನು ಮೂಡಿಸುತ್ತದೆ ಎಂಬುದನ್ನು 'ಬೆಟ್ಟದ ಜೀವ' ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ. ಗೋಪಾಲಯ್ಯ ಶಂಕರಿಯವರ ಆಶ್ರಯದಲ್ಲಿ ನಾರಾಯಣ ಲಕ್ಷ್ಮಿಯರದು ಉತ್ತಮ ದಾಂಪತ್ಯ ಜೀವನವಾಗಿತ್ತು. ಶಂಕರಿಯ ಮಗ ಶಂಭುನನ್ನು ಕಂಡರೆ ಲಕ್ಷ್ಮಿಗೆ ಗೌರವದ ಭಾವನೆಯಿತ್ತು. ಸಹೋದರನೆಂಬಂತೆ ಅವನೊಂದಿಗೆ ತುಂಬ ಸಲುಗೆಯಿಂದ ನಗು-ನಗುತ್ತ ನಡೆದುಕೊಳ್ಳುತ್ತಿದ್ದಳು. ಆದರೆ ಇಂದಿಗೂ ಸಮಾಜದಲ್ಲಿ ಹೆಣ್ಣಿನ ನಗುವನ್ನು ಅಪಾರ್ಥ

ಮಾಡಿಕೊಳ್ಳಲಾಗುತ್ತದೆ. ಶಂಭು ಕೂಡ ಲಕ್ಷ್ಮಿಯ ವಾತ್ಸಲ್ಯದ ನಗುವನ್ನು ಅಪಾರ್ಥವಾಗಿ ಕಲ್ಪಿಸಿಕೊಂಡನು. ಅವಳ ಬಗೆಗೆ ಮನದಲ್ಲಿ ಕಾಮದ ಆಸೆಯನ್ನು ಬೆಳೆಸಿಕೊಂಡನು. ಅದನ್ನು ಸಾಧಿಸಲು ಒಂದು ದಿನ ಅವಳನ್ನು ಮುಟ್ಟಲು ಹೋದಾಗ ಲಕ್ಷ್ಮಿ ಆತಂಕಗೊಂಡಳು. ತಮಗೆ ಆಶ್ರಯ ನೀಡಿದವರ ಮಗನೆಂಬ ಕಾರಣಕ್ಕೆ ಶಂಭುನೊಂದಿಗೆ ಸಲುಗೆ ಹೊಂದಿದ್ದಳೇ ಹೊರತು ಅನ್ಯತಾ ಯಾವ ದೃಷ್ಟಿಯಿಂದಲೂ ಅಲ್ಲ. ಅದಕ್ಕಾಗಿಯೇ ಅವಳು ಶಂಭುವಿನ ವರ್ತನೆಯನ್ನು ಖಂಡಿಸುತ್ತಾಳೆ. ಈ ವಿಷಯವನ್ನು ಗೋಪಾಲಯ್ಯ -ಶಂಕರಿಯರಿಗೆ ತಿಳಿಸದೆ ತನ್ನ ಗಂಡನಿಗೆ ತಿಳಿಸುವಳು. ಇದರಿಂದ ವೃದ್ಧದಂಪತಿಗಳ ಮನಸ್ಸಿಗೆ ನೋವಾಗುವುದನ್ನು ತಡೆಯುವಳು. ಇಲ್ಲಿ ಲಕ್ಷ್ಮಿಯು ದುಡುಕತನದಿಂದಾಗಿ ವರ್ತಿಸದೆ ಜಾಗರೂಕತೆಯಿಂದ ನಡೆದುಕೊಳ್ಳುವಳು. ಇದು ಅವಳ ಮನೋನಿಗ್ರಹವನ್ನು ಗುರುತಿಸುತ್ತದೆ.

ಸರಸ ದಾಂಪತ್ಯ, ವಿರಸ ಬಾಳು, ಅತೃಪ್ತ ಕಾಮ, ಅಸಹನೀಯ ಬದುಕು ಸಂತಾನಾಪೇಕ್ಷೆಯಿಂದ ಪ್ರಚೋದಿತಗೊಳ್ಳುವ ಲೈಂಗಿಕತೆ "ಕುಡಿಯರ ಕೂಸು" ಕಾದಂಬರಿಯ ಪ್ರಮುಖ ವಿಷಯಗಳಾಗಿವೆ. ಲೈಂಗಿಕತೆಯ ವಿಭಿನ್ನ ನಿಲುವುಗಳನ್ನು ಕಾದಂಬರಿಯಲ್ಲಿ ಚರ್ಚಿಸಲಾಗಿದೆ. ತುಕ್ರನು ಚಿಕ್ಕಿಯೊಂದಿಗೆ ಗುಪ್ತವಾಗಿ ದೈಹಿಕ ಸಂಬಂಧವನ್ನು ಹೊಂದಿದ್ದನು. ಆದರೆ ಆ ಗುಪ್ತ ಸಂಬಂಧ ಅವಳ ಗರ್ಭಧಾರಣೆಯಿಂದ ಹೊರಪ್ರಪಂಚಕ್ಕೆ ಗೋಚರಿಸುವಂತಾಗುತ್ತದೆ. ಇದರಿಂದ ಭಯಭೀತಳಾದ ಚಿಕ್ಕಿಯು 'ಮಾನ ಕಳೆದುಕೊಂಡಿರಲಾರೆ, ಮದುವೆಯಾಗುವುದಾದರೆ ಒಡನೆಯೇ ಆಗಬೇಕೆಂದು' ಆಗ್ರಹಿಸಿದಳು. (೨೦೦೩, ಸಂ-೭, ಕಾ-೬, ೧೮೬) ಮಲೆಕುಡಿಯರಲ್ಲಿ ಕಾಮವು ಮುಕ್ತವಾಗಿರದೆ, ಕೌಟುಂಬಿಕ ಚೌಕಟ್ಟಿನೊಳಗೆ ನಡೆಯಬೇಕಿತ್ತು. ಅಂತೆಯೇ ಚಿಕ್ಕಿಯು ಮದುವೆಗೆ ಮುಂಚೆಯೇ ಗರ್ಭಧರಿಸಲು ಸಿದ್ಧಳಿರಲಿಲ್ಲ. ಮದುವೆಗೆ ಮುಂಚೆ ತಾಯ್ತನವನ್ನು ಸಮಾಜ ಒಪ್ಪುವುದಿಲ್ಲ ಎಂಬುದನ್ನು ಚಿಕ್ಕಿಯ ಪಾತ್ರದಿಂದ ಕಾದಂಬರಿಯಲ್ಲಿ ವಿವೇಚಿಸಲಾಗಿದೆ.

"ಇಂಗ್ಲೆಂಡಿನಲ್ಲಿಯೂ ಭಾರತದ ಸಂಸ್ಕೃತಿಯನ್ನು ಕಾಣಬಹುದು" ಎಂಬುದನ್ನು 'ಒಡಹುಟ್ಟಿದವರು' ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ. ಸುಧಾಕರನು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋಗಿದ್ದನು. ವಿವಾಹಿತನಾದ ಆತನು ಎಮಿಲಿಯೊಂದಿಗೆ ಸ್ನೇಹ ಬಯಸಿ ತಾನು ವಿವಾಹಿತ ಎಂಬುದನ್ನು ಮರೆಮಾಚುತ್ತಾನೆ. ಎಮಿಲಿಯೂ ಸಹ ಅದನ್ನು ನಂಬಿ ಸುಧಾಕರನನ್ನು ಪ್ರೀತಿಸುತ್ತಿದ್ದಳು. ಮದುವೆಯಾಗಲು ಬಯಸಿದಳು. ಭಾರತೀಯನಾದ ಸುಧಾಕರನ ಬಗೆಗೆ ಅವಳಿಗೆ ಪ್ರೀತಿ, ಗೌರವ, ಅಭಿಮಾನವಿತ್ತು. ಭಾರತೀಯ ಸಂಸ್ಕೃತಿಯ ಬಗ್ಗೆ ಅವಳಿಗೆ ಗೌರವವಿತ್ತು. ಅದರಿಂದಾಗಿಯೇ ಸುಧಾಕರನೊಂದಿಗೆ ಮದುವೆಯಾಗುವ ಕನಸನ್ನು ಹೊಂದಿದ್ದಳು. ಆದರೆ ಸುಧಾಕರನು ವಿವಾಹಿತನೆಂದು ತಿಳಿದಾಗ ತನ್ನ ನಿರ್ಧಾರವನ್ನು ಬದಲಿಸುತ್ತಾಳೆ. 'ಪಾಶ್ಚಿಮಾತ್ಯ ಸ್ತ್ರೀಯರೆಂದರೆ ಮುಕ್ತ ಕಾಮಕ್ಕಾಗಿ ಹಾತೊರೆಯುವರು' ಎಂಬ ವಿಚಾರದಲ್ಲಿ ಹುರುಳಿಲ್ಲ ಎಂಬುದನ್ನು ಎಮಿಲಿಯ ಪಾತ್ರದಿಂದ ಸ್ಪಷ್ಟಪಡಿಸಲಾಗಿದೆ. ಇಂಗ್ಲೆಂಡಿನಲ್ಲಿಯೂ ಭಾರತದ ಆಚಾರ ವಿಚಾರವನ್ನು ಗೌರವಿಸುವ, ಅದನ್ನು ಜೀವನದಲ್ಲಿಯೂ ಅಳವಡಿಸಿಕೊಳ್ಳುವ ಸ್ತ್ರೀಯರು ಇರುತ್ತಾರೆ ಎಂಬುದನ್ನು ನಿರೂಪಿಸಲಾಗಿದೆ.

'ಕಾಮ' ನೈಸರ್ಗಿಕವಾದ ಕ್ರಿಯೆಯಾದರೂ ಅದು ಸ್ವಚ್ಛಂದವಾಗಿರಲು ಬಯಸುವುದಿಲ್ಲ. ಮನಸ್ಸು ತನ್ನೊಂದಿಗೆ ಸ್ಪಂದಿಸುವವರನ್ನು ಮಾತ್ರ ಬಯಸುತ್ತದೆ ಎಂಬುದು 'ನಂಬಿದವರ ನಾಕ ನರಕ' ಕಾದಂಬರಿಯಲ್ಲಿದೆ. ಕಾಮುಕತೆಯಿಂದ ಕಾವೇರಿಯನ್ನು ದುರುಗುಟ್ಟುತ್ತಿದ್ದ ವೆಂಕಪ್ಪಯ್ಯನನ್ನು 'ಹೆಣ್ಣು ಅಬಲೆಯಲ್ಲ, ಸಬಲಳು' ಸಮಯಕ್ಕನುಗುಣವಾಗಿ ಕಷ್ಟಗಳನ್ನು ಎದುರಿಸಬಲ್ಲಳು ಎಂಬಂತೆ ಕಾವೇರಿಯು ವೆಂಕಪ್ಪಯ್ಯನನ್ನು ಪ್ರತಿಭಟಿಸುತ್ತಾಳೆ.

ಪರಿಸ್ಥಿತಿಯಿಂದಾಗಿ ಮನಸ್ಸಿಲ್ಲದಿದ್ದರೂ ಗುಲಾಬಿ ವೇಶ್ಯೆಯಾದರೆ, ವೇಶ್ಯೆಯ ಮಗಳೊಬ್ಬಳು ತನ್ನ ತಾಯಿಯನ್ನು ತೊರೆದು ವೇಶ್ಯಾವೃತ್ತಿಯನ್ನು ತಿರಸ್ಕರಿಸಿ ಪರಿಸ್ಥಿತಿಯನ್ನು ಎದುರಿಸಿ ಮದುವೆಯಾಗುವ ಸ್ತ್ರೀಯ ಚಿತ್ರಣ "ಬತ್ತದ ತೊರೆ" ಕಾದಂಬರಿಯಲ್ಲಿದೆ. ಮಂಜರಿ ವೇಶ್ಯೆಯಾಗಿದ್ದಳು. ವಯಸ್ಸಾಗಿದ್ದರಿಂದ ಅವಳ ಉಪಜೀವನ ಕಷ್ಟಕರವಾಗಿತ್ತು. ತನ್ನ ಮಗಳು ವಿನತೆಯೂ ವೇಶ್ಯಾವೃತ್ತಿಯನ್ನು ಮಾಡಲಿ, ಅದರಿಂದ ಸುಖವಾಗಿ ಬಾಳಬಹುದು ಎಂದು ಬಯಸಿದಳು. ಊರಿನ ಶ್ರೀಮಂತರಲ್ಲಿ ಒಬ್ಬನಾದ ಕೋಡಂಗಿ ನಾಗರಾಜಯ್ಯನೊಂದಿಗೆ ಬಿಡಾರ ಹೂಡಲಿ, ಅದರಿಂದ ತಮಗೆ ಸಂಪತ್ತು ದೊರೆಯುತ್ತದೆ ಎಂದು ಹಂಬಲಿಸಿದಳು. ಆದರೆ ವಿನತೆಗೆ ವೇಶ್ಯೆಯ ಬದುಕು ಇಷ್ಟವಿರಲಿಲ್ಲ. "ಅಮ್ಮ, ನಾನು ಸುಖವಾಗಿರಬೇಕೆಂದು ನಿನ್ನ ಇಷ್ಟವಲ್ಲ. ಮರ್ಯಾದೆಯಿಂದಿರಕೂಡದು ಎಂಬುದೇ ನಿನ್ನ ಅಪೇಕ್ಷೆ. ಏನೋ ದುರ್ದೈವದಿಂದ ನಿನ್ನ ಬಾಳು ಹಾಗಾಯಿತು. ಅಂಥ ಬಾಳು ನನಗೆ ಬೇಕೆ ಇಲ್ಲ; ನೀನು ನನ್ನ ಸುಖ ಅಪೇಕ್ಷಿಸುವಿಯಾದರೆ ಹೀಗೆ ಹೇಳಕೂಡದು" (೨೦೦೩, ಸಂ-೯, ಕಾ-೮, ೩೪೫-೩೪೬) ಎಂದು ತಾಯಿಯ ದುರಾಸೆಯನ್ನು ನಿರಾಕರಿಸುತ್ತಾಳೆ. ಇಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ವಿಚಾರಗಳ ಘರ್ಷಣೆಯನ್ನು ಕಾಣಬಹುದು. ತನ್ನ ತಾಯಿಯೇ 'ವೇಶ್ಯಾವೃತ್ತಿ'ಯನ್ನು ಪರೋಕ್ಷವಾಗಿ ಬೆಳೆಸುತ್ತಿದ್ದಾಳಲ್ಲ ಎಂದು ವಿನತೆಗೆ ಬೇಸರವಾಗುತ್ತದೆ. ತನಗೆ ಒತ್ತಾಯ ಮಾಡುತ್ತಿರುವುದರಿಂದ ಹತಾಶಳಾಗುತ್ತಾಳೆ. 'ತಾಯಿಯೇ ದೇವರು' ಎಂಬುದಕ್ಕೆ ಮಂಜರಿಯು ಅಪವಾದವಾಗಿದ್ದಾಳೆ. ಇದರಿಂದಾಗಿಯೇ ವಿನತೆಯು ತಾಯಿ-ಮಗಳ ಸಂಬಂಧವನ್ನು ಕಡಿದು ಹಾಕಿ ಮನೆಯನ್ನು ತೊರೆದು ಹೋಗುತ್ತಾಳೆ. ಸ್ವತಂತ್ರವಾದ ಬದುಕನ್ನು ಸಾಗಿಸಲು ಪ್ರಯತ್ನಿಸುತ್ತಾಳೆ.

ಕಾರಂತರ ಸಮಕಾಲೀನರಾದ ತ್ರಿವೇಣಿಯವರ "ಹೂವು-ಹಣ್ಣು" (೧೯೫೩) ಕಾದಂಬರಿಯಲ್ಲಿ ರಮಾ ವೇಶ್ಯೆಯಾಗಿದ್ದರೂ ತನ್ನ ಮಗಳು ತನ್ನಂತೆ ವೇಶ್ಯೆಯಾಗಬಾರದೆಂದು ಬಯಸುತ್ತಾಳೆ. ತನ್ನ ಮಗಳಿಗೆ ತಾನು ಎಂಥವಳು ಎಂದು ತಿಳಿಯುವ ಮೊದಲೇ ಮಗಳನ್ನು ತನ್ನಿಂದ ದೂರವಿರಿಸುತ್ತಾಳೆ. ತಾನಾರೆಂಬುದು ಮಗಳಿಗೆ ತಿಳಿಯದಂತೆ ಮಾಡುತ್ತಾಳೆ. ಮಗಳ ಶಿಕ್ಷಣಕ್ಕಾಗಿ, ಅವಳ ಜೀವನಕ್ಕಾಗಿ ಬಂದವರಿಗೆಲ್ಲ ತನ್ನ ದೇಹವನ್ನು ಮಾರಲು ಸಿದ್ಧಳಾಗುತ್ತಾಳೆ. ಈ ಕಾದಂಬರಿಯಲ್ಲಿ ಆದಿಯಿಂದ ಅಂತ್ಯದವರೆಗೂ ಬೇರೆಯವರ ಸುಖಕ್ಕಾಗಿ ತನ್ನ ಜೀವನವನ್ನು ಬಲಿಕೊಟ್ಟು ತ್ಯಾಗಮಯಿ ಬಾಳನ್ನು ಬಾಳಿದ ರಮಾಳ ಚಿತ್ರಣವಿದೆ.

ತಾಯಿ-ಮಗಳ ಸಂಬಂಧವನ್ನು ಕಡಿದು ಹಾಕುವ ಸೂಳೆಗಾರಿಕೆ ಕುರಿತು 'ಹೂವು-ಹಣ್ಣು' ಕಾದಂಬರಿಯು ಒಳಗೊಂಡಿದೆ. ವೇಶ್ಯೆಯಾದರೂ ತಾಯಿ ತಾಯಿಯೇ ಎಂಬುದರ ನೈಜ ಚಿತ್ರಣವಿದೆ. ಆದರೆ ಕಾರಂತರ 'ಬತ್ತದ ತೊರೆ' ಕಾದಂಬರಿಯಲ್ಲಿ ತಾಯಿಯೇ ಮಗಳನ್ನು ವೇಶ್ಯಾವೃತ್ತಿಗೆ ನೂಕಲು ಬಯಸುವುದನ್ನು

ಕುರಿತು ಚಿತ್ರಿಸಲಾಗಿದೆ. ಇದರಿಂದ ವೇಶ್ಯಾವೃತ್ತಿಯಲ್ಲಿ ಆಗುವ ಸಂಬಂಧಗಳ ಬದಲಾವಣೆಯನ್ನು ತಿಳಿಯಬಹುದು.

ವೇಶ್ಯಾ ಜೀವನವನ್ನು ಇಷ್ಟಪಡದ ವಿನತೆಯು ಮದುವೆಯಾಗಿ ಸಾಂಸಾರಿಕ ಜೀವನವನ್ನು ಸಾಗಿಸಲು ಬಯಸುತ್ತಾಳೆ. ವೇಶ್ಯೆಯ ಮಗಳಾದ ತನಗೆ ಸಮಾಜದಲ್ಲಿ ಸುಲಭವಾಗಿ ಮದುವೆಯಾಗುವುದಿಲ್ಲ ಎಂಬುದನ್ನು ಅರಿತಿದ್ದಳು. ವಿವಾಹಿತನಾದರೂ ಸರಿಯೇ, ಹೆಂಡತಿಯನ್ನು ಕಳೆದುಕೊಂಡ ವಿಧುರನಾದರೂ ಸರಿಯೇ ತಾನು ಮದುವೆಯಾಗಬೇಕು ಎಂದು ಬಯಸುತ್ತಾಳೆ. ಮದುವೆಯಿಂದಲೇನೆ ವೇಶ್ಯೆಯ ಬದುಕು ಮುಕ್ತಾಯವಾಗುತ್ತದೆ ಎಂದು ನಂಬಿದ್ದಳು. ವಿಧುರನಾದ ಗಾಂವಕರನೊಂದಿಗೆ ಮದುವೆಯಾಗುತ್ತಾಳೆ. ಅವನು ಎರಡು ಮಕ್ಕಳ ತಂದೆಯಾಗಿದ್ದನು. ಅವನು ಹೆಂಡತಿಯನ್ನು ಪ್ರೀತಿಸುತ್ತಿರಲಿಲ್ಲ. ಬದಲಿಗೆ ಯಾವಾಗಲೂ ಅನುಮಾನದಿಂದ ನೋಡುತ್ತಿದ್ದನು. ವೇಶ್ಯೆಯ ಮಗಳಾದ ಅವಳನ್ನು 'ಸೂಳೆ' ಎಂದು ಹಿಯ್ಯಾಳಿಸುತ್ತಿದ್ದನು.

ಗಾಂವಕರನು ವಿನತೆಯನ್ನು ಪ್ರೀತಿಸುತ್ತಿರಲಿಲ್ಲ. ಹೆಂಡತಿಯಾದವಳು ತನ್ನ ಒಂದು ಹಕ್ಕನ್ನು ಬಯಸದೇ ಕೇವಲ ಬೆಲೆಗೆ ಕೊಂಡ ವಸ್ತುವಿನಷ್ಟು ಅಗ್ಗದಲ್ಲಿ ಕುಣಿದಾಡಬೇಕು ಎಂದು ಬಯಸುತ್ತಿದ್ದನು. ದಿನವೆಲ್ಲ ಅವಳನ್ನು ಹಿಂಸಿಸುತ್ತಿದ್ದನು. ಇಷ್ಟಪಟ್ಟು ಮದುವೆಯಾಗಿದ್ದರಿಂದ ವಿನತೆಯು ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ವೇಶ್ಯೆಯ ಮಗಳಾದ ಅವಳನ್ನು ಪರರಿಗೆ ಒಪ್ಪಿಸುವುದು ಅನ್ಯಾಯವಲ್ಲವೆಂದು ಭಾವಿಸುತ್ತಿದ್ದನು. 'ತಾನು ವ್ಯಭಿಚಾರಿ' ಎಂದು ಅವಳಿಂದ ಒತ್ತಾಯ ಪೂರ್ವಕವಾಗಿ ಬರೆಯಿಸಿಕೊಂಡು ಅವಳನ್ನು ತೊರೆದು ಮುಂಬೈಗೆ ಹೋಗುತ್ತಾನೆ. ಮದೆವೆಯಾಗದಿದ್ದರೆ ಸಮಾಜ ತನ್ನನ್ನು ಕೀಳು ದೃಷ್ಟಿಯಿಂದ ನೋಡಬಹುದೆಂಬ ಹೆದರಿಕೆಯಿಂದಲೋ ಅಥವಾ ತನಗೊಬ್ಬ ಪುರುಷನ ಆಸರೆಯ ಅಗತ್ಯವಿದೆಯೆಂದೋ ಮದುವೆಯಾದ ವಿನತೆಯ ಸಂಸಾರ ಸುಖವಾಗಿರಲಿಲ್ಲ, ದುಃಖಕರವಾಗಿತ್ತು.

ತನ್ನ ತಾಯಿಯನ್ನು ತೊರೆದು ಸಮಾಜದ ವ್ಯವಸ್ಥೆಯನ್ನು ಎದುರಿಸುವ ಕೆಚ್ಚೆದೆಯುಳ್ಳ ವಿನತೆಯು 'ಮದುವೆ'ಯ ನಿರ್ಧಾರದಲ್ಲಿ ಎಡವುತ್ತಾಳೆ. ಗಂಡನ ದೌರ್ಜನ್ಯ, ಹಿಂಸೆಯನ್ನು ಎದುರಿಸಲಾಗದೆ, ತಾಳ್ಮೆಯಿಂದ ಸಹಿಸಿಕೊಳ್ಳುತ್ತಾಳೆ. "ಸ್ತ್ರೀಗೆ ಸಹಜವಾಗಿ ನೋವನ್ನು ಸಹಿಸುವ, ಯಾತನೆಯನ್ನು ತಾನಾಗಿಯೇ ಆಹ್ವಾನಿಸುವ ಶಕ್ತಿ ಆಕೆಯಲ್ಲಿರುವ ಪ್ರೇಮ ಭಾವನೆಯಿಂದ ಒದಗುತ್ತದೆಂದೂ, ಪ್ರೇಮವೆಂದರೆ ಎಣೆಯಿಲ್ಲದ ನೋವನ್ನು ಸಹಿಸುವ ಶಕ್ತಿಯೆಂದು ಭಾವಿಸುತ್ತಾರೆ" ಎಂದು ಪ್ರೀತಿ ಶುಭಚಂದ್ರರವರು (ಪಾಟೀಲ ಎಂ.ಎಸ್., ಸ್ವಾಮಿರಾವ್ ಕುಲಕರ್ಣಿ (ಸಂ) ೨೦೦೪: ೨೩) ಗಾಂಧೀಜಿಯವರ ಸ್ತ್ರೀಪರ ವಿಚಾರಗಳನ್ನು ಗುರುತಿಸಿದ್ದಾರೆ. ಇದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಏಕೆಂದರೆ ವಿನತೆಯು ಗಾಂವಕರನ ಹಿಂಸಾಪ್ರವೃತ್ತಿಯನ್ನು ಪ್ರತಿರೋಧಿಸಬಹುದಾಗಿತ್ತು. ಆದರೆ ಪ್ರತಿರೋಧಿಸದೆ ಇರುವುದು ಅವಳ ತಾಳ್ಮೆಯನ್ನು ಉನ್ನತೀಕರಣಗೊಳಿಸುವುದರ ಸಲುವಾಗಿಯೇ ಎಂಬುದು ಕಾದಂಬರಿಯಲ್ಲಿಯ ಅವಳ ಚಿತ್ರಣದಿಂದ ಸ್ಪಷ್ಟವಾಗುತ್ತದೆ.

ವೇಶ್ಯಾವೃತ್ತಿಗೆ ಹಲವಾರು ಕಾರಣಗಳಿವೆ. ಅವುಗಳ ಬಗೆಗೆ ಕಾದಂಬರಿಕಾರರು ಮೌನವಹಿಸಿರುವುದು 'ಬತ್ತದ ತೊರೆ' ಕಾದಂಬರಿಯಿಂದ ಮನದಟ್ಟಾಗುತ್ತದೆ. ಕಾರಂತರ ಸಮಕಾಲೀನರಾದ ತ.ರಾ.ಸು. ಅವರ "ಮಸಣದ ಹೂವು" (೧೯೫೩) ಕಾದಂಬರಿಯಲ್ಲಿ ಸ್ತ್ರೀಯರು ವೇಶ್ಯಾವೃತ್ತಿಯನ್ನು ಆರಂಭಿಸಲು ಕಾರಣಗಳೇನು ಎಂಬುದನ್ನು ಸ್ಪಷ್ಟೀಕರಿಸಲಾಗಿದೆ. ಹೆಣ್ಣಿನ ಅಸಹಾಯಕತೆ, ಬಡತನ, ಗಂಡು-ಹೆಣ್ಣುಗಳ ಅನೈತಿಕ ಕಾಮತೃಪ್ತಿಯ ಅಪೇಕ್ಷೆ, ಕಟ್ಟಿಕೊಂಡ ಗಂಡನ ಹೊಣೆಗಾರಿಕೆಯಿಲ್ಲದಿರುವುದು, ಹೆಣ್ಣಿನ ಅತಿಯಾದ ಲೈಂಗಿಕಾಸೆ, ಶ್ರೀಮಂತ ಗಂಡನ ವಿಕೃತಕಾಮ ಮುಂತಾದ ಕಾರಣಗಳಿಂದ ಸ್ತ್ರೀಯರು ವೇಶ್ಯೆಯರಾಗುವ ಸಾಧ್ಯತೆಯಿರುತ್ತದೆ ಎಂಬುದನ್ನು ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ತ.ರಾ.ಸು. ಅವರ "ಮಸಣದ ಹೂವು" ಕಾದಂಬರಿಯಲ್ಲಿ ಶಾಂತಿ ದುರಾಸೆಯಿಂದ ವೇಶ್ಯೆಯಾಗುತ್ತಾಳೆ. ಮನೆತನದ ಆದಾಯದ ಇತಿಮಿತಿಯನ್ನರಿತು ಬದುಕದೆ, ನೆರೆಹೊರೆಯವರು ಪಡೆಯುವ ಅನೇಕ ಸೌಲಭ್ಯಗಳನ್ನು ಕಂಡು ತಾನೂ ಅವುಗಳನ್ನು ಪಡೆದುಕೊಳ್ಳಬೇಕೆಂಬ ಮೋಹದಲ್ಲಿ ವೇಶ್ಯೆಯಾಗುತ್ತಾಳೆ. ಕಂಡದ್ದೆಲ್ಲ ತನ್ನದಾಗಬೇಕೆಂಬ ಅತಿ ವ್ಯಾಮೋಹದಿಂದ ವೇಶ್ಯೆಯಾಗುವ ಸಾಧ್ಯತೆಗಳಿವೆ.

ಬಸವರಾಜ ಕಟ್ಟಿಮನಿಯವರ "ಖಾನಾವಳಿಯ ನೀಲಾ" (೧೯೫೩) ಕಾದಂಬರಿಯಲ್ಲಿ ವೇಶ್ಯೆಯರ ಮಕ್ಕಳು ಮದುವೆಯಾಗಿ ಸುಖವಾಗಿ ಜೀವನವನ್ನು ಸಾಗಿಸಬಹುದು ಎಂಬುದರ ಚಿತ್ರಣವಿದೆ. 'ಸೂಳೆಯ ಮಗಳೂ ಸೂಳೆಯೆ' ಎಂದು ಹಣೆಪಟ್ಟಿ ಹಚ್ಚುವ ಕಾಮುಕ ಸಮಾಜಕ್ಕೆ ಆಕೆಯೂ ಗರತಿಯಾಗುತ್ತಾಳೆ. ಆಗಬಲ್ಲಳು ಎಂಬುದನ್ನು ಸ್ತ್ರೀ ಪಾತ್ರಗಳ ಮುಖಾಂತರ ಸಾಬೀತುಪಡಿಸಲಾಗಿದೆ. ಕಟ್ಟಿಮನಿಯವರ "ಮಣ್ಣು ಮತ್ತು ಹೆಣ್ಣು" (೧೯೫೩) ಕಾದಂಬರಿಯಲ್ಲಿ ವೇಶ್ಯೆಯ ಮಗಳು ವೇಶ್ಯಾವೃತ್ತಿಯನ್ನು ಮುಂದುವರಿಸದೆ, ದುಡಿಮೆಯಿಂದ ಸ್ವಾವಲಂಬನೆಯ ಜೀವನವನ್ನು ಸಾಗಿಸಬಹುದು. ಮದುವೆಯಾಗಿ ಉತ್ತಮ ಜೀವನ ನಡೆಸಲು ಸಾಧ್ಯವಿದೆ ಎಂಬುದನ್ನು ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ವೇಶ್ಯೆಯರ ಮಕ್ಕಳ ಮದುವೆಯ ಸಾಧ್ಯತೆಯನ್ನು ಕುರಿತು ಕಾರಂತ ಮತ್ತು ಕಟ್ಟಿಮನಿಯವರ ವಿಚಾರಗಳಲ್ಲಿ ಸಾಮ್ಯವಿರುವುದು ಸ್ಪಷ್ಟವಾಗುತ್ತದೆ.

ಕಾರಂತರ ಸಮಕಾಲೀನರಾದ ಇನಾಂದಾರರ 'ಶಾಪ' ಕಾದಂಬರಿಯಲ್ಲಿ ಸರೋಜಿನಿ ವೇಶ್ಯೆಯ ಕುಲದಲ್ಲಿ ಹುಟ್ಟಿ ಬೆಳೆದರೂ ಮನೆತನದ ವೇಶ್ಯಾ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗದೆ, ಎದುರಿಸಿ ಪ್ರತ್ಯೇಕವಾಗಿ ನಿಲ್ಲುತ್ತಾಳೆ. ತಾಯಿಯ ದುರಾಸೆಯ ಹಿನ್ನೆಲೆಯನ್ನು ಅರಿತು ಇದುವರೆಗೆ ತಾಯಿ ಒಪ್ಪಿಕೊಂಡು ಬಂದ ಹೊಲಸು ಜೀವನವನ್ನು ತಿರಸ್ಕರಿಸುತ್ತಾಳೆ. ಮದುವೆಯಾಗುವ ಕನಸನ್ನು ಕಾಣುತ್ತಾಳೆ. ಆದರೆ ಮದುವೆಯಾಗಲು ಸಾಧ್ಯವಾಗುವುದಿಲ್ಲ. "ಹಳೆಯದನ್ನು ಪ್ರತಿಭಟಿಸಿ ಹೊಸ ನೀತಿ ಸಂಹಿತೆಯ ಆವಿಷ್ಕಾರ ಮಾಡುವ ಪಾತ್ರಗಳ ಬಗ್ಗೆ ಅವರಿಗೆ ಒಲವಿಲ್ಲ. ಅಂತಹ ಹೋರಾಟದ ಪಾತ್ರಗಳಲ್ಲಿ ದುರಂತವನ್ನೇ ಇನಾಂದಾರರು ಕಾಣುತ್ತಾರೆ" ಎಂದು ಸೀತಾಹನಸೋಣೆಯವರು (ಪ್ರಬುದ್ಧ ಕರ್ನಾಟಕ; ೫೨) ಗುರುತಿಸಿರುವುದು ಸರಿಯಾಗಿಯೆ ಇದೆ. ಆದರೆ ಕಾರಂತರ 'ಬತ್ತದ ತೊರೆ'

ಕಾದಂಬರಿಯಲ್ಲಿ ವಿನತೆಯು ಮದುವೆಯಾಗುವಲ್ಲಿ ಯಶಸ್ವಿಯಾಗುವುದು ಕಾದಂಬರಿಕಾರರ ಆಧುನಿಕ ಪ್ರಗತಿಪರ ಚಿಂತನೆಯಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

ವೇಶ್ಯೆಯರ ಬದುಕು ಸುಧಾರಣೆಯಾಗಬೇಕು. ಎಲ್ಲರಂತೆ ಅವರೂ ಮದುವೆಯಾಗಿ ಸುಖ ಸಂಸಾರ ನಡೆಸಲು ಸಾಮಾಜಿಕ ವ್ಯವಸ್ಥೆಯು ರೂಪಾಂತರವಾಗಬೇಕು ಎಂಬ ಸಾಮಾಜಿಕ ಕಳಕಳಿಯು 'ಇನ್ನೊಂದೇ ದಾರಿ' ಕಾದಂಬರಿಯ ಆಶಯವಾಗಿದೆ. 'ಉಮಾ' ವೇಶ್ಯೆಯ ಮಗಳಾಗಿದ್ದರೂ, ವೇಶ್ಯಾವೃತ್ತಿಯನ್ನು ಮುಂದುವರಿಸಲು ಇಚ್ಛಿಸಲಿಲ್ಲ. ತಾನು ಸ್ವತಂತ್ರವಾದ ಜೀವನವನ್ನು ನಡೆಸಬೇಕೆಂದು ಬಯಸುತ್ತಾಳೆ. 'ನರ್ಸಿಂಗ್ ವೃತ್ತಿ'ಯನ್ನು ಬದುಕಿನ ನಿರ್ವಹಣೆಗಾಗಿ ಆರಂಭಿಸುತ್ತಾಳೆ. ಜಯರಾಮನು ಆಸ್ಪತ್ರೆಯಲ್ಲಿಯ ಅನಾಥ ಮಗುವೊಂದನ್ನು ಮನೆಗೆ ಕರೆದುತಂದನು. ಆ ಮಗುವಿನ ಪೋಷಣೆಗಾಗಿ 'ಉಮೆ'ಯು ಜಯರಾಮನ ಮನೆಗೆ ಹೋಗುತ್ತಾಳೆ. ಆ ಮಗುವಿನ ಪೋಷಣೆಯಲ್ಲಿ ಸಹಾಯ ಮಾಡುತ್ತಾಳೆ. ತಮ್ಮ ವೇಶ್ಯಾಕುಲದ ಹುಡುಗನೊಬ್ಬನೊಂದಿಗೆ ಮದುವೆಯಾಗಿ ಸುಖವಾಗಿ ಬಾಳುತ್ತಾಳೆ. ಇದರಿಂದ ವೇಶ್ಯೆಯರ ಹೆಣ್ಣು ಮಕ್ಕಳನ್ನು ವೇಶ್ಯೆಯರ ಮಕ್ಕಳೇ ಮದುವೆಯಾಗುತ್ತಿದ್ದರು. ಅನ್ಯರು ಮದುವೆಯಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಮಕಾಲೀನ ಐತಿಹಾಸಿಕ ವೇಶ್ಯೆಯರ ಸ್ಥಿತಿಗತಿಯನ್ನು ಇದರಿಂದ ಗುರುತಿಸಬಹುದು.

'ಇನ್ನೊಂದೇ ದಾರಿ' ಕಾದಂಬರಿಯಲ್ಲಿ ವೇಶ್ಯೆಯರ ಮಕ್ಕಳೆಲ್ಲರೂ ವೇಶ್ಯಾವೃತ್ತಿಯನ್ನು ಮುಂದುವರಿಸಲು ಬಯಸುವುದಿಲ್ಲ. ಅವರಲ್ಲಿ ಕೆಲವರು ಮದುವೆಯಾಗಬೇಕೆಂಬ ಆಸೆಯನ್ನು ಹೊಂದಿರುತ್ತಾರೆ ಎಂಬುದನ್ನು ಪಾತ್ರಗಳ ಮೂಲಕ ಮುಂದಿಡಲಾಗಿದೆ.

'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ವೇಶ್ಯೆಯ ಮಗಳು ಸ್ವಾವಲಂಬನೆಯ ಜೀವನ ಸಾಗಿಸಬಹುದು ಎಂಬುದನ್ನು ಚಂದ್ರಿಯ ಪಾತ್ರದ ಮೂಲಕ ನಿರೂಪಿಸಿದ್ದಾರೆ. ಆರ್ಥಿಕವಾಗಿ ದಿವಾಳಿಯಾಗಿದ್ದ ಶಾರಿಯು ತನ್ನ ಮಗಳನ್ನು ಒಂದು ಆರ್ಥಿಕ ಸಂಪನ್ಮೂಲವೆಂದು ತಿಳಿದಿದ್ದಳು. ತನ್ನ ಮಗಳ ಮೂಲಕ ಕುಲವೃತ್ತಿಯನ್ನು ಮುಂದುವರೆಸಲು ಬಯಸಿದಳು. ಆದರೆ ವಿದ್ಯಾವಂತೆಯಾದ ಚಂದ್ರಿಯು ವೇಶ್ಯಾವೃತ್ತಿಯನ್ನು ತಿರಸ್ಕರಿಸಿದಳು. ಯಾವುದಾದರೊಂದು ಉದ್ಯೋಗ ಮಾಡುತ್ತ ಸ್ವಾವಲಂಬನೆಯ ಹಾಗೂ ಸ್ವತಂತ್ರವಾದ ಜೀವನ ನಡೆಸಲು ಬಯಸಿದಳು. ವಿದ್ಯಾಭ್ಯಾಸದ ಕಾರಣದಿಂದ ಸೂಳೆವೃತ್ತಿ ಕೀಳು ಎಂಬ ಭಾವನೆ ಅವಳಲ್ಲಿತ್ತು. ಒಂಟಿಯಾಗಿ ಬದುಕಬಹುದು ಎಂಬ ಆತ್ಮವಿಶ್ವಾಸ ಅವಳಲ್ಲಿತ್ತು. "ಪ್ರಾಣವನ್ನಾದರೂ ತೆಗೆದುಕೊಂಡೇನು; ಕುಲವೃತ್ತಿ ಮಾಡುವವಳಲ್ಲ" ಎಂದು (೧೯೭೨; ೬೦) ಚಂದ್ರಿ ಪ್ರತಿರೋಧ ವ್ಯಕ್ತಪಡಿಸುವಳು.

ಕಾರಂತರ ಸಮಕಾಲೀನರಾದ ಎಂ.ಕೆ.ಇಂದಿರಾ ಅವರು ಸ್ತ್ರೀಯರ ಸಮಸ್ಯೆಗಳ ಕುರಿತು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಅವರು ಹೆಣ್ಣಿನ ಪರವಾಗಿ ಕಾಳಜಿ ತೋರಿಸಿದರೂ ಗಂಡಸಿನ ಅನಿಸಿಕೆಗಳ ಚೌಕಟ್ಟಿನಲ್ಲಿಯೇ ಬರುತ್ತವೆ. ಅವರ ಚಿಂತನೆ ಭಾರತೀಯ ಸಂಪ್ರದಾಯದ ಮಹಿಳೆಯ ಕಡೆಗೆ ಇರುವುದು ಅವರ ಕಾದಂಬರಿಗಳ ಸ್ತ್ರೀಪಾತ್ರಗಳಿಂದ ಸ್ಪಷ್ಟವಾಗುತ್ತದೆ. 'ಗೆಜ್ಜೆಪೂಜೆ' (೧೯೬೬) ಕಾದಂಬರಿಯಲ್ಲಿ

ವೇಶ್ಯಾ ಸಮಸ್ಯೆಯ ಕುರಿತು ಬಿಂಬಿಸಲಾಗಿದೆ. ಚಂದ್ರಿ ವಿದ್ಯಾವಂತೆಯಾಗಿದ್ದಳು. 'ವೇಶ್ಯಾಪದ್ಧತಿ' ಸಾಮಾಜಿಕ ಕಳಂಕವೆಂದು ನಂಬಿದ್ದಳು. ವೇಶ್ಯೆಯ ಮಗಳಾಗಿದ್ದರೂ ವೇಶ್ಯಾವೃತ್ತಿಯನ್ನು ಮುಂದುವರಿಸುವ ಆಪೇಕ್ಷೆ ಹೊಂದಿರಲಿಲ್ಲ. ಶಿಕ್ಷಣವನ್ನು ಪಡೆದಂತಹ ಚಂದ್ರಿ ಉದ್ಯೋಗವನ್ನು ಪಡೆದುಕೊಂಡು ಸ್ವಾವಲಂಬನೆಯ ಜೀವನ ಸಾಗಿಸಬಹುದಾಗಿತ್ತು. ಆದರೆ ಕೊನೆಯಲ್ಲಿ ವಜ್ರದ ಉಂಗುರ ಪುಡಿಮಾಡಿ ಅರೆದು ಕುಡಿದು ತನ್ನ ಬಾಳನ್ನು ದುರಂತವನ್ನಾಗಿ ಕೊನೆಗಾಣಿಸಿಕೊಳ್ಳುತ್ತಾಳೆ. ಅವಳ ಪಾತ್ರವನ್ನು ತ್ಯಾಗಮಯಿಯಾಗಿ ಚಿತ್ರಿಸಲಾಗಿದೆ.

ಇಂದಿರಾ ಅವರ "ನಾಗವೀಣಾ" (೧೯೬೯) ಕಾದಂಬರಿಯೂ ವೇಶ್ಯಾ ಸಮಸ್ಯೆಯನ್ನು ಕುರಿತಾಗಿದೆ. ಭುವನೇಶ್ವರಿ ಸುಂದರಿ ಹಾಗೂ ಗಂಭೀರ ಸ್ವಭಾವದವಳು. ವಿದ್ಯಾವಂತೆಯಾಗಿದ್ದಳು. ತಾಯಿಯ ವೇಶ್ಯಾ ಜೀವನ ಕುರಿತು ಅವಳಿಗೆ ಬಾಲ್ಯದಿಂದಲೇ ಜಿಗುಪ್ಸೆಯಿತ್ತು. ವೇಶ್ಯಾವೃತ್ತಿ ಸಾಮಾಜಿಕ ಕಳಂಕವಾಗಿದ್ದು, ತುಂಬ ಹೀನವಾದುದು ಎಂಬ ಭಾವನೆ ಹೊಂದಿದ್ದಳು. ಅದನ್ನು ಕುಲ ಕಸಬು ಎಂದು ತಿಳಿದು ಮುಂದುವರಿಸುವ ಆಸೆಯನ್ನು ಅವಳು ಹೊಂದಿರಲಿಲ್ಲ. ವಿದ್ಯಾವಂತೆಯಾದ ಅವಳು ಸಮಾಜದಲ್ಲಿ ಸ್ವಾವಲಂಬನೆಯಿಂದ ಬದುಕಬಹುದಾಗಿತ್ತು. ಜೀವನದ ಉಪಭೋಗಕ್ಕಾಗಿ ಬೇರೆ ವೃತ್ತಿಯನ್ನು ಮಾಡಿ ಸುಖವಾದ ಜೀವನ ಸಾಗಿಸಬಹುದಾಗಿತ್ತು. ಆದರೆ ವೇಶ್ಯಾ ಪ್ರವೃತ್ತಿಯಿಂದ ಮುಕ್ತಿಪಡೆಯಲು ವಿಫಲಳಾಗಿ, ದುರಂತಕ್ಕೀಡಾಗುತ್ತಾಳೆ.

'ಗೆಜ್ಜೆ ಪೂಜೆ', 'ನಾಗವೀಣಾ', ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳಿಂದ ವೇಶ್ಯಾ ಸಮಸ್ಯೆ ತುಂಬ ಕ್ರೂರವಾದುದು. ಅದನ್ನು ತಿರಸ್ಕರಿಸಿ ಬಾಳ್ವೆ ಮಾಡಲು ಸಮಾಜವು ಅವಕಾಶ ನೀಡುವುದಿಲ್ಲ ಎಂಬುದನ್ನು ಚಿತ್ರಿಸಲಾಗಿದೆ. ಇದು ಎಂ.ಕೆ. ಇಂದಿರಾ ಅವರ ಸಾಂಪ್ರದಾಯಿಕ ನಿಲುವನ್ನು ವ್ಯಕ್ತಪಡಿಸುತ್ತದೆ. ಆದರೆ ಕಾರಂತರ ಕಾದಂಬರಿಗಳಲ್ಲಿ ಪ್ರಗತಿಪರ ಧೋರಣೆಯಿರುವುದು ಸ್ಪಷ್ಟವಾಗುತ್ತದೆ. ವೇಶ್ಯಾವೃತ್ತಿಯನ್ನು ಮುಂದುವರಿಸಲು ಬಯಸದವರು ಸ್ವತಂತ್ರವಾಗಿ ಬದುಕಲು ಸಾಧ್ಯ ಎಂಬುದು ಕಾದಂಬರಿಯಲ್ಲಿದೆ.

ವೇಶ್ಯಾವೃತ್ತಿಯನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರೂ ಅದು ತಮ್ಮಿಂದಲೆ ಕೊನೆಯಾಗಬೇಕು, ತಮ್ಮ ಮಗಳು ಈ ವೃತ್ತಿಯನ್ನು ಮುಂದುವರಿಸದೆ ಸ್ವತಂತ್ರವಾದ ಜೀವನವನ್ನು ನಡೆಸಲಿ ಎಂಬ ಮಾತೃವಾತ್ಸಲ್ಯವನ್ನು "ಉಕ್ಕಿದ ನೊರೆ" ಕಾದಂಬರಿಯು ಒಳಗೊಂಡಿದೆ. ಕಾರಂತರ ಕಾದಂಬರಿಗಳಲ್ಲಿ ಬರುವ ವೇಶ್ಯೆಯರು ದುಡ್ಡಿಗಾಗಿ ತಮ್ಮ ಮೈಯನ್ನು ಮಾರಿಕೊಳ್ಳದೇ ಮಾನವೀಯತೆಯಿಂದ ಬದುಕುವುದನ್ನು ಕಾಣಬಹುದು. ಗುಲಾಬಿ ಶಂಭಯ್ಯ ತನ್ನಲ್ಲಿಗೆ ಪ್ರೀತಿಯನ್ನು ಅರಸಿ ಬರುವ 'ವಿಟ'ನೆಂದು ತಿಳಿಯುವುದಿಲ್ಲ. ಬದಲಿಗೆ ಅವನನ್ನು ತುಂಬ ಪ್ರೀತಿಸುತ್ತಿದ್ದು, ಅವನನ್ನೇ ಪತಿಯೆಂದು ಭಾವಿಸುತ್ತಿದ್ದಳು. ಆದರೆ ಶಂಭಯ್ಯ ಮಾತ್ರ ಅವಳನ್ನು ಹೆಂಡತಿಯೆಂದು ತಿಳಿದಿರಲಿಲ್ಲ. ಅವಳನ್ನು ವೇಶ್ಯೆಯೆಂದೇ ತಿಳಿದು ಕೇವಲ ದೈಹಿಕ ಸಂಬಂಧಕ್ಕಾಗಿ ಮಾತ್ರ ಹಾತೊರೆಯುತ್ತಿದ್ದನು. ಇದರಿಂದ ವೇಶ್ಯೆಯರ ಜೀವನಕ್ಕೆ ಸಮಾಜದಲ್ಲಿ ಮನ್ನಣೆಯಿಲ್ಲ ಎಂಬುದನ್ನು ಅರಿತಿದ್ದ ಗುಲಾಬಿಯು ತಮ್ಮ ಮಗಳು ಕನಕಾಂಗಿ ವೇಶ್ಯಾವೃತ್ತಿಯನ್ನು

ಮುಂದುವರಿಸಿಕೊಂಡು ಹೋಗುವುದು ಇಷ್ಟವಿರಲಿಲ್ಲ. ಅವಳು ವಿದ್ಯಾವಂತೆಯಾಗಿ, ಮದುವೆ ಮಾಡಿಕೊಂಡು ಸುಖವಾದ ಜೀವನ ಸಾಗಿಸುವಂತಾಗಲಿ ಎಂದು ಬಯಸುತ್ತಾಳೆ.

ಕಾರಂತರ ಕಾದಂಬರಿಗಳಲ್ಲಿ 'ಗುಲಾಬಿ'ಯ ಪಾತ್ರವು ವೇಶ್ಯಾಪಾತ್ರಗಳಲ್ಲಿಯೇ ಪ್ರಮುಖವಾಗಿದೆ. ಏಕೆಂದರೆ ಅವರ ಇನ್ನಿತರ ಕೆಲವು ಕಾದಂಬರಿಗಳಲ್ಲಿ ವೇಶ್ಯೆಯರು ತಮ್ಮ ಹೆಣ್ಣು ಮಕ್ಕಳನ್ನು ಆರ್ಥಿಕ ಸಂಪನ್ಮೂಲವೆಂದು ತಿಳಿದು ಅವರಿಂದ ವೇಶ್ಯಾವೃತ್ತಿಯನ್ನು ಮುಂದುವರಿಸಿಕೊಂಡು ಹೋಗುವುದು ಕಾಣುತ್ತೇವೆ. ಅವರ ಆದಾಯದಲ್ಲಿಯೇ ಬದುಕುತ್ತಾರೆ. ಆದರೆ ಗುಲಾಬಿಯು ತಮ್ಮ ಮಗಳು ಈ ವೃತ್ತಿಯನ್ನು ಮುಂದುವರಿಸದೆ ಶಾಲೆ ಕಲಿತು ವಿದ್ಯಾವಂತೆಯಾಗಲಿ, ಸ್ವಾವಲಂಬನೆಯ ಸ್ವತಂತ್ರವಾದ ಜೀವನ ನಡೆಸುವಂತಾಗಲಿ, ಮದುವೆಯಾಗಿ ಸಂಸಾರದೊಂದಿಗೆ ಸುಖವಾಗಿರಲಿ ಎಂದು ಬಯಸುತ್ತಾಳೆ. ಗುಲಾಬಿಯ ಪಾತ್ರದ ಮೂಲಕ ಕಾದಂಬರಿಯಲ್ಲಿ ವೇಶ್ಯಾವೃತ್ತಿಯನ್ನು ನಿರ್ಮೂಲನೆ ಮಾಡುವಲ್ಲಿ ಸ್ತ್ರೀಯರದು ಮುಖ್ಯ ಪಾತ್ರವಿದೆ ಎಂಬುದನ್ನು ಮುಂದಿಡಲಾಗಿದೆ.

ವೇಶ್ಯೆಯ ಮಗಳ ಧಾರುಣ ಜೀವನದ ಕತೆ 'ಬತ್ತದ ತೊರೆ' ಕಾದಂಬರಿಯ ವಸ್ತುವಾಗಿದ್ದರೆ, 'ಸಮೀಕ್ಷೆ' ಕಾದಂಬರಿಯು ವೇಶ್ಯೆಯೊಬ್ಬಳ ಧಾರುಣ ಅಂತ್ಯವನ್ನು ಒಳಗೊಂಡಿದೆ. ವೇಶ್ಯೆಯರೂ ಮದುವೆಯಾಗಿ ಸುಖವಾದ ಜೀವನವನ್ನು ನಡೆಸಲು ಸಾಧ್ಯ ಎಂಬ ನಂಬಿಕೆಯನ್ನು ಕಾದಂಬರಿಕಾರರು ಹೊಂದಿದ್ದರು. ಕಾರಂತರು ಗಾಂಧೀಜಿಯವರ ಅನುಯಾಯಿಗಳಾಗಿದ್ದರು. 'ಪ್ರತಿಯೊಂದು ವಿಷಯದಲ್ಲಿಯೂ ಅವರ ಅಭಿಪ್ರಾಯವನ್ನು ಕೇಳುತ್ತಿದ್ದರು. ವೇಶ್ಯೆಯರ ಮದುವೆಯ ಕುರಿತು ಗಾಂಧೀಜಿಯವರಿಗೆ ಪತ್ರ ಬರೆದರು. ಅದಕ್ಕೆ ಗಾಂಧೀಜಿಯವರು "ಅಂತ ಹುಡುಗಿಯರು ಯಾವಜ್ಜೀವನ ಬ್ರಹ್ಮಚರ್ಯ ನಡೆಯಿಸಲಿ" ಎಂದು ಹೇಳಿದರು. (೧೯೫೪-೫೩) ಇದರಿಂದ ಕಾರಂತರಿಗೆ "ಮನುಷ್ಯ ಸ್ವಭಾವದ ಪರಿಚಯವೇ ಗಾಂಧೀಜಿಗಿಲ್ಲ! ತಾವು ಮಾಡಿದ್ದು ಎಲ್ಲರಿಂದಲೂ ಆಗುತ್ತದೆ ಎಂದು ತಿಳಿದುಕೊಂಡಿದ್ದಾರೆ" ಎನಿಸಿತು. (೧೯೫೪, ೫೪) ಇದರಿಂದ ವೇಶ್ಯೆಯರ ಮದುವೆಯ ಕುರಿತು ಗಾಂಧೀಜಿ ಮತ್ತು ಕಾರಂತರ ಚಿಂತನೆಯಲ್ಲಿ ಭಿನ್ನತೆಯಿರುವುದು ಸ್ಪಷ್ಟವಾಗುತ್ತದೆ. ಕಾರಂತರದು ಸುಧಾರಣವಾದವಾಗಿದ್ದರೆ, ಗಾಂಧೀಜಿಯವರದು ಆದರ್ಶವಾದವಾಗಿದೆ. ಇದನ್ನು ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ದಾಖಲಿಸಿದ್ದಾರೆ. ಅದನ್ನು ಸಮೀಕ್ಷೆ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ವಾಸುದೇವನು ಆದರ್ಶವಾದಿಯಾಗಿದ್ದು, ವೇಶ್ಯಾಕನ್ಯೆಯರ ಉದ್ಧಾರಕ್ಕಾಗಿ ಪ್ರಯತ್ನಿಸುತ್ತಿದ್ದನು. ಅವರಿಗೆ ಮದುವೆ ಮಾಡಿಸಲು ಯತ್ನಿಸುತ್ತಾನೆ, ಆದರೆ ಯಶಸ್ವಿಯಾಗುವುದಿಲ್ಲ. ಕೊನೆಗೆ ಅವರಲ್ಲಿ ಒಬ್ಬರನ್ನು ತಾನೇ ಮದುವೆಯಾಗುತ್ತಾನೆ. ಸುಖವಾದ ಜೀವನವನ್ನು ಸಾಗಿಸುತ್ತಾನೆ. ವೇಶ್ಯೆಯಾದ 'ಕುಸುಮೆ' ಇದರಿಂದ ತುಂಬ ಸಂತೋಷಗೊಳ್ಳುತ್ತಾಳೆ. ವಾಸುದೇವನು ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸುತ್ತಿದ್ದನು. ಹಾಗಾಗಿ ಪೋಲೀಸರಿಂದ ಕಣ್ಣು ತಪ್ಪಿಸಿಕೊಂಡು ತಿರುಗಾಡುತ್ತಿದ್ದನು. ವಾಸುದೇವನನ್ನು ಹುಡುಕುತ್ತ ಪೋಲಿಸರು ಅವನ ಮನೆಗೆ ಹೋಗುತ್ತಾರೆ. ಅವನ ಸುಳಿವು ಕುರಿತು ವಿಚಾರಿಸುತ್ತ ಅವನ ಹೆಂಡತಿ ಕುಸುಮೆಯ ಮೇಲೆ ಅತ್ಯಾಚಾರ ಮಾಡುತ್ತಾರೆ. ಇದರಿಂದಾಗಿ ನೊಂದ ಕುಸುಮೆ ಮತ್ತು ಅವಳ ಮಗಳು ಸುಹಾಸಿನಿ ತನ್ನ ಗಂಡನ ಸ್ನೇಹಿತ ಶ್ರೀನಿವಾಸನ ಆಶ್ರಯಕ್ಕೆ ಹೋಗುತ್ತಾರೆ.

ವೇಶ್ಯೆಯೊಬ್ಬಳನ್ನು ಮದುವೆಯಾದ ವಾಸುದೇವನ ಮನಸ್ಸು ತುಂಬ ಉದಾರವಾದುದು ಎಂದು ಕುಸುಮೆ ತಿಳಿದಿದ್ದಳು. ತನ್ನದಲ್ಲದ ತಪ್ಪಿನಿಂದಾಗಿ ಪೋಲಿಸರಿಂದ ಅತ್ಯಾಚಾರಕ್ಕೆ ಒಳಗಾಗಿದ್ದಳು. ಇದನ್ನು ತನ್ನ ಗಂಡನಿಗೆ ತಿಳಿಸಿದರೆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಾನು ಎಂಬ ಆಶಾಭಾವನೆಯನ್ನು ಹೊಂದಿದ್ದಳು. ಎಲ್ಲ ವಿಷಯವನ್ನು ಪತ್ರದ ಮುಖಾಂತರ ತಿಳಿಸುವಳು. ಆದರೆ ವಾಸುದೇವನು ಪರಿಸ್ಥಿತಿಯನ್ನರಿತುಕೊಳ್ಳಲು ಪ್ರಯತ್ನಿಸದೆ, 'ಮಾನಗೆಟ್ಟು ಬಾಳುವ ಬದಲು ನೀನೂ ಸಾಯಬಾರದಿತ್ತೆ? ಎಂದು ಅತುರಾತುರವಾಗಿ ಮರು ಉತ್ತರ ಬರೆಯುತ್ತಾನೆ. ಗಂಡನಿಂದ ಸಾಂತ್ವಾನವನ್ನು ನಿರೀಕ್ಷಿಸಿದ ಕುಸುಮೆ, ಅವನ ಪತ್ರದಿಂದ ತುಂಬ ನೊಂದು 'ಆತ್ಮಹತ್ಯೆ'ಯನ್ನು ಮಾಡಿಕೊಳ್ಳುತ್ತಾಳೆ.

ಪ್ರತಿಯೊಬ್ಬರಿಗೂ ಮನಃಸಾಕ್ಷಿಯಿರುತ್ತದೆ. ಅದಕ್ಕೆ ವೇಶ್ಯೆಯರೂ ಹೊರತಲ್ಲ. ಕುಸುಮೆ ತನಗಾದ ಅನ್ಯಾಯವನ್ನು ಕುರಿತು ಹೇಳದೇ ಸುಖವಾಗಿ ಬಾಳಬಹುದಾಗಿತ್ತು. ಆದರೆ ಮನಃಸಾಕ್ಷಿಯ ವಿರುದ್ಧ ನಡೆಯಲಾಗದೆ ಸತ್ಯವನ್ನು ಹೇಳಿ ದುರಂತಕ್ಕೀಡಾಗುತ್ತಾಳೆ. ಕುಸುಮೆಯು ಸಮಯವನ್ನು ತನಗನುಕೂಲವಾಗುವಂತೆ ಬಳಸಿಕೊಳ್ಳುವ ಅವಕಾಶವಾದಿಯಾಗಿರದೆ, ಪ್ರಮಾಣಿಕತೆಯಿಂದ ಬದುಕಬೇಕು ಎನ್ನುವ ವಿಚಾರವನ್ನು ಹೊಂದಿದ್ದಳು. ವೇಶ್ಯೆಯೊಬ್ಬಳ ಪ್ರಮಾಣಿಕತೆಯ ಎದುರಲ್ಲಿ ವಾಸುದೇವನ ಆದರ್ಶ ಟೊಳ್ಳುತನದಿಂದ ಕೂಡಿತ್ತು. ಏಕೆಂದರೆ ವಾಸುದೇವನು ನಿಜವಾದ ಆದರ್ಶವಾದಿಯಾಗಿದ್ದರೆ, ಪರಿಸ್ಥಿತಿಯನ್ನರಿತುಕೊಂಡು ಕುಸುಮೆಯನ್ನು ಕ್ಷಮಿಸಬಹುದಾಗಿತ್ತು.

'ಸಮೀಕ್ಷೆ' ಕಾದಂಬರಿಯು ಆದರ್ಶದ ವಿಡಂಬನೆ, ಪೋಲಿಸರ ಅತ್ಯಾಚಾರ ಕುರಿತು ಸ್ಪಷ್ಟಪಡಿಸುತ್ತದೆ. ವೇಶ್ಯೆಯ ಆದರ್ಶವೇ ಅವಳ ದುರಂತಕ್ಕೆ ಕಾರಣವಾಗುವುದನ್ನು ಚಿತ್ರಿಸಲಾಗಿದೆ.

ಬದುಕಿನ ಹಾದಿಯಲ್ಲಿ ಹೆಜ್ಜೆ ಹಾಕುವಾಗ ಹೆಣ್ಣಿಗೆ ಸಿಗುವ ಅನೇಕ ಹಂತಗಳಲ್ಲಿ ದಾಂಪತ್ಯ ಜೀವನದ ಹಂತ ಅತ್ಯುತ್ಕೃಷ್ಟವಾದುದು. ಅಂತೆಯೇ ಪ್ರತಿಯೊಂದು ಹೆಣ್ಣು ಮದುವೆಯಾಗಲು ಬಯಸುತ್ತಾಳೆ. ವೇಶ್ಯೆಯರೂ ಸಹ ಇದಕ್ಕೆ ಹೊರತಲ್ಲ. ತಮ್ಮ ವೇಶ್ಯಾ ಜೀವನವನ್ನು ಮೊಟಕುಗೊಳಿಸಿ ಗರತಿಯರಂತೆ ಬಾಳ್ವೆ ನಡೆಸಲು ಬಯಸುತ್ತಾರೆ. ಮದುವೆಗಾಗಿ ಪ್ರಯತ್ನಿಸಿದರೂ ವಿಫಲರಾಗುತ್ತಾರೆ ಎಂಬುದನ್ನು ಎಂ.ಕೆ.ಇಂದಿರಾ, ವಿ.ಎಂ.ಇನಾಂದಾರ, ಅ.ನ.ಕೃ.... ಮುಂತಾದವರ ಕಾದಂಬರಿಗಳಲ್ಲಿ ಚಿತ್ರಿಸಲಾಗಿದೆ. ಮಹಾತ್ಮ ಗಾಂಧೀಜಿಯವರೂ ಸಹ ವೇಶ್ಯೆಯರ ಮದುವೆಗೆ ಸಮ್ಮತಿಸದೆ, ಅವರು ಯಾವಜ್ಜೀವ ಬ್ರಹ್ಮಚರ್ಯ ಪಾಲನೆ ಮಾಡಲಿ ಎಂದು ಹೇಳುತ್ತ ವೇಶ್ಯೆಯರಿಗೆ ಮದುವೆಯನ್ನು ನಿರಾಕರಿಸಿದ್ದಾರೆ. ಆದರೆ ಕಾರಂತರು ಈ ದಿಸೆಯಲ್ಲಿ ಇವರೆಲ್ಲರಿಗಿಂತಲೂ ವಿಭಿನ್ನವಾಗಿದ್ದಾರೆ. ವೇಶ್ಯೆಯರೂ ಮದುವೆಯಾಗಿ ಸಂಸಾರಿಕ ಜೀವನ ನಡೆಸಬಹುದು. ಅದಕ್ಕೆ ಸಾಮಾಜಿಕ ವ್ಯವಸ್ಥೆಯು ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು ಎಂಬುದು ಕಾರಂತರ ಕಾದಂಬರಿಗಳ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗುತ್ತದೆ.

೮. ಕೌಟುಂಬಿಕ ಒತ್ತಡ

ಮನುಷ್ಯರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಕುಟುಂಬದ ಪಾತ್ರ ಪ್ರಮುಖವಾಗಿದೆ. ಕೌಟುಂಬಿಕ ವಾತಾವರಣವು ಉತ್ತಮವಾಗಿದ್ದಲ್ಲಿ ಕುಟುಂಬದ ಸದಸ್ಯರ ಜೀವನವು ಸುಖ-ಶಾಂತಿ, ನೆಮ್ಮದಿಯಿಂದ

ಕೂಡಿರುತ್ತದೆ. ವೇಶ್ಯಾ ಕುಟುಂಬದ ಸ್ಥಿತಿಗತಿಯು ಅಸಹನೀಯವಾಗಿದ್ದು, ವೇಶ್ಯೆಯರು ವೇಶ್ಯಾ ವೃತ್ತಿಯಿಂದಲೇ ಬದುಕು ಸಾಗಿಸುವ ಅನಿವಾರ್ಯತೆ ಇರುತ್ತದೆ. ಅದನ್ನು ತೊರೆದು ಸ್ವಾವಲಂಬಿ ಜೀವನ ಸಾಗಿಸಲು ಪ್ರಯತ್ನಿಸಿದರೂ ಯಶಸ್ವಿಯಾಗುವುದಿಲ್ಲ. ಇದರಿಂದ ವಯಸ್ಸಾದ ವೇಶ್ಯೆಯರು ತಮ್ಮ ಜೀವನವನ್ನು ಸಾಗಿಸಲು ತಮ್ಮ ಹೆಣ್ಣು ಮಕ್ಕಳನ್ನೋ, ಇಲ್ಲವೇ ದತ್ತು ಪುತ್ರಿಯರನ್ನೋ ಆಯ್ಕೆ ಮಾಡಿಕೊಂಡು ವೇಶ್ಯಾವೃತ್ತಿಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಪ್ರೇರೇಪಿಸುವುದನ್ನು ಕಾರಂತರ ಕಾದಂಬರಿಗಳಲ್ಲಿ ಗುರುತಿಸಬಹುದು.

ಶಿವರಾಮ ಕಾರಂತರು ವೇಶ್ಯೆಯರಿಗೂ ಒಂದು ಮನಸ್ಸಿದೆ, ಅವರಿಗೂ ಒಂದು ಬಾಳಿದೆ, ಅವರಿಗೂ ಬದುಕಲು ಸ್ವಾತಂತ್ರ ನೀಡಬೇಕು ಎಂಬುದನ್ನು ತಮ್ಮ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಮುಖಾಂತರ ಚಿತ್ರಿಸಿದ್ದಾರೆ. ವೇಶ್ಯೆಯರಿಗೆ ಮದುವೆ ಮಾಡಿಸುವ ಸಲುವಾಗಿ ಕಾರಂತರು ವರಗಳ್ನು ಹುಡುಕುತಿದ್ದರು ಎಂಬುದು ಅವರ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಿಂದ ತಿಳಿಯುತ್ತದೆ. ಇದರಿಂದ ಕಾರಂತರ ಕಾದಂಬರಿಗಳಲ್ಲಿ ಸುಧಾರಣವಾದಿ ನಿಲುವನ್ನು ಗುರುತಿಸಬಹುದು.

ಮಡಿವಂತಿಕೆಯ ಸಮಾಜದಲ್ಲಿ ಬಾಹ್ಯವಾಗಿ ವೇಶ್ಯೆಯರನ್ನು ಎಲ್ಲರೂ ನಿಂದಿಸುತ್ತಾರಾದರೂ ಅಂತರಂಗದಲ್ಲಿ ಎಲ್ಲರೂ ಅವರನ್ನು ಬಯಸುತ್ತಾರೆ. ಅವರನ್ನು ಕಾಣುವ ಸಲುವಾಗಿಯೇ ಮದುವೆ, ರಸಮಂಜರಿಯಂತಹ ಸಭೆ-ಸಮಾರಂಭಗಳಲ್ಲಿ ನರ್ತನೆಗಾಗಿ ಆಮಂತ್ರಿಸುತ್ತಾರೆ. ಅವರಿಂದ ತಮ್ಮ ಮನಸ್ಸನ್ನು ಉಲ್ಲಾಸಗೊಳಿಸಿಕೊಳ್ಳಲು ಬಯಸುತ್ತಾರೆ. ಇದನ್ನು ಇಂದಿಗೂ ನಾವು ನಮ್ಮ ಸುತ್ತ ಮುತ್ತಲಿನ ಸಮಾಜದಲ್ಲಿ ಕಾಣಬಹುದು.

ಕಾರಂತರು ತಮ್ಮ ಆರಂಭದ ಕಾದಂಬರಿಗಳಿಂದಲೂ ವೇಶ್ಯೆಯರ ಬಗೆಗೆ ಅನುಕಂಪ, ಸಹಾನುಭೂತಿಯನ್ನು ಹೊಂದಿರುವುದು "ನಿರ್ಭಾಗ್ಯ ಜನ್ಮ" ಕಾದಂಬರಿಯಿಂದ ಸ್ಪಷ್ಟವಾಗುತ್ತದೆ. ವೇಶ್ಯೆಯರ ಬದುಕು ಸುಧಾರಣೆಯಾಗಬೇಕು ಎಂಬುದರ ಜಿಜ್ಞಾಸೆಯನ್ನು ಈ ಕಾದಂಬರಿಯು ಒಳಗೊಂಡಿದೆ. ವೇಶ್ಯೆಯರ ಅಸ್ತಿತ್ವ ಹಾಗೂ ಬೇಡಿಕೆ ಅವರ ರೂಪ, ಲಾವಣ್ಯಗಳಿರುವತನಕ ಮಾತ್ರವಿರುತ್ತದೆ. ಯೌವ್ವನವನ್ನು ಕಳೆದುಕೊಂಡ ನಂತರ ವೃದ್ಧಾಪ್ಯದಲ್ಲಿ ವೇಶ್ಯೆಯರ ಬದುಕು ತುಂಬ ಅಸಹನೀಯವಾಗಿರುತ್ತದೆ. ಅವರು ತಮ್ಮ ಸ್ವಾರ್ಥಕ್ಕಾಗಿ ಮುಂದಿನ ಉಪಭೋಗಕ್ಕಾಗಿ ತಮ್ಮ ಸಂಬಂಧಿಕರ ಇಲ್ಲವೆ ಅನ್ಯರ ಮಗಳನ್ನು ದತ್ತುಪುತ್ರಿಯಾಗಿ ತೆಗೆದುಕೊಂಡು ಬೆಳೆಸುತ್ತಾರೆ. ತಮ್ಮ ವಿಲಾಸಿ ಜೀವನಕ್ಕೆ ಮತ್ತೊಂದು ಮುಗ್ಧ ಹೆಣ್ಣನ್ನು ಬಲಿಕೊಡುತ್ತಾರೆ. ಸ್ತ್ರೀಯರು ತಮಗರಿವಿಲ್ಲದೆಯೇ ಮುಂದಿನ ಸ್ತ್ರೀ ಪೀಳಿಗೆಯನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುತ್ತಿರುವುದು ಸ್ತ್ರೀ ಪಾತ್ರಗಳಿಂದ ಸ್ಪಷ್ಟವಾಗುತ್ತದೆ.

ಚಂಪೆಯು ತನ್ನ ಇಳಿವಯಸ್ಸಿನಲ್ಲಿ ಮನೋರಮೆಯೆಂಬ ಹುಡುಗಿಯನ್ನು ದತ್ತುಪುತ್ರಿಯನ್ನಾಗಿ ಸ್ವೀಕರಿಸುವಳು. ಅವಳ ವೇಶ್ಯಾ ಜೀವನದಿಂದ ಬರುವ ಆದಾಯದಲ್ಲಿ ತನ್ನ ಬದುಕನ್ನು ಸಾಗಿಸುತ್ತಿದ್ದಳು. ಮುಚ್ಚುಮರೆಯಿಲ್ಲದೆ ತನ್ನ ಶರೀರವನ್ನು ಹಣಕ್ಕೋಸ್ಕರ ಪುರುಷರಿಗೆ ಅರ್ಪಿಸುವುದು ಅವರ ನಿತ್ಯದ ಕಾಯಕವಾಗಿತ್ತು. ಸದಾನಂದರಾಯರು ಯೌವ್ವನದಲ್ಲಿ ಚಂಪೆಯೊಡನೆ ಸಂಬಂಧ ಹೊಂದಿದ್ದು,

ವೃದ್ಧಾಪ್ಯದಲ್ಲಿ ಕಾಯಿಲೆಗೀಡಾದರು. ದುರಾದೃಷ್ಟವೆಂಬಂತೆ ಸದಾನಂದರಾಯರ ಮಗ ಆನಂದನು ಹೆಂಡತಿಯನ್ನು ತೊರೆದು 'ಮನೋರಮೆ'ಯ ಸಂಗವನ್ನು ಬೆಳೆಸುವನು. ಹೆಂಡತಿಯನ್ನು ತಾತ್ಸಾರದಿಂದ ಕಾಣುತ್ತಿದ್ದನು. ದಿನದ ಹೆಚ್ಚಿನ ಸಮಯ ಮನೋರಮೆಯೊಂದಿಗೆ ಕಳೆಯುತ್ತಿದ್ದನು. 'ವೇಶ್ಯಾವೃತ್ತಿಯು ಪುರುಷನನ್ನು ಮಧ್ಯವರ್ತಿಯನ್ನಾಗಿ ಮಾಡಿಕೊಂಡು ಸ್ತ್ರೀಯರನ್ನೇ ಶೋಷಣೆ ಮಾಡುತ್ತದೆ' ಎಂಬುದು ಈ ಕಾದಂಬರಿಯ ಸ್ತ್ರೀ ಪಾತ್ರಗಳಿಂದ ತಿಳಿಯುತ್ತದೆ.

ಮಗನ ನಡವಳಿಕೆಯನ್ನು ಕಂಡು ಸದಾನಂದರಾಯರು ವ್ಯಾಕುಲಕ್ಕೊಳಗಾಗುವರು. ತನ್ನಂತೆ ತನ್ನ ಮಗ ಜೀವನವನ್ನು ಹಾಳುಮಾಡಿಕೊಳ್ಳಬಾರದೆಂದು ಬಯಸುವರು. ತನ್ನ ಜೀವನದ ಕೊನೆಯ ಗಳಿಗೆಯಲ್ಲಿ ಪಶ್ಚಃತ್ತಾಪದಿಂದ ಬೆಂದು, 'ನಿರ್ಭಾಗ್ಯ ಜನ್ಮದಾರಿಗಳಾದ ಕಾಣಿಕೆಯರ ಕುಲವನ್ನು ಒಂದಲ್ಲ ಒಂದು ಬಗೆಯಿಂದ ಉದ್ಧರಿಸುವ, ಹಿಂದೂ ಸಮಾಜದ ಆ ಕಳಂಕವನ್ನು ಹೋಗಲಾಡಿಸುವ ಯೋಗ್ಯ ಸೂತ್ರಧಾರಿಗಳನ್ನಾಧರಿಸಿ ಆ ಕೆಲಸವನ್ನಾರಂಭಿಸಿ ಯತ್ನಿಸು' ಎಂದು (೨೦೦೩. ಸಂ-೨, ಕಾ-೧, ೨೧೬-೨೧೭) ಸೊಸೆಗೆ ಹೇಳುವಲ್ಲಿ ಕಾದಂಬರಿಕಾರರ ಆಶಯ ವ್ಯಕ್ತವಾಗುತ್ತದೆ.

ಮನೋರಮೆಯು ಚಂಪೆಯ ಸ್ವಾರ್ಥಕ್ಕೆ ಬಲಿಯಾಗಿ ಬುದ್ಧಿ ತಿಳಿಯುವ ಮುನ್ನವೆ ವೇಶ್ಯೆಯಾಗುತ್ತಾಳೆ. ಆ ವೃತ್ತಿಯಿಂದ ಹಿಂತಿರುಗಲಾಗದೆ ಅಸಹಾಯಕತೆಯಿಂದ ಪರಿಸ್ಥಿತಿಯ ಕೈಗೊಂಬೆಯಾಗಿ ವೇಶ್ಯೆಯಾಗಿಯೇ ಬದುಕುವಳು. ಇದರಿಂದ ಅವಳ ಜೀವನ ಹಾಳಾಗುವುದಲ್ಲದೆ ಮತ್ತೊಬ್ಬರ ಜೀವನವನ್ನು ಹಾಳು ಮಾಡುತ್ತಾಳೆ. ಇದು ತಪ್ಪಬೇಕಾದರೆ ವೇಶ್ಯಾವೃತ್ತಿಯ ನಿರ್ಮೂಲನೆಯಿಂದಲೇ ಮಾತ್ರ ಸಾಧ್ಯವಾಗುತ್ತದೆ.

ವೇಶ್ಯೆಯೊಬ್ಬಳು ಕೃತಜ್ಞತೆಯ ಭಾವದಿಂದ ಪುರುಷನಿಗೆ ಪೂರ್ಣತೆಯನ್ನು ನೀಡುತ್ತ ಲೈಂಗಿಕ ಸುಖಕ್ಕಿಂತ ಮಿಗಿಲಾದ ಜೀವನ ದೃಷ್ಟಿಯೊಂದಿದೆ ಎಂಬುದನ್ನು "ಜಾರುವ ದಾರಿಯಲ್ಲಿ" ಕಾದಂಬರಿಯಲ್ಲಿ ಗುಲಾಬಿಯ ಪಾತ್ರದ ಮೂಲಕ ಪ್ರಕಟಿಸಲಾಗಿದೆ. ಗುಲಾಬಿಯು ತಂದೆ-ತಾಯಿಯರಿಂದ ವಂಚಿತಳಾಗಿದ್ದು, ಸೋದರಮಾವ ಮತ್ತು ಅಜ್ಜಿಯ ಆರೈಕೆಯಲ್ಲಿ ಬೆಳೆದಳು. ಗುಲಾಬಿ ಆಕರ್ಷಕ ಚೆಲುವಿಗೆ ಕಳೆಯೆರುವಂತೆ ನರ್ತನವನ್ನು ಕಲಿತಿದ್ದಳು. ಶಾಲೆಗೆ ಹೋಗುತ್ತಿರುವಾಗ ಮಾಧವನನ್ನು ಪ್ರೀತಿಸಿದಳು. ಅವನನ್ನೇ ಮದುವೆಯಾಗಬೇಕೆಂದು ಬಯಸಿದಳು. ಆದರೆ ಅವಳ ಸೋದರಮಾವ ಹಾಗೂ ಅಜ್ಜಿಯರ ಆಸೆ ಬೇರೆಯಾಗಿತ್ತು. 'ಚಂದು'ವು ವಯಸ್ಸಾಗಿದ್ದು, ಮೊಮ್ಮಗಳ ಆದಾಯದ ಮೇಲೆ ಅವಲಂಬಿತವಾಗಿದ್ದಳು. ಅವಳ ಸೋದರಮಾವನು ಕೂಡ ಅವಳ ಆದಾಯವನ್ನೇ ನೆಚ್ಚಿಕೊಂಡಿದ್ದನು. "ಸೊಸೆಯ ಪ್ರಸ್ತವು ತುಂಬ ಶ್ರೀಮಂತರ ಕೈಯಿಂದಲೇ ನಡೆಯಬೇಕೆಂಬುದು ಅವನ ಆಸೆಯಾಗಿತ್ತು". (೨೦೦೩, ಸಂ-೯, ಕಾ-೮, ೫೪) ಏಕೆಂದರೆ ಆ ದುಡ್ಡಿನಿಂದ ಜೀವನವನ್ನು ವಿಲಾಸಮಯವನ್ನಾಗಿ ಕಳೆಯಲು ಬರುತ್ತದೆ ಎಂಬುದು ಅವರ ಆಸೆಯಾಗಿತ್ತು. ಅಜ್ಜಿ ಹಾಗೂ ಸೋದರಮಾವನ ಕುತಂತ್ರದಿಂದಾಗಿ ಗುಲಾಬಿಯು ವಯಸ್ಸಾದ ಮುಗುದಮ ಸಾಹೇಬರ ಪ್ರೇಯಸಿಯಾಗುತ್ತಾಳೆ.

ಗುಲಾಬಿಯು ಮಾಧವನಿಂದ ಗಂಡು ಮಗುವನ್ನು ಪಡೆಯುತ್ತಾಳೆ. ಅದರಿಂದ ಅವಳಿಗೆ ತುಂಬ ಸಂತೋಷವಾಗುತ್ತದೆ. ಆದರೆ ಅವಳ ಅಜ್ಜಿ ಚಂದುವಿಗೆ ಮಾತ್ರ ಬೇಸರವಾಗುತ್ತದೆ. ಏಕೆಂದರೆ ಹೆಣ್ಣು

ಮಗು ಜನಿಸಿದರೆ ತಮ್ಮ ವೇಶ್ಯಾವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುತ್ತಿತ್ತು ಎಂಬ ಸ್ವಾರ್ಥ ಅವಳಲ್ಲಿತ್ತು. ಪತಿತೆಯಾದ ತಾನು ಗರತಿಯಂತೆ ಬಾಳ್ವೆ ಮಾಡಬೇಕು ಎಂದು ಬಯಸಿದ್ದ ಗುಲಾಬಿಯು ಸಹಜವಾಗಿಯೇ ಹೆಣ್ಣು ಮಗುವನ್ನು ಬಯಸಿರಲಿಲ್ಲ. ಏಕೆಂದರೆ ಹೆಣ್ಣು ಮಗು ತನ್ನಂತೆ ಮುಂದೆ ವೇಶ್ಯೆಯಾಗುವುದು ಅವಳಿಗೆ ಇಷ್ಟವಿರಲಿಲ್ಲ. ಅದು ಅವಳು ಇಂದುಮತಿಯೊಂದಿಗೆ ತನ್ನ ದುಃಖ ಹಾಗೂ ಮನದಿಂಗಿತವನ್ನು ಹೇಳುವಲ್ಲಿ ಸ್ಪಷ್ಟವಾಗುತ್ತದೆ. "ಅಮ್ಮ ಎಷ್ಟೋ ಸಾರಿ ನನಗೊಬ್ಬ ಗಂಡನೆಂಬುವನು ಇರಬಾರದೇ ಎಂದು ಬಯಸಿ ಕಣ್ಣೀರು ಸುರಿಸಿದ್ದೇನೆ. ನಮ್ಮಲ್ಲಿ ಮದುವೆಯಾಗುವವರಿಲ್ಲವೆ? ಆದರೆ ಸಾಹೇಬರಿಂದ ನನ್ನ ಬದುಕು ಹಾಳಾದ ಮೇಲೆ ನನ್ನನ್ನು ಯಾರು ಕೇಳುತ್ತಾರೆ? ಮದುವೆಯ ಮಾತಂತಿರಲಿ, ನನಗೆ ಮೆಚ್ಚುವರೊಡನೆ ಬಾಳಿ ಬದುಕುತ್ತೇನೆಂದರೂ ಹಿತವಂದಿಗರೂ ನಂಬಿಕೆಯವರು ಸಿಗುತ್ತಾರೆಯೆ? ನನಗವರು ದುಡಿದು ತರುವುದು ಬೇಡ; ಒಂದೇ ಒಂದು ಕಾಸು ಕೊಡುವುದು ಬೇಡ" (೨೦೦೩, ಸಂ-೯, ಕಾ-೮, ೧೫೮) ಗುಲಾಬಿ ವೇಶ್ಯೆಯಾಗಿದ್ದರೂ, ವೇಶ್ಯೆಯಾಗಿಯೇ ಸಾಯಲು ಬಯಸಲಿಲ್ಲ. ಎಲ್ಲರಂತೆ ತಾನೂ ಮದುವೆಯಾಗಬೇಕು, ಗಂಡ-ಮಕ್ಕಳೊಂದಿಗೆ ಸುಖವಾಗಿರಬೇಕೆಂದು ಬಯಸುತ್ತಿದ್ದಳು. ಹೆಣ್ಣು ಕೇವಲ ಭೋಗದ ವಸ್ತುವಾಗದೆ ಕುಟುಂಬದ ಭಾಗ್ಯದ ಸಂಪ್ರಾಪ್ತಿಗೆ ಸಾಧನವಾಗಬೇಕೆಂದು ಬಯಸಿದಳು. ಅದರ ನೀರಿಕ್ಷೆಯಲ್ಲಿಯೇ ಬಾಳಿದಳು.

ತನ್ನ ಹೆರಿಗೆಯ ಸಮಯದಲ್ಲಿ ಸಹಾಯ ಮಾಡಿದ್ದ ಡಾ.ಶಿವಪ್ಪನವರ ಬಗೆಗೆ ಅವಳಿಗೆ ತುಂಬ ಗೌರವವಿತ್ತು. ಅವರು ಆರ್ಥಿಕ ಅಡಚಣೆಯಿಂದಾಗಿ ಕಂಗಾಲಾದಾಗ ಕೃತಜ್ಞತೆಯಿಂದ ಅವರಿಗೆ ಸಹಾಯ ಮಾಡುತ್ತಾಳೆ. ತನ್ನ ಮನೆಯಲ್ಲಿ ದೊರೆತ ನಿಧಿಯಿಂದ ಅವರ ಮಗುವಿಗೆ ಚಿನ್ನದ ಸರವನ್ನು ಉಡುಗೊರೆಯಾಗಿ ನೀಡುತ್ತಾಳೆ. ಇಂದುಮತಿಯು ಅನಾರೋಗ್ಯದಿಂದ ಆಸ್ಪತ್ರೆಯನ್ನು ಸೇರುತ್ತಾಳೆ. ಅವಳ ಶುಶ್ರೂಷೆಗಾಗಿ ಗುಲಾಬಿಯು ಸಾವಿರಾರು ರೂಪಾಯಿಗಳನ್ನು ವ್ಯಯ ಮಾಡುತ್ತಾಳೆ. ತಾಯಿಯಂತೆ ಅವಳ ಆರೈಕೆ ಮಾಡುತ್ತಾಳೆ. "ಹೆಣ್ಣು ತನ್ನೆಲ್ಲ ಭಾವುಕತೆಯ ನರುಗಂಪನ್ನು ನಿರಂತರ ಬೀರುತ್ತ ಪುರುಷನ ಬದುಕನ್ನು ಹಸನುಗೊಳಿಸುವ ರಸಾರ್ದ್ರಗೊಳಿಸುವ ದಿವ್ಯಶಕ್ತಿಯಾಗಿದ್ದಾಳೆ" ಎಂಬ ಸೂಕ್ತಿಯಂತೆ ಗುಲಾಬಿಯು ಬದುಕುತ್ತಾಳೆ. ಜೀವನೋಪಾಯಕ್ಕಾಗಿ ಗುಲಾಬಿ ವೇಶ್ಯಾವೃತ್ತಿಯನ್ನು ತೊರೆದು ನರ್ಸ ವೃತ್ತಿ (ಸೂಲಗಿತ್ತಿ)ಯನ್ನು ಆರಂಭಿಸುತ್ತಾಳೆ. ಅದರಲ್ಲಿಯೇ ಸಂತೃಪ್ತಿಯನ್ನು ಪಡೆಯುತ್ತಾಳೆ.

'ಜಾರುವ ದಾರಿಯಲ್ಲಿ' ಕಾದಂಬರಿಯಲ್ಲಿ ಆದರ್ಶತ್ವವನ್ನು ಪ್ರಕಟಿಸಲಾಗಿದೆ. ವೇಶ್ಯೆಯರೆಲ್ಲರೂ ದುಷ್ಟರಲ್ಲ. ಅವರಲ್ಲಿಯೂ ಒಳ್ಳೆಯವರಿರುತ್ತಾರೆ ಎಂಬುದು ಕಾದಂಬರಿಯ ಆಶಯವಾಗಿದೆ.

ವೇಶ್ಯೆಯರಿಗೆ ಜೀವನದಲ್ಲಿ ಸರಿಯಾದ ಭದ್ರತೆ ಇರುವುದಿಲ್ಲ. ಇದರಿಂದ ಅವರ ವೃದ್ಧಾಪ್ಯದಲ್ಲಿ ಜೀವನ ನಿರ್ವಹಣೆ ತುಂಬ ಕಷ್ಟಕರವಾಗಿರುತ್ತದೆ. ಅದನ್ನು ನಿವಾರಿಸುವ ಸಲುವಾಗಿ ತಮ್ಮ ಹೆಣ್ಣು ಮಕ್ಕಳನ್ನು, ದತ್ತುಪುತ್ರಿಯರನ್ನು ವೇಶ್ಯಾವೃತ್ತಿಗೆ ನೂಕುವುದು ಹಲವಾರು ಕಾದಂಬರಿಗಳಿಂದ ಸ್ಪಷ್ಟವಾಗುತ್ತದೆ. 'ಅನೈತಿಕ ವ್ಯವಹಾರ ನಿಗ್ರಹದ ಕಾಯ್ದೆ'(೧೯೫೬)ಯ ಪ್ರಕಾರ ಯಾವ ವ್ಯಕ್ತಿಯೇ ಆಗಲಿ ವೇಶ್ಯೆಯರ ವರಮಾನದಿಂದ ಜೀವಿಸುತ್ತಿದ್ದರೆ, ಸರಬರಾಜು ಮಾಡಿದರೆ, ಸ್ತ್ರೀ ಅಥವಾ ಯುವತಿಯನ್ನು ಸರಬರಾಜು

[illegible]

ಮಾಡಲು ಪ್ರಯತ್ನಿಸಿದರೆ, ಒಂದು ವರ್ಷ ಅವಧಿಯವರೆಗೆ ಶಿಕ್ಷೆ ವಿಧಿಸಬಹುದು ಎಂದು ಕಾನೂನು ಇದ್ದರೂ ಜಾರಿಗೆ ಬಂದಿಲ್ಲ. ಕಾರಂತರ ಕಾದಂಬರಿಗಳಲ್ಲಿಯೂ ಈ ಕಾನೂನು ಕ್ರಮದ ಪ್ರಸ್ತಾಪವೇ ಇಲ್ಲ. ಸರಕಾರವು ವಿಧವೆಯರಿಗೆ, ಅಂಗವಿಕಲರಿಗೆ, ವೃದ್ಧರಿಗೆ ಉಪಜೀವನಕ್ಕಾಗಿ ಮಾಸಿಕವಾಗಿ ಧನ ಸಹಾಯ ಮಾಡುತ್ತಿದೆ. ಅದೇ ರೀತಿಯಲ್ಲಿ ವೃದ್ಧ ವೇಶ್ಯೆಯರಿಗೆ ಸರಕಾರವು ಧನ ಸಹಾಯ ಮಾಡಿದಲ್ಲಿ ಅವರು ತಮ್ಮ ಉಪಜೀವನಕ್ಕಾಗಿ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗೆ ನೂಕುವುದು ಸ್ವಲ್ಪವಾದರೂ ಕಡಿಮೆಯಾಗಬಹುದು.

೯. ಆರ್ಥಿಕ ನೆಲೆ

ಆಹಾರ, ನೀರು, ಗಾಳಿ ಮಾನವನ ಮೂಲಭೂತ ಅವಶ್ಯಕತೆಗಳಾಗಿವೆ. ಅವುಗಳ ಹೊರತು ಜೀವನ ಸಾಗಿಸಲು ಸಾಧ್ಯವಿಲ್ಲ. ಕೌಟುಂಬಿಕ ವಾತಾವರಣವು ಆರ್ಥಿಕವಾಗಿ ಸದೃಢವಾಗಿದ್ದರೆ ಜೀವನವು ಸುಖಮಯವಾಗಿರುತ್ತದೆ. ಇಲ್ಲದಿದ್ದರೆ ಬಡತನದಿಂದ ನರಳ ಬೇಕಾಗುತ್ತದೆ. ಹಸಿವನ್ನು ನೀಗಿಸಿಕೊಳ್ಳಲು ಮನುಷ್ಯರು ಎಂಥಹ ಹೇಯಕೃತ್ಯಗಳನ್ನು ಮಾಡುವಲ್ಲಿಯೂ ಹಿಂಜರಿಯುವುದಿಲ್ಲ. ಬಡತನದ ಅಸಹಾಯಕತೆಯಿಂದ ಮಹಿಳೆಯರು ವೇಶ್ಯೆಯರಾಗುವ ಸಾಧ್ಯತೆಯಿದೆ. ಇದನ್ನು ಕಾರಂತರ ಕಾದಂಬರಿಗಳಿಂದ ಕಂಡುಕೊಳ್ಳಬಹುದು.

'ಕನ್ಯಾಬಲಿ' ಕಾದಂಬರಿಯು ವೇಶ್ಯೆಯನ್ನು ಕುರಿತು ರಚಿಸಿದ ಕಾದಂಬರಿಯಾಗಿದೆ. ಹೆಸರೇ ಸೂಚಿಸುವಂತೆ ಸಂಪ್ರದಾಯ, ಆಚಾರ-ವಿಚಾರಗಳ ಮೌಢ್ಯಕ್ಕೆ 'ಕನ್ಯೆ'ಯ ಬಲಿ ಹೇಗಾಗುತ್ತದೆ ಎಂಬುದನ್ನು ಈ ಕಾದಂಬರಿಯಲ್ಲಿ ಗುರುತಿಸಲಾಗಿದೆ. ಯಾವ ಹೆಣ್ಣೂ ಸಹ ತನ್ನ ಇಷ್ಟದಿಂದ ವೇಶ್ಯೆಯಾಗುವುದಿಲ್ಲ. ಪರಿಸ್ಥಿತಿಯ ಕರಾಳತೆಯಿಂದ, ಬಡತನದಿಂದ ವೇಶ್ಯೆಯಾಗುತ್ತಾಳೆ. ಕಾರಂತರ ಸಮಕಾಲೀನರಾದ ಕಟ್ಟಿಮನಿಯವರ "ಬೀದಿಯಲ್ಲಿ ಬಿದ್ದವಳು" ಕಾದಂಬರಿಯಲ್ಲಿ ವೇಶ್ಯಾವಾಟಿಕೆಯಲ್ಲಿ ಮೈಮಾರಿ ಬದುಕುವ ಹೆಣ್ಣೊಬ್ಬಳು ಹೀಗೆ ಹೇಳುತ್ತಾಳೆ. 'ಈ ಓಣಿಯೊಳಗೆ ಇರುವವರೊಳಗೆ ಒಬ್ಬಳೂ ತಾನಾಗೀ ಸಂತೋಷದಿಂದ ಸೂಳೆಗಾರಿಕೆ ಮಾಡುತ್ತಾ ಇಲ್ಲ ತಿಳಿತೆನು? ಒಬ್ಬೊಬ್ಬಳಿಗೆ ಒಂದು ಸಂಕಟ ಬಂದದ್ದರಿಂದ ಈ ನರಕಕ್ಕೆ ಬಂದು ಬಿದ್ದೀವಿ' ಎಂದು ಹೇಳುವಲ್ಲಿ ವೇಶ್ಯಾ ಸಮಸ್ಯೆಗೆ ಕಾರಣವನ್ನು ಪುಷ್ಟೀಕರಿಸುತ್ತದೆ. 'ಹೆಣ್ಣಿಗೆ ಶೀಲ ತುಂಬ ಪವಿತ್ರವಾದುದು' ಎಂಬ ಸಂಪ್ರದಾಯವೇ ಒಂದು ಮರಣದಂಡನೆಯಷ್ಟು ಕಠಿಣವಾದ ಅಲಿಖಿತ ಕಾನೂನಾಗಿದೆ. ಅದು ಧಾರ್ಮಿಕ, ಸಾಮಾಜಿಕ ನೆಲೆಗಳಲ್ಲಿ ಹುದುಗಿರುವ ಅಮಾನವೀಯ ನೀತಿ-ನಿಯಮಗಳನ್ನು ಗುರುತಿಸುತ್ತದೆ. ಇದರಿಂದ ಹೆಣ್ಣು ಬಲಿಯಾಗುತ್ತಿದ್ದಾಳೆ. ಹೆಣ್ಣನ್ನು ಸಮಾಜದಲ್ಲಿ ಒಂದಲ್ಲ ಒಂದು ರೀತಿಯಾಗಿ ಬಲಿದಾನದ ಸಾಧನವಾಗಿ ಬಳಸಿಕೊಳ್ಳಲಾಗುತ್ತಿದೆ. "ಕೆರೆಗೆ ಹಾರ" ಜಾನಪದ ಕಥನ ಕವನದಲ್ಲಿ ಹೆಣ್ಣೊಬ್ಬಳು ಹೊಸ ಕೆರೆಗೆ ಆಹಾರವಾದ ಕಥೆಯನ್ನು ಹೇಳಲಾಗಿದೆ. ಹೆಣ್ಣನ್ನು ಭಾರತೀಯ ಸಾಂಸ್ಕೃತಿಕ ರಾಯಭಾರಿಯಾಗಿ ಗ್ರಹಿಸಿ ಆಕೆಯ ಸಾವನ್ನು ವೈಭವೀಕರಿಸಿವೆ. ಇದು ಹೆಣ್ಣಿನ ಬಲಿಯೇ ಹೊರತು ಆತ್ಮಬಲಿ ಅಥವಾ

[illegible]

ಬಲಿದಾನವಲ್ಲ. ಇದು ಪುರುಷರೂಪ ಸಮಾಜದಲ್ಲಿ ಹೆಣ್ಣು ಜೀವಕ್ಕಿರುವ ಅರ್ಥ ಮತ್ತು ಮೌಲ್ಯವನ್ನು ಸೂಚಿಸುತ್ತದೆ. ಹೆಣ್ಣಿನ ನರಬಲಿ ಸಮಷ್ಟಿ ಹಿತದ ನೆಪದಲ್ಲಿ ಪುರುಷಶಾಹಿಯ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಉದ್ದೇಶವಾಗಿದೆ. ಇಂದು ಸ್ತ್ರೀಯರಿಗೆ ಬೇಕಾಗಿರುವುದು ಪುರಾತನ ಭಾರತೀಯ ಮೌಢ್ಯದಿಂದ ಕೂಡಿದ ಸಂಸ್ಕೃತಿಯಲ್ಲ. ಅವರಿಗೆ ಅವಶ್ಯಕವಾಗಿರುವುದು ಆಧುನಿಕ ಪ್ರಗತಿಪರ ಚಿಂತನೆಗಳು. ಏಕೆಂದರೆ 'ಹೆಂಗಸರೆಂದರೆ ನಿರಂತರ ಮನೋರಂಜನೆಯ ಸಾಧನ' ಎಂಬಂತೆ ಪುರುಷ ಪ್ರಧಾನ ಸಮಾಜವು ಬಿಂಬಿಸುತ್ತಿದೆ ಎಂಬುದನ್ನು ಜನಪದ ಕಥನ ಕವನದಲ್ಲಿ ಗುರುತಿಸಬಹುದು. ಮನುಷ್ಯ ಸೃಷ್ಟಿ ಆರಂಭ ಕಾಲದಿಂದಲೂ ಪ್ರೇಮ ವ್ಯವಹಾರ ನಡೆದುಕೊಂಡು ಬಂದಿದೆ. ಗಂಡಸು ಅವಳ ಬಗೆಗೆ ಬೇಸರ ಪಟ್ಟುಕೊಂಡದ್ದೇ ಇಲ್ಲ!

'ವೈಧವ್ಯ' ಎನ್ನುವಂತದ್ದು ಸ್ತ್ರೀಯರ ಜೀವನದಲ್ಲಿನ ಕರಾಳ ಘಟ್ಟವಾಗಿದ್ದು, ತುಂಬ ಅಮಾನುಷವಾಗಿದೆ. ಇದೊಂದು ಭಾರತೀಯ ಸಂಸ್ಕೃತಿಯಲ್ಲಿನ ಕಪ್ಪು ಚುಕ್ಕೆಯಾಗಿದೆ. 'ವಿಧವೆಯರನ್ನು ದೇವರು ಉಳಿಸುತ್ತಾನೆ. ಆದರೆ ಮನುಷ್ಯರು ಉಳಿಸುವುದಿಲ್ಲ' ಎಂಬ ಸೂಕ್ತಿ ಇನ್ನೂ ಭೀಕರವಾದ ಅನುಭವವನ್ನು ನೀಡುತ್ತದೆ ಎಂಬುದನ್ನು 'ಮಾಲತಿ'ಯ ಪಾತ್ರದ ಮೂಲಕ ನಿರೂಪಿಸಲಾಗಿದೆ. ಮಾಲತಿ ಬಾಲವಿಧವೆ. ಅವಳನ್ನು ಅಮಂಗಳಕಾರಿಯೆಂದು ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳಬಾರದೆಂದು ನಿರ್ಬಂಧವಿತ್ತು. ಎಲ್ಲರೂ ಅವಳನ್ನು ತಾತ್ಸಾರದಿಂದ ಕಾಣುತ್ತಿದ್ದರು. ತನ್ನ ಸ್ಥಿತಿಯಿಂದ ಮಾಲತಿಯು ಹಗಲಿರುಳು ದುಃಖಿಸುತ್ತಿದ್ದಳು.

ಸಮಾಜವು ವಿಧವೆಯರ ಪುನರ್ವಿವಾಹಕ್ಕೆ ಮನ್ನಣೆ ನೀಡವುದಿಲ್ಲ. ಆದರೆ ಮಾಲತಿ ಪ್ರಫುಲ್ಲನನ್ನು ಪ್ರೀತಿಸುತ್ತಾಳೆ. ಮದುವೆಯಾಗಲು ಬಯಸುತ್ತಾಳೆ. ಪ್ರಫುಲ್ಲನು ಮಾಲತಿಯನ್ನು ಪ್ರೀತಿಸುತ್ತಿದ್ದನಾದರೂ 'ವಿಧವೆ'ಯನ್ನು ಮದುವೆಯಾಗುವ ಧೈರ್ಯವನ್ನು ಹೊಂದಿರಲಿಲ್ಲ. ಇದರಿಂದ ಮಾಲತಿಯು ಪ್ರೀತಿಸಿದವನಿಂದಲೂ ಮೋಸ ಹೋಗುತ್ತಾಳೆ. ಅವಳ ಮದುವೆ ನೆರವೇರುವುದಿಲ್ಲ. ಈ ಘಟನೆ ಮಾಲತಿಯ ಬಗೆಗೆ ಅನುಕಂಪ ಸೂಚಿಸುತ್ತದೆಯಾದರೂ 'ಹಿಂದು ಧರ್ಮದ ಕರಾಳ ಸಂಸ್ಕೃತಿ'ಯನ್ನು ಪ್ರತಿಬಿಂಬಿಸುತ್ತದೆ. "ವಿವಾಹ ಎಂದರೇನು ಎಂದು ಅರಿಯದ ಮಕ್ಕಳ ಬಲತ್ಕಾರ ವೈಧವ್ಯ ರೋಗವನ್ನು ಯಾವ ಹೊರಗಿನ ಔಷದವೂ ಗುಣಮಾಡಲಾರದು. ಸುಧಾರಣೆಯಾಗಬೇಕಾದರೆ ಮೊದಲು ವಿಚಾರಪೂರ್ಣ ಜನಾಭಿಪ್ರಾಯ ಬಲಗೊಳ್ಳಬೇಕು. ಎರಡನೆಯದಾಗಿ ತಂದೆ-ತಾಯಿಗಳು ವಿಧವೆಯರಾದ ತಮ್ಮ ಎಳೆಯ ಮಕ್ಕಳನ್ನು ಪುನರ್ವಿವಾಹ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಬೇಕು" ಎಂಬ ಗಾಂಧೀಜಿಯವರ (ಕೃಷ್ಣಮೂರ್ತಿರಾವ್ (ಅನು) ೧೯೪೭; ೧೩೮) ಹೇಳಿಕೆಯು ಉಲ್ಲೇಖನಿಯವಾಗಿದೆ. ಆದರೆ ಮಾಲತಿಯ ತಂದೆ ಮಧುಕರನು ಮಗಳ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡದೆ ತಡೆಯಲು ಪ್ರಯತ್ನಿಸುತ್ತಾನೆ. ಸಾಮಾಜಿಕ ವಿಡಂಬನೆಯಂತೆ ಹೆಂಡತಿ ತೀರಿದ ಕೆಲ ದಿನಗಳಲ್ಲಿಯೇ ತನ್ನ ಐವತ್ತನೆಯ ಇಳಿವಯಸ್ಸಿನಲ್ಲಿ ಮರುಮದುವೆ ಮಾಡಿಕೊಳ್ಳಲು ಏರ್ಪಾಡು ಮಾಡುತ್ತಾನೆ. ಇದು ಪುರುಷ ಪ್ರಧಾನ ಸಮಾಜದ ದ್ವಿಮುಖ ಮೌಲ್ಯವ್ಯವಸ್ಥೆಯನ್ನು ನಿರೂಪಿಸುತ್ತದೆ. "ನೈತಿಕ ದೈಹಿಕ ಶಕ್ತಿಯಿಲ್ಲದವರಿಗೆ ಸಂಭೋಗ ಮಾಡಲು ಅಧಿಕಾರವಿಲ್ಲ. ಆ ರೀತಿ ಮಾಡಿದರೆ ಅದು ವ್ಯಭಿಚಾರ"ವಾಗುತ್ತದೆ ಎಂಬ ಗಾಂಧೀಜಿಯವರ

(ಕೃಷ್ಣಮೂರ್ತಿರಾವ್ (ಅನು) ೧೯೪೭; ೪೬) ಹೇಳಿಕೆ ನಿಜ. ಮಧುಕರನ ಎರಡನೆಯ ಮದುವೆಯನ್ನು ಕಾದಂಬರಿಯಲ್ಲಿ ತೀವ್ರವಾಗಿ ವಿಡಂಬಿಸಲಾಗಿದೆ.

ಚಿಕ್ಕಂದಿನಲ್ಲಿಯೇ ಗಂಡನನ್ನು ಕಳೆದುಕೊಂಡ ಮಾತ್ರಕ್ಕೆ ಹೆಣ್ಣಿನಲ್ಲಿ ಹುದುಗಿರುವ ಆಸೆ ಆಕಾಂಕ್ಷೆಗಳು ನಶಿಸಿ ಹೋಗುವುದಿಲ್ಲ. ಅವಳಲ್ಲಿರುವ ಸುಪ್ತ ಬಯಕೆಯನ್ನು ಹೇಗೆ ತಣಿಸಬೇಕು ಎಂದು ಮಾಲತಿಯು ತನ್ನ ಮನದಿಂಗಿತವನ್ನು ಅತ್ತಿಗೆಯ ಹತ್ತಿರ ತೋಡಿಕೊಳ್ಳುತ್ತಾಳೆ. ಪ್ರಫುಲ್ಲನನ್ನು ಪ್ರೀತಿಸುತ್ತಾಳೆಯಾದರೂ ಆತನು ತನ್ನನ್ನು ಮದುವೆಯಾಗುವನೋ ಇಲ್ಲವೋ ಎಂಬುದನ್ನು ದೃಢಪಡಿಸಿಕೊಳ್ಳದೆ ಎಡವುತ್ತಾಳೆ. ಮುಂದಿನ ಭವಿಷ್ಯದ ಬಗೆಗೆ ಆಲೋಚನೆ ಮಾಡದೆ ಪರಿಸ್ಥಿತಿಯನ್ನೆದುರಿಸಲು ಮಾನಸಿಕವಾಗಿ ಸದೃಢಳಾಗದೆ, ದುಡುಕುತನದಿಂದ ಮನೆಯನ್ನು ಬಿಟ್ಟು ಹೋಗುತ್ತಾಳೆ. ಸ್ವಂತಂತ್ರ ಬಾಳ್ವೆ ಮಾಡುವ ನಿರ್ಧಾರ ಉತ್ತಮವಾಗಿತ್ತಾದರೂ ಅವಳಲ್ಲಿ ಬಿಡಿಗಾಸು ಕೂಡ ಇರಲಿಲ್ಲ. ಹಾಗಾಗಿ ಹಸಿವೆಯಿಂದ ಕಂಗಾಲಾಗುತ್ತಾಳೆ. ಗೊತ್ತು ಗುರಿಯಿಲ್ಲದ ಅವಳು ದನ ಕಾಯುವ ಹುಡುಗರೊಂದಿಗೆ ಹಸಿವಾಗುತ್ತಿದೆ ಎಂದು ಬೇಡಿ ಒಂದಿಷ್ಟು ನೇರಳೆ ಹಣ್ಣುಗಳನ್ನು ತಿಂದಳು. ರಾತ್ರಿಯೆಲ್ಲ ನಡೆದು ಮಂಗಳೂರನ್ನು ತಲುಪಿದಳು. ಬೋಳಾರದ 'ಮಂಗಳಾದೇವಿ' ಗುಡಿಯ ಹೊರ ಜಗುಲಿಯ ಮೇಲೆ ಮಲಗುತ್ತಾಳೆ. ಅಲೆದು ಅಲೆದು ತುಂಬ ದಣಿದಿದ್ದ ಮಾಲತಿಯು ಹೊಟ್ಟೆ ಹಸಿವಿನಿಂದ ಬಳಲಿದ್ದಳು. ಭಿಕ್ಷೆ ಬೇಡುವುದಕ್ಕೆ ಮನಸಾಕ್ಷಿ ಒಪ್ಪದಿದುದರಿಂದ ಭಿಕ್ಷೆ ಬೇಡಲಾಗದೆ, ಹಸಿವನ್ನು ತಾಳಲಾಗದೆ ನರಳಾಡುತ್ತಾಳೆ. ಹಗಲಲ್ಲಿ ಗುಡಿಯಲ್ಲಿ; ರಾತ್ರಿ ನಾಗರಿಕರ ಅಂಜಿಕೆಯಿಂದಾಗಿ ಎಲ್ಲಾದರೂ ಮರಗಳ ಸಂದಿನಲ್ಲಿ ಕಾಲ ಕಳೆಯುತ್ತಿದ್ದಳು.

"ಪ್ರಾಯದ ಹೆಣ್ಣಿಗೆ ವೈಧವ್ಯ ಒದಗಿ ಬಂದರೆ, ಅವಳು ಅನಾಥಳಾಗಿದ್ದರೆ, ಬಡತನ ಅವಳನ್ನು ಹರಿದು ಮುಕ್ಕುತ್ತಿದ್ದರೆ ಅಂಥವಳು ಸ್ವತಂತ್ರವಾಗಿದ್ದುಕೊಂಡು ನೀತಿಯುತ ಜೀವನವನ್ನು ಸಾಗಿಸಲು ಪುರುಷ ಸಮಾಜ ಅವಕಾಶ ಕೊಡುವುದಿಲ್ಲ" ಎಂಬ ಶಕುಂತಲ ದುರ್ಗಿಯವರ (೧೯೯; ೪೦) ಹೇಳಿಕೆಯು ತುಂಬ ಪ್ರಸ್ತುತವೆನಿಸುತ್ತದೆ. ಹಸಿವನಿಂದ ಕಂಗಾಲಾದ ಮಾಲತಿ ತರುಣಿಯೂ, ರೂಪವತಿಯೂ ಆಗಿದ್ದಳು. ಅವಳ ಯೌವ್ವನಕ್ಕೆ ಮನಸೋತ ಹಲವರು ಅವಳನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅದಕ್ಕಾಗಿ ಹೊಂಚು ಹಾಕುತ್ತಿದ್ದರು. ಅವಳು ಹಸಿವಿನಿಂದ ಕಂಗಾಲಾದುದನ್ನು ಗಮನಿಸಿದ ಒಬ್ಬ ತರುಣನು ಅವಳ ಮುಂದೆ ಒಂದಿಷ್ಟು ಬಾಳೆಯ ಹಣ್ಣುಗಳನ್ನು ತಂದಿರಿಸಿದನು. ಹಸಿವಿನ ಮಂಪರಿನಲ್ಲಿದ್ದ ಮಾಲತಿಯು ಆ ಬಾಳೆಯ ಹಣ್ಣುಗಳನ್ನು ತಂದಿರಿಸಿದವರಾರು, ಅವರು ತನ್ನಿಂದ ಏನನ್ನು ನಿರೀಕ್ಷಿಸುವರು ಎಂಬುದನ್ನು ಆಲೋಚಿಸದೆ ಅದನ್ನೆಲ್ಲ ಒಮ್ಮೆಗೆ ತಿಂದು ಮುಗಿಸಿದಳು. ಅವಳ ದೌರ್ಬಲ್ಯವನ್ನರಿತ ತರುಣನು ಉತ್ಸಾಹಿತನಾಗಿ ಅವಳ ಹೆಗಲ ಮೇಲೊಂದು ಕೈಯನ್ನಿರಿಸಿದನು. ಬಾಳೆ ಹಣ್ಣಿನ ಋಣ ಅವಳನ್ನು ಮೂಕಳನ್ನಾಗಿಸಿತು. ಪ್ರತಿರೋಧಿಸಲು ಸಾಧ್ಯವಾಗದೆ, ಮೌನವಾದಳು. 'ತಾನವನ ಅನ್ನವನ್ನು ತಿಂದಿರುವೆ. ಅವನ ಆಸೆಯನ್ನು ಪೂರೈಸಬೇಡವೇ' ಎಂದು ಆ ದಿನ ಅನ್ನಕ್ಕಾಗಿ ಸೂಳೆಯಾಗುತ್ತಾಳೆ. ಹಸಿವಿನಿಂದ ಬಳಲುತ್ತಿದ್ದ ಅವಳು ಒಪ್ಪೊತ್ತಿನ ಊಟದಿಂದಾಗಿ, ಪರಿಸ್ಥಿತಿಯ ಕಪಿ ಮುಷ್ಠಿಯಲ್ಲಿ ಸಿಲುಕಿ 'ನಿತ್ಯಸುಮಂಗಲಿ'ಯಾಗುತ್ತಾಳೆ. 'ಹಸಿವು' ಮನುಷ್ಯನನ್ನು ಯಾವ ಮಟ್ಟಕ್ಕಾದರೂ ಕೊಂಡೊಯ್ಯುತ್ತದೆ.

ಏನೆಲ್ಲವನ್ನು ಮಾಡಿಸುತ್ತದೆ ಎಂಬುದನ್ನು ಮಾಲತಿಯ ಪಾತ್ರದಿಂದ ಪ್ರಕಟಿಸಲಾಗಿದೆ. ನಿರಾಶ್ರಿತ ಬದುಕು ಮತ್ತು ಆರ್ಥಿಕ ದುಃಸ್ಥಿತಿ ಅವಳನ್ನು ವೇಶ್ಯೆಯನ್ನಾಗಿಸುತ್ತದೆ. ಕಾರಂತರ ಸಮಕಾಲೀನ ಲೇಖಕರಾದ ತ.ರಾ.ಸು. ಅವರ 'ಮಸಣದ ಹೂವು' ಕಾದಂಬರಿಯಲ್ಲಿಯೂ ಸಹ 'ಬಡತನ' ತುಂಬ ಅಪಾಯಕಾರಿಯಾದುದು. ಅದು ಏನನ್ನಾದರೂ ಮಾಡಲು ಹಚ್ಚುತ್ತದೆ ಎಂಬುದರ ಚಿತ್ರಣವಿದೆ. ಸರಸ್ವತಿ, ಭಾಗೀರಥಿಯರು ಬಡತನದಿಂದಾಗಿಯೇ ವೇಶ್ಯೆಯರಾಗುವ ಚಿತ್ರಣ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

'ಕನ್ಯಾಬಲಿ' ಕಾದಂಬರಿಯಲ್ಲಿ ಗುರುತು ಪರಿಚಯವಿಲ್ಲದ ಒಬ್ಬ ವ್ಯಕ್ತಿಯ ಆಲಿಂಗನಕ್ಕಾಗಿ ಕೇವಲ ಹತ್ತೆಂಟು ಬಾಳೆ ಹಣ್ಣುಗಳಿಗಾಗಿ ಬಲಿಯಾದ ಮಾಲತಿಯು ಪರರ ಭೋಗದ ವಸ್ತುವಾಗುತ್ತಾಳೆ. ಕ್ರಮೇಣ ಅದುವೇ ಅವಳಿಗೆ ನಿತ್ಯ ಕಾಯಕವಾಗುತ್ತದೆ. ಮುಂದೊಂದು ದಿನ ಪ್ರಫುಲ್ಲನು ತಾನು ಮಾಡಿದ ತಪ್ಪಿನಿಂದಾಗಿ ಪಶ್ಚಾತ್ತಾಪ ಪಡುತ್ತಾನೆ. ಪ್ರಾಯಶ್ಚಿತ್ತವೆಂಬಂತೆ ಮಾಲತಿಯನ್ನು ಮದುವೆಯಾಗಲು ನಿರ್ಧರಿಸುತ್ತಾನೆ. ಮಾಲತಿಯು ಪ್ರಫುಲ್ಲನನ್ನು ಮದುವೆಯಾಗಿ ಸುಖವಾಗಿ ಇರಬಹುದಾಗಿತ್ತಾದರೂ ಮದುವೆಗೆ ಒಪ್ಪುವುದಿಲ್ಲ. 'ನನ್ನಿಂದ ನಿನಗೆ ಯಾವುದೇ ರೀತಿಯ ಸುಖ ದೊರೆಯಲಾರದು. ನಾನು ನಿನಗೆ ಮದುವೆಯಾಗಲು ಸಾಧ್ಯವಿಲ್ಲ'ವೆಂದು ಸಂತೈಸಿ ಕಳುಹಿಸುತ್ತಾಳೆ. ಏಕೆಂದರೆ ಪ್ರಫುಲ್ಲನಿಗೆ ದ್ರೋಹ ಮಾಡುವುದು ಅವಳಿಗೆ ಇಷ್ಟವಿರಲಿಲ್ಲ. ಅವಳು ವೇಶ್ಯೆಯಾಗಿದ್ದರೂ ಮಾನವೀಯತೆಯಿಂದ ವರ್ತಿಸುತ್ತಾಳೆ. ಕಾದಂಬರಿಯಲ್ಲಿ 'ವೇಶ್ಯೆಯರೆಲ್ಲರೂ ಕೆಟ್ಟವರಲ್ಲ, ಅವರಲ್ಲಿಯೂ ಒಳ್ಳೆಯವರಿರುತ್ತಾರೆ' ಎಂಬ ಆದರ್ಶವನ್ನು ಮಾಲತಿಯ ಪಾತ್ರದಿಂದ ನಿರೂಪಿಸಲಾಗಿದೆ. ಅಂತೆಯೇ ಅವಳು ಮದುವೆಗೆ ನಿರಾಕರಿಸುವುದು ಸ್ಪಷ್ಟವಾಗುತ್ತದೆ. 'ಸ್ತ್ರೀ ಸೂಳೆಯಾದರೇನು, ಅವಳಿಗೂ ತನ್ನ ಸ್ವಂತ ವ್ಯಕ್ತಿತ್ವವಿದೆ. ಅವಳಿಗೂ ಹೃದಯವಂತಿಕೆ ಇದೆ' ಎಂಬುದನ್ನು ಶರಚ್ಚಂದ್ರ ಅವರು ತಮ್ಮ 'ದೇವದಾಸ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರಂತ ಮತ್ತು ಶರಚ್ಚಂದ್ರ ಅವರ ವಿಚಾರಗಳಲ್ಲಿ ಸಾಮ್ಯವನ್ನು ಗುರುತಿಸಬಹುದು.

ಮಾಲತಿಯು ವೇಶ್ಯಾವೃತ್ತಿಗೆ ಬಯಸಿ ಬಂದವಳಲ್ಲ, ಕಾಲದ ಚಕ್ರಕ್ಕೆ ಸಿಲುಕಿ ಸೂಳೆಯಾದವಳು. ಅವಳಿಗೆ ಧನದಾಸೆಯಾಗಲಿ, ವ್ಯಾಮೋಹವಾಗಲಿ ಇರಲಿಲ್ಲ. ತನ್ನಿಂದ ಬೇರೆಯವರು ಹಾಳಾಗಬಾರದೆಂಬ ಮಾನವೀಯತೆಯಿಂದ ಯುವಕರಿಗೆ ಬುದ್ಧಿ ಹೇಳುವಳು. ದಾರಿ ತಪ್ಪುತ್ತಿರುವ ಯುವಕರನ್ನು ಸರಿದಾರಿಗೆ ತರಲು ಪ್ರಯತ್ನಿಸುವಳು. ಆದರೆ ಮಾಲತಿಯ ಜೀವನಕ್ಕೆ ವೇಶ್ಯಾವೃತ್ತಿಯೆ ಆಸರೆಯಾಗಿತ್ತು. ವೇಶ್ಯಾವೃತ್ತಿಯ ಹೊರತು ಪಡಿಸಿ ಮಾಲತಿಗೆ ಬದುಕಲು ಬೇರಾವ ಮಾರ್ಗಗಳಿರಲಿಲ್ಲ. ಹಾಗಾಗಿ ಅವಳು ತನ್ನಲ್ಲಿಗೆ ಬರುವ ಯುವಕರಿಗೆ ಬುದ್ಧಿಮಾತು ಹೇಳುವುದು ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಕಾದಂಬರಿಯಲ್ಲಿ ಆದರ್ಶವನ್ನು ಮಾಲತಿಯ ಪಾತ್ರದ ಮೂಲಕ ಚಿತ್ರಿಸುತ್ತ, ವಾಸ್ತವತೆಯಿಂದ ದೂರ ಸರಿದಿರುವುದು ಸ್ಪಷ್ಟವಾಗುತ್ತದೆ.

ವೀರೇಶನು ಮಾಲತಿಯನ್ನು ಪ್ರೀತಿಸುತ್ತಿದ್ದನು. ಮದುವೆಯಾಗಲು ಬಯಸಿದನು. ಆದರೆ ಮಾಲತಿಯು ಅವನೊಂದಿಗೆ ಮದುವೆಯಾಗಲು ಒಪ್ಪಲಿಲ್ಲ. ಬದಲಿಗೆ ಅವನನ್ನು ಗಂಡನೆಂದು ಭಾವಿಸುತ್ತಾಳೆ.

[illegible]

ಅವನಿಂದ ಮಗುವನ್ನು ಪಡೆಯುತ್ತಾಳೆ. ಆ ಮಗುವನ್ನಲ್ಲದೆ ಅವನಿಂದ ಆಸ್ತಿ ಪಾಸ್ತಿಯನ್ನು ಬಯಸಿದವಳಲ್ಲ. ಆದರೆ ಆ ಮಗುವಿನ ತಂದೆ ತಾನೆಂದು ಜಗತ್ತಿಗೆ ಸಾರಬೇಕೆಂದು ವೀರೇಶನಲ್ಲಿ ಮೊರೆಯಿಡುತ್ತಾಳೆ. ಆದರೆ ವೀರೇಶನು ಅದಕ್ಕೊಪ್ಪುವುದಿಲ್ಲ. ತನ್ನ ಕೋರಿಕೆ ಈಡೇರದಿದ್ದಾಗ ಮಾಲತಿಯು ತನ್ನ ಜೀವನದ ಮೇಲೆ ಜಿಗುಪ್ಸೆ ಹೊಂದುತ್ತಾಳೆ. ವೀರೇಶನ ಆಶ್ರಯದಿಂದ ಹೊರಬರುತ್ತಾಳೆ. ಇದರಿಂದ ಅವಳ ಜೀವನ ಮತ್ತೇ ಬಡತನದಿಂದಾಗಿ ನರಳುವಂತಾಗುತ್ತದೆ. ಅವಳ ಮಗುವಿಗೆ ಒಂದು ಕಣ್ಣು ಕುರುಡಾಗಿತ್ತು. ಹಾಗೆಯೇ ವಿರೇಶನ ಮತ್ತೊಂದು ಮಗುವಿಗೂ ಒಂದು ಕಣ್ಣು ಕುರುಡಾಗಿತ್ತು. ಇದಕ್ಕೆ ಕಾರಣ ಮಾಲತಿ ವೀರೇಶರ ಲೈಂಗಿಕ ಸಂಬಂಧವಾಗಿತ್ತು. "ಸಾಮಾನ್ಯವಾಗಿ ಗುಹ್ಯರೋಗಗಳು ಲೈಂಗಿಕ ಸಂಪರ್ಕದಿಂದ ಪ್ರಸಾರವಾಗುತ್ತವೆ. ರೋಗಿಗಳ ಪೈಕಿ ಸುಮಾರು ಶೇಕಡಾ ೯೫ ಮಂದಿ 'ಸಿಫ್ಲಸ್' ಕಾಯಿಲೆಯಿಂದ ನರುಳುತ್ತಿರುವವರೆ. ಸಿಫ್ಲಸ್‌ನಿಂದ ನರಳುತ್ತಿರುವವರ ಮಕ್ಕಳು ಸಾಮಾನ್ಯವಾಗಿ ಕುರುಡರಾಗಿಯೂ, ಕಿವುಡರಾಗಿಯೂ ಮತ್ತು ಇತರ ಶಾರೀರಿಕ ನ್ಯೂನತೆಗಳಿಂದಲೂ ಕೂಡಿರುತ್ತಾರೆ". ಎಂಬ ಶಿವಣ್ಣನವರ(೯೮೪; ೧೮೨) ಹೇಳಿಕೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವೇಶ್ಯೆಯರಿಗೆ ಹಾಗೂ ವೇಶ್ಯೆಯರ ಸಂಪರ್ಕ ಹೊಂದಿದವರಿಗೆ ಹಲವಾರು ರೋಗಗಳು ಬರುವ ಸಾಧ್ಯತೆಯಿರುತ್ತದೆ ಎಂಬುದನ್ನು ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ವೈದ್ಯಕೀಯ ಹಿನ್ನೆಲೆಯಲ್ಲಿ ಮಾಲತಿ ಹಾಗೂ ವೀರೇಶರ ಸಂಬಂಧ, ಅದರಿಂದ ಉಂಟಾಗುವ ರೋಗಗಳು ಹಾಗೂ ಅವರಿಂದ ಹುಟ್ಟುವ ಮಕ್ಕಳು ಅಂಗವಿಕಲರಾಗುವ ಸಾಧ್ಯತೆಯಿದೆ ಎಂಬುದನ್ನು ಕಾದಂಬರಿಯಲ್ಲಿ ಬಿಂಬಿಸಲಾಗಿದೆ. ಇದರಿಂದ ಯುವಜನತೆ ಎಚ್ಚೆತ್ತುಕೊಳ್ಳಬೇಕು ಎಂಬುದು ಕಾದಂಬರಿಯ ಆಶಯವಾಗಿದೆ.

ಮಾಲತಿಯು ಹಲವಾರು ರೋಗಗಳಿಂದ ಬಳಲುತ್ತಿದ್ದಳು. ಬಡತನದಿಂದಾಗಿ ತನ್ನ ಮಗುವಿಗೆ ಹಾಲುಣಿಸಲು ಸಾಧ್ಯವಾಗದೆ ಕಳವಳಕ್ಕಿಡಾಗುತ್ತಾಳೆ. ಅದಕ್ಕಾಗಿ ಕಕ್ಷಿದಾರರನ್ನು ತನ್ನಡೆಗೆ ಸೆಳೆಯಲು ಮನೆಯ ಹೊರ ಜಗುಲಿಯ ಮೆಲೆ ಹೊಂಚು ಹಾಕುತ್ತ ಕೂಡುವಳು. ಸೂಳೆಯರೊಂದಿಗೆ ಸಂಬಂಧವನ್ನು ಹೊಂದಿದ್ದ ಮಧುಕರನು ಅದೇ ದಾರಿಯಲ್ಲಿ ಸುಳಿಯುತ್ತಿದ್ದನು. ಮಗಳನ್ನು ಗುರುತಿಸಲಾಗದೆ, ಅವಳಲ್ಲಿಗೆ ಹೋಗುವುದು ಸಮಾಜದ ವಿಡಂಬನೆಯಾಗಿದೆ. ಆದರೆ ತಂದೆಯನ್ನು ಗುರುತಿಸಿದ ಮಾಲತಿಯು ಪಾಪಪ್ರಜ್ಞೆಯಿಂದ ಸಾವನ್ನಪ್ಪುವಳು. ಅವಳ ತಣ್ಣಗಿನ ದೇಹಸ್ಪರ್ಶದಿಂದ ಅವಳು ಮಡಿದುದನ್ನು ಖಚಿತ ಪಡಿಸಿಕೊಂಡ ಮಧುಕರನು ಅವಳು ತನ್ನ ಮಗಳು ಮಾಲತಿಯೆಂದು ಗುರುತಿಸಿ ಅವಳ ಕಾಲಬುಡದಲ್ಲಿಯೇ ಪ್ರಜ್ಞೆ ತಪ್ಪುವನು.

'ಕನ್ಯಾಬಲಿ' ಕಾದಂಬರಿಯಲ್ಲಿ ಮಾಲತಿಯು ತನ್ನದಲ್ಲದ ತಪ್ಪಿನಿಂದಾಗಿ ವಿಧವೆಯಾಗಿ ಸಮಾಜದ ದೂಷಣೆಗೆ ಗುರಿಯಾಗುವಳು. 'ಬಾಲ್ಯ ವಿವಾಹ' ಅಪರಾಧವೆಂದು ಗೊತ್ತಿದ್ದರೂ ಇಂದಿಗೂ ಸಮಾಜದಲ್ಲಿ ಬಾಲ್ಯ ವಿವಾಹ ನಡೆಯುತ್ತಿರುವುದನ್ನು ಗುರುತಿಸಬಹುದು. 'ಬಾಲ್ಯ ವಿವಾಹ' ನಿರ್ಮೂಲನೆಗಾಗಿ ಈಶ್ವರಚಂದ್ರ ವಿದ್ಯಾಸಾಗರ ಅವರು ತುಂಬ ಶ್ರಮಿಸಿದ್ದಾರೆ. ಗುಲ್ವಾಡಿ ವೆಂಕಟರಾವ ಅವರ 'ಇಂದಿರಾಬಾಯಿ' (೧೮೯೯) ಕಾದಂಬರಿಯಲ್ಲಿ 'ವಿಧವಾ ವಿವಾಹ'ವನ್ನು ಸಮರ್ಥಿಸಲಾಗಿದೆ. ವಿದ್ಯಾಸಾಗರ ಅವರು

'ಹಿಂದೂ ವಿಧವೆಯ ವಿವಾಹ' ಎಂಬ ಪುಸ್ತಕವನ್ನು ಪ್ರಕಟಿಸಿ ಜನಸಾಮಾನ್ಯರಲ್ಲಿ ವಿಧವೆಯರ ಪುನರ್ ವಿವಾಹಕ್ಕಾಗಿ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದರು. ಪಂಡಿತ ರಮಾಬಾಯಿ, ಕಮಲಾದೇವಿ ಚಟ್ಟೋಪಾಧ್ಯಾಯರಂತವರು ತಾವು ಪುನರ್ವಿವಾಹವಾಗಿ ಸಾಮಾಜಿಕ ಪರಿವರ್ತನೆಗೆ ಮುಂದಾದರು. ಆದರೆ 'ಕನ್ಯಾಬಲಿ' (೧೯೩೨) ಕಾದಂಬರಿಯಲ್ಲಿ ಸಂಪ್ರದಾಯಶೀಲತೆಯಿಂದ ವಿಧವಾ ವಿವಾಹ ನಡೆಯಲು ಸಾಧ್ಯವಾಗಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಮಾಲತಿಯು ಪರಿಸ್ಥಿತಿಯ ವಿಕೋಪಕ್ಕೆ ಗುರಿಯಾಗಿ ಅಸಹಾಯಕತೆಯಿಂದ ವೇಶ್ಯೆಯಾಗುತ್ತಾಳೆ. ವೇಶ್ಯೆಯಾದ ಅವಳಿಗೆ ತನ್ನ ಬಾಳನ್ನು ಸುಧಾರಿಸಿಕೊಳ್ಳಲು ಕೆಲವೊಂದು ಅವಕಾಶಗಳು ದೊರೆಯುತ್ತವೆ. ಪ್ರಪುಲ್ಲನು ಅವಳನ್ನು ಮದುವೆಯಾಗಲು ಬಯಸುತ್ತಾನೆ. ವೀರೇಶನೂ ಮದುವೆಯಾಗಲು ಬಯಸುತ್ತಾನೆ. ಆದರೆ ಮಾಲತಿಯು 'ತನ್ನಿಂದ ಅವರ ಬಾಳು ಹಾಳಾಗುವುದು ಸರಿಯಲ್ಲ' ಎಂಬ ಮಾನವೀಯತೆಯಿಂದ ಮದುವೆಯನ್ನು ನಿರಾಕರಿಸುತ್ತಾಳೆ. ಕಾದಂಬರಿಯಲ್ಲಿ ಸುಧಾರಣೆಗಿಂತಲೂ ಆದರ್ಶದ ಕಡೆಗೆ ಹೆಚ್ಚು ಒಲವು ತೋರಿಸಿರುವುದು ಮಾಲತಿಯ ಪಾತ್ರದಿಂದ ತಿಳಿಯುತ್ತದೆ. ಇದರಿಂದಾಗಿಯೇ ಮಾಲತಿಯು ಮದುವೆಯಾಗದೆ ವೇಶ್ಯೆಯಾಗಿಯೇ ಉಳಿದು ಸಾಯುತ್ತಾಳೆ.

''ಮೈ ಮನಗಳ ಸುಳಿಯಲ್ಲಿ' ಕಾದಂಬರಿಯ ಮಂಜುಳೆ ವೇಶ್ಯಾವೃತ್ತಿಯನ್ನು ಪವಿತ್ರವೆಂದು ಭಾವಿಸಿದರೆ, ಶಾರಿಯು ಅದನ್ನು ಧನದ ಆಸೆಗಾಗಿ ಬಳಸಿಕೊಳ್ಳುತ್ತಾಳೆ. ಕಾದಂಬರಿಯಲ್ಲಿ ವೇಶ್ಯೆಯರಿಬ್ಬರ ಮನೋಧರ್ಮವನ್ನು ಚಿತ್ರಿಸಲಾಗಿದೆ. ಮಂಜುಳೆ ವೇಶ್ಯಾವೃತ್ತಿಯನ್ನು ಗೌರವದಿಂದ ಕಾಣುತ್ತಿದ್ದು, ಅದನ್ನು ನಿಷ್ಠೆಯಿಂದ ಪಾಲಿಸುತ್ತಿದ್ದಳು. ಧನದ ಆಸೆಗಾಗಿ ಎಂದೂ ಮನಸೋತವಳಲ್ಲ. ಆದರೆ ಮಂಜುಳೆಯ ದತ್ತು ಪುತ್ರಿಯಾದ ಶಾರಿ ವ್ಯವಹಾರಿಕವಾಗಿ ನಡೆದುಕೊಳ್ಳುತ್ತಿದ್ದಳು. ಮೈ ಮನಗಳ ಮೂಲಕ ಪಡೆಯಬಹುದಾದ ಪ್ರೇಮ, ಅರಿವುಗಳ ಬದಲು ಆಕೆಗೆ ಪ್ರದರ್ಶನ, ಆಡಂಬರ ಹಾಗೂ ಚಾಪಲ್ಯ ಮುಖ್ಯವಾಗುತ್ತದೆ. ಆಡಂಬರದ ಸ್ವಭಾವವನ್ನು ಹೊಂದಿದ ಶಾರಿಯು ಊರಿನಲ್ಲಿ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಸ್ವಂತ ಖರ್ಚಿನಲ್ಲಿಯೇ ನಾಟಕದ ಏರ್ಪಾಡು ಮಾಡುತ್ತಾಳೆ. ಆ ನಾಟಕದಲ್ಲಿ ಅಭಿನಯಿಸುತ್ತಾಳೆ. ಮಂಜುಳೆಯಿಂದ ಬಂದ ಆಸ್ತಿಯೆಲ್ಲವನ್ನು ಹಾಳುಮಾಡುತ್ತಾಳೆ. ಕಾಳಿಂಗಯ್ಯ ಎಂಬುವವನನ್ನು ಬಯಸಿ ಅವನ ದುಷ್ಟತನಕ್ಕೆ ಬಲಿಯಾಗುತ್ತಾಳೆ. ತನ್ನ ಆಸ್ತಿಯನ್ನೆಲ್ಲ ಕಳೆದುಕೊಂಡು ಅಧಃಪತನ ಹೊಂದುತ್ತಾಳೆ. ವೇಶ್ಯೆಯರನ್ನು ಹುಡುಕಿಕೊಂಡು ವಿಟರು ಬರುವುದು ಸಮಾಜದಲ್ಲಿ ಸಾಮಾನ್ಯವಾದುದು. ಆದರೆ ಶಾರಿ ಇದಕ್ಕೆ ಅಪವಾದವಾಗಿದ್ದಳು. ಅವಳೇ ವಿಟರನ್ನು ಹುಡುಕಿಕೊಂಡು ಹೋಗುತ್ತಿದ್ದಳು.

'ಕಾಮ' ಪುರುಷಾರ್ಥಗಳಲ್ಲಿ ಒಂದು. ಅದು ನಿಸರ್ಗದತ್ತವಾಗಿದ್ದು, ಎಲ್ಲರಲ್ಲಿಯೂ ಅದನ್ನು ಗುರುತಿಸಬಹುದು. ವ್ಯಕ್ತಿಯ ಲೈಂಗಿಕಾಸಕ್ತಿಗೆ ಪರಿಸರವು ಪೋಷಣೆಯನ್ನು ಪೂರೈಸುತ್ತದೆ. ಈ ಪೋಷಣೆಯ ಅಂಶ ಕಾಲದಿಂದ ಕಾಲಕ್ಕೆ ಬದಲಾಗುವುದು. ಇದರ ಕಾರಣ ಜನ ಜೀವನದಲ್ಲಿನ ನಿರಂತರ ಗತಿಶೀಲತೆ, ಲೈಂಗಿಕಾಸೆಯೂ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಸ್ತ್ರೀಯರು ಲೈಂಗಿಕತೆಯಿಂದ

ತಾಯ್ತನವನ್ನು ಪಡೆಯಲು ಬಯಸುತ್ತಾರೆ. ಇನ್ನು ಕೆಲವರು 'ಕಾಮ'ವನ್ನು ದೈಹಿಕ ತೃಪ್ತಿಗಾಗಿ ಭೋಗಿಸುತ್ತಾರೆ. ಮತ್ತೆ ಕೆಲವರು ಲೈಂಗಿಕ ಕ್ರಿಯೆಯಿಂದ ತಮ್ಮ ಜೀವನವನ್ನೇ ಬದಲಿಸಿಕೊಳ್ಳಲು ಉತ್ಸಾಹಿತರಾಗುತ್ತಾರೆ. ಈ ಎಲ್ಲ ಲೈಂಗಿಕ ಚಟುವಟಿಕೆಗಳ ವೈವಿಧ್ಯತೆಯನ್ನು ಸ್ತ್ರೀಯರ ಮಾನಸಿಕ ಸ್ಥಿತಿ-ಗತಿಗಳ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳಲ್ಲಿ ಗುರುತಿಸಬಹುದು.

ಶಿವರಾಮ ಕಾರಂತರು ಗಾಂಧೀಜಿಯ ಅನುಯಾಯಿಗಳಾಗಿದ್ದರು. ತಮ್ಮ ಮತ್ತು ಅವರ ವಿಚಾರಗಳಲ್ಲಿ ಭಿನ್ನತೆಯಿರುವುದನ್ನು ಗುರುತಿಸಿ ಅವರಿಗಿಂತ ಪ್ರತ್ಯೇಕವಾಗಿ ಬೆಳೆದರು. ಗಾಂಧೀಜಿಯವರು 'ಸಂತಾನಕ್ಕಾಗಿ ಮಾತ್ರ ಸಂಭೋಗ' ಎಂದು ಹೇಳಿದರು. ಆದರೆ ಕಾರಂತರ ಚಿಂತನೆ ಅವರಿಗಿಂತ ಭಿನ್ನವಾಗಿದೆ. ಪ್ರಾಣಿಗಳಲ್ಲಿ ಲೈಂಗಿಕ ಕ್ರಿಯೆ ಕೇವಲ ಸಂತಾನಪ್ರಾಪ್ತಿಯ ಅವಶ್ಯಕತೆಯನ್ನು ಪೂರೈಸುವ ಕ್ರಿಯೆಯಾಗಿದೆ. ಸಂತಾನ ಪಡೆಯುವ ಕಾಲದಲ್ಲಿ ಮಾತ್ರ ಅವುಗಳಲ್ಲಿ ಸಂಗಮವೇರ್ಪಡುತ್ತದೆ. ಆದರೆ ಮಾನವರಲ್ಲಿ ಲೈಂಗಿಕ ಕ್ರಿಯೆ ಮನಸ್ಸಿಗೆ ಆಹ್ಲಾದವನ್ನು ಒದಗಿಸುವ ಕಾರ್ಯವಾಗಿದೆ. ಹಾಗಾಗಿ ಮಾನವರಲ್ಲಿ ಲೈಂಗಿಕ ಕ್ರಿಯೆಯೇ ಪ್ರಧಾನ ಗುರಿಯಾಗಿದೆ ಎಂಬುದನ್ನು ಕಾದಂಬರಿಗಳಲ್ಲಿ ನಿರೂಪಿಸಲಾಗಿದೆ. ಸಂತೃಪ್ತಿಗಾಗಿಯೇ ಸಂಭೋಗ ಮಾಡುವಾಗ ಅನುಷಂಗಿಕವಾಗಿ ಸಂತಾನ ಪಡೆಯುವುದು ಕಂಡುಬರುತ್ತದೆಯೇ ಹೊರತು ಸಂತಾನಪ್ರಾಪ್ತಿಗಾಗಿ ಮಾತ್ರ ಸಂಭೋಗ ಮಾಡುವುದು ಮಾನವರಲ್ಲಿ ಅಪರೂಪವಾಗಿದೆ. ಇದರಿಂದ ದಂಪತಿಗಳು ಉತ್ತಮವಾದ ಜೀವನ ನಡೆಸಲು ಸಾಧ್ಯವಾಗುತ್ತದೆ. 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯ-ಶಂಕರಿಯರ ಜೀವನ, 'ಅಳಿದ ಮೇಲೆ' ಕಾದಂಬರಿಯ ಸರಸಿ-ಯಶವಂತರಾಯರ ಸಾಮರಸ್ಯ ಜೀವನ, 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯ ಮಂಜುಳೆ-ಲಕ್ಷ್ಮಣ ತೀರ್ಥರ ಸಂಬಂಧ ಹಾಗೂ 'ಕೇವಲ ಮನುಷ್ಯರು' ಕಾದಂಬರಿಯ ಹಯವದನರಾಯ-ಕಾವೇರಿಯರ ಲೈಂಗಿಕ ಸಾಮರಸ್ಯದಿಂದ ಬದುಕಿನಲ್ಲಿ ಲೈಂಗಿಕತೆ ಕೇವಲ ಸಂತಾನಪ್ರಾಪ್ತಿಯ ಸಾಧನವಾಗಿರದೆ, ಪರಸ್ಪರ ಒಬ್ಬರನ್ನೊಬ್ಬರು ಅರಿಯುವಲ್ಲಿ ಸಹಾಯ ಮಾಡುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಲೈಂಗಿಕ ಕಾರ್ಯ ಮೂಲಭೂತವಾಗಿ ಜೀವ ಸಹಜವಾದ ಸಂತಾನಪ್ರಾಪ್ತಿಗಾಗಿಯೇ ಜರುಗುವ ಕ್ರಿಯೆ. ಇದು ಜೈವಿಕ ವಿಜ್ಞಾನದ ದೃಷ್ಟಿಯಲ್ಲಿ ಎಲ್ಲ ಜೀವಿಗಳ ಪರಮ ಕರ್ತವ್ಯವಾಗಿದೆ. ಹಾಗಾಗಿಯೇ ಪ್ರತಿಯೊಂದು ಹೆಣ್ಣು ತಾಯಿಯಾಗಲು ಬಯಸುತ್ತಾಳೆ. ಇದರಿಂದಾಗಿಯೇ ಸ್ತ್ರೀಯರಿಗೆ ತಾಯ್ತನ ಅನಿವಾರ್ಯ ಎಂಬ ಸಾಮಾಜಿಕ ಮೌಲ್ಯವನ್ನು ಸ್ತ್ರೀ-ಪುರುಷರಿಬ್ಬರೂ ಒಪ್ಪಿಕೊಂಡ ಸಾಮಾಜಿಕ ಒಡಂಬಡಿಕೆಯಾಗಿದೆ. ಅಂತೆಯೇ ಮಹಿಳೆಯರು ಸಂತಾನಕ್ಕಾಗಿ ತವಕಿಸುವುದನ್ನು ಗುರುತಿಸಬಹುದು. ಈ ಒಡಂಬಡಿಕೆಯಿಂದಲೇ ಸಂತಾನವಿಲ್ಲದವರನ್ನು 'ಬಂಜೆ'ಯರೆಂದು ಹಿಯ್ಯಾಳಿಸಲಾಗುತ್ತದೆ. ಈ ಕಠೋರತೆಯಿಂದ ಪಾರಾಗಲು ತಮ್ಮ ಗಂಡಂದಿರಿಂದ ಮಕ್ಕಳಾಗದಿದ್ದರೂ ಪರ ಪುರುಷನನ್ನು ಆಶ್ರಯಿಸುವುದನ್ನು ಗುರುತಿಸಬಹುದು. ಇದು ಕೆಲವೊಂದೆಡೆ ಖಂಡನೀಯವೆನಿಸಿದರೂ, ಇನ್ನೂ ಕೆಲವೆಡೆ ಸಹಾನುಭೂತಿಯಿಂದ ಕಾಣಲಾಗಿದೆ. 'ಹೆತ್ತಳಾ ತಾಯಿ' ಕಾದಂಬರಿಯ ಕುಸುಮೆ, 'ಕುಡಿಯರ ಕೂಸು' ಕಾದಂಬರಿಯ ಕೆಂಪಿ, 'ಒಂಟಿದನಿ' ಕಾದಂಬರಿಯ ಕಾಂತಿಬೆನ್, 'ಕೇವಲ ಮನುಷ್ಯರು' ಕಾದಂಬರಿಯ

[illegible]

ಶಾಂತಾಬಾಯಿ ಪರ ಪುರುಷರೊಂದಿಗೆ ಸಮಾಗಮ ಹೊಂದಿ ಮಕ್ಕಳನ್ನು ಪಡೆಯಲು ತವಕಿಸುತ್ತಾರೆ. ಈ ಕ್ರಿಯೆಯನ್ನು ತುಂಬ ಸಹಜವೆಂಬಂತೆ ಚಿತ್ರಿಸಲಾಗಿದೆ. ಇನಾಂದಾರರ 'ಮಂಜು ಮುಸುಕಿದ ದಾರಿ' ಕಾದಂಬರಿಯಲ್ಲೂ ಪರ ಪುರುಷನಿಂದ ಸಂತಾನ ಪಡೆಯುವ ಸಾಧ್ಯತೆಯಿದೆ ಎಂದು ಚಿತ್ರಿಸಲಾಗಿದೆ. ಆದರೆ ಭೈರಪ್ಪನವರ 'ಜಲಪಾತ' ಕಾದಂಬರಿಯಲ್ಲಿ ಸಂತಾನವನ್ನು ವೈವಾಹಿಕ ಜೀವನದಲ್ಲಿಯೇ ಪಡೆಯಬೇಕು ಎಂಬ ಸಾಂಪ್ರದಾಯಿಕ ಮೌಲ್ಯವನ್ನು ಗುರುತಿಸಬಹುದು.

ವಿಧವೆಯರು, ಗಂಡನಿಂದ ದೂರವುಳಿದವರು, ಎರಡನೆಯ ಮದುವೆಯನ್ನು ಮಾಡಿಕೊಂಡು ಉತ್ತಮ ದಾಂಪತ್ಯಜೀವನ ನಡೆಸುವ ಸಾಧ್ಯತೆಗಳಿವೆ ಎಂಬುದನ್ನು ಸಾಮಾಜಿಕ ಸುಧಾರಣೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. 'ಮೊಗಪಡೆದ ಮನ' ಕಾದಂಬರಿಯ ವಿಮಲೆ, 'ನಂಬಿದವರ ನಾಕ ನರಕ', ಕಾದಂಬರಿಯ ಸತ್ಯಭಾಮೆ, 'ಕಣ್ಣಿದ್ದೂ ಕಾಣರೂ' ಕಾದಂಬರಿಯ ಸುನಾಲಿನಿಯ ಪಾತ್ರಗಳ ಮೂಲಕ ಕಾದಂಬರಿಗಳಲ್ಲಿ ಸ್ಪಷ್ಟಪಡಿಸಲಾಗಿದೆ.

'ಕಾದಂಬರಿಕಾರರು ವಿವಾಹ ಪೂರ್ವ, ವಿವಾಹ ಬಾಹಿರ, ವಿವಾಹೋತ್ತರ ಸಂಬಂಧಗಳನ್ನು ಸಹಾನುಭೂತಿಯಿಂದ ಕಂಡಿದ್ದಾರೆ. 'ಚೋಮನದುಡಿ' ಕಾದಂಬರಿಯ ಬೆಳ್ಳಿ, 'ಮುಗಿದ ಯುದ್ಧ' ಕಾದಂಬರಿಯ ಸುಬ್ಬಿ, 'ಸ್ವಪ್ನದ ಹೊಳೆ' ಕಾದಂಬರಿಯ ಲಲಿತೆ... ಮುಂತಾದ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ 'ಕಾಮ'ವನ್ನು ತಡೆಹಿಡಿಯಲು ಸಾಧ್ಯವಿಲ್ಲ ಎಂಬುದನ್ನು ದೃಢಪಡಿಸಲಾಗಿದೆ. ಲೈಂಗಿಕ ದೌರ್ಜನ್ಯಕ್ಕೊಳಗಾದ ಹೆಣ್ಣು ಅದನ್ನು ಹೇಗೆ ಮೆಟ್ಟಿ ಹೊಸ ಜೀವನ ನಡೆಸುವ ಸಾಧ್ಯತೆಯಿದೆ ಎಂಬುದನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ನಿರಂಜನರ 'ಏಕಾಂಗಿನಿ', ಬರಗೂರು ರಾಮಚಂದ್ರಪ್ಪನವರ 'ಸೂರ್ಯ' ಕಾದಂಬರಿಗಳಲ್ಲಿಯೂ ಸ್ತ್ರೀಪರ ಸುಧಾರಣೆಯನ್ನು ಕಾಣಬಹುದು.

ದಾಂಪತ್ಯದಲ್ಲಿ ಸಾಮರಸ್ಯವಿಲ್ಲದಿದ್ದರೆ ಗಂಡ-ಹೆಂಡಿರ ದೈಹಿಕ, ಮಾನಸಿಕ ಆರೋಗ್ಯ ಕೆಡುವುದಷ್ಟೆ ಅಲ್ಲದೆ ಅದರ ಕರಿನೆರಳು ಕುಟುಂಬದ ಮೇಲೂ ಬೀಳುತ್ತದೆ. 'ಸರಸಮ್ಮನ ಸಮಾಧಿ', ಕಾದಂಬರಿಯಲ್ಲಿ ವಿಷಮ ದಾಂಪತ್ಯಕ್ಕೆ ಕಾರಣಗಳೇನು? ಅದಕ್ಕೆ ಪರಿಹಾರಗಳೇನು? ಎಂಬುದರ ಕುರಿತು ವಿವೇಚನೆಯಿದೆ. 'ಹೆತ್ತಳಾ ತಾಯಿ', 'ಒಡಹುಟ್ಟಿದವರು', 'ಸಮೀಕ್ಷೆ', 'ನಂಬಿದವರ ನಾಕ ನರಕ', 'ಕೇವಲ ಮನುಷ್ಯರು' ಮುಂತಾದ ಕಾದಂಬರಿಗಳಲ್ಲಿ ದಂಪತಿಗಳಲ್ಲಿ ಹೊಂದಾಣಿಕೆಯಿರದಿದ್ದರೆ ಲೈಂಗಿಕ ಸಾಮರಸ್ಯ ಸಾಧ್ಯವಾಗುವುದಿಲ್ಲ ಎಂಬುದನ್ನು ಖಚಿತಪಡಿಸಲಾಗಿದೆ.

ಕಾದಂಬರಿಕಾರರು ಗ್ರಾಮೀಣ ಬದುಕಿನ ಮಹಿಳೆಯರ ಚಿತ್ರಣ ಹಾಗೂ ನಗರದ ವಿದ್ಯಾವಂತ ಮಹಿಳೆಯರ ಜೀವನದ ರೀತಿ-ನೀತಿಗಳಲ್ಲಿ ಪಕ್ಷಪಾತವನ್ನು ತೋರಿರುವುದು ಸ್ಪಷ್ಟವಾಗುತ್ತದೆ. 'ಮರಳಿ ಮಣ್ಣಿಗೆ' ಕಾದಂಬರಿಯ ನಾಗವೇಣಿ ತನ್ನ ಲೈಂಗಿಕ ದೌರ್ಬಲ್ಯದಿಂದ ಪದೇ-ಪದೇ ಅನ್ಯಾಯಕ್ಕೊಳಗಾಗುತ್ತಾಳೆ. 'ಬತ್ತದ ತೊರೆ' ಕಾದಂಬರಿಯ ಮಂಜುಳೆ ವೈವಾಹಿಕ ಬಂಧನದಲ್ಲಿಯೆ ಮಾತ್ರ ಸಂತಾನವನ್ನು ಪಡೆಯಬೇಕು ಎಂಬ ಆತುರದಲ್ಲಿ ಪರ ಪುರುಷನೊಂದಿಗೆ ಸಂಪರ್ಕ ಹೊಂದಿ ಮದುವೆಗೆ ಮುಂಚೆನೆ ಗರ್ಭಧರಿಸಿ ಗರ್ಭಪಾತವನ್ನು ಮಾಡಿಸಿಕೊಳ್ಳುವುದು ವಾಸ್ತವವೆನಿಸದೆ, ಕಾದಂಬರಿಕಾರರ

[illegible]

ಒಲವು ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಒಂದು ಪಾತ್ರ ಹೀಗೆ ಕಾದಂಬರಿಕಾರರ ಉದ್ದೇಶ ಹಾಗೂ ಅನುಕೂಲಕ್ಕೆ ತಕ್ಕಂತೆ ವರ್ತಿಸತೊಡಗಿದಾಗ ಅದು ಸಹೃದಯ ಓದುಗರೊಂದಿಗೆ ಮೊದಲು ಹೊಂದಿದ್ದ ಸಹಜ ಸಂಬಂಧವನ್ನೇ ಕಳೆದುಕೊಂಡು ಬಿಡುತ್ತದೆ.

"ಸ್ತ್ರೀಯು ತಾಯಿಯಾಗುತ್ತಿದ್ದಂತೆಯೇ ಕಾಮದಲ್ಲಿ ಅವಳಿಗೆ ರುಚಿ ಕಡಿಮೆಯಾಗುವುದು" ಎಂಬ ಓಶೋರವರ (ಗಣೇಶ ಶರ್ಮ (ಅನು) ೧೯೯೫; ೧೦೦) ಹೇಳಿಕೆಯು ಸಾರ್ವತ್ರಿಕವಾದುದಲ್ಲ. ಲೈಂಗಿಕತೆಯನ್ನು ಜೀವನದುದ್ದಕ್ಕೂ ಗುರುತಿಸಬಹುದು ಎಂಬುದನ್ನು ಕಾದಂಬರಿಕಾರರು ಸ್ತ್ರೀಪಾತ್ರಗಳ ಮೂಲಕ ವಿಶ್ಲೇಷಣೆ ಮಾಡಿದ್ದಾರೆ.

ಹೀಗೆ ಒಟ್ಟಾರೆಯಾಗಿ ಕಾರಂತರ ಕಾದಂಬರಿಗಳಲ್ಲಿ ಲೈಂಗಿಕತೆಯ ವಿಬಿನ್ನ ನೋಟಗಳನ್ನು ಗುರುತಿಸಬಹುದು. ದಾಂಪತ್ಯ ಜೀವನ, ವಿವಾಹೇತರ ಸಂಬಂಧ... ಮುಂತಾದ ಸಾಮಾಜಿಕ ಸಮಸ್ಯೆಗಳ ಜಿಜ್ಞಾಸೆಯ ಅಂಗವಾಗಿ ವಿವೇಚಿಸಿದ್ದಾರೆ. ಪ್ರೀತಿ-ಪ್ರೇಮ ಎನ್ನುವುದು ತುಂಬ ಸೂಕ್ಷ್ಮವಾದುದು. ಅದು ಭಾವನೆಗಳ ಸಂಗಮ ತಾಣವಾಗಿದೆ. ಪ್ರೀತಿಯು ಪ್ರೀತಿಸುತ್ತಲೆ ಕಲಿಯಬೇಕಾದ, ಕಲಿಯುತ್ತಲೇ ಕರಗತ ಮಾಡಿಕೊಳ್ಳಬೇಕಾಗಿದೆ ಎಂಬುದನ್ನು ಸ್ತ್ರೀ ಪಾತ್ರಗಳ ಮುಖಾಂತರ ಚಿತ್ರಿಸಿದ್ದಾರೆ. ಪ್ರೀತಿ ಮುಕ್ತಸ್ಥಿತಿಯ ಶಿಶುವೇ ವಿನಹ ಬಲತ್ಕಾರದಿಂದ ಮೂಡುವಂತದ್ದಲ್ಲ. ಇದಕ್ಕೆ ಲೈಂಗಿಕತೆಯೂ ಸಹ ಹೊರತಾಗಿಲ್ಲ. ಚಿಂತನಾ ಶೀಲನಾದ ಮಾನವನು ಲೈಂಗಿಕ ಕ್ರಿಯೆಯನ್ನು ವ್ಯವಸ್ಥಿತವಾಗಿ ಮುನ್ನಡೆಯಲು 'ವಿವಾಹ'ವೆಂಬ ಸಾಧನವನ್ನು ಕುಟುಂಬ ವ್ಯವಸ್ಥೆಯಲ್ಲಿ ಆರಂಭಿಸಿದನು. ಅಂತೆಯೇ ವಿವಾಹದೊಳಗಿನ ಲೈಂಗಿಕ ಕ್ರಿಯೆಯು ಆರೋಗ್ಯಕರವಾಗಿರುತ್ತದೆ, ಎಲ್ಲರೂ ಮೆಚ್ಚುವಂತಿರುತ್ತದೆ ಎಂಬುದು ಕಾರಂತರ ಕಾದಂಬರಿಗಳ ಮೂಲಧ್ಯೇಯವಾಗಿದೆ. ಕಾಮತೃಪ್ತಿ ಜೀವನದ ಅತ್ಯಂತಿಕ ಅವಶ್ಯಕತೆಯಾಗಿದೆ. ಅದು ಅನಂತ ಜೀವನದ ಮೂಲತತ್ವವೂ ಆಗಿದೆ. ವ್ಯವಸ್ಥಿತವಾಗಿ ಉತ್ತಮ ಮಾರ್ಗದಲ್ಲಿ ಸಂಪೂರ್ಣ ತೃಪ್ತಿ ಹೊಂದದ ಹೊರತು ಅದು ಮನುಷ್ಯನ ಮನದ ಮೂಲೆಯಲ್ಲಿಯೇ ಉಳಿಯುತ್ತದೆ. ವಾಸನೆಯ ರೂಪವನ್ನು ಪಡೆದು ಜೀವನದ ಉಳಿದ ಎಲ್ಲ ಕ್ರಿಯೆಗಳನ್ನು ನಿಯಂತ್ರಿಸುವ ಪ್ರಬಲಶಕ್ತಿಯಾಗಿದೆ ಎಂಬುದನ್ನು ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.

ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ ವೇಶ್ಯೆಯರ ಜೀವನ, ಅವರ ಆಚಾರ ವಿಚಾರಗಳಲ್ಲಿಯ ವೈವಿಧ್ಯತೆ, ಅವರ ನಡವಳಿಕೆಯಲ್ಲಿಯ ವಿಭಿನ್ನತೆ, ವೇಶ್ಯೆಯರ ಮಾನವೀಯ ಮೌಲ್ಯಗಳ ಕುರಿತು ವಿವಿಧ ಆಯಾಮಗಳಲ್ಲಿ ಪ್ರಕಟಿಸಿದ್ದಾರೆ. 'ವೇಶ್ಯಾವೃತ್ತಿ'ಯ ಉದ್ಭವಕ್ಕೆ ಸಮಾಜದ ಸಂಪ್ರದಾಯಗಳು ಕಾರಣವಾಗಿವೆ. "ಲೈಂಗಿಕ ವಿಷಯದ ಬಗ್ಗೆ ಸಾಮಾಜಿಕ ಮೌಲ್ಯದ ವಿವರಣೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಪಾತಿವ್ರತ್ಯವು ವಿನಯಶೀಲ ಸ್ತ್ರೀಯ ಆದರ್ಶವಾಗಿದ್ದರೆ, ಪುರುಷರಿಗೆ ಇದು ಅನ್ವಯಿಸುವುದಿಲ್ಲ. ವೇಶ್ಯಾವೃತ್ತಿಯು ಪುರುಷನಿಗಿರುವ ಅವಕಾಶ. ಆದುದರಿಂದ ಸ್ತ್ರೀ ಮತ್ತು ಪುರುಷರಿಗೆ ಪ್ರತ್ಯೇಕವಾದ ಜೀವನದ ಆದರ್ಶಗಳಿರುವ ತನಕ ವೇಶ್ಯಾವೃತ್ತಿಯು ಸಮಾಜದಲ್ಲಿ ಅನಿವಾರ್ಯವೆಂದು ಕಂಡುಬರುತ್ತದೆ" ಎಂಬ ಶಿವಣ್ಣನವರ (೧೯೮೪; ೧೭೨) ಅಭಿಪ್ರಾಯವು ಸರಿಯಾಗಿದೆ.

ವೇಶ್ಯಾವೃತ್ತಿಯನ್ನು ವಿರೋಧಿಸುವ ಪ್ರಯತ್ನ ಪ್ರಾಚೀನ ಕಾಲದಿಂದಲೂ ನಡೆದಿದೆ. ಈಸ್ಟ್ ಇಂಡಿಯಾ ಕಂಪನಿಯು ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು ಕೆಲವು ಕಾನೂನುಗಳನ್ನು ಜಾರಿಗೆ ತಂದಿತು. ಸ್ತ್ರೀಯರನ್ನು ಬಲತ್ಕಾರವಾಗಿ ವೇಶ್ಯೆಯರನ್ನಾಗಿ ಮಾಡುವುದನ್ನು ತಡೆಗಟ್ಟುವುದು ಅದರ ಮುಖ್ಯ ಉದ್ದೇಶವಾಗಿತ್ತು. ಸೆಕ್ಷನ್ ೩೭೨ರ ಪ್ರಕಾರ ೧೮ ವರ್ಷದೊಳಗಿನ ಬಾಲಕಿಯರನ್ನು ಲೈಂಗಿಕ ಕ್ರಿಯೆಗಾಗಿ ಮಾರುವುದು, ಬಾಡಿಗೆ ಕೊಡುವುದು, ಕೊಂಡುಕೊಳ್ಳುವುದು ಇತ್ಯಾದಿಗಳನ್ನು ಅಪರಾಧವೆಂದು ಪರಿಗಣಿಸಲಾಗಿದೆ. ಇಷ್ಟಾದರೂ ವೇಶ್ಯಾವೃತ್ತಿಯನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ವೇಶ್ಯಾಗೃಹ ನಡೆಸುವುದು ಕಾನೂನು ಬಾಹಿರವಲ್ಲ. ಅದರ ಆಚರಣೆಗೆ ಸಂಬಂಧಿಸಿದ ಕೆಲವು ಚಟುವಟಿಕೆಗಳು ಮಾತ್ರ ಅಪರಾಧವಾಗುತ್ತವೆ. ಬಹುತೇಕ ಕಾನೂನುಗಳು ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ವೇಶ್ಯಾವೃತ್ತಿಯನ್ನು ತಡೆಗಟ್ಟಲು ಪ್ರಯತ್ನಿಸುತ್ತಿವೆ. ೮ನೆ ಕಲಮು ಇದಕ್ಕೆ ಪೂರಕವಾಗಿದೆ. ವೇಶ್ಯಾವೃತ್ತಿಯ ವಿರೋಧದ ಕಾನೂನುಗಳಲ್ಲಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹಲವಾರು ವ್ಯತ್ಯಾಸಗಳಿವೆ. ಇದರಿಂದಾಗಿಯೇ ವೇಶ್ಯಾವೃತ್ತಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ.

ವೇಶ್ಯಾವೃತ್ತಿಯನ್ನು ತಡೆಗಟ್ಟಲು ಮೊದಲು ಸ್ತ್ರೀ ಪುರುಷರಿಗೆ ಲೈಂಗಿಕ ಶಿಕ್ಷಣ ನೀಡುವುದು ಅತ್ಯವಶ್ಯಕವಾಗಿದೆ. ಇದರಿಂದ ಲೈಂಗಿಕ ವಿಷಯದಲ್ಲಿ ಸಾಂಪ್ರದಾಯಿಕ ಮೌಢ್ಯ ಕಡಿಮೆಯಾಗಬಹುದು. ಆರ್ಥಿಕ ಕಾರಣಗಳಿಂದ ಸ್ತ್ರೀಯರು ವೇಶ್ಯೆಯರಾಗುವ ಸಾಧ್ಯತೆಯಿರುವುದರಿಂದ ಸ್ತ್ರೀಯರಿಗೆ ಉದ್ಯೋಗಗಳಲ್ಲಿ ಆದ್ಯತೆ ಕೊಡುವುದು ಯುಕ್ತವಾಗುತ್ತದೆ. ಸ್ತ್ರೀ ಪುರುಷರಿಗೆ ಪ್ರತ್ಯೇಕ ಜೀವನದ ಧ್ಯೇಯಗಳಿಗೆ ಪ್ರೋತ್ಸಾಹ ಕೊಡಬಾರದು. ಸರಕಾರವು ವೇಶ್ಯೆಯರ ಪುನರ್ ವಸತಿಗೆ ಅವಕಾಶ ಮಾಡಿಕೊಡಬೇಕು. ವೃದ್ಧ ವೇಶ್ಯೆಯರಿಗೆ ಮಾಸಿಕ ಧನಸಹಾಯ ನೀಡಬೇಕು. ಇದರಿಂದ ವೇಶ್ಯಾ ವೃತ್ತಿಯನ್ನು ತಡೆಯಲು ಸಾಧ್ಯವಾಗಬಹುದು.

ಅಧ್ಯಾಯ ೪

ಧಾರ್ಮಿಕ ಪ್ರಪಂಚ

ಅಧ್ಯಾಯ ೪

ಧಾರ್ಮಿಕ ಪ್ರಪಂಚ

ಕಾದಂಬರಿಗಳಲ್ಲಿ 'ಧಾರ್ಮಿಕ ಪ್ರಪಂಚ' ತುಂಬ ವಿಶಿಷ್ಟವಾದುದು. ಎಲ್ಲ ಸಾಹಿತಿಗಳು ತಮ್ಮ ಬರವಣಿಗೆಯ ಮೂಲಕ ಸಮಾಜದಲ್ಲಿ ಆಚರಣೆಯಲ್ಲಿರುವ ಮತ್ತು ತಮ್ಮ ನಂಬಿಕೆಗಳ ಹಿನ್ನೆಲೆಯಲ್ಲಿ ಧಾರ್ಮಿಕ ವಿಚಾರಗಳನ್ನು ಅನಾವರಣಗೊಳಿಸುತ್ತಾರೆ. ಸಂಪ್ರದಾಯದಲ್ಲಿ ನಂಬಿಕೆ ಹೊಂದಿರುವ ಲೇಖಕರು ತಮ್ಮ ಕೃತಿಗಳಲ್ಲಿ ಅದನ್ನು ವಿಭಿನ್ನ ಪಾತ್ರಗಳ ಮುಖಾಂತರ ಪ್ರತಿಪಾದಿಸುತ್ತಾರೆ. ಶಿವರಾಮ ಕಾರಂತರು ಇದಕ್ಕೆ ಅಪವಾದವಲ್ಲ. ಅವರ ಒಂದೊಂದು ಪಾತ್ರಗಳು ನಿರ್ದಿಷ್ಟ ಧಾರ್ಮಿಕ ಆಚಾರ, ವಿಚಾರಗಳ ಕುರಿತು ಸಮಾಲೋಚಿಸುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಾಯದಲ್ಲಿ ಕಾರಂತರ ಕಾದಂಬರಿಗಳಲ್ಲಿ ಚಿತ್ರಿಸಲ್ಪಟ್ಟಿರುವ ಸ್ತ್ರೀಪಾತ್ರಗಳು ಮೈಗೂಡಿಸಿಕೊಂಡ ನಂಬಿಕೆ, ಆದರ್ಶಗಳೇ ಒಂದು ಅಪೂರ್ವವಾದ ಪ್ರಪಂಚವಾಗಿದೆ. ಅವುಗಳ ವಿಚಾರಗಳ ನೆಲೆಯಲ್ಲಿಯೇ ತಮ್ಮ ದುಃಖಗಳನ್ನು ಮರೆತು ಆನಂದಮಯ ಜೀವನವನ್ನು ನಿರ್ವಹಿಸುವುದನ್ನು ಗುರುತಿಸಬಹುದು. ಜೊತೆಯಲ್ಲಿಯೇ ಸಾಮಾಜಿಕ ಮೌಲ್ಯಗಳನ್ನು ಕಾಪಾಡುವಲ್ಲಿಯೂ ಅವುಗಳು ಪೂರಕವಾಗಿರುವುದನ್ನು ಗಮನಿಸಬಹುದು. ಧಾರ್ಮಿಕ ಶಿಸ್ತುಬದ್ಧತೆ ಮಾನವನ ಹುಟ್ಟಿನಿಂದ ಆರಂಭವಾಗಿ ಅವನ ಮರಣದ ದಿನಗಳವರೆಗೂ ರೂಢಿಯಲ್ಲಿರುತ್ತದೆ. ಆ ವಿಚಾರಗಳು ಸಾರ್ವತ್ರಿಕವಾಗಿರದೇ ಒಬ್ಬರಿಂದ ಮತ್ತೊಬ್ಬರಿಗೆ ಭಿನ್ನವಾಗಿರುವುದನ್ನು ಪ್ರಸ್ತುತ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ.

ಧರ್ಮವೆಂದರೆ ಕೇವಲ ಬೋಧನೆಯಲ್ಲ, ಉಪನ್ಯಾಸಗಳ ವಿಷಯವಲ್ಲ. ಅದು ದೈನಂದಿನ ಬದುಕಿನ ನಡೆ, ನುಡಿಗಳಿಗೆ ಸಂಬಂಧಿಸಿದೆ. ಜೀವನದ ಕಡೆಗೆ ಪೂರ್ಣದೃಷ್ಟಿಯನ್ನು ನೆಡುವುದು ಹಾಗೂ ಜೀವನವನ್ನು ಪೂರ್ಣವಾಗಿ ತನ್ನ ತಬ್ಬುಗೆಗೆ ಹಿಡಿಯುವುದು ಧರ್ಮದಿಂದ ಸಾಧ್ಯವಾಗುತ್ತದೆ. "ಮಾನವನ ಸಾಮಾಜಿಕ ಜೀವನಕ್ಕೆ ಸ್ಥಿರತೆ ಹಾಗೂ ಭದ್ರತೆಯನ್ನು ನೀಡುವಲ್ಲಿ ಮುಂಚೂಣಿಯಲ್ಲಿರುವುದು ಧರ್ಮ" ಎಂಬುದನ್ನು ಯಳನಾಡು ಅಂಜಪ್ಪನವರು (೨೦೦೮-೧೫) ಗುರುತಿಸಿರುವುದು ಸರಿಯಾಗಿಯೇ ಇದೆ.

ಕಾರಂತರ ಧಾರ್ಮಿಕ ಒಲವು ಕುರಿತು ಕೆಲ ಸಾಹಿತಿಗಳು ಸ್ಪಷ್ಟಪಡಿಸಿದ್ದಾರೆ. ಟಿ.ಪಿ. ಅಶೋಕ ಅವರು 'ಕಾರಂತರು ಅನಾಸ್ತಿಕರು' ಎಂದು ಗುರುತಿಸಿದ್ದಾರೆ. ವಿ.ಸೀತಾರಾಮಯ್ಯನವರು 'ಕಾರಂತರು

[illegible]

[illegible]

[illegible]

ಅಂತಃಕರಣದಲ್ಲಿ 'ಸಂಪ್ರದಾಯಶೀಲರು' ಎಂಬುದನ್ನು ಹೇಳಿದ್ದಾರೆ. ಅನಂತಮೂರ್ತಿಯವರ ಸಂದರ್ಶನವೊಂದರಲ್ಲಿ ಕಾರಂತರು 'ನಾವೆಲ್ಲರೂ ಸಂಪ್ರದಾಯದ ಮಕ್ಕಳು' ಎಂದು ಹೇಳಿದ್ದಾರೆ. ಈ ವಿಚಾರಗಳ ಹಿನ್ನೆಲೆಯಲ್ಲಿ ಕಾದಂಬರಿಗಳಲ್ಲಿ ಚಿತ್ರಿಸಲ್ಪಟ್ಟಿರುವ ಸ್ತ್ರೀಯರ ಧಾರ್ಮಿಕ ಆಚಾರ ವಿಚಾರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಧರ್ಮವು ಸಾಮಾಜಿಕ ಮೌಲ್ಯಗಳನ್ನು ನಿರೂಪಿಸುತ್ತದೆ ಎಂಬುದನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ "ಮರಳಿ ಮಣ್ಣಿಗೆ" ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಸರಸೋತಿ, ಪಾರೋತಿಯರು ಅತ್ತಿಗೆ ನಾದಿನಿಯರಾಗಿದ್ದರು. ಅವರ ದೇಹಗಳು ಎರಡಾಗಿದ್ದರೂ ಜೀವ ಒಂದೇ ಎಂಬಂತೆ ಅನ್ಯೋನ್ಯವಾಗಿದ್ದರು. ಧಾರ್ಮಿಕ ಜೀವಿಗಳಾದ ಅವರು ತಮ್ಮ ಕಷ್ಟಗಳಿಗೆಲ್ಲ ತಮ್ಮ ಹಿಂದಿನ ಜನ್ಮದ ಕರ್ಮಗಳೇ ಕಾರಣ ಎಂದು ನಂಬಿ ನಿರಾಳವಾಗಿದ್ದರು. 'ಕರ್ಮಸಿದ್ಧಾಂತ' ಹಿಂದೂ ಧರ್ಮದ ಒಂದು ಮುಖ್ಯ ಭಾಗವಾಗಿದೆ. ಅದನ್ನು ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳ ಮುಖಾಂತರ ನಿರೂಪಿಸಲಾಗಿದೆ. ಇದರಿಂದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಭಟಿಸಲಾರದೆ ಸಹಿಸಿಕೊಂಡು ಹೋಗಲು ಸಾಧ್ಯವಾಗಿದೆ. ಇದು ಕಾದಂಬರಿಕಾರರ ತಾಂತ್ರಿಕ ಜಾಣ್ಮೆಯಾಗಿದೆ.

ಪಾರ್ವತಿ ರಸಿಕಳಲ್ಲ. ಆದರೆ ಸಂಯಮಮೂರ್ತಿ, ಪೂಜ್ಯನೀಯಳು. ಹೊತ್ತು ಬೈಯಾಯಿತೆಂದರೆ ಜಪಸರ ಹಿಡಿದು 'ಶಿವ-ಶಿವ, ರಾಮ-ರಾಮ' ಎಂದು ಪಠಿಸುತ್ತಿದ್ದಳು. ಇದಕ್ಕೆ ಸರಸೋತಿಯೂ ಅಪವಾದವಲ್ಲ. ಹಳೆಯ ಸಂಸ್ಕೃತಿಯ ಉಚ್ಛ ಪ್ರತೀಕವಾಗಿದ್ದಳು. ಪ್ರತಿ ಏಕಾದಶಿ ದಿನದಂದು ಮನೆಯಲ್ಲಿ ಭಾಗವತ ಕತೆಗಳನ್ನು ಓದಿಸುತ್ತಿದ್ದರು. ಬಡವರಿಗೆ ಊಟ ಮಾಡಿಸುತ್ತಿದ್ದರು.

ಹಿಂದೂ ಧರ್ಮದ ಪ್ರಕಾರ ವಿಧವೆಯರಿಗೆ ಎರಡು ದಾರಿಗಳಿವೆ. ಬದುಕಿದರೆ ಅಲೌಕಿಕವಾಗಿ ಬದುಕಬೇಕು. ಇಲ್ಲದಿದ್ದರೆ ಗಂಡನ ಜೊತೆ ಚಿತೆಯೇರಬೇಕು. ಕಾದಂಬರಿಕಾರರು 'ಸತಿ ಸಹಗಮನ ಪದ್ಧತಿ'ಯನ್ನು ವಿರೋಧಿಸುತ್ತಾರಾದರೂ ವಿಧವೆಯರು ಅಲೌಕಿಕವಾಗಿಯೇ ಬದುಕಬೇಕು ಎಂಬುದನ್ನು ವೃದ್ಧೆಯರ ಪಾತ್ರದ ಮೂಲಕ ಬಿಂಬಿಸಿರುವುದು ಸ್ಪಷ್ಟವಾಗಿದೆ. ಪತಿಯ ಸ್ವಾಭಾವಿಕ ಅಥವಾ ಅಕಾಲಿಕ ಮರಣಕ್ಕೆ ಪತ್ನಿಯು ಯಾವ ವಿಧದಲ್ಲಿಯೂ ಜವಾಬ್ದಾರಳಾಗಿರುವುದಿಲ್ಲ. ಆದಾಗ್ಯೂ ಆತನ ಸಾವಿನೊಂದಿಗೆ ಸಕಲ ಸಿಂಗಾರವನ್ನು ತ್ಯಜಿಸಬೇಕು. ಯಾವತ್ತೂ ಬಾಯಿ ರುಚಿಯ ವಸ್ತುಗಳನ್ನು ತ್ಯಜಿಸಿ, ಒಪ್ಪೊತ್ತಿನೂಟ, ಉಪವಾಸ ವ್ರತಗಳ ಕಠಿಣ ಜೀವನ ಕೈಗೊಳ್ಳಬೇಕು ಎಂಬ ಸಾಂಪ್ರದಾಯಿಕ ಪದ್ಧತಿಯಂತೆ ಸರಸ್ವತಿಯು ಬದುಕುತ್ತಾಳೆ. ತನ್ನ ಕುಂಕುಮ ಅಳಿಸಿದಂದಿನಿಂದಲೇ ಅವಳು ರಾತ್ರಿಯ ಊಟ ಬಿಟ್ಟಿದ್ದಳು. ಪ್ರತಿ ರಾತ್ರಿ ೧೦೦೮ ಪಂಚಾಕ್ಷರಿ ಜಪ ಮಾಡುತ್ತಿದ್ದಳು. ಮಡಿ ಮೈಲಿಗೆಯೆಂದು ತುಂಬ ಕಟ್ಟು ನಿಟ್ಟಿನ ಜೀವನವನ್ನು ಸಾಗಿಸುತ್ತಿದ್ದಳು. ಕಾದಂಬರಿಯಲ್ಲಿ ಸರಸ್ವತಿಯ ಪಾತ್ರದಿಂದ ಪರಂಪರಾಗತ ಹಿಂದೂ ಧರ್ಮದ ಸಂಸ್ಕೃತಿಯನ್ನು ಪುರಸ್ಕರಿಸಿಕೊಂಡು ಬಂದಿರುವುದು ಸ್ಪಷ್ಟವಾಗುತ್ತದೆ. ಮಾಸ್ತಿಯವರು ವಾಸ್ತವದ ನೆಲೆಯಲ್ಲಿಯೇ ಕೃತಿ ರಚಿಸಿದರೂ ಪರಂಪರಾಗತ ಸ್ತ್ರೀ ಮಾದರಿಗಳನ್ನೇ ಆದರ್ಶವಾಗಿಸಿಕೊಂಡಿದ್ದಾರೆ. ಹಾಗಾಗಿ ಕಾರಂತ ಮತ್ತು ಮಾಸ್ತಿಯವರ ಧಾರ್ಮಿಕ ನಿಲುವಿನಲ್ಲಿ ಸಾಮ್ಯತೆ ಇರುವುದು ಕಂಡುಬರುತ್ತದೆ.

ಪಾರ್ವತಿ ತನ್ನ ಗಂಡ ರಾಮೈತಾಳರು ಸಂತಾನದ ಸಲುವಾಗಿ ಸತ್ಯಭಾಮೆಯೊಂದಿಗೆ ಮದುವೆಯಾದಾಗ ಪ್ರತಿರೋಧ ವ್ಯಕ್ತಪಡಿಸುವುದಿಲ್ಲ. ಬದಲಿಗೆ ಇದೆಲ್ಲ ದೈವೇಚ್ಛೆ, ನಾನೇನು ಮಾಡುವುದು ಎಂದು ದೇವರ ಮೇಲೆ ಭಾರ ಹಾಕುತ್ತಾಳೆ. ದೇವರ ಮೇಲೆ ಭಾರ ಹಾಕುವುದು ಅಸಹಾಯಕತೆಯ ಪ್ರತೀಕವಾಗಿದೆ. ಆದರೆ ಕಾದಂಬರಿಯಲ್ಲಿ ಅವಳ ಅಸಹಾಯಕತೆಯನ್ನು ಆದರ್ಶವೆಂಬಂತೆ ಚಿತ್ರಿಸಿರುವುದು ಸ್ಪಷ್ಟವಾಗುತ್ತದೆ. ತನ್ನ ಗಂಡನ ಎರಡನೆಯ ಮದುವೆಯ ಸಮಯದಲ್ಲಿ ಸ್ವಲ್ಪವೂ ಉದ್ವೇಗಕ್ಕೊಳಗಾಗದೇ, ದಿಬ್ಬಣದವರ ಉಪಚಾರ ಮಾಡುತ್ತಾಳೆ. ಮದುವೆಯ ಉಸ್ತುವಾರಿ ವಹಿಸುತ್ತಾಳೆ. ಮದುಮಗಳನ್ನು ಮತ್ಸರದಿಂದ ಕಾಣದೇ ಪ್ರೀತಿ ವಿಶ್ವಾಸಗಳಿಂದ ಕಾಣುತ್ತಾಳೆ. ಸತ್ಯಭಾಮೆಗೆ 'ಗಂಡು ಮಗುವಾಗಲಿ' ಎಂದು ದೇವರಿಗೆ ಹರಕೆ ಹೊರುತ್ತಾಳೆ. ಅದರಿಂದ ತನಗೂ ಪಿಂಡ ಹಾಕುವ ಕುಡಿಯೊಂದು ಮನೆಯಲ್ಲಿ ಬರಬಹುದೆಂದು ಸಮಾಧಾನದ ನಿಟ್ಟುಸಿರುಗೈಯುತ್ತಾಳೆ. 'ಗಂಡು ಮಗು ಹುಟ್ಟದಿದ್ದರೆ ಮೋಕ್ಷ ಸಿಗದು' ಎಂಬ ಸಾಂಪ್ರದಾಯಿಕ ಮೌಲ್ಯವನ್ನು ಕಾದಂಬರಿಯಲ್ಲಿ ಪಾರ್ವತಿಯ ಪಾತ್ರದ ಮೂಲಕ ಮುಂದಿಡಲಾಗಿದೆ.

ಲಕ್ಷ್ಮೀನಾರಾಯಣನು ತನ್ನ ಹೆಂಡತಿ ನಾಗವೇಣಿಯನ್ನು ಒಂಟಿಯಾಗಿ ಬಿಟ್ಟು ಊರನ್ನು ತೊರೆದಿದ್ದನು. ಇದರಿಂದ ನಾಗವೇಣಿಯ ಬದುಕು ಕಷ್ಟಕರವಾಗಿತ್ತು. ದೇವರೇ ಕೊಡುವ ಕಷ್ಟಗಳನ್ನು ಮನುಷ್ಯ ತಪ್ಪಿಸಲಾರ. ಅದನ್ನು ತಾಳ್ಮೆಯಿಂದ ಅನುಭವಿಸಬೇಕು. ಧೈರ್ಯದಿಂದ ಎದುರಿಸಬೇಕು ಎಂದು ಸರಸ್ವತಿ ನಾಗವೇಣಿಗೆ ಸಮಾಧಾನವನ್ನು ಹೇಳುತ್ತಾಳೆ. ಕೂತಲ್ಲೇ ಕಾಲು ಕುಸಿಯುತ್ತಿದ್ದರೂ, ಸ್ಥಿರ ಸಂಕಲ್ಪದಿಂದ ಕಾಶೀ ಯಾತ್ರೆ ಮಾಡಿದಳು. ಇದರಿಂದಾಗಿ ನಾಗವೇಣಿಯು ಇಳಿವಯಸ್ಸಿನಲ್ಲಂತು 'ಸರಸೋತಿ ದೇವತೆಯೇ ಆಗಿದ್ದಳು!' ಎಂದು ಉದ್ಗರಿಸುತ್ತಾಳೆ. ಸರಸೋತಿಯು ಸಮುದ್ರಕ್ಕೆ ಹೋಗಿ ಸ್ನಾನಮಾಡಿ ಅಲ್ಲಿದ್ದ ವೈದಿಕನಿಗೆ ದಾನಕೊಟ್ಟು ಬಂದು ಮಲಗಿಕೊಳ್ಳುತ್ತಾಳೆ. ನಾಗವೇಣಿಯ ಮಗನ ಕೈಯಲ್ಲಿ ತೀರ್ಥ ಕುಡಿದು, ಮೆಲು ನಗೆ ನಕ್ಕು ಮಹಾಲಯ ಅಮವಾಸ್ಯೆಯ ದಿನ ತನ್ನ ಪಿತೃಗಳನ್ನು ನೆನಪು ಮಾಡಿಕೊಂಡು ಸಾವನ್ನಪ್ಪುತ್ತಾಳೆ. ಸರಸ್ವತಿಯು ಅಮವಾಸ್ಯೆಯ ದಿನ ಮರಣ ಹೊಂದುವುದು ಧಾರ್ಮಿಕ ಮನೋಭಾವನೆಯ ಪ್ರತೀಕವಾಗಿದೆ.

'ಕರ್ಮಸಿದ್ಧಾಂತ'ದ ಪ್ರಕಾರ ಹೆಣ್ಣಿನ ಜನ್ಮವೆನ್ನುವುದು ಹಿಂದಿನ ಪಾಪ ಕಾರ್ಯಗಳ ಫಲವಾಗಿಯೇ ಹುಟ್ಟಿದುದು. ಇದು ನರಕಯಾತನೆ ಅನುಭವಿಸಲಿಕ್ಕೆ ಬಂದದ್ದು, ಸುಖಕಲ್ಲ ಎಂಬ ಬಲವಾದ ನಂಬಿಕೆ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳ ಜೀವನಾನುಭವದಿಂದ ಸ್ಪಷ್ಟವಾಗುತ್ತದೆ. ಅವರು ತಮ್ಮ ಹುಟ್ಟಿಗೆ ದೇವರೆ ಮೂಲಕಾರಣ. ಎಲ್ಲ ಕಾರ್ಯಗಳಿಗೂ ಅವನೇ ಕಾರಣೀಭೂತ. ಅದನ್ನು ಅನುಭವಿಸದ ಹೊರತು ಬೇರೆ ದಾರಿಯಿಲ್ಲ ಎಂಬ ನಂಬಿಕೆಯಿಂದ ನಿರಾತಂಕವಾಗಿ ಬದುಕುತ್ತಿದ್ದರು. "ಇವರೆಲ್ಲ ಇದ್ದುದನ್ನು ಸುಂದರವಾಗಿ ಕಟ್ಟುವ ಪ್ರಯತ್ನದಲ್ಲಿ ನಿರತರೇ ಹೊರತು ಮತ್ತೊಂದು ಪ್ರಪಂಚ ನಿರ್ಮಾಣದ ಕ್ರಾಂತಿಕಾರಿ ಧೋರಣೆಗೆ ಬದ್ಧರಾದವರಲ್ಲ" ಎಂದು ಸುನೀತಾ ಶೆಟ್ಟಿಯವರು (೨೦೦೦-೧೬೭) ಸರಿಯಾಗಿಯೇ ಗುರುತಿಸಿದ್ದಾರೆ. ಸಂಪ್ರದಾಯಬದ್ಧವಾಗಿ ನಂಬಿಕೊಂಡ ಮೌಲ್ಯಗಳಿಗನುಗುಣವಾಗಿ ಸ್ತ್ರೀಯರು ಜೀವನ ನಡೆಸುವುದು ಹಾಗೂ ಹೆಣ್ಣಿಗೆ ಅಳುವುದು ಹೆಣ್ತನದ ಒಂದು ಸಹಜ ಗುಣವಾಗಿದೆ

[illegible]

ಎಂದು ಸ್ತ್ರೀ ಪುರುಷರಿಬ್ಬರೂ ಒಪ್ಪಿಕೊಂಡ ಸಾಮಾಜಿಕ ಒಡಂಬಡಿಕೆಯಾಗಿದೆ ಎಂದು ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ.

"ನಂಬಿದಂತೆ ಬಾಳು ಪ್ರಾಮಾಣಿಕತೆಯ ಜೊತೆಗೆ ಮನಸ್ಸಿನ ಉದಾತ್ತತೆಯೂ ಸೇರಿಕೊಳ್ಳುವುದರಿಂದ ಕಾರಂತರ ಇಂಥ ಮುದುಕಿಯರು ಆದರ್ಶ ವ್ಯಕ್ತಿಗಳಾಗಿ ಕಾಣುತ್ತಾರೆ" ಎಂಬ ಜಿ.ಎಚ್.ನಾಯಕರವರ ಹೇಳಿಕೆಯನ್ನು "ಅಳಿದ ಮೇಲೆ" ಕಾದಂಬರಿಯ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು. ಕಾಮದಿಂದಾಗಲಿ, ಭಯದಿಂದಾಗಲಿ, ಆಸೆಯಿಂದಾಗಲಿ ಕಡೆಗೆ ಪ್ರಾಣಾಪೇಕ್ಷೆಯಿಂದಾಗಲಿ ಎಂದೂ ಧರ್ಮವನ್ನು ಬಿಡಲಾಗದು ಎಂಬ ಮನೋಭಾವನೆಯನ್ನು ಪಾರ್ವತಿ, ಮೂಕಾಂಬು ಹೊಂದಿದ್ದರು. ಇವರು ಪರಂಪರೆಯಲ್ಲಿ ನಿಷ್ಠೆಯುಳ್ಳವರಾಗಿದ್ದರು. ಯಶವಂತರಾಯ ಪಾರ್ವತಿಯ ಸಾಕು ಮಗ. ಪಾರ್ವತಿಯು ಯಶವಂತರಾಯನು ತನಗಾಗಿ ಕಳುಹಿಸಿದ್ದ ದುಡ್ಡನ್ನು ಬೆನಕಯ್ಯನ ಗುಡಿಯ ಜೀರ್ಣೋದ್ಧಾರಕ್ಕಾಗಿ ಬಳಸಲು ಹೇಳಿದಳು. ಪಾರ್ವತಿಯು ದೇವರಲ್ಲಿ ಅಚಲವಾದ ನಂಬಿಕೆಯನ್ನು ಹೊಂದಿದ್ದಳು. "ಯಾವ ಕೆಲಸವನ್ನು ಮಾಡುವಾಗ ಮನಸ್ಸಿಗೆ ಸಂತೋಷವಾಗುತ್ತದೆಯೋ ಅದನ್ನು ಕಷ್ಟಪಟ್ಟಾದರೂ ಮಾಡಬೇಕು" ಎನ್ನುವ ವೇದಾಂತದಂತೆ ಕಾದಂಬರಿಯ ನಿರೂಪಕರು ಬೆನಕಯ್ಯನ ಗುಡಿಯ ಜೀರ್ಣೋದ್ಧಾರಕ್ಕಾಗಿ ಶ್ರಮಿಸುತ್ತಾರೆ. ಇದರಿಂದ ಪಾರೋತಿ, ಮೂಕಾಂಬು ತುಂಬ ಸಂತೋಷಪಡುತ್ತಾರೆ.

ಧರ್ಮದಲ್ಲಿ ಶ್ರದ್ಧೆಯುಳ್ಳ ಪಾರೋತಿ ಧರ್ಮವನ್ನು ಮೀರಿದರೆ ಅದು ನಮಗೆ ಹಾನಿಯುಂಟು ಮಾಡುತ್ತದೆ. ಧರ್ಮವನ್ನು ಆಚರಿಸಿದರೆ ರಕ್ಷಣೆಯುಂಟಾಗುತ್ತದೆ ಎಂದು ಬಲವಾಗಿ ನಂಬಿದ್ದಳು. ಕಮಲಮ್ಮ ಅವಳ ಬಗೆಗೆ ಎಷ್ಟೇ ನಂಜು ಕಾರಿದರೂ ಎಲ್ಲವನ್ನೂ ಮೌನದಿಂದ ಸಹಿಸುತ್ತಿದ್ದಳು. ಪೂರ್ವಜನ್ಮದ ಕರ್ಮದಿಂದಲೇ ಎಲ್ಲವೂ ಆಗುತ್ತದೆ. ಕರ್ಮವೇ ನಮ್ಮ ಜೀವನದ ಬೇರೆ ಬೇರೆ ಗತಿಗಳಿಗೆ ಕಾರಣ. ಆದುದರಿಂದ ಪ್ರಯತ್ನಪೂರ್ವಕವಾಗಿ ಒಳ್ಳೆಯ ಕೆಲಸವನ್ನು ಮಾಡಬೇಕು. ಮೂಕಾಂಬು ಹಿರಿಯರ ಶಾಪದಿಂದಾಗಿ ಪಾರೋತಿಯಿಂದ ದೂರವಿದ್ದರೂ, ಯಶವಂತನಿಗಾಗಿ ಕದ್ದು ಹಾಲು ಕೊಡುತ್ತಿದ್ದಳು. ಇದರಿಂದ ಅವರ ಅನ್ಯೋನ್ಯತೆ ಸ್ಪಷ್ಟವಾಗುತ್ತಿದೆ.

ಯಶವಂತರಾಯರ ಸಾವಿನ ಸುದ್ದಿ ಸಹನೀಯವಲ್ಲವೆಂದು ಭಾವಿಸಿ ಮೂಕಾಂಬು ತಮ್ಮ ಹಿರಿಯರು ಹಾಕಿದ ಆಣೆಯನ್ನು ಮುರಿದು ಪಾರ್ವತಿಯಲ್ಲಿಗೆ ಹೋಗುತ್ತಾಳೆ. ಒಬ್ಬರಿಗೊಬ್ಬರು ಪರಸ್ಪರ ಸಮಾಧಾನ ಮಾಡುತ್ತ ನಾಲ್ಕು ತೊಟ್ಟು ಕಣ್ಣೀರನ್ನು ಸುರಿಸುತ್ತಾರೆ. ದುಃಖವನ್ನು ಬಚ್ಚಿಟ್ಟುಕೊಳ್ಳದೆ ಮನಸ್ಸು ಹಗುರವಾಗುವಂತೆ ಕಣ್ಣೀರಾಕುತ್ತಾರೆ. ಏಕೆಂದರೆ ಅಂತರ್ಮುಖಿಯಾಗಿ ಅಳುವುದು ಬಹಿರಂಗವಾಗಿ ಅಳುವುದಕ್ಕಿಂತ ತುಂಬ ಅಪಾಯಕಾರಿಯಾದುದು. ಹೊರಗಿನ ಕಣ್ಣೀರನ್ನು ಸರಳವಾಗಿ ಒರೆಸಿಕೊಳ್ಳಬಹುದು. ಆದರೆ ಒಳಗಿನ ಕಣ್ಣೀರು ಗಾಯವನ್ನು ಮಾಡುತ್ತದೆ. ಬಾಳ್ವೆಯ ಸಂಕಷ್ಟಗಳನ್ನು ಸಹಿಸುವುದಕ್ಕೆ ಬಾಳ್ವೆಗೆ ಒಂದು ಗುರಿಯಿದೆ ಎಂದು ವರ್ತಿಸುವುದಕ್ಕೆ ನಂಬಿಕೆ ಬೇಕೆ ಬೇಕು ಎಂದು ದೇವರಲ್ಲಿ ನಂಬಿಕೆಯನ್ನು

ಹೊಂದಿದ್ದರು. 'ದೈವಿ ಸದ್ಗುಣಗಳು ಮಾನವನನ್ನು ದೇವರ ಹತ್ತಿರಕ್ಕೆ ಕೊಂಡೊಯ್ಯುತ್ತವೆ' ಎಂಬ ವೇದಾಂತದಂತೆ ಪಾರೋತಿ, ಮೂಕಾಂಬು ಅವರು ಜೀವಿಸುತ್ತಿದ್ದರು.

ಪಾರೋತಿ, ಮೂಕಾಂಬು ಒಂದೇ ಮನಸ್ಸು, ಎರಡು ದೇಹವೆಂಬಂತೆ ತುಂಬ ಪ್ರೀತಿಯಿಂದ ಅನ್ಯೋನ್ಯವಾಗಿದ್ದರು. ದೇವರಲ್ಲಿ ಅಚಲವಾದ ನಂಬಿಕೆಯಿದ್ದ ಅವರು ಜೀವನದ ಆಗು ಹೋಗುಗಳಿಗೆ ದೇವರೇ ಕಾರಣ ಎಂಬ ದೃಢವಾದ ನಂಬಿಕೆಯನ್ನು ಹೊಂದಿದ್ದರು. ಅಂತೆಯೇ ಕಾದಂಬರಿಕಾರರಿಗೆ ಯಾವುದೋ ಒಂದು ನಂಬಿಕೆಯನ್ನು ಇಟ್ಟುಕೊಂಡು ದೀರ್ಘಕಾಲ ಅದಕ್ಕನುಗುಣವಾಗಿ ನಡೆದು ಬಾಳಿದ ವ್ಯಕ್ತಿಗಳು ಇಷ್ಟವಾಗುತ್ತಾರೆ ಎಂಬುದು ಪಾರೋತಿ, ಮೂಕಾಂಬು ಅವರ ಪಾತ್ರಗಳಿಂದ ಸ್ಪಷ್ಟವಾಗುತ್ತದೆ. ಪಾರೋತಿ ಹಿಂದೂ ಧರ್ಮದ ಸಂಪ್ರದಾಯದಂತೆ ಕರ್ಮಸಿದ್ಧಾಂತದಲ್ಲಿ ನಂಬಿಕೆಯನ್ನು ಹೊಂದಿದ್ದಳು. ಪಾಪ, ಪುಣ್ಯಗಳ ಕುರಿತು ವಿವೇಚಿಸುತ್ತಿದ್ದಳು. "ದೇವರ ಪ್ರೀತಿಯು ಮಾನವ ಕುಲವನ್ನೇ ಪ್ರೀತಿಸಲು ಕಲಿಸುತ್ತದೆ. ಯಾರನ್ನೂ ದ್ವೇಷಿಸುವುದಿಲ್ಲ. ವೈಯಕ್ತಿಕ ಪ್ರೀತಿಯು ಕೇವಲ ಒಬ್ಬರನ್ನೇ ಪ್ರೀತಿಸಲು ಕಲಿಸುತ್ತದೆ ಹಾಗೂ ಉಳಿದವರೆಲ್ಲರನ್ನು ದ್ವೇಷಿಸುತ್ತದೆ"- ಎಂಬ ವೇದಾಂತವನ್ನು 'ಅಳಿದ ಮೇಲೆ' ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ.

ಮನುಷ್ಯನ ವಾಸ್ತವ ಬದುಕನ್ನು ಸುಧಾರಿಸುತ್ತ, ಅವನೊಳಗಿನ ಪಾರಮಾರ್ಥ ಹಂಬಲವನ್ನು ಜಾಗೃತಗೊಳಿಸುತ್ತ, ಮಾನವ ಪ್ರೇಮವನ್ನು ವಿಸ್ತರಿಸುತ್ತ, ಅವನನ್ನು ತನ್ನ ಸುತ್ತಣ ಬದುಕಿಗೆ ಮನಃಪೂರ್ವಕವಾಗಿ ಸ್ಪಂದಿಸುವಂತೆ ಮಾಡುವಲ್ಲಿ ಧಾರ್ಮಿಕ ಆಚಾರ, ವಿಚಾರಗಳು ಸಹಾಯಕಾರಿಯಾಗಿವೆ. 'ಮುಗಿದ ಯುದ್ಧ' ಕಾದಂಬರಿಯ ಲಕ್ಷ್ಮಮ್ಮ ದೇವರು ದಿಂಡಿರಲ್ಲಿ ಬಲವಾದ ನಂಬಿಕೆಯನ್ನು ಹೊಂದಿದ್ದಳು. ಗಂಡನ ಸಾವಿನಿಂದ ಕಂಗಾಲಾಗದೆ ಮುಂದೆ ಪರಮಾತ್ಮ ನಡೆಸಿದಂತಾಗುವುದು ಎಂಬ ಧೈರ್ಯದಿಂದ ಮಗನ ವಿದ್ಯಾಭ್ಯಾಸಕ್ಕಾಗಿ ಶ್ರಮಿಸುತ್ತಾಳೆ. ವೈಯಕ್ತಿಕ ಹಾಗೂ ಸಾಮಾಜಿಕ ಹಿತ ಸಾಧನೆಯ ವ್ಯವಸ್ಥೆಯಾದ ಮದುವೆ ಅಜೀವ ಪರ್ಯಂತ ಧರ್ಮ, ಅರ್ಥ, ಕಾಮಗಳಲ್ಲಿ ಪರಸ್ಪರ ಪೂರಕವಾಗಿ ನಿರ್ವಂಚನೆಯಿಂದ, ಸ್ನೇಹದಿಂದ ಬದುಕು ನಡೆಸುವುದಕ್ಕೆ ನಾಂದಿಯಾಗುತ್ತದೆ. ಅಂತೆಯೇ ಲಕ್ಷ್ಮಮ್ಮ 'ಮದುವೆ'ಯ ಸಲುವಾಗಿ ಮಗನನ್ನು ಒತ್ತಾಯಿಸುವುದಿಲ್ಲ. ಮದುವೆಯೆನ್ನುವಂತದ್ದು ಋಣಾನುಬಂಧ. ಅದರಲ್ಲಿ ಮನುಷ್ಯರದ್ದೇನೂ ನಡೆಯುವುದಿಲ್ಲ. ಎಲ್ಲವೂ ಬ್ರಹ್ಮನ ಆಟ ಎಂದು ನಂಬಿದ್ದಳು.

ಅಚ್ಯುತನು ತನ್ನ ಹೆಂಡತಿಯೊಂದಿಗೆ 'ಶಂಕರ ನಾರಾಯಣ'ಕ್ಕೆ ಹೋಗುವಾಗ ತಾಯಿಯೂ ತಮ್ಮೊಂದಿಗೆ ಬರಬೇಕು ಎಂದು ಬಯಸುತ್ತಾನೆ. ಆದರೆ ಲಕ್ಷ್ಮಮ್ಮ ನೆಲದ ಋಣ, ನೀರಿನ ಋಣ, ಅನ್ನದ ಋಣವೆಲ್ಲ ಬ್ರಹ್ಮಲಿಖಿತವಾದುದು. ನಾನು ಕೊಂಬಾರಿನಲ್ಲಿಯೇ ಇರುತ್ತೇನೆ. ನೀವಿಬ್ಬರೂ ಹೋಗಿ ಬನ್ನಿ ಎಂದು ಹಾರೈಸುತ್ತಾಳೆ. ಲಕ್ಷ್ಮಮ್ಮಳದು ಸಾಂಪ್ರದಾಯಿಕ ನಂಬಿಕೆಯಾಗಿದೆ. ಅಂಥ ವಿಶ್ವಾಸದಿಂದ ದೇವರ ಮೇಲೆ ಭಾರ ಹಾಕಿ ನಿರಾಳ ಮನಸ್ಸಿನಿಂದ ಜೀವಿಸುತ್ತಾಳೆ. ಎಲ್ಲವನ್ನು ದೇವರಿಗೆ ಬಿಟ್ಟುಕೊಟ್ಟು, ನಾವು ಜಡರಾಗಿ ಕೂತರೆ ಅವನೆ ಕೊಟ್ಟ ಸ್ವಾತಂತ್ರ್ಯವನ್ನು ತಿರಸ್ಕರಿಸಿದಂತಾಗುತ್ತದೆ ಎಂಬ ವೈಚಾರಿಕತೆ ಲಕ್ಷ್ಮಮ್ಮಳಲ್ಲಿರಲಿಲ್ಲ. ದೇವರ ಮುಂದೆ ತಮ್ಮದೇನೂ ನಡೆಯುವುದಿಲ್ಲ. ಎಲ್ಲದಕ್ಕೂ

ದೇವರೆ ಮೂಲ ಎಂದು ನಂಬಿಕೊಂಡಿದ್ದಳು. 'ಶ್ರದ್ಧೆಯಿಂದಲೆ ಧರ್ಮವು ಬೆಳಗುತ್ತದೆ' ಎಂಬ ಆದರ್ಶದ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ಭಾರತೀಯ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿರುವುದು ಸ್ಪಷ್ಟವಾಗುತ್ತದೆ.

'ಹೆಣ್ಣು ಜನ್ಮ ಇರುವುದೇ ಗಂಡಸು ಕೊಡುವ ಸುಖವನ್ನಲ್ಲದಿದ್ದರೂ ದುಃಖವನ್ನುಣ್ಣುವುದಕ್ಕೆ' ಎಂಬ ಪರಂಪರಾಗತ ಪುರುಷ ಪ್ರಧಾನ ಧೋರಣೆಯನ್ನು ಒಪ್ಪಿಕೊಂಡ ಸ್ತ್ರೀಪಾತ್ರಗಳನ್ನು ಕಾರಂತರ ಕಾದಂಬರಿಗಳಲ್ಲಿ ಗುರುತಿಸಬಹುದು. 'ಕರುಳಿನ ಕರೆ' ಕಾದಂಬರಿಯ ಸ್ತ್ರೀ ಪಾತ್ರಗಳು ಇದಕ್ಕೆ ಹೊರತಾಗಿಲ್ಲ. ಅವರು ಎಲ್ಲದಕ್ಕೂ ದೇವರೇ ಮೂಲ ಎಂಬುದನ್ನು ನಂಬಿದ್ದರು. ಇದರಿಂದಾಗಿಯೇ ಅವರು ಪರಿಸ್ಥಿತಿಯನ್ನು ಎದುರಿಸಿಕೊಂಡು ಬಾಳಲು ಮುಂದಾಗದೆ, ಹೊಂದಾಣಿಕೆಯಿಂದ ಬಾಳುತ್ತಿದ್ದರು. ಇದರಿಂದಾಗಿಯೇ ಪುರುಷರಿಗಿಂತಲೂ ಸ್ತ್ರೀಪಾತ್ರಗಳಲ್ಲಿ ಹೆಚ್ಚಿನ ಜೀವನ ಶ್ರದ್ಧೆಯನ್ನು ಗುರುತಿಸಬಹುದು. 'ಜೀವನದಲ್ಲಿ ಪಾಠವನ್ನು ಕಲಿಸುವುದು ಸುಖವಲ್ಲ, ದುಃಖ' ಎಂಬ ಬರ್ಟ್ರೆಂಡ್ ರಸ್ಸೆಲ್‌ರವರ ಹೇಳಿಕೆಯನ್ನು ಕಾದಂಬರಿಯ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು.

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀಯರ ಧಾರ್ಮಿಕತೆ ಸಂಪ್ರದಾಯದ ಅರಿವಿನಲ್ಲಿದೆ. ಪಾಪ-ಪುಣ್ಯಗಳ ವಿವೇಚನೆಯಲ್ಲಿದೆ. ದೇವರು ಕೊಟ್ಟರೆ ಉಂಟು, ಇಲ್ಲವಾದರೆ ಇಲ್ಲ ಎನ್ನುವ ಮನೋಭಾವ ಹೊಂದಿದ್ದರು. ಪ್ರತಿಯೊಂದು ಹಿತ, ಅಹಿತಕರ ಘಟನೆಗಳಿಗೂ ದೇವರೇ ಮೂಲ ಕಾರಣ ಎಂಬ ಭಾವನೆಯನ್ನು ಹೊಂದಿದ್ದ ಹೊನ್ನಜ್ಜಿಯ ಪಾತ್ರ 'ಇನ್ನೊಂದೇ ದಾರಿ' ಕಾದಂಬರಿಯಲ್ಲಿದೆ.

ಗಂಡನ ಪ್ರೀತಿಯನ್ನೂ ಸಹ ಕೊಡುವವನು ದೇವರೆ ಎಂದು ಬಲವಾಗಿ ನಂಬಿದ್ದ ಹೊನ್ನಜ್ಜಿ ಗಂಡನಿಗೆ ವಿಧೇಯಳಾಗಿ ಬಾಳುತ್ತಾಳೆ. ಹೊನ್ನಜ್ಜಿಯ ಧಾರ್ಮಿಕ ಆಚಾರ ವಿಚಾರಗಳು ಪುರುಷ ಪ್ರಧಾನ ನೆಲೆಯಲ್ಲಿಯೇ ಬೆಳೆದಿವೆ ಎಂಬುದು ಅವಳ ವಿಧೇಯತೆಯಿಂದ ಸ್ಪಷ್ಟವಾಗುತ್ತದೆ. ತನ್ನ ಗಂಡ ಮಗುವಿನ ಸರ ಕದ್ದಾಗ, ಅವನಿಗೆ 'ಒಳ್ಳೆಯ ಬುದ್ಧಿ' ಕೊಡುವಂತೆ ದೇವರಲ್ಲಿ ಮೊರೆಯಿಡುತ್ತಾಳೆ. ಪ್ರತಿದಿನವು ವಡ್ಡರಸೆಯ ಶಿವಾಲಯಕ್ಕೆ ಹೋಗುತ್ತಿದ್ದಳು. ಮುಟ್ಟಾದಾಗ, ಮೈಲಿಗೆಯಾದಾಗ, ಸಮೀಪದವರಿಂದ ಸೂತಕ ಬಂದಾಗ ದೇವಾಲಯಕ್ಕೆ ಹೋಗುತ್ತಿರಲಿಲ್ಲ. 'ಬದುಕುವುದು ಹೊಟ್ಟೆ ತುಂಬಿಸುವುದಕ್ಕಲ್ಲ; ದೇವರನ್ನು ಮೆಚ್ಚಿಸುವುದಕ್ಕೆ' ಎಂಬ ಸೂಕ್ತಿಯಂತೆ ಮಡಿ ಮೈಲಿಗೆ ಮಾಡುತ್ತಿದ್ದಳು. ಅನಾರೋಗ್ಯದಿಂದ ಬಳಲುತ್ತಿದ್ದರೂ ವೈದ್ಯರ ಹತ್ತಿರ ಹೋಗದೆ ದೇವರ ತೀರ್ಥದಿಂದ ವಾಸಿಯಾಗುತ್ತದೆ ಎನ್ನುವ ಮೌಢ್ಯವನ್ನು ಹೊಂದಿದ್ದಳು. ನರಮನುಷ್ಯರು ಉಂಡು, ತಿಂದು, ಸೊಕ್ಕಿ, ದೇವರನ್ನು ಮರೆಯಬಾರದು ಎಂಬುದಕ್ಕಾಗಿಯೇ ದೇವರು ಮನುಷ್ಯನಿಗೆ ಕಷ್ಟಗಳನ್ನು ಕೊಡುತ್ತಾನೆ ಎಂಬ ಸಮಾಧಾನವನ್ನು ಹೊಂದಿದ್ದಳು. 'ಕೊಡುವವನೂ ನೀನೆ, ಕೊಳ್ಳುವವನೂ ನೀನೆ. ಆದರೆ ಅವನ್ನೆಲ್ಲ ಸಹಿಸಿಕೊಳ್ಳುವ ತ್ರಾಣ ಮಾತ್ರ ನೀನೆ ಕೊಡಬೇಕು' ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದಳು.

ಹೊನ್ನಜ್ಜಿಯ ಧಾರ್ಮಿಕ ಆಚರಣೆಯು ಸಂಪ್ರದಾಯದ ಮೌಢ್ಯದಿಂದ ಕೂಡಿತ್ತು. ಎಲ್ಲದಕ್ಕೂ ದೇವರನ್ನೇ ಹೊಣೆಗಾರನನ್ನಾಗಿ ಮಾಡುತ್ತಿದ್ದಳು.

ಕನ್ನಡ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಕಿಯೂ ಸಹ ಸಾಂಪ್ರದಾಯಿಕ ವಿಧಿ, ವಿಧಾನಗಳಲ್ಲಿ ನಂಬಿಕೆಯನ್ನು ಹೊಂದಿದ್ದಳು. ವಿದ್ಯೆ, ಬುದ್ಧಿ ಎಲ್ಲವನ್ನು ಕೊಡುವವಳು 'ಸರಸ್ವತಿ'ಯೇ ಎಂದು ನಂಬಿದ್ದಳು. ಮಕ್ಕಳಿಗೆ ಒಳ್ಳೆಯ ವಿದ್ಯೆ ಬುದ್ಧಿಗಳನ್ನು ಕೊಡು ಎಂದು ದೇವರಲ್ಲಿ ಮೊರೆಯಿಡುತ್ತಾಳೆ. ಸಂಪ್ರದಾಯಸ್ಥಳಾದ ಅವಳು ಮಗನ ಅಂತರ್ಜಾತಿ ವಿವಾಹದಿಂದಾಗಿ ದುಃಖಿಸುತ್ತಾಳೆ. ಮಡಿ ಮೈಲಿಗೆ ಹಾಳಾಯ್ತು ಎಂದು ಪರಿತಪಿಸುತ್ತಾಳೆ. ಇದರಿಂದಾಗಿಯೇ ಮಗ ಸೊಸೆಯರನ್ನು ಮನೆಯಲ್ಲಿ ಸೇರಿಸಿಕೊಳ್ಳಲಿಲ್ಲ. ಮಗ ಮುಪ್ಪಿನಲ್ಲಿ ನೋಡಿಕೊಳ್ಳುತ್ತಾನೆ. ತನ್ನ ಕೈಯಿಂದ ಪಿಂಡ ಹಾಕುತ್ತಾನೆ ಎಂದು ನಂಬಿದ್ದ ಅವಳಿಗೆ ತೀರ ಹತಾಶೆಯುಂಟಾಗುತ್ತದೆ.

'ಅಚಲವಾದ ನಂಬಿಕೆಯೇ ದೇವರು' ಎಂಬ ಸಾಂಪ್ರದಾಯಿಕ ಮನೋಭಾವವನ್ನು ಹೊಂದಿದ ಹೊನ್ನಜ್ಜಿ, ಜಾನಕಿಯರ ಧಾರ್ಮಿಕ ಜೀವನವನ್ನು ಕುರಿತು 'ಇನ್ನೊಂದೇ ದಾರಿ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ತಾಯ್ತನದ ಬಯಕೆ ಕಾದಂಬರಿಕಾರರು ಕಂಡಂತೆ ಹೆಣ್ಣಿನ ಜೀವನದ ಒಂದು ಆಂತರಿಕ ಆಸೆ ಮಾತ್ರವಲ್ಲದೆ ಉತ್ಕಟೇಚ್ಛೆಯಾಗಿದೆ. ಇದು ಅವರ ಹಲವಾರು ಕಾದಂಬರಿಗಳಿಂದ ಮನದಟ್ಟಾಗುತ್ತದೆ. ವೇಶ್ಯೆಯೊಬ್ಬಳು ಮಗುವಿಗಾಗಿ ಹಂಬಲಿಸುವ ಪರಿಯನ್ನು ಧಾರ್ಮಿಕ ಹಿನ್ನೆಲೆಯಲ್ಲಿ "ಮೈ ಮನಗಳ ಸುಳಿಯಲ್ಲಿ" ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಮಗುವಿನ ಸಲುವಾಗಿ ಮಂಜುಳೆಯು ಹಲವಾರು ಪರ ಪುರುಷರೊಂದಿಗೆ ಸಂಬಂಧವನ್ನು ಹೊಂದಿದ್ದಳು. ಆದರೂ ಅವಳಿಗೆ ಮಕ್ಕಳಾಗಿರಲಿಲ್ಲ. ಇದರಿಂದ ಮಂಜುಳೆಯು ತುಂಬ ನಿರಾಶಳಾಗುತ್ತಾಳೆ. 'ಮಗುವನ್ನು ಕರುಣಿಸು' ಎಂದು ಕಾಳವಾರದ ಸುಬ್ರಹ್ಮಣ್ಯನಿಗೆ ಹರಕೆ ಹೊರುತ್ತಾಳೆ. ಪ್ರತಿವರ್ಷವೂ ದೇವಸ್ಥಾನದಲ್ಲಿ ಕುಣಿದು ದೇವರಿಗೆ ತನ್ನ ಸೇವೆಯನ್ನು ಸಲ್ಲಿಸುತ್ತಾಳೆ. 'ಯುಕ್ತವಾದ, ಸೂಕ್ತವಾದ ಹಾಗೂ ನ್ಯಾಯಸಮ್ಮತವಾದ ನಡವಳಿಕೆಯೇ ಧರ್ಮ' ಎಂಬ ನೀತಿಯಂತೆ ಬದುಕುತ್ತಾಳೆ. 'ಕಾಯಕವೇ ಕೈಲಾಸ' ಎಂಬ ಶರಣರ ಸೂಕ್ತಿಯಂತೆ ವೇಶ್ಯಾವೃತ್ತಿಯನ್ನು ನಿಷ್ಠೆಯಿಂದ ಪಾಲಿಸುತ್ತಾಳೆ.

ವೇಶ್ಯೆಯಾದ ಮಂಜುಳೆಯು ಉಳ್ಳೂರು ಸುಬ್ರಾಯರನ್ನು 'ಪತಿ'ಯೆಂದು ಭಾವಿಸುತ್ತಿದ್ದು ತುಂಬ ಪ್ರೀತಿಸುತ್ತಿದ್ದಳು. ಸುಬ್ರಾಯ 'ಪಾರ್ಶ್ವವಾಯು'ದಿಂದ ನರಳುತ್ತಿದ್ದಾಗ ಅವರಿಗೆ ಗುಣವಾಗಲೆಂದು ನಿಸ್ವಾರ್ಥದಿಂದ ದೇವರಲ್ಲಿ ಮೊರೆಯಿಡುತ್ತಾಳೆ. "ಏ ನನ್ನ ದೇವರೆ, ನನಗಾಗಿ ಅಲ್ಲ, ಅವರಿಗಾಗಿ ಅವರನ್ನು ಉಳಿಸು! ಅವರು ಸುಖವಾಗಿದ್ದಾರೆಂದು ಕೇಳಿಸುವಂತೆ ಮಾಡು" (೧೯೯೨; ೧೮೫) ಎಂದು ಬೇಡುತ್ತಾಳೆ. ಪ್ರತಿದಿನವೂ ಮಹಾಲಿಂಗೇಶ್ವರನ ಗುಡಿಗೆ ಹೋಗಿ ಎಳ್ಳು ದೀಪ ಹಚ್ಚುತ್ತಿದ್ದಳು. ತನ್ನ ಜೀವಿತದ ಕೊನೆಯಲ್ಲಿ ತನ್ನ ಆಸ್ತಿಯ ಅರ್ಧ ಭಾಗವನ್ನು ಊರ ಈಶ್ವರ ದೇವಾಲಯಕ್ಕೆ ಉಂಬಳಿಯಾಗಿ ನೀಡುವುದು ಅವಳ ಔದಾರ್ಯವನ್ನು ತೋರಿಸುತ್ತದೆ.

ಕಾದಂಬರಿಕಾರರು ವೇಶ್ಯೆಯರನ್ನು ಗೌರವದಿಂದ ಕಾಣುತ್ತಿದ್ದರು ಎಂಬುದು ಮಂಜುಳೆಯ ಪಾತ್ರದಿಂದ ಸ್ಪಷ್ಟವಾಗುತ್ತದೆ. "ಮಾನವೀಯ ಮೌಲ್ಯಗಳಾದ ನೈತಿಕತೆ ಹಾಗೂ ಮಾನಸಿಕತೆಯ ಹೊರತು

ನಿಜವಾದ ನಾಗರಿಕತೆಯನ್ನು ಸ್ಥಾಪಿಸಲು ಸಾಧ್ಯವಿಲ್ಲ" ಎಂಬ ತಾತ್ವಿಕ ಚಿಂತನೆಯಂತೆ ಆದರ್ಶದ ಹಿನ್ನೆಲೆಯಲ್ಲಿ ಮಂಜುಳೆಯ ಪಾತ್ರವನ್ನು ಕುರಿತು ಹೇಳಲಾಗಿದೆ. ವೇಶ್ಯೆಯರೆಲ್ಲರೂ ಕೆಟ್ಟವರಲ್ಲ, ಅವರಲ್ಲಿಯೂ ಒಳ್ಳೆಯವರಿರುತ್ತಾರೆ. ದೇವರಲ್ಲಿ ನಂಬಿಕೆಯನ್ನು ಹೊಂದಿದ್ದು, ಉತ್ತಮವಾದ ಆಚಾರ ವಿಚಾರಗಳನ್ನು ಹೊಂದಿರುತ್ತಾರೆ ಎಂಬುದನ್ನು 'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಮುಂದಿಡಲಾಗಿದೆ.

'ಭಕ್ತಿ' ಹೃದಯದಿಂದ ಜನಿಸಬೇಕು. ಹೃದಯಪೂರ್ವಕವಾಗಿಯೂ, ನಿರ್ಮಲವಾದ ಮನಸ್ಸಿನಿಂದಲೂ ದೇವರನ್ನು ಸ್ತುತಿಸಬೇಕು. ಸಮಾಜದ ತೋರಿಕೆಗೆ ಆಡಂಬರದ ಭಕ್ತಿ ಇರಬಾರದು ಎಂಬುದು "ಕೇವಲ ಮನುಷ್ಯರು" ಕಾದಂಬರಿಯ ಆಶಯವಾಗಿದೆ. ಶಾಂತಾಬಾಯಿಯು ಅಭಿನ್ನಾನಂದ ಸ್ವಾಮೀಜಿಗಳ ಆಶ್ರಮದಲ್ಲಿ ನಡೆಯುತ್ತಿದ್ದ ಧಾರ್ಮಿಕ ಚಿಂತನೆಯಲ್ಲಿ ಭಾಗವಹಿಸುತ್ತಿದ್ದಳು. ಲೌಕಿಕ ಜೀವನಕ್ಕಿಂತ ಪಾರಮಾರ್ಥಿಕ ಜೀವನವೇ ತನಗೆ ಇಷ್ಟವೆಂಬಂತೆ ವರ್ತಿಸುತ್ತಿದ್ದಳು. ತನ್ನ ಅಹಂಕಾರದ ಮನೋಭಾವದಿಂದ ತಾನು ಸ್ವಾಮೀಜಿಗಳಿಗೆ ಸರಿಸಮಾನಳು ಎಂಬಂತೆ ಸ್ವಾಮೀಜಿಗಳ ಅನುಪಸ್ಥಿತಿಯಲ್ಲಿ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದಳು. ಇದರಿಂದ ಧಾರ್ಮಿಕ ವಿಚಾರ ವೇದಿಕೆಯಲ್ಲಿ ತಾನೇ 'ಹಿತವಚನ' ನೀಡಲಾರಂಭಿಸಿದಳು. ಇದನ್ನರಿತ ಸ್ವಾಮೀಜಿಗಳು ಶಾಂತಾಬಾಯಿಯಲ್ಲಿ ಅಡಗಿದ್ದ ಢಾಂಬಿಕತೆಯನ್ನು ನಿವಾರಿಸಿದರು.

"ವೈರಾಗ್ಯ ಎಂದರೆ ಕಾಡಿಗೆ ಹೋಗುವುದಲ್ಲ. ತನ್ನ ಕರ್ತವ್ಯವನ್ನು ಪರಿಪೂರ್ಣವಾಗಿ ನಿರ್ವಹಿಸಿ ಅದರ ಪ್ರತಿಫಲಗಳಿಗೆ ಅಂಟಿಕೊಳ್ಳದಿರುವುದೇ ಆಗಿದೆ" ಎಂಬ ವೇದಾಂತವನ್ನು 'ಸನ್ಯಾಸಿಯ ಬದುಕು' ಕಾದಂಬರಿಯು ಒಳಗೊಂಡಿದೆ. ಸುಮಿತ್ರೆಯು ಗಂಡನ ದುಷ್ಟತನ ಪರಿಹಾರವಾಗಲೆಂದು ಗುಡಿಯ ದೀಪಗಳಿಗೆ ಎಣ್ಣೆಬತ್ತಿಗಳನಿಟ್ಟು, 'ನನ್ನ ಸಂಸಾರದ ದೀಪವನ್ನು ಸದಾ ಉರಿಸು' ಎಂದು ದೇವರಲ್ಲಿ ಮೊರೆಯಿಡುತ್ತಾಳೆ. ತನ್ನ ಗಂಡ ಊರನ್ನು, ಸಂಸಾರವನ್ನು ತೊರೆದಾಗ 'ಹುಟ್ಟಿಸಿದ ದೇವರು ಹುಲ್ಲು ಮೇಯಿಸಲ್ಲ' ಎಂಬ ಅಚಲವಾದ ನಂಬಿಕೆಯಿಂದ ಜೀವನವನ್ನು ಸಾಗಿಸುತ್ತಾಳೆ.

'ಪರೋಪಕಾರವೇ ದೊಡ್ಡ ಧರ್ಮ, ಇತರರಿಗಾಗಿ ಕೆಲಸ ಮಾಡುವುದೇ ಕಾರ್ಯ ನಿಪುಣತೆ' ಎಂಬ ಸಿದ್ಧಾಂತವನ್ನು ಮೈಗೂಡಿಸಿಕೊಂಡ ರುಕ್ಮಾಯಿಯು ಅನ್ಯರ ಸೇವೆಯಲ್ಲಿಯೇ ಕಾಲ ಕಳೆಯುತ್ತಿದ್ದಳು. ತನಗೆ ಅಶನಾರ್ಥದ ರೂಪದಲ್ಲಿ ಬರುತ್ತಿದ್ದ ಹತ್ತು ರೂಪಾಯಿಗಳನ್ನು ಸುಮಿತ್ರೆಯ ಕುಟುಂಬದ ಸಲುವಾಗಿ ವ್ಯಯಿಸುತ್ತಿದ್ದಳು. ವಿಧವೆಯರಿಗೆ ಸರಕಾರದಿಂದ ಮಾಶಾಸನ ದೊರೆಯುತ್ತಿತ್ತು ಎಂಬುದನ್ನು ರುಕ್ಮಾಯಿಯ ಪಾತ್ರದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಬಡತನದಲ್ಲಿ ದೃತಿಗೆಟ್ಟ ಸುಮಿತ್ರೆಗೆ ಸಮಾಧಾನ ಪಡಿಸುತ್ತ ಅವಳಿಗೆ ನೆರವಾಗುತ್ತಾಳೆ. 'ಬಾಳನ್ನು ದೂಷಿಸುವುದೇಕೆ ಮತ್ತು ಗೋಳಾಡುವುದೇಕೆ? ನಾವೇನೆ ಮಾಡಿದರೂ ಈ ಬಾಳನ್ನು ನಡೆಸಿಕೊಂಡು ಹೋಗಲೇಬೇಕು? ಇದು ಪರಮಾತ್ಮನು ಆಡಿಸುವ ಆಟ. ನೀನು ಅದರಲ್ಲಿ ಪಾಲ್ಗೊಳ್ಳಲು ಅಳಬೇಡ' ಎಂದು ಸುಮಿತ್ರೆಗೆ ಸಂತೈಸುತ್ತ ಅವಳಲ್ಲಿ ಜೀವನ

ಶ್ರದ್ಧೆಯನ್ನು ಬೆಳೆಯಿಸುತ್ತಾಳೆ. ಜೀವನದಲ್ಲಿ ಬರುವ ಕಷ್ಟಗಳನ್ನು ಸಹಿಸಿಕೊಂಡು ಬಾಳ್ವೆ ಮಾಡಬೇಕು ಎಂದು ಸುಮಿತ್ರೆಯಲ್ಲಿ ಧೈರ್ಯ ತುಂಬುತ್ತಾಳೆ.

ಧಾರ್ಮಿಕ ಜೀವಿಯಾದ ರುಕ್ಮಾಯಿಯು ದೇವರಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದಳು. ಹಿಂದೂ ಧರ್ಮದ ಸಂಪ್ರದಾಯದಂತೆ ಜೀವನದಲ್ಲಿ ಒಮ್ಮೆಯಾದರೂ ಕಾಶಿಯಾತ್ರೆ ಮಾಡಬೇಕೆಂದು ಬಯಸುತ್ತಾಳೆ. ಅದಕ್ಕಾಗಿ ಹಣ ಕೂಡಿಸುತ್ತಾಳೆ. ಸುಮಿತ್ರೆಯು ಬಡತನದಿಂದಾಗಿ ಮಗಳ ಮದುವೆ ಮಾಡಲಾಗದೆ ಕಂಗಾಲಾಗುತ್ತಾಳೆ. ಕಾಶಿಯಾತ್ರೆ ಮಾಡಬೇಕೆಂದು ಹಣವನ್ನು ಕೂಡಿಟ್ಟ ರುಕ್ಮಾಯಿಯು ಅದನ್ನು ಸುಮಿತ್ರೆಯ ಮಗಳ ಮದುವೆಯ ಸಲುವಾಗಿ ವಿನಿಯೋಗಿಸುತ್ತಾಳೆ. ಇದರಿಂದ ಕಾದಂಬರಿಯಲ್ಲಿ 'ಕನ್ಯಾದಾನ' ಶ್ರೇಷ್ಠವಾದುದು ಎಂಬ ಧಾರ್ಮಿಕ ಮೌಲ್ಯವನ್ನು ಪ್ರತಿಪಾದಿಸಲಾಗಿದೆ. ಕಾಶಿಯಾತ್ರೆಗಿಂತಲೂ ಕನ್ಯಾದಾನ ಪವಿತ್ರವಾದುದು ಎಂದು ರುಕ್ಮಾಯಿಯ ಪಾತ್ರದ ಮೂಲಕ ಚಿತ್ರಿಸಲಾಗಿದೆ.

ರುಕ್ಮಾಯಿಯು ಡಾಂಭಿಕ ಭಕ್ತಿಯನ್ನು ಮೆಚ್ಚುತ್ತಿರಲಿಲ್ಲ. ಕಟುವಾಗಿ ಟೀಕಿಸುತ್ತಿದ್ದಳು. ಸುಮಿತ್ರೆಯ ಗೆಳತಿ ಚಂದ್ರಾವತಿಯು ಕೃಷ್ಣಾನಂದರ ಆಡಂಬರ ಭಕ್ತಿಯನ್ನು ಹೊಗಳುತ್ತಿದ್ದಾಗ "ಮಗು ನನಗೆ ದೇವರಲ್ಲಿ ನಿನಗಿಂತಲೂ ಹೆಚ್ಚಿನ ನಂಬಿಕೆಯಿದೆ. ದೇವರು ನನಗೆ ಬೇಕೆ ಬೇಕು; ದಿಂಡಿರು ಬೇಡ. ದಿಂಡೆಯರೂ ಬೇಡ! ಯಾರು ತಾವೇ ದೇವರೆಂದು ಹೇಳಿ ತಾವೇ ಪೂಜೆ ಮಾಡಿಸಿಕೊಳ್ಳುತ್ತಾರೋ ಅಂತ ವಂಚಕರ ಮುಖ ನೋಡುವುದು ಪಾಪ. ನಾನು ಕೇಳಿದ್ದೇನೆ ಸಾಧು ಸಂತರ ಕಥೆಗಳೂ ನನಗೆ ಗೊತ್ತು. ಅವರೆಲ್ಲ ತಾವು ದಾಸರು ಎಂದುಕೊಂಡರೇ ಹೊರತು ತಾವೇ ದೇವರು ಎಂದವರಲ್ಲ" (೨೦೦೩, ಸಂ. ೭, ಕಾ. ೬, ೧೪೪-೧೪೫) ಎಂದು ಧಾರ್ಮಿಕತೆಯ ಸೋಗನ್ನು ಖಂಡಿಸುತ್ತಾಳೆ. ಪ್ರಸ್ತುತ ಸಮಾಜದಲ್ಲಿ ಮಠಾಧೀಶರ ಆಡಂಬರ ಜೀವನ, ಅವ್ಯವಹಾರ ಬದುಕನ್ನು ರುಕ್ಮಾಯಿಯ ಈ ಹೇಳಿಕೆಯ ಮುಖಾಂತರ ಕಾದಂಬರಿಯಲ್ಲಿ ಮುಂದಿಡಲಾಗಿದೆ.

ಸಂಸಾರವೆಂಬುದು ಮಾಯೆಯಲ್ಲ. ದೇವರೇ ಅದನ್ನು ನಿರ್ಮಿಸಿದ್ದಾನೆ. ಅದನ್ನು ನಿರ್ಮಿಸಿದ ದೇವರನ್ನು ನಾವು ಸಂಸಾರದಲ್ಲಿ ಕಾಣಬೇಕು. ಅದನ್ನು ನಿರ್ವಹಿಸಲಾರದೆಯೇ ಓಡಿ ಹೋಗುವವರಿಗೆ ದೇವರು ಸಿಗಲಾರ ಎಂಬ ಚಿಂತನೆಯು 'ಸನ್ಯಾಸಿಯ ಬದುಕು' ಕಾದಂಬರಿಯಲ್ಲಿದೆ.

'ನಂಬಿಕೆ' ಎನ್ನುವಂತದ್ದು ಮಾನವನ ಇತಿಹಾಸದೊಂದಿಗೆ ತಳಕು ಹಾಕಿಕೊಂಡು ಬಂದಿದೆ. ಇದು ಮಾನವನಿಗೆ ಸುಲಭವಾಗಿ ದೊರಕಿದ್ದರಿಂದ ಅವನಲ್ಲಿ ಕ್ರಿಯಾಶೀಲತೆ ಕಡಿಮೆಯಾಗಲು ಕಾರಣವಾದದ್ದು ಒಂದು ವಿಪರ್ಯಾಸವಾಗಿದೆ ಎಂಬುದನ್ನು "ನಂಬಿದವರ ನಾಕ ನರಕ" ಕಾದಂಬರಿಯ ಸ್ತ್ರೀ ಪಾತ್ರಗಳಿಂದ ತಿಳಿದುಕೊಳ್ಳಬಹುದು. ನಮ್ಮ ಬದುಕೇ ನಮ್ಮ ಭಾವನೆಗಳಿಗೆ ಅಡಿಗಲ್ಲು. ಏಕೆಂದರೆ 'ಬದುಕು' ಸುಗಮವಾಗುವುದು ನಂಬಿಕೆಯ ಆಧಾರದ ಮೇಲೆ. ಆ ನಂಬಿಕೆಯಿಂದಲೇ ಬದುಕು ಸ್ವರ್ಗವಾಗುತ್ತದೆ, ಇಲ್ಲದಿದ್ದರೆ ನರಕವಾಗುತ್ತದೆ ಎಂಬುದನ್ನು ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ.

ಸಿಂಗಾರಮ್ಮ ಮನೆಯ ಯಜಮಾನಿಯಾಗಿದ್ದರೂ, ಸಿರಿವಂತಿಕೆಯ ದರ್ಪವಿಲ್ಲದೆಯೆ ವ್ಯವಹಾರ ಪ್ರಪಂಚದಲ್ಲಿ ಸದಾ ದಯೆ, ಅನುಕಂಪಗಳನ್ನು ಹೊಂದಿದ್ದಳು. "ಸಮಾಜದ ಜನರ ನಡತೆಯನ್ನು ನಿಯಂತ್ರಿಸುವ ಸ್ಥಿತಿ ಆಧ್ಯಾತ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಸಂರಕ್ಷಿಸಿ ಪವಿತ್ರವನ್ನಾಗಿಸುವುದು

[illegible]

ಧರ್ಮ" ಎಂಬ ಓಡಿಯಾ ಅವರ ಅಭಿಪ್ರಾಯ ಸರಿಯಾಗಿಯೇ ಇದೆ. ಅವಳು ವಯಸ್ಸಿಗೆ ಅನುಗುಣವಾದ ಪಕ್ವತೆ, ಹಿರಿತನ, ಹುಟ್ಟು-ಸಾವುಗಳನ್ನು ಸಮಭಾವದಿಂದ ಸ್ವೀಕರಿಸುವ ಮನೋಸ್ಥೈರ್ಯವನ್ನು ಹೊಂದಿದ್ದಳು. ದೇವರು, ನಂಬಿದವರನ್ನು ಕೈಬಿಡಲಾರ ಎಂಬ ಶ್ರದ್ಧೆಯುಳ್ಳ ಅವಳು ಧಾನ, ಧರ್ಮ ಮಾಡುತ್ತಿದ್ದಳು. ಅಂತೆಯೇ ಬಹುಮಂದಿ ದಿನವೂ ಉಂಡು ಹೋಗುವ ಮನೆಯ ಯಜಮಾನಿಯಾಗಿದ್ದಳು.

ಸಿಂಗಾರಮ್ಮ ತನ್ನ ಮೊಮ್ಮಗ ಸೀತಾರಾಮನಿಗೆ ಆಯುಷ್ಯ ಗಟ್ಟಿಯಿರುವ ಹೆಣ್ಣು ಬರಬೇಕು. ಇದರಿಂದ ಅವನ ಜಾತಕದಲ್ಲಿ ಹೇಳಿದ ಅಲ್ಪಾಯುಷ್ಯ ಮಾಸಿ ಹೋಗುತ್ತದೆ ಎಂಬ ಬಲವಾದ ನಂಬಿಕೆಯನ್ನು ಹೊಂದಿದ್ದಳು. ಬಡವರಾಗಿದ್ದರೂ, ಚಿಂತೆಯಿಲ್ಲ ಎಂಬಂತೆ ಶಂಕರಯ್ಯನ ಮಗಳಾದ ಕಾವೇರಿಯನ್ನು ಸೊಸೆಯನ್ನಾಗಿ ಮನೆಗೆ ತರಲು ಯೋಚಿಸುತ್ತಾಳೆ. "ಆಗಾಗ ಅವಳ ಮನಸ್ಸಿಗೆ ಯಮನನ್ನು ಗೆದ್ದ ಸಾವಿತ್ರಿಯ ಚಿತ್ರ ಕಾಣಿಸುವುದುಂಟು. ಜಾತಕ ಹೇಳುವಂತೆ ಅಲ್ಪಾಯುಷಿಯಾಗಿರುವ ಸೀತಾರಾಮನನ್ನು ದುರದೃಷ್ಟದಿಂದ ಪಾರು ಮಾಡುವುದಕ್ಕೆ ಅದೊಂದೆ ದಾರಿಯೆಂದು ತೋರುತ್ತಿತ್ತು" (೨೦೦೩ ಸಂ. ೧೦ ಕಾ.೯-೨೮೫) ಕಾದಂಬರಿಕಾರರು ಸತಿ ಸಾವಿತ್ರಿಯಂತಹ ಪೌರಾಣಿಕ ನಾಟಕದಿಂದ ಪ್ರಭಾವಿತರಾಗಿದ್ದರು ಎಂಬುದು ಸಿಂಗಾರಮ್ಮ ಪಾತ್ರದ ಮನೋಸ್ಥಿತಿಯಿಂದ ಸ್ಪಷ್ಟವಾಗುತ್ತದೆ. ಆಧುನಿಕ ವಿಚಾರವಂತರಾಗಿದ್ದ ಕಾದಂಬರಿಕಾರರು ಪೌರಾಣಿಕ ವಸ್ತುವನ್ನು ನಂಬುತ್ತಿದ್ದರು ಎಂಬುದು ಸಿಂಗಾರಮ್ಮನ ಪಾತ್ರದಿಂದ ತಿಳಿಯುತ್ತದೆ. ಧಾರ್ಮಿಕ ಜೀವಿಯಾದ ಸಿಂಗಾರಮ್ಮ ಜಾತಕದಲ್ಲಿ ನಂಬಿಕೆಯನ್ನು ಹೊಂದಿದ್ದಳು. 'ಹಣೆಬರಹ'ದ ಸುಧಾರಣೆಯಾಗುವುದು ಜಾತಕದಿಂದಲೇನೆ ಎಂಬ ಅಚಲವಾದ ವಿಶ್ವಾಸದಿಂದ ಆಯುಷ್ಯ ಗಟ್ಟಿಯಿರುವ ಕಾವೇರಿಯನ್ನು ಸೊಸೆಯನ್ನಾಗಿ ಮಾಡಿಕೊಳ್ಳುತ್ತಾಳೆ. ಅವಳಿಂದ ತನ್ನ ಮಗನ ಆಯುಷ್ಯ ವೃದ್ಧಿಯಾಗುತ್ತದೆ ಎಂದು ದೃಢವಾಗಿ ನಂಬಿದ್ದಳು.

ಸಾವಿತ್ರಮ್ಮ ಉಸಿರಿರುವ ತನಕ ಕರ್ತವ್ಯ ಮರೆಯದ ಹೆಂಗಸು. ನಾಲ್ಕು ದಿನ ಇಲ್ಲಿದ್ದು ಆ ದೇವರು ಕರೆದ ದಿನ ಹೊರಡಬೇಕು ಎಂದು ನಂಬಿದ್ದಳು. ತನ್ನ ಮಗ ಉಂಡಾಡಿ ಗುಂಡನಂತೆ ಊರೂರು ಅಲೆಯುತ್ತಿದ್ದರಿಂದ ಅದನ್ನು ತಡೆಯಲು ಅವನಿಗೆ ಮದುವೆ ಮಾಡಿಸಬೇಕೆಂದು ಬಯಸಿದಳು. 'ಮದುವೆಯಿಂದ ಪುರುಷನಿಗೆ ಜವಾಬ್ದಾರಿ ಬರುತ್ತದೆ' ಎಂಬುದು ಪುರುಷ ಪ್ರಧಾನ ಸಮಾಜದ ಧೋರಣೆಯಾಗಿದೆ. ತನ್ನ ಮಗನಾದ ಸುಬ್ರಾಯನೊಂದಿಗೆ ಸತ್ಯಭಾಮೆಯ ಮದುವೆ ಮಾಡಿಸುತ್ತಾಳೆ. ಸೊಸೆಯೊಂದಿಗೆ ತಾಯಿಯಂತೆ ಸದಾ ಪ್ರೀತಿ, ವಿಶ್ವಾಸದಿಂದ ಬಾಳುತ್ತಾಳೆ. ತಾನು ಬದುಕಿರುವಷ್ಟು ಕಾಲವಾದರೂ ಮನೆಯ ಗೊಡೆ ಮುರಿಯದಿರಲಿ ಎಂದು ಆಶಿಸುತ್ತಾಳೆ. ತನ್ನ ಮಗ ಹೆಂಡತಿಯನ್ನು, ಮನೆಯನ್ನು ತೊರೆದು ಹೋಗದಿರಲೆಂದು ಬಯಸುತ್ತಾಳೆ. ಆದರೆ ಸುಬ್ರಾಯನಿಗೆ ಮದುವೆಯು ಜವಾಬ್ದಾರಿಯುತನನ್ನಾಗಿ ಮಾಡುವಲ್ಲಿ ವಿಫಲವಾಗುತ್ತದೆ. ಇದರಿಂದ ಸಾವಿತ್ರಿಯು ತನ್ನ ಮತ್ತು ಸೊಸೆಯ ಹಣೆಬರಹವನ್ನು ಮೂದಲಿಸುತ್ತ ವೇದನೆ ಪಡುತ್ತಾಳೆ. ಸಂಕಟ ದೇವರು ತಂದು ಒಡ್ಡಿದಲ್ಲ ನಾವೇ ತಂದುಕೊಂಡದ್ದು. ದೇವರು ಕೊಟ್ಟ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡರೆ

[illegible]

[illegible]

[illegible]

[illegible]

ಅನ್ಯಾಯವಾಗುತ್ತದೆ ಎಂಬುದನ್ನು ವಿಚಾರ ಮಾಡದೆ ತಮ್ಮ ಎಲ್ಲ ಅವಿವೇಕತನಕ್ಕೂ ದೇವರೆ ಕಾರಣ ಎಂದು ಮರುಗುತ್ತಾಳೆ. ವಿವೇಚನೆಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸದೆ ತನ್ನ ಸೊಸೆಯನ್ನು ಸಂತೈಸುತ್ತ ಬದುಕುವಳು.

ಮನುಷ್ಯನ ಸುಖ, ದುಃಖಗಳಿಗೆ ಅವನ ಆಚಾರ ವಿಚಾರಗಳು ಕಾರಣವಾಗುತ್ತವೆ. ಅವನ ಯಶಸ್ಸಿಗೂ ಅವನ ಪ್ರಯತ್ನವೇ ಕಾರಣವಾಗುತ್ತದೆ. ಅದೃಷ್ಟ, ಹಣೆಬರಹ ಎಂದು ಕೈಕಟ್ಟಿ ನಿರ್ಲಿಪ್ತರಾದರೆ ಏನೂ ಸಾಗದು. ಆದರೆ ಸಾವಿತ್ರಮ್ಮ, ಸಿಂಗಾರಮ್ಮನಂತವರು ತಮಗೊದಗುವ ಕಷ್ಟ, ಸುಖಗಳಿಗೆ ದೇವರೆ ಕಾರಣ, ಹಣೆಬರಹದಲ್ಲಿದ್ದಂತೆ ಆಗುತ್ತದೆ ಎಂದು ನಂಬಿರುವುದು ಅವರ ಧಾರ್ಮಿಕ ಮೌಢ್ಯತೆಗೆ ಸಾಕ್ಷಿಯಾಗಿದೆ. ಈ ಪಾತ್ರಗಳಿಂದ ಕಾದಂಬರಿಕಾರರು ಸಮಾಜದಲ್ಲಿರುವ ಅನಿಷ್ಠ ಪದ್ಧತಿಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಎಂದು ಹಿಂದಿನವರು ಹುಟ್ಟಿಸಿದ ಗಾದೆ ಮಾತು. ಇದು ಪ್ರಸ್ತುತ ಸಮಾಜದಲ್ಲಿ ವ್ಯತಿರಿಕ್ತವಾಗಿ ನಿಜರೂಪ ತಾಳಿದೆ. ವಾಸ್ತವ ಜಗತ್ತಿನಲ್ಲಿ ಇಂತಹ ಸುಳ್ಳು ಹೇಳಿ ಮದುವೆ ಮಾಡುವ ಪ್ರಸಂಗಗಳು ಕೆಲವೊಮ್ಮೆ ಇಡೀ ಸಂಬಂಧವನ್ನೆ ಮುರಿದು ಹಾಕುವ ಅಪಾಯಗಳಿವೆ ಎಂಬುದನ್ನು 'ವಾಗ್ದೇವಿ'ಯ ಪಾತ್ರದ ಮುಖಾಂತರ ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ವಾಗ್ದೇವಿಯು ತನ್ನ ಗಂಡ ಬ್ರಾಹ್ಮಣ ಕುಲದವನಲ್ಲ, ಕೀಳು ಕುಲದವನೆಂದು ಸತ್ಯ ತಿಳಿದಾಗ ತುಂಬ ದುಃಖಿಸುತ್ತಾಳೆ. ಅಂತರಂಗದಲ್ಲಿಯ ಅವಳ ಮಾನಸಿಕ ತುಮುಲಗಳು ಬಹಿರಂಗದಲ್ಲಿ ಎಲ್ಲವೂ ಗೊಂದಲವಾಗುವಂತೆ ಮಾಡುತ್ತವೆ. ಯಾವುದನ್ನು ಗುಣಪಡಿಸಲಾಗುವುದಿಲ್ಲವೋ ಅದನ್ನು ಸಹಿಸಿಕೊಂಡು ಜೀವನ ಸಾಗಿಸಬೇಕು. ಅದನ್ನೇ ನೆನಸಿಕೊಂಡರೆ ಯಾವುದೇ ಪ್ರಯೋಜನವಾಗುವುದಿಲ್ಲ. ಆದರೆ ವಾಗ್ದೇವಿ ದಾಂಪತ್ಯ ಜೀವನಕ್ಕೆ ಜಾತಿ ಅಡ್ಡಿಯಾಗಲಾರದು ಎಂಬುದನ್ನರಿಯದೆ ಜಾತಿಯತೆಯ ಆಚಾರ ವಿಚಾರಗಳಿಂದ ನರಳುತ್ತಾಳೆ. ಗಂಡನಿಂದ ದೂರವಿದ್ದು ದೇವರನ್ನು ನೆನೆಯುತ್ತಾ ಕಣ್ಣೀರನ್ನು ಹಾಕುತ್ತಾಳೆ. ತನ್ನ ಧಾರ್ಮಿಕ ಮೌಢ್ಯದಿಂದಾಗಿ ಬದುಕನ್ನು ನರಕವನ್ನಾಗಿಸಿಕೊಳ್ಳುತ್ತಾಳೆ. ಜಾತಿಯ ಹಂಗನ್ನು ತೊರೆದು ಸುಖವಾದ ಜೀವನ ಸಾಗಿಸಬಹುದಾಗಿತ್ತು. ಆದರೆ ಜಾತೀಯತೆಯ ಹಂಗನ್ನು ತೊರೆಯುವಲ್ಲಿ ವಿಫಲಳಾಗುತ್ತಾಳೆ. ಇದರಿಂದಾಗಿಯೇ ಸಂಸಾರದಲ್ಲಿದ್ದುಕೊಂಡು ಸನ್ಯಾಸಿನಿಯಂತೆ ಬದುಕುತ್ತಾಳೆ. ಅವಳು ತಾನು ನಂಬುವ ವಿಚಾರ ಸರಣಿಯಿಂದಲೇ ತನ್ನ ಬದುಕನ್ನು ನರಕವನ್ನಾಗಿಸಿಕೊಳ್ಳುತ್ತಾಳೆ.

ಮನಸ್ಸು ಭೂತಕಾಲದ ಸಮಸ್ಯೆಗಳಿಗೆ ದಾಸವಾಗಿದ್ದರೆ, ವರ್ತಮಾನದಲ್ಲಿ ಸಂತೋಷವನ್ನು ಪಡೆಯಲಾಗುವುದಿಲ್ಲ. ಹಾಗಾಗಿ ಜೀವನದ ಸವಿಯನ್ನು ಅನುಭವಿಸಬೇಕಾದರೆ ಭೂತದಲ್ಲಿ ಜರುಗಿದ ಅಹಿತ ಘಟನೆಗಳನ್ನು ಮರೆಯಬೇಕು. ಇಲ್ಲದಿದ್ದರೆ ಜೀವನವು ಹಾಳಾಗುತ್ತದೆ ಎಂಬ ತಾತ್ವಿಕತೆ ಕಾದಂಬರಿಯಲ್ಲಿದೆ.

ವ್ಯಕ್ತಿ-ವ್ಯಕ್ತಿ, ವ್ಯಕ್ತಿ-ಸಮಾಜ, ಸಮಾಜ-ವ್ಯಕ್ತಿ ಮತ್ತು ವ್ಯಕ್ತಿ-ನಿಸರ್ಗ ಕುರಿತು ಭಾವನಾತ್ಮಕ ಸಂಬಂಧಗಳನ್ನು ನಿಯಂತ್ರಿಸುವ ಒಲವೇ ಧರ್ಮ ಎಂಬುದನ್ನು "ಔದಾರ್ಯದ ಉರುಳಲ್ಲಿ" ಕಾದಂಬರಿಯ

ಶೇಷಮ್ಮಳ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಶೇಷಮ್ಮ ಸಂಪ್ರದಾಯವಾದಿಯಾಗಿದ್ದು, ಜಾತಿಯತೆಯಲ್ಲಿ ನಂಬಿಕೆ ಹೊಂದಿದ್ದಳು. ಮಹಾತ್ಮ ಗಾಂಧೀಜಿ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಬ್ರಾಹ್ಮಣರು, ಹೊಲೆಯರನ್ನು ಸಮಾನರಾಗಿ ಕಾಣುವುದನ್ನು ಖಂಡಿಸುತ್ತಾಳೆ. 'ನಿನ್ನ ಗಾಂಧಿ, ಬ್ರಾಹ್ಮಣರನ್ನು ಹೊಲೆಯರನ್ನು ಒಂದು ಮಾಡುವುದನ್ನು ಮಾತ್ರ ನಾನು ಒಪ್ಪುವುದಿಲ್ಲ' ಎಂದು ರಾಧಾಕೃಷ್ಣನಿಗೆ ಹೇಳುತ್ತಾಳೆ. "ಧಾರ್ಮಿಕ ಹಿನ್ನೆಲೆಯಲ್ಲಿ ಮಾನವರು ವಾಸ್ತವ ಪ್ರಪಂಚವನ್ನು ಒಂದು ರೀತಿಯಲ್ಲಿ ತಮಗೆ ಪರಕೀಯವಾದ ಭ್ರಮಾತ್ಮಕ ವಸ್ತುವನ್ನಾಗಿ ಪರಿಗಣಿಸುತ್ತಾರೆ" ಎಂಬ ವೀರಭದ್ರಪ್ಪನವರ ಹೇಳಿಕೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. (೨೦೦೧-೬೩)

ಈ ಕಾದಂಬರಿಯು ಅಂದಿನ ಜನಜೀವನದ ಆಚಾರ ವಿಚಾರಗಳನ್ನು ಒಳಗೊಂಡಿದೆ. ಜಾತಿಯತೆಯ ಕಟ್ಟುನಿಟ್ಟಿನಲ್ಲಿ ಬ್ರಾಹ್ಮಣ ವರ್ಗದವರು ಹೇಗೆ ಜೀವಿಸುತ್ತಿದ್ದರು ಎಂಬುದನ್ನು ಶೇಷಮ್ಮಳ ಪಾತ್ರದ ಮೂಲಕ ತಿಳಿದುಕೊಳ್ಳಬಹುದು. ಈ ಪಾತ್ರದಿಂದ ಕಾದಂಬರಿಕಾರರು ಸಮಾಜದಲ್ಲಿರುವ ಜಾತೀಯತೆ, ಅಸಮಾನತೆಯನ್ನು ಕುರಿತು ನಿರೂಪಿಸಿದ್ದಾರೆ. ಅಂತೆಯೇ ಸ್ವಾಮಿ ವಿವೇಕಾನಂದರು "ಹಿಂದೂ ಧರ್ಮದಂತೆ ಮಾನವನನ್ನು ದೈವತ್ವದ ಎತ್ತರಕ್ಕೆ ಏರಿಸಿದ ಧರ್ಮ ಇನ್ನೊಂದಿಲ್ಲ; ಹಾಗೆಯೇ ಸಹಮಾನವರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಂಡ ಧರ್ಮ ಮತ್ತೊಂದಿಲ್ಲ" ಎಂದು ಹೇಳಿರುವುದು ಹಿಂದೂ ಧರ್ಮದ ವಾಸ್ತವಿಕ ಆಚಾರ ವಿಚಾರಗಳನ್ನೂ ಕುರಿತು ಸ್ಪಷ್ಟಪಡಿಸುತ್ತದೆ. (ಚಿದಾನಂದಗೌಡ ಕೆ. ನವ್ಹೆಂಬರ್ ೯, ೨೦೦೮)

"ಮನುಷ್ಯ ತನ್ನ ಮನುಷ್ಯತ್ವವನ್ನು ಉನ್ನತ ಮಟ್ಟಕ್ಕೇರಿಸಿಕೊಳ್ಳಲು ಸ್ವಪ್ರಯತ್ನದಿಂದ ಮಾತ್ರ ಸಾಧ್ಯವೇ ಹೊರತು ಅನುಗ್ರಹದಿಂದಲ್ಲ" ಎಂಬ ಮಾನವತಾವಾದವು ಕಾದಂಬರಿಗಳ ಆಶಯವಾಗಿದೆ. ಧರ್ಮದ ಸ್ವರೂಪದಲ್ಲಿ ದೈವದ ನಂಬಿಕೆ ಪ್ರಬಲವಾದುದು. ಅದನ್ನು ಮಾನವೀಯ ದೃಷ್ಟಿಯಿಂದ ಪ್ರಕಟಿಸಿರುವುದು ಸ್ಪಷ್ಟವಾಗುತ್ತದೆ. ಸಂಪ್ರದಾಯ, ಧರ್ಮ, ಆಚಾರಗಳು ಹೆಜ್ಜೆ ಹೆಜ್ಜೆಗೂ ಹೆಣ್ಣಿನ ವ್ಯಕ್ತಿತ್ವಕ್ಕೆ ಕಾವಲಾಗಿವೆ ಎಂಬುದು 'ಕನ್ಯಾಬಲಿ' ಕಾದಂಬರಿಯ ಆಶಯವಾಗಿದೆ. ಬಾಲವಿಧವೆಯಾದ ಮಾಲತಿಯು ಪ್ರಫುಲ್ಲನನ್ನು ಪ್ರೀತಿಸಿ, ಮದುವೆಯಾಗಲು ಬಯಸುತ್ತಾಳೆ. ಆದರೆ ಸಾಂಪ್ರದಾಯಿಕ ಸಮಾಜದ ರೀತಿ-ನೀತಿಗಳು, ಧಾರ್ಮಿಕ ಚೌಕಟ್ಟು ಅವಳ ಮರುಮದುವೆಗೆ ಸಮ್ಮತಿಸುವುದಿಲ್ಲ. "ಹಸಿದ ಹೊಟ್ಟೆಗೆ ಒಂದು ತುತ್ತು ಅನ್ನವನ್ನು ಕೊಡಲಾರದ, ವಿಧವೆಯ ಕಣ್ಣೀರನ್ನು ಒರೆಸಲಾರದ ದೇವರಲ್ಲಾಗಲಿ, ಧರ್ಮದಲ್ಲಾಗಲಿ ನನಗೆ ನಂಬಿಕೆಯಿಲ್ಲ" ಎಂದು ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದ ಮೌಢ್ಯವನ್ನು ಖಂಡಿಸಿದ್ದಾರೆ. ಮಾಲತಿಯು ಹಿಂದೂ ಧರ್ಮದ ಅನಿಷ್ಟ ಆಚಾರ ವಿಚಾರಗಳಿಂದ ಕಂಗಾಲಾಗಿ ದುಃಖಿಸುತ್ತಾಳೆ. ಸಾಂಪ್ರದಾಯಿಕ ಆಚಾರ, ವಿಚಾರಗಳ ವಿರುದ್ಧ ಪ್ರತಿರೋಧ ವ್ಯಕ್ತಪಡಿಸುತ್ತಾಳೆಯಾದರೂ ಯಶಸ್ವಿಯಾಗುವುದಿಲ್ಲ. "ಅಸ್ತಿತ್ವ ಉಳಿಸಿಕೊಂಡರೆ ಸದಾ ಸಂಘರ್ಷ ಎದುರಿಸಬೇಕಾಗುತ್ತದೆ. ರಾಜಿ ಮಾಡಿಕೊಂಡರೆ ಬದುಕಿಕೊಳ್ಳಲು ಸಾಧ್ಯ" ಎಂದು ಸಬಿಹಾ ಭೂಮಿಗೌಡ ಅವರು ಸಿ.ಕೆ. ಮಹೀಂದ್ರ ಅವರ ಸಂದರ್ಶನವೊಂದರಲ್ಲಿ (ನವ್ಹೆಂಬಲ್ ೧, ೨೦೦೮) ಹೇಳಿರುವುದನ್ನು

ಇಲ್ಲಿ ನೆನಪಿಸಿಕೊಳ್ಳಬಹುದು. ಇರುವ ವ್ಯವಸ್ಥೆಯನ್ನೇ ಒಪ್ಪಿಕೊಂಡು, ಒಗ್ಗಿಕೊಂಡು ಹೋಗುವುದು ಅಸಮಾನತೆಯ ನಿರಂತರತೆಗೆ ಕಾರಣವಾಗುತ್ತದೆ. ಕಾದಂಬರಿಯಲ್ಲಿ ಮಾಲತಿಯ ಪಾತ್ರದಿಂದ ಇದನ್ನು ಸ್ಪಷ್ಟಪಡಿಸಲಾಗಿದೆ. ಮಾಲತಿಯು ಮೌಢ್ಯತೆಯ ವಿರುದ್ಧ ಪ್ರತಿರೋಧ ವ್ಯಕ್ತಪಡಿಸುತ್ತಾಳೆಯಾದರೂ ಯಶಸ್ವಿಯಾಗದಿರುವುದು ಅಂದಿನ ಸ್ಥಿತಿಗತಿಯನ್ನು ಬಿಂಬಿಸುತ್ತದೆ.

ಮತಾಂತರ ಕುರಿತು ಇಂದು ಹಲವಾರು ಚರ್ಚೆ, ಸಂವಾದಗಳು ನಡೆಯುತ್ತಲಿವೆ. ಇಂಥಹ ಪ್ರಸಂಗವೊಂದನ್ನು 'ಚೋಮನ ದುಡಿ' ಕಾದಂಬರಿಯು ಒಳಗೊಂಡಿದೆ. ಧಾರ್ಮಿಕ ಸ್ವಾತಂತ್ರ್ಯ ಎಲ್ಲರ ಮೂಲಭೂತ ಹಕ್ಕು. ಧರ್ಮದ ಉದ್ದೇಶವು ಜೀವನದ ಅರ್ಥ, ಮೌಲ್ಯ ಮತ್ತು ಸತ್ಯಗಳನ್ನು ಅರಸುವುದರಲ್ಲಿದೆ. ಆದ್ದರಿಂದ ತಮ್ಮ ಬದುಕಿಗೆ ಆಧಾರವಾಗುವಂತಹ ತಮ್ಮ ಮಾನಸಿಕ ನಿಲುವಿಗೆ ಹೊಂದಿಕೊಳ್ಳುವಂತಹ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಬೆಳ್ಳಿಯು ಮನ್ವೇಲನೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿದ್ದು ಅವನೊಂದಿಗೆ ಮದುವೆಯಾಗುವ ಬಯಕೆಯನ್ನು ಹೊಂದಿರುತ್ತಾಳೆ. ಅದಕ್ಕಾಗಿ ಕ್ರೈಸ್ತಧರ್ಮವನ್ನು ಸೇರಲು ತವಕಿಸುತ್ತಾಳೆ. ಆದರೆ ಅದು ಸಾಧ್ಯವಾಗುವುದಿಲ್ಲ. ಭಾರತದಂತಹ ಒಂದು ರಾಷ್ಟ್ರ ಯುಗಯುಗಾಂತರಗಳಿಂದ ಕಾದುಕೊಂಡು ಬಂದಿರುವ ವಿಶಿಷ್ಟ ಸಂಸ್ಕೃತಿಯೊಂದು ಮತಾಂತರದಿಂದಾಗಿ ಅಳಿದು ಹೋಗುವ ಅಪಾಯವಿದೆ ಎಂಬ ಸಾಂಪ್ರದಾಯದಿಂದ ಚೋಮನ ಮತಾಂತರ ಪ್ರಕ್ರಿಯೆ ಮೌಢ್ಯದಿಂದ ವಿಫಲವಾಗುತ್ತದೆ. ಬೆಳ್ಳಿ ಮತ್ತು ಚೋಮ ಇಬ್ಬರೂ ಸ್ವ ಇಚ್ಛೆಯಿಂದ ಮತಾಂತರ ಹೊಂದಲು ಬಯಸುತ್ತಾರಾದರೂ ಕಾದಂಬರಿಯಲ್ಲಿ ಅದು ಈಡೇರುವುದಿಲ್ಲ. "ಮತಾಂತರ ಒಂದು ರಾಷ್ಟ್ರ ದ್ರೋಹ" ಎಂಬ ಮಾಸ್ತಿಯವರ ಹೇಳಿಕೆಯನ್ನು ಸುಮತೀಂದ್ರ ನಾಡಿಗರವರು (ನವ್ಹೆಂಬರ್ ೮, ೨೦೦೮) ಉಲ್ಲೇಖಿಸಿದ್ದಾರೆ. ಅದು ಇಲ್ಲಿ ಉಲ್ಲೇಖನೀಯ.

'ಚೋಮನದುಡಿ' (೧೯೩೩) ಕಾದಂಬರಿಯು ಪ್ರಕಟವಾದ ಸಮಯದಲ್ಲಿ ಭಾರತವು ಆಂಗ್ಲರ ದಾಸ್ಯದಲ್ಲಿತ್ತು. ಜಾತಿಯತೆ ತುಂಬ ಕಟ್ಟುನಿಟ್ಟಾಗಿತ್ತು. ಅಂಥಹ ಸಮಯದಲ್ಲಿ 'ಮತಾಂತರ' ಹೊಂದುವುದು ತುಂಬ ಕಷ್ಟಕರವಾಗಿತ್ತು. ಕಾದಂಬರಿಯಲ್ಲಿ ಅಂದಿನ ಪ್ರಸ್ತುತ ಸಮಾಜದ ಚಿತ್ರಣವಿರುವುದು ಸ್ಪಷ್ಟವಾಗುತ್ತದೆ.

'ಧಾರ್ಮಿಕ ಸ್ವಾತಂತ್ರ್ಯ ಹಕ್ಕು' ಭಾರತದ ಸಂವಿಧಾನದಿಂದ ಎಲ್ಲ ಪ್ರಜೆಗಳಿಗೂ ದೊರಕಿದೆ. ಸ್ವಇಚ್ಛೆಯಿಂದ ಯಾವುದೇ ಧರ್ಮವನ್ನು ಸ್ವೀಕರಿಸಬಹುದು. ಆದರೆ ಆಸೆ ಆಮಿಷಗಳಿಗೆ ಬಲಿಯಾಗಿ, ಇತರರ ಮನೋಇಚ್ಛೆಯಂತೆ ಮತಾಂತರ ಹೊಂದುವುದು ಖಂಡನೀಯವಾಗಿದೆ. ಇದನ್ನು 'ಕುಡಿಯರ ಕೂಸು' ಕಾದಂಬರಿಯು ಸ್ಪಷ್ಟಪಡಿಸುತ್ತದೆ. ವಲ್ಲಿ ಬ್ರಗಾಂಜನು ಗಿಡ್ಡಿಯ ರೂಪಕ್ಕೆ ಮನಸೋಲುತ್ತಾನೆ. ಅವಳನ್ನು ಕೆಲಸದ ನಿಮಿತ್ಯವಾಗಿ ಕಾರ್ಕಳಕ್ಕೆ ಕರೆದುಕೊಂಡು ಹೋಗಿ ಐಷಾರಾಮಿ ಜೀವನದ ಆಸೆ ಆಮಿಷಗಳಿಗೆ ಬಲಿಯಾಗುವಂತೆ ಮಾಡುತ್ತಾನೆ. ಗಿಡ್ಡಿಯೂ ಸಹ ಯೌವ್ವನಕ್ಕನುಗುಣವಾಗಿ ವಲ್ಲಿಬ್ರಗಾಂಜನ ಮೋಹಕ್ಕೆ ಬಲಿಯಾಗಿ ಕ್ರೈಸ್ತ ಮತದ ಉಡುಪುಗಳನ್ನು ಧರಿಸುತ್ತ ಭ್ರಮಾಲೋಕದಲ್ಲಿ ತೇಲುತ್ತಿದ್ದಳು. ಬ್ರಗಾಂಜನು ಗಿಡ್ಡಿಯನ್ನು ಪಾದ್ರಿ ಮತಕ್ಕೆ ಮತಾಂತರಿಸಿ ಮದುವೆಯಾಗಲು ಬಯಸುತ್ತಾನೆ. "ಮತಾಂತರ ಕೇವಲ ಧಾರ್ಮಿಕ ಸಮಸ್ಯೆ ಮಾತ್ರವಲ್ಲ, ಸಾಮಾಜಿಕ ಘನತೆಯ ಪ್ರಶ್ನೆಯೂ ಹೌದು" ಎಂಬ ಎನ್.ಕೆ.

ಹನುಮಂತಯ್ಯನವರ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸಬಹುದು. (ಚಂದ್ರಶೇಖರ ಪಾಟೀಲ, ನವ್ಹೆಂಬರ್ ೬, ೨೦೦೮) ಗಿಡ್ಡಿಯ ಸಂಬಂಧಿಕರು ಹಾಗೂ ಮಲೆಕುಡಿಯ ಹಿರಿಯರು ಕಾರ್ಕಳಕ್ಕೆ ಹೋಗಿ ಅವಳ ಮನವೊಲಿಸಿ ಹಿರಿಮೆಲೆಗೆ ಕರೆತರುತ್ತಾರೆ. ಅವಳ ಮತಾಂತರವನ್ನು ತಪ್ಪಿಸುತ್ತಾರೆ. ಮಲೆಕುಡಿಯ ಸಂಸ್ಕೃತಿಯನ್ನು ಕಾಪಾಡುತ್ತಾರೆ.

'ಚೋಮನದುಡಿ' ಕಾದಂಬರಿಯಂತೆ 'ಕುಡಿಯರ ಕೂಸು' ಕಾದಂಬರಿಯು ಮತಾಂತರವನ್ನು ಸ್ಪಷ್ಟವಾಗಿ ನಿರಾಕರಿಸುತ್ತದೆ.

ಅನುಭವಗಳನ್ನೇ ಬದುಕಿನ ರೀತಿಗೆ ಸೂತ್ರವನ್ನಾಗಿ ಮಾಡಿಕೊಂಡು, ಇತರರಿಗೂ ಆ ಪಕ್ವತೆಯ ರುಚಿಯನ್ನು ಉಣಿಸಿದ ಕಾವೇರಮ್ಮನ ಪಾತ್ರ "ಶನೀಶ್ವರನ ನೆರಳಲ್ಲಿ" ಕಾದಂಬರಿಯಲ್ಲಿದೆ. ದೇವರ ಅಸ್ತಿತ್ವದಲ್ಲಿ ನಂಬಿಕೆ ಹೊಂದಿದ ಕಾವೇರಮ್ಮ ಧಾನ, ಧರ್ಮಗಳಲ್ಲಿಯೂ ನಂಬಿಕೆ ಹೊಂದಿದ್ದಳು. ಮಾನವರೆಲ್ಲರೂ ದೇವರ ಮಕ್ಕಳು, ಎಲ್ಲರೂ ಸಮಾನರು, ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಂಬ ಪ್ರಗತಿಪರ ವಿಚಾರಗಳನ್ನು ಹೊಂದಿದ್ದಳು. ಇದರಿಂದಾಗಿಯೇ ಜಾತಿಯತೆಯನ್ನು ಎಂದಿಗೂ ಯಾವತ್ತಿಗೂ ಆಚರಿಸಿದವಳಲ್ಲ.

'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಧರ್ಮ ಜೀವನಪರವಾಗಿರಬೇಕು ಎಂಬ ಪ್ರಗತಿಪರ ನಿಲುವನ್ನು ತಿಳಿಸಲಾಗಿದೆ. ಧರ್ಮದ ಹೆಸರಿನಲ್ಲಿ ಸಾಂಪ್ರದಾಯಿಕ ಮೌಢ್ಯಗಳಿಗೆ ಬಲಿಯಾಗದೆ, ಇರುವಷ್ಟು ದಿವಸ ನಮಗೂ ಹಿತವಾಗಿ, ನಾಲ್ಕು ಜನರಿಗೂ ಹಿತವಾಗುವ ಹಾಗೆ ಬಾಳಬೇಕು ಎಂಬ ವಿವೇಕವನ್ನು ಮೂಕಜ್ಜಿಯು ಹೊಂದಿದ್ದಳು. ಪರರಿಗೆ ಸುಖ ಕೊಡಲು ಸಾಧ್ಯವಾಗದಿದ್ದರೆ, ದುಃಖ ಕೊಡದೆ ಬಾಳಬೇಕು ಎಂಬುದು ಕಾದಂಬರಿಯ ಆಶಯವಾಗಿದೆ.

ದೇವರು ಜಗತ್ತಿನ ಸೃಷ್ಟಿಮೂಲ. ಜಗತ್ತಿನ ಎಲ್ಲ ಮಕ್ಕಳನ್ನು ತನ್ನ ಮಕ್ಕಳೆಂದು ತಿಳಿಯುತ್ತಾನೆ ಎಂಬುದು ಅವಳ ನಂಬಿಕೆಯಾಗಿತ್ತು. ಜೀವನದಲ್ಲಿ ಆಸೆ ಕಳೆದುಕೊಳ್ಳುವುದು ಮತ್ತು ಮೌನ ಧರಿಸುವುದು ತಪಸ್ಸಿನ ಲಕ್ಷಣಗಳು. ಅಂಥ ಒಂದು ತಪಸ್ಸನ್ನು ಮೂಕಜ್ಜಿ ತನಗರಿವಿಲ್ಲದಂತೆಯೇ ಕೈಗೊಂಡಿದ್ದಳು. ದಿನನಿತ್ಯ 'ಹಿಂಡುಗಾನಮ್ಮ'ಳ ಧ್ಯಾನ ಮಾಡುತ್ತಿದ್ದಳು. 'ಅಮ್ಮ'ನ ಕಲ್ಪನೆಯಲ್ಲಿ ದೇವರನ್ನು ರೂಪಿಸಿಕೊಂಡರೆ ತಪ್ಪಿಲ್ಲ. ಏಕೆಂದರೆ ಅಮ್ಮನಿಗಿಂತ ದೊಡ್ಡ ವಸ್ತು ಬೇರೊಂದಿಲ್ಲ. ಅಂತೆಯೇ 'ತಾಯಿಗಿಂತ ದೇವರಿಲ್ಲ' ಎಂಬ ನುಡಿಮುತ್ತು ಪ್ರಚಲಿತದಲ್ಲಿದೆ. ಹಾಗಾಗಿಯೇ ಪ್ರೀತಿಗಾಗಿ, ನೋವಿನ ಪರಿಹಾರಕ್ಕಾಗಿ ಮೊದಲಿಗೆ ಹೋಗುವುದು ಅಮ್ಮನ ಹತ್ತಿರವೇ! ಎಂಬುದು ಮೂಕಜ್ಜಿಯ ನಂಬಿಕೆಯಾಗಿತ್ತು. 'ತಾಯಿಯೇ ದೇವರು' ಎಂಬುದನ್ನು ಕಾದಂಬರಿಕಾರರು ಮೂಕಜ್ಜಿಯ ಪಾತ್ರದ ಮುಖಾಂತರ ತಿಳಿಸಿದ್ದಾರೆ. ದೇವರು ಮತ್ತು ಸೃಷ್ಟಿಯನ್ನು ಹಾಗೂ ತಾಯಿ ಮತ್ತು ಮಕ್ಕಳ ಸಂಬಂಧವಾಗಿ ದೇವರ ಅಸ್ತಿತ್ವವನ್ನು ಕಾದಂಬರಿಯಲ್ಲಿ ಪ್ರಕಟಿಸಲಾಗಿದೆ.

ಇಂದ್ರಿಯಗಳಿಗೆ ಮತ್ತು ಬುದ್ಧಿ ತರ್ಕಗಳಿಗೆ ಅತೀತವಾದ ಮಾರ್ಗದಲ್ಲಿ ಅನಂತತೆಯ ಅನುಭವವನ್ನು ತಂದುಕೊಡುವ ಶಕ್ತಿಯೆ 'ಧರ್ಮ' ಎಂಬ ವೈಚಾರಿಕ ನಿಲುವು 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿದೆ.

ಕಾರಂತರ ಕಾದಂಬರಿಗಳಲ್ಲಿನ ಸ್ತ್ರೀಯರು ಹಣೆಬರಹ, ವಿಧಿಯಲ್ಲಿ ಬಲವಾದ ನಂಬಿಕೆಯನ್ನು ಹೊಂದಿದ್ದರು. ಇದಕ್ಕೆ "ಮೊಗ ಪಡೆದ ಮನ" ಕಾದಂಬರಿಯ ಸ್ತ್ರೀ ಪಾತ್ರಗಳು ಹೊರತಾಗಿಲ್ಲ. ವ್ಯಾಸ ಮತ್ತು ವಿಮಲೆ ಪರಸ್ಪರ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು. ಆದರೆ ಅಭಿವ್ಯಕ್ತಪಡಿಸಿರಲಿಲ್ಲ. ಇದರಿಂದ ವಿಮಲೆಯ ಮದುವೆ ಬೇರೆಯವರೊಂದಿಗೆ ನಡೆಯುತ್ತದೆ. ಪರಸ್ಪರ ಒಬ್ಬರನ್ನೊಬ್ಬರು ಅಗಲಿದ ಪ್ರೇಮಿಗಳು ದುಃಖಿಸುತ್ತಾರೆ. ಇದು ನನ್ನ ಹಣೆಬರಹ. ನೀನು ನಿನ್ನ ಬದುಕನ್ನು ಹಾಳು ಮಾಡಿಕೊಳ್ಳಬೇಡ ಎಂದು ವಿಮಲೆಯು ವ್ಯಾಸನಿಗೆ ಸಾಂತ್ವನ ಹೇಳುತ್ತಾಳೆ. ವಿದ್ಯಾವಂತೆಯಾದ ವಿಮಲೆಯು ತನ್ನ ತಪ್ಪನ್ನು 'ಹಣೆಬರಹ' ಎಂದು ಮೂದಲಿಸುವುದು ಅವಳ ಅಸಹಾಯಕತೆಯನ್ನು ಸೂಚಿಸುತ್ತದೆ. "ಹಣೆಯಲ್ಲಿ ಬರೆದದ್ದಾಯಿತೆಂದು ಆಗುವುದನ್ನೆಲ್ಲ ಸುಮ್ಮನೆ ಒಪ್ಪಿಕೊಳ್ಳುವ ದರಿದ್ರತೆಯನ್ನು ದೇವರು ಮೆಚ್ಚಿಕೊಳ್ಳುವುದಿಲ್ಲ" ಎಂಬ ಗಾಂಧೀಜಿಯವರ ಹೇಳಿಕೆಯು (ಶಿವರಾಜಪ್ಪ (ಸಂ) ೨೦೦೬:೩೮) ಸತ್ಯವಾಗಿದೆ.

ವಿಮಲೆಯು ಮದುವೆಯಾದ ಕೆಲ ದಿನಗಳಲ್ಲಿಯೇ ಗಂಡನನ್ನು ಕಳೆದುಕೊಳ್ಳುತ್ತಾಳೆ. ವಿಮಲೆಯನ್ನು ಪ್ರೀತಿಸುತ್ತಿದ್ದ ವ್ಯಾಸನು ಅವಳು 'ವಿಧವೆ'ಯಾಗಿದ್ದರೂ ಮದುವೆಯಾಗಲು ಬಯಸುತ್ತಾನೆ. ಇದರಿಂದ ವಿಮಲೆಯ ತಾಯಿ ರಾಜಮ್ಮಗೆ ಧರ್ಮಸಂಕಟವಾಗುತ್ತದೆ. 'ನಮ್ಮ ದರಿದ್ರ ಜಾತಿಯಲ್ಲಿ ವಿಧವೆಯರಿಗೆ ಮರು ಮದುವೆಯ ಯೋಗ ಹೆಣ್ಣು ಮಕ್ಕಳಿಗಿಲ್ಲವಲ್ಲ' ಎಂದು ಸಂಕಟ ಪಡುತ್ತಾಳೆ. ಇದರಿಂದ ಸಮಕಾಲೀನ ಐತಿಹಾಸಿಕ ಪ್ರಪಂಚದಲ್ಲಿ ಜಾತೀಯತೆ ಇರುವುದು ಸ್ಪಷ್ಟವಾಗುತ್ತದೆ. ಆದರೆ ವ್ಯಾಸನ ತಾಯಿ ನಂದಿನಿಯು ತನ್ನ ಮಗ ವಿಧವೆಯನ್ನು ಮದುವೆಯಾಗಿರುವುದಕ್ಕೆ ಹೆಮ್ಮೆ ಪಡುತ್ತಾಳೆ. 'ಧರ್ಮವು ಜನರನ್ನು ಒಟ್ಟುಗೂಡಿಸಬೇಕು' ಎಂಬುದನ್ನು ವ್ಯಾಸನ ತಾಯಿಯ ಪಾತ್ರದ ಮೂಲಕ ಪ್ರಕಟಿಸಲಾಗಿದೆ. ಧರ್ಮವು ವ್ಯಕ್ತಿಯನ್ನು ಮತ್ತು ಸಮಾಜವನ್ನು ಉತ್ತಮವಾದ ಮಾರ್ಗದಲ್ಲಿ ಕೊಂಡೊಯ್ಯಬೇಕು ಎನ್ನುವ ಪ್ರಗತಿಪರ ಚಿಂತನೆಯನ್ನು ಕಾದಂಬರಿಯು ಒಳಗೊಂಡಿದೆ.

ಧಾರ್ಮಿಕತೆ ಎನ್ನುವುದು ಮುಗ್ಧತೆಯ ಹಾಗೂ ನಿರ್ವಂಚನೆಯ ಸಂಕೇತವಾಗಿದೆ. ಶ್ರದ್ಧೆಯಿಂದ ಜೀವನವನ್ನು ಪ್ರೀತಿಸುತ್ತ ಬದುಕುವುದು ಧರ್ಮವಾಗಿದೆ ಎಂಬುದನ್ನು "ಚಿಗುರಿದ ಕನಸು" ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ. ಶಂಕರನು ದೆಹಲಿಯಲ್ಲಿ ಹುಟ್ಟಿ ಬೆಳೆದವನು. 'ಬಂಗಾಡಿ'ಗೂ ತಮ್ಮ ಕುಟುಂಬಕ್ಕೂ ನಂಟುತನವಿದೆ ಎಂಬುದನ್ನು ತಂದೆಯಿಂದ ತಿಳಿದುಕೊಳ್ಳುತ್ತಾನೆ. ಇದರಿಂದ ಕುತೂಹಲಭರಿತನಾಗಿ ಶಂಕರನು ತನ್ನ ಮೂಲವನ್ನು ಅರಸುತ್ತ ಬಂಗಾಡಿಗೆ ಹೋಗುತ್ತಾನೆ. ಅಲ್ಲಿಯ ಹಿರಿಯ ಜೀವಿ 'ಅಜ್ಜಿ'ಗೆ ಭೇಟಿಯಾಗಿ ತನ್ನ ಮೂಲವನ್ನು ತಿಳಿಯಲು ಪ್ರಯತ್ನಿಸುತ್ತಾನೆ. ಶಂಕರನ ಮುಖ ತನ್ನ ಅಣ್ಣ ದತ್ತಮೂರ್ತಿಯ ಮುಖವನ್ನು ಹೋಲುತ್ತದೆ ಎಂಬುದರಿಂದ ಅಜ್ಜಿಯು ತುಂಬ ಹರ್ಷಿತಳಾಗುತ್ತಾಳೆ. ಶಂಕರನು 'ದತ್ತುವಿನ ಮೊಮ್ಮಗ' ಎಂದು ತಿಳಿದ ಮೇಲಂತೂ ಅವಳಿಗೆ ಪೂರ್ಣಾನಂದದ ಸಾಕ್ಷಾತ್ಕಾರವಾಗುತ್ತದೆ.

ಸಾದಾ, ಸರಳ ಸಜ್ಜನಿಕೆಯ ಮೂರ್ತಿಯಾದ ಅಜ್ಜಿಯು ದೇವರ ಜಪ ತಪಗಳನ್ನು ಮಾಡುತ್ತಿದ್ದಳು. ತನ್ನ ನಿರಪೇಕ್ಷ ವ್ಯಕ್ತಿತ್ವದಿಂದ ಎಲ್ಲರಿಗೂ ಬೇಕಾಗಿದ್ದಳು. ಹುಟ್ಟು-ಸಾವು ದೈವ ನಿಯಮಿತವಾದದ್ದು. ದೈವೇಚ್ಛೆಯಂತೆ ನಮ್ಮ ಬದುಕು ಸಾಗುವಂತದ್ದು ಎಂದು ನಂಬಿದ್ದಳು. ಅಂತೆಯೇ ಸಾವಿಗೆ ಎಂದೂ ಚಿಂತಿಸುತ್ತಿರಲಿಲ್ಲ. ಇಚ್ಛಾ ಮರಣೆಯಂತೆ ತನ್ನ ಸಾವನ್ನು ತಾನು ಅರಿತವಳಂತೆ ಶಂಕರನಿಗೆ "ಮಗು ಇನ್ನೂ ಮಾತನಾಡಿಸಬೇಡ. ಯಾರೋ ಕರೆಯುವ ಹಾಗೆ ಕಾಣುತ್ತದೆ. ಆಯಾಸವಾಗುತ್ತಿದೆ. ಒಂದು ಗಳಿಗೆ ದೇವರ ಸ್ಮರಣೆ ಮಾಡುತ್ತ ಮಲಗಿಕೊಳ್ಳುತ್ತೇನೆ. ರಂಗನ ಮನೆಗೆ ಹೋಗಿ ಬಾ, ಅಲ್ಲಿ ತರಿಸಿಟ್ಟ ಗಂಗಾಜಲವಿದೆ. ಒಂದಿಷ್ಟು ತಂದು ಬಾಯಿಗೆ ಹಾಕು" (೨೦೦೩ ಸಂಪುಟ ೮ ಕಾ. ೭, ೩೫೭-೩೫೮) ಎಂದು ಮಾತನ್ನು ಮುಗಿಸಿದಳು. ಶಂಕರನು ಗಂಗಾಜಲವನ್ನು ತೆಗೆದುಕೊಂಡು ಅವಸರದಿಂದ ಮನೆಯನ್ನು ಸೇರಿದ. ನಡುಗುವ ಅವಳ ತುಟಿಗಳ ಎಡೆಯಲ್ಲಿ ಪಾತ್ರೆಯ ಮುಚ್ಚಳ ತೆಗೆದು ತೀರ್ಥವನ್ನು ಎರೆಯುತ್ತಲೇ ಶಂಕರನನ್ನು ನೋಡುತ್ತ ಕಣ್ಣು ಬಾಡಿಸಿದಳು.

ಕಾದಂಬರಿಯಲ್ಲಿ ಅಜ್ಜಿಯ ಪಾತ್ರದಿಂದ ಹಿಂದೂ ಧರ್ಮದ ಸಂಸ್ಕೃತಿ, ಆಚಾರ ವಿಚಾರಗಳನ್ನು ನಿರೂಪಿಸಲಾಗಿದೆ. ಹುಟ್ಟು-ಸಾವು ದೈವ ನಿಯಮಿತ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. "ವ್ಯಕ್ತಿ ಸಮೂಹ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ಉತ್ತಮಿಕೆಯ ಅಂಶಗಳನ್ನು ಸಂಸ್ಕೃತಿ ಎನ್ನಲಾಗುತ್ತದೆ" ಎಂಬ ಟಿ.ಎಸ್.ಎಲಿಯಟ್ ಅವರ ಹೇಳಿಕೆಯನ್ನು ಅಜ್ಜಿಯ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಗುರುತಿಸಬಹುದು. ಸಂಸ್ಕೃತಿಯು ಬದುಕಿನ ಬಹುಶ್ರೇಷ್ಠ ಮೌಲ್ಯ ಎಂಬುದನ್ನು ಪಾತ್ರಗಳ ಮುಖಾಂತರ ನಿರೂಪಿಸಿದ್ದಾರೆ. ಕಾದಂಬರಿಕಾರರು 'ದೇವರ' ಅಸ್ತಿತ್ವದ ಬಗೆಗೆ ಹೆಚ್ಚು ನಂಬಿದವರಲ್ಲ ಎಂಬುದು ಅವರ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಿಂದ ತಿಳಿಯುತ್ತದೆ. 'ಅವರವರ ಜೀವನದ ತಿಳಿವು ಅವರಿಂದಲೇ ಬೆಳೆಯತಕ್ಕದ್ದು' (೨೦೦೪;೩೨) ಎಂದು ನಂಬಿದ ಕಾದಂಬರಿಕಾರರು ಇನ್ನಿತರರ ನಂಬಿಕೆಗಳಿಗೆ ಸ್ಪಂದಿಸುತ್ತಿದ್ದರು. ಹಾಗೆ ಬೇರೆಯವರ ನಂಬಿಕೆಯನ್ನು ಪ್ರಶ್ನಿಸದೆ ಗೌರವಿಸುತ್ತಿದ್ದರು ಎಂಬುದು 'ಚಿಗುರಿದ ಕನಸು' ಕಾದಂಬರಿಯಿಂದ ದೃಢವಾಗುತ್ತದೆ.

ಅತ್ತೆ ಸೊಸೆಯರಲ್ಲಿ ಉಂಟಾಗುವ ಮನಃಸ್ತಾಪವು ಪುರುಷನನ್ನು ಹೇಗೆ ಅಸಹಾಯಕನನ್ನಾಗಿ ಮಾಡುತ್ತದೆ ಎಂಬುದು 'ಒಡ ಹುಟ್ಟಿದವರು' ಕಾದಂಬರಿಯಿಂದ ಅರ್ಥೈಸಬಹುದು. ತಿಕ್ಕಾಟ ಹುಟ್ಟುವುದು ಮನುಷ್ಯನ ತಿಳುವಳಿಕೆಯ ಅಭಾವದಿಂದ. ವಾಸುವಿನ ತಾಯಿ ಮತ್ತು ಅವನ ಹೆಂಡತಿ ಶೇವಂತಿಯರಲ್ಲಿ ಹೊಂದಾಣಿಕೆಯ ಅಭಾವದಿಂದ ವೈಮನಸ್ಸು ಉಂಟಾಗುತ್ತದೆ. ವಾಸುದೇವನ ತಾಯಿ ಧಾರ್ಮಿಕ ಶ್ರದ್ಧೆಯುಳ್ಳವಳಾಗಿದ್ದಳು. ಮಡಿ ಮೈಲಿಗೆಯಲ್ಲಿ ನಂಬಿಕೆಯನ್ನು ಹೊಂದಿದ್ದಳು. ಆದರೆ ಶೇವಂತಿಯದು ಸ್ವಚ್ಛಂದ ವಿಚಾರ ಸರಣಿಯಾಗಿತ್ತು. ದೇವರಲ್ಲಿ ಹಾಗೂ ಹಿರಿಯರಲ್ಲಿ ನಂಬಿಕೆ, ವಿಧೇಯತೆ ಹೊಂದಿರಲಿಲ್ಲ. ತನ್ನ ಅತ್ತೆಯ ಆಚಾರ ವಿಚಾರಗಳಿಗೆ ಕಂಟಕವಾಗುತ್ತಿದ್ದಳು. ಅವಳು ಢಾಂಬಿಕ ವಿಚಾರಧಾರೆಯನ್ನು ಹೊಂದಿದ್ದು, ಹೊಂದಾಣಿಕೆಯ ಗುಣವನ್ನು ಹೊಂದಿರಲಿಲ್ಲ. ಮಡಿ ಮೈಲಿಗೆಯೆಂದರೆ ಅವಳಿಗೆ ಬೇಡವಾಗಿತ್ತು. ಇದರಿಂದಾಗಿಯೇ ಅತ್ತೆ ಸೊಸೆಯರ ಸಂಬಂಧ ಕ್ರಮೇಣವಾಗಿ ವಿರಸವಾಗುತ್ತದೆ.

ವಾಸುದೇವನ ತಾಯಿ ಮನನೊಂದು "ವಾಸು ಇಷ್ಟು ದೊಡ್ಡವನಾದರೂ ನಿನಗೆ ಬುದ್ಧಿಯೇ ಇಲ್ಲ. ನಿನಗೆ ಮಡಿ ಮೈಲಿಗೆ ಬೇಡವಾದರೂ ನನಗೆ ಬೇಕಲ್ಲ. ನಾನು ಕಣ್ಣು ಮುಚ್ಚುವವರೆಗೆ ನನ್ನನ್ನು ಒಂದಿಷ್ಟು ನಡೆಯಿಸಿಕೊಡು" (೨೦೦೩ ಸ. ೧೦, ಕಾ ೯, ೨೮೩) ಎಂದು ವಿನಯವಾಗಿ ಮಗನಿಗೆ ತನ್ನ ಮನದಾಳದ ಇಂಗಿತವನ್ನು ಹೇಳುತ್ತಾಳೆ.

'ಒಡಹುಟ್ಟಿದವರು', ಕಾದಂಬರಿಯಲ್ಲಿ ಸಾಂಪ್ರದಾಯಿಕತೆ ಹಾಗೂ ಆಧುನಿಕ ವಿಚಾರಧಾರೆಯ ಸಂಘರ್ಷವಿದೆ. ಹಿರಿಯರ ಧಾರ್ಮಿಕತೆ ಕಿರಿಯರಲ್ಲಿ ಜೀವನಶ್ರದ್ಧೆಯನ್ನು ಬೆಳೆಸಬೇಕು. ಇಬ್ಬರಲ್ಲಿಯೂ ಪರಸ್ಪರ ಹೊಂದಾಣಿಕೆಯ ಮನೋಭಾವವನ್ನು ಮೂಡಿಸಬೇಕು ಎಂಬ ಸಾಮಾಜಿಕ ಕಳಕಳಿಯನ್ನು ಕಾದಂಬರಿಯು ಒಳಗೊಂಡಿದೆ.

'ಒಡಹುಟ್ಟಿದವರು' ಕಾದಂಬರಿಯ ನಾಗಮ್ಮ ಮಡಿ ಮೈಲಿಗೆಯೆಂದು ದೇವರಲ್ಲಿ ನಂಬಿಕೆಯನ್ನು ಹೊಂದಿದ್ದಳು. ಆದರೆ ತನ್ನ ಸೊಸೆಯೊಂದಿಗೆ ಹೊಂದಾಣಿಕೆಯಾಗದೆ ಒಂಟಿಯಾಗುತ್ತಾಳೆ. ಆದರೆ 'ಸಮೀಕ್ಷೆ' ಕಾದಂಬರಿಯಲ್ಲಿ ಗಂಗಜ್ಜಿ ನಾಗಮ್ಮಳಿಗಿಂತ ಭಿನ್ನವಾಗಿದ್ದು, ಸಂಸಾರ ಸುಖಮಯವಾಗಿರುವಂತೆ ಮಾಡುತ್ತಾಳೆ. ಗಂಗಜ್ಜಿ ಧಾರ್ಮಿಕ ಜೀವಿ. ದೇವರಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದಳು. ನಮ್ಮ ಜೀವನದ ಸುಖ, ಶಾಂತಿಗೆ ದೇವರೇ ಮೂಲ ಕಾರಣ ಎಂದು ನಂಬಿದ್ದಳು. ತನ್ನ ಅಣ್ಣನ ಮಗಳಾದ ಶಾರದೆಯ ಮನೆಯಲ್ಲಿ ಮನೆಗೆ ಹಿರಿಯಳಾಗಿ, ಮಾರ್ಗದರ್ಶಕಿಯಾಗಿ ಜೀವನ ಸಾಗಿಸುತ್ತಾಳೆ. ಭಕ್ತಿಯಿಂದ ರಾಮೇಶ್ವರಕ್ಕೆ ಹೋಗಿ ತನ್ನ ಸೊಸೆ, ಅಳಿಯಂದಿರಿಗೆಲ್ಲರಿಗೂ ಒಳ್ಳೆಯದಾಗಲಿ ಎಂದು ಬೇಡಿಕೊಳ್ಳುತ್ತಾಳೆ. ಅವರ ಒಳಿತಿಗಾಗಿ ಜೀವನವನ್ನು ಮುಡುಪಾಗಿಟ್ಟಳು. ಕಾದಂಬರಿಯಲ್ಲಿ ಗಂಗಜ್ಜಿಯ ಪಾತ್ರದ ಮೂಲಕ ಹಿಂದೂ ಧರ್ಮದ ಆಚಾರ, ವಿಚಾರ, ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡುವುದು, ಹರಕೆ ಹೊರುವುದು ಮುಂತಾದ ವಿಷಯಗಳನ್ನು ಪ್ರಕಟಿಸಲಾಗಿದೆ.

ಶ್ರೀನಿವಾಸನು ತನ್ನ ಸ್ನೇಹಿತನ ಹೆಂಡತಿ ಕುಸುಮೆ ಮತ್ತು ಅವಳ ಮಗಳು ಸುಹಾಸಿನಿಯರನ್ನು ಮನೆಗೆ ಕರೆತರಲು ಹಿಂಜರಿಯುತ್ತಾನೆ. ಧಾರ್ಮಿಕ ಜೀವಿಯಾದ ಗಂಗಜ್ಜಿ ಸಂಪ್ರದಾಯದಲ್ಲಿ ನಂಬಿಕೆಯನ್ನು ಹೊಂದಿದ್ದು ಅನ್ಯಜಾತಿಯವರಾದ ಕುಸುಮೆ ಹಾಗೂ ಸುಹಾಸಿನಿಯರನ್ನು ಮನೆಗೆ ಸೇರಿಸಲು ಒಪ್ಪುವುದಿಲ್ಲವೆಂಬ ಆತಂಕ ಅವನಲ್ಲಿತ್ತು. ಆದರೆ ಗಂಗಜ್ಜಿಯ ನಿಲುವು ಸಕಾರಾತ್ಮಕವಾಗಿತ್ತು. ಗಂಗಜ್ಜಿಯು ಧಾರ್ಮಿಕತೆಯಲ್ಲಿ ನಂಬಿಕೆ ಹೊಂದಿದ್ದಳೇ ಹೊರತು ಮೌಢ್ಯವನ್ನು ಪಾಲಿಸುತ್ತಿರಲಿಲ್ಲ. ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳದೆ ಯಾವುದು ಸರಿ, ಯಾವುದು ತಪ್ಪು ಎಂದು ವಿವೇಚಿಸುವ ಬೌದ್ಧಿಕತೆಯನ್ನು ಹೊಂದಿದ್ದಳು. ಜಾತಿಯತೆಯನ್ನು ತೊರೆದು ಕುಸುಮೆ ಮತ್ತು ಅವಳ ಮಗಳು ಸುಹಾಸಿನಿಯನ್ನು ಸ್ವಾಗತಿಸುತ್ತಾಳೆ. "ಮನುಷ್ಯನ ಶಕ್ತಿಯನ್ನು ರೂಪಾಂತರಗೊಳಿಸಲು ಧರ್ಮವು ಒಂದು ಸಾಧನವಾಗಬೇಕು" ಎಂಬ ಸೂಕ್ತಿಯಂತೆ ಗಂಗಜ್ಜಿಯು ಸಂಸಾರವನ್ನು ಮುನ್ನಡೆಸುತ್ತಾಳೆ. ಧರ್ಮವೆಂದರೆ ಕೇವಲ ಸಾಮಾಜಿಕ ಕಟ್ಟುಪಾಡುಗಳ ವ್ಯವಸ್ಥೆಯಲ್ಲ, ಅದು ಮನುಕುಲದ ಒಳಿತಿಗಾಗಿ ರೂಪಿತವಾದ ಸಾಮಾಜಿಕ ವ್ಯವಸ್ಥೆಯಾಗಿದೆ. "ಸಮುದಾಯದ ಸಂದರ್ಭದಲ್ಲಿ ಮಾನವ ಸಂಬಂಧಗಳನ್ನು ಮತ್ತು

[illegible]

ಚಟುವಟಿಕೆಗಳನ್ನು ಧರ್ಮ ನಿಯಂತ್ರಿಸುತ್ತದೆ" ಎಂಬ ಯಳನಾಡು ಅಂಜನಪ್ಪ (೨೦೦೮:೧೭) ಅವರ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸಬಹುದು.

ಗಂಗಜ್ಜಿಯಂತೆ ನರಸಜ್ಜಿಯು ಧಾರ್ಮಿಕ ಜೀವಿಯಾಗಿದ್ದು, ದೈವಿಕ ಶಕ್ತಿಯಲ್ಲಿ ಅಪಾರ ನಂಬಿಕೆಯನ್ನು ಹೊಂದಿದ್ದಳು. ಗಂಗಜ್ಜಿಯ ವಿಚಾರಗಳು ಮನುಕುಲಕ್ಕೆ ಪೂರಕವಾಗಿದ್ದವು. ಆದರೆ ನರಸಜ್ಜಿಯ ವಿಚಾರಗಳು ಪ್ರಗತಿಪರವಾಗಿರದೆ, ಮೌಢ್ಯದಿಂದ ಕೂಡಿದ್ದವು. ಜಾತೀಯತೆಯನ್ನು ಆಚರಿಸುತ್ತಿದ್ದಳು. ತನ್ನ ಮಗ ವಾಸುದೇವ ಅನ್ಯಜಾತಿಯ ಸ್ತ್ರೀಯನ್ನು ಮದುವೆಯಾಗಿರುವುದು ಅವಳಿಗೆ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸುತ್ತದೆ. ಅವಳನ್ನು ಸೊಸೆಯೆಂದು ಸ್ವೀಕರಿಸಲಾಗದೆ, ಮಾನಸಿಕ ಗೊಂದಲದಿಂದ ಪರಿತಪಿಸುತ್ತಾಳೆ. ಕುಸುಮೆ ಮತ್ತು ಸುಹಾಸಿನಿಯರನ್ನು ತನ್ನ ಮನೆಯಲ್ಲಿ ಸೇರಿಸಿಕೊಳ್ಳಲಾಗದೆ, ವಾಸುದೇವನ ಸ್ನೇಹಿತ ಶ್ರೀನಿವಾಸನಲ್ಲಿ ಮೊರೆ ಹೋಗುತ್ತಾಳೆ. ಮುಂದೊಂದು ದಿನ ಸೊಸೆ ಕುಸುಮೆ ಆತ್ಮಹತ್ಯೆ ಮಾಡಿಕೊಂಡಾಗ ಪಶ್ಚತ್ತಾಪದಿಂದ ದುಃಖಿಸುತ್ತಾಳೆ. ನರಸಜ್ಜಿಯ ಪಶ್ಚತ್ತಾಪದ ಮೂಲಕ ಕಾದಂಬರಿಯಲ್ಲಿ ಧಾರ್ಮಿಕ ವಿಡಂಬನೆಯನ್ನು ಮಾಡಲಾಗಿದೆ.

'ದೃಷ್ಟಿಯಂತೆ ಸೃಷ್ಟಿ' ಎಂಬಂತೆ ಧಾರ್ಮಿಕತೆಯ ಆಚಾರ, ವಿಚಾರಗಳಲ್ಲಿ ವೈರುಧ್ಯವನ್ನು ಗುರುತಿಸಬಹುದು ಎಂಬುದನ್ನು ಗಂಗಜ್ಜಿ ಹಾಗೂ ನರಸಜ್ಜಿಯ ಪಾತ್ರಗಳ ಮೂಲಕ ಕಾದಂಬರಿಕಾರರು ಮುಂದಿಟ್ಟಿದ್ದಾರೆ. 'ಧರ್ಮ' ಅಮೂರ್ತವಾಗಿದ್ದು, ಚಿಂತನೆಯ ಮುಖಾಂತರ ಮೂರ್ತರೂಪ ಪಡೆದುಕೊಳ್ಳಲು ಸಾಧ್ಯ. ಆ ರೂಪದಲ್ಲಿ ವೈಚಾರಿಕತೆಯ ಜೊತೆಗೆ ಮೌಢ್ಯವೂ ಕೂಡಿಕೊಂಡಿರುತ್ತದೆ. ಉತ್ತಮವಾದುದನ್ನು ಮಾತ್ರ ಆಯ್ಕೆ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಆಶಯ ಕಾದಂಬರಿಯಲ್ಲಿದೆ.

ಬಾಳಿನಲ್ಲಿ ಬಂದುದನ್ನು ನುಂಗಿಕೊಂಡು ತಾನೂ ಉಳಿದು, ಇತರರನ್ನು ಸಲಹುವ ಚೈತನ್ಯದ ಶಕ್ತಿಯ ನೆಲೆಯನ್ನು ಕಾದಂಬರಿಕಾರರು ಹೆಣ್ಣಿನ ತ್ಯಾಗದಲ್ಲಿ ಕಂಡಿದ್ದಾರೆ. 'ಸ್ವಪ್ನದ ಹೊಳೆ' ಕಾದಂಬರಿಯ ತುಂಗಮ್ಮ ದೇವರಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದಳು. ತನ್ನ ಗಂಡ ಪರಮೇಶ್ವರಯ್ಯ ದುಡುಕಿನಿಂದ ದೇವರ ಬಗೆಗೆ ಅನಾಧಾರ ತಾಳಿದಾಗ "ನಾಗದೇವತೆ, ನೀನು ನನ್ನ ಯಜಮಾನರ ಮೂರ್ಖತನ ಕಂಡು ಶಾಪ ಕೊಡಬೇಡ" (೨೦೦೯, ಸಂ. ೧೪, ಕಾ.೧೩, ೨೩೧) ಎಂದು ದೇವರಲ್ಲಿ ಮೊರೆಯಿಡುತ್ತಾಳೆ. ತಪ್ಪಿಗೆ ಪರಿಹಾರವೆಂಬಂತೆ ಉಪವಾಸವ್ರತವನ್ನು ಕೈಗೊಳ್ಳುತ್ತಾಳೆ. ಮಾನವರು ತಪ್ಪು ಮಾಡಿದರೆ ದೇವರು ಶಿಕ್ಷೆ ಕೊಡುವನು ಎಂಬ ಧಾರ್ಮಿಕ ಭಾವನೆ ಅವಳಲ್ಲಿತ್ತು. ಅದಕ್ಕಾಗಿಯೇ ಪರಿಹಾರವೆಂಬಂತೆ ದೇವರಲ್ಲಿ ಮೊರೆಯಿಡುತ್ತಾಳೆ. ಇದು ಅವಳ ಮುಗ್ಧತೆಯ ಸಂಕೇತವಾಗಿದೆ. ಅವಳ ಅಪಕ್ವ ಅನುಭವವು ಭಯಕ್ಕೆ ಕಾರಣವಾಗಿದೆ. ಭಯದ ಇನ್ನೊಂದು ಮುಖವಾದ ಭಕ್ತಿಯನ್ನು ನಂಬಿಕೆಯ ಮೂಲಕ ತುಂಬಿಕೊಳ್ಳಲು ಸ್ತ್ರೀಯರು ಪ್ರಯತ್ನಿಸುತ್ತಾರೆ ಎಂಬುದನ್ನು ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳ ಮೂಲಕ ನಿರೂಪಿಸಲಾಗಿದೆ.

ತುಂಗಮ್ಮ ತನ್ನ ಮಗ ಅಂತರ್ಜಾತಿ ವಿವಾಹ ಮಾಡಿಕೊಂಡಾಗ ಕೋಪಿಸಿಕೊಳ್ಳದೆ ಮದುವೆಯೆನ್ನುವುದು 'ದೇವರ ಲೀಲೆ' ಎಂದು ಸಮ್ಮತಿಸುತ್ತಾಳೆ. ಸೊಸೆಯನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾಳೆ. ಕುಟುಂಬದ ಒಳಿತಿಗಾಗಿ ದೇವರಲ್ಲಿ ಹರಕೆ ಹೊತ್ತು ನೆರವೇರಿಸುತ್ತಾಳೆ. 'ತಂದೆ, ತಾಯಿ, ಮಕ್ಕಳು, ಗಂಡ, ನೆಂಟರು ಪರಲೋಕದಲ್ಲಿ ಸಹಾಯ ಮಾಡಲಾರರು. ಧರ್ಮ ಒಂದೇ ಮನುಷ್ಯನನ್ನು ಕಾಪಾಡುತ್ತದೆ' ಎಂಬುದನ್ನು ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

'ಗಂಡ-ಹೆಂಡತಿಯರ ಘರ್ಷಣೆಯಲ್ಲಿ ಉದ್ಭವಿಸುವುದು ಅಗ್ನಿಯ ಕಿಡಿಯಲ್ಲ. ಮಥಿತ ಮಂಥನದ ಪರಿಣಾಮವಾಗಿ ಹುಟ್ಟುವುದು ಜೀವಾಮೃತ' ಎನ್ನುವುದು ಲೋಕರೂಢಿಯ ಮಾತು. ಇದು "ಬೆಟ್ಟದ ಜೀವ" ಕಾದಂಬರಿ ವಿಷಯದಲ್ಲಿ ಸಾರ್ಥಕವಾಗಿದೆ. ಗೋಪಾಲಯ್ಯ-ಶಂಕರಿಯರ ದಾಂಪತ್ಯ ಜೀವನ ಸಾಮರಸ್ಯದಿಂದ ಕೂಡಿತ್ತು. ಶಂಕರಿಯು ತನ್ನ ಮಗ ಶಂಭು ಮನೆ ಬಿಟ್ಟು ಹೋದುದಕ್ಕಾಗಿ ಹಗಲಿರುಳು ದುಃಖಿಸುತ್ತಾಳೆ. 'ಮಗನು ಒಮ್ಮೆಯಾದರೂ ಮನೆಗೆ ಬರಲಿ' ಎಂದು ದೇವರಲ್ಲಿ ಮೊರೆಯಿಡುತ್ತಾಳೆ. ಒಳ್ಳೆಯದಕ್ಕೂ, ಕೆಟ್ಟದಕ್ಕೂ ತನ್ನ ಪೂರ್ವ ಕರ್ಮವನ್ನು ಸವೆಯಿಸುವುದಕ್ಕೆ ಜಗತ್ತಿಗೆ ಬಂದಿರುವುದು ಎಂಬ ಭಾವನೆಯಿಂದ ಮಗನ ಚಿಂತೆಯಲ್ಲಿ ಜೀವನವನ್ನು ಸಾಗಿಸುತ್ತಾಳೆ.

ಪ್ರಪಂಚದಲ್ಲಿಯ ಪ್ರತಿಯೊಂದು ವಸ್ತುವನ್ನು, ವಿಷಯವನ್ನು ಅತ್ಯಂತ ಆಸಕ್ತಿಯಿಂದ ವೀಕ್ಷಿಸಬಲ್ಲ ಕಾರಂತರು ಮಹಿಳೆಯರ ಭಾವನೆ, ನಡವಳಿಕೆಯನ್ನು ಕುರಿತಂತೆ ತಮ್ಮದೇ ಆದ ತತ್ವಗಳನ್ನು ರೂಢಿಸಿಕೊಂಡಿದ್ದರು. ಹಾಗೆಯೇ ಗಂಡನೊಂದಿಗೆ ಸಮಾನವಾಗಿ ದುಡಿಯುವ, ತಮ್ಮ ತಮ್ಮ ಜೀವನ ಸಿದ್ಧಾಂತವನ್ನು ತಾವೇ ರೂಪಿಸಿಕೊಳ್ಳುವ ಸ್ತ್ರೀ ಪಾತ್ರಗಳನ್ನು ಕಾರಂತರ ಕಾದಂಬರಿಗಳಲ್ಲಿ ಗುರುತಿಸಬಹುದು. ಕಾರಂತರು ವ್ಯಕ್ತಿಗತವಾಗಿ ದೇವರು, ದೈವಿಶಕ್ತಿಯಲ್ಲಿ ನಂಬಿಕೆಯನ್ನು ಹೊಂದಿದವರಾಗಿರಲಿಲ್ಲ. ಅವರಿಗೆ ದೇವರ ಅಸ್ತಿತ್ವ ಕುರಿತು ನಂಬಿಕೆಯಿರಲಿಲ್ಲ. "ದೇವರು ಧರ್ಮಗಳನ್ನು ಸೃಷ್ಟಿಸಿದವನು ಮನುಷ್ಯನೇ ಎಂಬುದರ ಬಗೆಗೆ ಅವರಿಗೆ ಯಾವ ಅನುಮಾನವು ಇಲ್ಲ" ಎಂದು ಸತ್ಯನಾರಾಯಣರವರು (ಶಿವರುದ್ರಪ್ಪ ಜಿ.ಎಸ್. (ಸಂ). ೧೯೮೩, ೬೭) ಕಾರಂತರ ಚಿಂತನೆಯನ್ನು ಸರಿಯಾಗಿಯೆ ಗುರುತಿಸಿದ್ದಾರೆ. ಆದರೆ ಅವರು ಅನ್ಯರ ಭಾವನೆಗಳಿಗೆ, ನಂಬಿಕೆಗಳಿಗೆ ಗೌರವಿಸುತ್ತಿದ್ದು, ಸ್ಪಂದಿಸುತ್ತಿದ್ದರು ಎಂಬುದನ್ನು ಕಾದಂಬರಿಗಳಲ್ಲಿಯ ಸ್ತ್ರೀ ಪಾತ್ರಗಳಿಂದ ಕಂಡುಕೊಳ್ಳಬಹುದು.

ಕಾರಂತರ ಕಾದಂಬರಿಗಳಲ್ಲಿನ ಸ್ತ್ರೀಯರು ಸಾಂಪ್ರದಾಯಿಕ ಧಾರ್ಮಿಕತೆಯಲ್ಲಿ ನಂಬಿಕೆಯನ್ನು ಹೊಂದಿದ್ದರು. ಅವರು ದೇವರ ಅಸ್ತಿತ್ವ ಕುರಿತು ಅಚಲವಾದ ನಂಬಿಕೆಯನ್ನು ಹೊಂದಿದ್ದರು. ಎಲ್ಲದಕ್ಕೂ ದೇವರೆ ಮೂಲ ಕಾರಣ, ದೇವರ ಹೊರತು ಯಾವುದು ಇಲ್ಲ ಎಂಬ ಸರಳ ಸಿದ್ಧಾಂತವನ್ನು ಹೊಂದಿದ್ದರು. "ಕರ್ಮಸಿದ್ಧಾಂತ"ದಲ್ಲಿ ನಂಬಿಕೆಯನ್ನು ಹೊಂದಿದ್ದು, ಎಲ್ಲ ಕಷ್ಟ ಸುಖಗಳಿಗೂ ನಮ್ಮ ಹಿಂದಿನ ಜನ್ಮದ ಕರ್ಮಫಲವೇ ಕಾರಣ ಎಂದು ಮೌನದಿಂದ ಸಹಿಸುತ್ತಿದ್ದರು. ಇದು ಪುರುಷ ಪ್ರಧಾನ ಸಮಾಜದ ನಿಲುವಾಗಿದ್ದು, ಪುರುಷರ ವಿರುದ್ಧ ಪ್ರತಿರೋಧಿಸದಂತೆ ಮಾಡುವಲ್ಲಿ 'ಕರ್ಮಫಲ'

ಬಳಸಿರುವುದು ಕಾದಂಬರಿಕಾರರ ತಂತ್ರವಾಗಿದೆ. ಹೆಣ್ಣು ಜನ್ಮ ಬಂದಿರುವುದು ಪಾಪ ಕಾರ್ಯದ ಫಲದಿಂದಾಗಿಯೇ ಎಂಬ ಸ್ತ್ರೀಯರ ಮನೋಧರ್ಮದಿಂದಾಗಿಯೇ ಅವರನ್ನು ಅಸಹಾಯಕರನ್ನಾಗಿ ಮಾಡಿರುವುದು ಸ್ಪಷ್ಟವಾಗುತ್ತದೆ. ಆದರ್ಶದ ಹಿನ್ನೆಲೆಯಲ್ಲಿ ಸ್ತ್ರೀಯರು ಪುರುಷರ ದೌರ್ಜನ್ಯ, ಹೇಡಿತನವನ್ನು ಸಹಿಸುವುದು ಇತ್ಯಾದಿ ಆಶಯಗಳನ್ನು ಹಲವಾರು ಕಾದಂಬರಿಗಳಲ್ಲಿ ಕಾಣಬಹುದು. 'ನಿರಾಶೆಯ ಸ್ಥಿತಿಯಲ್ಲೂ ಆಶಾಪೂರ್ಣವಾಗಿರಬೇಕು. ಕಠಿಣ ಪರಿಸ್ಥಿತಿಯನ್ನು ಸಂತೋಷ ಮತ್ತು ನಗುವಿನಿಂದ ಎದುರಿಸುವುದು ಶ್ರೇಷ್ಠವೆನಿಸಿಕೊಳ್ಳುತ್ತದೆ' ಎಂಬ ಆದರ್ಶದ ನೆಲೆಯಲ್ಲಿ ಸ್ತ್ರೀ ಪಾತ್ರಗಳನ್ನು ಚಿತ್ರಿಸಲಾಗಿದೆ. ಇದರಿಂದಾಗಿಯೆ ಸ್ತ್ರೀಯರಲ್ಲಿ 'ಜೀವನ ಶ್ರದ್ಧೆ' ಮುಖ್ಯವಾಗಿರುವುದು ಸ್ಪಷ್ಟವಾಗುತ್ತದೆ. ಬಾಳು ಗೊತ್ತು ಗುರಿಯನ್ನು ತಲುಪಬೇಕಾದರೆ ಅದು ಸದಾ ಮೌಲ್ಯ ಸಾಧಕ ಹಳಿಯ ಮೇಲೆಯೇ ಹರಿಯುವುದು ಸೂಕ್ತ ಎಂಬುದು ಕಾರಂತರ ಧಾರ್ಮಿಕ ಮನೋಧೋರಣೆಯಾಗಿರುವುದು ನಿಚ್ಚಳವಾಗಿದೆ.

ಸಂಕಟದ ಅನುಭವವಿಲ್ಲದಿದ್ದರೆ ಸುಖದ ಅನುಭವವಾಗುವುದಿಲ್ಲ. ಸುಖದ ಅನುಭವವಾಗಬೇಕಾದರೆ ಸಂಕಟಗಳನ್ನು ಅನುಭವಿಸಲೇಬೇಕು ಎಂಬ ಕಾದಂಬರಿಕಾರರ ಧೋರಣೆಯು ವಾಸ್ತವಕ್ಕೆ ದೂರವಾಗಿದೆ. ಸಕ್ಕರೆಯ ಸಿಹಿ ಅನುಭವಿಸಬೇಕಾದರೆ ಅದಕ್ಕಿಂತ ಮುಂಚೆ ಕಹಿ ಹಾಗಲಕಾಯಿಯನ್ನು ತಿಂದಿರಬೇಕು ಎನ್ನುವುದು ಅಸಂಬದ್ಧ ತರ್ಕವಾಗಿದೆ. "ಶಿವರಾಮ ಕಾರಂತರ ಚಿಂತನೆ ಹೆಚ್ಚಾಗಿ ವೈಯಕ್ತಿಕ ನೆಲೆಯದ್ದಾಗಿರುತ್ತದೆಯೇ ಹೊರತು ಸಾಮಾಜಿಕ ನೆಲೆಯದ್ದಾಗಿರಲಿಲ್ಲ" ಎಂಬ ಅನುಸೂಯರವರ (೨೦೦೧, ೯೬) ಹೇಳಿಕೆಯು ಸರಿಯಾಗಿದೆ.

ಸಂಪ್ರದಾಯಿಕ ನಂಬಿಕೆಯಲ್ಲಿ ವಿಶ್ವಾಸವನ್ನು ಹೊಂದಿದ ಸ್ತ್ರೀಯರು ದೇವರಲ್ಲಿ ಮೊರೆಯಿಡುವುದನ್ನು ಸಾಮಾನ್ಯವಾಗಿ ಗುರುತಿಸಬಹುದು. ಮಕ್ಕಳ ಹಂಬಲಕ್ಕಾಗಿ, ವಿದ್ಯೆ, ಬುದ್ಧಿಯನ್ನು ನೀಡು ಎಂಬುದಕ್ಕಾಗಿ, ಆರೋಗ್ಯವನ್ನು ವೃದ್ಧಿಸಲು ಮುಂತಾದ ಕಾರಣಗಳಿಗಾಗಿ ದೇವರಲ್ಲಿ ಹರಕೆ ಹೊರುವುದು ಸ್ಪಷ್ಟವಾಗುತ್ತದೆ. ಇವುಗಳು ಹಿಂದೂ ಧರ್ಮದ ಆಚಾರ, ವಿಚಾರಗಳಾಗಿವೆ. ಕಾರಂತರ ಕಾದಂಬರಿಗಳಲ್ಲಿ ಹಿಂದೂ ಧರ್ಮದ ವಿಚಾರಗಳನ್ನು ಗುರುತಿಸಬಹುದು. "ನಮ್ಮ ದೇಶ ಬೆಳೆಸಿಕೊಂಡು ಬಂದ ಸಂಸ್ಕೃತಿ ಲೋಕವನ್ನೇ ರಕ್ಷಿಸಬಲ್ಲ ಸಂಸ್ಕೃತಿ ಎಂಬುದು ನನ್ನ ನಂಬಿಕೆ" ಎಂಬ ಮಾಸ್ತಿಯವರ ಹೇಳಿಕೆಯು ಕಾರಂತರ ಕಾದಂಬರಿಗಳ ಮೂಲ ಆಶಯವನ್ನು ತಿಳಿಸುತ್ತದೆ. ಬೇರೆಯವರಿಗೆ ಸಂತೋಷ ನೀಡುವುದು ಒಂದು ಶ್ರೇಷ್ಠತಮವಾದ ಅನುಕಂಪದ ಕಾರ್ಯವಾಗಿದೆ ಎಂಬುದನ್ನು ಸ್ತ್ರೀಪಾತ್ರಗಳ ಮುಖಾಂತರ ಪ್ರತಿಪಾದಿಸಲಾಗಿದೆ.

ಶಿವರಾಮ ಕಾರಂತರು ಧಾರ್ಮಿಕತೆಯನ್ನು ವಿವಿಧ ಆಯಾಮಗಳಲ್ಲಿ ನಿರೂಪಿಸಿದ್ದಾರೆ. 'ಅಚಲವಾದ ನಂಬಿಕೆಯೇ ದೇವರು' ಎಂಬ ಮೌಲ್ಯವನ್ನು ಸ್ತ್ರೀಪಾತ್ರಗಳು ಒಪ್ಪಿಕೊಂಡು ಬಂದಂತಹ ನೈತಿಕ ಮೌಲ್ಯವಾಗಿದೆ. ಇವರ ನೈತಿಕತೆ ಕೇವಲ ಪರಂಪರೆಯಿಂದ ಬಂದದಲ್ಲ. ವರ್ತಮಾನ ಬದುಕಿನ ನಿಷ್ಠುರತೆಯ ಹಿನ್ನೆಲೆಯಲ್ಲೂ, ಮೂಲಾರ್ಥವನ್ನು ಉಳಿಸಿಕೊಳ್ಳಬಲ್ಲ ನೈತಿಕತೆಯನ್ನು ಮಾತ್ರ ಇವರು ಗೌರವಿಸುತ್ತಾರೆ ಎಂಬುದನ್ನು ಕಾದಂಬರಿಗಳ ಸ್ತ್ರೀಪಾತ್ರಗಳ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ.

ಹೀಗೆ ಕಾರಂತರ ಸ್ತ್ರೀ ಪಾತ್ರಗಳ ಧಾರ್ಮಿಕ ಪ್ರಪಂಚ ತುಂಬ ವೈವಿಧ್ಯಮಯವಾದುದು. ಒಂದಕ್ಕಿಂತ ಒಂದು ಭಿನ್ನವಾದುದು. ಒಟ್ಟಾರೆಯಾಗಿ ಕಾರಂತರ ಸ್ತ್ರೀಪಾತ್ರಗಳು ಸಂಪ್ರದಾಯದಲ್ಲಿ ಪ್ರಗತಿಪರ ಆಚಾರ ವಿಚಾರಗಳನ್ನು ಅನುಸರಿಸುವ ಜೀವನ್ಮುಖಿಯಾಗಿವೆ. ಕರ್ಮಸಿದ್ಧಾಂತದಲ್ಲಿ ನಂಬಿಕೆ ಹೊಂದಿ ನಿರ್ಲಿಪ್ತ ಜೀವನ ಸಾಗಿಸುವ ಮರಳಿ ಮಣ್ಣಿಗೆಯ ಸರಸೋತಿ, ಪಾರೋತಿಯರು, ಜೀವನದಲ್ಲಿ ನಡೆಯುವ ಎಲ್ಲ ಘಟನೆಗಳಿಗೆ ದೇವರೆ ಮೂಲ ಎಂಬ ಮುಗ್ಧತೆಯನ್ನು ಹೊಂದಿದ ಮುಗಿದ ಯುದ್ಧದ ಲಕ್ಷ್ಮಮ್ಮ, ಆಧ್ಯಾತ್ಮಿಕ ಜೀವನಕ್ಕೆ ಸಂಸಾರ ತೊಡಕಾಗಲಾರದು ಎಂಬುದನ್ನು ಸಾಧಿಸಿ ತೋರಿಸಿದ ಸನ್ಯಾಸಿಯ ಬದುಕಿನ ರುಕ್ಮಾಯಿ, ಜಾತಿಯತೆಯ ಮೌಢ್ಯದಲ್ಲಿರುವ ಔದಾರ್ಯದ ಉರುಳಲ್ಲಿನ ಶೇಷಮ್ಮ, ಧಾರ್ಮಿಕ ಕಟ್ಟುಪಾಡುಗಳಿಂದ ಮತಾಂತರ ಹೊಂದಲು ಸಾಧ್ಯವಾಗದ ಚೋಮನ ದುಡಿಯ ಬೆಳ್ಳಿ, ಧಾರ್ಮಿಕ ಆಚರಣೆಯಲ್ಲಿ ಪ್ರಗತಿಪರ ನಿಲುವನ್ನು ಹೊಂದಿದ ಶನೀಶ್ವರನ ನೆರಳಲ್ಲಿಯ ಕಾವೇರಮ್ಮ... ಈ ಎಲ್ಲ ಪಾತ್ರಗಳು ಧಾರ್ಮಿಕ ಪ್ರಪಂಚದ ವಿಶಾಲತೆಯನ್ನು ಪ್ರಕಟಿಸುತ್ತವೆ.

ಅಧ್ಯಾಯ ೫

ವೈಚಾರಿಕ ಪ್ರಪಂಚ

ಅಧ್ಯಾಯ ೫

ವೈಚಾರಿಕ ಪ್ರಪಂಚ

ಕಾದಂಬರಿಗಳಲ್ಲಿ ವೈಚಾರಿಕ ಪ್ರಪಂಚ ಎಂಬುದು ಬಹಳ ವ್ಯಾಪಕವಾದುದು. ಎಲ್ಲಾ ಬರಹಗಾರರು ತಮ್ಮ ಬರವಣಿಗೆಯ ಮೂಲಕ ವಿಚಾರಗಳನ್ನು ಪ್ರತಿಪಾದಿಸುತ್ತಾರೆ. ಸೃಜನಶೀಲ ಕೃತಿಗಳಲ್ಲಿ ಇದನ್ನು ವಿಭಿನ್ನ ಪಾತ್ರಗಳ ಮೂಲಕ ಮಾಡಲಾಗುತ್ತದೆ. ಕಾರಂತರೂ ಇದಕ್ಕೆ ಹೊರತಾಗಿಲ್ಲ. ಅವರ ಒಂದೊಂದು ಪಾತ್ರಗಳೂ ನಿರ್ದಿಷ್ಟ ವಿಚಾರಗಳ ಪ್ರತಿಪಾದನೆ ಮಾಡುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಾಯದಲ್ಲಿ ಅವರ ಸ್ತ್ರೀ ಪಾತ್ರಗಳು ಪ್ರತಿಪಾದಿಸುವ ವೈಚಾರಿಕತೆಯದೇ ಒಂದು ಅನನ್ಯ ಪ್ರಪಂಚ. ಅವುಗಳ ವಿಚಾರಗಳ ನೆಲೆಯಲ್ಲಿಯೇ ಇಡೀ ಕುಟುಂಬವನ್ನು ನಿಭಾಯಿಸುವ ಸಂದರ್ಭಗಳನ್ನು ಕಾಣಬಹುದು. ಹಾಗೆಯೇ ಇಡೀ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿಯೂ ಅವು ಪೂರಕವಾಗಿರುವುದನ್ನು ಗಮನಿಸಬಹುದು. ಅವರ ವಿಚಾರಗಳು ವೈಚಾರಿಕ ಪ್ರಾಮುಖ್ಯತೆಯನ್ನು ಪಡೆಯುತ್ತವೆ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಪರಿಶೀಲಿಸಬಹುದು.

ಮನುಷ್ಯನ ಜೀವನದಲ್ಲಿ ನೋವಿದೆ, ನಲಿವಿದೆ, ನೂರಾರು ಸಮಸ್ಯೆಗಳ ಗೊಂದಲವಿದೆ. ಜೀವನವೆಂದರೆ ಸದಾ ಹೋರಾಟವಾಗಿದ್ದು ಅಂತರಂಗದೊಡನೆಯೂ ಹಾಗೂ ಬಾಹ್ಯ ಜಗತ್ತಿನೊಡನೆಯೂ ನಡೆದೇ ಇರುತ್ತದೆ. ಆದ್ದರಿಂದ ವ್ಯಕ್ತಿಯ ಬದುಕು ಸಾರ್ಥಕವಾಗುವುದು ಮತ್ತು ಸಮೂಹದ ಬದುಕು ಹಸನಾಗುವುದು, ಬದುಕಿಗೆ ಹಾಗೂ ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ವ್ಯಕ್ತಿ ಅಥವಾ ವ್ಯಕ್ತಿಗಳು ತೋರಿಸುವ ಪ್ರತಿಕ್ರಿಯೆಯನ್ನು ಅವಲಂಬಿಸಿರುತ್ತದೆ. ಆ ಪ್ರತಿಕ್ರಿಯೆಯು ಸಮರ್ಥನೀಯವಾಗಿದ್ದಲ್ಲಿ ಅದು ವಿವೇಕತನ ಎನಿಸಿಕೊಳ್ಳುತ್ತದೆ. ಇದನ್ನು ಕಾರಂತರ ಕಾದಂಬರಿಗಳಲ್ಲಿಯ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದು. ಹೆಣ್ಣಿನಲ್ಲಿ ವಿಚಾರವಂತಿಕೆಯ ಮೂಲ ಕಾಣಸಿಗುವುದು, ಅವಳು ತನ್ನ ಮಕ್ಕಳಿಗೆ ನೀಡುವ ಉಪದೇಶದಲ್ಲಿ. "ಸ್ವಂತದ ಪ್ರೀತಿಸುವ ಸಾಮರ್ಥ್ಯವು ತಾಯ ಪ್ರಜ್ಞೆಯಿಂದ ಆಕಾರ ತಳೆದಿರುತ್ತದೆ" ಎಂಬ ಎರಿಕ್ ಪ್ರಾಂ (ನಾರಾಯಣ ಕೆ.ವಿ., ರಾಘವೇಂದ್ರ ಎಚ್..... (ಅನು) ೨೦೦೩:೩೮) ಅವರ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸಬಹುದು.

"ಮನುಷ್ಯನ ಅನಂತಕಾಲದ ಇತಿಹಾಸದ ಹಿನ್ನೆಲೆಯಲ್ಲಿ ವರ್ತಮಾನವನ್ನು ಇಟ್ಟು ನೋಡುವುದನ್ನು ಕಲಿಯದ ಹೊರತು ನಾವು ಬದುಕನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರೆವು ಮತ್ತು ನಿಜವಾದ ವಿಚಾರ ವಿವೇಕ ನಮ್ಮಲ್ಲಿ ಬೆಳೆಯಲಾರದು" ಎಂದು ಜಿ.ಎಸ್.ಶಿವರುದ್ರಪ್ಪನವರು ಸರಿಯಾಗಿ ಗುರುತಿಸಿದ್ದಾರೆ. (ಅಶೋಕ

[illegible]

[illegible]

[illegible]

[illegible]

ಟಿ.ಪಿ.(ಸಂ) ೧೯೯೪: ೩೧೮) "ಮೂಕಜ್ಜಿಯ ಕನಸುಗಳು" ಕಾದಂಬರಿಯಲ್ಲಿ ಸಾಂಪ್ರದಾಯಿಕತೆಯಿಂದ ಹೆಪ್ಪುಗಟ್ಟಿದ ಮನಸ್ಸುಗಳನ್ನು ತುಸು ತುಸುವಾಗಿ ಕಾಯಿಸಿ ಕರಗಿಸುವ ಕೆಲಸವನ್ನು ಮೂಕಜ್ಜಿ ತನ್ನ ವಿಚಾರವಂತಿಕೆಯಿಂದ ಮಾಡುತ್ತಾಳೆ.

ಪ್ರಸ್ತುತ ಕಾದಂಬರಿಯು ಮಾನವ ಸಂಸ್ಕೃತಿಯ ಎಲ್ಲಮುಖಗಳನ್ನು ಬಿಡಿ ಬಿಡಿಯಾಗಿ ಪರಿಚಯಿಸುತ್ತದೆ. ಅಂದರೆ ಜೀವನದ ಅರ್ಥ, ದೈವದ ಕಲ್ಪನೆ, ಸೃಷ್ಟಿಯ ರಹಸ್ಯ, ಹೆಣ್ಣುಗಂಡಿನ ಬೆಸುಗೆ ಮುಂತಾದವುಗಳ ಕುರಿತು ಮೂಕಜ್ಜಿಯು ವಿವೇಚಿಸುತ್ತಾಳೆ. ನಂಬಿಕೆಯೇ ದೇವರು, ಮಾನವನು ದೇವರನ್ನು ನಿರ್ಮಿಸಿದನೇ ಹೊರತು ದೇವರು ಮಾನವನನ್ನು ಸೃಷ್ಟಿಸಿಲ್ಲ ಎಂಬುದು ಮೂಕಜ್ಜಿಯ ಬಲವಾದ ನಂಬಿಕೆಯಾಗಿತ್ತು. ದೇವರು ಹೆಣ್ಣು ಅಲ್ಲ; ಗಂಡೂ ಅಲ್ಲ, ಅಮೂರ್ತವಾದ ರೂಪವನ್ನು ಹೊಂದಿದ್ದಾನೆ. ತಂತಮ್ಮ ಇರುವಿಕೆಯಂತೆ ದೇವರನ್ನು ಜನ ಅಪ್ಪ -ಅಮ್ಮ ಎಂದು ಮಾಡಿಕೊಂಡಿದ್ದಾರೆ, ದೇವರನ್ನು ಕುರಿತು ಅದು ನನಗೆ ಬೇಕು, ಇದು ಬೇಕು ಎಂದು ಬೇಡುವವರನ್ನು ಖಂಡಿಸುತ್ತಾಳೆ. ಏಕೆಂದರೆ ಅವನು ಮೊದಲು ಕೊಡುವಷ್ಟು ಕೊಟ್ಟು ಹುಟ್ಟಿಸಿರುತ್ತಾನೆ ಎಂಬುದು ಮೂಕಜ್ಜಿಯ ನಂಬಿಕೆಯಾಗಿತ್ತು.

ದೇವರಿಗೆ ಮೂರ್ತರೂಪದ ಅಸ್ತಿತ್ವವಿಲ್ಲ, ಸರ್ವಾಂತರಯಾಮಿಯಾದ ಅವನನ್ನು ನಿರ್ದಿಷ್ಟ ಪ್ರದೇಶದಲ್ಲಿ ಹುಡುಕಲು ಸಾಧ್ಯವಿಲ್ಲ, ಹಾಗಾಗಿ ದೇವರನ್ನು ಕಾಣಬೇಕೆಂದರೆ ಸಂಸಾರವನ್ನು ಬಿಡುವ ಅವಶ್ಯಕತೆಯಿಲ್ಲ, ಸಂಸಾರ ನಡೆಯಿಸಲೆಂದೇ ಗಂಡು ಹೆಣ್ಣಿನ ಸೃಷ್ಠಿಯಾದದ್ದು. ಸಂಸಾರ ಮಾಯೆ ಎಂದು ಓಡಿ ಹೋಗುವುದಕ್ಕಲ್ಲ ಎಂದು ಹೇಳುತ್ತಾಳೆ. ಸಾತ್ವಿಕ ಜೀವನ ನಡೆಸಲು ಸಂಸಾರ ಅಡ್ಡ ಬರುವುದಿಲ್ಲ, ಸಂಸಾರವೆಲ್ಲವೂ ದುಃಖಮಯ, ಅದೊಂದು ಬಂಧನ ಎಂಬುದನ್ನು ಮೂಕಜ್ಜಿಯು ಒಪ್ಪುವುದಿಲ್ಲ, ಹೆಂಡಿರು ಮಕ್ಕಳನ್ನು ಬಿಟ್ಟು ದೇವರಲ್ಲಿ ಮೊರೆಯಿಡುವುದು ಮೂರ್ಖತನ, ಏಕೆಂದರೆ ಆ ದೇವರುಗಳೂ ತಂತಮ್ಮ ಹೆಂಡಿರೊಡನೆ ಸುಖವಾಗಿದ್ದರು. ಅವರಿಗೂ ಅವರ ಹೆಂಡತಿಯಿಂದ ಮುಕ್ತಿ ಸಿಗದಿರುವಾಗ ಅನ್ಯರಿಗೆ ಏನು ಕೊಟ್ಟಾರು? ಎಂದು ವಿಡಂಬಿಸುತ್ತಾಳೆ. ತಾವೇ ಮೋಹಪಾಶ ಕಡಿದುಕೊಳ್ಳಲಾರದ ದೇವರು, ಅನ್ಯರ ಮೋಹಪಾಶ ಹೇಗೆ ಕಡಿದಾನು? ಎಂದು ತರ್ಕ ಮಾಡುತ್ತಾಳೆ. ಸಂಸಾರದಿಂದ ವಿಮುಕ್ತರಾಗಿ ಗವಿಯಲ್ಲಿ ತಪಸ್ಸು ಮಾಡುತ್ತಿದ್ದವರನ್ನು ಕುರಿತು ಹಡೆದ ತಾಯಿಯ ಹೊಟ್ಟೆಯನ್ನು ತಿರುಗಿ ಸೇರುವ ಆಸೆ ಅಸಾಧ್ಯವಾದುದಕ್ಕೆ ಗುಹೆ ಹುಡುಕಿಕೊಂಡು ಹೋಗುತ್ತಾರೆ ಎಂದು ಹಾಸ್ಯ ಮಾಡುತ್ತಾಳೆ. ಜೀವನ್ಮುಖಿಯಾದ ಧೋರಣೆ ಮಾತ್ರ ಚೆಲುವನ್ನು ಸೃಷ್ಠಿಸಬಲ್ಲದು. ದೇವರ ಸಾನ್ನಿಧ್ಯದ ಅನುಭವ ತರಬಲ್ಲದು. ಆದ್ದರಿಂದ ಮೂಕಜ್ಜಿ ತಪಸ್ಸಿಗೆ ಗುಹೆ ಹುಡುಕಿಕೊಂಡು ಹೋಗುವ ಋಷಿಗಳನ್ನು 'ಮಾನಸಿಕ ರೋಗಿಗಳು' ಎಂದು ವಿಡಂಬಿಸುತ್ತಾಳೆ. ಇದು ಮೂಕಜ್ಜಿಯ ಭಾವನೆಯಾದರೂ ಕಾದಂಬರಿಕಾರರ ನಿಲುವಾಗಿರುವುದು ಸ್ಪಷ್ಟವಾಗುತ್ತದೆ.

ಮನುಷ್ಯರು ತಮ್ಮ ಕಲ್ಪನೆಯೆಲ್ಲವನ್ನು ಹರಿಯ ಬಿಟ್ಟು ದೇವರಿಗೊಂದು ರೂಪ, ಆಕಾರ, ವೇಷ ಕೊಟ್ಟು ಅವತಾರಗಳನ್ನು ಅಂಟಿಸಿದ್ದಾರೆ. ದೇವರು ಅವತಾರ ಪಡೆಯುತ್ತಾನೆ ಎಂಬುದು ಮೂರ್ಖತನ. ಸಮಾಜದಲ್ಲಿಯ ದುಷ್ಟತನ ನಿಗ್ರಹಿಸಲು, ಸಮಾಜ ಘಾತುಕರನ್ನು ಸಂಹರಿಸಲು ದೇವರು ಅವತಾರ ತಾಳುತ್ತಾನೆ ಎಂದು ವಿವರಿಸುವ ಪೌರಾಣಿಕ ಕಥೆಗಳಲ್ಲಿ ಯಾವುದೇ ಸತ್ಯಾಂಶವಿಲ್ಲವೆಂದು ಸ್ಪಷ್ಟಪಡಿಸುತ್ತಾಳೆ. ಮಾನವನ ಜೀವನದಲ್ಲಿ ಒಂದೇ ಒಂದು ಸತ್ಯವಿದೆ. ಜನ್ಮ ಹಾಗೂ ಮರಣ, ಇವುಗಳ ನಡುವಿನ ಜೀವನವೆಂಬ ಅವಸ್ಥೆ ಕಾಲಾವಧಿಉಳಿದುದಲ್ಲ, ಮಾನವ

[illegible]

[illegible]

[illegible]

[illegible]

ಮನಸ್ಸಿನ ನಿರ್ಮಿತ, ದೇವರೂ ಮನುಷ್ಯನ ನಿರ್ಮಿತಿಯೇ. ಮೂಕಜ್ಜಿಯದು ಆಸ್ತಿಕವಾದವು ಅಲ್ಲದ ನಾಸ್ತಿಕವಾದವೂ ಅಲ್ಲದ ಅಸ್ತಿತ್ವವಾದಿ ಮಾನವತಾವಾದವನ್ನು ಪ್ರತಿಪಾದಿಸುವ ತತ್ವಜ್ಞಾನಿ ಪಾತ್ರವಾಗಿದೆ.

ಮೂಕಜ್ಜಿಯು ತನ್ನ ಅತೀಂದ್ರಿಯ ಜ್ಞಾನದಿಂದ ಒಬ್ಬನ ಮುಖ ನೋಡಿ, ಅವನ ನಡತೆಯನ್ನು ಅರಿಯುವಂತ ಸಾಮರ್ಥ್ಯವನ್ನು ಹೊಂದಿದ್ದಳು. ಗಂಡು-ಹೆಣ್ಣಿನ ಲೈಂಗಿಕ ಪ್ರವೃತ್ತಿ ನಿಸರ್ಗದತ್ತವಾದುದು. ಆದರೆ ಗಂಡು ಮತ್ತೊಂದು ಗಂಡಿನೊಡನೆ ಕೂಡುವ ಕ್ರಿಯೆ ಪ್ರಕೃತಿಗೆ ವಿರುದ್ಧವಾದುದು. ಅನಂತರಾಯನ ವಿಕೃತಕಾಮವನ್ನು ಬಯಲಿಗೆಳೆಯುತ್ತಾಳೆ. ಸಲಿಂಗಕಾಮ ಎನ್ನುವಂತದ್ದು ಮನೋವಿಕೃತಿ ಹಾಗೂ ಅಸಹಜವಾದದ್ದು ಸಲಿಂಗರತನು ಎಂದೆಂದು ಬಿಡುಗಡೆಯಿಲ್ಲದೆ ಏಕಾಂಗಿತನದ ನೋವಿನಿಂದ, ಸೋಲಿನಿಂದ ನರಳುತ್ತಾನೆ. ಸಲಿಂಗಕಾಮವನ್ನು ಅನೈತಿಕ ಅಪರಾಧ ಎಂದು ನಮ್ಮ ಸಮಾಜದಲ್ಲಿ ಪರಿಗಣಿಸಲಾಗುತ್ತದೆ. ೩೭೭ ನೆ ವಿಧಿಯು ಸಲಿಂಗಕಾಮವನ್ನು ಅಪರಾಧ ಎಂದು ಪರಿಗಣಿಸುತ್ತದೆ.* ಕಾದಂಬರಿಕಾರರು ಮೂಕಜ್ಜಿಯ ಪಾತ್ರದಿಂದ ಸಮಾಜದಲ್ಲಿ ಸಲಿಂಗಕಾಮ ಕುರಿತು ಇರುವ ಅಭಿಪ್ರಾಯವನ್ನು ಚಿತ್ರಿಸಿದ್ದಾರೆ. ಆದರೆ ಇಂದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಲಿಂಗಕಾಮವನ್ನು ಸಾರ್ವತ್ರಿಕವಾಗಿ ಗುರುತಿಸಲಾಗುತ್ತದೆ. ಅದಕ್ಕೆ ಮನ್ನಣೆಯನ್ನು ನೀಡಲಾಗಿದೆ. ಬುದ್ಧಿಜೀವಿಗಳು ಸಲಿಂಗಕಾಮವನ್ನು ಅಪರಾಧವಲ್ಲವೆಂದು ಸಾರುತ್ತಿದ್ದಾರೆ.

ಲೈಂಗಿಕ ತುಡಿತದಿಂದ ಆಧ್ಯಾತ್ಮ ಜೀವನಕ್ಕೆ ಯಾವುದೇ ತೊಂದರೆಯಾಗುವುದಿಲ್ಲ 'ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ' ಎಂಬಂತೆ 'ಭರತೇಶ ವೈಭವ'ದ ಭರತನು ಲೈಂಗಿಕತೆಯಿಂದ ಧಾರ್ಮಿಕ ಜೀವನಕ್ಕೆ ಯಾವುದೇ ಅಡಚಣೆಯಾಗುವದಿಲ್ಲವೆಂದು ಬದುಕಿ ತೋರಿಸಿರುವುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಇದನ್ನು ಮೂಕಜ್ಜಿಯು ಉಲ್ಲೇಖಿಸುತ್ತಾಳೆ. "ಮಹಾತ್ಮ ಗಾಂಧಿ ಅವರ ಆಧ್ಯಾತ್ಮ ತುಡಿತದ ಹಾದಿಗೆ ಅವರಲ್ಲಿದ್ದ ಕಾಮದ ತುಡಿತ ಬಹುದೊಡ್ಡ ಅಡ್ಡಿಯಾಗಿತ್ತು ಎಂಬ ಅಂಶವನ್ನು ಮನೋವಿಶ್ಲೇಷಕ ಸುಧೀರ್ ಕಾಕರ್ ಅವರು ತಮ್ಮ ಹೊಸ ಪುಸ್ತಕ 'ಮ್ಯಾಡ್ ಅಂಡ್ ಡಿವೈನ್ ಸ್ಪಿರೀಟ್ ಆಯ್ಯಂಡ್ ಸೈಕ್ ಇನ್ದ ಮಾಡರ್ನ ವರ್ಲ್ಡ್'ದಲ್ಲಿ ತಿಳಿಸಿದ್ದಾರೆ" (ನವಂಬರ್ ೭, ೨೦೦೮) ಇದರಿಂದ ಶಿವರಾಮ ಕಾರಂತರ ಹಾಗೂ ಮಹಾತ್ಮ ಗಾಂಧೀಜಿಯವರ ಲೈಂಗಿಕ ತುಡಿತದ ಬಗೆಗೆ ಇರುವ ಭಿನ್ನತೆಯು ಸ್ಪಷ್ಟವಾಗುತ್ತದೆ.

ಸುಬ್ರಾಯನ ತಂದೆ ಸಾವಿಗೀಡಾದಾಗ ಮೂಕಜ್ಜಿ ಎದೆಗುಂದದೆ ಸುಬ್ರಾಯನಿಗೆ ಸಮಾಧಾನವನ್ನು ಹೇಳುತ್ತಾಳೆ. ಭೂಮಿಯ ಮೇಲೆ ಯಾರು ಶಾಶ್ವತ? ಎಲ್ಲರೂ ಒಂದಲ್ಲ ಒಂದು ದಿನ ಸಾಯುವವರೆ, ಹೋಗಿ ಕೊಳ್ಳಿ ಇಟ್ಟು ಬಾ ಎಂದು ಹೇಳುತ್ತಾಳೆ. ತಿಪ್ಪಜ್ಜಿಯು ಅನಾರೋಗ್ಯದಿಂದ ಸಾವಿನ ಭಯದಿಂದ ನರಳುತ್ತಿರಲು ಮೂಕಜ್ಜಿ ಅವಳಿಗೆ ಧೈರ್ಯ ಹೇಳುತ್ತಾಳೆ. ನಿನ್ನ ಅಮ್ಮನೇ ಬಾ ಎಂದು ಕರೆಯುತ್ತಿದ್ದಾಳೆ. ಹೋಗಿ ಬಾ, ನಾನು

---

* ಆದರೆ ಇತ್ತೀಚಿಗೆ ದಿಲ್ಲಿಯ ಹೈಕೋರ್ಟ್ ಇದರ ವಿರುದ್ಧವಾಗಿ ನಿಲುವು ತಾಳಿದೆ. ಇಬ್ಬರು ಪುರುಷರು ಅಥವಾ ಸ್ತ್ರೀಯರು ಪರಸ್ಪರ ಒಪ್ಪಿಕೊಂಡು ಸಲಿಂಗ ಕಾಮದಲ್ಲಿ ಪಾಲ್ಗೊಳ್ಳಬಹುದು. ಪರಸ್ಪರ ಸಮ್ಮತಿಯಿದ್ದರೆ ಅದು ಅಪರಾಧವಾಗಲಾರದು ಎಂದು ತೀರ್ಪು ನೀಡಿದೆ. ಇದರಿಂದ ಸಾಮಾಜಿಕ ಮೌಲ್ಯಗಳು ಕಾಲಕ್ಕನುಗುಣವಾಗಿ ಬದಲಾಗುತ್ತಿರುವುದನ್ನು ಗಮನಿಸಬಹುದು.

ನಾಲ್ಕು ದಿನ ಬಿಟ್ಟು ಬರುವವಳೇ ಎಂದು ಬದುಕಿನ ಮೋಹ ಕಳೆಯಲಾರದ ಜೀವಕ್ಕೆ ಅಶಾಶ್ವತೆಯನ್ನು ತಿಳಿಸಿಕೊಡುವ ಪ್ರಯತ್ನ ಮಾಡುತ್ತಾಳೆ.

ಸೃಷ್ಟಿಯ ಪ್ರಚೋದಕ ಹಾಗೂ ಬೆಳವಣಿಗೆಯ ಮೂಲಾಂಶಗಳನ್ನು ತನ್ನ ವಿಶ್ಲೇಷಕ ದೃಷ್ಟಿಯಿಂದ ಕಂಡುಕೊಳ್ಳುವ ಮೂಕಜ್ಜಿ ಬದುಕಿನಿಂದ ಪಲಾಯನ ಮಾಡುವ ಅಥವಾ ಬದುಕಿನ ಕ್ರಿಯಾಶೀಲತೆಯನ್ನು ಅಲ್ಲಗಳೆಯುವ ನಮ್ಮ ಪರಂಪರಾಗತ ಭೋಳೆ ನಂಬಿಕೆಗಳಿಂದ ದೂರವಾಗಿ ಸಾರ್ಥಕ ಬದುಕಿನತ್ತ ಚಲಿಸುತ್ತಾಳೆ. ಕಾದಂಬರಿಯಲ್ಲಿ ಮೂಕಜ್ಜಿ ಮತ್ತು ಸುಬ್ರಾಯನ ಮೂಲಕ ನಡೆಸಿದ ಪ್ರಯೋಗಗಳ ಉದ್ದೇಶವು ಧರ್ಮ ಮತ್ತು ಸಂಸ್ಕೃತಿಗಳ ಬಗೆಗೆ ಜನರಲ್ಲಿ ತರ್ಕಬದ್ಧವಾದ ವಿಚಾರಗಳನ್ನು ಹುಟ್ಟಿಸುವುದು ಹಾಗೂ ಅವರು ಕಂಡಕೊಂಡ ಸಂಗತಿಗಳ ಕುರಿತು ಚರ್ಚಿಸಲಾಗಿದೆ. ಕಾದಂಬರಿಯಲ್ಲಿ ಮೂಕಜ್ಜಿಯನ್ನು ಓರ್ವ ಮಾನಸಿಕ ರೋಗಿಯೆಂದು ಕಲ್ಪಿಸದೆ, ಮಾನವ ಚರಿತ್ರೆಯ ಮಾರ್ಗದರ್ಶಿ ಎಂದು ಚಿತ್ರಿಸಿರುವುದು ಸಾಹಿತ್ಯಿಕವಾಗಿ ಇರುವ ಚಿಂತನಾಪ್ರಧಾನ ಆಶಯವೆನಿಸುತ್ತದೆ. "ಚರ್ಚೆ, ವಾದ ಸ್ವರೂಪದಲ್ಲಿರುವ ಧರ್ಮಶ್ರದ್ಧೆ ಗಂಡು-ಹೆಣ್ಣುಗಳ ಸಂಬಂಧ, ನಿಸರ್ಗದ ಪ್ರೇರಣೆಗಳ ಸ್ಥಾನಮಾನಗಳನ್ನು ಕುರಿತು ಅವರ ಮನಸ್ಸಿನಲ್ಲಿ ಒಂದೇ ಸಮನೆ ನಡೆದ ಮಂಥನವೇ ಮೂಕಜ್ಜಿಯ ಕನಸುಗಳಂತಹ ಕಾದಂಬರಿಯಲ್ಲಿ ಮೂರ್ತಸ್ವರೂಪವನ್ನು ಪಡೆದಿವೆ" ಎಂಬ ಉಮಾ ಕುಲಕರ್ಣಿಯವರ ಹೇಳಿಕೆಯು (ವಿರೂಪಾಕ್ಷ ಕುಲಕರ್ಣಿ (ಸಂ-ಅನು) ೧೯೯೦.೭೩) ಕಾದಂಬರಿಯ ಮೂಲ ಆಶಯವನ್ನು ಸ್ಪಷ್ಟಪಡಿಸುತ್ತದೆ.

ರೂಢಿಗತ ಹಿಂದೂ ಸಂಸ್ಕೃತಿಯನ್ನು ಕಟುವಾಗಿ ಪ್ರಶ್ನಿಸುವ ಎಲ್ಲ ಕೊಳೆತ ಶಾಸ್ತ್ರಗಳ ಆಚರಣೆ, ನಂಬಿಕೆಗಳ ಹಿಂದಿನ ಸ್ವಯಂ ವಿರೋಧ ವ್ಯಂಗ್ಯಗಳನ್ನು 'ಕನ್ಯಾಬಲಿ' ಕಾದಂಬರಿಯಲ್ಲಿ ಕಾಣಬಹುದು. ಧರ್ಮದ ಹೆಸರಿನಲ್ಲಿ ತರುಣಿಯೊಬ್ಬಳ ಮೇಲೆ ವೈಧವ್ಯವನ್ನು ಒತ್ತಾಯಪೂರ್ವಕವಾಗಿ ಹೇರುವುದು, ಆ ಮೂಲಕ ಅವಳಿಗೆ ಬದುಕನ್ನು ನಿರಾಕರಿಸುವ ಸಂಪ್ರದಾಯಬದ್ಧ ಸಮಾಜ ಆಕೆಯ ದುರಂತಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ಮಾಲತಿಯ ಪಾತ್ರದ ಮುಖಾಂತರ ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ.

ಮದುವೆಯನ್ನು ಹೆಣ್ಣಿಗೆ ಅನಿವಾರ್ಯವಾಗಿಸಿದ ಸಂಸ್ಕೃತಿಯೇ, ವೈಧವ್ಯದ ಬವಣೆಯನ್ನು ಸೃಷ್ಟಿಸಿದೆ. ಮಾಲತಿಯು ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ಇದರಿಂದ ಕುಟುಂಬದಲ್ಲಿ ನಡೆಯುವ ಎಲ್ಲ ಮಂಗಳ ಕಾರ್ಯಗಳಿಂದಲೂ ವಂಚಿತಳಾಗುತ್ತಾಳೆ. ಅವಳ ಮುಖದರ್ಶನವಾದರೆ ಅಪಶಕುನ, ಅವಳ ಸಾನ್ನಿಧ್ಯ ಅಮಂಗಳಕಾರಿಯಾದುದು ಎಂದು ಸಮಾಜವು ಅವಳನ್ನು ಮಾನಸಿಕವಾಗಿ ಹಿಂಸಿಸುತ್ತದೆ. ಗಂಡನ ಸಾವಿನ ನಂತರ ಆಕೆಯನ್ನು ವಿಕಾರಗೊಳಿಸಿ ವಿಕರ್ಷಣೆಗೆ ಈಡು ಮಾಡುವುದು ವಿಧವಾ ಸಂಪ್ರದಾಯದ ಮೂಲ ಉದ್ದೇಶವಾಗಿತ್ತು, ಆದ್ದರಿಂದಲೇ ವಿಧವೆಯಾದವಳ ತಲೆಯನ್ನು ಬೋಳಿಸಲಾಗುತ್ತಿತ್ತು. ಆದರೆ ಮಾಲತಿಯು ಇದನ್ನು ವಿರೋಧಿಸುತ್ತಾಳೆ. ಪ್ರೇಮವೆಂದರೇನು ಎಂಬುದು ಗೊತ್ತಿರದೆ ಇರುವಾಗ ನಡೆದ ಮದುವೆ ಮದೆವೆಯೇ ಅಲ್ಲ, ಅಂಥವನು ಸತ್ತರೆ ನಾನೇಕೆ ವಿಧವೆಯಾಗಬೇಕು? ಎಂದು ಸಂಪ್ರದಾಯವನ್ನು ವಿರೋಧಿಸುತ್ತಾಳೆ. ಕೇಶಮುಂಡನೆಗಾಗಿ ಬಂದಿದ್ದ ಕ್ಷೌರಿಕನನ್ನು ತಡೆಯುತ್ತಾಳೆ. "ಯಾರು ನನ್ನನ್ನು ವಿರೂಪಗೊಳಿಸುವವರು? ಯಾರು ನನ್ನನ್ನು ವಿಧವೆಯೆನ್ನುವವರು? ಕ್ಷೌರಿಕ, ನಿನಗೆ ಜೀವದಾಸೆಯಿದ್ದರೆ ಹೊರಗೆ ನಡಿ, ಅಪ್ಪಾ, ಮಗಳ ಕೈಯಲ್ಲಿ ನೀನು

ಸಾಯಬಾರದೆಂದಿದ್ದರೆ ಹಿಂದೆ ಸರಿ" ಎಂದು (೨೦೦೩, ಸಂ-೨, ಕಾ-೧, ೪೦೧) ಧರ್ಮದ ಹೆಸರಿನಲ್ಲಿ ನಡೆಯುವ ಅನಿಷ್ಠ ಪದ್ಧತಿಯನ್ನು ತಡೆಯುತ್ತಾಳೆ.

ಬಾಲ್ಯ ವಿವಾಹವನ್ನು ತಡೆಗಟ್ಟಲು ಹಲವಾರು ಸಮಾಜ ಸುಧಾರಕರು ಹೋರಾಟ ಮಾಡಿದ್ದಾರೆ. ಅವರಲ್ಲಿ ಈಶ್ವರಚಂದ್ರ ವಿದ್ಯಾಸಾಗರ, ಮಹಾತ್ಮಾ ಜ್ಯೋತಿಬಾ ಫುಲೆ, ಬಾಲಗಂಗಾಧರ ತಿಲಕ್ ....ಮುಂತಾದವರು ಪ್ರಮುಖರಾಗಿದ್ದಾರೆ. ೧೯೨೯ರಲ್ಲಿ ಬಾಲ್ಯವಿವಾಹವನ್ನು ಹತೋಟಿಯಲ್ಲಿಡುವ ಕಾನೂನು ಜಾರಿಯಾಗಿದೆ. ಆದರೂ ಬಾಲ್ಯವಿವಾಹಗಳು ಇಂದಿಗೂ ನಡೆಯುತ್ತಿರುವುದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತವೆ. "ಬಾಲ್ಯ ವಿವಾಹವಾದವರನ್ನು ಸರ್ಕಾರಿ ಸೇವೆಗೆ ಹಾಗೂ ವಿಶ್ವವಿದ್ಯಾನಿಲಯ ಪ್ರವೇಶಿಸಲು ನಿಷೇಧಿಸಬೇಕು" ಎಂದು ಬಾಲಗಂಗಾಧರ ತಿಲಕ್ ಅವರು ಹೇಳಿರುವುದನ್ನು ರಾಜ್ಯಶಾಸ್ತ್ರಜ್ಞ ಸುರೇಶ (೨೦೦೧, ೨೨೬) ಅವರು ಉಲ್ಲೇಖಿಸಿದ್ದಾರೆ. ಜ್ಯೋತಿಬಾ ಫುಲೆಯವರು ಬಾಲ್ಯವಿವಾಹವನ್ನು ಖಂಡಿಸಿದರು. ವಿಧವೆಯರ ಕೇಶಕರ್ತನವನ್ನು ತಡೆಯಲು ಹಜಾಮರನ್ನು ಸಂಘಟಿಸಿದರು. ಈ ಸಮಾಜ ಸುಧಾರಣೆಯ ಪ್ರಭಾವವನ್ನು ಕನ್ನಡ ಸಾಹಿತ್ಯದಲ್ಲಿ ಗುರುತಿಸಬಹುದು. ತಿರುಮಲಾಂಬಾ ಅವರ 'ನಭಾ' (೧೯೧೪) ಕಾದಂಬರಿಯಲ್ಲಿ ತಲೆ ಬೋಳಿಸಿಕೊಳ್ಳುವುದರ ವಿರುದ್ಧ ವಿಧವೆಯ ಪ್ರತಿಭಟನೆಯಿದೆ. ಆದರೆ ಕೆಲವೊಂದು ಕಾದಂಬರಿಗಳಲ್ಲಿ ಧಾರ್ಮಿಕ ಸಂಪ್ರದಾಯವನ್ನು ಒಪ್ಪಿಕೊಂಡು ಮೌನವಾಗಿ ಸಹಿಸುವುದೂ ಸಹ ಚಿತ್ರಿಸಲಾಗಿದೆ. ಚದುರಂಗರ 'ವೈಶಾಖ' (೧೯೪೦) ಕಾದಂಬರಿಯಲ್ಲಿ ವಿಧವೆ ಸುಶೀಲೆ ನಿದ್ದೆಯಲ್ಲಿದ್ದ ರುಕ್ಮಿಣಿಯ ತಲೆಕೂದಲನ್ನು ಕತ್ತರಿಸಲು ಮುಂದಾದುದನ್ನು ತಿಳಿದಾಗಲೂ ರುಕ್ಮಿಣಿ ಮೌನ ಒಡೆಯುವುದಿಲ್ಲ

ಸಮಕಾಲಿನ ಲೇಖಕರಲ್ಲಿ ಕಾರಂತರ ಮತ್ತು ತಿರುಮಲಾಂಬ ಅವರ ವಿಚಾರಗಳಲ್ಲಿ ಸಾಮ್ಯವನ್ನು ಗುರುತಿಸಬಹುದು.

ಹಣೆಯ ಕುಂಕುಮವು ಅಳಿಸಿ ಹೋಯಿತೆಂದರೆ, ತಲೆಯೊಳಗಣ ಬುದ್ಧಿ, ಹೃದಯದ ಭಾವನೆ, ಮನದ ಆಸೆ, ಆತ್ಮದ ಆಕಾಂಕ್ಷೆಗಳೆಲ್ಲ ನಶಿಸಿ ಹೋಗಲಾರವು. ಆದ್ದರಿಂದಾಗಿಯೇ ಮಾಲತಿಯು ಪ್ರಪುಲ್ಲನನ್ನು ಪ್ರೀತಿಸುತ್ತಿದ್ದಳು. ಅವನನ್ನು ಮದುವೆಯಾಗಲು ಬಯಸಿದಳು. ಅವಳ ತಾಯಿ ವಿಧವಾ ವಿವಾಹಕ್ಕೆ ಸಮ್ಮತಿಯನ್ನು ನೀಡಿದಳು. ಆದರೆ ತಂದೆ ಅದನ್ನು ಸಮ್ಮತಿಸಲಿಲ್ಲ, ಇದರಿಂದ ಪುರುಷ ಪ್ರಧಾನ ಸಮಾಜ ವಿಧವಾ ವಿವಾಹವನ್ನು ಪ್ರೋತ್ಸಾಹಿಸುವುದು ತುಂಬ ಕಡಿಮೆ ಎಂಬುದು ಸ್ಪಷ್ಟವಾಗುತ್ತದೆ. ಮಾಲತಿಯು ತಂದೆಯ ಮಾತನ್ನು ಧಿಕ್ಕರಿಸಿ ಮದುವೆಯಾಗಲು ಅಣಿಯಾಗುತ್ತಾಳಾದರೂ ಪುರುಷ ಪ್ರಧಾನ ಸಮಾಜದ ಪ್ರತೀಕವೆನಿಸಿದ ಪ್ರಪುಲ್ಲನು ಅಸಹಾಯಕತೆಯಿಂದ ಮದುವೆಗೆ ನಿರಾಕರಿಸುತ್ತಾನೆ. ಮಾಲತಿಯು ಪ್ರೇಮಕ್ಕಾಗಿ ಸಮಾಜ, ಬಂಧು ಬಳಗವನ್ನೆಲ್ಲ ಲೆಕ್ಕಿಸದೆ ಪ್ರಪುಲ್ಲನ ಸಲುವಾಗಿ ತಂದೆಗೆ ವಿರುದ್ಧವಾಗುತ್ತಾಳೆ. ಆದರೆ ಮಾಲತಿಯು ಯಾರ ಸಲುವಾಗಿ ಬಂದಳೋ ಅವರೇ ದೂರವಾಗುವುದೆಂದರೆ ಇದಕ್ಕಿಂತ ಹೆಚ್ಚಿನ ವಿಡಂಬನೆಯು ಜಗತ್ತಿನಲ್ಲಿ ಇನ್ನೊಂದಿಲ್ಲವೆಂದು ದುಃಖಿಸುತ್ತಾಳೆ. ತನ್ನ ಹೃದಯದೊಳಗಿಂದ ಪ್ರೇಮವೆಂಬ ಭಾವನೆಯನ್ನು ಕಿತ್ತು ಹಾಕುತ್ತಾಳೆ. ಅವಳ ಪ್ರತಿಭಟನೆಯ ವಿಚಾರಗಳು ಕೇವಲ ಘೋಷಣೆಯಾಗಿ ಉಳಿಯುತ್ತವೆ. ಇದರಿಂದ ಮಾಲತಿಯ ಬದುಕು ಅಸ್ಥಿರತೆಗೆ ಕಾರಣವಾಗುತ್ತದೆ.

ಮಾಲತಿಯ ತಂದೆ ಮಧುಕರನು ತನ್ನ ಹೆಂಡತಿ ಸತ್ತ ಕೆಲವೇ ದಿನಗಳಲ್ಲಿ ಮರುಮದುವೆಯಾಗುವುದನ್ನು ಕಂಡು ಅವಳು ತುಂಬ ಸಂಕಟಪಡುತ್ತಾಳೆ. ತನ್ನ ಮುಪ್ಪಿನ ತಂದೆ ಪುನರ್ವಿವಾಹಕ್ಕೆ ಸಿದ್ಧವಾಗುವುದು, ಓರ್ವ ಬಾಲಕಿಯನ್ನು ವಿಧವೆ ಮಾಡಲೆಂದೇ ಎಂದು ಅವಳಿಗೆ ಅನ್ನಿಸುತ್ತದೆ.

'ಕನ್ಯಾಬಲಿ' ಕಾದಂಬರಿಯಲ್ಲಿ ಮಾಲತಿಯು ಆಧುನಿಕ ಪ್ರಗತಿಪರ ವಿಚಾರಗಳಿಂದ ವಿಧವೆಯರ ಗೋಳಿನ ಸ್ಥಿತಿಯನ್ನು ಖಂಡಿಸುತ್ತಾಳಾದರೂ ಪರಿಸ್ಥಿತಿಯ ಅಸಹಾಯಕತೆಯಿಂದ ಜೀವನದಲ್ಲಿ ಕಷ್ಟಕ್ಕೀಡಾಗುತ್ತಾಳೆ. ಪ್ರಚಲಿತ ವಿಧವಾ ಸಮಸ್ಯೆ, ಬಾಲ್ಯವಿವಾಹ ಹಾಗೂ ವೇಶ್ಯಾ ಸಮಸ್ಯೆಯಂತಹ ಸಮಸ್ಯೆಗಳಿಗೆ ಹೆಣ್ಣು ಹೇಗೆ ಬಲಿಯಾಗುತ್ತಾಳೆ ಎಂಬುದರ ಚಿತ್ರಣವಿದೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಿಗೊಂದು ನ್ಯಾಯ, ಸ್ತ್ರೀಯರಿಗೊಂದು ನ್ಯಾಯ ಇರುವುದರಿಂದಲೇ ವಿಧವೆಯರು ವಿಧವೆಯರಾಗಿಯೇ ಉಳಿಯುತ್ತಿದ್ದಾರೆಂಬುದು 'ಕನ್ಯಾಬಲಿ' ಕಾದಂಬರಿಯ ವಿಷಯದಿಂದ ಸ್ಪಷ್ಟವಾಗುತ್ತದೆ. ಕೇಶಮುಂಡನೆಗೆ ಬಂದಿದ್ದ ಕ್ಷೌರಿಕನನ್ನು, ತಂದೆಯನ್ನು ಧೈರ್ಯದಿಂದ ತಡೆಯುವ ಮಾಲತಿಯು, ಹಸಿವಿನಿಂದಾಗಿ ವೇಶ್ಯೆಯಾಗುವುದು ವಾಸ್ತವವೆನಿಸುವುದಿಲ್ಲ, ಬದಲಿಗೆ ಅದು ಕಾದಂಬರಿಕಾರರ ಧೋರಣೆಯಾಗಿರಬಹುದು ಎಂಬ ಅನುಮಾನ ಬರುತ್ತದೆ. ಆದಾಗ್ಯೂ ವಸಾಹತುಶಾಹಿ ಸಂದರ್ಭದಲ್ಲಿ ಆಗಿನ ಆಧುನಿಕವಾದಿಗಳು ಸ್ತ್ರೀ ವಿದ್ಯಾಭ್ಯಾಸ, ವಿಧವಾ ಸಮಸ್ಯೆ ಮುಂತಾದವುಗಳನ್ನು ಪ್ರಮುಖ ಚರ್ಚೆಯಾಗಿ ಬೆಳೆಸಿರುವುದನ್ನು ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ.

ಹೆಣ್ಣು ಮದುವೆಯ ಬಗ್ಗೆ ಇಟ್ಟ ಭರವಸೆ, ಭವಿಷ್ಯದ ಕನಸು, ಮುಂದಿನ ಬಾಳು ಹಾಳಾಗಿ, ಆಕೆಯ ಬದುಕೇ ಕಮರಿ ಹೋಗುವ ಸಂಭವವಿದೆ. ದಾಂಪತ್ಯ ಜೀವನದ ವಿವಿಧ ಆಯಾಮಗಳನ್ನು ಸೆರೆ ಹಿಡಿಯುತ್ತ, ದಾಂಪತ್ಯದ ವಿಷಮತೆಯನ್ನು ರೂಢಿಗತವಾದ ಅಂಧಶ್ರದ್ಧೆಯ ಸಂಕೇತದ ಮೂಲಕ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತು 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಅಶಿಕ್ಷಿತ ಸಮಾಜದ ಶಾಸ್ತ್ರ ಸಂಪ್ರದಾಯಗಳು ವಿಷಮ ದಾಂಪತ್ಯದ ಸಂರಕ್ಷಣೆಗಾಗಿ ವ್ಯಕ್ತಿಯ ವಿನಾಶವನ್ನು ಪರೋಕ್ಷವಾಗಿ ಪ್ರೋತ್ಸಾಹಿಸುತ್ತವೆ ಎಂಬುದು ಕಾದಂಬರಿಯ ಆಶಯವಾಗಿದೆ. 'ಪತಿ ಹೇಗಿದ್ದರೂ ಅವನನ್ನು ಅನುಸರಿಸು, ಅವನಿಗೆ ನಿಷ್ಠಳಾಗಿ ಬಾಳು, ಪತಿಯೇ ನಿನ್ನ ಸರ್ವಸ್ವ' ಎಂಬ ಪರಂಪರಾಗತ ನಿಲುವಿಗಿಂತ ಸಂಪೂರ್ಣ ಭಿನ್ನವಾದ ನಿಲುವನ್ನು ಹೊಂದಿದ ಸ್ತ್ರೀ ಪಾತ್ರಗಳ ಚಿತ್ರಣ ಈ ಕಾದಂಬರಿಯಲ್ಲಿದೆ.

ಸುನಾಲಿನಿ-ಅಣ್ಣಪ್ಪ ಕಮ್ತಿಯ ದಾಂಪತ್ಯ ಜೀವನ ಸಾಮರಸ್ಯದಿಂದ ಕೂಡಿರಲಿಲ್ಲ, ವಿದ್ಯಾವಂತೆಯಾದ ಸುನಾಲಿನಿ ಬಿಡುವಿನ ವೇಳೆಯಲ್ಲಿ ಪತ್ರಿಕೆಯನ್ನು ಓದುತ್ತಿದ್ದಳು, ವ್ಯಾಪಾರಸ್ಥನಾದ ಅಣ್ಣಪ್ಪ ಕಮ್ತಿಯು ಯಾವಾಗಲೂ ವ್ಯಾಪಾರದ ಯೋಚನೆಯಲ್ಲಿ ಇರುತ್ತಿದ್ದನು. ವ್ಯಾಪಾರದ ಮನೋಭಾವದಿಂದ ಹೊರಬರುತ್ತಿರಲಿಲ್ಲ, ಇದರಿಂದ ಗಂಡ ಹೆಂಡಿರ ಅಭಿರುಚಿಗಳು ಭಿನ್ನವಾಗಿದ್ದು ಅವರಲ್ಲಿ ಹೊಂದಾಣಿಕೆಯಿರಲಿಲ್ಲ, ಅವನು ಹೆಂಡತಿಯೊಂದಿಗೆ ಸುಖವಾಗಿ ಸ್ವಲ್ಪ ಸಮಯವನ್ನೂ ಕಳೆಯುತ್ತಿರಲಿಲ್ಲ, ಅಂಗಡಿಯಿಂದ ಮನೆಗೆ ತಡಮಾಡಿ ಬರುವುದು ಮತ್ತು ಬೆಳಿಗ್ಗೆ ಬೇಗನೆ ಹೋಗುವುದು ಅವನ ದಿನನಿತ್ಯದ ರೂಢಿಯಾಗಿತ್ತು. ಮಾತೆತ್ತಿದರೆ ಬಾಯಿ ತುಂಬ ಅಂಗಡಿಯ ಪದಗಳೆ, ಪ್ರೀತಿಯ ಮಾತುಗಳೇ ಅವನಲ್ಲಿರಲಿಲ್ಲ, ಇದರಿಂದ ಸುನಾಲಿನಿಗೆ ದಾಂಪತ್ಯ ಜೀವನ ತುಂಬ ಬೇಸರವಾಗಿತ್ತು. "ಸಂಸಾರಕ್ಕೆ ನೆರವಾಗದ ವಿದ್ಯೆ ಎಷ್ಟಿದ್ದರೇನು? ಎರಡು ಅಪರಿಚಿತ ಹೆಣ್ಣುಗಂಡುಗಳನ್ನು

ಬೇರೆ ಬೇರೆ ಬೆಳೆಸಿ, ಒಂದು ದಿವಸ ಅವರನ್ನು ಮಂಟಪದೊಳಗೆ ಕುಳ್ಳಿರಿಸಿ ದಾಂಪತ್ಯದಲ್ಲಿ ಬೆಸೆಯುತ್ತೇವೆ ಎಂಬುದು ಭ್ರಮೆಯಲ್ಲವೆ?" (೨೦೦೩, ಸಂ-೩, ಕಾ-೨, ೧೧೬) ಎಂದು ಮದುವೆಯ ಬಗೆಗೆ ವೈಚಾರಿಕವಾಗಿ ಯೋಚಿಸುತ್ತಾಳೆ. ನಿಜವಾದ ದಾಂಪತ್ಯ ಹೇಗಿರಬೇಕು ಎನ್ನುವುದರ ಬಗೆಗೆ ಅವಳಿಗೆ ಸ್ಪಷ್ಟವಾದ ಕಲ್ಪನೆಯಿದೆ. ಅಗ್ನಿ ಮುಂದೆ ಏಳು ಹೆಜ್ಜೆಗಳನ್ನು ತುಳಿದ ಮಾತ್ರಕ್ಕೆ ಸಂಸಾರವೆಲ್ಲ ಸುಖಮಯವಾಗಿರುವುದು ಎಂದು ತಿಳಿಯುವುದು ಮೂರ್ಖತನವಾದೀತು. ಮದುವೆಯ ಕುರಿತು ಇಂಥಹ ಮೌಢ್ಯವನ್ನು ಬಯಲಿಗೆಳೆಯುತ್ತಾಳೆ.

ದಾಂಪತ್ಯದಲ್ಲಿ ಗಂಡ ಹೆಂಡಿರ ನಡುವೆ ಪರಸ್ಪರ ತಿಳುವಳಿಕೆ, ಹೊಂದಾಣಿಕೆ, ಗೌರವ ಇರಬೇಕು. ಒಬ್ಬರ ಭಾವನೆಗಳಿಗೆ ಮತ್ತೊಬ್ಬರು ಸ್ಪಂದಿಸಬೇಕು, ತಿಕ್ಕಾಡಬಾರದು ಎಂಬುದು ಸುನಾಲಿನಿಯ ಧೋರಣೆಯಾಗಿತ್ತು. ಹೆಣ್ಣು ತಾನು ಹುಟ್ಟಿ ಬೆಳೆದ ಮನೆಯನ್ನು ತೊರೆದು ಅಪರಿಚಿತ ಮನೆಗೆ ಬಂದು ಸೇರುತ್ತಾಳೆ. ಗಂಡ, ಅತ್ತೆ, ಮಾವಂದಿರ ನಡುವೆ ಹೊಂದಾಣಿಕೆಗೆ ಸ್ವಲ್ಪ ಕಷ್ಟವಾಗುತ್ತದೆ. ಏಕೆಂದರೆ ಅವಳಿಗೆ ಅವರ ನಡವಳಿಕೆಯ ಬಗೆಗೆ ಏನೂ ತಿಳಿದಿರುವುದಿಲ್ಲ, ಗಂಡ ತನ್ನ ಮನೆಗೆ ಹೆಂಡತಿಯಾಗಿ ಬಂದವಳ ಮನಸ್ಸನ್ನು ಅರಿತುಕೊಂಡು ಹೊಂದಾಣಿಕೆಯಿಂದ ಜೀವನವನ್ನು ಸಾಗಿಸಬೇಕು. ಆದರೆ ಅದು ಈಡೇರದಿದ್ದಾಗ ಅವಳು ತುಂಬ ದುಃಖಿಸುತ್ತಾಳೆ. "ಸಿಟ್ಟು, ದ್ವೇಷ, ತಾಳ್ಮೆರಹಿತ ಜೀವನ ಯುವ ಜನತೆಯ ರಕ್ತನಾಳಗಳ ಮೃದುತ್ವವನ್ನು ಹಾಳು ಮಾಡಿ ಹೃದಯ ಕಾಯಿಲೆಗಳಿಗೆ ಮತ್ತು ಆತ್ಮಹತ್ಯೆಗೆ ದಾರಿ ಮಾಡಿಕೊಡುತ್ತದೆ" ಎಂಬ ವಿಶ್ವನಾಥರ (೨೦೦೧, ೨೧) ಹೇಳಿಕೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವಳು ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲಳಾಗುತ್ತಾಳೆ. 'ಗಂಡು ಹೆಣ್ಣಿನ ವಿರಸದಲ್ಲಿ ಹೆಚ್ಚು ಬಾಧೆಗೆ ಒಳಗಾಗುವವಳು ಹೆಣ್ಣೆ' ಎಂಬ ಪುರುಷ ಪ್ರಧಾನ ನಿಲುವಿನಂತೆ ಸುನಾಲಿನಿಯು ಕೊರಗುತ್ತಾಳೆ.

"ವ್ಯಕ್ತಿಗಳು ಹೆಚ್ಚೆಚ್ಚು ಬುದ್ಧಿಕೇಂದ್ರಿತವಾದ ಜ್ಞಾನವನ್ನು ಗಳಿಸಿಕೊಳ್ಳುತ್ತಾ, ಹೃದಯ ಕೇಂದ್ರಿತವಾದ ವಿವೇಕದಿಂದ ವಂಚಿತರಾಗಿ, ವ್ಯಕ್ತಿತ್ವದಲ್ಲಿ ಸಮತೋಲನವನ್ನು ಕಳೆದುಕೊಂಡು ಕ್ರಾಂತಿಯ ಮನೋಭಾವನೆಯನ್ನು ತೋರ್ಪಡಿಸುತ್ತಾರೆ" ಎಂದು ಚಿದಾನಂದ ಗೌಡರು ಸರಿಯಾಗಿಯೇ ಗುರುತಿಸಿದ್ದಾರೆ(ನವೆಂಬರ್ ೯,೨೦೦೮) ವಿದ್ಯಾವಂತ, ತಾರ್ಕಿಕವಾದಿ ಜೀವನದಲ್ಲಿ ಏಟು ತಿಂದ ಮೇಲೆ ಎಷ್ಟೋ ಸಲ ಅವನ ವಿವೇಚನಾ ಶಕ್ತಿ ಊಹಿಸಲಾರದಷ್ಟು ಕಡಿಮೆಯಾಗಿ ಹೇಳಿದ್ದನ್ನೆಲ್ಲ ನಂಬುವ ಮಟ್ಟಕ್ಕೆ ಇಳಿಯುವುದು ಮಾನಸಿಕ ಪ್ರವೃತ್ತಿಯಾಗಿದೆ. ಮದುವೆಯ ಶಾಸ್ತ್ರ ಕುರಿತು ವೈಚಾರಿಕವಾಗಿ ಯೋಚಿಸುವ ಸುನಾಲಿನಿ ಮೌಢ್ಯದಿಂದಾಗಿ ಸಮಾಧಿಗೆ ಹೋಗಿ ದಾಂಪತ್ಯ ಸುಖವಾಗಿರಲಿ ಎಂದು ಬೇಡಿಕೊಳ್ಳುವುದು ಅವಳ ಮಾನಸಿಕ ದೌರ್ಬಲ್ಯವಾಗಿದೆ.

'ಸತಿ ಸಹಗಮನ ಪದ್ಧತಿ'ಯ ಆಚರಣೆ ಹಿಂದೂ ಧರ್ಮದ ಮೌಢ್ಯದ ಸಂಕೇತವಾಗಿದೆ. ಇದರ ಆಚರಣೆಯನ್ನು ಪುರಾತನ ಕಾಲದಿಂದಲೂ ಗುರುತಿಸಬಹುದು. ಇದನ್ನು ತಡೆಯಲು ಹಲವಾರು ಸಾಮಾಜಿಕ ಸುಧಾರಕರು ಪ್ರಯತ್ನಿಸಿದ್ದಾರೆ. ಅವರಲ್ಲಿ ರಾಜಾರಾಮ ಮೋಹನರಾಯರು ಬಹಿರಂಗವಾಗಿ ಖಂಡಿಸಿದವರಲ್ಲಿ ಮೊದಲಿಗರು. ೧೮ನೆ ಶತಮಾನದ ಹೊತ್ತಿಗೆ 'ಸತಿ ಪದ್ಧತಿ'ಯನ್ನು ಹಿಂದೂ ಸಮಾಜದ ಶ್ರೇಷ್ಠ ಕುರುಹಾಗಿ, ಹಿಂದೂ ಸ್ತ್ರೀಯ ಪಾತಿವ್ರತ್ಯದ ಮೌಲ್ಯವಾಗಿ ಆಚರಿಸಲಾಗುತ್ತಿತ್ತು. ಲಾರ್ಡ್ ವಿಲಿಯಂ ಬೆಂಟಿಂಗ್ ಮತ್ತು ರಾಜಾರಾಮ ಮೋಹನರಾಯರ ಹೋರಾಟದ ಫಲವಾಗಿ ೧೮೨೯ರಲ್ಲಿ ಸತಿಪದ್ಧತಿಯನ್ನು ನಿಷೇಧಿಸಲಾಯಿತು. ಆದರೆ ಕಾಯ್ದೆಯನ್ನು ಅಣಕಿಸುವ ಹಾಗೆ ಹಲವಾರು ಪ್ರತಿಷ್ಠಿತ ಶಿಕ್ಷಿತ ಕುಟುಂಬಗಳಲ್ಲಿ ಸ್ವಾತಂತ್ರ್ಯ ನಂತರದಲ್ಲೂ

ಸತಿಪ್ರಕರಣಗಳು ನಡೆದವು. ೧೯೮೭ ಸೆಪ್ಟೆಂಬರ್ ೪ರಂದು ರಾಜಸ್ಥಾನದ ಶಿಕಾರ್ ಜಿಲ್ಲೆಗೆ ಸೇರಿದ 'ದೇವರಾತಿ' ಎಂಬ ಹಳ್ಳಿಯಲ್ಲಿ ೧೮ ವರ್ಷದ 'ರೂಪ್ ಕನ್ವರ್' ಎಂಬ ರಜಪೂತ ಯುವತಿ ತನ್ನ ಪತಿಯ ಚಿತೆಯೇರಿ ಸತಿಯಾದಳು. ಈ ಪ್ರಕರಣವನ್ನು ಸಮಾಜದ ಹಲವು ಮುಖಂಡರುಗಳು, ರಾಜಕೀಯ ಧುರೀಣರು ಸಮರ್ಥಿಸಿದ್ದಾರೆ. ಅವರಲ್ಲಿ ಹಲವಾರು ಮಹಿಳೆಯರೂ ಸಹ ಇದ್ದರು. ಈ 'ಸತಿ ಪ್ರಕರಣ'ವನ್ನು ಕಾದಂಬರಿಕಾರರರು 'ಸರಸಮ್ಮನ ಸಮಾಧಿ' ಕಾದಂಬರಿಯ ಮುನ್ನುಡಿಯಲ್ಲಿ (೨೦೦೩, ಸಂ-೩, ಕಾ-೨) ಉಲ್ಲೇಖಿಸಿ, ಖಂಡಿಸಿದ್ದಾರೆ. ೨೦೦೩ರಲ್ಲಿ ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಅನೇಕ ಸತಿ ಪ್ರಕರಣಗಳು ಮರುಕಳಿಸಿವೆ.

ಸತ್ತ ಪತಿಯೊಂದಿಗೆ ಸಾಯುವುದರಿಂದ ಪತ್ನಿ ತನ್ನ ಪತಿಯ ಆತ್ಮದೊಂದಿಗೆ ಪಯಣಿಸಬಹುದು ಎಂದು ಹಿಂದೂ ಧರ್ಮದ ಸಂಪ್ರದಾಯವಾದಿಗಳು ನಂಬಿಕೊಂಡು ಬಂದಿದ್ದಾರೆ. ಆದ್ದರಿಂದಲೇ ಸತಿ ಹೋದಂತಹ ಸ್ತ್ರೀಯರನ್ನು ಪೂಜಿಸುವುದು ಸಮಾಜದಲ್ಲಿ ವಾಡಿಕೆಯಾಗಿದೆ. ಅವರ ಸಮಾಧಿಗೆ ಹರಕೆ ಸಲ್ಲಿಸುವುದನ್ನು ಇಂದಿಗೂ ಗುರುತಿಸಲಾಗುತ್ತಿದೆ. ಅಸಂಖ್ಯ ಊರುಗಳಲ್ಲಿ ಪೂಜೆ ಪುನಸ್ಕಾರ ಪಡೆಯುತ್ತಿರುವ ಮಾಸ್ತಿಕಟ್ಟೆ, ಮಾಸ್ತಿಕಲ್ಲು, ಮಹಾಸತಿಯ ದೇವಾಲಯಗಳಿವೆ. ಬಂಜೆಯರು, ಜೀವನದಲ್ಲಿ ಅತೀವ ಕಷ್ಟ ಕಾರ್ಪಣ್ಯಗಳಿಗೆ ತುತ್ತಾದವರು, ಅವುಗಳ ಪರಿಹಾರಕ್ಕಾಗಿ ಮಹಾಸತಿಗೆ ಹರಕೆ ಹೊತ್ತು ಪೂಜೆ ಸಲ್ಲಿಸುತ್ತಾರೆ. ಸಮಾಜದಲ್ಲಿ ನಡೆಯುವ ಇಂಥಹ ಮೂಢ ನಂಬಿಕೆಗಳ ಪ್ರತಿನಿಧಿಯಾಗಿ ಸುನಾಲಿನಿಯ ಪಾತ್ರವನ್ನು ಚಿತ್ರಿಸಲಾಗಿದೆ. ಕಾರಂತರ ಸಮಕಾಲೀನರಾದ ಮಾಸ್ತಿಯವರು ತಮ್ಮ 'ಚಿಕ್ಕ ಮಲ್ಲಮ್ಮ'(೧೯೪೮) ಕವಿತೆಯಲ್ಲಿ ಸತಿ ಸಹಗಮನ ಪದ್ಧತಿಯನ್ನು ವೈಭವೀಕರಿಸಿ ಚಿತ್ರಿಸಿದ್ದಾರೆ. ಬದಲಾವಣೆಯ ಯುಗದಲ್ಲಿಯೂ ಮಾಸ್ತಿಯವರ ಈ ರೀತಿಯ ಧೋರಣೆ ಜೀವವಿರೋಧಿಯಾಗುತ್ತದೆ. "ಪುರುಷನ ಎಲ್ಲ ಕಷ್ಟಗಳನ್ನು ತಡೆದುಕೊಂಡು ಸಂಸಾರ ನಡೆಸುವ, ಗುಲಾಮರಂತಿರುವ ಹೆಣ್ಣುಮಕ್ಕಳ ಪಾತ್ರಗಳು ಮಾಸ್ತಿಯವರಿಗೆ ಅಪಾರ ಅಚ್ಚುಮೆಚ್ಚು. ಪಾತಿವ್ರತ್ಯ ಇವರ ಮುಖ್ಯ ಮೌಲ್ಯವಾಗಿ ಬರುತ್ತದೆ" ಎಂದು ಎಚ್.ಎಸ್.ಮುಕ್ತಾಯಕ್ಕನವರು (೧೯೯೮: ೬೯) ಗುರುತಿಸಿರುವುದು ವಾಸ್ತವವೆನಿಸುತ್ತದೆ. ಎಂ.ಎಸ್.ಪುಟ್ಟಣ್ಣನವರ 'ಮಾಡಿದುಣ್ಣೋ ಮಾರಾಯ' (೧೯೧೫) ಕಾದಂಬರಿಯಲ್ಲಿ ಸತಿ ಸಹಗಮನ ಪದ್ಧತಿಯ ವೈಭವೀಕರಣವಿದೆ. ಆದರ್ಶ, ತ್ಯಾಗ, ಬಲಿದಾನದ ಹೆಸರಿನಲ್ಲಿ ಅಸಹಾಯಕ ಮುಗ್ಧ ಹೆಣ್ಣೊಬ್ಬಳನ್ನು ದೈವತ್ವಕ್ಕೇರಿಸುವ ಹಾಗೂ ಬಲಿಯಾದ ಹೆಣ್ಣನ್ನು ಸದ್ಗತಿ ಪಡೆದ ತ್ಯಾಗಮಯಿ ಎಂದು ಬಣ್ಣಿಸುವ ಪ್ರಯತ್ನ ಮಾಡಲಾಗಿದೆ. ವಿಧವೆಯರ ಜೀವನ ತುಂಬ ಕಷ್ಟಕರವಾದುದು. ಅಂತಹ ಪರಿಸ್ಥಿತಿಯಲ್ಲಿ ಲಿಂಗ ತಾರತಮ್ಯದ ಅಸಮಾನತೆಯಲ್ಲಿ ನರಳಿ ಬೇಯುವ ಹೆಣ್ಣಿಗೆ ಆಸರೆ, ಆಶ್ರಯ, ಬೆಂಬಲಗಳಿಲ್ಲದೆ ಹೋದಾಗ ಅವಳಿಗೆ ಸಾವು ಅನಿವಾರ್ಯವಾಗುವಂತೆ ಬಿಂಬಿಸಿಕೊಂಡು ಬಂದಿರುವುದು ನಿಚ್ಚಳವಾಗಿದೆ.

ಆದರೆ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಸರಸ್ವತಿಯ ಸತಿ ಪ್ರಕರಣವನ್ನು ವಿಡಂಬಿಸಲಾಗಿದೆ. ಸರಸ್ವತಿಯು ನೀಲಾಚಲಯ್ಯನ ಹೆಂಡತಿ. ನೀಲಾಚಲಯ್ಯನು ರೋಗದಿಂದ ನರಳುತ್ತಿರಲು ಪ್ರತಿದಿನವೂ ಅವನ ಸೇವೆಯನ್ನು ಮಾಡುತ್ತಿದ್ದಳು. ಆತನು ಬಹಳ ದಿನಗಳವರೆಗೆ ಉಳಿಯದೆ ಸಾವನ್ನಪ್ಪಿದನು. ಸತಿ ಸಹಗಮನ ಪದ್ಧತಿಯಂತೆ ಅವಳು ಎಲ್ಲರ ಸಮ್ಮುಖದಲ್ಲಿ ಊರಿನ ಮುತ್ತೈದೆಯರಿಂದ ಕುಂಕುಮವನ್ನು ಹಚ್ಚಿಕೊಂಡು ಸಹಗಮನ

ಮಾಡಿದಳು. ಮುಂದೇ ಇದುವೇ ಸರಸಮ್ಮನ ಸಮಾಧಿಯಾಯ್ತು. ವಿರಸ ದಾಂಪತ್ಯದಿಂದ ಬಳಲುತ್ತಿರುವವರು ಸಮಾಧಿಗೆ ಹೋಗಿ ದಾಂಪತ್ಯ ಸುಖವಾಗಿರಲಿ ಎಂದು ಹರಕೆ ಹೊರುತ್ತಿದ್ದರು.

ದಾಂಪತ್ಯದ ಸುಖವನ್ನು ಅರಿಯದ ಸರಸಮ್ಮ ಪುರುಷಪ್ರಧಾನ ಸಮಾಜದ ದೌರ್ಜನ್ಯಕ್ಕೆ ಬಲಿಯಾಗಿ ಸತಿಹೋಗಿದ್ದವಳು. ಅವಳು ಇತರರ ದಾಂಪತ್ಯವನ್ನು ಸರಿಮಾಡಲು ಸಾಧ್ಯವಿಲ್ಲ, ಅಂಥವಳ ಸಮಾಧಿಗೆ ಹೋಗಿ ಹರಕೆ ಸಲ್ಲಿಸುವುದು ಸ್ತ್ರೀಯರ ಮೌಢ್ಯವಾಗಿದೆ ಎಂಬುದನ್ನು ಪಾತ್ರಗಳ ಹಿನ್ನೆಲೆಯಲ್ಲಿ ವಿಡಂಬಿಸಲಾಗಿದೆ.

"ಸಾವಿನ ನಂತರದಲ್ಲೂ ಉಳಿದು ಹೋಗಿರಬಹುದಾದ ಹೆಣ್ಣಿನ ದುರುಂತವೊಂದನ್ನು ವರ್ತಮಾನದಲ್ಲೂ ಗುರುತಿಸಲು ಸಾಂಕೇತಿಕವಾಗಿ ಪ್ರೇತದ ಕಲ್ಪನೆಗೊಂದು ಮನುಷ್ಯ ರೂಪಕೊಟ್ಟು ಸಂಭಾಷಿಸುವ ಸೃಜನಶೀಲಾತ್ಮಕವಾದ ಪ್ರಯತ್ನ ಇದಾದ್ದರಿಂದಲೇ ಇನ್ನಿತರ ದೆವ್ವದ ಕತೆಗಳಿಗಿಂತಲೂ ಕಾರಂತರ ಸರಸಮ್ಮನ ಸಮಾಧಿ ವಿಶಿಷ್ಟವಾಗಿ ನಿಲ್ಲುತ್ತದೆ" ಲಕ್ಷ್ಮೀಪತಿ ಕೋಲಾರ ಅವರ ಈ ಮಾತು ಸರಿಯಾಗಿಯೆ ಇದೆ. (ನ.ರವಿಕುಮಾರ (ಸಂ) ೧೯೮೨: ೧೮) ಏಕೆಂದರೆ ಇದು ಕಾರಾಂತರ ವ್ಯಂಗ್ಯದರ್ಶನದಿಂದ ಜನಿಸಿದ ಅಪೂರ್ವ ಕೃತಿಯಾಗಿದೆ. ವಿರಸದಾಂಪತ್ಯದಿಂದ ನೊಂದ ಜೀವಿಗಳು ಯಾರಿಗೆ ಮೊರೆಯಿಡುವರೋ ಆ ಮಾಸ್ತಿ ಸರಸಮ್ಮನೇ ಅತೃಪ್ತ ಕಾಮದಿಂದ ಜ್ವಲಿಸುತ್ತಿರುವ ಪ್ರೇತವಾಗಿದೆ. ವ್ಯವಸ್ಥೆಯ ಬದಲಾವಣೆಗಿಂತ ಮನುಷ್ಯನ ಮನಸ್ಸಿನಲ್ಲಿ, ಅವನ ಸ್ವಭಾವದಲ್ಲಿ ಪರಿವರ್ತನೆಯಾಗುವುದರಿಂದ ಸಮಾಜ ಬದಲಾಗುತ್ತದೆ ಎಂಬ ಸಾಮಾಜಿಕ ಕಳಕಳಿಯನ್ನು ಕಾದಂಬರಿಯು ಒಳಗೊಂಡಿದೆ. ಆದರೆ "ಉತ್ತರ ಕನ್ನಡ ಜಿಲ್ಲೆಯ ವೆಂಕಟಾಪುರದಲ್ಲಿ ಮಾಸ್ತಿ ಸ್ಮಾರಕದ ಜೊತೆಗೆ ಸಂಗಮರವರಿ ಶಿಲೆಯಲ್ಲಿ ಸುಂದರವಾದ ವಿಗ್ರಹ ಕಟ್ಟಿಸಿ, ಭಕ್ತರಿಂದ ಪೂಜೆಯ ಏರ್ಪಾಡು ಮಾಡಿದ್ದಾರೆ. ಅದೇ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಸೋಡಿಗದ್ದೆಯಲ್ಲಿ ಇಂದಿಗೂ ಮಾಸ್ತಿಯ ಹರಕೆ ವಿಗ್ರಹ ನಿರ್ಮಿಸುವ ಕಲೆ ಜೀವಂತವಾಗಿ ಉಳಿದುಕೊಂಡಿದೆ" ಎಂದು ಜೋತ್ಸ್ನಾ ಕಾಮತ್‌ರವರು (೧೯೯: ೮೯) ಉಲ್ಲೇಖಿಸಿದ್ದಾರೆ. 'ನಾಗರಿಕತೆಯೆನ್ನುವುದು ಮನಸ್ಸಿನಲ್ಲಿ ಉದಯಿಸುತ್ತದೆಯೇ ಹೊರತು ಹುಟ್ಟಿಸಲಾಗುವುದಿಲ್ಲ 'ಎಂಬುದು ಸತ್ಯವಾಗಿದೆ,

ಅಂದಿನ ಸಮಕಾಲೀನ ಸಮಾಜದಲ್ಲಿ ಸತಿ ಸಹಗಮನ ಪದ್ಧತಿಯು ಆದರ್ಶವಾಗಿತ್ತು. ಸತಿ ಸಹಗಮನದಂತಹ ಮಾನವೀಯ ವಿಚಾರಗಳ ವಿರುದ್ಧವಾಗಿ ಬರೆಯುವ ಕಾರಂತರದು ಒಂದು ನೆಲೆ. ಸತಿ ಸಹಗಮನವನ್ನು ವೈಭವೀಕರಿಸಿದ ಎಂ.ಎಸ್.ಪುಟ್ಟಣ್ಣ ಮತ್ತು ಮಾಸ್ತಿಯಂತಹ ಬರಹಗಾರರದು ಇನ್ನೊಂದು ನೆಲೆ. ಸಮಕಾಲೀನ ಬರಹಗಾರರ ಎರಡು ವಿಭಿನ್ನ ಧೋರಣೆಗಳನ್ನು ಇವುಗಳಲ್ಲಿ ಗುರುತಿಸಬಹುದು.

ಬಂದದ್ದನ್ನೆಲ್ಲ ತಡೆದುಕೊಂಡು ಬದುಕಿನ ಹೋರಾಟದಲ್ಲಿ ಸೋತರೂ ಸೋಲೊಪ್ಪದೆ, ನೊಂದರೂ ಕೈಚೆಲ್ಲಿ ಅಳುತ್ತ ಕೂರದೆ ತನ್ನ ಮಕ್ಕಳಿಗಾಗಿ, ಗಂಡನಿಗಾಗಿ ಹಾಗೂ ಸಂಸಾರಕ್ಕಾಗಿ ಒಂದೇ ಸಮನೆ ಎಡೆಬಿಡದೆ ಶ್ರಮಿಸಿ ಬಾಳನ್ನು ಹಸನಾಗಿಸುವ ಸ್ತ್ರೀಯರ ಬದುಕನ್ನು ಕುರಿತು 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ವರ್ಣಿಸಲಾಗಿದೆ. ಜೀವನಾನುಭವದ ಪರಡಿಯಲ್ಲಿ ಸೊಸಿಕೊಂಡಾಗ ತನ್ನದೇ ಆದ ನಿರೀಕ್ಷಣೆಯಿಂದ ಹುಟ್ಟುವ ಮತಿತಾರ್ಥ ಚಿಂತನೆಗಳು ಅವರಲ್ಲಿ ವೈಚಾರಿಕತೆಯು ಬೆಳೆಯಲು ಕಾರಣವಾಗಿದೆ ಎಂಬುದು ಕಾದಂಬರಿಯ ಆಶಯ.

ಸರಸ್ವತಿಯು ಪ್ರತಿಯೊಂದು ವಿಷಯದ ಬಗೆಗೆ ಆಸಕ್ತಿಯನ್ನು ಹೊಂದಿದ್ದಳು. ಜೀವನದುದ್ದಕ್ಕೂ ಅವುಗಳನ್ನು ಕುರಿತು ಅರಿಯಲು ಪ್ರಯತ್ನಿಸುತ್ತಿದ್ದಳು. ಎಂಥಹ ದುರ್ಭರವಾದ ಸ್ಥಿತಿಯಲ್ಲಿಯೂ ಬದುಕನ್ನು ಲವಲವಿಕೆಯಿಂದ ಎದುರಿಸುತ್ತ ಸಮಸ್ಯೆಗಳಿಗೆ ಎದೆಗುಂದದೆ ಜೀವಿಸುತ್ತಿದ್ದಳು.

ತನ್ನ ವೈರಿ ಶಿನಪ್ಪಯ್ಯನು ಮನೆಗೆ ಓಡ್ಲು ಹಾಕಿಸಿದಾಗ ತಾನೂ ಅವನಿಗೆ ಮೀರಿ ಓಡ್ಲು ಹಾಕಿಸಬೇಕೆಂದು ರಾಮ ಐತಾಳರು ಬಯಸುತ್ತಾರೆ. ಅದಕ್ಕಾಗಿ ಹಗಲಿರುಳು ಕಷ್ಟಪಟ್ಟು ದುಡ್ಡು ಸೇರಿಸುತ್ತಾರೆ. ಇದು ಸರಸ್ವತಿಗೆ ಇಷ್ಟವಿರಲಿಲ್ಲ. ಇದನ್ನು ಕಂಡು "ಅಣ್ಣನಿಗೆ ಇದೊಂದು ಹಂಚಿನ ಮನೆ ಗಿರ ಹಿಡಿದಿದೆ. ಮನೆಗೆ ಓಡ್ಲು ಹಾಕಿಸಿದರೆ ಸಾವೇ ಬಾರದೇನು?" (೨೦೦೩, ಸಂ-೩, ಕಾ-೨, ೨೩೮) ಎನ್ನುವಲ್ಲಿ ವಾಸ್ತವಿಕತೆಯ ಪ್ರಜ್ಞೆಯಿದೆ. ವೈರಿಯೊಬ್ಬನು ಮಾಡಿದ್ದಾನೆಂದು ಅವನಂತೆಯೇ ನಾವೂ ಮಾಡಬೇಕೆನ್ನುವುದು ಮತ್ಸರವಾಗುತ್ತದೆಯೇ ಹೊರತು ಸ್ಪರ್ಧೆಯಾಗುವುದಿಲ್ಲ. ವೈರತ್ವದಿಂದ ಏನನ್ನು ಸಾಧಿಸಲಾಗುವುದಿಲ್ಲ. ಸ್ಪರ್ಧೆಯು ಆರೋಗ್ಯಕಾರಿಯಾಗಿರಬೇಕು. ಪ್ರತಿಷ್ಠೆಯ ಭರಾಟೆಯಲ್ಲಿ ಹುಚ್ಚುತನ, ಆವೇಶದಿಂದ ಸ್ಪರ್ಧಿಸುವುದು ಉತ್ತಮವಾದುದಲ್ಲ ಎಂಬುದು ಕಾದಂಬರಿಯ ಆಶಯವಾಗಿದೆ. ಇಂಥಹ ಘಟನೆಗಳನ್ನು ಪ್ರಸ್ತುತ ಸಮಾಜದಲ್ಲಿಯೂ ಕಾಣುತ್ತೇವೆ. ಅವುಗಳ ಪ್ರಮಾಣ ಕಡಿಮೆಯಾಗಲಿ ಎಂಬುದು ಕಾದಂಬರಿಯ ಧೋರಣೆಯಾಗಿದೆ. ಇರುವುದರಿಂದ ಸಂತೋಷಿಸುವುದನ್ನು ಕಲಿತಾಗ ಸಂತೃಪ್ತಿ ಜೀವನವಾಗಿ ಚಿಂತೆಯಿಂದ ಮುಕ್ತರಾಗಬಹುದು ಎಂಬುದನ್ನು ಸರಸ್ವತಿಯ ಪಾತ್ರದ ಮೂಲಕ ಅನಾವರಣಗೊಳಿಸಲಾಗಿದೆ. ರಾಮ ಐತಾಳರ ಮಗ ಲಕ್ಷ್ಮಿನಾರಾಯಣನು ಅಜ್ಜ-ಅಜ್ಜಿಯರ ಅತಿ ಮುದ್ದಿನಿಂದ ಬೆಳೆದು ಅವರ ಊರಲ್ಲಿಯೇ ಶಾಲೆಗೆ ಸೇರುತ್ತಾನೆ. ಸ್ವಾಭಿಮಾನಿಯಾದ ಸರಸ್ವತಿಗೆ ಅದು ಇಷ್ಟವಿರಲಿಲ್ಲ. ಪರರ ಋಣದಲ್ಲಿ ಮಕ್ಕಳನ್ನು ಬೆಳೆಸಬಾರದು. ಅದರಿಂದ ತಂದೆ-ತಾಯಿಯರ ಬಗೆಗೆ ಪ್ರೀತಿ ಕಡಿಮೆಯಾಗುವುದು ಎಂದು ಅಣ್ಣನಿಗೆ ಹೇಳುವಲ್ಲಿ ಸರಸ್ವತಿಯ ವ್ಯವಹಾರ ಜ್ಞಾನ ವ್ಯಕ್ತವಾಗುತ್ತದೆ.

ನಾಗವೇಣಿಯು ಮದುವೆಯಾದ ಮೇಲೆ ವ್ಯಾಸಂಗವನ್ನು ಮುಂದುವರಿಸುತ್ತಾಳೆ. ಆದರೆ ಗಂಡನ ಬೇಜವಾಬ್ದಾರಿ ಹಾಗೂ ಪಲಾಯನದಿಂದ ಅರ್ಧದಲ್ಲಿಯೇ ನಿಲ್ಲಿಸುತ್ತಾಳೆ. ತನ್ನ ಗಂಡ ಲಕ್ಷ್ಮಿನಾರಾಯಣನ ದುಷ್ಟತನ ಹಾಗೂ ಪಲಾಯನದಿಂದ ಜೀವನದಲ್ಲಿ ಜಿಗುಪ್ಸೆ ಹೊಂದದೆ ಬದುಕುತ್ತಾಳೆ. ಅವಳ ಮಗು ಪುಟ್ಟು ಆರು ತಿಂಗಳಲ್ಲಿ ಯಕೃತ್ತಿನ ಬೇನೆಗೆ ತುತ್ತಾಗುತ್ತದೆ. ಅದರಿಂದ ಮಗುವಿನ ನಗು, ಚಟುವಟಿಕೆಗಳು ನಿಂತವು. ಅದು ದಿನವೆಲ್ಲ ಅಳುತ್ತ ಕಿರುಚಲಾರಂಭಿಸಿತು. ಇದರಿಂದ ನಾಗವೇಣಿಯು ತುಂಬ ವ್ಯಾಕುಲಕ್ಕೊಳಗಾಗುವಳು. ಅನಾರೋಗ್ಯದಿಂದ ಮಗು ಸಾವನ್ನಪ್ಪುತ್ತದೆ. ಇದರಿಂದ ನಾಗವೇಣಿಯು ತುಂಬ ರೋಧಿಸುತ್ತಾಳೆ. ಸತ್ಯಭಾಮೆಯು ಸೊಸೆಗೆ ಸಮಾಧಾನ ಹೇಳುತ್ತಾಳೆ. ಆದಾಗ್ಯು ಅವಳು ದುಃಖಿಸುವುದನ್ನು ಕಂಡಾಗ ಸರಸೋತಿಯ ಸಾವಿನ ಕುರಿತು ವಿವೇಕವನ್ನು ಹೇಳುತ್ತಾಳೆ. "ಮಾನವನ ಜನ್ಮ ಅದರಲ್ಲೂ ಸ್ತ್ರೀಯ ಜನ್ಮ ಕೇವಲ ಮಕ್ಕಳನ್ನು ಹೆರುವುದಕ್ಕಾಗಿಯೂ ಅಲ್ಲ ಹಾಗೂ ಸಾಕುವುದಕ್ಕೂ ಅಲ್ಲ. ಹುಟ್ಟು ಸಾವು ಪ್ರಕೃತಿಯ ನಿಯಮ ಅದನ್ನು ನಾವು ಗೌರವಿಸಲೇ ಬೇಕು. ಅದಕ್ಕಾಗಿ ಚಿಂತಿಸುತ್ತ ಕುಳಿತುಕೊಳ್ಳದೆ ಬದುಕಿನ ಬಗೆಗೆ ಚಿಂತನೆ ಮಾಡಬೇಕು. ಜೀವನವನ್ನು ಸಾರ್ಥಕಗೊಳಿಸುವಂತೆ ಬದುಕಬೇಕು" ಎಂದು ಹುಟ್ಟು ಸಾವಿನ ಪ್ರಕೃತಿ ನಿಯಮವನ್ನು ಕುರಿತು ಹೇಳುತ್ತಾಳೆ.

ನಾಗವೇಣಿಯು ವಿದ್ಯಾವಂತೆಯಾಗಿದ್ದಳು, ನಾಗವೇಣಿಯು ವ್ಯವಹಾರ ಜ್ಞಾನ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಹೊಂದಿದ್ದಳು. ತವರು ಮನೆಯ ಬೆಂಬಲದಿಂದ ಆರ್ಥಿಕವಾಗಿ ಸದೃಢವಾಗಿದ್ದಳು. ಆದರೂ ನಾಗವೇಣಿಯು ಸರಸೋತಿ, ಸತ್ಯಭಾಮೆಯರೊಂದಿಗೆ ಸೇರಿ ಬೇಸಾಯವನ್ನು ಮಾಡುತ್ತಾ, ಸ್ವಾವಲಂಬನೆಯ ಜೀವನವನ್ನು ಸಾಗಿಸುವಳು. ಗಂಡನಿಂದ ಮೋಸ ಹೊಂದಿ ನಿರ್ಗತಿಕಳಾದರೂ ಆ ಎರಡು ಮುದಿ ಹೆಂಗಸರನ್ನು ಬಿಟ್ಟು ತಂದೆಯಲ್ಲಿಗೆ ಹೋಗಲಿಲ್ಲ, ಅದನ್ನು ಕಂಡ ಅವಳ ತಂದೆ "ಮಗು, ನೀನು ಹೆಣ್ಣಾಗಿರುವ ಬದಲು ಗಂಡಾಗಿದ್ದರೆ..." ಎಂದು ಹೇಳುವಲ್ಲಿ ನಾಗವೇಣಿ ಪಾತ್ರದ ಕರ್ತವ್ಯ ಪ್ರಜ್ಞೆ ಸ್ಪಷ್ಟವಾಗುತ್ತದೆ. 'ನನ್ನ ಬಾಳ್ವೆ ಕೆಡಿಸಲು ಬಂದ ಪ್ರಾಣಿ' ಎಂದು ಅವಳು ತನ್ನ ಗಂಡನನ್ನು ತಿಳಿದರೂ ಅವನನ್ನು ಒಬ್ಬ ಮನುಷ್ಯನನ್ನಾಗಿ ಮಾಡುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟೆಲ್ಲವನ್ನು ಮಾಡುತ್ತಾಳೆ. ಆದರೂ ಲಕ್ಷ್ಮೀನಾರಾಯಣನಿಂದ ಪದೇ ಪದೇ ಮೋಸಗೊಳ್ಳುವುದು ತೀರ ಅಸಹಜವೆನಿಸುತ್ತದೆ. ಕಾದಂಬರಿಯಲ್ಲಿ ವಿದ್ಯೆಗಿಂತಲೂ ಅನುಭವದ ಪಕ್ವತೆಯಲ್ಲಿ ವೈಚಾರಿಕ ಭಾವನೆಗಳು ಉದ್ಭವಿಸುತ್ತವೆ ಎಂಬುದನ್ನು ಸರಸೋತಿಯ ಪಾತ್ರದ ಮೂಲಕ ಪ್ರಕಟಿಸಲಾಗಿದೆ. "ನಗರ ಪ್ರದೇಶದ ಮಹಿಳೆಗಿಂತಲೂ ಗ್ರಾಮೀಣ ಪ್ರದೇಶದ ಮಹಿಳೆಯರೇ ಹೆಚ್ಚು ಸಶಕ್ತರಾಗಿದ್ದಾರೆ. ಸುಶಿಕ್ಷಿತ ಮಹಿಳೆಗಿಂತ ಕಡಿಮೆ ಶಿಕ್ಷಣದ ಗ್ರಾಮೀಣ ಮಹಿಳೆಯರ ಬದುಕು ಉತ್ತಮ ಎನಿಸುತ್ತದೆ" ಸಬಿಹಾ ಭೂಮಿಗೌಡರ ಈ ಮಾತು ಕಾದಂಬರಿಕಾರರ ನಿಲುವನ್ನು ಸರಿಯಾಗಿಯೇ ಗುರುತಿಸಿದೆ. (ನವೆಂಬರ್ ೦೧, ೨೦೦೮)

ಪ್ರಾಮಾಣಿಕತೆಯಲ್ಲಿ ಪ್ರೀತಿಗೆ ಅವಕಾಶವಿದೆ: ಭೀತಿಗಿಲ್ಲ, ನಿಷ್ಟುರ್ಯಕ್ಕೆ ಅವಕಾಶವಿದೆ; ದ್ವೇಷಕ್ಕಿಲ್ಲ, ತ್ಯಾಗಕ್ಕೆ ಅವಕಾಶವಿದೆ, ಸ್ವಾರ್ಥಕಿಲ್ಲ "ಮುಗಿದ ಯುದ್ಧ" ಕಾದಂಬರಿಯ ಲಕ್ಷ್ಮಮ್ಮ ಗಂಡನನ್ನು ಕಳೆದುಕೊಂಡರೂ ದೃತಿಗೆಡದೆ ಮಗನನ್ನು ವಿದ್ಯಾವಂತನನ್ನಾಗಿ ಮಾಡುತ್ತಾಳೆ. ಅವಳ ಮಗಳು ಸೀತೆ, ಗಂಡನ ಬೇಜವಾಬ್ದಾರಿಯಿಂದ ಕಂಗಾಲಾಗಿದ್ದಳು, ತವರು ಮನೆಯಲ್ಲಿಯೆ ಗಂಡನೊಂದಿಗೆ ತಾಯಿಯ ಆಶ್ರಯದಲ್ಲಿ ಉಳಿದಿದ್ದಳು. ಕಷ್ಟದಲ್ಲಿರುವ ತಾಯಿಗೆ ತಾನು ಹೊರೆಯಾಗಬಾರದೆಂದು, ಗಂಡನಲ್ಲಿ ಜವಾಬ್ದಾರಿಯನ್ನು ಮೂಡಿಸಲು ಪ್ರಯತ್ನಿಸುತ್ತಾಳೆ. ತಾನು ದುಡಿದು ಬೇರೆ ಮನೆ ಮಾಡುವಂತೆ ಗಂಡನನ್ನು ಒತ್ತಾಯಿಸುತ್ತಾಳೆ. ಹೆಣ್ಣು ಮಕ್ಕಳಿಗೆ ಸಲುಗೆಯನ್ನು ನೀಡದೆ, ಮನೆಯ ಕೆಲಸಗಳನ್ನು ಮಾಡುವಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದಳು. ಮುಂದೆ ಅವರು ಗಂಡನ ಮನೆಗೆ ಹೋದಾಗ ಯಾವುದೇ ತೊಂದರೆಯಾಗಬಾರದೆಂದು ಮುಂದಾಲೋಚನೆ ಮಾಡಿದಳು. ಅವರವರ ಭವಿಷ್ಯ ಅವರ ದುಡಿಮೆಯಲ್ಲಿದೆ ಎಂದು ನಂಬಿದ್ದಳು.

ಲಕ್ಷ್ಮಮ್ಮ ದೃಢವಾದ ವಿಚಾರವನ್ನು ಹೊಂದಿದ್ದಳು. ಜೀವನದಲ್ಲಿ ಎದುರಾಗುವ ಕಷ್ಟಗಳಿಗೆ ಅಂಜದೆ ನಿರ್ಭಯವಾಗಿ ಎದುರಿಸುವ ಕೌಶಲ್ಯವನ್ನು ಹೊಂದಿದ್ದಳು. ತಾವು ಅನಾವಶ್ಯಕವಾಗಿ ಬೇರೆಯವರ ವಿಷಯದಲ್ಲಿ ಆಸಕ್ತರಾಗಿರಬಾರದು. 'ಅವರವರ ತಲೆಗೆ ಅವರವರ ಕೈ' ಎಂಬುದು ಅವಳ ಧೋರಣೆಯಾಗಿತ್ತು. ಏಕೆಂದರೆ ನಾವು ಹೇಗಿರುತ್ತೇವೆಯೋ ಜಗತ್ತು ಕೂಡ ಅದೇ ರೀತಿಯಲ್ಲಿರುತ್ತದೆ ಎಂಬುದು ಅನುಭವ ಜನ್ಯವಾದ ಹೇಳಿಕೆಯಾಗಿದೆ.

ಲಕ್ಷ್ಮಮ್ಮನ ಮಗ ಅಚ್ಯುತನು ಶಾಲೆಯ ಉಪಧ್ಯಾಯನಾಗಿದ್ದನು. ಆ ವೃತ್ತಿಯಿಂದಾಗಿ ಅವನಿಗೆ ಊರಿಂದ ಊರಿಗೆ ವರ್ಗವಾಗುತ್ತಿತ್ತು. ಹೆಂಡತಿ ರುಕ್ಮಿಣಿಯೊಂದಿಗೆ ಶಂಕರನಾರಾಯಣ ಎಂಬ ಊರಲ್ಲಿದ್ದನು. ತನ್ನ

ಹೆಂಡತಿಯು ಹೆರಿಗೆ ಸಮಯದಲ್ಲಿ ತುಂಬ ಅಶಕ್ತಳಾಗಿದ್ದರಿಂದ ಅವಳ ಆರೋಗ್ಯಕ್ಕಾಗಿ ಹಗಲಿರುಳು ಶ್ರಮಿಸುತ್ತಾನೆ. ರುಕ್ಮಿಣಿಯು ತಾನು ಈ ಬಾರಿ ಬದುಕಿ ಉಳಿಯಲು ಗಂಡನು ತನಗಾಗಿ ಮಾಡಿದ ಶುಶ್ರೂಷೆಯನ್ನು ನೆನಪಿಸಿಕೊಂಡು "ಒಂದು ಜೀವ ಬದುಕಿ ಬೆಳಕಿಗೆ ಬರಬೇಕಾದರೆ ಎಷ್ಟೋ ಜನರ ಋಣ ತಿಂದುಕೊಂಡಿರಬೇಕಲ್ಲವೆ" (೨೦೦೩, ಸಂ-೬, ಕಾ-೫, ೨೪೮) ಎಂದು ಪ್ರಕೃತಿಯ ನಿಯಮವನ್ನು ಕುರಿತು ತಾತ್ವಿಕವಾಗಿ ಹೇಳುತ್ತಾಳೆ.

"ಮುಗಿದ ಯುದ್ಧ" ಕಾದಂಬರಿಯಲ್ಲಿ ವಿಶ್ವದ ಎರಡನೆಯ ಮಹಾಯುದ್ಧದ ಪರಿಣಾಮ ಕುರಿತು ಚಿತ್ರಿಸಲಾಗಿದೆ. 'ಶಾಂತಿ ಸ್ಥಾಪನೆಗಾಗಿ ಮಾತ್ರ ಯುದ್ಧದಲ್ಲಿ ಪಾಲ್ಗೊಳ್ಳುವುದು ಉಚಿತ' ಎಂಬುದು ಸುಭಾಷಿತದಿಂದ ಮನವರಿಕೆಯಾಗುತ್ತದೆ. ಆದರೆ ವಾಸ್ತವದಲ್ಲಿ ಯುದ್ಧದಿಂದ ಹಲವಾರು ಭೀಕರ ಪರಿಣಾಮಗಳು ಉಂಟಾಗುತ್ತವೆ. ಇದರ ವಿವರಣೆಯನ್ನು ಕಾದಂಬರಿಯು ಒಳಗೊಂಡಿದೆ. ಯುದ್ಧದ ವಾತಾವರಣದಿಂದ ದೇಶದ ಆರ್ಥಿಕ ಸ್ಥಿತಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಯುದ್ಧದಿಂದಾಗಿ ದಿನಬಳಕೆಯ ಪದಾರ್ಥಗಳ ಬೆಲೆಗಳು ಅಧಿಕವಾಗಿದ್ದವು, ಎಲ್ಲರ ಜೀವನವು ಕಷ್ಟಮಯವಾಗಿತ್ತು. ಎಲ್ಲಿಯೋ ನಡೆದ ಯದ್ಧದ ಕುರಿತು ಚಿಂತಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ, ಅದರ ಸಲುವಾಗಿ ಪೇಪರುಗಳನ್ನು ತರಿಸಲು ವ್ಯಯ ಮಾಡುವ ದುಡ್ಡನ್ನು ಮನೆಯ ಇನ್ನಿತರ ಕಾರ್ಯಗಳಿಗೆ ಉಪಯೋಗಿಸಿದರೆ ದುಡ್ಡಿನ ಭಾರ ತುಸುವಾದರೂ ಕಡಿಮೆಯಾಗಬಹುದು ಎಂದು ರುಕ್ಮಿಣಿಯು ಗಂಡನಿಗೆ ಮಿತವ್ಯಯದ ಕುರಿತು ಹೇಳುತ್ತಾಳೆ. "ಅದಕ್ಕೆ ಕೊಡುವ ದುಡ್ಡಿನಿಂದ ಒಂದು ಮುಡಿ ತೌಡನ್ನು ತರಿಸಿ ದನಕ್ಕೆ ಹಾಕಿದರೆ ಎರಡು ಕುಡ್ತೆ ಹಾಲು ಹೆಚ್ಚಿಗೆ ಸಿಕ್ಕೀತು. ಮಕ್ಕಳಿಗಾದರೂ ಕೊಡಬಹುದು. ಯಾವ ಊರಲ್ಲಿ ಯುದ್ಧವಾದರೆ, ನಮಗೇನಂತೆ? ರಾಮನಿಗೆ ರಾಜ್ಯದ ಪಟ್ಟವಾದರೆ, ನಮಗೆ ರಾಗಿ ಬೀಸುವುದು ತಪ್ಪುತ್ತದೆಯೇ?" (೨೦೦೩, ಸಂಪುಟ-೬, ಕಾ-೫, ೨೫೭) ಎಂಬಿತ್ಯಾದಿಯಾಗಿ ರುಕ್ಮಿಣಿಯು ಯೋಚಿಸುತ್ತಾಳೆ. ವ್ಯವಹಾರ ಚತುರೆಯಾದ ರುಕ್ಮಿಣಿಯು ಸಂಸಾರದ ನಿರ್ವಹಣೆಯಲ್ಲಿ ಗಂಡನಿಗೆ ಸಹಾಯ ಮಾಡುತ್ತಾಳೆ.

ಯುದ್ಧದಿಂದಾಗಿ ಹಣದುಬ್ಬರ ಅಧಿಕವಾಗಿತ್ತು, ಬಡವರ ಜನ ಜೀವನ ತುಂಬ ಅಸಹನೀಯವಾಗಿತ್ತು. ಇದರಿಂದ ಅಚ್ಯುತನು ಮಾನಸಿಕವಾಗಿ ತುಂಬ ಕುಗ್ಗಿದನು. ಚಿಂತೆಗಳು ಜೀವನ ಮೌಲ್ಯಕ್ಕೆ ಪೂರಕವಾಗಬೇಕೆ ಹೊರತು ಮಾರಕವಾಗಿರಬಾರದು. ಆದರೆ ಅಚ್ಯುತನು ಚಿಂತೆಯಿಂದ ಕಂಗಾಲಾಗಿ ತನ್ನ ಆಯುಷ್ಯ ಮುಗಿಯುತ್ತಿದೆ, ತಾನು ಸಾಯುತ್ತೇನೆ ಎಂದು ಇಲ್ಲದ ವಿಚಾರಗಳನ್ನು ಕುರಿತು ಚಿಂತಿಸುತ್ತಿದ್ದನು. "ಪ್ರಯೋಜನವಿಲ್ಲದ ಕಾರ್ಯವು ನಿಮ್ಮನ್ನು ಮಂದಬುದ್ಧಿಯ ಹಾಗೂ ದಣಿವನ್ನು ನೀಡುತ್ತದೆ" ಎಂಬ ಸೂಕ್ತಿಯಂತೆ ಅಚ್ಯುತನ ಪರಿಸ್ಥಿತಿಯಾಗುತ್ತದೆ. ಲಕ್ಷ್ಮಮ್ಮ ತನ್ನ ಮಗ ಅಚ್ಯುತನನ್ನು ಹುರಿದುಂಬಿಸುತ್ತಾಳೆ. ಸಾವನ್ನು ನೆನಯಬಾರದು, ಅದು ಬರುವಾಗ ಬಂದೇ ಬರುತ್ತದೆ ಎಂದು ಹೇಳುತ್ತಾಳೆ. ಸಾವಿಗಾಗಿ ಹೆದರಬಾರದು ಎಂದು ಸಮಯ ಪ್ರಜ್ಞೆಯಿಂದ ಸಂತೈಸುತ್ತಾಳೆ. ಇದು ಅವಳಲ್ಲಿರುವ ಜೀವನ ಶ್ರದ್ಧೆಯಿಂದ ಸಾಧ್ಯವಾಗುತ್ತದೆ. ಮಗನಿಗೆ ಜೀವನದ ಪ್ರಾಮುಖ್ಯತೆಯನ್ನು ಕುರಿತು ಹೇಳುತ್ತಾಳೆ.

'ಮುಗಿದ ಯುದ್ಧ' ಕಾದಂಬರಿಯಲ್ಲಿ ಕಾದಂಬರಿಕಾರರು ಎರಡನೆ ಮಹಾಯುದ್ಧದ ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ. ಆ ಯುದ್ಧದ ಕುರಿತು ಕೇವಲ ಚಿಂತೆ ಮಾಡಿದರೆ ಏನೂ ಪ್ರಯೋಜನವಿಲ್ಲ, ಅದರ

ಪರಿಣಾಮಗಳನ್ನು ಧೈರ್ಯದಿಂದ ಎದುರಿಸುತ್ತ ಬಾಳ್ವೆ ಮಾಡಬೇಕು ಎಂಬುದನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ವೇಶ್ಯೆಯಾದವಳು ಮೈ ಮನಸ್ಸುಗಳೆರಡನ್ನು ಒಬ್ಬರಿಗೆ ಕೊಡುವುದು ಸಾಧ್ಯವಿಲ್ಲ, ಒಂದು ವೇಳೆ ಅದು ಸಾಧ್ಯವಾದರೆ ವೃತ್ತಿ ಧರ್ಮಕ್ಕೆ ವಿರುದ್ಧವಾದುದು. ಬಹುಶಃ ಜೀವನದಲ್ಲಿ ಮೈ ಮನಗಳೆರಡರ ತೃಪ್ತಿಯನ್ನು ಸದಾಕಾಲ ಪಡೆಯುವುದು ಅಸಾಧ್ಯವಾಗುತ್ತದೆ. ಮನುಷ್ಯನ ಕಾಮನೆಗಳು ಅಪೂರ್ಣವಾಗಿಯೇ ಉಳಿಯಬೇಕಾಗುತ್ತದೆ ಎಂಬ ವಿಷಾದದ ಧ್ವನಿ "ಮೈ ಮನಗಳ ಸುಳಿಯಲ್ಲಿ"ಕಾದಂಬರಿಯಲ್ಲಿದೆ. ವೇಶ್ಯೆಯಾದವಳು ತನ್ನನ್ನು ಬಯಸಿ ಬರುವವರೆಲ್ಲರನ್ನೂ ಏಕರೀತಿಯಿಂದ ಕಾಣಬೇಕು. ಯಾರೊಬ್ಬರನ್ನು ಹೆಚ್ಚು ಕಡಿಮೆ ಎಂದು ಭಾವಿಸಬಾರದು. 'ವೇಶ್ಯೆಯಾದವಳು ಮೈಯನ್ನು ಮಾರಿಕೊಳ್ಳಬೇಕೆ ಹೊರತು ಮನಸ್ಸನ್ನಲ್ಲ' ಎಂದು ಮಂಜುಳೆಯ ತಾಯಿ ಭವಾನಿ ವೇಶ್ಯಾವೃತ್ತಿಯ ಮನೋಧರ್ಮವನ್ನು ಕುರಿತು ಹೇಳುತ್ತಾಳೆ. ವೇಶ್ಯೆಯಾದವಳು ತನ್ನ ಮನಸ್ಸಿನೊಂದಿಗೆ ಮೈಯನ್ನು ಮಾರಿದರೆ ತನ್ನಲ್ಲಿ ಬರುವ ಅನ್ಯ ವಿಟರೊಂದಿಗೆ ನ್ಯಾಯಯುತವಾಗಿ ಸಹಕರಿಸಲಾಗುವುದಿಲ್ಲ, ಅಂತೆಯೇ ವೇಶ್ಯಾವೃತ್ತಿಯ ನಿಯಮ ಕೇವಲ ಮೈಮಾರುವುದು; ಮನಸ್ಸನಲ್ಲ ಎಂಬುದು ಭವಾನಿಯ ಸಿದ್ಧಾಂತವಾಗಿತ್ತು. ತಾಯಿಯ ಈ ಮಾತನ್ನು ಕುರಿತು ಮಂಜುಳೆ ಯೋಚಿಸುತ್ತಾಳೆ, ಮನಸ್ಸು ಬೇರೆ, ದೇಹ ಬೇರೆ ಎಂದು ಇವೆರೆಡರ ಸಂಬಂಧವನ್ನು ಕಡಿದುಕೊಂಡಿರುವುದಕ್ಕೆ ಬರುತ್ತದೆಯೇ ಎಂದು ಯೋಚನೆ ಮಾಡುತ್ತಾಳೆ. ಮೈ ಮತ್ತು ಮನಸ್ಸು ಬೆರೆತಾಗ ಮಾತ್ರ ಸುಖದ ಅನುಭವವಾಗುತ್ತದೆ ಎಂಬುದು ಮಂಜುಳೆಯ ಸಿದ್ಧಾಂತವಾಗಿತ್ತು. ಈ ವಿಚಾರಗಳ ಹಿನ್ನೆಲೆಯಲ್ಲಿ ವೇಶ್ಯೆಯರಿಬ್ಬರ ಮನೋಧರ್ಮಗಳಲ್ಲಿನ ಭಿನ್ನತೆಯನ್ನು ಗುರುತಿಸಬಹುದು.

ಭವಾನಿಯ ಸಿದ್ಧಾಂತ ಕೇವಲ ದೈಹಿಕ ಸುಖಕ್ಕಾಗಿ ಮತ್ತು ಹಣದಾಸೆಗಾಗಿ ತಮ್ಮ ಮೈಯನ್ನು ಮಾರಿಕೊಳ್ಳುವ ಕೆಳವರ್ಗದ ವೇಶ್ಯೆಯರಿಗೆ ಅನ್ವಯಿಸುತ್ತದೆ. ಸಮಕಾಲೀನ ಸಾಹಿತ್ಯದಲ್ಲಿ ಅ.ನ.ಕೃ. ಅವರಂತಹ ಕಾದಂಬರಿಗಳಲ್ಲಿ ಇಂಥಹ ವರ್ಗದ ವೇಶ್ಯೆಯರನ್ನು ಗುರುತಿಸಬಹುದು. ಏಕೆಂದರೆ ಅ.ನ.ಕೃ. ಅವರು ವೇಶ್ಯೆಯರ ಸ್ಥಿತಿಗತಿಯನ್ನು ಕುರಿತು ಮಾನವೀಯವಾಗಿ ಸ್ಪಂದಿಸದೆ ಮನರಂಜನೆಯ ಸಾಧನವನ್ನಾಗಿ ಬಳಿಸಿಕೊಳ್ಳುತ್ತಾರೆ. ಅವರ ಕುರಿತು ಮಲ್ಲಿಕಾ ಘಂಟಿಯವರು "ಮನಸ್ಸನ್ನು ಸನಾತನ ನೆಲೆಯಿಲ್ಲಿಟ್ಟು ತಲೆಯನ್ನು ಪ್ರಗತಿಶೀಲ ಪಂಥದಲ್ಲಿಟ್ಟವರು ಸ್ತ್ರೀ ಸಂಬಂಧ ಸಮಸ್ಯೆಗಳ ಆಳಕ್ಕೆ ಇಳಿಯುವಲ್ಲಿ ಸೋತರು" ಎಂದು (೨೦೦೦; ೨೨೮) ಹೇಳಿರುವುದು ಸರಿಯಾಗಿಯೇ ಇದೆ. ಆದರೆ ಶಿವರಾಮ ಕಾರಂತರ ಕಾದಂಬರಿಗಳಲ್ಲಿನ ವೇಶ್ಯೆಯರು ಕೀಳು ಚಾಪಲ್ಯವನ್ನು ಹೊಂದಿರದೆ ಉತ್ತಮ ಸಂಸ್ಕಾರವನ್ನು ಹೊಂದಿದವರಾಗಿದ್ದರು. ಕೇವಲ ಧನದಾಸೆಗಾಗಿ ಮೈಮಾರಿಕೊಳ್ಳುವ ಸೂಳೆಯಾಗಿರದೆ ಗರತಿಯರಂತೆ ಬಾಳಿದವರನ್ನು ಗುರುತಿಸಬಹುದು. ಮಂಜುಳೆ ವೇಶ್ಯೆಯಾಗಿದ್ದರೂ ಮೈ ಮನಸ್ಸುಗಳೆರಡರ ತೃಪ್ತಿಗಾಗಿ ಹಂಬಲಿಸುತ್ತಿದ್ದಳು. ಸ್ತ್ರೀಯು ವೇಶ್ಯೆಯಾದರೂ ಅವಳು ತನ್ನ ಸಂಸ್ಕಾರವನ್ನು ಮರೆಯಲಾರಳು. ದೈಹಿಕ ಸುಖವನ್ನು ಬಯಸಿ ಬಂದಾತನ ಚೆಲುವು, ಪ್ರಸಿದ್ಧಿ, ವಿಲಾಸಗಳ ಜೊತೆಯಲ್ಲಿ ಆತನ ನಡವಳಿಕೆ ಉತ್ತಮವಾದದ್ದಿರಬೇಕೆಂದು ಬಯಸುತ್ತಿದ್ದಳು. 'ತಂದೆ ದೇಹ ಕೊಡುತ್ತಾನೆ, ತಾಯಿ ಮನಸ್ಸನ್ನು ಬೆಳೆಯಿಸುತ್ತಾಳೆ. ಗುರು ಮನುಷ್ಯರನ್ನಾಗಿ ಮಾಡುತ್ತಾನೆ' ಎಂಬ ವೈಚಾರಿಕ ಅರಿವು ಮಂಜುಳೆಯಲ್ಲಿತ್ತು. ಶಿವರಾಮ ಕಾರಂತರ ಹಾಗೂ ಅ.ನ.ಕೃ. ಅವರ ನಡುವಿನ ವ್ಯತ್ಯಾಸವನ್ನು ಗುರುಲಿಂಗ ಕಾಪಸೆಯವರು ಈ ರೀತಿಯಲ್ಲಿ

ಗುರುತಿಸಿದ್ದಾರೆ. "ನೂರಕ್ಕಿಂತ ಹೆಚ್ಚು ಕಾದಂಬರಿಗಳನ್ನು ಬರೆದ ಅ.ನ.ಕೃ ಜನಪ್ರಿಯತೆಯನ್ನೇನೋ ಗಳಿಸಿದರು. ಆದರೆ ಜನತೆಯಲ್ಲಿ ವೈಚಾರಿಕ ಎಚ್ಚರವನ್ನು ಉಂಟುಮಾಡಲಿಲ್ಲ ಇದನ್ನು ಸಾಧಿಸಿದವರು ಕಾರಂತರು" (ಬಸವರಾಜ ಸಾದರ (ಸಂ) ೨೦೦೨: ೫೫) ಎಂಬುದು ಇಲ್ಲಿ ಗಮನಾರ್ಹ.

'ಮನುಷ್ಯನಲ್ಲಿರುವ ಕಾಮಶಕ್ತಿ ಅಣುಶಕ್ತಿಗೂ ಪ್ರಬಲವಾದುದು' ಅದನ್ನು ನಿಯಂತ್ರಿಸುವುದು ತುಂಬ ಕಷ್ಟಕರವಾದುದು. ಕಾವಿಗೂ ಕಾಮವನ್ನು ನಿಯಂತ್ರಿಸುವ ಶಕ್ತಿಯಿಲ್ಲ, ಕಾವಿಗೆ ಕಾಮವನ್ನು ಹತ್ತಿಕ್ಕುವ ಸಾಧ್ಯತೆಯು ಕಡಿಮೆ ಎಂಬುದನ್ನು ಲಕ್ಷ್ಮಣತೀರ್ಥರ ಪಾತ್ರದಿಂದ ನಿರೂಪಿಸಲಾಗಿದೆ. ಮಠದ ಸ್ವಾಮಿಯೊಬ್ಬರು ವೇಶ್ಯೆಗೆ ಒಲಿದು ಬರುವುದು ಧಾರ್ಮಿಕ ಸಂಸ್ಥೆಗಳಲ್ಲಿ ನಡೆಯುತ್ತಿರುವ ವ್ಯಭಿಚಾರ ಮತ್ತು ಕಪಟಾಚರಣೆಗಳ ದ್ಯೋತಕವಾಗಿದೆ. ಮಂಜುಳೆಯ ಪಾತ್ರದ ಮೂಲಕ "ಕಾವಿ ಹಾಕಿದ ತಕ್ಷಣ ಮನುಷ್ಯನ ಆಕಾರ ಬದಲಾಗುತ್ತದೆ. ದೇಹದ ಅಂಗಗಳು ಮಾಯವಾಗುತ್ತವೆ ಎಂದು ನನಗೆ ಅನಿಸುವುದಿಲ್ಲ" (೧೯೯೨: ೨೩೭) ಎಂದು ಹೇಳಿರುವುದರಲ್ಲಿ ಸತ್ಯಾಂಶವಿದೆ. ಲಕ್ಷ್ಮಣತೀರ್ಥರೊಂದಿಗೆ ಇಂದಿನ ಸಮಾಜದಲ್ಲಿ ಮಠದ ಸ್ಥಾನ ಮಾನ, ಮಠದಲ್ಲಿ ನಡೆಯುತ್ತಿರುವ ಅವ್ಯವಹಾರಗಳು, ಅನೈತಿಕ ಸಂಬಂಧಗಳು ಹಾಗೂ ಹದೆಗೆಟ್ಟಿರುವ ವ್ಯವಸ್ಥೆ ಕುರಿತು ಕಾದಂಬರಿಯಲ್ಲಿ ವಿಡಂಬಿಸಲಾಗಿದೆ. "ವಾದ ಮಾಡುವ ಮನಸ್ಸಿಗೆ ವಾದಿಸುವುದೇ ಮುಖ್ಯವಾಗಬಾರದು. ತರ್ಕದಲ್ಲಿ ಗೆಲ್ಲಬೇಕಾದುದು ಮುಖ್ಯವಲ್ಲ, ತರ್ಕದಿಂದ ಸತ್ಯಾಂಶ ತಿಳಿಯುವುದು ಮುಖ್ಯವಾಗುತ್ತದೆ" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಹೇಳಿರುವುದನ್ನು ನೆನೆಪಿಸಿಕೊಳ್ಳಬಹುದು (೧೯೯೪; ೬೩) ಮಂಜುಳೆ ವಾಸ್ತವದ ಹಿನ್ನೆಲೆಯಲ್ಲಿ ಮಠದ ಸ್ವಾಮಿಗಳ ಕುರಿತು ಆಲೋಚಿಸುತ್ತಾಳೆ.

ಲೈಂಗಿಕತೆಯಲ್ಲಿ ಮೈಗಿಂತ ಮನಸ್ಸಿನ ಪಾತ್ರ ಹಿರಿದೋ ಅಥವಾ ಲೈಂಗಿಕಾನುಭವದಲ್ಲಿ ಮೈಯ ಪಾತ್ರ ಹಿರಿದೋ ಎಂಬ ತಾಕಲಾಟದೊಂದಿಗೆ ವೇಶ್ಯೆಯೊಬ್ಬಳ ಮಾನಸಿಕ ಮತ್ತು ಲೈಂಗಿಕ ಜೀವನದಲ್ಲಿ ದೊರೆತ ಅವಳ ಅನುಭವಗಳ ಹಲವಾರು ವಿಭಿನ್ನ ಮುಖಗಳ ಪರಿಚಯವನ್ನು 'ಮೈ ಮನಗಳ ಸುಳಿ'ಯಲ್ಲಿ ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

ವೇಶ್ಯೆಯರನ್ನು ಸಮಾಜದಲ್ಲಿ ಕೆಟ್ಟವರೆಂದು ಗುರುತಿಸಲಾಗುತ್ತದೆ. ಆದರೆ ವೇಶ್ಯೆಯರೆಲ್ಲರೂ ಕೆಟ್ಟವರಲ್ಲ, ಅವರಲ್ಲಿಯೂ ಕೆಲವರು ಉತ್ತಮ ಗುಣಗಳನ್ನು ಹೊಂದಿದ್ದು ತಾತ್ವಿಕ ಚಿಂತನೆಯಿಂದ ಅನ್ಯರ ಬದುಕಿಗೆ ಬೆಳಕಾಗಬಲ್ಲರು ಎಂಬುದನ್ನು "ಜಾರುವ ದಾರಿಯಲ್ಲಿ" ಕಾದಂಬರಿಯಲ್ಲಿ ಮುಂದಿಡಲಾಗಿದೆ. ಗುಲಾಬಿಯು ಸ್ವ-ಇಚ್ಛೆಯಿಂದ ವೇಶ್ಯೆಯಾದವಳಲ್ಲ, ಪರಿಸ್ಥಿತಿಯಿಂದಾಗಿ ಮಾವ, ಅಜ್ಜಿಯರ ಧನದಾಸೆಗೆ ಬಲಿಯಾಗಿ ವಯಸ್ಸಾದ ಮುಗುದುಮ ಸಾಹೇಬರ ಪ್ರೇಯಸಿಯಾಗುತ್ತಾಳೆ.

ಅಂತೆಯೇ ದುಡ್ಡಿಗಾಗಿ ತನ್ನ ದೇಹವನ್ನು ಎಂದೂ ಮಾರಿಕೊಳ್ಳಲಿಲ್ಲ, ಮುಂದೆ ಮುಗುದುಮ ಸಾಹೇಬರು ತೀರಿಕೊಂಡಾಗ ಬೇರೆಯವರಿಂದ ತನ್ನ ದೈಹಿಕ ದಾಹವನ್ನು ಇಂಗಿಸಿಕೊಳ್ಳಬಹುದಾಗಿತ್ತು. ಆದರೆ ತನ್ನನ್ನು ಮಾರಿಕೊಳ್ಳುವ ಸಾಹಸ ಮಾಡಲಿಲ್ಲ, ಸ್ವಾವಲಂಬನೆಯ ಜೀವನ ಸಾಗಿಸಲು ಏನಾದರೂ ಕೆಲಸ ಮಾಡುತ್ತ ಬದುಕು ಸಾಗಿಸಬೇಕು ಎಂದು ನಿರ್ಧಾರ ಮಾಡುತ್ತಾಳೆ. ಆಸ್ಪತ್ರೆಯಲ್ಲಿ ದಾದಿಯಾಗಿ ಕಾರ್ಯ ನಿರ್ವಹಿಸುತ್ತಾಳೆ. ಈ ನಿರ್ಧಾರಕ್ಕೆ ಅವಳ ಮನೆಯಲ್ಲಿ ದೊರೆತ ನಿಧಿಯು ಅವಳಲ್ಲಿ ಮತ್ತಷ್ಟು ಧೈರ್ಯ ಹಾಗೂ ಆತ್ಮವಿಶ್ವಾಸವನ್ನು ತುಂಬುತ್ತದೆ.

ಡಾ. ಶಿವಪ್ಪನವರು ತನ್ನ ಹೆರಿಗೆಯ ಸಮಯದಲ್ಲಿ ಸಹಾಯ ಮಾಡಿದ್ದರಿಂದ ಅವರ ಬಗೆಗೆ ಗುಲಾಬಿಗೆ ಕೃತಜ್ಞತೆಯ ಭಾವವಿತ್ತು. ಅವರ ಋಣವನ್ನು ತೀರಿಸಬೇಕೆನ್ನುವ ಹಂಬಲವಿತ್ತು. ಏಕೆಂದರೆ ತನ್ನ ಮತ್ತು ಮಗುವಿನ ಜೀವನ ಉಳಿಯಲು ಡಾ. ಶಿವಪ್ಪನವರೆ ಕಾರಣವೆಂಬ ಅರಿವು ಅವಳಲ್ಲಿತ್ತು. ಈ ಅರಿವಿನಿಂದಲೇ ಅವರ ಮಗುವಿಗೆ ಚಿನ್ನದ ಸರ ತೊಡಿಸುತ್ತಾಳೆ. ತನಗೆ ದೊರೆತ ನಿಧಿಯನ್ನು ಒಳ್ಳೆಯ ಕಾರ್ಯಕ್ಕೆ ಉಪಯೋಗಿಸಬೇಕು ಎನ್ನುವ ಮನಸ್ಸಿನಿಂದ ರಕ್ಷಿಸುತ್ತಾಳೆ. ಮಗ ಪ್ರಭಾಕರನ ವಿದ್ಯೆಗೆ ವ್ಯಯಿಸಬೇಕು ಎನ್ನುವ ಮುಂದಾಲೋಚನೆ ಗುಲಾಬಿಯಲ್ಲಿದೆ. ಸಾಮಾನ್ಯ ವೇಶ್ಯೆಯರಂತೆ ದುಡ್ಡಿಗಾಗಿ ಪರಿತಪಿಸುತ್ತಿರಲಿಲ್ಲ, ಡಾ. ಶಿವಪ್ಪನವರ ಹೆಂಡತಿ ಇಂದುಮತಿಯು ಅನಾರೋಗ್ಯಕ್ಕೆ ಈಡಾದಾಗ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಚಿಕಿತ್ಸೆ ಮಾಡಿಸುತ್ತಾಳೆ. ಸುಮಾರು ಆರು ತಿಂಗಳ ಕಾಲ ತಾಯಿಯಂತೆ ಅವಳ ಆರೈಕೆಯನ್ನು ಮಾಡುತ್ತಾಳೆ. ಡಾ.ಶಿವಪ್ಪನವರ ಕುಟುಂಬಕ್ಕೆ ಧನ ಸಹಾಯ ಮಾಡುತ್ತಾಳೆ, ತನಗೆ ದೊರೆತಿರುವ ನಿಧಿಯ ದುಡ್ಡನ್ನು ಈ ರೀತಿಯಾಗಿ ವ್ಯಯಿಸುತ್ತಾಳೆ.

ಸಾಮಾಜಿಕ ಮೌಲ್ಯಗಳ ಮೂಲ 'ತಾಯಿ'ಯಲ್ಲಿದೆ. ತಾಯಿಯಾದವಳು ತನ್ನ ಮಗುವಿಗೆ ಸಮಾಜದಲ್ಲಿ ತಂದೆಯ ಹೆಸರನ್ನು ಬಯಸುತ್ತಾಳೆ. ಆದರೆ ಗುಲಾಬಿಯು ತನ್ನ ಮಗನಿಗೊಬ್ಬ ತಂದೆಯಿದ್ದರೂ ಅವನ ನೀಚ ಪ್ರವೃತ್ತಿಗಳಿಗೆ ಹೇಸಿ ಅವನನ್ನು ತಂದೆ ಎಂದು ಪರಿಚಯಿಸದೆ ಬದುಕನ್ನು ಧೈರ್ಯವಾಗಿ ಎದುರಿಸುತ್ತಾಳೆ. ವಾಸ್ತವದ ನೆಲೆಗಟ್ಟಿನಲ್ಲಿ ವಿವೇಕತನದಿಂದ ಆತ್ಮಸ್ಥೈರ್ಯವನ್ನು ಬಲಪಡಿಸಿಕೊಳ್ಳುತ್ತಾಳೆ. ಲೋಕದ ದೃಷ್ಟಿಯಲ್ಲಿ ಗರತಿಯಲ್ಲದ ಗುಲಾಬಿ ಆಚಾರದಲ್ಲಿ ಯಾವ ಗರತಿಗೂ ಕಡಿಮೆಯಾಗಿರಲಿಲ್ಲ, ವಿಚಾರದಲ್ಲಿ ಅವಳು ಯಾವ ಜಿಜ್ಞಾಸುವಿಗೂ ಕಡಿಮೆಯಿಲ್ಲದಂತೆ, ಮನಸ್ಸನ್ನು ನಿಯಂತ್ರಿಸುತ್ತಾಳೆ. ಡಾ. ಶಿವಪ್ಪನವರ ಕುಸಿಯುತ್ತಿರುವ ಬಾಳಿಗೆ ಆಸರೆಯಾಗುತ್ತಾಳೆ. ತನ್ನ ತನು, ಮನ, ಧನ ಎಲ್ಲವನ್ನು ಅವರಿಗೆ ಅರ್ಪಿಸುತ್ತಾಳೆ. ಅವರ ಏಳಿಗೆಯಲ್ಲಿ ತನ್ನ ಬದುಕಿನ ಸಾರ್ಥಕತೆಯನ್ನು ಕಾಣುತ್ತಾಳೆ.

ಸೂಳೆಗಾರಿಕೆ, ಹಾದರಕ್ಕೆ ಬಿದ್ದ ಹೆಣ್ಣನ್ನು ಬೊಟ್ಟು ಮಾಡಿ ದೂಷಿಸುವುದಕ್ಕೆ ಬದಲಾಗಿ ಅವಳು ಆ ಸ್ಥಿತಿಗೆ ಬೀಳಲು ಕಾರಣವಾದ ಸಮಾಜ, ಸನ್ನಿವೇಶಗಳತ್ತ ಕಾದಂಬರಿಯಲ್ಲಿ ಗಮನಹರಿಸಲಾಗಿದೆ. ಅವಳು ಪರಿಸ್ಥಿತಿಯ ಒತ್ತಡಕ್ಕೆ ಬಲಿಯಾಗಿ ಹೀಗಾದಳೆಂದು ಹೇಳುವ ಕಾದಂಬರಿಕಾರರ ನಿಲುವು ಪರಂಪರೆಯ ನಿಲುವಿಗಿಂತ ಭಿನ್ನವಾಗಿದೆ. ಸಮಕಾಲೀನ ಲೇಖಕರಲ್ಲಿ ದಿನಕರ ದೇಸಾಯಿಯವರ 'ದಿನಕರ ಚೌಪದಿ' ಕವನ ಸಂಕಲನದಲ್ಲಿ ವೇಶ್ಯೆಯರೂ ಒಳ್ಳೆಯವರೆಂದು ಅವರನ್ನು ಗರತಿಯರೊಡನೆ ತುಲನೆ ಮಾಡಲಾಗಿದೆ. ವೇಶ್ಯೆಯರ ಬಗ್ಗೆ ಉದಾರ ಭಾವ, ಸಮರ್ಥನೆ ಕಾಣುತ್ತೇವೆ.

ಕಾರಂತರ ಕಾದಂಬರಿಗಳಲ್ಲಿಯ ವೃದ್ಧ ಸ್ತ್ರೀಯರು ಸಾವಿಗೆ ಎಂದೂ ಅಂಜಿದವರಲ್ಲ, ಮುಕ್ತವಾಗಿ ಅದನ್ನು ಸ್ವಾಗತಿಸುವವರು. ಡಾ.ಶಿವಪ್ಪನವರ ತಾಯಿಯು ಹಾಗೆಯೇ, ಅವಳು ಬೆನ್ನಿನ ಕುರುವು ನೋವಿನಿಂದ ಹಾಸಿಗೆ ಹಿಡಿದಿದ್ದಳು. ಆ ಕುರುವು ಬೆಳೆದು ಹಣ್ಣಾಗಿ ಒಂದು ದಿನ ಒಡೆದು ಹೋಯಿತು. ಇದರಿಂದ ವಿಚಲಿತರಾದ ಶಿವಪ್ಪನವರು ವೈದ್ಯರನ್ನು ಕರೆಯಿಸಿ ಪರಿಹರಿಸಲು ತುಂಬ ಪ್ರಯತ್ನಿಸಿದರು. ಮಗನ ಮನಸ್ಸಿನ ಹೊಯ್ದಾಟವನ್ನು ಕಂಡು ಒಂದು ದಿನ ತಾಯಿ ಮಗನನ್ನು ಕರೆದು "ಇದು ಯಾವ ವೈದ್ಯ ಬಂದರೂ ಗುಣವಾಗದ್ದು ನನಗೆ ಗೊತ್ತು, ಬ್ರಹ್ಮನಿಗಿಂತ ಮೇಲೆ ಇನ್ನೊಬ್ಬ ವೈದ್ಯನಿಲ್ಲ, ಅವನು ಬರೆದ ಹಾಗಾಗುತ್ತದೆ. ನೀನೇಕೆ ಯೋಚನೆ ಮಾಡಬೇಕು?

ನೋವು ಸಹಿಸುವುದು ಕಷ್ಟವಾದರೂ, ಸಾಯುವುದಕ್ಕೆ ಹೆದರುತ್ತೇನೆಂದು ತಿಳಿಯಬೇಡ, ಸಾವೆಲ್ಲರಿಗೂ ಒಂದು ದಿನ ಬರಬೇಕಾದದ್ದೆ" (೨೦೦೩, ಸಂ-೯, ಕಾ-೮, ೪೮) ಎಂದು ಸಾವಿನ ಅನಿವಾರ್ಯತೆಯನ್ನು ಕುರಿತು ಹೇಳುತ್ತಾಳೆ. ಸಾವು ಬರುವಾಗ ಬಂದೇ ಬರುತ್ತದೆ. ಅದಕ್ಕಾಗಿ ಚಿಂತೆ ಮಾಡಬಾರದು ಎಂಬುದನ್ನು ಸ್ತ್ರೀ ಪಾತ್ರದ ಮೂಲಕ ಚಿತ್ರಿಸಲಾಗಿದೆ.

'ಜಾರುವ ದಾರಿಯಲ್ಲಿ' ಕಾದಂಬರಿಯಲ್ಲಿ ವೇಶ್ಯೆಯ ವಿಚಾರವಂತಿಕೆ, ಸಾವಿನ ಅನಿವಾರ್ಯತೆ ಕುರಿತು ಚಿತ್ರಿಸಲಾಗಿದೆ. ವೇಶ್ಯೆಯ ಪಾತ್ರವನ್ನು ಆದರ್ಶದ ಹಿನ್ನೆಲೆಯಲ್ಲಿ ಚಿತ್ರಿಸಿರುವುದು ಸ್ಪಷ್ಟವಾಗುತ್ತದೆ. ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಹುಟ್ಟು-ಸಾವು ಒಂದಕ್ಕೊಂದು ಪೂರಕವಾಗಿವೆ. ಸಾವು ಯಾವುದೇ ಗಳಿಗೆಯಲ್ಲಿಯೂ ಬರಬಹುದು. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಅದಕ್ಕಾಗಿ ವಿಚಲಿತರಾಗಬಾರದು. ನಿರಾಳಮನಸ್ಸಿನಿಂದ ಸ್ವೀಕರಿಸಬೇಕು ಎಂಬ ಪ್ರಕೃತಿಯ ನಿಯಮವನ್ನು ಪಾತ್ರಗಳ ಮೂಲಕ ಪ್ರಕಟಿಸಲಾಗಿದೆ.

'ವೇಶ್ಯಾವೃತ್ತಿ'ಯು ಸಾಮಾಜಿಕ ಸಮಸ್ಯೆಯಾಗಿದೆ. ಅದರ ನಿರ್ಮೂಲನೆಗಾಗಿ ಹಲವಾರು ಸಮಾಜ ಸುಧಾರಕರು ಪ್ರಯತ್ನಿಸಿದ್ದಾರೆ. ಆದರೆ ವಯಸ್ಸಾದ ವೇಶ್ಯೆಯರು ತಮ್ಮ ಉಪಜೀವನಕ್ಕಾಗಿ ತಮ್ಮ ಮಕ್ಕಳನ್ನು ಬಲವಂತವಾಗಿ ವೇಶ್ಯಾವೃತ್ತಿಗೆ ನೂಕುತ್ತಾರೆ. ವೇಶ್ಯೆಯ ಮಗಳೊಬ್ಬಳು ತನ್ನ ತಾಯಿಯ ಮಾತನ್ನು ನಿರಾಕರಿಸಿ, ಗರತಿಯ ಬಾಳ್ವೆಯನ್ನು ಮಾಡಲು ಪ್ರಯತ್ನಿಸುವ ಸ್ತ್ರೀಯ ವಿಚಾರವಂತಿಕೆ "ಬತ್ತದ ತೊರೆ" ಕಾದಂಬರಿಯಲ್ಲಿದೆ. ಮಂಜರಿಯು ತನ್ನ ಮಗಳನ್ನು ವೇಶ್ಯಾವೃತ್ತಿಗೆ ಎಳೆಯಲು ಪ್ರಯತ್ನಿಸುತ್ತಾಳೆ. ಆದರೆ ವಿನತೆಯು ಅದನ್ನು ಖಂಡಿಸುತ್ತಾಳೆ. 'ದುರ್ದೈವದಿಂದ ನಿನ್ನ ಬಾಳು ಹಾಗಾಯಿತು. ನಾನು ಅದನ್ನು ಒಪ್ಪುವುದಿಲ್ಲ' ಎಂದು ವಿರೋಧಿಸುತ್ತಾಳೆ. ವೇಶ್ಯೆಯ ಮಗಳು ವೇಶ್ಯೆಯೇ ಆಗಬೇಕೆನ್ನುವ ಸಮಾಜದ ಅಲಿಖಿತ ನಿಯಮವನ್ನು ತನ್ನ ತಿಳುವಳಿಕೆಯಿಂದ ಉಲ್ಲಂಘನೆ ಮಾಡುತ್ತಾಳೆ. ಎಲ್ಲರಂತೆ ತಾನೂ ಮದುವೆಯಾಗಿ ಗೌರವಯುತ ಜೀವನ ಸಾಗಿಸಬೇಕೆಂದು ಬಯಸುತ್ತಾಳೆ. ಗಾಂವಕರನನ್ನು ಮದುವೆಯಾಗುತ್ತಾಳೆ. ಅವನಿಂದ ಒದಗುವ ಕಷ್ಟಗಳಿಗೆ ಎದೆಗುಂದದೆ ಮಕ್ಕಳನ್ನು ಬೆಳೆಸುತ್ತಾಳೆ.

ಸಾಮಾಜಿಕ ವ್ಯವಸ್ಥೆ ಬದಲಾಗುತ್ತಿದೆ. ವೇಶ್ಯೆಯರು, ವೇಶ್ಯೆಯರ ಮಕ್ಕಳು ಮದುವೆಯಾಗುವ ಸಾಧ್ಯತೆಯನ್ನು ಕಾದಂಬರಿಕಾರರು 'ಬತ್ತದ ತೊರೆ' ಕಾದಂಬರಿಯಲ್ಲಿ ಗ್ರಹಿಸಿದ್ದಾರೆ. ವಿನತೆಯು ಸಂಪ್ರದಾಯ ಸಮಾಜದ ಆಚಾರ, ವಿಚಾರಗಳನ್ನು ವಿರೋಧಿಸುತ್ತ ಗಾಂವಕರನನ್ನು ಮದುವೆಯಾಗುತ್ತಾಳೆ. ಆದರೆ ಸಂಪ್ರದಾಯದ ಸ್ತ್ರೀಯರಂತೆ, ಗಂಡನ ಹಿಂಸೆಯನ್ನು ಅನುಭವಿಸುತ್ತ ಅವನಿಗೆ ವಿಧೇಯಳಾಗಿರುವುದು 'ಮದುವೆ ಹೆಣ್ಣನ್ನು ಬಂಧನದಲ್ಲಿಡುತ್ತದೆ' ಎಂಬುದನ್ನು ದೃಢಪಡಿಸುತ್ತದೆ.

ಮಾನವ ಕುಲ ಎಂಬುದು ಒಂದೇ, ಅದರಲ್ಲಿ ಯಾವುದೇ ಮೇಲ್ಜಾತಿಯಾಗಲಿ, ಕೀಳ್ಜಾತಿಯಾಗಲಿ ಇಲ್ಲ ಎಲ್ಲರೂ ಸಮಾನರು, ಸಮಾನತೆಯಿಂದ ಬದುಕಲು ಪರಸ್ಪರ ಒಬ್ಬರಿಗೊಬ್ಬರು ಪೂರಕವಾಗಿರಬೇಕು ಎಂಬ ತಾತ್ವಿಕತೆಯನ್ನು 'ಸಮೀಕ್ಷೆ' ಕಾದಂಬರಿಯ ಗಂಗಜ್ಜಿಯ ಪಾತ್ರದ ಮೂಲಕ ನಿರೂಪಿಸಲಾಗಿದೆ. ನರಸಜ್ಜಿಗೆ ತನ್ನ ಮಗ ವಾಸುದೇವ ವೇಶ್ಯೆಯೊಂದಿಗೆ ಮದುವೆಯಾಗಿರುವುದನ್ನು ಸಹಿಸಿಕೊಳ್ಳಲಾಗುವುದಿಲ್ಲ, ಜಾತಿಯತೆಯ ಮೌಢ್ಯದಲ್ಲಿರುವ ಅವಳಿಗೆ ಮಗನ ಮದುವೆಯಿಂದ ತುಂಬ ಬೇಸರವಾಗುತ್ತದೆ. ಅವಳನ್ನು ತನ್ನ ಸೊಸೆಯೆಂದು ಸ್ವೀಕರಿಸಲು ಅವಳಿಗೆ

ಸಾಧ್ಯವಾಗಲಿಲ್ಲ. ವೇಶ್ಯೆಯರ ಬಗೆಗೆ ಅಸಮಾಧಾನವಿತ್ತು. ಆದರೆ ಗಂಗಜ್ಜಿಯು ಪ್ರಗತಿ ಪರ ನಿಲುವನ್ನು ಹೊಂದಿದ್ದಳು. ಜಾತಿಯತೆಯ ಬಗೆಗೆ ತಲೆಕೆಡಿಸಿಕೊಂಡವಳಲ್ಲ. ಶ್ರೀನಿವಾಸನು ತನ್ನ ಸ್ನೇಹಿತ ವಾಸುದೇವನ ಹೆಂಡತಿ ಹಾಗೂ ಅವನ ಮಗಳನ್ನು ಮನೆಗೆ ಕರೆದು ತಂದಾಗ ಸಂತೋಷದಿಂದ ಸ್ವಾಗತಿಸುತ್ತಾಳೆ. 'ಕುಲಕ್ಕಿಂತ ಶೀಲ ದೊಡ್ಡದು' ಎಂದು ಭಾವಿಸಿ ಅವರೊಂದಿಗೆ ಆತ್ಮೀಯತೆಯಿಂದ ಬೆರೆಯುತ್ತಾಳೆ. ಶ್ರೀನಿವಾಸನು ಬೇರೆ ಜಾತಿಯಲ್ಲಿ ಹುಟ್ಟಿದ ತನ್ನ ಸಾಕು ಮಗಳು ಸುಹಾಸಿನಿಯನ್ನು ಬಾಣಂತನಕ್ಕೆ ಕರೆದು ತರಲು ಅಳುಕುತ್ತಾನೆ. ಆದರೆ ಅವನ ಮನಸ್ಸನ್ನರಿತ ಗಂಗಜ್ಜಿ 'ನಿಮ್ಮ ಸಂತೋಷ ಬಿಟ್ಟು ಬೇರುಂಟೆ ನನಗೆ?' ಎಂದು ಹೇಳುತ್ತಾಳೆ. "ಮನುಷ್ಯ ತನ್ನ ಕಟ್ಟಲೆಯ ಕಟ್ಟಿನಿಂದ ಬಿಡುಗಡೆ ಹೊಂದದೆ ಜೀವನದ ವಿಷಯದಲ್ಲಿ ಸಮನಾದ ನೋಟಕ್ಕೆ ಬರಲಾರ; ಸಮನಾದ ತೀರ್ಮಾನ ಗಳಿಸಲಾರ. ಸಮನಾದ ಜೀವನ ಸಾಧಿಸಲಾರ" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಹೇಳಿರುವುದನ್ನು (೨೦೦೪: ೨೦) ಗಂಗಜ್ಜಿಯ ಪಾತ್ರದ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು.

ಮನುಷ್ಯ ತನ್ನ ಕಟ್ಟಲೆಯ ಕಟ್ಟಿನಿಂದ ಬಿಡುಗಡೆ ಹೊಂದಬೇಕು. ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತವಾದ ತೀರ್ಮಾನವನ್ನು ಕೈಗೊಳ್ಳಬೇಕು ಎಂಬುದು 'ಸಮೀಕ್ಷೆ' ಕಾದಂಬರಿಯ ಆಶಯವಾಗಿದೆ.

ಅತ್ತೆ-ಸೊಸೆಯರ ಸಂಬಂಧ ಜಗಜ್ಜಾಹೀರವಾದುದು. ಅವರಲ್ಲಿಯ ಕಚ್ಚಾಟ ಸರ್ವೆ ಸಾಮಾನ್ಯ. ಮಾನಸಿಕ ಸ್ಥಿರತೆಯ ಕೊರತೆಯಿಂದ, ಹೊಂದಾಣಿಕೆಯ ಅಭಾವದಿಂದ ಭಿನ್ನಾಭಿಪ್ರಾಯಗಳು ತಲೆದೊರುತ್ತವೆ. ಆದರೆ ಅತ್ತೆ ಸೊಸೆಯರ ಸಂಬಂಧ ಎರಡು ಜೀವಿಗಳ ನಡುವಣ ವೈಚಾರಿಕ ಹೊಂದಾಣಿಕೆಯಾಗಿದೆ. ಸಾವಿತ್ರಮ್ಮ ತನ್ನ ಮಗ ಸುಬ್ರಾಯ ಊರೂರು ಅಲೆದಾಡುತ್ತ ಹೆಂಡತಿಯಿಂದ ದೂರವಿದ್ದುದನ್ನ ಕಂಡು ಮಗನನ್ನು ಎಚ್ಚರಿಸುತ್ತಾಳೆ. ಗಂಡ, ಹೆಂಡತಿಯರ ಸಂಬಂಧ ಕುರಿತು ತಿಳಿ ಹೇಳುತ್ತಾಳೆ. ಅವರೀರ್ವರ ದಾಂಪತ್ಯ ಸಂಬಂಧವನ್ನು ಬೆಸೆಯಲು ಪ್ರಯತ್ನಿಸುತ್ತಾಳೆ.

ಸಾವಿತ್ರಮ್ಮ ತನ್ನ ಸೊಸೆಯನ್ನು ಮಗಳಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಆದರೆ ಅವಳಿಗೆ ನೀಲಿಕಣ್ಣು, ಆರು ಬೆರಳುಗಳುಳ್ಳ ಮಗು ಜನಿಸಿದಾಗ ಅವಳ ಶೀಲದ ಮೇಲೆ ಅನುಮಾನ ಪಟ್ಟು ಮನೆಯಿಂದ ಹೊರದೂಡುತ್ತಾಳೆ. 'ನೆನಪುಗಳು ಜೀವನ ಪಾಠವನ್ನು ಮರೆತ ಮೇಲೆಯೇ ಹಲವು ಬಾರಿ ಬರುತ್ತವೆ' ಎಂಬ ಸೂಕ್ತಿಯಂತೆ ಮುಂದೆ ಸತ್ಯದ ಅರಿವಾದಾಗ ಪಶ್ಚಾತ್ತಾಪದಿಂದ ಸೊಸೆ ಸತ್ಯಭಾಮೆಯಲ್ಲಿಗೆ ಹೋಗಿ ಕ್ಷಮೆ ಯಾಚಿಸುತ್ತಾಳೆ. ಅನುವಂಶೀಯತೆಯಿಂದ ನೀಲಿಕಣ್ಣು, ಆರು ಬೆರಳುಗಳುಳ್ಳ ಮಗು ಹುಟ್ಟುವ ಸಾಧ್ಯತೆಯಿದೆ ಎಂಬ ವೈದ್ಯಕೀಯ ಸತ್ಯವನ್ನು ಅರಿಯುತ್ತಾಳೆ. ಈ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ಮಗುವು ತಂದೆ-ತಾಯಿಯರ ರೂಪವನ್ನಲ್ಲದೆ ತಮ್ಮ ವಂಶದ ಹಿರಿಯರ ರೂಪ ಲಕ್ಷಣಗಳನ್ನು ಹೊಂದುವ ಸಾಧ್ಯತೆಯಿರುತ್ತದೆ ಎಂಬುದನ್ನು ಸತ್ಯಭಾಮೆಯ ಮಗುವಿನ ದೃಷ್ಟಾಂತದಿಂದ ತಿಳಿ ಹೇಳಲಾಗಿದೆ.

ಸತ್ಯಭಾಮೆಯು ತನ್ನದಲ್ಲದ ತಪ್ಪಿನಿಂದಾಗಿ ನೋವನ್ನು ಅನುಭವಿಸುತ್ತಾಳೆ. ಎಲ್ಲದಕ್ಕೂ ಮನಸ್ಸೇ ಮುಖ್ಯವೇ ಹೊರತು ದೇವರಲ್ಲ ಎಂದು ನಂಬುತ್ತಾಳೆ. ಇಂಥಹ ವೈಚಾರಿಕ ಸ್ಪರ್ಶದಿಂದ ತನ್ನ ಕಷ್ಟ ವಿಮುಕ್ತಿಯ ದಾರಿಯನ್ನು ತಾನೇ ಕಂಡುಕೊಳ್ಳುತ್ತಾಳೆ. ತನ್ನ ನಾದಿನಿಯ ಸಹೋದರ ವಿನಾಯಕ ಇಡಗುಂಜಿಯೊಂದಿಗೆ ಮನೆಯಿಂದ ಓಡಿ

ಹೋಗಿ ಮದುವೆಯಾಗುತ್ತಾಳೆ. ಸಂಪ್ರದಾಯಕ್ಕೆ ಕಟ್ಟು ಬೀಳದೆ ಆಧುನಿಕ ಆಲೋಚನೆಗಳಿಂದ ತನ್ನ ಬದುಕನ್ನು ಸರಿಪಡಿಸಿಕೊಳ್ಳುತ್ತಾಳೆ. ಜೀವನದ ರೀತಿ, ನೀತಿಯನ್ನು ಸಂಪ್ರದಾಯಬದ್ಧವಾಗಿ ಅರ್ಥೈಸಿಕೊಳ್ಳದೆ ವಾಸ್ತವದ ಹಿನ್ನೆಲೆಯಲ್ಲಿ ಪ್ರಾಯೋಗಿಕವಾಗಿ ಅರಿತುಕೊಂಡು ಬಾಳ್ವೆ ಮಾಡಬೇಕು ಎಂಬುದು ಸತ್ಯಭಾಮೆಯ ಪಾತ್ರದಿಂದ ಸ್ಪಷ್ಟವಾಗುತ್ತದೆ.

ಸುಖವಾಗಿ ಬಾಳಬಹುದಾಗಿದ್ದ ವಾಗ್ದೇವಿಯು ತನ್ನ ಮೌಢ್ಯದಿಂದಾಗಿ ತನ್ನ ಜೀವನವನ್ನೇ ನರಕವನ್ನಾಗಿಸಿಕೊಳ್ಳುತ್ತಾಳೆ. ಅನಿವಾರ್ಯತೆಯನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳಬೇಕು. ಅದನ್ನು ತಡೆಯಲು ಹೋದರೆ ಮನಸ್ಸಿಗೆ ಬೇಸರವಾಗುತ್ತದೆ. ವೈಜ್ಞಾನಿಕ ನೆಲೆಯಲ್ಲಿ ವಾಗ್ದೇವಿಯ ನಂಬಿಕೆಯಾಗಲಿ, ಅವಳ ಜಾತಿ ಭಾವವಾಗಲಿ, ಸಮರ್ಥನೀಯವಲ್ಲ, ಅದೇ ರೀತಿ ಅವಳ ಪ್ರತಿಭಟನೆ ಕೂಡ ಆರೋಗ್ಯಕರವಲ್ಲ, ಸುಖ ಸಂಸಾರಕ್ಕೆ ಗಂಡ, ಹೆಂಡತಿಯರ ಜಾತಿ ಸಾಮರಸ್ಯಕ್ಕಿಂತ, ಪ್ರೀತಿ ವಿಶ್ವಾಸಗಳಿಂದ ಉದಯಿಸುವ ಸ್ವಭಾವ ಸಾಮರಸ್ಯವೇ ಅಗತ್ಯ. ಇದನ್ನರಿತುಕೊಳ್ಳುವಲ್ಲಿ ವಿಫಲಳಾದ ವಾಗ್ದೇವಿಯು ಸಂಸಾರದಲ್ಲಿದ್ದೂ ಸನ್ಯಾಸಿನಿಯಂತೆ ಬದುಕುತ್ತಾಳೆ. ಅರೆ ಹುಚ್ಚಿಯಂತೆ ಜೀವನ ಸಾಗಿಸುತ್ತಾಳೆ.

ಸಂಪ್ರದಾಯ ಹಾಗೂ ಆಧುನಿಕ ಪ್ರಗತಿಪರ ವಿಚಾರಗಳನ್ನು ಹೊಂದಿದ ಇಬ್ಬರು ಭಿನ್ನ ವ್ಯಕ್ತಿತ್ವವನ್ನು ಹೊಂದಿದ ಸ್ತ್ರೀ ಪಾತ್ರಗಳ ಮೂಲಕ ಸಂಪ್ರದಾಯಕ್ಕಿಂತ ಆಧುನಿಕ ಪಗ್ರತಿಪರ ವಿಚಾರಗಳೇ ಇಂದು ಪ್ರಸ್ತುತವೆನಿಸುತ್ತವೆ ಎಂಬುದನ್ನು 'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ. ಜಾತೀಯತೆಯ ಮೌಢ್ಯದಿಂದ ಹೊರಬರಬೇಕು ಎಂಬುದು ಕಾದಂಬರಿಯ ಒಳದನಿಯಾಗಿದೆ.

'ಅಳಿದ ಮೇಲೆ' ಕಾದಂಬರಿಯ ಪಾರ್ವತಮ್ಮ ವೈಚಾರಿಕ ನೆಲೆಯಿಂದ ಜೀವನದ ಸಾಧ್ಯ, ಅಸಾಧ್ಯತೆಗಳ ಕಡೆಗೆ ಯೋಚಿಸುತ್ತಾಳೆ. ಭೂತಕಾಲವನ್ನು ಮರೆಯದ ಅವಳು ವಂಶಪರಂಪರೆಯಲ್ಲಿ ಹಿಂದಿನದೂ ಮತ್ತು ಮುಂದಿನದೂ ಸೇರಿಕೊಳ್ಳುತ್ತದೆ ಎಂದು ನಂಬಿದ್ದಳು. 'ಸತ್ತವರಿಗಾಗಿ ದುಃಖಿಸಬಾರದು; ದುಃಖವನ್ನು ನುಂಗಿಕೊಳ್ಳಬೇಕು' ಎಂಬಂತೆ ಯಶವಂತನ ಸಾವಿನಿಂದಾಗಿ ವಿಚಲಿತಳಾಗದೆ "ನೀರಮೇಲಣ ಗುಳ್ಳೆ ಎಂಬುದು ಈ ಬದುಕು. ಅದೊಂದು ಸ್ಥಿರವೆ" (೨೦೦೩. ಸಂ-೧೪, ಕಾ-೧೩: ೪೩) ಎಂದು ವೇದಾಂತಿಕವಾಗಿ ಪ್ರತಿಕ್ರಿಯಿಸುತ್ತಾಳೆ. ಬಾಳು ಕ್ಷಣಿಕವೆಂಬ ಅನುಭವದ ಹಿಂದೆ ಮನುಷ್ಯ ಜನ್ಮ ಅನಂತವಾದುದು ಎಂಬ ದಾರ್ಶನಿಕತೆಯಲ್ಲಿ ಅವಳು ಬಾಳನ್ನು ಸವೆಸುತ್ತಾಳೆ. ಬಾಳಿನ ಅಸ್ಥಿರತೆಗಾಗಿ ಎಂದೂ ಮರುಗಿದವಳಲ್ಲ, ಆದರೆ ಅದನ್ನು ಅರಿತುಕೊಳ್ಳದೆ ವ್ಯರ್ಥ ಕೊರಗುವವರ ಬಗೆಗೆ ಅವಳ ಅನುಕಂಪವಿದೆ. ಬದುಕಿಗೆ ಬೇಕಾಗಿರುವುದು ಅದರ ಆದಿ ಅಂತ್ಯವನ್ನು ಪ್ರಶ್ನಿಸುವ ವ್ಯರ್ಥ ವಿಚಾರಗಳಲ್ಲ, ಬದಲಿಗೆ ಎದುರಾದ ಸಮಸ್ಯೆಗಳನ್ನು ನಿಭಾಯಿಸಿಕೊಂಡು ಹೋಗುವ ಆತ್ಮಸ್ಥೈರ್ಯ ಎಂಬುದು ಪಾರೋತಿಯ ವೈಚಾರಿಕ ಚಿಂತನೆಯಾಗಿತ್ತು. ಪಾರ್ವತಿ-ಮೂಕಾಂಬಿಕೆ ಸಮಪ್ರಾಯದವರು, ಆತ್ಮೀಯತೆಯಿಂದ ಇದ್ದರು. ದಾಯಾದಿ ಕಲಹದಿಂದಾಗಿ ಪ್ರತ್ಯೇಕವಾಗಿದ್ದರು. ಯಶವಂತರಾಯನನ್ನು ಪ್ರೀತಿಸುತ್ತಿದ್ದ ಆ ಇಬ್ಬರು ಕುಟುಂಬದ ಸದಸ್ಯರಿಗೆ ತಿಳಿಯದಂತೆ ಪರಸ್ಪರ ಭೇಟಿಯಾಗಿ, ಸುಖ-ದುಃಖಗಳನ್ನು ಹಂಚಿಕೊಳ್ಳುತ್ತಿದ್ದರು.

ಪಾರೋತಿ ಧಾರ್ಮಿಕ ನೆಲೆಯಲ್ಲಿ ವೈಚಾರಿಕತೆಯನ್ನು ಕಂಡುಕೊಂಡು ಬದುಕನ್ನು ಸಾಗಿಸುತ್ತಿದ್ದಳು. "ತನ್ನನ್ನು ತಾವು ಪ್ರೀತಿಸಿಕೊಳ್ಳುವ ವ್ಯಕ್ತಿಗಳು ಜೀವನದಲ್ಲಿ ಎಲ್ಲರನ್ನು ಪ್ರೀತಿಸುವವರಾಗುತ್ತಾರೆ" ಎಂಬ ವಿಶ್ವನಾಥರ ಹೇಳಿಕೆ ಸತ್ಯವಾದುದು. (೨೦೦೧: ೭೦) ಪಾರೋತಿ ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದಳು. ಬದುಕಿಗೆ ಬೇಕಾಗಿರುವುದು ವ್ಯರ್ಥ ಚಿಂತೆಗಳಲ್ಲ, ಉತ್ತಮವಾದ ಚಿಂತನೆಯಿಂದ ಬುದುಕನ್ನು ಸಾಗಿಸಬೇಕು ಎಂಬುದು ಕಾದಂಬರಿಯ ಆಶಯವಾಗಿದೆ.

ಗಂಡನ ಆದರ್ಶಗಳನ್ನೇ ತನ್ನವೆಂದು ನಂಬಿ ನಡೆಯುವ ಒಂದು ಬಗೆಯ ಅರ್ಪಣಾ ಭಾವದಿಂದ ಬದುಕು ಸಾಗಿಸುವಾಗಲೂ, ತನ್ನ ಆಲೋಚನೆಗಳನ್ನು ಸಂದರ್ಭದೊಡನೆ ತೂಗಿ ನೋಡುವ ಆತ್ಮಬಲವನ್ನು ಹೊಂದಿದ ತುಂಗಮ್ಮಳ ಪಾತ್ರದ ಮುಖಾಂತರ ಪುರುಷ ಪ್ರಧಾನ ಸಮಾಜದ ನಿಲುವು ಬದಲಾಗುತ್ತಿರುವುದನ್ನು "ಸ್ವಪ್ನದ ಹೊಳೆ" ಕಾದಂಬರಿಯಲ್ಲಿ ಗುರುತಿಸಲಾಗಿದೆ. ತುಂಗಮ್ಮನ ಮಗಳು ರುಕ್ಮಿಣಿಯ ಗಂಡ ಹಾವು ಕಚ್ಚಿ ಸಾವನ್ನಪ್ಪಿದಾಗ ಅವಳನ್ನು ತಿರುಗಿ ಗಂಡನ ಮನೆಗೆ ಕಳುಹಿಸಲು ತುಂಗಮ್ಮ ಒಪ್ಪುವುದಿಲ್ಲ, ತಮ್ಮ ಮನೆಯಲ್ಲಿಯೇ ಆಶ್ರಯ ನೀಡುವಲ್ಲಿ ತುಂಗಮ್ಮಳ ವಿಚಾರವಂತಿಕೆ ಸ್ಪಷ್ಟವಾಗಿ ಸಾಮಾಜಿಕ ಪರಿವರ್ತನೆಯನ್ನು ಬಯಸುವಂತದ್ದಾಗಿದೆ. ಸಂಪ್ರದಾಯದ ಪ್ರಕಾರ ಹೆಣ್ಣು ಕೊಟ್ಟ ಮನೆಗೆ ಸೇರುತ್ತಾಳೆ. ಗಂಡ ಸತ್ತರೂ ಅವಳು ಗಂಡನ ಮನೆಯಲ್ಲಿಯೇ ಬಾಳಬೇಕು. ಇದು ಹಿಂದೂ ಸಂಪ್ರದಾಯದ ನಿಯಮ. ಆದರೆ ತುಂಗಮ್ಮ ಗಂಡನಿಲ್ಲದ ಮನೆಯಲ್ಲಿ ತಮ್ಮ ಮಗಳಿಗೆ ಕಷ್ಟ ಕಾರ್ಪಣ್ಯಗಳು ತಪ್ಪಿದ್ದಲ್ಲವೆಂದು ಅರಿತಿದ್ದಳು. ಆದ್ದರಿಂದಲೇ ಮಗಳ ಸುಖ, ಸಂತೋಷಕ್ಕಾಗಿ ಅವಳ ಉಜ್ವಲ ಭವಿಷ್ಯಕ್ಕಾಗಿ ಸಂಪ್ರದಾಯವನ್ನು ಧಿಕ್ಕರಿಸುತ್ತಾಳೆ. ಅವಳಲ್ಲಿ ಒಳಿತು ಕೆಡಕುಗಳ ಜಿಜ್ಞಾಸೆಯಿದೆ. ಲೋಕವ್ಯವಹಾರದ ಜ್ಞಾನವಿದೆ. ಆಧುನಿಕ ಪ್ರಗತಿಪರ ವಿಚಾರಗಳಿಂದ ಮಗಳ ಒಳಿತಿಗಾಗಿ 'ಕೊಟ್ಟ ಹೆಣ್ಣು ಕುಲಕ್ಕೊರಗೆ' ಎಂಬ ಸಾಂಪ್ರದಾಯಿಕ ಮೌಲ್ಯವನ್ನು ಧಿಕ್ಕರಿಸುವ ಅವಳ ನಿಲುವು ಪ್ರಜ್ಞಾಪೂರಕವಾಗಿದೆ.

ತುಂಗಮ್ಮ ತನ್ನ ಮಗನ ಮದುವೆಗಾಗಿ ತುಂಬ ಯೋಚಿಸುತ್ತಾಳೆ. ಏಕೆಂದರೆ ಮದುವೆಯಂತಹ ಒಂದು ಮಹತ್ವದ ಕೆಲಸದಲ್ಲಿ ಅವಸರ ಮಾಡುವುದು ಒಳಿತಲ್ಲ; ಗಂಡು ಹೆಣ್ಣು ಅರಿತು ಸೇರಬೇಕು. ಅಂದಾಗ ಮಾತ್ರ ಜೀವನ ಸುಗಮವಾಗಿ ಸಾಗುತ್ತದೆ ಎಂದು ಯೋಚಿಸುತ್ತಾಳೆ. ಅಂತೆಯೇ ಕಿಟ್ಟನು ಮುಂಬೈಯಿಂದ ಬನ್ನಿಯೊಂದಿಗೆ ಅಂತರ್ಜಾತಿ ಮದುವೆ ಮಾಡಿಕೊಂಡು ಬಂದಾಗ ತುಂಗಮ್ಮ ಕೋಪಗೊಳ್ಳದೆ ತುಂಬ ಸಂತೋಷದಿಂದ ಸ್ವಾಗತಿಸುತ್ತಾಳೆ. ಬನ್ನಿ ಯಾರು, ಎಲ್ಲಿಯವಳು, ಯಾವ ಜಾತಿಯವಳು, ಎಂದು ಅನಾವಶ್ಯಕವಾಗಿ ವಿಚಾರಿಸುವುದಿಲ್ಲ ಬದಲಿಗೆ ರಣ ಬಿಸಿಲಿನಲ್ಲಿ ಕರೆದುಕೊಂಡು ಬಂದುದಕ್ಕೆ ಅನುಕಂಪ ಸೂಚಿಸುತ್ತಾಳೆ. ಮದುವೆಯೆನ್ನುವುದು ಋಣಾನುಬಂಧ ಎಂದು ನಿಟ್ಟುಸಿರು ಬಿಡುತ್ತಾಳೆ. ತನ್ನ ವೇದನೆಯನ್ನು ಮರೆಯುತ್ತಾಳೆ. "ಮನಸ್ಸು ಬಹುಮುಖವಾಗಿ ಓಡುವುದರಿಂದ ಅಶಾಂತಿ ಬರುವುದುಂಟು. ಅದನ್ನು ಯಾವುದಾದರೊಂದು ಉದ್ದೇಶದ ಕಡೆಗೆ ಹರಿಯಗೊಟ್ಟರೆ ಶಾಂತಿ ಉಂಟಾಗಬಹುದು" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಹೇಳಿರುವುದನ್ನು ನೆನೆಪಿಸಿಕೊಳ್ಳಬಹುದು. (೨೦೦೪: ೪೭) ತುಂಗಮ್ಮ ಮಗ ಮದುವೆಗೆ ಮನಸ್ಸು ಮಾಡಿದನಲ್ಲ ಎಂಬ ತೃಪ್ತಿಯನ್ನು ಹೊಂದುತ್ತಾಳೆ.

ಪರಂಪರಾಗತ ಪುರುಷಪ್ರಧಾನ ನಿಲುವುಗಳು ಇಂದು ವಾಸ್ತವದ ನೆಲೆಗಟ್ಟಿನಲ್ಲಿ ಕಾಲಕ್ಕನುಗುಣವಾಗಿ ಬದಲಾಗುತ್ತಿರುವುದನ್ನು ಕಾದಂಬರಿಕಾರರು 'ಸ್ವಪ್ನದ ಹೊಳೆ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಬಾಳಿನಲ್ಲಿ ಅಳವಡಿಸಿಕೊಳ್ಳಲಾಗದ ಆದರ್ಶಗಳನ್ನು ಕೇವಲ ಬಡಾಯಿಕೊಚ್ಚಿಕೊಳ್ಳುವುದು ನಿಷ್ಪ್ರಯೋಜಕ ಎಂಬುದನ್ನು 'ಇನ್ನೊಂದು ದಾರಿ' ಕಾದಂಬರಿಯಲ್ಲಿ ಚರ್ಚಿಸಲಾಗಿದೆ. ದುಷ್ಟ ಗಂಡನನ್ನು ಪಡೆದ ಹೊನ್ನಜ್ಜಿಯು ಜೀವನದಲ್ಲಿ ತುಂಬ ಕಷ್ಟಗಳನ್ನು ಅನುಭವಿಸಿದ್ದಳು. ಆ ಕಷ್ಟದಿಂದ ಪಾರಾಗಲು ಒಂದೆರೆಡು ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವಳಾದರೂ ಧೈರ್ಯಸಾಲದೆ ಹಿಂದೆ ಸರಿಯುವಳು. ಮಹಾಭಾರತದ ಭೀಷ್ಮಾಚಾರ್ಯರಂತೆ ತಾನೂ ಇಚ್ಛಾಮರಣಿಯಾಗಬಾರದಿತ್ತೆ? ಎಂದು ಯೋಚಿಸುತ್ತಾಳೆ. ಹುಟ್ಟು ಸಾವು ಪ್ರಕೃತಿಯ ನಿಯಮ. ಅದು ತಾನಾಗಿಯೇ ಬರುತ್ತದೆ. ಸಾವನ್ನು ಕೂಗಿದರೆ ಅದು ಬರಲಾರದು ಎಂದು ಹೊನ್ನಜ್ಜಿ ಸಾವಿನ ಕುರಿತು ತನ್ನ ಅನುಭವವನ್ನು ಹೇಳುತ್ತಾಳೆ.

ಜಾನಕಿ ಸಂಪ್ರದಾಯದಲ್ಲಿ ಹೆಚ್ಚಿನ ನಂಬಿಕೆಯನ್ನು ಹೊಂದಿದ್ದಳು. ಮಡಿ, ಮೈಲಿಗೆ, ಜಾತಿಯತೆಯನ್ನು ಆಚರಿಸುತ್ತಿದ್ದಳು. ತನ್ನ ಮಗ ಶ್ರೀರಾಮನು ಅನ್ಯ ಜಾತಿಯವಳೊಡನೆ ಮದುವೆಯಾದಾಗ ಮೊದಲು ಬೇಸರ ಪಟ್ಟುಕೊಂಡಳು. ಆದರೆ ಕಾಲಕ್ರಮೇಣ ಅದನ್ನು ಮರೆತಳು. ಅಂತೆಯೇ "ಕಾಲ ಮತ್ತು ದೇವರು ಎಲ್ಲವನ್ನು ವಾಸಿಮಾಡುತ್ತಾನೆ" ಎಂಬ ವೇದಾಂತವು ನಿಜವಾಗಿದೆ. "ಒಂದೇ ದೈವ ನಮ್ಮನೆಲ್ಲ ಸೃಷ್ಟಿಸಿದ್ದಾದರೆ ತನ್ನ ಸೃಷ್ಟಿಯ ಜನಗಳಲ್ಲಿ ಸ್ಪರ್ಶ ಮತ್ತು ಅಸ್ಪರ್ಶ ಎಂಬ ಪಕ್ಷಪಾತವನ್ನು ದೇವರು ಏಕೆ ನಿರ್ಮಿಸಿದ ಎಂದು ಒಬ್ಬಾತನ ಮನಸ್ಸು ಕೇಳಬಹುದು" (೧೯೭೮; ೧೦೮) ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಸ್ಮೃತಿಪಟಲ'ದಲ್ಲಿ ಹೇಳಿದ್ದಾರೆ. ಅದಕ್ಕೆ ಪೂರಕವಾಗಿಯೇ ಜಾನಕಿಯು ಆಲೋಚಿಸುವಂತಿದೆ. ಅನ್ಯ ಜಾತಿಯ ಮದುವೆಯನ್ನು ಸ್ವಾಗತಿಸುತ್ತಾಳೆ, ಶ್ರೀರಾಮ ಮತ್ತು ಅವನ ಮಗನನ್ನು ಪ್ರೀತಿಸುತ್ತಾಳೆ, ಪೋಷಿಸುತ್ತಾಳೆ.

'ಮೋಹ ಇದ್ದಲ್ಲಿ ಬಂಧನವೂ ಇದೆ. ಬಂಧನ ಇರುವುದರಿಂದಲೇ ಮೋಹ ಇರುವುದು' ಎಂಬ ವೇದಾಂತದಂತೆ ಜಾನಕಿಯು ತನ್ನ ಮಕ್ಕಳು ಹಾಗೂ ಕುಟುಂಬವನ್ನು ತುಂಬಾ ಪ್ರೀತಿಸುತ್ತಿದ್ದಳು. ಮಕ್ಕಳು, ಕುಟುಂಬಕ್ಕಿಂತ ಮಿಗಿಲಾದುದು ಏನೂ ಇಲ್ಲ ಎಂಬ ಭಾವನೆಯನ್ನು ಹೊಂದಿದ್ದಳು. ಈ ಮನೋಭಾವನೆಯಿಂದಲೇ ಜಾತಿಯ ಹಂಗನ್ನು ತೊರೆಯಲು ಅವಳಿಗೆ ಸಾಧ್ಯವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅಂತೆಯೇ "ತಾಯಿ ಎಂಬುದು ಮಕ್ಕಳ ಹೃದಯದಲ್ಲೂ ತುಟಿಯ ಮೇಲೂ ಇರುವ ದೇವರ ಹೆಸರು" ಎಂಬ ಥ್ಯಾಕರೆಯವರ ಹೇಳಿಕೆಯು ಸಾರ್ವಕಾಲಿಕ ಸತ್ಯವಾಗಿದೆ.

ನೈಸರ್ಗಿಕ ಒತ್ತಡವನ್ನು ಹತೋಟಿಗೆ ತರಲು ಸಾಧ್ಯವಿಲ್ಲ. ಮಾನವ ಮನುಷ್ಯತ್ವದಿಂದ ಮೇಲೆರಲು ಎಷ್ಟೇ ಪ್ರಯತ್ನಿಸಿದರೂ ಅವನು ಕೇವಲ ಮನುಷ್ಯನಾದ್ದರಿಂದ ತನ್ನ ಇತಿ-ಮಿತಿಯನ್ನರಿತುಕೊಂಡು ಇರುವುದು ಅನಿವಾರ್ಯವಾಗುತ್ತದೆ. ಆ ಇತಿ ಮಿತಿಯಲ್ಲಿಯೇ ಬದುಕನ್ನು ಸಾರ್ಥಕಪಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂಬ ಸಾಮಾಜಿಕ ಕಳಕಳಿ 'ಕೇವಲ ಮನುಷ್ಯರು' ಕಾದಂಬರಿಯಲ್ಲಿದೆ.

ಶಾಂತಾಬಾಯಿಯು ಅಭಿನ್ನಾನಂದ ಸ್ವಾಮೀಜಿಗಳ ಅನುಯಾಯಿಯಾಗಿ ಪಾರಮಾರ್ಥಿಕ ಜೀವನವನ್ನು ಸಾಗಿಸಲು ಪ್ರಯತ್ನಿಸುತ್ತಾಳೆ. ಆದರೆ ಲೈಂಗಿಕ ದೌರ್ಬಲ್ಯದಿಂದ ಮುಕ್ತಳಾಗಲು ಅವಳಿಗೆ ಸಾಧ್ಯವಾಗುವುದಿಲ್ಲ

[illegible]

ಗಂಡನಿಂದ ಪಡೆಯದ ತೃಪ್ತಿಯನ್ನು ಆನಂದವನ್ನು ಸ್ವಾಮೀಜಿಯವರಿಂದ ಪಡೆಯುತ್ತಾಳೆ. ಗಂಡನಿಂದ ದೈಹಿಕವಾಗಿ ದೂರವಿದ್ದು ಆತ್ಮವಂಚನೆ ಮಾಡಿಕೊಳ್ಳುತ್ತಾಳೆ. "ಮನುಷ್ಯ ತನ್ನನ್ನು ಯಶಸ್ವಿಯಾಗಿ ವಂಚಿಸಲು ಕಲಿತ ಮೇಲೆಯೇ ಜಗತ್ತನ್ನು ವಂಚಿಸುವುದಕ್ಕೆ ಶಕ್ತನಾಗುತ್ತಾನೆ" ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' (೧೯೯೪: ೪) ಕೃತಿಯಲ್ಲಿ ಹೇಳಿರುವುದನ್ನು ಶಾಂತಾಬಾಯಿಯ ಪಾತ್ರದ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು.

'ಕೇವಲ ಮನುಷ್ಯರು' ಕಾದಂಬರಿಯಲ್ಲಿ ಶಾಂತಾಬಾಯಿಯ ಢಾಂಬಿಕ ಭಕ್ತಿ, ಆಧ್ಯಾತ್ಮದ ನೆರಳಲ್ಲಿ ನಡೆಯುವ ವಿಷಯಲಂಪಟತೆಯನ್ನು ಖಂಡಿಸಲಾಗಿದೆ.

ನಮ್ಮ ಅಂಕಿತದೊಳಗಿಲ್ಲದೆಲ್ಲವೂ ಅವನ ಇಚ್ಛೆಯೊಳಗಿನದು ಎಂಬ ತೀರ್ಮಾನ ಹಲವರಿಗೆ ಸಾಧ್ಯವಾಗುವುದು ಅವರಲ್ಲಿನ ತಿಳುವಳಿಕೆಯ ಕೊರತೆಯಿಂದಾಗಿ ಎಂಬುದು 'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಪ್ರಕಟವಾಗಿದೆ. ಮನುಷ್ಯ ಸ್ವಾರ್ಥಿ, ತನ್ನ ಸುಖ ಶಾಂತಿಗಾಗಿ ದೇವರನ್ನು ಸೃಷ್ಟಿಸಿದ್ದಾನೆ. ತಾನು ಮಾಡುವ ಎಲ್ಲ ಕೆಲಸಗಳಿಗೂ ದೇವರೆ ಹೊಣೆ ಎಂದು ಬೆರಳು ಮಾಡಿ ತೋರಿಸಿ ಅಸಹಾಯಕನಾಗುತ್ತಾನೆ. ಇದು ಇಂದು ಬದಲಾಗಬೇಕಾಗಿದೆ. ಯಾವುದನ್ನೂ ಸರಿ-ತಪ್ಪು ಎಂದು ಯೋಚಿಸದೆ ಸುಮ್ಮನೆ ಒಪ್ಪಿಕೊಳ್ಳಬಾರದು. ಮಹಾಲಕ್ಷ್ಮಿ ತನ್ನ ಪತಿ ನಾರಾಯಣ ಹೆಬ್ಬಾರರಿಗೆ ಎಂದಿಗೂ ಪ್ರತಿರೋಧ ವ್ಯಕ್ತಪಡಿಸಿದವಳಲ್ಲ, ತುಂಬ ವಿಧೇಯಳಾಗಿದ್ದಳು. ತನ್ನ ಮಗಳು ಸರಸ್ವತಿಯ ಮದುವೆ ಕ್ರೂರಿಯೂ, ಕಾಮುಕನೂ ಆದ ಮಹಾಬಲಯ್ಯನೊಂದಿಗೆ ನಿಶ್ಚಯವಾಗಿದೆ ಎಂಬುದನ್ನು ತಿಳಿದಾಗ ತುಂಬ ಸಂಕಟಪಡುತ್ತಾಳೆ. ಅದನ್ನು ತಪ್ಪಿಸಬಹುದಾಗಿದ್ದರೂ ತನ್ನ ಅತಿಯಾದ ವಿಧೇಯತೆಯಿಂದ ಮಗಳ ಬಾಳನ್ನು ಹಾಳುಗೆಡವುವಲ್ಲಿ ಪರೋಕ್ಷವಾಗಿ ಕಾರಣವಾಗುತ್ತಾಳೆ.

'ಮನುಷ್ಯನ ಯೋಚನೆಗಳು ಕೇವಲ ರೂಢಿಯ ಆವರಣದಲ್ಲಿ ಸಿಲುಕಿಕೊಂಡರೆ ಸ್ವತಂತ್ರ ತೀರ್ಮಾನಗಳು ಬರಲಾರವು' ಎಂದು ಶಿವರಾಮ ಕಾರಂತರು ತಮ್ಮ ಆತ್ಮಕಥನ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಹೇಳಿದ್ದಾರೆ. (೨೦೦೪: ೨೧) ಅದು 'ಧರ್ಮರಾಯನ ಸಂಸಾರ' ಕಾದಂಬರಿಯ ಆಶಯವಾಗಿದೆ.

'ಧರ್ಮವೆಂಬುದು ಜನತೆಯನ್ನು ಮರುಳುಗೊಳಿಸುವ ಅಫೀಮು' ಎಂಬುದು ಕಾರ್ಲ್‌ಮಾರ್ಕ್ಸ್‌ನ ಹೇಳಿಕೆ. ಧರ್ಮವು ಜನಸಾಮಾನ್ಯರ ಮನಸ್ಸುಗಳನ್ನು ಮಂಕುಗೊಳಿಸಿ ಅವರಲ್ಲಿ ಈಡೇರಲಾರದ ಕನಸುಗಳನ್ನು ಬಿತ್ತಿ ಸಾಮಾಜಿಕ ಅಸಮಾನತೆ, ಅಜ್ಞಾನ ಮತ್ತು ದಾರಿದ್ರ್ಯವನ್ನು ಮುಂದುವರಿಯುವಂತೆ ಮಾಡುತ್ತಿವೆ ಎಂಬ ತಾತ್ವಿಕ ಚಿಂತನೆಯನ್ನು 'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯಲ್ಲಿ ಪ್ರತಿಪಾದಿಸಲಾಗಿದೆ. ಪರಮೇಶ್ವರಯ್ಯ ಹೆಂಡತಿ-ಮಕ್ಕಳನ್ನು ಜವಾಬ್ದಾರಿಯಿಂದ ನೋಡಿಕೊಳ್ಳಲಾಗದೆ ಊರನ್ನು ಸಂಸಾರವನ್ನು ತೊರೆದು ಪಲಾಯನ ಮಾಡುತ್ತಾನೆ. ಸ್ವಾಮಿಯ ವೇಷವನ್ನು ಧರಿಸಿ ಊರೂರು ಅಲೆಯುತ್ತಾನೆ. ಸಂಸಾರ ಎಂಬುದು ಮುಕ್ತಿಗೂ ಅಥವಾ ದೈವಸಾನ್ನಿಧ್ಯಕ್ಕೂ ಪರಮ ವಿಘ್ನಕಾರಿ. ಅದನ್ನು ತೊರೆಯದೆ ದೈವದ ಹತ್ತಿರಕ್ಕೆ ಸುಳಿಯಲು ಬರುವುದಿಲ್ಲ ಎಂದು ಉಪದೇಶ ಮಾಡುತ್ತಾನೆ. ಊರಿನ ಜನರೆಲ್ಲ ಅವನನ್ನು ಸ್ವಾಮಿ ಎಂದು ನಂಬಿ ಪೂಜಿಸಲಾರಂಭಿಸುತ್ತಾರೆ. ಅವನಿಗೆ ಹಣ್ಣು-ಹಂಪಲುಗಳನ್ನು ನೀಡಿ ಸತ್ಕರಿಸುತ್ತಾರೆ.

"ಭಕ್ತಿ ವಿಚಾರಶಕ್ತಿಗೆ ತಡೆಹಾಕುತ್ತದೆ" ಎಂಬ ಎ.ಎನ್.ಮೂರ್ತಿರಾವ್ (೨೦೦೩: ೮೨) ಅವರ ಹೇಳಿಕೆ ನಿಜವಾದುದು. ಮೌಢ್ಯದಿಂದ ಊರನ್ನು ತೊರೆದು ಬಂದಂತಹ ಠಕ್ಕ ಸನ್ಯಾಸಿಯನ್ನು ಪೂಜಿಸುತ್ತಾರೆ. ತಮ್ಮನ್ನೆಲ್ಲ ಕಾಪಾಡಬೇಕೆಂದು ಮೊರೆಯಿಡುತ್ತಾರೆ. ಆ ಸನ್ಯಾಸಿಯನ್ನೇ ದೇವರು ಎಂದು ಭಾವಿಸುತ್ತಾರೆ. ಸಂಸಾರದಿಂದ ವಿಮುಕ್ತನಾದವನು, ಹೆಂಡಿರು-ಮಕ್ಕಳೊಂದಿಗೆ ಬದುಕಲಾರದವನು ಬೇರೆಯವರನ್ನು ಹೇಗೆ ತಾನೇ ಬದುಕಿಸಿಯಾನು? ಗಡ್ಡ-ಮೀಸೆ ಬಿಟ್ಟ ಮಾತ್ರಕ್ಕೆ ಅವನು ಸನ್ಯಾಸಿಯಾಗಲಾರನು ಎಂಬುದನ್ನು ಅರಿಯದ ಸಾಮನ್ಯ ಮುಗ್ಧ ಜನರು ಮೂಢನಂಬಿಕೆಯಿಂದ ಮುಕ್ತರಾಗಬೇಕು ಎಂಬುದು ಕಾದಂಬರಿಯ ಮೂಲ ಆಶಯವಾಗಿದೆ.

ಮನುಷ್ಯ ದೇವರನ್ನು ಪೂಜಿಸುವುದು, ಧರ್ಮವನ್ನು ಆಚರಿಸುವುದು ತಾನು ಒಳ್ಳೆಯವನಾಗಿರಬೇಕು ಎಂಬುದಕ್ಕಿಂತ ಹೆಚ್ಚಾಗಿ ತನಗೆ ಸಕಲ ಸಂಪತ್ತು ದೊರೆಯಲಿ, ಸುಖ ಸಮೃದ್ಧಿಗಳು ಲಭಿಸಲಿ, ಸದ್ಗತಿ ಸಿಗಲಿ, ಮುಕ್ತಿ ದೊರಕಲಿ ಎಂಬ ಆಸೆಯೇ ಮುಖ್ಯ ಕಾರಣವಾಗಿದೆ ಎಂಬುದನ್ನು 'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯಲ್ಲಿ ಪ್ರಕಟಿಸಲಾಗಿದೆ. 'ಆಸೆಯಿಂದ ಸಾಧನೆಯಾದರೆ, ದುರಾಸೆಯಿಂದ ನೆಮ್ಮದಿಯ ಕೊಲೆಯಾಗುತ್ತದೆ' ಎಂಬುದು ಪ್ರಚಲಿತವಾದ ಹೇಳಿಕೆಯಾಗಿದೆ.

ಭವಿಷ್ಯ ತಿಳಿಯುವ ಕಾತುರ ಜನಸಾಮಾನ್ಯರಲ್ಲಿ ಹೆಚ್ಚಿರುತ್ತದೆ. ಅದು ಮಾನವನ ದೌರ್ಬಲ್ಯವಾಗಿದೆ. ಪ್ರಜ್ಞಾವಂತರು ಜ್ಯೋತಿಷ್ಯದಂತಹ ಮೌಢ್ಯವನ್ನು ನಂಬುವುದಿಲ್ಲ. ಆದರೆ ಅಪಕ್ವ ಮನಸ್ಸು ಜ್ಯೋತಿಷ್ಯದಂತಹ ಮೂಢನಂಬಿಕೆಗೆ ಬಲಿಯಾಗುತ್ತದೆ. ಅದು ಮೋಸದಿಂದ ಕೂಡಿದ್ದು, ಅದರಲ್ಲಿ ಯಾವುದೇ ವೈಜ್ಞಾನಿಕ ಸತ್ಯಾಂಶವಿರುವುದಿಲ್ಲ. ಆದಾಗ್ಯೂ ಜನರು, ಅದರಲ್ಲಿ ಮಹಿಳೆಯರು ಹೆಚ್ಚಾಗಿ ನಂಬುವುದು ಸ್ಪಷ್ಟವಾಗುತ್ತದೆ. ಇದರಿಂದ ಜೀವನವು ದುಃಖಮಯವಾಗುತ್ತದೆ ಎಂಬ ಪ್ರಗತಿಪರ ಚಿಂತನೆಯನ್ನು 'ಹೆತ್ತಳಾ ತಾಯಿ' ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ. ದುರ್ಬಲ ಹೃದಯದವರ ಸಲುವಾಗಿ ಮೋಸ ಹೋಗುವ ಜನರ ಶೋಷಣೆ ಜ್ಯೋತಿಷ್ಯದಿಂದ ಯಥಾಶಕ್ತಿ ನಡೆಯುತ್ತಿದೆ ಎಂಬುದನ್ನು ಕುಸುಮೆಯ ಪಾತ್ರದಿಂದ ಕಾದಂಬರಿಕಾರರು ನಿರೂಪಿಸಿದ್ದಾರೆ.

ಪುರುಷಪ್ರಧಾನ ಸಮಾಜವು ಹೆಣ್ಣನ್ನು ಗೌರವದಿಂದ ಕಾಣುವುದು 'ತಾಯಿ'ಯ ರೂಪದಲ್ಲಿಯೇ ಮಾತ್ರ. ಅಂತೆಯೇ 'ಮಾತೃದೇವೋಭವ', 'ತಾಯಿಯೇ ದೇವರು', 'ತಾಯಿಗಿಂತ ದೇವರಿಲ್ಲ'ದಂತಹ ಮುಂತಾದ ನುಡಿಮುತ್ತುಗಳು ಹಿಂದೂ ಸಂಪ್ರದಾಯದಲ್ಲಿ ಪ್ರಚಲಿತದಲ್ಲಿವೆ. ಆದ್ದರಿಂದ ಹೆಣ್ಣಿಗೆ ಸಂತಾನಭಾಗ್ಯದಿಂದಲೆ ಮೋಕ್ಷ ಸಿಗುತ್ತದೆ ಎಂದು ಪ್ರತಿಬಿಂಬಿಸಲಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಸ್ತ್ರೀಯು ತಾಯಿಯಾಗಲು ಬಯಸುತ್ತಾಳೆ. ಇದಕ್ಕೆ ಕುಸುಮೆಯೂ ಸಹ ಹೊರತಲ್ಲ. ಆದರೆ ಅವಳಿಗೆ ಎರಡು ಬಾರಿ ಹೆರಿಗೆಯಾಗುತ್ತದೆ. ಆ ಹೆರಿಗೆಗಳಲ್ಲಿ ಮಗು ಶವದ ರೂಪದಲ್ಲಿಯೇ ಜನನವಾಗುತ್ತದೆ. ಇದರಿಂದ ಕುಸುಮೆಯು ವಿಚಲಿತಳಾಗಿ ತುಂಬ ದುಃಖಿಸುತ್ತಾಳೆ. ಮಗು ಸಾಯಲಿಕ್ಕೆ ಸುಬ್ಬಯ್ಯನ ದೈಹಿಕ ಸ್ಥಿತಿ ಕಾರಣವಾಗಿರಬಹುದು ಎಂಬುದನ್ನು ಅರಿಯಲು ಪ್ರಯತ್ನಿಸಲಿಲ್ಲ. ಸಮಸ್ಯೆಯ ಪರಿಹಾರಕ್ಕಾಗಿ ಪ್ರಯತ್ನಿಸುತ್ತಾಳೆ. ತನಗೆ ಮಕ್ಕಳ ಯೋಗ ಇದೆಯೋ ಅಥವಾ ಇಲ್ಲವೋ ಎಂದು ವೈದ್ಯರಲ್ಲಿ ಕೇಳುವ ಬದಲು ಮೌಢ್ಯದಿಂದ ಜ್ಯೋತಿಷಿಯಲ್ಲಿ ಕೇಳುತ್ತಾಳೆ. ತನಗೆ ಮಕ್ಕಳ ಯೋಗವಿದೆಯೆಂದು,

[illegible]

[illegible]

[illegible]

ಸುಬ್ಬಯ್ಯನಿಗೆ ಆ ಯೋಗವಿಲ್ಲವೆಂದು ತಿಳಿದು ಗಂಡನ ಬಗೆಗೆ ನಿರ್ಲಕ್ಷ ತೋರುತ್ತಾಳೆ. ಮಕ್ಕಳು ಶವವಾಗಿ ಜನಿಸಲು ಸುಬ್ಬಯ್ಯನ ಹಣೆಬರಹವೇ ಕಾರಣವೆಂದು ಅವನನ್ನು ಮೂದಲಿಸುತ್ತಾಳೆ.

ತನಗೆ ಮಕ್ಕಳ ಯೋಗವಿದೆಯೆಂದು ತಿಳಿದ ಬಳಿಕ ಪರರ ಆಶ್ರಯದಿಂದ ಮಕ್ಕಳನ್ನು ಪಡೆಯಲು ಬಯಸುತ್ತಾಳೆ. ತನ್ನ ಗಂಡನ ಸ್ನೇಹಿತ ವೆಂಕಪ್ಪನೊಂದಿಗೆ ಅತಿಯಾದ ಸಲುಗೆಯನ್ನು ಬೆಳೆಸುತ್ತಾಳೆ. ಗಂಡನಿಗೆ ಗೊತ್ತಾಗದಂತೆ ಅವನಿಗೆ ಬೇಕಾದಾಗ ಹಣವನ್ನು ನೀಡುತ್ತಿದ್ದಳು. ಅವನಿಂದ ಎರಡು ಮಕ್ಕಳನ್ನು ಪಡೆದರೂ ಗಂಡನಿಗೆ ತಿಳಿಸುವುದಿಲ್ಲ, ಇದರಿಂದ ಸುಬ್ಬಯ್ಯನು ಆ ಎರಡು ಮಕ್ಕಳು ತನ್ನವೆಂದೇ ತಿಳಿಯುತ್ತಾನೆ. ಕುಸುಮೆಯು ವೆಂಕಪ್ಪನಿಂದ ಮಕ್ಕಳನ್ನು ಪಡೆದರೂ ಸುಬ್ಬಯ್ಯನ ಮಕ್ಕಳೆಂಬಂತೆ ಬೆಳೆಸುತ್ತಾಳೆ. ಅವನ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ಅವನಿಗೆ ಅನ್ಯಾಯವೆಸಗುತ್ತಾಳೆ.

"ಕೃತಿಬಿಂಬ, ನುಡಿಪ್ರತಿಬಿಂಬ, ಈ ಬಿಂಬ ಪ್ರತಿಬಿಂಬದ ಸಂಬಂಧ ಒಡೆದುಹೋಗಿ ಪ್ರತಿಬಿಂಬಕ್ಕೆ ಅತಿಶಯ ಮಹತ್ವ ಪ್ರಾಪ್ತವಾದಾಗ ಫಲಜ್ಯೋತಿಷ್ಯದ ಸಾಮೂಹಿಕ ವಂಚನೆ ಜೀವನ ವಿಧಾನವಾಗುತ್ತದೆ" ಎಂಬ ನಾರಾಯಣರಾಂ ಅವರ (೧೯೯೮: ೫೩) ಹೇಳಿಕೆಯು ಇಲ್ಲಿ ಉಲ್ಲೇಖನೀಯ.

ಎಲ್ಲಿ ಮೌಢ್ಯತೆಯೇ ಪ್ರಧಾನವಾಗುತ್ತದೆಯೋ ಅಲ್ಲಿ ವಿವೇಕವು ಗೌಣವಾಗುತ್ತದೆ. ವೈದ್ಯರನ್ನು ಸಂಪರ್ಕಿಸಿ ಹೆರಿಗೆ ಸಮಯದಲ್ಲಿ ಮಗು ಶವವಾಗಿ ಜನಿಸುವಲ್ಲಿ ಗಂಡ-ಹೆಂಡತಿಯರ ಪಾತ್ರ ಹಾಗೂ ಅದರ ಪರಿಹಾರ ಕುರಿತು ಸಮಾಧಾನದಿಂದ ವೈದ್ಯರೊಂದಿಗೆ ಸಮಾಲೋಚನೆ ನಡೆಸಿ ಪರಿಹಾರ ಕಂಡುಕೊಳ್ಳಬಹುದಾಗಿತ್ತು. ತನ್ನ ಮೌಢ್ಯದಿಂದ ಒಬ್ಬ ಬಾಯಿಬಡಕ ಸಾಮುದ್ರಿಕನಿಂದ ಕುಟುಂಬದ ಅಶಾಂತಿಗೆ ಕಾರಣವಾಗುತ್ತಾಳೆ. ಅವಿವೇಕತನದಿಂದ ತನ್ನ ಬದುಕನ್ನು ಹಾಳುಗೆಡವಿಕೊಳ್ಳುತ್ತಾಳೆ.

ಕುಸುಮೆಯಲ್ಲಿ ವೈಚಾರಿಕ ಚಿಂತನೆ ಕೊರತೆಯಿರುವುದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಮನುಷ್ಯನು ಜೀವನದಲ್ಲಿ ಸಮಸ್ಯೆಗಳನ್ನು ಎದುರಿಸುವುದಕ್ಕಿಂತ ಹೆಚ್ಚಾಗಿ ಕನಿಷ್ಠ ಮಟ್ಟದ ಮಾರ್ಗವನ್ನು ಹುಡುಕಲು ಪ್ರಯತ್ನಿಸುತ್ತಾನೆ. ಕುಸುಮೆಯೂ ಸಹ ಅದರಂತೆಯೇ ವರ್ತಿಸುತ್ತಾಳೆ. ಸಮಕಾಲೀನ ಸಮಾಜದಲ್ಲಿಯೂ ಇಂಥಹ ಹಲವಾರು ಘಟನೆಗಳನ್ನು ಗುರುತಿಸಬಹುದು.

ನಾಗರಿಕತೆ ಬೆಳೆದಂತೆಲ್ಲ ಮನುಷ್ಯನ ಮುಖ ಹೃದಯಕ್ಕೆ ಮುಸುಕಾಗುತ್ತದೆ. ಮುಖ ನಿಜವಾಗಿ ಮುಖವಾಡವಾಗುತ್ತದೆ. ಮನುಷ್ಯನನ್ನು ಜೀವಂತವಾಗಿ ತಿನ್ನಬಲ್ಲ ಏಕೈಕ ಮಾನಸಿಕ ಶತೃ ಅಥವಾ ಶಕ್ತಿಯೆಂದರೆ ಆತ್ಮವಂಚನೆಯಾಗಿದೆ. ಆದರೆ ಕುಸುಮೆ ತಾನು ಮಾಡಿದ್ದು ತಪ್ಪು ಎಂಬ ಭಾವನೆಯನ್ನು ಹೊಂದದೆ ತನ್ನದೇ ಸರಿ ಎನ್ನುವಷ್ಟರ ಮಟ್ಟಿಗೆ ಜೀವನ ಸಾಗಿಸುತ್ತಾಳೆ. ಹುಚ್ಚು ದುರ್ವರ್ತನೆಯಿಂದ ಸಂಸಾರವನ್ನು ಬುಡಮೇಲು ಮಾಡಿ ಬಿಡುವ ಸ್ತ್ರೀಯರನ್ನು ಕಾದಂಬರಿಯಲ್ಲಿ ಗೌರವಿಸದೆ ವಿರೋಧಿಸಲಾಗಿದೆ. ಕಾದಂಬರಿಯಲ್ಲಿ ಕುಸುಮೆಯನ್ನು ಆತ್ಮದ್ರೋಹಿ, ಪತಿದ್ರೋಹಿ, ಕೇವಲ ಸುಖಕ್ಕಾಗಿ ಬಡಿದಾಡಿ ಗಂಡನನ್ನು ವಂಚಿಸಿದ ಜಾರಿಣಿಯಾಗಿ ಚಿತ್ರಿಸಲಾಗಿದೆ.

ಪ್ರಸ್ತುತ ಸಮಾಜದಲ್ಲಿಯೂ ಜ್ಯೋತಿಷ್ಯವನ್ನು ನಂಬುವ ಜನರಿದ್ದಾರೆ. ಎಲ್ಲಿಯವರಿಗೆ ಜ್ಯೋತಿಷ್ಯವನ್ನು ನಂಬುವ ಜನರಿರುತ್ತಾರೆಯೋ ಅಲ್ಲಿಯವರೆಗೆ ಜ್ಯೋತಿಷ್ಯ ಶಾಸ್ತ್ರವೂ ಸಹ ಪ್ರಚಲಿತದಲ್ಲಿರುತ್ತದೆ. ಮನುಷ್ಯನ

ಮನಃಸ್ಥಿತಿ ಬದಲಾಗಬೇಕು. ಸಮಸ್ಯೆಗಳ ಪರಿಹಾರವನ್ನು ವೈಜ್ಞಾನಿಕ ನೆಲೆಯಲ್ಲಿ ಕಂಡುಕೊಳ್ಳಬೇಕು ಎಂಬುದು ಕಾದಂಬರಿಯ ಮೂಲ ನೆಲೆಯಾಗಿದೆ.

'ಹೆಣ್ಣಿನ ಬದುಕನ್ನು, ಭವಿಷ್ಯವನ್ನು ಮದುವೆ ನಿರ್ಧರಿಸುತ್ತದೆ' ಎಂಬುದು ಲೋಕಾರೂಢಿಯ ಮಾತು. ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದ ಹೆಣ್ಣು ಗಂಡನಿಗಾಗಿ ವೈಯಕ್ತಿಕತೆಯನ್ನು ಮರೆತು ಹೊಂದಾಣಿಕೆಯಿಂದ ಬದುಕಿದರೆ ಜೀವನವು ಸುಖಮಯವಾಗಿರುತ್ತದೆ ಎಂಬುದನ್ನು "ಔದಾರ್ಯದ ಉರುಳಲ್ಲಿ" ಕಾದಂಬರಿಯಲ್ಲಿ ಸತ್ಯಳ ಪಾತ್ರದ ಮುಖಾಂತರ ಚಿತ್ರಿಸಲಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವವನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದು. ರಾಧಾಕೃಷ್ಣನು ತನ್ನನ್ನು ಸಾಮಾಜಿಕ ಜೀವನಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಂಡು, ಸಮಾಜ ಸುಧಾರಣೆಯ ಕಾರ್ಯಗಳಿಗಾಗಿ ಶ್ರಮಿಸುತ್ತಿದ್ದನು. ಇವನನ್ನು ಮದುವೆಯಾದ ಸತ್ಯಳು ಎಷ್ಟೇ ಸಂಕಟ ಬಂದರೂ ಎದೆಗುಂದದೆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಗಂಡನೊಂದಿಗೆ ಹೊಂದಾಣಿಕೆಯುತ ಜೀವನವನ್ನು ಸಾಗಿಸುತ್ತಿದ್ದಳು. ಅವನ ಸ್ವಾತಂತ್ರ್ಯ ಹೋರಾಟದಲ್ಲಿ ಅವಳು ಸಕ್ರಿಯವಾಗಿ ಪಾಲ್ಗೊಂಡಳು. ತನ್ನೆಲ್ಲಾ ಒಡವೆಗಳನ್ನು ಮಾರಿದಳು. ಸಂಪ್ರದಾಯದ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಜಾತಿಯತೆಯ ಸೋಂಕನ್ನು ಹಚ್ಚಿಕೊಂಡಿರಲಿಲ್ಲ. ಊರಲ್ಲಿ ಮಳೆಯ ಆರ್ಭಟದಿಂದಾಗಿ ಜನಜೀವನ ಅಸ್ತವ್ಯಸ್ತವಾಗಿತ್ತು. ಅಸ್ತವ್ಯಸ್ತ ಜೀವನದಲ್ಲಿ ಸೌಕರ್ಯ ವಂಚಿತದಿಂದಾಗಿ ಹೊಲತಿಯೊಬ್ಬಳು ಸಾವನ್ನಪ್ಪುತ್ತಾಳೆ. ಅವಳ ಕಿರುಗೂಸು ಬದುಕಿರುತ್ತದೆ. ಅದನ್ನು ರಾಧಾಕೃಷ್ಣನು ಎತ್ತಿಕೊಂಡು ಬಂದುದನ್ನು ಕಂಡು ಸತ್ಯಳು "ಆಪತ್ತು ಬಂದಾಗ ಹೊಲೆಯರೂ, ಬ್ರಾಹ್ಮಣರೂ ಒಂದೇ, ಜೀವ ಜೀವವೇ, ಬದುಕು ಬದುಕೆ" ಎಂದು ಹೇಳುತ್ತಾಳೆ (೨೦೦೩, ಸಂ-೫, ಕಾ-೪, ೧೨೯) ಅವಳು ಜಾತಿಯತೆಯಿಂದ ಯಾರನ್ನು ತುಚ್ಚವಾಗಿ ಕಂಡವಳಲ್ಲ, ಹೊಲೆಯರು ಬ್ರಾಹ್ಮಣರು ಎಲ್ಲರೂ ಮಾನವರೆ, ಎಲ್ಲರ ಜೀವನವೂ ಒಂದೇ ಎಂಬ ಪ್ರಗತಿಪರ ಚಿಂತನೆಯನ್ನು ಹೊಂದಿದ್ದಳು. "ಬ್ರಾಹ್ಮಣ ಧರ್ಮ ದೇವರಿಗಿಂತ ಜಾತಿಯನ್ನು ನಂಬುತ್ತದೆ, ಮನುಷ್ಯರನ್ನಲ್ಲ" ಎಂದು ಭಗವಾನ್ ಅವರು (೧೯೯೭: ೭೪) ಹೇಳಿರುವುದು ಸಾರ್ವತ್ರಿಕವಾದುದಲ್ಲ ಎಂಬುದು ಸತ್ಯಳ ಪಾತ್ರದಿಂದ ಸ್ಪಷ್ಟವಾಗುತ್ತದೆ. ಅಂತೆಯೇ ಎಲ್ಲರನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ನ್ಯಾಯವಲ್ಲ ಎಂದು ಹೇಳಲಾಗುತ್ತದೆ.

ಮನುಷ್ಯನ ಭಾವನೆ, ಬದುಕಿನ ಅಭೇದ್ಯತೆ ಹಾಗೂ ಕಾಯಕದಲ್ಲಿ ಅಚಲವಾದ ನಂಬಿಕೆ ಕುರಿತು 'ಮೊಗ ಪಡೆದ ಮನ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಟೂಬಾ ಪಾಶ್ಚಾತ್ಯ ರಾಷ್ಟ್ರದವಳು. ಭಾರತದ ಸಂಸ್ಕೃತಿಯನ್ನು ಮೆಚ್ಚಿ ಭಾರತಕ್ಕೆ ಬಂದಿದ್ದಳು. ನೃತ್ಯಗಾರ್ತಿಯಾದ ಅವಳಲ್ಲಿ ವ್ಯಾಸನು ನೃತ್ಯವನ್ನು ಕಲಿಯುತ್ತಿದ್ದನು. ಟೂಬಾ ತಾನು ಬಂದುದರ ಉದ್ದೇಶ ಹಾಗೂ ತನ್ನ ಬದುಕಿನ ವೃತ್ತಾಂತ ಕುರಿತು ವ್ಯಾಸನಿಗೆ ಹೇಳುತ್ತಾಳೆ. ಬದುಕು ಪ್ರಕೃತಿ ಜನ್ಯವಾದುದು. ಅದರ ಬಗೆಗೆ ಎಷ್ಟೇ ತಿಳಿದರೂ ಕಡಿಮೆಯೇ. ನಿಗೂಢವಾದ ವಿಸ್ಮಯ ಸಂಗತಿಗಳನ್ನು ಅದು ಹೊಂದಿರುತ್ತದೆ. ಅದನ್ನು ಅನುಭವಿಸುತ್ತ ಹೋಗಬೇಕು ಎಂದು ವ್ಯಾಸನಿಗೆ ಬದುಕಿನ ವಾಸ್ತವಿಕೆಯನ್ನು ಕುರಿತು ತಿಳಿಸುತ್ತಾಳೆ. ಮನುಷ್ಯ ತನ್ನ ಅರಿವಿನ ಮೇಲೆ, ವಾಸ್ತವದ ಹಿನ್ನೆಲೆಯಲ್ಲಿ ಪ್ರಾಯೋಗಿಕವಾಗಿ ಯೋಚಿಸುತ್ತ ಬದುಕಬೇಕು. ಕಲ್ಪನಾಲೋಕದಲ್ಲಿ ಯೋಚಿಸುತ್ತಾ ಬದುಕಬಾರದು, ಬದುಕಲೆತ್ನಿಸಿದರೆ ಜೀವನವು ದುಃಖದಿಂದ

[illegible]

ಕೂಡಿರುವ ಸಾಧ್ಯತೆಯಿರುತ್ತದೆ ಎಂಬುದನ್ನು ಮನೋವೈಜ್ಞಾನಿಕವಾಗಿ ಟೂಬಾಳ ಪಾತ್ರದ ಮುಖಾಂತರ ನಿರೂಪಿಸಲಾಗಿದೆ.

ವ್ಯಾಸನು ವಿಧವೆ ವಿಮಲೆಯನ್ನು ಮದುವೆಯಾದಾಗ ಅವನ ತಾಯಿ ನಂದಿನಿಯು ಆ ಮದುವೆಯ ಕುರಿತು ಹೆಮ್ಮೆ ಪಡುತ್ತಾಳೆ. ವಿಧವೆಯ ನೋವು ನಲಿವನ್ನು ಅನುಭವಿಸಿದ ಅವಳು ವಿಮಲೆಯನ್ನು ಸೊಸೆಯೆಂದು ಸ್ವೀಕರಿಸುವಲ್ಲಿ ಕಾದಂಬರಿಕಾರರ ಸಾಮಾಜಿಕ ಕಳಕಳಿಯು ವ್ಯಕ್ತವಾಗುತ್ತದೆ. ಸಮಾಜವು ವಿಧವಾ ವಿವಾಹವನ್ನು ಸಮ್ಮತಿಸುತ್ತಿರಲಿಲ್ಲ, ಆದರೆ ನಂದಿನಿಯು ಸಮಾಜದ ಜನರ ನಿಂದನೆಗೆ ಕಿವಿಗೊಡದೆ ಸೊಸೆಯನ್ನು ತನ್ನ ಮಗಳಂತೆ ಪ್ರೀತಿಯಿಂದ ಕಾಣುತ್ತಾಳೆ. ಈ ವಿಧವಾ ವಿವಾಹದ ಪ್ರಸಂಗದಿಂದ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಬಹುದು. ಕಾರಂತರ ಸಮಕಾಲೀನರಾದ ಗೋರೂರು ರಾಮಸ್ವಾಮಿ ಅಯ್ಯಂಗಾರ ಅವರ 'ಹೇಮಾವತಿ' (೧೯೪೭) ಕಾದಂಬರಿಯಲ್ಲಿ ದಲಿತ ಮಹಿಳೆಯೊಬ್ಬಳು ಮೇಲ್ಜಾತಿ ಗಂಡನ್ನು ಮದುವೆಯಾದಾಗ ಹುಟ್ಟಿಕೊಳ್ಳುವ ಬಿಕ್ಕಟ್ಟುಗಳನ್ನೆಲ್ಲ ದಿಟ್ಟವಾಗಿ ಪ್ರಕಟಿಸಲಾಗಿದೆ. 'ಮೊಗ ಪಡೆದ ಮನ' ಕಾದಂಬರಿಯಲ್ಲಿ ವಿಧವಾ ಸಮಸ್ಯೆಯ ನಿರ್ಮೂಲನೆ ಕುರಿತು ಜಿಜ್ಞಾಸೆ ಮೂಡಿಸಿದ್ದಾರೆ. ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಜಾತಿಯತೆಯ ನಿರ್ಮೂಲನೆ ಕುರಿತು ಪ್ರಸ್ತಾಪಿಸಿದ್ದಾರೆ. ಇರ್ವರಲ್ಲಿಯೂ ಸಾಮಾಜಿಕ ಸಮಸ್ಯೆಗಳ ಪರಿಹಾರ ಕುರಿತು ವಿವೇಚನಾಯುಕ್ತವಾದ ಚಿಂತನೆ ಇರುವುದನ್ನು ಮನಗಾಣಬಹುದು.

ಕಾರಂತರು ಚಿತ್ರಿಸಿದ ಮಹಿಳೆಯರಲ್ಲಿ ಅದರಲ್ಲಿಯೂ ವಯಸ್ಸಾದ ಸ್ತ್ರೀಯರಲ್ಲಿ ವೈಚಾರಿಕತೆಯನ್ನು ತುಸು ಹೆಚ್ಚಾಗಿಯೇ ಗುರುತಿಸಬಹುದು. ಇದಕ್ಕೆ ಅವರ ಜೀವನದ ಅನುಭವವೇ ಕಾರಣವಾಗಿದೆ. ಏಕೆಂದರೆ ವೈಚಾರಿಕತೆ ಅನುಭವದ ಮೂಲಕ ಉದಯಿಸುತ್ತದೆ ಎಂದು 'ಸಂನ್ಯಾಸಿಯ ಬದುಕು' ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಶಂಕರರಾಯನು ಸಂಸಾರ ಮಾಯೆ ಎಂದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಊರನ್ನು ತೊರೆಯುತ್ತಾನೆ. ಇದರಿಂದ ಅವನ ಹೆಂಡತಿ ಸುಮಿತ್ರೆ ಎದೆಗುಂದುವುದಿಲ್ಲ "ಸಂಸಾರ ಕಳ್ಳರ ಪಾಲಿನ ಬದುಕಲ್ಲ; ವೀರರ ಬದುಕು. ಬಾಳ್ವೆಯಲ್ಲಿ ಯಾವುದೂ ಸ್ಥಿರವಲ್ಲ, ಆದರೆ ಕೈಗೆ ಬಂದುದೇ ಪಂಚಾಮೃತ ಎಂದುಣ್ಣುವುದರಲ್ಲೇ ಅದರ ಸವಿ" (೨೦೦೩, ಸಂ-೭, ಕಾ-೬, ೧೪) ಎಂದು ಸಂಸಾರದ ಮಹತ್ವ ಕುರಿತು ಹೇಳುತ್ತಾಳೆ. ಸಂಸಾರದ ಸೃಷ್ಠಿ ನಿಸರ್ಗದ ನಿಯಮ. ಅದು ಮಾಯೆಯೂ ಅಲ್ಲ, ಮತ್ತೊಂದು ಅಲ್ಲ, ಅದನ್ನು ನಿರ್ವಹಿಸಿಕೊಂಡು ಹೋಗುವುದು ಮಾನವರ ಕರ್ತವ್ಯವಾಗಿದೆ. ಅದರಿಂದ ತಪ್ಪಿಸಿಕೊಂಡು ಹೋಗುವುದು ಹೇಡಿತನವಾಗಿದೆ ಎಂಬುದನ್ನು ಸುಮಿತ್ರೆಯ ಪಾತ್ರದ ಮೂಲಕ ಸ್ಪಷ್ಟಪಡಿಸಲಾಗಿದೆ.

ತುಳಸಿದಾಸರಾಗಲೀ, ಪುರಂದರದಾಸರಾಗಲೀ ತಮ್ಮ ಬದುಕಿನಲ್ಲಿ ಒಂದು ಹೊಸ ತಿರುವು ಪಡೆದದ್ದು ಯಾವುದೇ ಮಠದ ಸ್ವಾಮಿಗಳ ಉಪದೇಶದಿಂದ ಅಲ್ಲ, ಅದು ತಮ್ಮ ತಮ್ಮ ಸಹಧರ್ಮಿಣಿಯರ ಸನ್ನಡತೆ ಮತ್ತು ವಿವೇಕದ ಮಾತುಗಳಿಂದ ಎಂಬುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಜಿಪುಣಾಗ್ರೇಸರನಾದ ಸೀನಪ್ಪನು ಪುರಂದರದಾಸರಾಗಿ ಪರಿವರ್ತನೆ ಹೊಂದಿದ್ದು ಧರ್ಮದುರಂಧರೆಯಾದ ಅವರ ಮಡದಿ ಸರಸ್ವತಿದೇವಿಯಿಂದ ಎಂಬುದು ಅವರ ಕೀರ್ತನೆಗಳಿಂದ ತಿಳಿಯುತ್ತದೆ. ಪುರಂದರದಾಸರಂತೆ ತುಲಸಿದಾಸರನ್ನು ಆಧ್ಯಾತ್ಮಿಕ ಜೀವನದ ದಾರಿಯಲ್ಲಿ ನಡೆಯಲು ಪ್ರೇರೆಪಿಸಿದವಳೆಂದರೆ ಅವರ ಮೋಹದ ಮಡದಿ ರತ್ನಾವಲೀ ಎಂದು ಶಿವಮೂರ್ತಿ

[illegible]

ಶಿವಾಚಾರ್ಯ ಸ್ವಾಮೀಜಿಗಳು ಉದ್ಧರಿಸಿದ್ದಾರೆ.(ನವೆಂಬರ್ ೧೯, ೨೦೦೮) ಇವರು ಸಂಸಾರ ಆಧ್ಯಾತ್ಮಿಕ ಸಾಧನೆಗೆ ತೊಡಕಾಗುವುದಿಲ್ಲ, ಅದು ಉತ್ತಮ ಸಾಧನವಾಗಬಲ್ಲದು ಎಂಬುದನ್ನು ತಮ್ಮ ಜೀವನದಿಂದ ನಿರೂಪಿಸಿದ್ದಾರೆ. ಆಧ್ಯಾತ್ಮಿಕ ಸಾಧನೆಗೆ ಕೌಟುಂಬಿಕ ಜೀವನ ಅಡಚಣೆಯಾಗುವುದಿಲ್ಲ ಎಂಬುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ.

ಎನ್ನಾಬೈಟ್ ಕೃಷ್ಣಾನಂದರ ಪ್ರವಚನ ಹಾಗೂ ಉಪದೇಶಗಳಲ್ಲಿಯ ಪೊಳ್ಳುತನವನ್ನು ಕುರಿತು ವೈಜ್ಞಾನಿಕವಾಗಿ ಚರ್ಚಿಸುತ್ತಾಳೆ. ನವೀನಯುಗದಲ್ಲಿ ಸಮರ್ಥನೀಯವೆನಿಸುವ ವಿಜ್ಞಾನ ಒಪ್ಪುವಂತ ಉದಾಹರಣೆಗಳನ್ನು ಕೊಡಬೇಕು. ಜನರನ್ನು ದಾರಿತಪ್ಪಿಸುವಂತಹ ಉದಾಹರಣೆಗಳನ್ನು ನೀಡಬಾರದು. ಯೋಗದ ಮುಖಾಂತರ ಈಗಿನ ದಿನಗಳಲ್ಲೂ ಭಕ್ತಿ ಜೀವನ ಸಾಧ್ಯ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳುವಲ್ಲಿ ಕಾದಂಬರಿಕಾರರ ವೈಜ್ಞಾನಿಕ ನಿಲುವು ಸ್ಪಷ್ಟವಾಗುತ್ತದೆ.

ಸಂಸಾರದ ಜವಾಬ್ದಾರಿಯಿಂದ ಪಲಾಯನ ಮಾಡುವುದು ಸಭ್ಯತನವಲ್ಲ, ಸಂಸಾರದಲ್ಲಿದ್ದುಕೊಂಡೇ ಏನೆಲ್ಲ ಸಾಧನೆ ಮಾಡಬಹುದು. ಆಧ್ಯಾತ್ಮ ಚಿಂತನೆಯಲ್ಲಿ ಸಮಾಜಕ್ಕೆ ಪ್ರಸ್ತುತವೆನಿಸುವ ಉದಾಹರಣೆಗಳನ್ನು ನೀಡಬೇಕು ಎಂಬುದು 'ಸನ್ಯಾಸಿಯ ಬದುಕು' ಕಾದಂಬರಿಯ ಆಶಯವಾಗಿದೆ.

ಮಹಿಳೆಯರನ್ನು ಹದ್ದು ಬಸ್ತಿನಲ್ಲಿಡಬೇಕು ಎಂಬ ಮಾತು ಪುರುಷಲೋಕದಲ್ಲಿ ಹಿರಿಯರಿಂದ ಕಿರಿಯರಿಗೆ ದೀಕ್ಷೆಯಂತೆ ಬಂದಿದೆ. ಆದರೆ ಪರಂಪರಾಗತ ನಂಬಿಕೆಯಿಂದ ಆಗುವ ಅನ್ಯಾಯದಿಂದ ಸಿಡಿದು ಬದುಕುವ ಹೆಣ್ಣಿನ ಕಥೆಯನ್ನು "ಕರುಳಿನ ಕರೆ" ಕಾದಂಬರಿಯು ಒಳಗೊಂಡಿದೆ. ಗಂಡ ದಾರಿ ತಪ್ಪಿದಾಗ, ತಪ್ಪುಗಳನ್ನು ಮಾಡಿದಾಗ ಅವನನ್ನು ಎದುರಿಸುವುದು ಸಂಸ್ಕೃತಿಗೆ ವಿರುದ್ಧವಾಗಿದೆಯಾದರೂ ಭಾಗೀರಥಿ ವಿವೇಕದಿಂದ ಎದುರಿಸುತ್ತಾಳೆ. ಗಂಡನ ವಿರುದ್ಧ ಪ್ರತಿಭಟಿಸುತ್ತಾಳೆ. ಅದು ವಿಕೋಪಕ್ಕೆ ಹೋದಾಗ ಗಂಡನಿಂದ ದೂರವಾಗಿ ಸ್ವಾವಲಂಬನೆಯ ಜೀವನವನ್ನು ಸಾಗಿಸುತ್ತಾಳೆ. 'ಗಂಡ ಒಳ್ಳೆಯವನೇ ಆಗಿರಲಿ, ಕೆಟ್ಟವನೇ ಆಗಿರಲಿ ಅನುಸರಿಸಿಕೊಂಡು ಹೋಗಬೇಕು' ಎಂಬ ಪರಂಪರಾಗತ ಮೌಲ್ಯವನ್ನು ಧಿಕ್ಕರಿಸಿ ಹೆಣ್ಣು ಸ್ವತಂತ್ರವಾದ ಜೀವನವನ್ನು ಸಾಗಿಸಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಡುತ್ತಾಳೆ.

ಆಧುನಿಕ ಶಿಕ್ಷಣದಿಂದ ಹುಟ್ಟಿದ ಬೌದ್ಧಿಕ ವಿಕಸನವು ಕೆಲವೊಮ್ಮೆ ಗಂಡು-ಹೆಣ್ಣುಗಳಲ್ಲಿ ಘರ್ಷಣೆ ಹುಟ್ಟಿಸಬಹುದು. ಒಂದನ್ನೊಂದು ಬಯಸಿದರೂ ಇಬ್ಬಗೆಯ ಆಸಕ್ತಿಗಳಿಂದಾಗಿ ಪರಸ್ಪರ ದೂರ ಸರಿಯಬಹುದು. ಕೊನೆಗಂತೂ ಬಾಳ್ವೆಯನ್ನು ಲಘುವಾಗಿ ಪರಿಗಣಿಸಿದ ಪಶ್ಚಾತ್ತಾಪದಿಂದ ಒಬ್ಬರನ್ನೊಬ್ಬರು ಅರಿತುಕೊಂಡು ಬಾಳುವುದನ್ನು 'ಚಿಗುರಿದ ಕನಸು' ಕಾದಂಬರಿಯು ಒಳಗೊಂಡಿದೆ. ವರಲಕ್ಷ್ಮಿ-ಶಂಕರ ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದು ಮದುವೆಯಾಗಲು ಬಯಸಿದರು. ದೆಹಲಿಯಲ್ಲಿ ಹುಟ್ಟಿ ಬೆಳೆದ ಶಂಕರನು ತನ್ನ ಮೂಲ ನೆಲೆಯನ್ನು ಹುಡುಕುತ್ತ ಬಂಗಾಡಿಗೆ ಹೋಗಿ ನೆಲೆಸುತ್ತಾನೆ. ಇದರಿಂದ ವರಲಕ್ಷ್ಮಿಯು ತುಂಬ ಬೇಸರಗೊಳ್ಳುತ್ತಾಳೆ. ದೆಹಲಿಯಂಥಹ ನಗರದಲ್ಲಿ ಬೆಳೆದ ವರಲಕ್ಷ್ಮಿಯು ಐಷಾರಾಮಿ ಜೀವನಕ್ಕೆ ಹೊಂದಿಕೊಂಡಿದ್ದಳು. ಇದರಿಂದಾಗಿ ಹಳ್ಳಿಯ ಜೀವನದ ಬಗೆಗೆ ಅವಳಲ್ಲಿ ತಾತ್ಸಾರವಿತ್ತು. ಮಂಜುನಾಥನ ಆಡಂಬರದ ಜೀವನಶೈಲಿಗೆ ಮಾರು ಹೋಗುತ್ತಾಳೆ. ಅವನನ್ನು ಪ್ರೀತಿಸಲು ಆರಂಭಿಸುತ್ತಾಳೆ. ಆದರೆ ಆ ಪ್ರೀತಿ ಬಹಳ ದಿನಗಳವರೆಗೆ ಉಳಿಯಲಿಲ್ಲ. ಮಂಜುನಾಥನ ಗೋಸಂಬಿತನದ ಜೀವನಕ್ಕೆ ಹೇಸಿ ಹೋಗುತ್ತಾಳೆ. ಅವನ ಬಗೆಗೆ ಅವಳಲ್ಲಿ ಜಿಗುಪ್ಸೆ ಉಂಟಾಗುತ್ತದೆ.

ನಾಗರೀಕತೆಯ ಮುಸುಡನ್ನು ಕಾಣದ ಹಳ್ಳಿಯಲ್ಲಿ ಏನು ಸಂತೋಷವಿದ್ದೀತು ಎಂದು ಮೂಗು ಮುರಿಯುತ್ತಿದ್ದ ವರಲಕ್ಷ್ಮಿಗೆ ಮಂಜುನಾಥನ ತೋರಿಕೆ ಜೀವನದಿಂದ ನಗರದ ಜೀವನದ ಬಗೆಗೆ ಹೊಂದಿದ ವ್ಯಾಮೋಹ ನಿರ್ನಾಮವಾಗುತ್ತದೆ. ಹಳ್ಳಿ ಮತ್ತು ಪಟ್ಟಣದ ಬದುಕು ಎರಡು ಬೇರೆ ಬೇರೆಯಲ್ಲ, ಹೊಂದಾಣಿಕೆಯುತ ಭಾವನೆ ಪರಸ್ಪರರಲ್ಲಿ ಇದ್ದರೆ, ಪ್ರೀತಿಯಿಂದ ಎಲ್ಲಿಯಾದರೂ ಬಾಳಬಹುದು ಎಂದು ಮನಗಂಡಳು. ನಗರದ ವೈಭವಯುತ ಜೀವನ ಹಳ್ಳಿಯಲ್ಲಿ ದೊರೆಯುವುದಿಲ್ಲವಾದರೂ ನೆಮ್ಮದಿಯುತ ಜೀವನವನ್ನು ಸಾಗಿಸಬಹುದು ಎಂದು ಅರಿತುಕೊಳ್ಳುತ್ತಾಳೆ. ಮತ್ತೆ ಶಂಕರನಲ್ಲಿ ಪ್ರೀತಿಯನ್ನು ನಿರೀಕ್ಷಿಸುತ್ತಾಳೆ.

ವರಲಕ್ಷ್ಮಿಯ ಬಗೆಗೆ ಸಂಪೂರ್ಣವಾಗಿ ತಿಳಿದುಕೊಂಡ ಶಂಕರನಿಗೆ ಅವಳ ಬಗ್ಗೆ ಉತ್ತಮವಾದ ಅಭಿಪ್ರಾಯವಿತ್ತು. ಗೌರವವಿತ್ತು. ಅವಳ ವಿಚಾರದಲ್ಲಿ ಅವನು ತಿಳಿಯದ್ದೇನಿರಲಿಲ್ಲ. "ಒಳ್ಳೆಯ ಸ್ನೇಹಪರ ನಡತೆ, ಅಪೂರ್ವ ಬುದ್ಧಿಶಕ್ತಿ, ಎಲ್ಲವೂ ಇವೆ. ಸ್ಪಷ್ಟವಾಗಿ ತೊಡಗಿಕೊಳ್ಳುವ ದಿಟ್ಟತನವೂ ಇದೆ. ದಿಟ್ಟತನಕ್ಕೆ ತಕ್ಕುದಾದ ನಡತೆಯೂ ಇದೆ. ಯೌವ್ವನದ ಭರದಲ್ಲಿ ಒಮ್ಮೆ ತಪ್ಪಿ ನಡೆದರೂ ತಪ್ಪನ್ನರಿತು ತಿದ್ದಿಕೊಂಡು ಚೆನ್ನಾದ ಬಾಳ್ವೆಯನ್ನು ಮಾಡುವವಳೆಂದೂ ಬಯಸಿದ್ದನು"(೨೦೦೩ ಸಂ-೮, ಕಾ-೭. ೪೨೨-೪೨೩). ಇದರಿಂದಾಗಿಯೇ ವರಲಕ್ಷ್ಮಿಯ ತಪ್ಪನ್ನು ಮನ್ನಿಸಿ ಮದುವೆಯಾಗುತ್ತಾನೆ. ಶಂಕರನು ಸ್ತ್ರೀ ಪರವಾದ ವಿಚಾರಗಳನ್ನು ಹೊಂದಿದ್ದನು. ವರಲಕ್ಷ್ಮಿಯೊಂದಿಗೆ ಹೊಂದಾಣಿಕೆಯುತ ಜೀವನವನ್ನು ಸಾಗಿಸುತ್ತಾನೆ.

ಒಮ್ಮೆ ಹಳ್ಳಿಯ ಬದುಕಿನಿಂದ ಜಿಗುಪ್ಸೆಗೊಂಡರೂ ವಾಸ್ತವತೆಯ ಅರಿವಿನೊಂದಿಗೆ ತನ್ನ ತಪ್ಪು ಕಲ್ಪನೆಯನ್ನು ತಿದ್ದಿಕೊಂಡು ಹಳ್ಳಿಯ ಬದುಕಿಗೆ ಹೊಂದಿಕೆಯಾಗಿ ಸುಖವಾದ ಜೀವನವನ್ನು ಸಾಗಿಸುವ ವರಲಕ್ಷ್ಮಿಯು ಇತರರಿಗೆ ಮಾದರಿಯಾಗುತ್ತಾಳೆ. ಹಳ್ಳಿಯ ಬದುಕು ಮತ್ತು ಪಟ್ಟಣದ ಬದುಕು ಎರಡೂ ಬೇರೆ ಬೇರೆಯಲ್ಲ, ಸುಖವಾದ ಜೀವನ ಸಾಗಿಸಲು ಯಾವುದೇ ತೊಡಕಾಗುವುದಿಲ್ಲ ಎಂಬುದು ಕಾದಂಬರಿಯ ಆಶಯವಾಗಿದೆ.

ಕಾರಂತರ ಕಾದಂಬರಿಗಳಲ್ಲಿಯ ಮುದುಕಿಯರು ಹುಟ್ಟು ಸಾವನ್ನು ಒಂದೇ ರೀತಿಯಲ್ಲಿ ಸ್ವೀಕರಿಸುವ ಮನೋಭಾವದವರಾಗಿದ್ದಾರೆ. 'ಒಡಹುಟ್ಟಿದವರು' ಕಾದಂಬರಿಯ ನಾಗಮ್ಮ ಅನಾರೋಗ್ಯದಿಂದ ಬಳಲುತ್ತಿದ್ದು ತನಗೆ ಸಾವು ಸಮೀಪಿಸುತ್ತಿದೆ ಎಂಬುದನ್ನು ಅರಿತಿದ್ದಳು. ಆದ್ದರಿಂದಲೇ ತನಗಾಗಿ ಚಿಂತಾಕ್ರಾಂತನಾದ ಮಗನನ್ನು ಉದ್ದೇಶಿಸಿ "ಮಗು ಸಾಯುವವರನ್ನು ಬದುಕಿಸುವ ಬ್ರಹ್ಮನನ್ನು ನಾನು ಕಂಡಿಲ್ಲ, ನನಗೆ ಮನೆಗೆ ಕರೆದೊಯ್ದರೆ ಅಲ್ಲಿ ಸುಖವಾಗಿ ಸಾಯುತ್ತಿದ್ದೆ, ಬದುಕಬೇಕೆಂಬ ಆಸೆಯಿದ್ದವರಿಗೆ ನೀನೆಷ್ಟು ಖರ್ಚು ಮಾಡು ಸಂತೋಷ; ಉಪಚಾರ ಮಾಡು. ನನಗೆ ಏನೂ ಬೇಕಾಗಿಲ್ಲ, ನನಗೆ ಇದಾವುದೂ ಸರಿಹೋಗುವುದಿಲ್ಲ (೨೦೦೩, ಸಂ-೧೦, ಕಾ-೯, ೨೯೪) ಎನ್ನುತ್ತಾಳೆ. ನಾಗಮ್ಮ ತನ್ನ ಒಳಮನಸ್ಸಿನಿಂದ ತಾನು ಸಾಯುವುದು ಖಚಿತವೆಂದು ಅರಿತಿದ್ದಳು. ಸಾಯುವವರಿಗೆ ದುಡ್ಡು ಖರ್ಚು ಮಾಡುವುದು ಸರಿಯಿಲ್ಲ, ಅದರಿಂದ ಯಾವುದೇ ಉಪಯೋಗವಿಲ್ಲ, ಬದಲಿಗೆ ವ್ಯಥಾ ಹಣ ಹಾಳಾಗುವುದು ಎಂದು ವ್ಯವಹಾರಿಕವಾಗಿ ಹೇಳುತ್ತಾಳೆ. 'ಆಸೆಯೇ ದುಃಖಕ್ಕೆ ಮೂಲ' ಎಂದು ಬುದ್ಧ ಹೇಳಿದುದು ಸತ್ಯವಾದರೂ ಆಸೆಯಿಲ್ಲದೆ ಮನುಷ್ಯ ಬದುಕಲು, ಪ್ರಗತಿ ಹೊಂದಲು ಸಾಧ್ಯವೆ ಇಲ್ಲ ಎಂಬುದು ಕಾದಂಬರಿಯ ಆಶಯವಾಗಿದೆ.

ಹುಟ್ಟು ಸಾವು ಒಂದಕ್ಕೊಂದು ಪೂರಕವಾಗಿದೆ. ಸಾವಿನಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ವಾಸ್ತವದ ನೆಲೆಗಟ್ಟಿನಲ್ಲಿ "ಶನೀಶ್ವರನ ನೆರಳಲ್ಲಿ" ಕಾದಂಬರಿಯ ಕಾವೇರಮ್ಮ ಜೀವನ ಸಾಗಿಸುತ್ತಾಳೆ. ರೋಗದಿಂದ ಊರಿನ ಜನರೆಲ್ಲ ಸಾಯುತ್ತಿದ್ದಾಗ ಜನರಲ್ಲಿ ಭಯ ಆವರಿಸಿತು. ಬದುಕುವ ಆಸೆಯಿಂದ ಊರನ್ನು ತೊರೆಯಲು ಪ್ರಯತ್ನಿಸುತ್ತಾರೆ. ಅದನ್ನು ವಿರೋಧಿಸುತ್ತ ಕಾವೇರಮ್ಮ "ನೀವು ಊರು ಬಿಡುವ ಮಾತನಾಡಬೇಡಿ. ಯಮರಾಯ ಹೊಗ್ಗದೂರಿಲ್ಲ" (೨೦೦೩, ಸಂ-೧೩, ಕಾ-೧೨, ೪೩) ಎಂದು ವಾಸ್ತವತೆಯ ಕುರಿತು ಜನರಲ್ಲಿ ತಿಳುವಳಿಕೆ ಮೂಡಿಸುತ್ತಾಳೆ. ಸಾವಿಗೆ ಅಂಜಿ ಬೇರೆ ಊರಿಗೆ ಹೋಗಿ ಬದುಕುವ ಹಾಗಿದ್ದರೆ, ಯಾರೂ ಸಾಯುತ್ತಿರಲಿಲ್ಲ, ಎಲ್ಲರೂ ಬದುಕಿರುತ್ತಿದ್ದರು ಎಂಬ ಸತ್ಯವನ್ನು ಜನರಿಗೆ ತಿಳಿಸುತ್ತಾಳೆ. ಶಿವಣ್ಣಯ್ಯ ಮತ್ತು ಸೀತೆಯರ ಅಸಂಪ್ರದಾಯಿಕವೆನ್ನಬಹುದಾದ ಸಂಬಂಧವನ್ನು ವಿರೋಧಿಸದೆ ಅವರಿಗೆ ಅನುಕೂಲ ಮಾಡಿಕೊಡುತ್ತಾಳೆ. ಜಾತೀಯತೆಯ ಹಂಗನ್ನು ತೊರೆದು ಅವರ ಮದುವೆ ಮಾಡಿಸುತ್ತಾಳೆ. ಕಾವೇರಮ್ಮ ಸಂಪ್ರದಾಯದಲ್ಲಿ ನಂಬಿಕೆ ಹೊಂದಿದವಳಾಗಿದ್ದರೂ, ಜೀವನ ವಿರೋಧಿ ನಿಯಮಗಳನ್ನು ಪಾಲಿಸುತ್ತಿರಲಿಲ್ಲ, ಮದುವೆಯನ್ನುವಂಥದ್ದು ಮನಸ್ಸಿಗೆ ಸಂಬಂಧಿಸಿದ ಬಾಂಧವ್ಯವೇ ಹೊರತು ಜಾತೀಯತೆಗೆ ಸಂಬಂಧಿಸಿದುದಲ್ಲ ಎಂಬುದು ಕಾದಂಬರಿಯ ಮೂಲ ಆಶಯವಾಗಿದೆ.

ವಿಚಾರಗಳು ಮನಸ್ಸಿಗೆ ಆಹಾರ ನೀಡುತ್ತವೆ. ಜೀವನಕ್ಕೆ ಉತ್ಸಾಹ ನೀಡಲು ಮತ್ತು ಮನಸ್ಸನ್ನು ಆರೋಗ್ಯಕಾರಿಯನ್ನಾಗಿ ಕಾಪಾಡಿಕೊಂಡು ಹೋಗಲು ಉತ್ತೇಜನ ನೀಡುತ್ತವೆ ಎಂಬುದನ್ನು ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ. ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ವೇಶ್ಯಾ ಸಮಸ್ಯೆಯಿಂದ ಕುಟುಂಬಗಳು ಹೇಗೆ ನಾಶವಾಗುತ್ತಿವೆ, ಪತಿ-ಪತ್ನಿಯರ ಸಂಬಂಧ ಹೇಗೆ ಕೆಡುತ್ತಿವೆ ಎಂಬುದನ್ನು "ನಿರ್ಭಾಗ್ಯ ಜನ್ಮ" ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಭಾಗ್ಯಲಕ್ಷ್ಮಿಯು ಓದಿಲ್ಲವಾದರೂ, ಓದಬೇಕೆಂಬ ಉತ್ಕಟ ಅಪೇಕ್ಷೆಯನ್ನು ಹೊಂದಿದ್ದಳು. ತಾವು ಓದಿದ್ದುದರಲ್ಲಿ ನನಗೆ ಸ್ವಲ್ಪವಾದರೂ ಓದಿ ಹೇಳಬಾರದೆ ಎಂದು ಗಂಡನಲ್ಲಿ ವಿನಂತಿಸುತ್ತಿದ್ದಳು. ಓದುವುದು ಕೇವಲ ಹವ್ಯಾಸವಾಗಿರಬಾರದು. ಅಭ್ಯಾಸವಾಗಿರಬೇಕು. ಓದಿದುದರಲ್ಲಿ ಸ್ವಲ್ಪವನ್ನಾದರೂ ಜೀವನದಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ಓದಿ ಪ್ರಯೋಜನವೇನಾಯಿತು ಎಂದು ಗಂಡನೊಂದಿಗೆ ತರ್ಕಿಸುತ್ತಾಳೆ. ಭಾಗ್ಯಲಕ್ಷ್ಮಿಯ ವಿಚಾರಗಳಿಂದ ಕಾದಂಬರಿಕಾರರು ಶಿಕ್ಷಣದ ಬಗೆಗೆ ಹೊಂದಿದ ದೃಷ್ಟಿ ತಿಳಿಯುತ್ತದೆ. ವಿದ್ಯೆ ಕೇವಲ ಪದವಿ, ಗೌರವಗಳಿಗೆ ಸೀಮಿತವಾಗಿರದೆ, ಜೀವನವನ್ನು ಮುನ್ನಡೆಸಲು ಪೂರಕವಾಗಿರಬೇಕು ಎಂಬುದು ಕಾದಂಬರಿಯ ಮೂಲ ಆಶಯವಾಗಿದೆ.

ಭಾಗ್ಯಲಕ್ಷ್ಮಿಯು ಆಧುನಿಕ ವಿಚಾರಧಾರೆಯನ್ನು ಹೊಂದಿದ್ದಳು. ತಾನು ಮನೆಯಲ್ಲಿ ಒಂಟಿಯಾಗಿ ಕುಳಿತುಕೊಳ್ಳಲು ಬಯಸದೆ, ಉದ್ಯೋಗ ಮಾಡಲು ಇಚ್ಚಿಸಿದಳು. ಅದಕ್ಕಾಗಿ ಗಂಡನಿಗೆ ತನಗೊಂದು ರಾಟಿಯನ್ನು ತರಿಸಿಕೊಡಿ ಎಂದು ಕೇಳುತ್ತಾಳೆ.

ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ ಬದುಕನ್ನು ಇರುವಂತೆ ಕಾಣಿಸುವುದಕ್ಕಿಂತ, ಬದುಕು ಹೇಗಿರಬೇಕು ಎಂಬುದರ ಬಗ್ಗೆ ವೈಚಾರಿಕ ನೆಲೆಯಿಂದ ನಿರೂಪಿಸಿದ್ದಾರೆ. ಯಾವುದೇ ವಿಷಯದ ಸಾಧಕ ಭಾದಕಗಳನ್ನು ಕುರಿತು ಆಲೋಚಿಸದೆ ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳಬಾರದು. "ಒಂದು ಕೆಲಸವನ್ನು

[illegible]

ಕಾರ್ಯರೂಪದಲ್ಲಿ ತರುವುದಕ್ಕಿಂತ ಮುಂಚೆ ಒಂದು ಕ್ಷಣ ನಿಂತು ಮುಂದಿನ ಪರಿಣಾಮದ ಬಗ್ಗೆ ಯೋಚಿಸಿ ಆರಂಭಿಸಬೇಕು" ಎಂಬ ಸೂಕ್ತಿಯ ಪ್ರಸ್ತುತತೆಯ ಕುರಿತು ಕಾದಂಬರಿಗಳಲ್ಲಿ ಪ್ರಕಟಿಸಿದ್ದಾರೆ. ಮಾನವನ ಬದುಕಿಗೆ ಯಾವುದಾದರೂ ಒಂದು ದೃಢವಾದ ನಂಬಿಕೆ ಬೇಕು. ಅದು ಅವನ ಅಥವಾ ಅವಳ ಇಡೀ ಜೀವನವನ್ನು ನಿಯಂತ್ರಿಸುತ್ತಿರಬೇಕು ಎಂಬುದು ಕಾರಂತರ ಕಾದಂಬರಿಗಳ ಮೂಲ ಆಶಯವಾಗಿದೆ. "ಕಾರಂತರ ವೈಚಾರಿಕತೆ ಭಾವುಕತೆಯಿಂದ ದೂರವಾದದ್ದು, ಸ್ವಾನುಭವ ಹಾಗೂ ಸತ್ಯಶೋಧನೆಯ ಕುತೂಹಲದಿಂದ ಕೂಡಿದ್ದು" ಎಂದು ವ್ಯಾಸರಾಯ ಬಲ್ಲಾಳರು (ಜಯಪ್ರಕಾಶ ಮಾವಿನಕುಳಿ (ಸಂ) ೧೯೯೯: ೨೨೬) ಸರಿಯಾಗಿಯೇ ಗುರುತಿಸಿದ್ದಾರೆ.

ಹೀಗೆ ಕಾರಂತರ ಸ್ತ್ರೀ ಪಾತ್ರಗಳ ವೈಚಾರಿಕ ಪ್ರಪಂಚ ವಿಶಾಲವಾದುದು. ಒಂದಕ್ಕಿಂತ ಒಂದು ಭಿನ್ನವಾದುದು. ಒಟ್ಟಾರೆಯಾಗಿ ಕಾರಂತರ ಸ್ತ್ರೀ ಪಾತ್ರಗಳು ಪ್ರಗತಿಪರವಾಗಿ ಯೋಚಿಸುವ ಜೀವನ್ಮುಖಿಯಾಗಿವೆ. ಕೇಶಮುಂಡನವನ್ನು ನಿರಾಕರಿಸುವ, ಧೈರ್ಯ ತೋರಿಸುವ ಕನ್ಯಾಬಲಿಯ ಮಾಲತಿ, ಪರಸ್ಪರ ತಿಳುವಳಿಕೆ, ಹೊಂದಾಣಿಕೆ ಸಂಸಾರವನ್ನು ಸಂತೋಷಗೊಳಿಸುವಲ್ಲಿ ಬೇಕಾದ ಮುಖ್ಯ ವಿಚಾರ ತರುವ ತಿಳುವಳಿಕೆಯನ್ನು ಪ್ರಕಟಿಸುವ ಹಾಗೂ ಸಹಗಮನವನ್ನು ನಿಷೇಧಿಸುವ ಸರಸಮ್ಮನ ಸಮಾಧಿಯ ಸುನಾಲಿನಿ, ದುಡಿಮೆಯ ಮೂಲಕವೇ ಜೀವನ ರೂಪಿಸಬೇಕೆಂಬ ಮರಳಿ ಮಣ್ಣಿಗೆಯ ನಾಗವೇಣಿ, ಮಿತವ್ಯಯದ ಮೂಲಕ ಸಂಸಾರ ನಿಭಾಯಿಸುವ ಜಾಣ್ಮೆಯನ್ನು ಮೆರೆಯುವ ಮುಗಿದ ಯುದ್ಧದ ರುಕ್ಮಿಣಿ.......... ಈ ಎಲ್ಲಾ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ವಿಶಿಷ್ಟ ವೈಚಾರಿಕ ಪ್ರಪಂಚವನ್ನು ತೆರೆದು ತೋರಿಸಿವೆ.

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಅನನ್ಯ ಸ್ತ್ರೀ ಪ್ರಪಂಚ

ಶಿವರಾಮ ಕಾರಂತರ ಬದುಕು-ಬರಹಗಳನ್ನು ಕುರಿತು ಅನೇಕರು ಅನೇಕ ಬಗೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಕಾರಂತರ ಸಾಹಿತ್ಯವನ್ನು ಸಮಾಜದೊಂದಿಗೆ ಹೋಲಿಸಿ ನೋಡುವುದಲ್ಲದೆ, ಅವರ ಸಾಹಿತ್ಯವನ್ನು ಜಾಗತಿಕ ಸಾಹಿತ್ಯದೊಂದಿಗೆ ಹೋಲಿಸಿ ತುಲನೆ ಮಾಡುವ ಸಂಶೋಧನ ಅಧ್ಯಯನಗಳು ನಡೆಯುತ್ತಿವೆ. ಕಾರಂತರ ಕಾದಂಬರಿಗಳಲ್ಲಿ ಸಮಾಜದ ಹಲವಾರು ಸಮಸ್ಯೆಗಳನ್ನು ಕುರಿತು ಚಿತ್ರಿಸಲಾಗಿದೆ. ಕಾರಂತರ ಕಾದಂಬರಿಗಳ ಸ್ತ್ರೀಯರ ಕುರಿತು ಅನೇಕ ಬಗೆಯ ಅಧ್ಯಯನಗಳು ಈವರೆಗೆ ನಡೆದಿವೆ. ಆದರೆ ಸೂಕ್ಷ್ಮವಾದ ಮತ್ತು ಸಮಗ್ರವಾದ ಸಂಶೋಧನ ಅಧ್ಯಯನಗಳನ್ನು ಕೈಗೊಳ್ಳಲು ಇನ್ನೂ ವಿಫುಲ ಅವಕಾಶಗಳು ಇವೆ. ಕಾದಂಬರಿಕಾರರ ಸ್ತ್ರೀಪರ ವಿಚಾರಧಾರೆಯನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲು ಸಾಧ್ಯವಾಗಿದೆ. ಕಾರಂತರ ಸ್ತ್ರೀಪರ ಆಲೋಚನೆಗಳು ಸಮಕಾಲೀನ ಲೇಖಕರಿಗಿಂತ ಹೇಗೆ ಭಿನ್ನವಾಗಿವೆ ಹಾಗೂ ಯಾವುದರಲ್ಲಿ ಸಾಮ್ಯತೆ ಹೊಂದಿವೆ ಎಂಬುದನ್ನು ಗುರುತಿಸಲಾಗಿದೆ. ಕಾಲಕ್ಕನುಗುಣವಾಗಿ ಪರಿವರ್ತನೆಯಾಗುವ ಸಾಮಾಜಿಕ ಬದಲಾವಣೆಗಳೊಂದಿಗೆ ಅವರ ಸ್ತ್ರೀಪರ ಚಿಂತನೆಗಳು ಹೇಗೆ ಸ್ಪಂದಿಸುತ್ತಿದ್ದವು ಎಂಬುದರ ವಿವರವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಸಂಬಂಧಗಳ ನಿರ್ವಹಣೆಯು ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ರೀತಿಯದ್ದಾಗಿರುತ್ತದೆ ಎಂಬುದನ್ನು ಪರಿಶೀಲಿಸಲಾಗಿದೆ. ಇದರಿಂದ ಕಾದಂಬರಿಗಳಲ್ಲಿಯ ಸಾಮಾಜಿಕ ಪರಿಸರದ ಏರಿಳಿತಗಳನ್ನು ತಿಳಿಯಬಹುದು.

'ವಿಧವಾ ವಿವಾಹ'ದ ಸಲುವಾಗಿ ಹಲವಾರು ಸಮಾಜ ಸುಧಾರಕರು, ರಾಷ್ಟ್ರೀಯ ನಾಯಕರು ಜನಸಾಮಾನ್ಯರಲ್ಲಿ ಪ್ರಜ್ಞೆ ಮೂಡಿಸಲು ಶ್ರಮಿಸಿದ್ದಾರೆ. 'ಕನ್ಯಾಬಲಿ' ಕಾದಂಬರಿಯ ಸಾಮಾಜಿಕ ವಾತಾವರಣದಲ್ಲಿ ವಿಧವಾ ವಿವಾಹ ನೆರವೇರುವುದಿಲ್ಲ. ಆದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ರಚನೆಯಾಗಿರುವ 'ಮೊಗ ಪಡೆದ ಮನ' ಹಾಗೂ 'ಕಣ್ಣಿದ್ದರೂ ಕಾಣರು' ಎಂಬ ಕಾದಂಬರಿಗಳಲ್ಲಿ ವಿಧವಾ ವಿವಾಹ ಸಾಧ್ಯವಾಗುವುದು ಸಾಮಾಜಿಕ ವ್ಯವಸ್ಥೆಯ ಪರಿವರ್ತನೆಯೇ ಕಾರಣ ಎಂಬುದು ಸ್ಪಷ್ಟವಾಗುತ್ತದೆ. 'ವಿಶೇಷ ವಿವಾಹ ಕಾನೂನು' (೧೯೫೪) ಅನ್ವಯ ಅಂತರ್ಜಾತಿ ವಿವಾಹಕ್ಕೆ ಸಂವಿಧಾನದಲ್ಲಿ ಮನ್ನಣೆ

[illegible]

[illegible]

[illegible]

[illegible]

[illegible]

ನೀಡಲಾಗಿದೆ. ಈ ಕಾನೂನು ಜಾರಿಗೆಯಾಗುವುದಕ್ಕಿಂತ ಮುಂಚೆನೆ ರಚನೆಯಾಗಿರುವ 'ಚೋಮನ ದುಡಿ' ಕಾದಂಬರಿಯಲ್ಲಿ 'ಅಂತರ್ಜಾತಿ ವಿವಾಹ' ಸಾಧ್ಯವಾಗದಿರುವುದಕ್ಕೆ ಅಂದಿನ ಸಾಮಾಜಿಕ ನಿರ್ಬಂಧಗಳು ಕಟ್ಟು ನಿಟ್ಟಿನ ಜಾತಿ ವ್ಯವಸ್ಥೆ ಕಾರಣವಾಗಿದ್ದವು ಎಂಬುದು ದೃಢವಾಗುತ್ತದೆ. ಕಾನೂನು ಜಾರಿಗೆಯಾದ ಮೇಲೆ ಪ್ರಕಟವಾದ 'ಶನೀಶ್ವರನ ನೆರಳಲ್ಲಿ' ಹಾಗೂ 'ಇನ್ನೊಂದೇ ದಾರಿ' ಕಾದಂಬರಿಗಳಲ್ಲಿ ಅಂತರ್ಜಾತಿ ವಿವಾಹಗಳು ಸಾಧ್ಯವಾಗಿವೆ. ಇದನ್ನು ಗಮನಿಸಿದಾಗ ಸಾಮಾಜಿಕ ವ್ಯವಸ್ಥೆಯಲ್ಲಿ ಆಗುವ ಬದಲಾವಣೆಗಳೊಂದಿಗೆ ಕಾದಂಬರಿಕಾರರ ಬರಹದಲ್ಲಿಯೂ ಪರಿವರ್ತನೆಯಾಗಿರುವುದು ತಿಳಿಯುತ್ತದೆ.

ವಿವಾಹದ ಸಮಯದಲ್ಲಿ ವರನಿಗೆ ಜೀವಂತ ಪತ್ನಿ ಅಥವಾ ವಧುವಿಗೆ ಜೀವಂತ ಪತಿ ಇದ್ದಲ್ಲಿ ಅಂತಹ ಮದುವೆಗಳು ಕಾನೂನು ಬಾಹಿರವಾಗುತ್ತವೆ. ಆದಾಗ್ಯೂ 'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ಗಂಡನಿಂದ ತಿರಸ್ಕೃತಳಾದ ಸತ್ಯಭಾಮೆಯು ಅನ್ಯ ಮದುವೆಯಾಗುವುದು ಕಾದಂಬರಿಕಾರರ ನೈತಿಕತೆಗೆ ಸಾಕ್ಷಿಯಾಗಿದ್ದು, ಅವರ ಪ್ರಗತಿಪರ ಚಿಂತನೆಯನ್ನು ಅಭಿವ್ಯಕ್ತಿಸುತ್ತದೆ. ಅತ್ಯಾಚಾರದಿಂದ ಗರ್ಭಿಣಿಯಾಗಿರುವ ಮಹಿಳೆಯರು ಗರ್ಭಪಾತವನ್ನು ಮಾಡಿಸಿಕೊಳ್ಳಬಹುದು ಎಂಬುದನ್ನು ೧೯೭೧ರಲ್ಲಿ ಜಾರಿಗೆ ಬಂದ 'ವೈದ್ಯಕೀಯ ಗರ್ಭಪಾತ ಅಧಿನಿಯಮ' ಸಾರುತ್ತದೆ. ಅಧಿಕೃತವಾಗಿ ಈ ಕಾನೂನು ಜಾರಿಗೆ ಬರುವುದಕ್ಕಿಂತ ಮೊದಲೇ 'ಸ್ವಪ್ನದ ಹೊಳೆ' ಕಾದಂಬರಿಯಲ್ಲಿ ಅತ್ಯಾಚಾರಕ್ಕೊಳಗಾದ ಬನ್ನಿಯು ಗರ್ಭವತಿಯಾಗಿದ್ದು, ನಂತರ ಗರ್ಭಪಾತ ಮಾಡಿಸಿಕೊಂಡು ಮದುವೆಯಾಗುವುದನ್ನು ಚಿತ್ರಿಸಲಾಗಿದೆ. ಈ ಸಂದರ್ಭವು ಕಾದಂಬರಿಕಾರರ ಮುಂದಾಲೋಚನೆಯ ಅರಿವನ್ನು ಸ್ಪಷ್ಟಪಡಿಸುತ್ತದೆ. ಸುಧಾರಣೆಯೆನ್ನುವುದು ಆರಂಭದಲ್ಲಿ ವೈಯಕ್ತಿಕವಾಗಿದ್ದರೆ, ನಂತರದ ದಿನಗಳಲ್ಲಿ ಸಾಮಾಜಿಕವಾಗಿ, ಸಾರ್ವತ್ರಿಕವಾಗಿ ನಿಲ್ಲುವುದು ಎಂಬುದನ್ನು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಮುಖಾಂತರ ಪ್ರತಿಪಾದಿಸಲಾಗಿದೆ. ಇದರಿಂದ ಶಿವರಾಮ ಕಾರಂತರು ಸಾಮಾಜಿಕ ಬದಲಾವಣೆಗಳೊಂದಿಗೆ ಹೇಗೆ ಸ್ಪಂದಿಸುತ್ತಿದ್ದರು ಎಂಬುದನ್ನು ಅವರ ಕಾದಂಬರಿಗಳಲ್ಲಿ ಚಿತ್ರಿಸಲ್ಪಟ್ಟಿರುವ ಸನ್ನಿವೇಶಗಳಿಂದ ಕಂಡುಕೊಳ್ಳಲು ಸಾಧ್ಯವಾಗಿದೆ.

ಮನುಷ್ಯನು ನೆಮ್ಮದಿಯಿಂದ ಜೀವನ ಸಾಗಿಸಬೇಕಾದರೆ ಅವನ ಕೌಟುಂಬಿಕ ಜೀವನ ಸುಖ -ಶಾಂತಿಯಿಂದ ಕೂಡಿರಬೇಕು. ಅದು ಸಾಧ್ಯವಾಗಬೇಕಾದರೆ ವೈವಾಹಿಕ ಜೀವನವು ಹೊಂದಾಣಿಕೆಯಿಂದ ಕೂಡಿರಬೇಕು. 'ಮದುವೆ'ಯೆನ್ನುವುದು ಕೇವಲ ಸ್ತ್ರೀ ಪುರುಷರ ದೈಹಿಕ ಸಮಾಗಮವಲ್ಲ. ಲೈಂಗಿಕ ಜೀವನಕ್ಕಾಗಿ ಅವರಿಗೆ ನೀಡಿದ ಪರವಾನಿಗೆಯೂ ಅಲ್ಲ. ಅದು ಮಾನವನ ಸಮೂಹ ಜೀವನದ ಅನಿವಾರ್ಯತೆ, ಪುರುಷತ್ವದ ಪರಿಪೂರ್ಣತೆಗಾಗಿ ಹಾಗೂ ಸ್ತ್ರೀತ್ವದ ಸಾರ್ಥಕತೆಗಾಗಿ ಅಗತ್ಯ ಎಂಬ ಸಾಮಾಜಿಕ ಮೌಲ್ಯವನ್ನು ಕಾದಂಬರಿಗಳಲ್ಲಿ ಪ್ರತಿಪಾದಿಸಲಾಗಿದೆ. ದಾಂಪತ್ಯ ಜೀವನ ಕೇವಲ 'ವಿವಾಹ'ದ ಶಾಸ್ತ್ರದಿಂದ ಪೂರ್ಣಗೊಳ್ಳಲಾರದು. ಅದು ಸತಿ-ಪತಿಯರಲ್ಲಿ ಪರಸ್ಪರ ಹೊಂದಾಣಿಕೆ, ತಿಳುವಳಿಕೆ, ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಸಾಧ್ಯವಾಗುತ್ತದೆ. ಇದರಲ್ಲಿಯೇ ವಿವಾಹದ ಸಾರ್ಥಕತೆ ಅಡಗಿರುವುದನ್ನು ಈ ಅಧ್ಯಯನದಿಂದ ಪರಿಶೀಲಿಸಲಾಗಿದೆ. ಗಂಡ-ಹೆಂಡಿರಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು. ಅದು ಎರಡೂ ಕಡೆಯಿಂದ ಸಾಧ್ಯವಾಗಬೇಕು. ಆದರೆ ಪುರುಷರ ಹೊಂದಾಣಿಕೆಗಿಂತಲೂ ಸ್ತ್ರೀಯರ ಹೊಂದಾಣಿಕೆಯೇ

ಮುಖ್ಯ. ಅದರಿಂದಲೇ ಕುಟುಂಬದಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂಬುದನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಅನಾವರಣಗೊಳಿಸಿರುವುದು ಸ್ಪಷ್ಟವಾಗಿದೆ. ಇದರಿಂದ ಸಮಕಾಲೀನ ಐತಿಹಾಸಿಕ ಪ್ರಪಂಚದ ಸ್ಥಿತಿ-ಗತಿಗಳ ಪರಿಚಯವಾಗುತ್ತದೆ.

ಪ್ರಸ್ತುತವಾಗಿ ಸ್ತ್ರೀ-ಪುರುಷರಲ್ಲಿ ಮಾನಸಿಕವಾಗಿಯೂ ಹಾಗೂ ದೈಹಿಕವಾಗಿಯೂ ಭಿನ್ನತೆಯಿದೆ. ಆದರೆ ಕಾರಂತರ ಕಾದಂಬರಿಗಳಲ್ಲಿ ನಗರದ ವಿದ್ಯಾವಂತ ಮಹಿಳೆಯರಿಗಿಂತ ಗ್ರಾಮೀಣ ಮಹಿಳೆಯರ ಚಿತ್ರಣದಲ್ಲಿ ಆದರ್ಶಗಳನ್ನು ಬಿಂಬಿಸಿರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿಯೇ ನಗರದ ಮಹಿಳೆಯರಿಗಿಂತ ಗ್ರಾಮೀಣ ಮಹಿಳೆಯರ ಪಾತ್ರಗಳನ್ನು ಸಶಕ್ತವಾಗಿ ಚಿತ್ರಿಸಲಾಗಿದೆ. 'ಹೆಂಡತಿಗಿಂತ ತಾಯಿಯ ಪಾತ್ರ ಮೌಲ್ಯಿಕವಾದುದು' ಎಂಬುದನ್ನು ಸಂಪ್ರದಾಯದ ನೆಲೆಯಲ್ಲಿಯೇ ಪ್ರತಿಪಾದಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಕಾರರು ತಾವು ನಂಬಿಕೊಂಡು ಬಂದಂತಹ ಮೌಲ್ಯಗಳಿಗನುಗುಣವಾಗಿ ಹಾಗೂ ತಮ್ಮ ಉದ್ದೇಶಗಳಿಗನುಸಾರವಾಗಿ ಸ್ತ್ರೀ ಪಾತ್ರಗಳನ್ನು ಚಿತ್ರಿಸಿರುವುದು ಸ್ಪಷ್ಟವಾಗಿದೆ.

ಈ ಎಲ್ಲ ಸಂಪ್ರದಾಯಗಳ ಮಧ್ಯೆಯೂ ಕಾದಂಬರಿಗಳಲ್ಲಿ ಹಲವಾರು ಆಧುನಿಕ ಪ್ರಗತಿಪರ ವಿಚಾರಧಾರೆಯನ್ನು ಗುರುತಿಸಬಹುದು. 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಉತ್ತಮ ದಾಂಪತ್ಯ ಜೀವನ ಹೇಗಿರಬೇಕು ಎಂಬ ಚಿಂತನಪರ ನಿಲುವು ಇದೆ. 'ಹೆಣ್ಣಿಗೆ ಒಂದೇ ಬಾರಿ ಮದುವೆ' ಎಂಬ ಸಾಂಪ್ರದಾಯಿಕ ಮೌಲ್ಯವನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ತ್ರಿವೇಣಿ, ಕೊಡಗಿನ ಗೌರಮ್ಮ, ಭೈರಪ್ಪ, ಚಂದ್ರಶೇಖರ ಕಂಬಾರ, ಸ್ವಾಮಿ ವಿವೇಕಾನಂದರ ಮಧ್ಯದಲ್ಲಿ ಶಿವರಾಮ ಕಾರಂತರು ಹೆಣ್ಣು ಮರು ಮದುವೆಯಾಗಬಹುದು ಎಂಬುದನ್ನು ಸ್ತ್ರೀಪಾತ್ರಗಳ ಮುಖಾಂತರ ನಿರೂಪಿಸುತ್ತ ಅವರಿಗಿಂತಲೂ ಭಿನ್ನವಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ವಿದ್ಯಾಸಾಗರ, ಅಂಬೇಡ್ಕರ್, ಮಹಾತ್ಮ ಗಾಂಧೀಜಿ.... ಮುಂತಾದವರ ವಿಚಾರಧಾರೆಗಳ ಪ್ರಭಾವ ಕಾರಂತರ ಬರಹದಲ್ಲಿ ಆಗಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

'ಹಿಂದೂ ಉತ್ತರಾಧಿಕಾರ ಕಾನೂನು' ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀ ಪುರುಷರಿಗೆ ಸಮಾನವಾದ ಹಕ್ಕಿದೆ. 'ಹಿಂದೂ ದತ್ತು ಸ್ವೀಕಾರ ಮತ್ತು ಸಂರಕ್ಷಣ ಕಾನಾನೂ' ನಿಯಮದಂತೆ ಗಂಡನಿಂದ ತಿರಸ್ಕೃತಳಾಗಿ ದೂರವಿದ್ದ ಹೆಂಡತಿಗೆ ಜೀವನಾಂಶ ಪಡೆಯುವ ಹಕ್ಕಿದೆ. ಇಂಥಹ ಹಲವಾರು ಕಾನೂನು ಸೌಲಭ್ಯಗಳ ಕುರಿತು ಕಾದಂಬರಿಗಳಲ್ಲಿ ಸಾಂದರ್ಭಿಕವಾಗಿ ಪ್ರಕಟಿಸಲಾಗಿದೆ. "ಇಪ್ಪತ್ತನೆಯ ವಯಸ್ಸು ತಾಯ್ತನದ ಜವಬ್ದಾರಿ ವಹಿಸಲು ಬಹಳ ಪ್ರಶಸ್ತವಾದ ವಯೋಮಾನ" ಎಂಬುದು ವೈದ್ಯಕೀಯ ಹೇಳಿಕೆ. ಇದರ ಹಿನ್ನೆಲೆಯಲ್ಲಿ 'ಬಾಲ್ಯ ವಿವಾಹ'ವನ್ನು ತಡೆಗಟ್ಟಬೇಕು ಎಂಬುದನ್ನು ಸ್ತ್ರೀ ಪಾತ್ರಗಳ ಮುಖಾಂತರ ನಿರೂಪಿಸಿರುವುದು ಕಾದಂಬರಿಕಾರರ ವೈದ್ಯಕೀಯ ಜ್ಞಾನದ ಅರಿವಿಗೆ ಸಾಕ್ಷಿಯಾಗಿದೆ.

ಲೈಂಗಿಕತೆ ಬದುಕಿನ ಪ್ರಬಲವಾದ ಪ್ರೇರಣೆ. ಇದು ಹಸಿವು ನೀರಡಿಕೆಗಳಂತೆ ಸಹಜವೂ, ಅನಿವಾರ್ಯವೂ ಆಗಿದೆ. ಇದು ಕೇವಲ ದೈಹಿಕವಾಗಿರದೆ ಮಾನಸಿಕವಾಗಿರಬೇಕು. ಶಾರೀರಿಕ ಅಗತ್ಯಕ್ಕೆ ಕಾಟಾಚಾರವೆಂಬಂತೆ ಗಮನ ಕೊಡುವುದಕ್ಕಿಂತ ಭಾವನಾತ್ಮಕವಾಗಿ ಸಾಮಿಪ್ಯ ಸಾಧ್ಯವಾಗಬೇಕು. ಇಲ್ಲದಿದ್ದರೆ ದಾಂಪತ್ಯ

[illegible]

ಜೀವನದಲ್ಲಿ ವಿರಸವುಂಟಾಗುತ್ತದೆ. ಮಹಾತ್ಮ ಗಾಂಧೀಜಿಯವರು 'ಸಂತಾನ ಪ್ರಾಪ್ತಿಗಾಗಿಯೇ ಸಂಭೋಗ' ಎಂಬ ವಿಚಾರವನ್ನು ಬ್ರಹ್ಮಚರ್ಯ ಪಾಲನೆಯ ಹಿನ್ನೆಲೆಯಲ್ಲಿ ಹೊಂದಿದ್ದರು. ಆದರೆ ಕಾರಂತರು ಸಂಭೋಗ ಕೇವಲ ಸಂತಾನೋತ್ಪತ್ತಿಯ ಸಾಧನವಾಗಿರದೆ, ಗಂಡು-ಹೆಣ್ಣುಗಳ ದೀರ್ಘ ಸ್ನೇಹಕ್ಕೆ ಪೂರಕವಾಗಿದೆ ಎಂಬ ಜೀವನ್ಮುಖಿ ವಿಚಾರವನ್ನು ಹೊಂದಿದ್ದರು. ಲೈಂಗಿಕತೆ ಎಂದರೆ ಕೇವಲ ಶಾರೀರಿಕ ಸಂಬಂಧವಲ್ಲ. ಪತಿ-ಪತ್ನಿ ಏಕಾಂತವಾಗಿರುವ ಒಟ್ಟು ಸಮಯದಲ್ಲಿ ಅತ್ಯಲ್ಪ ಅವಧಿ ಮಾತ್ರ ಶಾರೀರಿಕ ಸಂಬಂಧ ಹೊಂದಿರುತ್ತಾರೆ. ಮನುಷ್ಯ ತನ್ನ ಭಾವನೆಗಳನ್ನು ಏಕಾಂತ ಸ್ಥಳದಲ್ಲಿ ಪ್ರಕಟಿಸುವುದೇ ಲೈಂಗಿಕತೆ ಎಂಬುದನ್ನು ಕಾದಂಬರಿಗಳಲ್ಲಿ ಪ್ರತಿಪಾದಿಸಲಾಗಿದೆ. ಆದ್ದರಿಂದಾಗಿಯೇ ಗಾಂಧೀಜಿಯವರಿಗಿಂತ ಕಾರಂತರ ವಿಚಾರಗಳು ಹೆಚ್ಚು ಪ್ರಸ್ತುತವೆನಿಸುತ್ತವೆ. "ಲೈಂಗಿಕ ಸುಖ ಮಾನವನ ದೇಹದ ಮೂಲಭೂತ ಆರೋಗ್ಯದ ಹಕ್ಕು" ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿರುವುದನ್ನು (ನವೆಂಬರ್ ೧೫, ೨೦೦೮) ಕಾದಂಬರಿಗಳ ಲೈಂಗಿಕಾಶಯಗಳ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು. ಇದರಿಂದ ಸ್ತ್ರೀಯರಿಗೆ ಲೈಂಗಿಕ ಸಮಾನತೆ, ಸ್ವಾತಂತ್ರ್ಯ ದೊರೆಯಬೇಕು ಎಂಬುದು ಕಾದಂಬರಿಕಾರರ ಸಾಮಾಜಿಕ ಕಳಕಳಿಯಾಗಿರುವುದು ಸ್ಪಷ್ಟವಾಗುತ್ತದೆ. ಸಂತಾನಪ್ರಾಪ್ತಿ ವೈವಾಹಿಕ ಚೌಕಟ್ಟಿನೊಳಗೆ ನೆರವೇರಬೇಕು, ವಿವಾಹ ಬಾಹಿರವಾಗಿ ಪೂರೈಕೆಯಾದಲ್ಲಿ ಹಲವಾರು ಸಮಸ್ಯೆಗಳು ಉದ್ಭವಿಸಿ, ಜೀವನದಲ್ಲಿ ಶಾಂತಿ ದೊರೆಯದಂತಾಗುತ್ತದೆ ಎಂಬ ಕಾದಂಬರಿಕಾರರ ವಿಚಾರವೂ, ಭೈರಪ್ಪನವರ ವಿಚಾರವೂ ಒಂದೇ ಆಗಿದೆ. ಆದರೆ ಇನಾಂದಾರರ ಕಾದಂಬರಿಯಲ್ಲಿ ಪರ ಪುರುಷರೊಂದಿಗೆ ಸಮಾಗಮ ಹೊಂದಿ ಮಕ್ಕಳನ್ನು ಪಡೆಯಬಹುದು ಎಂಬುದರ ಚಿತ್ರಣವಿದೆ. ಇಲ್ಲಿ ಇನಾಂದಾರರ ವಿಚಾರಗಳಿಗಿಂತ ಕಾರಂತರ ವಿಚಾರಗಳು ಹೆಚ್ಚು ಪ್ರಸ್ತುತವೆನಿಸುತ್ತವೆ.

ಸಮಾಜದಲ್ಲಿ ವಿವಾಹಪೂರ್ವ, ವೈವಾಹಿಕ, ವಿವಾಹೋತ್ತರ ಹಾಗೂ ವಿವಾಹಬಾಹಿರ ಲೈಂಗಿಕ ಸಂಬಂಧಗಳ ಸಾಧ್ಯತೆಯಿದೆ. ವಿವಾಹಬಾಹಿರ ಮತ್ತು ವಿವಾಹೇತರ ಸಂಬಂಧಗಳು ಮಾನವೀಯತೆಯಿಂದ ಕೂಡಿದಲ್ಲಿ ಅದನ್ನು ಸಹಾನುಭೂತಿಯಿಂದ ಕಾಣುವ ಕಾದಂಬರಿಕಾರರ ಧೋರಣೆ ಪ್ರಗತಿಪರವಾಗಿದೆ. ಲೈಂಗಿಕತೆಯ ದಾಹವು ಇತಿ-ಮಿತಿಯಲ್ಲಿರಬೇಕು. ಅದು ದೌರ್ಬಲ್ಯವಾಗಿರಬಾರದು. ಅದು ದೌರ್ಬಲ್ಯವಾಗಿದ್ದರೆ ಅದರಿಂದುಂಟಾಗುವ ಅನಾಹುತಗಳ ಬಗೆಗೆ ಕಾದಂಬರಿಕಾರರು ಸ್ತ್ರೀ ಪಾತ್ರಗಳ ಮೂಲಕ ಆತಂಕವನ್ನು ಅನಾವರಣಗೊಳಿಸಿದ್ದಾರೆ. ಸ್ತ್ರೀ-ಪುರುಷರಿಬ್ಬರೂ ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಪರಸ್ಪರ ಪ್ರೀತಿ, ವಿಶ್ವಾಸ, ಗೌರವದಿಂದ ಬಾಳಿದರೆ ಅವರ ದಾಂಪತ್ಯ ಜೀವನ ಸುಖಮಯವಾಗಿರುತ್ತದೆ ಎಂಬುದು ಕಾರಂತರ ಕಾದಂಬರಿಗಳ ಆಶಯವಾಗಿರುವುದನ್ನು ಗುರುತಿಸಲಾಗಿದೆ. ಬಾಳಿನ ಮೂಲಭೂತ ಶಕ್ತಿಯಾದ ಕಾಮಕ್ಕೆ ಯಾವುದೇ ರೀತಿಯ ಅನ್ಯಾಯ ಮಾಡಿದರೂ ದುರಂತ ನಿಶ್ಚಿತ ಎಂಬುದನ್ನು ಪಾತ್ರಗಳ ಮೂಲಕ ಮುಂದಿಟ್ಟಿದ್ದಾರೆ.

ಲೈಂಗಿಕತೆಗೆ ಸಂಬಂಧಿಸಿದಂತೆ ಕಾರಂತರ ವಿಚಾರಗಳು ಆಧುನಿಕ ವೈದ್ಯಕೀಯ ವಿಜ್ಞಾನವನ್ನು ಅವಲಂಬಿಸಿರುವುದು ಅವರ ಕಾದಂಬರಿಗಳಿಂದ ಸ್ಪಷ್ಟವಾಗುತ್ತದೆ. 'ಸರಸಮ್ಮನ ಸಮಾಧಿ' 'ಧರ್ಮರಾಯನ ಸಂಸಾರ' ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ಮೂಲಕ

ಹದಿನಾರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯೊಂದಿಗಿನ ಲೈಂಗಿಕ ಸಂಭೋಗ ಆಕೆಯ ಸಮ್ಮತಿಯಿಂದ ಜರುಗಲಿ ಅಥವಾ ಬಲತ್ಕಾರದ ಮೂಲಕ ನಡೆದಿರಲಿ, ಅದು ಹೇಗಿದ್ದರೂ ಅತ್ಯಾಚಾರವೆನಿಸುತ್ತದೆ ಎಂಬುದನ್ನು ಸ್ತ್ರೀಪಾತ್ರಗಳ ಪ್ರತಿಭಟನೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಶಿವರಾಮ ಕಾರಂತರು ಲೈಂಗಿಕತೆಯನ್ನು ಕೇವಲ ಸಾಮಾಜಿಕ ಅಗತ್ಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸದೆ, ವೈದ್ಯಕೀಯ ಹಾಗೂ ನ್ಯಾಯಿಕ ಪರಿಕಲ್ಪನೆಯಲ್ಲಿ ಪ್ರತಿಪಾದಿಸಿರುವುದು ಲೈಂಗಿಕತೆಯ ಮಹತ್ವ ಕುರಿತು ಈ ಅಧ್ಯಯನದಿಂದ ತಿಳಿಯುತ್ತದೆ. ಲೈಂಗಿಕತೆಯು ವಿವಾಹ ವ್ಯವಸ್ಥೆಯಲ್ಲಿ ಮಾನಸಿಕ ಮಿಲನಕ್ಕೆ ರಹದಾರಿಯಾಗಿದೆ. ಆ ರಸಘಳಿಗೆ ಬರಿಯ ಮನುಕುಲದ ತಂದೆ-ತಾಯಿಗಳಾಗುವುದರಲ್ಲಿ ಮುಗಿಯುವುದಿಲ್ಲ. ಅವರಿಬ್ಬರ ಸಂಸಾರದ ಆರೋಗ್ಯ ಕಾಪಾಡಲು ಔಷಧಿಯಾಗುತ್ತದೆ. ಅದು ಬರಿಯ ಕಾಮಸೂತ್ರವಲ್ಲ. ಜೀವನದ ಸೂತ್ರವೂ ಹೌದು ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ವೇಶ್ಯೆಯರ ಕುರಿತು ಹಲವಾರು ಕಾದಂಬರಿಕಾರರು ಬರೆದಿದ್ದಾರೆ. ತ್ರಿವೇಣಿ, ಎಂ.ಕೆ.ಇಂದಿರಾ, ಬಸವರಾಜ ಕಟ್ಟೀಮನಿ, ತ.ರಾ.ಸು., ಅ.ನ.ಕೃ., ಶಿವರಾಮ ಕಾರಂತ.... ಮುಂತಾದವರು ವೇಶ್ಯೆಯರ ಸ್ಥಿತಿ-ಗತಿಯನ್ನು ಕುರಿತು ಚಿತ್ರಿಸಿದ್ದಾರೆ. ಅವರಲ್ಲಿ ಶಿವರಾಮ ಕಾರಂತ ಮತ್ತು ಬಸವರಾಜ ಕಟ್ಟೀಮನಿಯವರ ವಿಚಾರಗಳಲ್ಲಿ ಸಾಮ್ಯವನ್ನು ಗುರುತಿಸಬಹುದು.

ವೇಶ್ಯಾವೃತ್ತಿಯ ಹುಟ್ಟಿಗೆ ಹಲವಾರು ಕಾರಣಗಳಿವೆ. ಯಾವ ಹೆಣ್ಣೂ ಬಯಸಿ ವೇಶ್ಯೆಯಾಗುವುದಿಲ್ಲ. ಪರಿಸ್ಥಿತಿಯ ಅಸಹಾಯಕತೆಯಿಂದ ವೇಶ್ಯೆಯರಾಗುತ್ತಾರೆ. ಆ ವೃತ್ತಿಯಂದ ಹೊರಬಂದು ಮದುವೆಯಾಗಲು ಬಯಸುವುದು ಪ್ರಕೃತಿಯ ನಿಯಮವಾಗಿದೆ. ವೇಶ್ಯೆಯರ ಮದುವೆಗಾಗಿ ಕಾದಂಬರಿಯಲ್ಲಿ ಪ್ರಯತ್ನಿಸಿರುವುದು ಪಾತ್ರಗಳ ಹಿನ್ನೆಲೆಯಲ್ಲಿ ದೃಢವಾಗುತ್ತದೆ. ಹಲವಾರು ಕಾದಂಬರಿಗಳಲ್ಲಿ ವೇಶ್ಯೆಯರು ಮದುವೆಯಾಗಿ ಕೌಟುಂಬಿಕ ಜೀವನವನ್ನು ಸಾಗಿಸಬಹುದು ಎಂಬುದನ್ನು ಪ್ರತಿಪಾದಿಸಲಾಗಿದೆ. ಇದು ಕಾದಂಬರಿಕಾರರ ಪ್ರಗತಿಪರ ಧೋರಣೆಯಾಗಿದೆ. ಆದರೆ ಕಾರಂತರ ಸಮಕಾಲೀನರಾದ ತ್ರಿವೇಣಿ, ಎಂ.ಕೆ.ಇಂದಿರಾ, ಅ.ನ.ಕೃ., ಇನಾಂದಾರರಂಥವರು ವೇಶ್ಯೆಯರು ಮದುವೆಯಾಗಲು ಬಯಸಿದರೂ ಯಶಸ್ವಿಯಾಗುವುದಿಲ್ಲ ಎಂಬುದನ್ನು ಚಿತ್ರಿಸಿದ್ದಾರೆ. ಇದರಿಂದ ಅವರ ವಿಚಾರಗಳಿಗಿಂತ ಕಾರಂತರ ಚಿಂತನೆ ಹೇಗೆ ಭಿನ್ನವಾಗಿದ್ದವು ಎಂಬುದನ್ನು ಕಂಡುಕೊಳ್ಳಲಾಗಿದೆ. ಗಾಂಧೀಜಿಯವರು ವೇಶ್ಯೆಯರ ಮದುವೆಗೆ ಸಮ್ಮತಿಸುತ್ತಿರಲಿಲ್ಲ. ಈ ದಿಸೆಯಲ್ಲಿ ಕಾರಂತರ ವಿಚಾರಗಳು ಅವರಿಗಿಂತ ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ. ವೇಶ್ಯೆಯರನ್ನು ಮದುವೆಯಾಗಲು ವೇಶ್ಯಾಕುಲದ ಹುಡುಗರನ್ನೇ ಹುಡುಕಲಾಗುತ್ತಿತ್ತು. ಇತರರು ಅವರನ್ನು ಮದುವೆಯಾಗಲು ಬಯಸುತ್ತಿರಲಿಲ್ಲ. ಇದರಿಂದ ಸಮಕಾಲೀನ ಐತಿಹಾಸಿಕ ಪ್ರಪಂಚದಲ್ಲಿ ವೇಶ್ಯೆಯರ ಸ್ಥಿತಿ-ಗತಿ ಯಾವ ಮಟ್ಟದಲ್ಲಿತ್ತು ಎಂಬುದು ಮನವರಿಕೆಯಾಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ವೇಶ್ಯೆಯರು ಮದುವೆಯಾಗಬಹುದು ಎಂಬುದನ್ನು ಸ್ತ್ರೀ ಪಾತ್ರಗಳ ಮೂಲಕ ನಿರೂಪಿಸಿರುವುದು ಕಾದಂಬರಿಕಾರರ ಪ್ರಗತಿಪರ ನಿಲುವಿಗೆ ಸಾಕ್ಷಿಯಾಗಿದೆ.

ಯಾವ ಸ್ತ್ರೀಯೂ ತನ್ನ ಗಂಡ ಪರಸ್ತ್ರೀ ಅಥವಾ ವೇಶ್ಯೆಯರೊಂದಿಗೆ ಸಂಪರ್ಕವನ್ನು ಹೊಂದಿದ್ದರೆ ಸಹಿಸುವುದಿಲ್ಲ. ಆದರೆ ಕಾದಂಬರಿಗಳಲ್ಲಿ ಸ್ತ್ರೀಯರು ತಮ್ಮ ಗಂಡಂದಿರು ವೇಶ್ಯೆಯರೊಂದಿಗೆ ಸಂಬಂಧ ಹೊಂದಿದ್ದರೂ ಪ್ರತಿಭಟಿಸದೆ ಮೌನವಾಗಿ ಸಮ್ಮತಿಸುತ್ತಿದ್ದರು ಎಂಬುದನ್ನು ಚಿತ್ರಿಸಲಾಗಿದೆ. ಇದನ್ನು ವಾಸ್ತವಕ್ಕಿಂತಲೂ ಆದರ್ಶದ ಹಿನ್ನೆಲೆಯಲ್ಲಿ ಪ್ರತಿಪಾದಿಸಿರುವುದು ಸ್ಪಷ್ಟವಾಗುತ್ತದೆ. ಕಾದಂಬರಿಯಲ್ಲಿ ವೇಶ್ಯೆಯರ ಆಚಾರ-ವಿಚಾರಗಳನ್ನು ಮುಂದಿಡಲಾಗಿದೆ.

ಮಾನವ ಕೇವಲ ರೊಟ್ಟಿಯಿಂದ ಬದುಕಲಾರ. ಅವನಿಗೆ ಧರ್ಮ ಬೇಕು, ದೇವರು ಬೇಕು, ಧರ್ಮವು ಆತನ ಅನಂತವಾದ ಆಸೆ- ಆಕಾಂಕ್ಷೆಗಳ ಮೇಲೆ ಹಾಕಿದ ಕಡಿವಾಣವಾಗಿದೆ. ಧರ್ಮವು ಮಾನವನ ಮನಸ್ಸಿನ ಒಳತುಡಿತದ ಪ್ರಕಟಿತವಾಗಿದೆ. ಧರ್ಮವು ಮಾನವನ ಸೃಷ್ಟಿ. ಆದರೂ ಮಾನವನು ಧರ್ಮದ ಅಧೀನದಲ್ಲಿದ್ದಾನೆ ಎಂಬುದನ್ನು ಕಾರಂತರ ಕಾದಂಬರಿಗಳ ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಲಾಗಿದೆ. ಧರ್ಮವು ಸಾಮಾಜಿಕ ಮೌಲ್ಯಗಳನ್ನು ನಿರೂಪಿಸುತ್ತದೆ. ಆ ಧಾರ್ಮಿಕ ಮೌಲ್ಯಗಳು ಜೀವನಪರವಾಗಿರಬೇಕು ಎಂಬ ಸುಧಾರಣೆಯ ನಿಲುವು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಹಿಂದೂ ಸಂಸ್ಕೃತಿಯ 'ಕರ್ಮಸಿದ್ಧಾಂತ'ವನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಪ್ರತಿಪಾದಿಸಿದ್ದಾರೆ. ಇದರಿಂದಾಗಿಯೇ ಕಾದಂಬರಿಗಳಲ್ಲಿಯ ಸ್ತ್ರೀ ಪಾತ್ರಗಳು ತಮಗೆ ಬರುವ ಕಷ್ಟ-ಸುಖಗಳೆಲ್ಲ ದೈವೇಚ್ಛಿತ ಎಂದು ನಂಬಿರುವುದು ತಿಳಿಯುತ್ತದೆ. ಆ ನಂಬಿಕೆಯಿಂದಲೇ ಪರಿಸ್ಥಿತಿಯೊಂದಿಗೆ ಹೊಂದಿಕೊಂಡು ಹೋಗುವ ತಂತ್ರವನ್ನು ಕಾದಂಬರಿಕಾರರು ಬಳಸಿದ್ದಾರೆ.

'ಹೆಣ್ಣು ಜನ್ಮ ಇರುವುದೇ ಗಂಡನು ಕೊಡುವ ಸುಖವನ್ನಲ್ಲದಿದ್ದರೂ ದುಃಖವನ್ನುಣ್ಣುವುದಕ್ಕೆ' ಎಂಬ ಪುರುಷ ಪ್ರಧಾನ ಧಾರ್ಮಿಕ ನಿಲುವನ್ನು ಸ್ತ್ರೀ ಪಾತ್ರಗಳು ಒಪ್ಪಿಕೊಂಡು ಜೀವಿಸುತ್ತಿದ್ದರು. ಇದರಿಂದ ಕಾದಂಬರಿಕಾರರ ಧಾರ್ಮಿಕ ವಿಚಾರಗಳು ಸಂಪ್ರದಾಯದ ನೆಲೆಯಲ್ಲಿದ್ದವು ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. 'ದುಃಖದ ಉತ್ಕಟತೆಯಲ್ಲಿ ಬದುಕು ಅರ್ಥಗರ್ಭಿತವಾಗುತ್ತದೆ' ಎಂಬ ಸಾಂಪ್ರದಾಯಿಕ ಮೌಲ್ಯದ ಪ್ರತಿಪಾದನೆ ಈ ಸಂಶೋಧನ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಇದರಿಂದಾಗಿಯೇ ಸ್ತ್ರೀ ಪಾತ್ರಗಳು ದುಃಖದಿಂದ ಮಾನಸಿಕವಾಗಿ ಕುಗ್ಗದೆ ಜೀವನಶ್ರದ್ಧೆಯಿಂದ ಬಾಳುವುದು ಸಾಧ್ಯವಾಗಿದೆ. 'ಕಷ್ಟ ಮನುಷ್ಯನನ್ನು ರೂಪಿಸುತ್ತದೆ, ಸುಖ ರಾಕ್ಷಸನನ್ನು ರೂಪಿಸುತ್ತದೆ' ಎಂಬ ವೇದಾಂತವನ್ನು ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಪ್ರತಿಪಾದಿಸಿದ್ದಾರೆ.

ವೈಚಾರಿಕತೆಯೆನ್ನುವುದು ಜೀವನಾನುಭವದಿಂದ ಉದಯಿಸುತ್ತದೆ. ಅದಕ್ಕೆ ವಿದ್ಯಾಭ್ಯಾಸವು ಪೂರಕವಾಗಬಹುದೇ ಹೊರತು ಅದೇ ಮುಖ್ಯವಾಗುವುದಿಲ್ಲ. ಸ್ತ್ರೀಯರು ಅನಕ್ಷರಸ್ಥರಾಗಿದ್ದರೂ ಸಹ ಅನುಭವದ ಪರಿಪಕ್ವತೆಯಿಂದಾಗಿ ಯಾವುದು ಸರಿ, ಯಾವುದು ತಪ್ಪು ಎಂಬ ನಿರ್ಧಾರವನ್ನು ತೆಗೆದುಕೊಳ್ಳಬಹುದು ಎಂಬ ಅಂಶವನ್ನು ಈ ಸಂಶೋಧನೆಯಲ್ಲಿ ಕಂಡುಕೊಳ್ಳಲಾಗಿದೆ. ಮಾನವನಿಗೆ ಪ್ರಕೃತಿಯಿಂದ ವಿವೇಚನಾ ಶಕ್ತಿಯು ಕೊಡುಗೆಯಾಗಿ ದೊರಕಿದೆ. ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಬದುಕು ಹಾಳಾಗುವ ಸಾಧ್ಯತೆಯಿರುತ್ತದೆ ಎಂಬುದು ಈ ಅಧ್ಯಯನದಿಂದ

ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ಕಂದಾಚಾರಗಳನ್ನು ತಡೆಯಬೇಕು ಎಂಬ ಸಾಮಾಜಿಕ ಕಳಕಳಿ ಕಾದಂಬರಿಗಳಲ್ಲಿ ವ್ಯಕ್ತವಾಗಿದೆ. 'ಸತಿ ಸಹಗಮನ ಪದ್ಧತಿ'ಯಂತಹ ಅಮಾನುಷ ಆಚರಣೆಯನ್ನು ಪಾತ್ರಗಳ ಹಿನ್ನೆಲೆಯಲ್ಲಿ ವಿಡಂಬಿಸಿದ್ದಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ, ಎಂ.ಎಸ್.ಪುಟ್ಟಣ್ಣನವರು ತಮ್ಮ ಕೃತಿಗಳಲ್ಲಿ 'ಸತಿಪದ್ಧತಿ'ಯನ್ನು ಧಾರ್ಮಿಕ ಮೌಲ್ಯವಾಗಿ ವೈಭವೀಕರಿಸಿರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿ ಶಿವರಾಮ ಕಾರಂತರ ನಿಲುವು ಅವರ ಆಲೋಚನೆಗಳಿಗಿಂತಲೂ ಪ್ರಗತಿಪರವಾಗಿರುವುದನ್ನು ಕಂಡುಕೊಳ್ಳಲಾಗಿದೆ.

ಸಂಸಾರಿಕ ಜೀವನವು ಪ್ರಗತಿಪರ ಆಲೋಚನೆಗಳಿಗೆ, ವ್ಯಕ್ತಿತ್ವದ ವಿಕಸನಕ್ಕೆ ಯಾವುದೇ ರೀತಿಯ ಅಡಚಣೆಯನ್ನು ಉಂಟು ಮಾಡುವುದಿಲ್ಲ. ಸಂಸಾರದ ಮಧ್ಯೆಯೂ ವಿಭಿನ್ನವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು ಎಂಬ ಚಿಂತನೆಯು ಈ ಪ್ರಬಂಧದಿಂದ ದೃಢವಾಗುತ್ತದೆ. ವಿಧವೆಯರು, ವೇಶ್ಯೆಯರು ಮದುವೆಯಾಗಿ ಸುಖವಾದ ಜೀವನವನ್ನು ಸಾಗಿಸಬಹುದು ಎಂಬ ಸಾಮಾಜಿಕ ಕಳಕಳಿಯನ್ನು ಕಾದಂಬರಿಕಾರರು ಹೊಂದಿರುವುದು ಸ್ಪಷ್ಟವಾಗುತ್ತದೆ. ಅವರ ಸಮಕಾಲೀನರಾದ ಅ.ನ.ಕೃ., ತ.ರಾ.ಸು. ಅವರು ತಮ್ಮ ಕಾದಂಬರಿಗಳಲ್ಲಿ ವೇಶ್ಯೆಯರು ಮದುವೆಯಾಗಿ ಸುಖವಾದ ಜೀವನ ನಡೆಸುವುದು ತುಂಬ ಕಷ್ಟ ಎಂದು ಪ್ರತಿಪಾದಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವೇಶ್ಯೆಯರ ಮದುವೆ ಸಾಧ್ಯ ಎಂಬುದನ್ನು ನಿರೂಪಿಸಿದ ಕಾರಂತರು ಅವರಿಗಿಂತ ಭಿನ್ನವಾಗಿದ್ದಾರೆ. 'ತಾನು ಇಚ್ಛೆಪಟ್ಟು ಹುಟ್ಟಿಲ್ಲವೆಂಬ ಹಾಗೂ ತನ್ನ ಇಚ್ಛೆಗೆ ಎದುರಾಗಿ ಸಾಯಬೇಕಾಗುವುದೆಂಬ' ಪ್ರಕೃತಿಯ ನಿಯಮದ ಅರಿವನ್ನು ಹೊಂದಿದ ಸ್ತ್ರೀಯರು ಸಾವಿಗಾಗಿ ಅಂಜುತ್ತಿರಲಿಲ್ಲ. ಅದನ್ನು ಒಪ್ಪಿಕೊಳ್ಳುತ್ತಿದ್ದರು. ಸ್ತ್ರೀ ಪಾತ್ರಗಳ ಮೂಲಕ ಕಾದಂಬರಿಕಾರರು ಸಾವಿನ ಅನಿವಾರ್ಯತೆಯನ್ನು ಕುರಿತು ಸ್ಪಷ್ಟವಾದ ನಿಲುವನ್ನು ಅಭಿವ್ಯಕ್ತಪಡಿಸಿದ್ದಾರೆ.

ದೇವರು ನಿರ್ದಿಷ್ಟವಾದ ಹಾಗೂ ನಿಖರವಾದ ಮೂರ್ತರೂಪವನ್ನು ಹೊಂದಿಲ್ಲ. ನಂಬಿಕೆಯೇ ದೇವರು. ದೇವರ ಧ್ಯಾನ ಮಾಡುವುದರ ಸಲುವಾಗಿ ಕೌಟುಂಬಿಕ ಜೀವನದಿಂದ ಪಲಾಯನ ಮಾಡುವುದು ಶ್ರೇಯಸ್ಕರವಲ್ಲ. ಮನಸ್ಸನ್ನು ನಿಗ್ರಹದಲ್ಲಿಟ್ಟುಕೊಂಡು ಸಂಸಾರದಲ್ಲಿದ್ದುಕೊಂಡೇ ಧ್ಯಾನ ಮಾಡಬಹುದು ಎಂಬ ವಿಚಾರವಂತಿಕೆಯು ಈ ಸಂಶೋಧನ ಅಧ್ಯಯನದಿಂದ ತಿಳಿಯುತ್ತದೆ.

ಪ್ರಸ್ತುತ ಅಧ್ಯಯನದಿಂದ ಶಿವರಾಮ ಕಾರಂತರು ಒಪ್ಪಿರುವ ಮೌಲ್ಯ ವ್ಯವಸ್ಥೆ ಮತ್ತು ನೀತಿ ಸಂಹಿತೆಯ ಪರಿಧಿಯೊಳಗೆ ಸ್ತ್ರೀ ಪಾತ್ರಗಳನ್ನು ಚಿತ್ರಿಸಿರುವುದು ಖಚಿತವಾಗುತ್ತದೆ. ಸಾಮಾಜಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬರುವುದು ಕಾದಂಬರಿಕಾರರ ಮುಖ್ಯ ಉದ್ದೇಶವಾಗಿರುವುದು ದೃಢವಾಗುತ್ತದೆ. ಸಂಸಾರ, ದಾಂಪತ್ಯ, ವಿವಾಹೇತರ ಸಂಬಂಧಗಳು, ಸಂತಾನ, ಲೈಂಗಿಕ ಸಂಬಂಧಗಳು. ವೇಶ್ಯೆಗಾರಿಕೆ, ಮಹಿಳೆಯರ ಧಾರ್ಮಿಕ ನಂಬಿಕೆ, ಆಧುನಿಕ ವಿಚಾರಧಾರೆ..... ಮುಂತಾದ ವಿಷಯಗಳ ಬಗೆಗೆ ವಿಸ್ತೃತವಾದ ಚಿತ್ರಣವಿದೆ. ಈ ಎಲ್ಲ ವಿಷಯಗಳಿಂದ ಕಾರಂತರ ಕಾದಂಬರಿಗಳಲ್ಲಿಯ 'ಸ್ತ್ರೀ ಪ್ರಪಂಚ'ವು ತುಂಬ ವಿಶಾಲವೂ ಹಾಗೂ ವೈವಿಧ್ಯಮಯವೂ ಆಗಿದೆ. ಸುಮಾರು ಆರುನೂರಕ್ಕಿಂತ ಹೆಚ್ಚಿನ ಸ್ತ್ರೀ ಪಾತ್ರಗಳ ಗುಣ ಸ್ವಭಾವ, ವಯೋಮಾನ, ಅನುಭವ, ವ್ಯತ್ಯಾಸ, ಜಾತಿ-ಅಂತಸ್ತು ಲಿಂಗಗಳ ಭಿನ್ನತೆಯನ್ನು ಗುರುತಿಸಲಾಗಿದೆ. ಪ್ರತಿಯೊಂದು ಪಾತ್ರವು ಮತ್ತೊಂದು ಪಾತ್ರಗಳಿಗಿಂತಲೂ

[illegible]

ಭಿನ್ನವಾಗಿರುವುದನ್ನು ಪರಿಶೀಲಿಸಲಾಗಿದೆ. ಹೆಣ್ಣಿನ ಬದುಕಿನ ಸುತ್ತಲೂ ಅದೆಷ್ಟು ರೀತಿಯಾದ ಸಮಸ್ಯೆಗಳಿರುತ್ತವೆ ಹಾಗೂ ಆ ಸಮಸ್ಯೆಗಳು ಸ್ತ್ರೀ ನೆಲೆಗಳ ಜೊತೆಗೆ ಎಲ್ಲ ಸಾಮಾಜಿಕ ನೆಲೆಗಳಲ್ಲಿ ವ್ಯಾಪಿಸಿರುವ ಬಗೆಯನ್ನು ಈ ಅಧ್ಯಯನದ ಹಿನ್ನೆಲೆಯಲ್ಲಿ ಕಂಡುಕೊಳ್ಳಲಾಗಿದೆ.

'ಹೆಣ್ಣು ಅಬಲೆ' ಎಂಬ ಪರಂಪರಾಗತ ಪುರುಷ ಪ್ರಧಾನ ಸಮಾಜದ ನಿಲುವು ನಿರಾಧಾರ ಎಂಬುದನ್ನು ಈ ಸಂಶೋಧನ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಹೆಣ್ಣು ಅಬಲೆಯಲ್ಲಿ, ಸಬಲಳು. ಸ್ವಾವಲಂಬಿ ಜೀವನ ನಡೆಸುವುದರಿಂದ ಅದು ಮತ್ತಷ್ಟು ಸಾಧ್ಯವಾಗುತ್ತದೆ ಎಂಬುದನ್ನು ಈ ಅಧ್ಯಯನವು ಪುಷ್ಟೀಕರಿಸುತ್ತದೆ. ಜೀವನವು ಸುಖಮಯವಾಗಿರಬೇಕಾದರೆ ಕೌಟುಂಬಿಕವಾಗಿಯೂ ಮತ್ತು ಲೈಂಗಿಕವಾಗಿಯೂ ಸ್ತ್ರೀ ಪುರುಷರಲ್ಲಿ ಪರಸ್ಪರ ಹೊಂದಾಣಿಕೆ ಮುಖ್ಯವಾಗುತ್ತದೆ. ಕಾದಂಬರಿಗಳಲ್ಲಿ ಸ್ತ್ರೀಯರೆಲ್ಲರನ್ನು ಸಮಾನ ದೃಷ್ಟಿಕೋನದಿಂದ ಚಿತ್ರಿಸದೆ, ಗ್ರಾಮೀಣ ಹಾಗೂ ಪಟ್ಟಣದ ಸ್ತ್ರೀಯರೆಂದು ಪಕ್ಷಪಾತದ ನಿಲುವು ತಾಳಿರುವುದು ಸ್ಪಷ್ಟವಾಗುತ್ತದೆ. ಇದರಿಂದಾಗಿಯೇ ನಗರದ ವಿದ್ಯಾವಂತ ಮಹಿಳೆಯರಿಗಿಂತ ಗ್ರಾಮೀಣ ಮಹಿಳೆಯರಲ್ಲಿಯೇ 'ಜೀವನಶ್ರದ್ಧೆ'ಯನ್ನು ಹೆಚ್ಚಾಗಿ ಕಂಡುಕೊಂಡಿದ್ದಾರೆ.

ವೇಶ್ಯೆಯರನ್ನು ತುಚ್ಛ ಭಾವನೆಯಿಂದ ಕಾಣುವ ಜನರ ಮನೋಭಾವನೆ ಪರಿವರ್ತನೆಯಾಗಬೇಕು. ಅವರಿಗೂ ಎಲ್ಲರಂತೆ ಬದುಕಲು ಅವಕಾಶ ನೀಡಬೇಕು ಎಂಬ ಸಾಮಾಜಿಕ ಕಳಕಳಿ ಕಾದಂಬರಿಗಳ ಮೂಲ ಆಶಯವಾಗಿದೆ.

ಕಾದಂಬರಿಕಾರರು ಸ್ತ್ರೀ ಪಾತ್ರಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ವರ್ಣಿಸದೆ ಆದರ್ಶದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ಇದರೊಂದಿಗೆ ಹಿಂದೂ ಸಂಪ್ರದಾಯದ ಆಚಾರ-ವಿಚಾರಗಳನ್ನು ಕಾಪಾಡಿಕೊಂಡು ಬರಲು ಪ್ರಯತ್ನಿಸಿದ್ದಾರೆ. ಆದರೆ ಸಮಾಜದಲ್ಲಿ ಜನರು ಆದರ್ಶವಾದಿಗಳನ್ನು ಪೂಜಿಸುವುದರಲ್ಲಿಯೇ ತೃಪ್ತರಾಗುತ್ತಾರೆ. ಅನುಕರಿಸುವುದರಲ್ಲಿ ಯಾವಾಗಲೂ ಹಿಂದೆಯೇ. ವಾಸ್ತವವಾದಿ ನೆಲೆಗಟ್ಟಿನ ಲೇಖಕನೊಬ್ಬ ಆದರ್ಶವಾದವನ್ನು ಹಿಂದಿಕ್ಕಿ ಮುನ್ನಡೆಯಬೇಕು. ಹಾಗಾಗಿ ಅತಿಯಾದ ಆದರ್ಶದ ವಿಚಾರಗಳನ್ನು ಕೈಬಿಟ್ಟು ವಾಸ್ತವದ ಹಿನ್ನೆಲೆಯಲ್ಲಿ ಸ್ತ್ರೀಯರ ಬದುಕಿನ ಸಾಧ್ಯ-ಅಸಾಧ್ಯತೆಗಳನ್ನು ಕುರಿತ ಸಮಾಲೋಚನೆಯ ಅಗತ್ಯವಿದೆ.

ಪ್ರಸ್ತುತ ಅಧ್ಯಯನದಲ್ಲಿ ಕಾರಂತರ ಕಾದಂಬರಿಗಳೊಂದಿಗೆ ಗುಲ್ವಾಡಿ ವೆಂಕಟರಾಯ, ಬಸವರಾಜ ಕಟ್ಟೀಮನಿ, ತ್ರಿವೇಣಿ, ಎಂ.ಕೆ.ಇಂದಿರಾ, ಅ.ನ.ಕೃ., ತ.ರಾ.ಸು.... ಮುಂತಾದವರ ಸ್ತ್ರೀಪರ ವಿಚಾರಗಳನ್ನು ಒಳಗೊಂಡು ರಚಿತವಾಗಿರುವ ಕಾದಂಬರಿಗಳನ್ನು ಹಾಗೂ ಮಹಾತ್ಮಗಾಂಧೀಜಿ, ಅಂಬೇಡ್ಕರ್, ರಾಜರಾಮ ಮೋಹನರಾಯ.... ಮುಂತಾದ ಸಾಮಾಜಿಕ ಸುಧಾರಕರ ವಿಚಾರಧಾರೆಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ. ಇದರಿಂದ ಕಾರಂತರು ಇನ್ನಿತರ ಲೇಖಕರಿಗಿಂತ ಹೇಗೆ ಭಿನ್ನವಾಗಿ ಆಲೋಚಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗಿದೆ.

ಸಾಮಾಜಿಕ ಚಿಂತಕರಾದ ಕಾರಂತರ ಕಾದಂಬರಿಗಳ ಸ್ತ್ರೀ ಪ್ರಪಂಚ ಇತ್ತ ಸಾಂಪ್ರದಾಯಿಕವೂ ಅಲ್ಲ, ಅತ್ತ ಆಧುನಿಕವೂ ಅಲ್ಲ. ಅವೆರಡರ ಮಧ್ಯದ ಒಂದು ಉದಾರವಾದಿ ನಿಲುವಿನಲ್ಲಿ ಚಿತ್ರಿತವಾಗಿದೆ. 'ಹಳೆಯ ಬೇರು ಹೊಸ ಚಿಗುರು' ಎಂಬ ತಾತ್ವಿಕ ಅಂಶವು ಅವರ ಸ್ತ್ರೀ ಪಾತ್ರಗಳ ವಿಚಾರಗಳಲ್ಲಿ ಹೆಚ್ಚು ಪ್ರಸ್ತುತವಾಗಿದೆ.

ಅನುಬಂಧಗಳು

ಅನುಬಂಧ ೧

೧.	ವಿಚಿತ್ರಕೂಟ (೧೯೨೪)	ಮಾಲಿನಿ ಮಲ್ಯ (ಸಂ) 'ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ', ಸಂ: ೨, ಕಾದಂಬರಿ ೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೨.	ಭೂತ (೧೯೨೫)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ ೨, ಕಾದಂಬರಿ: ೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩.	ನಿರ್ಭಾಗ್ಯ ಜನ್ಮ (೧೯೨೫)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ :೨, ಕಾದಂಬರಿ: ೧, ೨೦೦೩,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೪.	ದೇವದೂತರು (೧೯೨೯)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೨, ಕಾದಂಬರಿ: ೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೫.	ಕನ್ಯಾಬಲಿ (೧೯೩೨)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ :೩. ಕಾಂದಬರಿ ೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೬.	ಚೋಮನ ದುಡಿ (೧೯೩೩)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೩. ಕಾದಂಬರಿ: ೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೭.	ಸರಸಮ್ಮನ ಸಮಾಧಿ (೧೯೩೭)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೪. ಕಾದಂಬರಿ: ೩. ೨೦೦೩ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೮.	ಮರಳಿ ಮಣ್ಣಿಗೆ (೧೯೪೧)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೩. ಕಾದಂಬರಿ :೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಬೆಟ್ಟದ ಜೀವ (೧೯೪೩) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ ೩ ಕಾದಂಬರಿ: ೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦. ಹೆತ್ತಳಾ ತಾಯಿ (೧೯೪೫) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೩. ಕಾದಂಬರಿ:೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೧. ಮುಗಿದ ಯುದ್ಧ (೧೯೪೫) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೬. ಕಾದಂಬರಿ: ೫, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೨. ಔದಾರ್ಯದ ಉರುಳಲ್ಲಿ (೧೯೪೭) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೫. ಕಾದಂಬರಿ:೪, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೩. ಮೊಗ ಪಡೆದ ಮನ (೧೯೪೮) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೬. ಕಾದಂಬರಿ :೫, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೪. ಸನ್ಯಾಸಿಯ ಬದುಕು (೧೯೪೮) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೭. ಕಾದಂಬರಿ:೬, ೨೦೦೩. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೫. ಕರುಳಿನ ಕರೆ (೧೯೪೯) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೮, ಕಾದಂಬರಿ: ೭, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೬. ಕುಡಿಯರ ಕೂಸು (೧೯೫೧) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ :೭. ಕಾದಂಬರಿ:೬, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೭. ಚಿಗುರಿದ ಕನಸು (೧೯೫೧) — ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ :೮. ಕಾದಂಬರಿ:೭, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೮. ಜಾರುವ ದಾರಿಯಲ್ಲಿ (೧೯೫೨) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೯. ಕಾದಂಬರಿ:೮, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೯. ಬತ್ತದ ತೊರೆ (೧೯೫೩) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೯. ಕಾದಂಬರಿ :೮, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೦. ಗೊಂಡಾರಣ್ಯ (೧೯೫೪) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ:೧೦. ಕಾದಂಬರಿ:೯, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೧. ಒಡಹುಟ್ಟಿದವರು (೧೯೫೪) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ:ಸಂ: ೧೦. ಕಾದಂಬರಿ:೯, ೨೦೦೩,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೨. ಸಮೀಕ್ಷೆ (೧೯೫೬) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೧. ಕಾದಂಬರಿ: ೧೦, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೩. ನಂಬಿದವರ ನಾಕ ನರಕ (೧೯೫೮) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೧. ಕಾದಂಬರಿ: ೧೦, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೪. ಜಗದೋದ್ಧಾರ....ನಾ (೧೯೬೦) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೨. ಕಾದಂಬರಿ: ೧೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೫. ಶನೀಶ್ವರನ ನೆರಳಲ್ಲಿ (೧೯೬೦) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೩. ಕಾದಂಬರಿ: ೧೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೬. ಅಳಿದ ಮೇಲೆ (೧೯೬೦) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೪, ಕಾದಂಬರಿ: ೧೩, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೭. ಆಳ ನಿರಾಳ (೧೯೬೨) ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೨. ಕಾದಂಬರಿ: ೧೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೮.	ಇದ್ದರೂ ಚಿಂತೆ (೧೯೬೪)	೪ನೆ ಮುದ್ರಣ ೧೯೮೫, ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.
೨೯.	ಸ್ವಪ್ನದ ಹೊಳೆ (೧೯೬೬)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೪. ಕಾದಂಬರಿ: ೧೩, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩೦.	ಒಂಟಿದನಿ (೧೯೬೬)	ಮರುಮುದ್ರಣ ೧೯೯೪, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು.
೩೧.	ಇನ್ನೊಂದೇ ದಾರಿ (೧೯೬೮)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೩. ಕಾದಂಬರಿ: ೧೨, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩೨.	ಮೂಕಜ್ಜಿಯ ಕನಸುಗಳು (೧೯೬೮)	ಮರುಮುದ್ರಣ ೧೯೯೧, ಎಸ್.ಬಿ.ಎಸ್.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.
೩೩.	ಮೈ ಮನಗಳ ಸುಳಿಯಲ್ಲಿ (೧೯೭೦)	ಮರುಮುದ್ರಣ ೧೯೯೨, ಎಸ್.ಬಿ.ಎಸ್. ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.
೩೪.	ಉಕ್ಕಿದ ನೊರೆ (೧೯೭೦)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೭. ಕಾದಂಬರಿ: ೧೬, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩೫.	ಕೇವಲ ಮನುಷ್ಯರು (೧೯೭೧)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೭. ಕಾದಂಬರಿ: ೧೬, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩೬.	ಧರ್ಮರಾಯನ ಸಂಸಾರ (೧೯೭೨)	ಹರ್ಷ ಪ್ರಕಟಣಾಲಯ, ಪುತ್ತೂರು.
೩೭.	ಮೂಜನ್ಮ (೧೯೭೪)	ಐಯ್.ಬಿ.ಎಚ್. ಪ್ರಕಾಶನ, ಬೆಂಗಳೂರು.
೩೮.	ಇಳೆಯೆಂಬ (೧೯೭೫)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೯. ಕಾದಂಬರಿ: ೧೮, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩೯.	ಕನ್ನಡಿಯಲ್ಲಿ ಕಂಡಾತ (೧೯೭೬)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೧೯. ಕಾದಂಬರಿ: ೧೮, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೪೦.	ಅದೇ ಊರು ಅದೇ ಮರ (೧೯೭೭)	ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.

೪೧.	ಗೆದ್ದ ದೊಡ್ಡಸ್ತಿಕೆ (೧೯೭೯)	ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.
೪೨.	ನಾವು ಕಟ್ಟಿದ ಸ್ವರ್ಗ (೧೯೮೦)	ಮರು ಮುದ್ರಣ ೨೦೦೧, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್, ಬೆಂಗಳೂರು.
೪೩.	ಕಣ್ಣಿದ್ದೂ ಕಾಣರೂ (೧೯೮೧)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೨೨. ಕಾದಂಬರಿ: ೨೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೪೪.	ನಷ್ಟ ದಿಗ್ಗಜಗಳು (೧೯೮೩)	ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು
೪೫.	ಅಂಟಿದ ಅಪರಂಜಿ (೧೯೮೬)	ಮಾಲಿನಿ ಮಲ್ಯ (ಸಂ) ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ: ೨೨. ಕಾದಂಬರಿ: ೨೧, ೨೦೦೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

[illegible]

ಅನುಬಂಧ ೨

ಪರಾಮರ್ಶನ ಗ್ರಂಥಗಳು

೧.	ಅನ್ನಪೂರ್ಣ ಸಿ. (ಡಾ)	೧೯೮೭, ಹೊಸ ಜೀವನದ ಹುಟ್ಟು, ಐಯ್.ಬಿ.ಹೆಚ್. ಪ್ರಕಾಶನ, ಬೆಂಗಳೂರು.
೨.	ಅನುಸೂಯಾ. ಕೆ. ಕಾಂಬಳೆ	೨೦೦೧, ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ (ಕಾವ್ಯವನ್ನು ಅನುಲಕ್ಷಿಸಿ) ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೩.	ಅನಂತ ನಾರಾಯಣ ಎಸ್.	೧೯೯೧: ಕಾರಂತರ ಕಾದಂಬರಿಗಳಲ್ಲಿ ನಿಸರ್ಗ: ಗಂಗಾತರಂಗ, ಮೈಸೂರು.
೪.	ಅನಂತಮೂರ್ತಿ ಯು.ಆರ್.	೧೯೯೨, ಸಮಕ್ಷಮ: ಅಕ್ಷರ ಪ್ರಕಾಶನ, ಸಾಗರ.
೫.	ಅಮೂರ್ ಜಿ.ಎಸ್.	೧೯೯೪, ಕನ್ನಡ ಕಥನ ಸಾಹಿತ್ಯ: ಕಾದಂಬರಿ: ಶ್ರೀ ಹರಿ ಪ್ರಕಾಶನ, ಧಾರವಾಡ.
೬.	ಅಮೂರ್ ಜಿ.ಎಸ್.	೧೯೯೯, ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು (೧೯೮೧) ತೃತೀಯ ಮುದ್ರಣ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೭.	ಅಮೂರ್ ಜಿ.ಎಸ್.	೨೦೦೦, ಅಮೃತ ವಾಹಿನಿ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
೮.	ಅಶೋಕ ಟಿ.ಪಿ.	೧೯೮೨, ಕಾರಂತರ ಕಾದಂಬರಿಗಳಲ್ಲಿ ಗಂಡು-ಹೆಣ್ಣು: ಅಕ್ಷರ ಪ್ರಕಾಶನ, ಸಾಗರ.
೯.	ಅಶೋಕ ಟಿ.ಪಿ.	೧೯೯೦, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನಿಕರಣದ ಪ್ರಕ್ರಿಯೆ: ಕರ್ನಾಟಕ ಸಂಘ, ಪುತ್ತೂರು.

೧೦. ಅಶೋಕ ಟಿ.ಪಿ. ೧೯೯೩, ಕನ್ನಡ ಸಾಹಿತ್ಯ: ಈ ಶತಮಾನದ ನೋಟ ಶಿವರಾಮ ಕಾರಂತ (ಸಂ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಅಶೋಕ ಟಿ.ಪಿ. ೧೯೯೪, ಕಾರಂತ ಮಂಥನ (ಸಂ) ಕರ್ನಾಟಕ ಸಂಘ, ಪುತ್ತೂರು.

೧೨. ಇಂದಿರಾ ಆರ್. (ಡಾ) ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಉಜ್ವಲಾ ಹಿರೇಮಠ (ಡಾ) ೧೯೯೪, ಲೇಖಕಿಯರ ಕೃತಿಗಳಲ್ಲಿ ಸ್ತ್ರೀ ಪಾತ್ರಗಳು (ಸಂ) ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೪. ಉಷಾ ಎಂ. (ಡಾ) ೨೦೦೪, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಉಷಾ. ಎಂ. (ಡಾ) ೨೦೦೫, ಮಹಿಳೆ ಮತ್ತು ಜಾತಿ ಒಂದು ಸೈದ್ಧಾಂತಿಕ ಗ್ರಹಿಕೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಕವಿತಾ ರೈ ೨೦೦೭, ವಿವಾಹ ಮತ್ತು ಕುಟುಂಬ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಕರುಣಾಕರ ಎನ್. ಶೆಟ್ಟಿ (ಡಾ) ೨೦೦೧, ಕಾರಂತ ಮತ್ತು ಪ್ರೇಮಚಂದರ ಕಾದಂಬರಿಗಳ ತೌಲನಿಕ ಅಧ್ಯಯನ: ಅಭಿಜ್ಞಾನ ಪ್ರಕಾಶನ, ಥಾಣೆ.

೧೮. ಕೀರ್ತಿನಾಥ ಕುರ್ತುಕೋಟಿ ೧೯೯೮, ನೂರು ಮರ ನೂರು ಸ್ವರ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ಕೀರ್ತಿನಾಥ ಕುರ್ತುಕೋಟಿ ೨೦೦೨, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ: ೫ನೆ ಮುದ್ರಣ : ಮನೋಹರ ಗ್ರಂಥಮಾಲೆ, ಧಾರವಾಡ.

೨೦. ಕೃಷ್ಣಮೂರ್ತಿ ಕಿತ್ತೂರ ೧೯೯೨, ವಿಮರ್ಶೆಯ ವ್ಯಾಪ್ತಿ: ಸಾಹಿತ್ಯ ಭಂಡಾರ, ಹುಬ್ಬಳ್ಳಿ

೨೧. ಕೃಷ್ಣಮೂರ್ತಿರಾವ್ ಸಂ. ವಾ. ೧೯೪೭, ಮಹಿಳೆಯರಿಗೆ (ಅನು) ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು.

೨೨. ಖಂಡೋಬಾ ಪಿ.ಕೆ. (ಡಾ) ೧೯೯೯, ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೩. ಗಣೇಶ ಶರ್ಮ ಆರ್. ೧೯೯೫, ಸಂಭೋಗದಿಂದ ಸಮಾಧಿಯ ಕಡೆಗೆ (ಅನು) ಪಿ.ಎಸ್.ಆರ್.ಕಂಪ್ಯೂಟರ್ಸ್ ಆಂಡ್ ಗ್ರಾಫಿಕ್ಸ್ ಆರ್ಟ್ಸ್ ಲಿಮಿಟೆಡ್, ಬೆಂಗಳೂರು.

೨೪. ಗಾಯತ್ರಿ ನಾವಡ ೧೯೯೬, ಮಹಿಳೆ ಬಿಡುಗಡೆಯ ಹಾದಿಯಲ್ಲಿ (೧೯೯೧) ತೃತೀಯ ಮುದ್ರಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೫. ಗಾಯತ್ರಿ ನಾವಡ (ಡಾ) ೨೦೦೦, ಭಾರತೀಯ ಸ್ತ್ರೀವಾದ: ಒಂದು ಸಂಕಥನ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಗಾಯತ್ರಿ ನಾವಡ (ಡಾ) ೨೦೦೩, ಮಹಿಳಾ ಸಂಕಥನ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೭. ಗಿರಿಡ್ಡಿ ಗೋವಿಂದರಾಜ ೧೯೮೭, ಕಾದಂಬರಿ ವಸ್ತು-ತಂತ್ರ (೧೯೭೬) ದ್ವಿತೀಯ ಮುದ್ರಣ ಸ್ನೇಹ ಪ್ರಕಾಶನ, ಬೆಂಗಳೂರು.

೨೮. ಗಿರಿಡ್ಡಿ ಗೋವಿಂದರಾಜ ೨೦೦೧, ಸಮಗ್ರ ವಿಮರ್ಶೆ ಸಂಪುಟ-೨, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೨೯. ಗುರುಪಾದ ಮರಿಗುದ್ದಿ (ಡಾ) ೧೯೮೯, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ: ಸಹ್ಯಾದ್ರಿ ಪ್ರಕಾಶನ, ಮೈಸೂರು.

೩೦. ಗುರುಪಾದ ಮರಿಗುದ್ದಿ (ಡಾ) ೨೦೦೪, ಕುವೆಂಪು ಕಾದಂಬರಿಗಳು (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೧. ಗುರುಲಿಂಗ ಕಾಪಸೆ (ಡಾ) ೨೦೦೩, ಶಿವರಾಮ ಕಾರಂತ ಸಾಂಸ್ಕೃತಿಕ ಅನುಸಂಧಾನ (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೨. ಗೋರೂರು ರಾಮಸ್ವಾಮಿ ಅಯ್ಯಂಗಾರ್ ೨೦೦೦, ಮೋ.ಕ.ಗಾಂಧೀ ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ (ಭಾಷಾಂತರ) ಲನೆ ಮುದ್ರಣ ನವಜೀವನ ಪ್ರಕಾಶನ, ಅಹಮದಬಾದ.

೩೩. ಜಯಪ್ರಕಾಶ ಮಾವಿನಕುಳಿ (ಡಾ) ೧೯೯೯, ಕಾರಂತ ಯುಗಾಂತ (ಸಂ) ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.

೩೪. ಜಯಪ್ರಕಾಶ ಮಾವಿನಕುಳಿ (ಡಾ) ೨೦೦೫, ನೇರ ನುಡಿಗೆ ನೂರು ವರುಷಗಳು :ಶಿವರಾಮ ಕಾರಂತರ ಸ್ಮೃತಿ ಸಂಪುಟ (ಸಂ) ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೩೫. ಜಯಮ್ಮ ಕರಿಯಣ್ಣ ಎಚ್. ೨೦೦೦, ಹೆಣ್ಣಿನ ಸ್ಥಾನಮಾನ ಒಂದು ಪುನರವಲೋಕನ, ಜಯ ಪ್ರಕಾಶನ, ಬೆಂಗಳೂರು.

೩೬. ಜೋತ್ಸ್ನಾ ಕಾಮತ್ ೧೯೯೯, ಮಹಿಳೆ ಒಂದು ಅಧ್ಯಯನ: ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೭. ಜ್ಯೋತಿ ಶಶಿಕುಮಾರ (ಡಾ) ೨೦೦೭, ಮಹಿಳಾ ಸಾಮಾಜಿಕತೆ: ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ತಾಳ್ತಜೆ ವಸಂತಕುಮಾರ (ಡಾ) ೨೦೦೩, ಜ್ಞಾನಪೀಠ ಪ್ರಶಸ್ತಿ ವಿಜೇತರು: ಶಿವರಾಮ ಕಾರಂತ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೯. ಧರಣೀದೇವಿ ಮಾಲಗತ್ತಿ ೧೯೯೮, ಸ್ತ್ರೀವಾದ ಮತ್ತು ಭಾರತೀಯತೆ: ಚೇತನ ಬುಕ್ ಹೌಸ್, ಮೈಸೂರು.

೪೦. ಧರಣೀದೇವಿ ಮಾಲಗತ್ತಿ ೨೦೦೪, ಸಾಹಿತ್ಯ ವಾಣಿಜ್ಯ ಮತ್ತು ಮಹಿಳಾ ಪ್ರಜ್ಞೆ: ರಾಜ್ ಪ್ರಕಾಶನ, ಮೈಸೂರು.

೪೧. ನಾಗರಾಜ ಶೆಟ್ಟಿ ೧೯೯೨, ಆಸ್ವಾದನೆ: ನಿರ್ಮಲ ಪ್ರಕಾಶನ, ತಿಪಟೂರ.

೪೨. ನಾಗ ಐತಾಳ (ಅಹಿತಾನಲ) ೨೦೦೦, ಕಾರಂತ ಚಿಂತನ ಕಡಲಾಚೆಯ ಕನ್ನಡಿಗರಿಂದ (ಸಂ) ಅಕ್ಷರ ಪ್ರಕಾಶನ, ಸಾಗರ.

೪೩. ನಾಗರಾಜ ಡಿ.ಆರ್. ೧೯೯೪, ಅಮೃತ ಮತ್ತು ಗರುಡ (೧೯೮೩) ತೃತೀಯ ಮುದ್ರಣ, ಅಕ್ಷರ ಪ್ರಕಾಶನ, ಸಾಗರ.

೪೪. ನಾಯಕ ಜಿ.ಎಚ್. ೨೦೦೦, ಶತಮಾನದ ಕನ್ನಡ ಸಾಹಿತ್ಯ (ಸಂ): ಶ್ರೀ ರಾಘುವೇಂದ್ರ ಪ್ರಕಾಶನ, ಅಂಕೋಲ.

೪೫. ನಾರಾಯಣರಾವ್ ಜಿ.ಟಿ. ೧೯೯೮, ವೈಜ್ಞಾನಿಕ ಮನೋಧರ್ಮ (೧೯೯೦) ಐದನೆ ಮುದ್ರಣ; ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೬. ನಾರಾಯಣ ಕೆ.ವಿ. ರಾಘುವೇಂದ್ರ ಎಚ್.ಎಸ್., ೨೦೦೩, ಎರಿಕ್ ಫ್ರಾಂನ ಆರ್ಟ್ ಆಫ್ ಲೀವಿಂಗ್ ಪ್ರೀತಿಸುವುದೆಂದರೆ (ಅನು) (೨೦೦೧) ದ್ವಿತೀಯ ಮುದ್ರಣ ಅಭಿನವ ಪ್ರಕಾಶನ, ಬೆಂಗಳೂರು.

೪೭. ನೀಲಮ್ಮ ಕತ್ನಳ್ಳಿ ೧೯೮೩, ಸಾಹಿತ್ಯ ಸ್ಪಂಧನ: ಸ್ವಯಂ ಪ್ರಕಾಶನ ಜ್ಯೋತಿ, ಕಲಬುರ್ಗಿ.

೪೮. ನೀಲಮ್ಮ ಕತ್ನಳ್ಳಿ (ಡಾ) ೧೯೯೭, ಮಹಿಳೆ-ಹಲವು ಮುಖಗಳು: ರೇಣುಕಾ ಪ್ರಕಾಶನ, ಕಲಬುರ್ಗಿ.

೪೯. ನಾರಾಯಣ ಮಂಜೇಶ್ವರ — ೨೦೦೫, ಕಾರಂತರೊಂದಿಗೆ ಕೆಲವು ವರ್ಷಗಳು: ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೦. ಪಾಟೀಲ್ ಎಂ.ಎಸ್. — ೧೯೮೭, ತ.ರಾ.ಸು. ಹಾಗೂ ಅವರ ಕಾದಂಬರಿಗಳು: ಪಿಎಚ್.ಡಿ. ಮಹಾಪ್ರಬಂಧ: ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೫೧. ಪಾಟೀಲ್ ಎಂ.ಎಸ್. (ಡಾ) ಸ್ವಾಮಿರಾವ ಕುಲಕರ್ಣಿ (ಡಾ) — ೨೦೦೪, ಆಯ್ದ ವೈಚಾರಿಕ ಪ್ರಬಂಧಗಳು (ಸಂ): ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೫೨. ಪುನ್ನೆಪ್ಪ ಎಸ್. ಮಾಳ್ಗಿ (ಡಾ) — ೨೦೦೪, ಬಸವೇಶ್ವರ ಮತ್ತು ಅಂಬೇಡ್ಕರ್ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ: ರಾಜ ಪ್ರಕಾಶನ, ಮೈಸೂರು.

೫೩. ಬಸವರಾಜ ಆರ್. — ೧೯೯೯, ಕನ್ನಡ ಸಾರಸ್ವತ ಲೋಕದ ದಿಗ್ಗಜರು ಕೆ. ಶಿವರಾಮ ಕಾರಂತ: ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ.

೫೪. ಬಸವರಾಜ ಸಾದರ (ಡಾ) — ೨೦೦೦, ಬಸವರಾಜ ಕಟ್ಟಿಮನಿಯವರ ಕಾದಂಬರಿಗಳು; ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿ ಮಠ, ಬೆಳಗಾವಿ

೫೫. ಬರಗೂರು ರಾಮಚಂದ್ರಪ್ಪ — ೧೯೯೨, ಬಸವರಾಜ ಕಟ್ಟಿಮನಿಯವರ ಸಾಹಿತ್ಯ (ಸಂ): ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೬. ಬರಗೂರು ರಾಮಚಂದ್ರ — ೧೯೯೩, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೭. ಬಸವರಾಜ ಸಾದರ (ಡಾ) — ೨೦೦೨, ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು (ಸಂ) ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

೫೮. ಭಟ್ಟ ಜಿ.ಎಸ್., ಶಿವಕುಮಾರ ವೈ. — ೧೯೮೨, ಕಾರಂತ ಕೆಲವು ಮುಖಗಳು: ಮಿತ್ರ ಪ್ರಕಾಶನ, ಮೈಸೂರು.

೫೯. ಭಗವಾನ್ — ೧೯೯೭, ಶಂಕರಾಚಾರ್ಯ ಮತ್ತು ಪ್ರತಿಗಾಮಿತನ (೧೯೮೨) ಒಂಬತ್ತನೆಯ ಮುದ್ರಣ, ಮಹಿಮ ಪ್ರಕಾಶನ, ಮೈಸೂರು.

೬೦. ಮನು ಬಳಿಗಾರ — ೧೯೯೯, ಬಹುಮುಖಿ (ಶಿವರಾಮ ಕಾರಂತರ ಬದುಕು-ಬರಹಗಳ ಬಗೆಗಿನ ಲೇಖನಗಳು) (ಸಂ) ಪರಮಶಂಕರ ಪ್ರಕಾಶನ, ಬೆಳಗಾವಿ.

೬೧. ಮೂರ್ತಿರಾವ್ ಎ.ಎನ್. — ೨೦೦೩, ದೇವರು, ಹನ್ನೊಂದನೆ ಮುದ್ರಣ ಡಿ.ವಿ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು.

೬೨. ಮಲ್ಲಿಕಾ ಘಂಟಿ (ಡಾ) — ೨೦೦೦, ತನುಕರಗದವರಲ್ಲಿ.....: ಗೌತಮ ಪ್ರಕಾಶನ, ಬಳ್ಳಾರಿ.

೬೩. ಮಹೇಶ್ವರಿ ಯು. — ೨೦೦೧, ಇದು ಮಾನುಷಿಯ ಓದು (ಕನ್ನಡದ ಮೊದಲ ಕಾದಂಬರಿಗಳು-ಒಂದು ಸ್ತ್ರೀವಾದಿ ಅಧ್ಯಯನ): ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.

೬೪. ಮಾಧವ ಕುಲಕರ್ಣಿ — ೨೦೦೧, ಕಾರಂತರ ಕಾದಂಬರಿಗಳು (ವಿಮರ್ಶೆ) ತನುಮನ ಪ್ರಕಾಶನ, ಮೈಸೂರು.

೬೫. ಮಾಲಿನಿ ಮಲ್ಯ — ೧೯೮೭, ನಾನು ಕಂಡ ಕಾರಂತರು:ಅಕ್ಷರ ಪ್ರಕಾಶನ, ಸಾಗರ.

೬೬. ಮಾಲಿನಿ ಮಲ್ಯ — ೧೯೯೨, ಶಿವರಾಮ ಕಾರಂತ ವಾಙ್ಮಯ ವೃತ್ತಾಂತ (ಸಂ): ಎಸ್.ಬಿ.ಎಸ್.ಪಬ್ಲಿಷರ್ಸ್ ಡಿಸ್ಟಿಬ್ಯೂಟರ್ಸ್, ಬೆಂಗಳೂರು.

೬೭. ಮಾಲಿನಿ ಮಲ್ಯ — ೧೯೯೯, ಕಾರಂತ ಉವಾಚ (ಸಂ) ಶಿವರಾಮ ಕಾರಂತರ ಅಧ್ಯಯನ ಕೇಂದ್ರ, ಪುತ್ತೂರು.

೬೮. ಮಾಲಿನಿ ಮಲ್ಯ — ೨೦೦೧, ಶಿವರಾಮ ಕಾರಂತ: ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬೯. ಮೀರಾ ಎಲ್.ಜಿ. — ೨೦೦೪, ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ: ಶಕ್ತಿ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಬೆಂಗಳೂರು.

೭೦. ಮುಕ್ತಾಯಕ್ಕ ಎಚ್.ಎಸ್. — ೧೯೯೭, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭೧. ಮುನಿಯಪ್ಪ (ಡಾ) — ೨೦೦೫, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ: ಅನಿಕೇತನ ಪ್ರಕಾಶನ, ಬೆಂಗಳೂರು.

೭೨. ಮೋಹನ ಕುಂಟಾರ್ (ಡಾ) ೧೯೯೪, ಇನಾಂದಾರರ ಕಾದಂಬರಿಗಳು: ಶ್ರೇಣಿ ಪ್ರಕಾಶನ, ಉಕ್ಕಿನಡ್ಕ.

೭೩. ಮಂಗಳಾ ಚಿ.ನ. ೨೦೦೧, ಎಚ್ಚೆತ್ತ ಹಾದಿಯಲ್ಲಿ ಮಹಿಳೆ (೧೯೯೦) ದ್ವಿತೀಯ ಮುದ್ರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೭೪. ಮಂದಾಕಿನ ಪುರೋಹಿತ (ಡಾ) ೨೦೦೦, ಸಾಹಿತ್ಯ ಬಿಲ್ವ:ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ.

೭೫. ಯಶೋಧರ ಎಚ್.ಬಿ. ೧೯೮೦, ಸಿಂಚನ:ಚೇತನ ಗ್ರಂಥಮಾಲೆ, ಮೈಸೂರು.

೭೬. ಯಳನಾಡು ಅಂಜನಪ್ಪ ೨೦೦೮, ಧರ್ಮ ಮತ್ತು ಮುಕ್ತ ವಿಚಾರ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೬. ರವಿಕುಮಾರ ನ. ೧೯೮೨, ಕಾದಂಬರಿ ಕಣ್ಣಲ್ಲಿ ಕಾರಂತರು (ಸಂ) ಪ್ರತಿಭಾ ಯುವ ವೇದಿಕೆ, ಬೆಂಗಳೂರು.

೭೭. ರಾಜಣ್ಣ ಹುಣಸೇಪಾಳ್ಯ ೧೯೯೨, ಚದುರಂಗರ ಕಾದಂಬರಿಗಳು: ಒಂದು ಅಧ್ಯಯನ: ಜನಪರ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೮. ರಾಜೇಂದ್ರ ಚೆನ್ನಿ ೨೦೦೪, ನಡುಹಗಲಿನಲ್ಲಿ ಕಂದೀಲುಗಳು: ಲೋಹಿಯಾ ಪ್ರಕಾಶನ, ಬಳ್ಳಾರಿ.

೭೯. ರಾಮಚಂದ್ರದೇವ ಮುಚ್ಚು ಮತ್ತು ಇತರ ಲೇಖನಗಳು: ಗ್ರಂಥಾವಳಿ ಶ್ರೀನಗರ, ಬೆಂಗಳೂರು.

೮೦. ರಾಮಚಂದ್ರನ್ ಸಿ.ಎನ್. ೧೯೮೮, ಸ್ವರೂಪ-ಕೆಲವು ಕನ್ನಡ ಕೃತಿಗಳ ಅಧ್ಯಯನ: ಕನ್ನಡ ಅಧ್ಯಯನ ವಿಭಾಗ: ಮುಂಬೈ ವಿಶ್ವವಿದ್ಯಾಲಯ, ಮುಂಬೈ.

೮೧. ರಾಮಚಂದ್ರನ್ ಸಿ.ಎನ್. ೧೯೯೬, ಕಾರಂತರ ಕಾದಂಬರಿಗಳಲ್ಲಿ ನಿರೂಪಕ: ಕರ್ನಾಟಕ ಸಂಘ, ಪುತ್ತೂರು.

೮೨. ರಾಮರಾವ್ ಎಸ್. (ಡಾ) ೧೯೯೩, ಕೇಳು ಕಿಶೋರ (೧೯೭೫) ದ್ವಿತೀಯ ಮುದ್ರಣ: ಡಿ.ವಿ.ಕೆ.ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು.

೮೩. ಲಕ್ಷ್ಮಣರಾವ್ ೨೦೦೨, ವೈಜ್ಞಾನಿಕತೆ: ನವಕರ್ನಾಟಕ ಪ್ರಕಾಶನ, ಬೆಂಗಳೂರು.

[illegible]

೮೪. ವರದಾ ಶ್ರೀನಿವಾಸ (ಡಾ) ೧೯೯೯, ಮಹಿಳೆಯ ಸ್ಥಿತಿ-ಗತಿ ಅಂದು ಇಂದು: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೮೫. ವಿಜಯಶ್ರೀ ಕೆ. (ಡಾ) ೨೦೦೨, ಕನ್ನಡ ನವ್ಯ ಕಾದಂಬರಿಗಳು: ರಾಮಕೃಷ್ಣ ಪ್ರಕಾಶನ, ಬೆಂಗಳೂರು.

೮೬. ವಿಜಯಶ್ರೀ ಸಬರದ (ಡಾ) ೨೦೦೨, ಸಾಹಿತ್ಯ ಸಂವಹನ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೭. ವಿರೂಪಾಕ್ಷ ಕುಲಕರ್ಣಿ ೧೯೯೦, ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ (ಸಂ. ಮತ್ತು ಅನು): ಕರ್ನಾಟಕ ಸಂಘ, ಪುತ್ತೂರು.

೮೮. ವಿವಿಧ ಲೇಖಕರು ೧೯೮೭, ಅ.ನ.ಕೃ. ಸಾಹಿತ್ಯ ಸಮೀಕ್ಷೆ (ಸಂ): ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮೯. ವಿವೇಕ ರೈ (ಡಾ) ೨೦೦೨, ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ (ಸಂ): ಡಾ.ಶಿವರಾಮ ಕಾರಂತ ಅಧ್ಯಯನ ಪೀಠ, ಮಂಗಳೂರು.

೯೦. ವಿಶ್ವನಾಥ ಡಿ.ಎಸ್. ೨೦೦೧, ಚಿಂತೆ-ನಿಶ್ಚಿಂತೆ: ಗಣೇಶ ಪಬ್ಲಿಕೇಷನ್, ಬೆಂಗಳೂರು.

೯೧. ವೀರಭದ್ರಪ್ಪ ಬಿ.ವಿ. ೨೦೦೧, ಧರ್ಮ ಮತ್ತು ವೈಚಾರಿಕತೆ (೧೯೯೯) ದ್ವಿತೀಯ ಮುದ್ರಣ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೯೨. ವೀರಣ್ಣ ಸಿ (ಡಾ) ೨೦೦೧, ಕನ್ನಡ ಕಾವ್ಯ ಕಂಡ ಹೆಣ್ಣು: ದ್ವಿತೀಯ ಮುದ್ರಣ ೧೯೯೯, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೯೩. ಶಕುಂತಲಾ ದುರ್ಗಿ(ಡಾ) ೧೯೮೮, ಮಹಿಳಾ ಸಾಹಿತ್ಯ ಮತ್ತು ಸಮಸ್ಯೆಗಳು: ಉಜ್ವಲ ಪ್ರಕಾಶನ, ಗುಲಬರ್ಗಾ.

೯೪. ಶಕುಂತಲಾ ಸಿದ್ಧರಾಮ ದುರ್ಗಿ (ಡಾ) ೧೯೯೯, ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ (೧೯೦೧-೧೯೭೫): ಉಜ್ವಲ ಪ್ರಕಾಶನ, ಗುಲಬರ್ಗಾ.

೯೫. ಶಶಿಕಲಾ ವೀರಯ್ಯಸ್ವಾಮಿ ೧೯೯೫, ಸಂವೇದನೆ (ಸಂ): ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೯೬. ಶಿವಣ್ಣ ಡಿ.ಕೆ. ೧೯೮೪, ಭಾರತದ ಪ್ರಚಲಿತ ಸಮಸ್ಯೆಗಳು (೧೯೭೭) ತೃತೀಯ ಮುದ್ರಣ, ಕಲಾ ಪ್ರಕಾಶನ, ಬೆಂಗಳೂರು.

೯೭. ಶಿವಣಕರ್ ಎಸ್.ಎನ್. ೨೦೦೧, ಭಾರತೀಯ ಮಹಿಳೆಯ ಸ್ಥಾನ ಮಾನ: ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೯೮. ಶಿವರಾಜಪ್ಪ ಎಸ್. (ಡಾ) ೨೦೦೬, ಗಾಂಧೀಜಿ ನುಡಿಮುತ್ತುಗಳು (ಸಂ) ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೯೯. ಶಿವರಾಮ ಕಾಡನಕುಪ್ಪೆ ೧೯೮೨, ಶಿವರಾಮ ಕಾರಂತ ಹತ್ತು-ಅಧ್ಯಯನಗಳು (ಸಂ) ಭಾರತೀಯ ಪ್ರಕಾಶನ, ಮೈಸೂರು.

೧೦೦. ಶಿವರಾಮ ಕಾರಂತ ಕೆ. (ಡಾ) ೧೯೭೯, ಸ್ಮೃತಿಪಟಲದಿಂದ (ಸಂಪುಟ-೩) ರಾಜ ಲಕ್ಷ್ಮೀ ಪ್ರಕಾಶನ, ಬೆಂಗಳೂರು

೧೦೧. ಶಿವರಾಮ ಕಾರಂತ ಕೆ. (ಡಾ) ೧೯೮೬, ಸ್ಮೃತಿಪಟಲದಿಂದ (ಸಂಪುಟ-೧) ೧೯೭೮: ದ್ವಿತೀಯ ಮುದ್ರಣ, ರಾಜ ಲಕ್ಷ್ಮೀ ಪ್ರಕಾಶನ, ಬೆಂಗಳೂರು.

೧೦೨. ಶಿವರಾಮ ಕಾರಂತ ಕೆ. (ಡಾ) ೧೯೯೫, ಶಿವರಾಮ ಕಾರಂತರ ಅಳಿದುಳಿದ ನೆನಪುಗಳು: ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯುಟರ್ಸ್, ಬೆಂಗಳೂರು.

೧೦೩. ಶಿವರಾಮ ಕಾರಂತ ಕೆ (ಡಾ) ೧೯೯೬, ವಿಜ್ಞಾನ ಮತ್ತು ಅಂಧ ಶ್ರದ್ಧೆ (೧೯೮೨) ನಾಲ್ಕನೆಯ ಮುದ್ರಣ, ಕರ್ನಾಟಕ ವಿಜ್ಞಾನ ಪರಿಷತ್ತು, ಬೆಂಗಳೂರು.

೧೦೪. ಶಿವರಾಮ ಕಾರಂತ ೧೯೯೪, ಹುಚ್ಚು ಮನಸ್ಸಿನ ಹತ್ತು ಮುಖಗಳು ಅಳಿದುಳಿದ ನೆನಪುಗಳೊಂದಿಗೆ: ಐದನೆಯ ಮುದ್ರಣ, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

೧೦೫. ಶಿವರಾಮ ಕಾರಂತ ಕೆ. (ಡಾ) ೨೦೦೪, ಬಾಳ್ವೆಯೇ ಬೆಳಕು: ಮರು ಮುದ್ರಣ ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

೧೦೬. ಶಿವರುದ್ರಪ್ಪ ಜಿ.ಎಸ್ (ಡಾ) ೧೯೮೩, ಕಾದಂಬರಿಕಾರನಾಗಿ ಕಾರಂತ (ಸಂ): : ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೦೭. ಶಿವರುದ್ರಪ್ಪ ಜಿ.ಎಸ್. ಕೃಷ್ಣಯ್ಯ. ಎಂ.ಎಚ್. — ೨೦೦೧, ಸಾಲುದೀಪಗಳು (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦೮. ಶುಭಾದಾಸ್ — ೨೦೦೩, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦೯. ಶೇಷ ನವರತ್ನ (ಡಾ) — ೨೦೦೧, ಬೇಂದ್ರೆ ಕಾವ್ಯದಲ್ಲಿ ಸ್ತ್ರೀ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೦. ಶೈಲಜ ಹಿರೇಮಠ (ಡಾ) — ೨೦೦೩, ಸ್ತ್ರೀ ಕಥನ: ಭುವನ ಪ್ರಕಾಶನ, ಹೊಸಪೇಟೆ.

೧೧೧. ಶ್ರೀಧರ ಎಚ್.ಜಿ. (ಡಾ) — ೨೦೦೨, ಕಾರಂತ ಸ್ಮರಣೆ-೧ (ಸಂ) ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.

೧೧೨. ಶ್ರೀಮತಿ ಎಚ್.ಎಸ್.(ಡಾ) — ೧೯೯೯, ತ್ರಿವೇಣಿಯವರ ಕಾದಂಬರಿಗಳ ಮರು ಓದು: ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೧೧೩. ಶ್ರೀಮತಿ ಎಚ್.ಎಸ್. (ಡಾ) — ೨೦೦೧, ಆಧುನಿಕ ಭಾರತದಲ್ಲಿ ಮಹಿಳೆ (ಅನು) ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೪. ಶ್ರೀಮತಿ ಎಚ್.ಎಸ್. (ಡಾ) — ೨೦೦೪, ಸ್ತ್ರೀವಾದ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೫. ಶ್ರೀಮತಿ ಎಚ್.ಎಸ್. (ಡಾ) — ೨೦೦೪, ಸೇರಿಕೊಂಡ ಎಳೆಗಳು: ಸಿವಿಜಿ ಪ್ರಕಾಶನ, ಬೆಂಗಳೂರು.

೧೧೬. ಶಂಕರರಾವ್ ಚ.ನ. — ೧೯೯೬, ಭಾರತೀಯ ಸಮಾಜದ ಅಧ್ಯಯನ (ಸಂಪುಟ-೨) ಜೈ ಭಾರತ ಪ್ರಕಾಶನ, ಮಂಗಳೂರು.

೧೧೭. ಶಂಕರರಾವ್ ಚ.ನ. — ೨೦೦೦, ಸಮಾಜ ಶಾಸ್ತ್ರ ಪರಿಚಯ (ಸಂಪುಟ-೧) ೧೯೯೫: ನಾಲ್ಕನೆಯ ಮುದ್ರಣ ಜೈಭಾರತ ಪ್ರಕಾಶನ, ಮಂಗಳೂರು.

೧೧೮. ಶಾಂತದೇವಿ ಮಾಳವಾಡ — ೧೯೯೦, ಸಾರ್ವಜನಿಕ ರಂಗದಲ್ಲಿ ಮಹಿಳೆ: ಸಹ್ಯಾದ್ರಿ ಪ್ರಕಾಶನ, ಮೈಸೂರು.

೧೧೯. ಶಾಂತಿನಾಥ ದೇಸಾಯಿ (ಡಾ) — ೧೯೮೯, ಕನ್ನಡ ಕಾದಂಬರಿ ನಡೆದು ಬಂದ ರೀತಿ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨೦. ಶಾಂತಿನಾಥ ದಿಬ್ಬದ (ಡಾ) — ೨೦೦೫, ವೈಚಾರಿಕ ಲೇಖನಗಳು: ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೨೧. ಸೀತಾರಾಮ ಅಡಿಗ — ೨೦೦೧, ಬದ್ಧತೆಯ ಬದುಕು: ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.

೧೨೨ ಸೀತಾರಾಮಯ್ಯ ವಿ. ಪಾ.ವೆಂ.ಆಚಾರ್ಯ — ೧೯೯೬, ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು: ೩ ಶಿವರಾಮ ಕಾರಂತ: ತೃತಿಯ ಮುದ್ರಣ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೨೩ ಸುಜಾತ ಎಚ್.ಎಸ್. (ಡಾ) — ೨೦೦೭, ಎಂ.ಎಸ್.ಪುಟ್ಟಣ್ಣನವರ ಕಾದಂಬರಿಗಳು: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೪. ಸುಬ್ರಾಯ ಚೊಕ್ಕಾಡಿ — ೨೦೦೦, ಕೃತಿಶೋಧ: ಇಂಚರ ಪ್ರಕಾಶನ, ಬೆಂಗಳೂರು

೧೨೫. ಸುನೀತಾ ಶೆಟ್ಟಿ (ಡಾ) — ೨೦೦೦, ಕಾರಂತ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು: ಕನ್ನಡ ಅಧ್ಯಯನ ವಿಭಾಗ, ಮುಂಬೈ ವಿಶ್ವವಿದ್ಯಾಲಯ, ಮುಂಬೈ.

೧೨೬. ಸುಮಿತ್ರಾಬಾಯಿ ಬಿ.ಎನ್. (ಡಾ) — ೧೯೯೭, ಅಂಗಳದೊಳಗಿನ ಕಡಲು ಶಿವರಾಮ ಕಾರಂತರು ಕಾಣಿಸುವ ಮಹಿಳಾ ಲೋಕ: ಕರ್ನಾಟಕ ಸಂಘ, ಪುತ್ತೂರು.

೧೨೭. ಸುರೇಶ ಕೆ.ಜಿ. — ೨೦೦೧, ಭಾರತೀಯ ರಾಜಕೀಯ ಚಿಂತನೆ: ಚೇತನ ಬುಕ್ ಹೌಸ್, ಮೈಸೂರು.

೧೨೮. ಸಂತೋಷಕುಮಾರ ಗುಲ್ವಾಡಿ — ೧೯೮೯, ಕನ್ನಡ ಕಾದಂಬರಿ ಪಿತಾಮಹ ಗುಲ್ವಾಡಿ ವೆಂಕಟರಾವ್ (೧೮೫೪-೧೯೧೩) ಬದುಕು: ಬರಹ; (ಸಂ) ಕರ್ನಾಟಕ ಸಂಘ, ಪುತ್ತೂರು.

೧೨೯. ಸಂಧ್ಯಾರೆಡ್ಡಿ ಕೆ.ಆರ್. (ಡಾ) — ೧೯೯೫, ಜನಪದ ಸಾಹಿತ್ಯದಲ್ಲಿ ಮಹಿಳೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩೦. ಸ್ವಾಮಿ ವಿವೇಕಾನಂದ — ೧೯೯೩, ಭಾರತದಲ್ಲಿ ಮಹಿಳೆ: ಎಂಟನೆ ಮುದ್ರಣ, ಶ್ರೀ ರಾಮಕೃಷ್ಣ ಪ್ರಕಾಶನ, ಮೈಸೂರು.

೧೩೧. ಹರಿದಾಸ ಭಟ್ಟ ಕು.ಶಿ. — ೧೯೭೯, ಕಾರಂತ ಪ್ರಪಂಚ (ಸಂ) ಕಾರಂತ ಅಭಿನಂದನ ಸಮಿತಿ, ಉಡುಪಿ.

೧೩೨. ಹರಿದಾಸ ಭಟ್ಟ ಕು.ಶಿ. — ೧೯೮೮, ಬಲ್ಲಾಳರ ಕಾದಂಬರಿಗಳು ಕೆಲವು ಅಧ್ಯಯನಗಳು (ಸಂ) ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೩೩. ಹಿರೇಮಠ ಎಸ್.ಎಂ. — ೧೯೯೪, ಕನ್ನಡ ಸಾಹಿತ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತರು: ವಿದ್ಯಾನಿಧಿ ಪ್ರಕಾಶನ, ಗದಗ.

ನಿಯತ ಕಾಲಿಕೆಗಳು

೧. ಪರಮೇಶ್ವರಪ್ಪ ಕೆ.ಎಸ್. (ಸಂ) ಕರುಣಾ ಕಾವ್ಯ ಸಂಚಿಕೆ: ಸಂಪುಟ-೩, ಸಂಚಿಕೆ-೧೨ ಅಕ್ಟೋಬರ್ ೧-೧೫, ೨೦೦೪, ಶಿಕಾರಿಪುರ.

೨. ಲಕ್ಷ್ಮೀನಾರಾಯಣ ಅರೋರಾ (ಸಂ) ಪ್ರಬುದ್ಧ ಕರ್ನಾಟಕ: ಸಂಪುಟ-೮೩, ಸಂಚಿಕೆ-೩೨೭-೩೩೦ (ಸಂಯುಕ್ತ) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩. ಶಿವರುದ್ರಪ್ಪ ಜಿ.ಎಸ್. (ಸಂ) ಸಾಧನೆ: ಸಂಪುಟ-೧೦ ಸಂಚಿಕೆ-೩ ಏಪ್ರಿಲ್, ಜೂನ್ ೧೯೮೨: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪. ಶಾಂತಬಾಯಿ ಪಾಟೀಲ (ಸಂ) ಜೀವನ ವಿಕಾಸ: ಸಂಪುಟ-೧೨ ಸಂಚಿಕೆ: ೫-೬ ಮೇ-ಜೂನ್ ೧೯೭೯.

೫. ವಿಜಯ ಕರ್ನಾಟಕ ೬-೧೧-೨೦೦೮

೬. ವಿಜಯ ಕರ್ನಾಟಕ ೮-೧೧-೨೦೦೮

೭. ವಿಜಯ ಕರ್ನಾಟಕ ೯-೧೧-೨೦೦೮

೮. ವಿಜಯ ಕರ್ನಾಟಕ ೧೯-೧೧-೨೦೦೮

೯. ಪ್ರಜಾವಾಣಿ, ಭೂಮಿಕಾ ೧-೧೧-೨೦೦೮

೧೦. ಪ್ರಜಾವಾಣಿ ೭-೧೧-೨೦೦೮

೧೧. ಕನ್ನಡ ಪ್ರಭ, ಸಖಿ ೧೫-೧೧-೨೦೦೮

049215

AKSHARA GRANTHALAYA

ACC.NO.049215